ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಎಚ್.ಡಿ. ಮಹಾಪ್ರಬಂಧ

ಸಂಶೋಧಕರು
ಸುದರ್ಶನ್ ಕುಮಾರ್ ಎಂ.

ಮಾರ್ಗದರ್ಶಕರು
ಡಾ|| ಚಲುವರಾಜು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩೨೭೬

೨೦೦೮

ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಎಚ್.ಡಿ. ಮಹಾಪ್ರಬಂಧ

ಸಂಶೋಧಕರು
ಸುದರ್ಶನ್ ಕುಮಾರ್ ಎಂ.

ಮಾರ್ಗದರ್ಶಕರು
ಡಾ|| ಚಲುವರಾಜು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩೨೭೬
೨೦೦೮

ಪ್ರಮಾಣ ಪತ್ರ

ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಅರ್ಥಶಾಸ್ತ್ರದಲ್ಲಿ ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ॥ ಚಲುವರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : 02.೦೧.೨೦೦೮
ಸ್ಥಳ: ವಿದ್ಯಾರಣ್ಯ

(ಸುದರ್ಶನ್ ಕುಮಾರ್ ಎಂ)
ಸಂಶೋಧನಾ ವಿಧ್ಯಾರ್ಥಿ
ಬುಡಕಟ್ಟು ಅಧ್ಯಯನದ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ದೃಢೀಕರಣ ಪತ್ರ

ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಶ್ರೀ ಸುದರ್ಶನ್‌ಕುಮಾರ್ ಎಂ. ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಅರ್ಥಶಾಸ್ತ್ರದಲ್ಲಿ ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: ೦೩.೦೧.೨೦೦೮
ಸ್ಥಳ: ವಿದ್ಯಾರಣ್ಯ

(ಡಾ|| ಚಲುವರಾಜು)
ಪ್ರವಾಚಕರು ಹಾಗೂ ಮುಖ್ಯಸ್ಥರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಪರಿವಿಡಿ

• ಪ್ರಮಾಣಪತ್ರ	೧
• ದೃಢೀಕರಣ ಪತ್ರ	೨
• ಪರಿಶಿಷ್ಟಗಳು	೫
೧. ಅಧ್ಯಯನ ಸ್ವರೂಪ – ವ್ಯಾಪ್ತಿ – ವಿಧಾನ.	೧–೨೪
೨. ಸೈದ್ಧಾಂತಿಕ ಮತ್ತು ನಿದರ್ಶನಾತ್ಮಕ ಅಧ್ಯಯನ.	೨೫–೮೨
೩. ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಸಾಮಾಜಿಕ – ಆರ್ಥಿಕ ಸ್ಥಿತಿಗತಿ.	೮೩–೧೪೩
೪. ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರ ಕಲ್ಯಾಣಕಾರ್ಯಕ್ರಮಗಳು ಮತ್ತು ಅನುಷ್ಠಾನ.	೧೪೪–೧೯೮
೫. ಪ್ರಸ್ತುತ ಸಮುದಾಯಗಳ ಜೀವನಾವಸ್ಥೆ:ಅವಲೋಕನ.	೧೯೯–೨೪೦
೬. ಸಮುದಾಯಗಳ ಅಭಿವೃದ್ಧಿ ಮತ್ತು ದಿಕ್ಕು–ದಿಸೆ.	೨೪೧–೨೭೪
೭. ಸಮಾರೋಪ.	೨೭೫–೨೯೩
ಅನುಬಂಧಗಳು	೨೯೪–೩೦೫
ಪರಾಮರ್ಶನ ಗ್ರಂಥಗಳು	
ಜನಸಂಖ್ಯಾ ಮಾಹಿತಿ ಕೊಷ್ಟಕ	
ಪ್ರಶ್ನಾವಳಿ	
ಸಮೀಕ್ಷಾ ನಕ್ಷೆ	
ಛಾಯಾಚಿತ್ರಗಳು	

ಪರಿಶಿಷ್ಟಗಳು

ಪರಿಶಿಷ್ಟಗಳು ೧. ಭೂಪಟಗಳು

ಅ. ಕರ್ನಾಟಕ ರಾಜ್ಯದಲ್ಲಿನ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ನೆಲೆಗಳು.

ಆ. ಜೇನುಕುರುಬರ ನೆಲೆಗಳಲ್ಲಿನ ಜನಸಂಖ್ಯಾ ಹಂಚಿಕೆಯ ನಕ್ಷೆ.

ಇ. ಕೊರಗರ ನೆಲೆಗಳಲ್ಲಿನ ಜನಸಂಖ್ಯಾ ಹಂಚಿಕೆಯ ನಕ್ಷೆ.

ಪರಿಶಿಷ್ಟ ೨. ಲಂಭರೇಖಾ ಚಿತ್ರಗಳು.

೩.೧ ಮೂಲನಿವಾಸಿ ಬುಡಕಟ್ಟುಗಳ ಶೈಕ್ಷಣಿಕ ಪ್ರಗತಿ.
೩.೨ ಸಮುದಾಯಗಳಲ್ಲಿನ ಭೂ ಒಡೆತನದ ಪ್ರಮಾಣ
೩.೩ ಸಮುದಾಯಗಳ ಆದಾಯದ ಅನುಪಾತ

ಪರಿಶಿಷ್ಟ ೩. ರೇಖಾ ಚಿತ್ರಗಳು

೩.೧ ಬಡತನ ರೇಖೆಯ ರೇಖಾಚಿತ್ರ

೫.೧ ಸಮುದಾಯಗಳ ಜೀವನಾಕೃತಿ ರೇಖಾಚಿತ್ರ.

೫.೨ ಆದಾಯದ ಪೂರ್ವಕಲ್ಪನೆಯ ರೇಖಾಚಿತ್ರ

೫.೩ ರಾಜ್ಯಾಧಿಕಾರ ಬಡತನ ರೇಖೆ.

ಪರಿಶಿಷ್ಟ ೪. ಕೋಷ್ಟಕಗಳು

೨.೧ ಮೈಸೂರು ವಿಭಾಗದ ಸಮಗ್ರ ಮಾಹಿತಿ ಕೋಶ.

೨.೨ : ಕರ್ನಾಟಕದಲ್ಲಿನ ಜೇನುಕುರುಬರ ಸಮಗ್ರ ಜನಸಂಖ್ಯೆ ವಿವರ

೨.೩ : ಜೇನುಕುರುಬ ಸಮುದಾಯ ನೆಲೆನಿಂತ ಪರಿಸರದ ಜಿಲ್ಲಾಭೂ ಬಳಕೆಯ ವಿವರಗಳು.

೨.೪ : ಜಿಲ್ಲೆಗಳಲ್ಲಿನ ರಕ್ಷಿತ ಅರಣ್ಯಗಳು

೨.೫ : ಜೇನುಕುರುಬರ ಕುಟುಂಬವಾರು ವಿದ್ಯುತ್ ಲಭ್ಯತೆ ಪಟ್ಟಿ

೨.೬ : ಜೇನುಕುರುಬರ ಸಾಲದ ಮೂಲಗಳು.

೨.೭ : ಒಂದು ವಾಸಸ್ಥಾನದಲ್ಲಿನ ಕುಟುಂಬವಾರು ಕುಡಿಯುವ ನೀರಿನ ಲಭ್ಯತೆ.

೨.೮ : ಒಂದು ವಾಸಸ್ಥಾನದಲ್ಲಿನ ಜೇನುಕುರುಬರ ಮನೆಗಳ ಮಾದರಿ

೨.೯ : ಕರ್ನಾಟಕದಲ್ಲಿನ ಕೊರಗರ ಸಮಗ್ರ ಜನಸಂಖ್ಯಾವಿವರ:

೨.೧೦: ಜಿಲ್ಲಾವಾರು ಭೂ ಬಳಕೆಯ ವಿವರಗಳು

೨.೧೧: ಜಿಲ್ಲೆಗಳಲ್ಲಿನ ರಕ್ಷಿತ ಅರಣ್ಯಗಳು.

೨.೧೨: ವಿದ್ಯುತ್‌ಶಕ್ತಿ ಲಭ್ಯತೆಯ ಪ್ರಮಾಣ

೨.೧೩: ಕೊರಗರ ಇಂಧನ ಬಳಕೆಯ ಪ್ರಮಾಣದ ವಿವರಗಳು.

೨.೧೪: ವಿವಿಧ ಸಾಲಗಳಿಗೆ ನೀಡುವ ಬಡ್ಡಿಧರದ ಪಟ್ಟಿ

೨.೧೫: ಕೊರಗರ ಸಾಲದ ಮೂಲಗಳು

೨.೧೬: ಒಂದು ವಾಸಸ್ಥಾನದಲ್ಲಿನ ಕುಟುಂಬವಾರು ನೀರಿನ (ಕುಡಿಯುವ) ಅವಲಂಬನೆ ವಿವರ

೨.೧೭: ಕೊರಗ ಸಮುದಾಯದ ಮನೆಗಳ ಮಾದರಿ:

೩.೧ : ಜೇನುಕುರುಬರ ಕುಟುಂಬಗಳ ಗಾತ್ರದ ಪಟ್ಟಿ
೩.೨ : ಜೇನುಕುರುಬರ ಲಿಂಗಾನುಪಾತದ ಪಟ್ಟಿ
೩.೩ : ಜೇನುಕುರುಬ ಸಮುದಾಯದ ತಾಲ್ಲೂಕುವಾರು ಸಾಕ್ಷರತೆ
೩.೪ : ವಯಸ್ಸಿಗನುಗುಣವಾಗಿ ವರ್ಗೀಕರಿಸಿ ಶಿಕ್ಷಣದ ಅನುಪಾತ
೩.೫ : ಜೇನುಕುರುಬರ ಭೂ ಹಿಡುವಳಿಯ ಪ್ರಮಾಣ
೩.೬ : ೫ ಕಾಲಘಟ್ಟಗಳಲ್ಲಿನ ವಿಕಸನದ ಸ್ವರೂಪ
೩.೭ : ಪ್ರಸ್ತುತದ ಉದ್ಯೋಗಗಳು
೩.೮ : ವಾರ್ಷಿಕ ಆವೃತ್ತದಲ್ಲಿನ ಅವರ ವೃತ್ತಿ ಜೀವನ ಕ್ರಮ
೩.೯ : ಆದಾಯ ವರ್ಗೀಕರಣ
೩.೧೦ : ಕೊರಗರ ಸಮುದಾಯದ ಕುಟುಂಬದ ಗಾತ್ರ
೩.೧೧ : ಲಿಂಗಾನುಪಾತದ ಪ್ರಮಾಣ
೩.೧೨ : ಸಾಕ್ಷರತೆಯ ಪ್ರಮಾಣ
೩.೧೩ : ಶಿಕ್ಷಣ ಮಟ್ಟ ವಯಸ್ಸಿಗನುಗುಣವಾಗಿ
೩.೧೪ : ಕೊರಗ ಸಮುದಾಯದ ಭೂ ಹಿಡುವಳಿ
೩.೧೫ :ಪ್ರಸ್ತುತದ ಅವಲಂಭಿತ ಉದ್ಯೋಗಗಳು
೩.೧೬ : ವಾರ್ಷಿಕ ಆವೃತ್ತದಲ್ಲಿನ ಅವರ ವೃತ್ತಿ ಜೀವನ ಕ್ರಮ
೩.೧೭ : ಕ್ರೋಢಿಕೃತ ಆದಾಯದ ಪಟ್ಟಿ
೪.೧ : ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿರುವ ವೆಚ್ಚದ ವಿವರ
೪.೨ : ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ ದರ ಪಟ್ಟಿ
೪.೩ : ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪ್ರಗತಿಗಾಗಿ ಯೋಜಿಸಿದ ಕಲ್ಯಾಣ ಕಾರ್ಯಗಳು ಮತ್ತು ಅನುಷ್ಠಾನ:
೪.೪ : ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳು.
೪.೫ : ಉಪಯೋಜನೆಯ ವಿಶೇಷ ಕಾರ್ಯಕ್ರಮಗಳು
೪.೬ : ವಿಶೇಷ ಅಭಿವೃದ್ಧಿ ನಿಗಮದ ಸೌಲಭ್ಯಗಳು.
೫.೧ : ದೌರ್ಜನ್ಯ ಪ್ರಕರಣದಲ್ಲಿ ನೊಂದ ಸಂತ್ರಸ್ಥರಿಗೆ ನೀಡುತ್ತಿರುವ ಪರಿಹಾರ ವಿವರಗಳು.

ಪರಿಶಿಷ್ಟ ೫. ಛಾಯಾಚಿತ್ರಗಳು.

- ಜನಶಿಕ್ಷಣ ಸಂಸ್ಥೆಯ ಕಾರ್ಯಾಲಯ
- ಪೌರಕಾರ್ಮಿಕರ ಕಾಲೋನಿ, ಮಂಗಳೂರು
- ಪೌರಕಾರ್ಮಿಕರ ಕಾಲೋನಿ, ಉಡುಪಿ
- ಕೊಳಚೆ ಚರಂಡಿಯ ಪಕ್ಕದಲ್ಲೇ ಕಾಲೋನಿ, ಕುಂದಾಪುರ
- ಮಂಗಳೂರಿನ ಕೊರಗರ ಸಮುದಾಯಭವನ.

- ಬೆಟ್ಟಗುಡ್ಡಗಳಲ್ಲಿರುವ ಕುಟುಂಬದೊಂದಿಗೆ ಸಂಶೋಧಕರು
- ವಲಸೆ ಬಂದವರ ಆಶ್ರಯ ತಾಣವಾದ ಕೊಳಚೆ ಪ್ರದೇಶ.
- ವ್ಯವಸ್ಥಿತ ರಸ್ತೆಗಳಿಲ್ಲದ ಕೊರಗರ ಕಾಲೋನಿ
- ಸ್ಫೂರ್ತಿ ಆಶ್ರಮಶಾಲೆ, ಕೋಟೆಶ್ವರ
- ಸರ್ಕಾರದ ಸೌಲಭ್ಯಗಳಿಂದ ವಂಚಿತಗೊಂಡಿರುವ ಕುಟುಂಬ
- ಸಮಾಜಮಂದಿರ,ಬೀಡಿನಗುಡ್ಡೆ
- ಕೊರಗ ಹಿರಿಯರ ಸಮಾದಿಗಳು
- ಸಂಪ್ರದಾಯಗಳ ಮುಂದುವರಿಕೆ
- ಕೊರಗರ ಮಾರಾಟದ ಕಟ್ಟಿಗೆ.
- ಸಮಸ್ಯೆಗಳೇ ತುಂಬಿರುವ ಬೆಟ್ಟ ಗುಡ್ಡದ ಕೊರಗರ ಕುಟುಂಬ
- ಕಾಲೋನಿಯ ನಿರುಧ್ಯೊಗ ಪಡೆ
- ಸೌಲಭ್ಯ ವಂಚಿತ ಹಳ್ಳಿಗಾಡು ಕಾಲೋನಿ.
- ಕೊರಗರ ಕಾಲೋನಿಗೆ ನೀರಿನ ಮೂಲ
- ಕೊರಗರ ಕಾಲೋನಿಯ ಮೂಲಭೂತ ಸೌಲಭ್ಯಗಳಿಲ್ಲದಿರುವುದು.
- ಕೊರಗರ ಅಂಗವಿಕಲ ಸೌಲಭ್ಯ ವಂಚಿತ
- ಆಶ್ರಮ ಶಾಲೆಯ ವಿಹಂಗಮ ನೋಟ
- ಮಂಗಳೂರಿನ ಕೊಳಚೆ ಪ್ರದೇಶದ ಕೊರಗರ ಕಾಲೋನಿ.
- ಇಟ್ಟಿಗೆ ತಯಾರಿಸುವ ಕೆಲಸದಲ್ಲಿ ಕೊರಗರು
- ಕಾಲೋನಿ ಕೊಳಚೆ ಪ್ರದೇಶದಲ್ಲಿರುವುದು. ಕುಂದಾಪುರ
- ಸಾಂಪ್ರದಾಯಿಕ ಆಚರಣೆಯಲ್ಲಿ ಕೊರಗರು
- ಜನ ಶಿಕ್ಷಣ ಟ್ರಸ್ಟ್‌ನ ಕಾರ್ಯಾಲದಲ್ಲಿ ಕಾರ್ಯನಿರತ ಕೃಷ್ಣಮೂಲ್ಯ.
- ಮನೆಮನೆಗೆ ಭೇಟಿ ನೀಡಿದ ಸಂಶೋಧಕರೊಂದಿಗೆ ಕೊರಗರು
- ಕೊರಗ ಕಾಲೋನಿಯ ಸ್ವಚ್ಛತೆಯ ಬಗ್ಗೆ ನಡೆಯುತ್ತಿರುವ ಅಧಿಕಾರಿಗಳ ಚರ್ಚೆಯಲ್ಲಿ ಸಂಶೋಧಕರು.
- ಸ್ವಯಂಸೇವಾ ಸಂಸ್ಥೆಯ ಕಾರ್ಯದಲ್ಲಿ ಸಂಶೋಧಕರು.

ಜೇನುಕುರುಬರು

- ಜೇನುಕುರುಬ ಪುನರ್‌ವಸತಿಯ ಮನೆಗಳು ನಿರಾಶ್ರಿತವಾಗಿರುವುದು
- ಜೇನುಕುರುಬರ ಬದಲಾದ ವಿವಾಹದಲ್ಲಿ ಸಂಶೋಧಕರು
- ಎಂ.ಎ ಪದವಿ ಪಡೆದ ಜೇನುಕುರುಬರ ಯುವಕನ ವಿವಾಹದಲ್ಲಿ ಸಂಶೋಧಕರು
- ಜೇನುಕುರುಬರ ಸಮುದಾಯದ ಹಿರಿಯವ್ಯಕ್ತಿ
- ಶಿಕ್ಷಣ ನೀಡುವ ಆಶ್ರಮ ಶಾಲೆಯ ನಿಜ ಸ್ಥಿತಿ
- ಹಂಚಿಕೆಯಾಗದೆ ಶ್ರೀಮಂತರ ಪಾಲಾಗಿರುವ ಸರ್ಕಾರಿ ಭೂಮಿ
- ಅರಣ್ಯದಲ್ಲಿನ ಕಾಲೋನಿ ಮೂಲಭೂತ ಸೌಲಭ್ಯಗಲಿಂದ ವಂಚಿತವಾಗಿರುವುದು.
- ಹೊಸದಾಗಿ ನಿರ್ಮಿಸಲಾದ ಕಾಲೋನಿಯಲ್ಲಿ ಮೂಲಭೂತ ಸೌಲಭ್ಯಗಳಿಲ್ಲದಿರುವುದು
- ಉದ್ಯೋಗಕ್ಕಾಗಿ ಕಾಲೋನಿಯಲ್ಲಿ ಕಾಯುತ್ತಿರುವ ಜೇನುಕುರುಬರು
- ೨೦ ವರ್ಷಗಳ ಹಿಂದೆ ನಿರ್ಮಾಣವಾದ ಜೇನುಕುರುಬರ ಕಾಲೋನಿ
- ಜೇನುಕುರುಬ ಕಾಲೋನಿಯ ನಿರುದ್ಯೋಗ ಪಡೆ
- ಕೂಲಿಗಾಗಿ ಕಾದುಕುಳಿತ ಜೇನುಕುರುಬರ ಜೊತೆ ಸಂಶೋಧಕರು
- ಸೌಲಭ್ಯಗಳಿಲ್ಲದ ಜೇನುಕುರುಬರ ಹೊಸ ಕಾಲೋನಿ
- ಅರಣ್ಯದಲ್ಲಿನ ಕಾಲೋನಿಯ ನೋಟ
- ಅರಣ್ಯದಲ್ಲಿನ ಜೇನುಕುರುಬರ ಕತ್ತಲೆಯಲ್ಲಿನ ನಿರಾತಂಕ ಬದುಕು .
- ಚುನಾಯಿತ ಪ್ರಥಮ ಜೇನುಕುರುಬ ಮಹಿಳೆ
- ಮೂಲನಿವಾಸಿ ಲಕ್ಷಣಗಳನ್ನು ಉಳಿಸಿಕೊಂಡ ಜೇನುಕುರುಬ ಮನೆಯಲ್ಲಿ ಉರಿಯುತ್ತಿರುವ ಬದುಕಿನ ಹಣತೆ.
- ಜೇನುಕುರುಬ ಶಾಲೆಯ ಮಕ್ಕಳು
- ಸಂಪೂರ್ಣ ಗ್ರಾಮವಾಗುವಲ್ಲಿ ವಿಪಲವಾದ ಜೇನುಕುರುಬ ಕಾಲೋನಿ
- ಜೇನುಕುರುಬರ ವ್ಯವಸಾಯದ ಭೂಮಿಯ ಪಕ್ಕದಲ್ಲಿ ಸರ್ಕಾರದ ಭೂಮಿಯ ಬಯಲು
- ಧಾರ್ಮಿಕ ಆಚರಣೆಯಲ್ಲಿ ಜೇನುಕುರುಬರು
- ಆಶಾಕಿರಣ ಮೂಡಿಸುವತ್ತ ಜೇನುಕುರುಬ ಮಕ್ಕಳು

****

ಅಧ್ಯಾಯ ೧

ಅಧ್ಯಯನ ಸ್ವರೂಪ–ವ್ಯಾಪ್ತಿ– ವಿಧಾನ

೧. ಬುಡಕಟ್ಟು ಸಮುದಾಯಗಳನ್ನು ಕುರಿತಂತೆ ವ್ಯಾಖ್ಯಾನ್ಯ ಮತ್ತು ಚರ್ಚೆ ಹಾಗೂ ಅರ್ಥ ವಿವರಣೆ.

೨. ಮೂಲನಿವಾಸಿ ಬುಡಕಟ್ಟುಗಳ ಕುರಿತು ಅರ್ಥ ವಿವರಣೆ.

೩. ಅಧ್ಯಯನದ ಉದ್ದೇಶ.

೪. ಅಧ್ಯಯನದ ಪೂರ್ವಕಲ್ಪನೆಗಳು.

೫. ಅಧ್ಯಯನದ ವ್ಯಾಪ್ತಿ.

೬. ಅಧ್ಯಯನದ ವಿಧಾನ ಮತ್ತು ಸಮುದಾಯಗಳನ್ನು ಆರಿಸಿದ ಕ್ರಮ.

೭. ಕ್ಷೇತ್ರ ಕಾರ್ಯದ ಸಾಧಕ ಭಾಧಕಗಳು.

ಪ್ರಸ್ತಾವನೆ:

ಸಾಮಾಜಿಕ ವ್ಯವಸ್ಥೆಯಲ್ಲಿ ಮಾನವ ಸಮುದಾಯಗಳಿಗೆ ಎಲ್ಲಿಲ್ಲದ ಪ್ರಾಶಸ್ತ್ಯ ನೀಡಲಾಗಿದೆ. ಮಾನವ ಮತ್ತು ಪ್ರಾಕೃತಿಕನಿಸರ್ಗದ ಸಂಬಂಧವೂ ವ್ಯಾಪಕವಾಗಿ ಜೋಡಿಸಲ್ಪಟ್ಟಿದೆ. ಶ್ರೇಷ್ಠ ಮಾನವ ಸಂಪನ್ಮೂಲವೂ ಸಕಲ ಜೀವ ರಾಶಿಗಳ ಪ್ರಾಕೃತಿಕ ಪರಿಸರದೊಂದಿಗೆ ನಿರಂತರ ಬೆಸೆದು ಜೀವಿಸುತ್ತಿರುವ ಸಾಮರ್ಥ್ಯವೂ ಕಾಣಬರುತ್ತದೆ. ಪ್ರಾಕೃತಿಕ ಪರಿಸರದಲ್ಲಿ ಪರಿವರ್ತನೆ ಸಹಜವಾದದ್ದು. ನಿರಂತರವಾದದ್ದು ಹೌದು. ಆ ಪರಿವರ್ತನೆಯು ಮಾನವನ ಜೊತೆಗೂಡಿದ ವ್ಯವಸ್ಥೆಯ ಜೊತೆಜೊತೆಯಲ್ಲಿಯೇ ನಡೆಯುತ್ತಿರುತ್ತದೆ.

ವ್ಯವಸ್ಥೆಯಲ್ಲಿ ಮಾನವ ಸಮುದಾಯಗಳು ಸಹ ತಮ್ಮ ಸಾಮಾಜಿಕ ಆರ್ಥಿಕ- ರಾಜಕೀಯ ಜೀವನದ ವ್ಯವಸ್ಥಿತ ತಳಹದಿಯನ್ನು ರೂಪಿಸಿಕೊಂಡಿರುವುದು ಸತ್ಯ. ಈ ಹಿನ್ನೆಲೆಯಲ್ಲಿ ಜೀವನವಿಧಾನದ ಪ್ರತಿಯೊಂದು ಹಂತದ ಬೆಳವಣಿಗೆಯು ತನ್ನ ಬುದ್ಧಿವಂತಿಕೆ ಮತ್ತು ಜೀವನೋತ್ಸಾಹಗಳ ಸಂಪತ್ತಿನ ಉತ್ಪಾದಕ ರೂಪವನ್ನು ರೂಪಿಸಿ ಕೊಟ್ಟಿರುತ್ತದೆ ಎನ್ನಬಹುದಾಗಿದೆ. ಉತ್ಪಾದನಾ ರೂಪಕ್ಕೆ ಮಾನವೀಯ ಘಟಕವಾದ ಶ್ರಮದ ಪೂರೈಕೆಯು ಸಹ ಇಲ್ಲಿಂದಲೇ ಉತ್ಪತ್ತಿಯಾಗುತ್ತಿರುತ್ತದೆ ಎನ್ನಲಾಗುತ್ತಿದೆ. ಹೀಗಾಗಿ ಪ್ರತಿಯೊಂದು ಮಾನವ ಸಮುದಾಯವು ವಾಸಿಸುವ ನೆಲೆಯಲ್ಲಿ ತನ್ನದೇ ಸಾಮಾಜಿಕ- ಆರ್ಥಿಕ ಸಾಂಸ್ಕೃತಿಕ ರಾಜಕೀಯ ಪರಂಪರತೆಯ ಅನನ್ಯತೆಯನ್ನು ಸೃಷ್ಟಿಸಿಕೊಂಡಿರುವುದು ಕಾಣಬಹುದು.

ಮನುಷ್ಯನ ಜೀವನಕ್ರಮದ. ಚಿತ್ರಣವನ್ನು ಸಮಗ್ರವಾಗಿ ಅವಲೋಕಿಸಿದಾಗ, ಬದುಕಿನ ಸಮಂಜಸತೆಯಲ್ಲಿ ತಿಳಿದು ಬರುವುದೆನೆಂದರೆ, "ಮಾನವನ ಪರಿಸರ ಜೀವನದ ಇತಿಹಾಸವೂ ತುಂಬಾ ಧೀರ್ಘವಾದದ್ದು. ಆದಿಮಾನವನ ಜೀವನಕ್ರಮ ವಿವಿಧ ಕಾಲಘಟ್ಟಗಳಲ್ಲಿ ಹಂತ, ಹಂತವಾಗಿ ಬೆಳೆದು ಬಂದ ನಿದರ್ಶನಗಳು ಗುರುತಿಸಲಾಗುತ್ತಿರುವುದು ಕಾಣಬಹುದು. ಅರಣ್ಯದಿಂದ ರೂಪುಗೊಂಡ ಆಶ್ರಯ, ಆಹಾರ, ಬದುಕಿನಕ್ರಮ ಅವಿಭಾಜ್ಯ ಅಂಗವಾಗಿ ಉಳಿದು ಅಸ್ತಿತ್ವಕ್ಕೆ ಬಂದಿತ್ತು ಎನ್ನಲಾಗುತ್ತಿದೆ. ಈ ಹಂತಗಳ ಬೆಳವಣಿಗೆ ಎಂಬಂತೆ ರೂಪುಗೊಂಡ ಭೌತಿಕ ಮತ್ತು ಬೌದ್ಧಿಕತೆಯ ಮಟ್ಟದಲ್ಲಿನ ಸ್ಥಿತ್ಯಂತರಗಳು ಅವಶ್ಯಕತೆಯ ಅನಿವಾರ್ಯತೆಯನ್ನು ಸೃಷ್ಟಿಸಿದ ಫಲವಾಗಿ ವೈವಿಧ್ಯಮಯ ಸಾಮಾಜಿಕ-ಆರ್ಥಿಕ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವೆಂದಾಗಿ ಸಂಶೋಧಕರು ಗುರುತಿಸುತ್ತಿರುವುದು ಕಾಣಬರುತ್ತದೆ. ಈ ನಿಟ್ಟಿನಿಂದ ನೋಡಿದಲ್ಲಿ ೨೧ ನೇ ಶತಮಾನದಲ್ಲೂ ಸಹ ಮಾವನ ಸಮುದಾಯಗಳು ಅರಣ್ಯಸಂಸ್ಕೃತಿಯ ಭಾಗವಾಗಿಯೇ ಉಳಿದಿರುವ ವೈಜ್ಞಾನಿಕ ಸತ್ಯ ಸಂಗತಿ ಭಾರತದಲ್ಲಿ

ಕಂಡುಬರುತ್ತದೆ. ಯಥಾವತ್ತಾಗಿ ಇಂದು ಇದನ್ನು ಭಾರತದ ಸಾಂಸ್ಕೃತಿಕ ಜಗತ್ತಿನ ವಿಶೇಷ ಎಂಬಂತೆ ಗುರುತಿಸಲಾಗುತ್ತಿದೆ. ಅರಣ್ಯಸಂಸ್ಕೃತಿಯ ಮಾನವ ಸಮುದಾಯಗಳು ಸಹ ತಮ್ಮ ಬದುಕಿನಲ್ಲಿ ಗಾಢವಾದ ವ್ಯವಸ್ಥೆಯನ್ನು ಪರಿಸರದ ಕ್ರಮದಂತೆ ಅವಲಂಬಿಸಿ ರೂಢಿಗತವಾಗಿದ್ದಾರೆ. ಈ ಸಮುದಾಯಗಳಲ್ಲಿಯೂ ಸಹ ವಿಭಿನ್ನ ರೂಪ, ದೈಹಿಕ ರಚನೆ, ಪರಿಸರವನ್ನೊಳಗೊಂಡ ಅನೇಕ ಬಗೆಯ ಜೀವನಕ್ರಮಗಳುಳ್ಳ ಸಮುದಾಯಗಳು ಸಮ್ಮಿಳಿತವಾಗಿರುವುದು ಅಷ್ಟೇ ಸತ್ಯ.

ಈ ಸಮುದಾಯಗಳ ಪ್ರಾದೇಶಿಕ ಜೀವನಕ್ರಮ, ಭಾಷೆ ಮುಂತಾದ ವಿಷಯಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಅರಣ್ಯಪ್ರದೇಶ ಇಲ್ಲವೆ ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆಸಿ ಕೆಳಸ್ತರದ ಜೀವನ ನಡೆಸುತ್ತಿರುವವರು ಶೇ. ೮% ಜನಸಂಖ್ಯೆಯಲ್ಲಿ ಕಂಡುಬರುತ್ತಾರೆ. ಈ ಸಮುದಾಯಗಳ ಜನರನ್ನು ಬುಡಕಟ್ಟು ಜನರೆಂದು ಕರೆಯಲಾಗುತ್ತಿರುವುದು ಕಾಣಬಹುದು. ಈ ಸಮುದಾಯಗಳು ಸಹ ಅನೇಕ ವೈಶಿಷ್ಟ ಪೂರ್ಣ ಲಕ್ಷಣಗಳಿಂದಾಗಿ ವಿಶೇಷ ಸ್ಥಾನ ಪಡೆದಿವೆ. ಅವರದೇ ಆದ ವಿಶಿಷ್ಟವಾದ ಸಾಮಾಜಿಕ-ಸಾಂಸ್ಕೃತಿಕ ಪದ್ಧತಿಗಳು ಹಾಗೂ ಅನೇಕ ಶತಮಾನಗಳ ಕಾಲ ಅವರ ಜೀವನದ ಶೈಲಿಯಲ್ಲಿ ಕನಿಷ್ಟ ಬದಲಾವಣೆಯನ್ನಿಟ್ಟುಕೊಂಡು ನಡೆಸಿದ ಬದುಕು ಅವರನ್ನು ಈ ಜನಸಂಖ್ಯೆಯ ಒಂದು ವೈಶಿಷ್ಟ ಅಂಗವನ್ನಾಗಿ ಮಾಡಿದೆ. ಜೊತೆಗೆ ರಾಷ್ಟ್ರೀಯ ಜೀವನದ ಮುಖ್ಯವಾಹಿನಿಯಿಂದ ದೂರವಾಗಿಸಿದೆ ಎನ್ನಲಾಗಿದೆ. ಅರ್ಥವ್ಯವಸ್ಥೆಯೂ ಕೂಡ ಅವರಂತೆಯೇ ವೈಶಿಷ್ಟ ಪೂರ್ಣವಾಗಿ ಉಳಿದಿರುವುದು ಕಾಣಬಹುದು.

"ಭಾರತದಂತಹ ವೈವಿಧ್ಯಮಯ ಪ್ರಾದೇಶಿಕತೆಯಲ್ಲಿ ಸುಮಾರು ೭೬೫ ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಬುಡಕಟ್ಟು ಸಮುದಾಯಗಳಿವೆ"[೧] ಇವುಗಳು ತಮ್ಮ ಸ್ವತಂತ್ರ, ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಅಸ್ತಿತ್ವವನ್ನು ನಿರಂತರವಾಗಿ ಕಾಲಕ್ರಮದಂತೆ ಕಾಯ್ದುಕೊಳ್ಳುತ್ತಾ ಕಾಡು, ಮೇಡು ಗಿರಿಕಂದರಗಳಲ್ಲಿ ವಾಸಿಸುತ್ತಿರುವವರು. "ಮುಕ್ಕಾಲು ಭಾಗದಷ್ಟು ಇಂತಹ ಸಮುದಾಯಗಳು ಮಧ್ಯಪ್ರದೇಶ, ಬಿಹಾರ್, ಒರಿಸ್ಸಾ, ಮಹಾರಾಷ್ಟ್ರ, ಜಾರ್ಖಂಡ್, ಉತ್ತಾರಾಂಚಲ ರಾಜ್ಯಗಳ ಪರಿಸರದಲ್ಲಿ ನಾಗರಿಕ ಜನರ ಸಂಪರ್ಕದಿಂದ ದೂರವೇ ಸರಿದು ಪ್ರತ್ಯೇಕತೆಯ ಜೀವನವನ್ನು ರೂಢಿಸಿಕೊಂಡಿರುವರು. ಇಂತಹ ಸಮುದಾಯಗಳಲ್ಲೇ ೭೪ ಸಮುದಾಯಗಳನ್ನು ಮೂಲನಿವಾಸಿ ಬುಡಕಟ್ಟು ಸಮುದಾಯಗಳು (Primitive Tribal communities) ಎಂದು ಗುರುತಿಸಲಾಗಿದೆ.[೨]

ಬಹುತೇಕ ಮೂಲನಿವಾಸಿ ಬುಡಕಟ್ಟು ಸಮುದಾಯಗಳು Primitive Tribal communities ವಿಭಿನ್ನ ರೀತಿಯಲ್ಲಿ ಕಂಡುಬರುತ್ತವೆ. ಗುಡ್ಡಗಾಡು, ಕಾಡಿನಂಚಿನಲ್ಲಿ ಅರೆ ಅರಣ್ಯ, ದಟ್ಟ ಅರಣ್ಯದ ಪ್ರದೇಶಗಳಲ್ಲೇ ಇವರುಗಳ ವಾಸವೂ ಹೌದು. ಇಂತಹ ಎಲ್ಲಾ

ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಭಾಷೆ, ಸಂಸ್ಕೃತಿ ವೃತ್ತಿ ಆಚರಣೆ, ಸಂಪ್ರದಾಯ, ದೈಹಿಕ ಲಕ್ಷಣದ ಜೊತೆ ಆರ್ಥಿಕತೆಯ ಮಟ್ಟವೂ ಸಹ ಒಂದು ಸಮುದಾಯದ ಸಮಾಜದಿಂದ ಮತ್ತೊಂದು ಸಮುದಾಯದ ಸಮಾಜಕ್ಕೆ ಭಿನ್ನವಾಗಿರುವುದು ಒಂದು ವೈಶಿಷ್ಟ ಎನ್ನಬಹುದು.

ನಮ್ಮ ಸಂವಿಧಾನದ ಕಾಲಂ ೩೪೨ ರ ಪ್ರಕಾರ ಬುಡಕಟ್ಟು ಸಮುದಾಯಗಳ ಸಮಾಜಗಳನ್ನು ಪರಿಶಿಷ್ಟ ಜನಾಂಗಗಳು (Scheduled Tribes) ಎಂದು ಕರೆಯಲಾಗಿದೆ.[೬] ಹಿಂದೂ ಸಮಾಜವೂ ವಿವಿಧ ಧರ್ಮ, ಜಾತಿ, ಮತ, ಪಂಥಗಳಿಂದ ವಿಭಜನೆಯಾಗಿರುವಂತೆ, ಹಲವಾರು ಬುಡಕಟ್ಟು ಸಮುದಾಯಗಳಲ್ಲಿಯೂ ಸಹ ಈ ತರಹದ ವಿಭಜನೆ ಸಾಮಾನ್ಯವಾಗಿ ಗುರುತಿಸಲಾಗುವುದು. ಆದರೆ ವಿಭಿನ್ನ ಆಯಾಮಗಳಿಂದ ನೋಡಿದಾಗ ಉದಾಹರಣೆಗೆ; ಆರ್ಥಿಕ ದೃಷ್ಟಿಯಿಂದ ನೋಡಿದಾಗ ಇವರುಗಳನ್ನು ನಿಸರ್ಗದಿಂದ ಹಾಗೂ ಸಮಾಜದಿಂದ ತುಚ್ಚೀಕರಿಸಲ್ಪಟ್ಟ ದುರ್ದೈವಿ ಮಕ್ಕಳೆಂದು ಕರೆಯಲಾಗುವುದು. ಸಾಂಸ್ಕೃತಿಕ ಹಿನ್ನೆಲೆಯಿಂದ ಈ ರೀತಿ ಹೇಳಲಾಗದು ಎನ್ನುವುದು ಸತ್ಯ. ಇವರುಗಳಿಗೆ ಇವರದೇ ಆದ ಸಾಂಸ್ಕೃತಿಕ ರೀತಿ-ನೀತಿಗಳು ಇರುವುದರಿಂದ ಇವರ ಸಾಂಸ್ಕೃತಿಯನ್ನು ಮೇಲು-ಕೀಳು ಎಂದು ವಿಭಾಗಿಸುವುದು ಸಾಧ್ಯವಿಲ್ಲ. ಇವರ ಪ್ರತಿಯೊಂದು ಆಚಾರ-ವಿಚಾರ ಪರಂಪರಾಗತವಾಗಿ ನಡೆದು ಬಂದಿರುವುದರಿಂದ ಅವುಗಳ ಸ್ತರವನ್ನು ಇತರರೊಡನೆ ಹೋಲಿಸಿದಲ್ಲಿ ಒಂದು ತರಹ ಭಿಮ್ಮು ಬರುವುದು. ಆದರೆ ಆರ್ಥಿಕವಾಗಿ ಈ ಬುಡಕಟ್ಟು ಸಮುದಾಯಗಳು ಒಂದು ಸಮುದಾಯ ಇನ್ನೊಂದು ಸಮುದಾಯಕ್ಕಿಂತ ಹಿಂದುಳಿದಿರಬಹುದು ಇದನ್ನು ಆಯಾ ಪರಿಸರ ಹಾಗೂ ಆರ್ಥಿಕತೆಯ ಹಿನ್ನೆಲೆಯಲ್ಲಿ ಗುರುತಿಸಲೂ ಬಹುದು.

ಪೂರ್ವದಿಂದಲೂ ಬುಡಕಟ್ಟು ಸಮುದಾಯಗಳು ಸಾಮಾಜಿಕ ಹಾಗೂ ನೈಸರ್ಗಿಕ, ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇಂದಿನವರೆಗೂ ಕೆಲವೊಂದು ಸಮುದಾಯಗಳು ಅರೆನಗ್ನಾವಸ್ಥೆಯಲ್ಲಿ ಅಲೆಮಾರಿಗಳಂತೆ ತಿರುಗುತ್ತಾ ನೀರಿನ ಆಸರೆ ಇರುವ ಕಡೆ ಉತ್ತಿ-ಭಿತ್ತಿ ದವಸಧಾನ್ಯ ಬೆಳೆದು ಸ್ಥಿರ ಜೀವನದ ಪಾಠವನ್ನು ಅಭ್ಯಾಸ ಮಾಡಿಕೊಳ್ಳುತ್ತಿದ್ದಾರೆ. ಬುಡಕಟ್ಟು ಸಮುದಾಯಗಳಲ್ಲೇ ತೀರಾ ಹಿಂದುಳಿದ ಮೂಲನಿವಾಸಿ (Primitive Tribe) ಬುಡಕಟ್ಟು ಸಮುದಾಯಗಳು ಕೂಡ ಕಾಣಬಹುದು. ಅವರು ತಮ್ಮ ತಮ್ಮ ಕುಟುಂಬ ನಿರ್ವಹಣೆಗೆ ಒಂದೆಡೆಯಿಂದ ಮತ್ತೊಂದೆಡೆಗೆ ಜೇನು, ಕಾಯಿ, ಗೆಣಸು ಸೊಪ್ಪುಗಳನ್ನು ಹುಡುಕುತ್ತಾ ಮತ್ತು ಸಣ್ಣ ಪುಟ್ಟ ಪ್ರಾಣಿಗಳನ್ನು ಬಲೆಹಾಕಿ ಬೇಟೆಯಾಡಿ ಜೀವನ ಸಾಗಿಸುತ್ತಿದ್ದವರು. ಇವರಲ್ಲಿ ಯಾವಾಗಲೂ ಹತ್ತು ಅಥವಾ ಅದಕ್ಕಿಂತ ಹೆಚ್ಚು ಮಂದಿ ಗುಂಪಿನಲ್ಲಿ ವಾಸಿಸುವವರು. ಕೆಲವರು ಪ್ರಾಣಿಗಳನ್ನು ಪಳಗಿಸಿಕೊಂಡು ಸಾಕಿ ಮೊಟ್ಟೆ, ಮಾಂಸ ಪಡೆಯುತ್ತಾ ಬೇಟೆ, ಪಶುಪಾಲನೆ, ಕುಮುರಿ ಬೇಸಾಯದ ಕಸುಬುಗಳಲ್ಲಿ ತೊಡಗಿಸಿಕೊಂಡಿದ್ದವರು. ಇಂದಿನ ಪರಿಸರದಲ್ಲಿ ಮೊದಲಿನಂತೆ ಬೇಟೆಯಾಡುವುದಕ್ಕೆ ನಿರ್ಭಂಧವಿರುವುದರಿಂದ ಇತರ

ಕಸುಬುಗಳಾದ ಬೇಸಾಯ, ಕೂಲಿ ಇತ್ಯಾದಿಗಳು ಲಭ್ಯವಿರುವ ಕಾರಣ ಸಮುದಾಯಗಳು ಬೇರೆ, ಬೇರೆ ಕಸುಬುಗಳನ್ನು ಅವಲಂಬಿಸಲು ಸಾಧ್ಯವಾಗಿದೆ.

ಬದುಕಲು ಆಹಾರ, ವಸತಿ ನೆಲೆನಿಂತ ಪರಿಸರದಲ್ಲಿ ಮೂಲಭೂತ ಸೌಕರ್ಯಗಳ ಜೊತೆಗಿನ ಆರ್ಥಿಕ ಸಂರಚನೆ ಬದಲಾಗುತ್ತಾ ಬಯಕೆಗಳ ವಿಸ್ತಾರತೆಯಲ್ಲಿ ಸಮುದಾಯಗಳು ಬೆಳೆದುಬರುತ್ತಿವೆ. ಹೀಗಾಗಿ ಸಮುದಾಯಗಳ ಅಭಿವೃದ್ಧಿಗಾಗಿ ಶ್ರಮಿಸುವುದು ಸ್ವತಂತ್ರ ಭಾರತದ ಸಂವಿಧಾನದ ನಿರ್ದೇಶನವಾಗಿದೆ. ಪ್ರಸ್ತುತ ಸಂವಿಧಾನದ ನಿರ್ದೇಶನದಂತೆ ಅನೇಕ ಕಾರ್ಯಕ್ರಮಗಳನ್ನು ಸಮುದಾಯಗಳ ರಕ್ಷಣೆ-ಸಂರಕ್ಷಣೆಗೆ ಅಳವಡಿಸಲಾಗಿದೆ. ರಾಜ್ಯಾಂಗವೂ ಸಹ ವ್ಯವಸ್ಥಿತವಾಗಿ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲು ಅನುವು ಮಾಡಿಕೊಟ್ಟಿರುವುದು ಕಾಣಬಹುದು.

೧. ಬುಡಕಟ್ಟುಗಳನ್ನು ಕುರಿತಂತೆ ವ್ಯಾಖ್ಯಾನ ಮತ್ತು ಚರ್ಚೆ ಹಾಗೂ ಅರ್ಥವಿವರಣೆ

ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳನ್ನು ಆಯಾದೇಶ, ಪ್ರದೇಶಗಳಲ್ಲಿ ಅನೇಕ ಹೆಸರುಗಳಿಂದ ಗುರುತಿಸಲಾಗುತ್ತಿದೆ. ಆದಿವಾಸಿಗಳು ಎನ್ನುವುದು ಸರ್ವಸಮ್ಮತವಾಗಿ ಕೇಳಿಬರುತ್ತಿರುವ ಹೆಸರಾಗಿದೆ. ಇವರನ್ನು ಸಂಚಾರಿಗಳೆಂದು, ಅರಣ್ಯವಾಸಿಗಳೆಂದು ಗಿರಿಜನರೆಂದೂ, ಪರಿಶಿಷ್ಟ ವರ್ಗ, ಸರ್ವಚೇತನವಾದಿಗಳು, ಪ್ರಕೃತಿ ಆರಾಧಕರು ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿದೆ. “ಒಂದುದೇಶದ ಮೂಲನಿವಾಸಿಗಳನ್ನು (Aboriginals) ಆದಿವಾಸಿಗಳು (Tribes) ಎಂದು ಕರೆಯಲಾಗುತ್ತಿದೆ.”[೪]

ಬುಡಕಟ್ಟು ಶಬ್ಧವನ್ನು ಸರಳ ಅರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ. ಸುಪ್ರಸಿದ್ಧ ಮಾನವಶಾಸ್ತ್ರಜ್ಞರಾದ “ಕ್ರೋಬರ್” ರವರು “ಬುಡಕಟ್ಟು ಜನಾಂಗವು ಚಿಕ್ಕದಾಗಿ ಒಂಟಿಯಾಗಿ ಹಾಗೂ ಒಂದಕ್ಕೊಂದು ಹೆಣೆದಂತಿರುವ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಂಬಂಧಗಳನ್ನು (Kinship) ಅಳವಡಿಸಿಕೊಂಡು ವ್ಯವಸ್ಥಿತವಾಗಿ ರಚಿತವಾಗಿರುವ ಸಮಾಜ”.[೫] ಮತ್ತೊಬ್ಬ ಮಾನವ ಶಾಸ್ತ್ರಜ್ಞ ಪಿಡ್ಡಿಂಗಟನ್ ರವರು ಇನ್ನೂ ವಿಶಾಲವಾಗಿ ಮತ್ತು ವಿಶೇಷ ಗುಣಲಕ್ಷಣಗಳ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಅವರ ಪ್ರಕಾರ “ಚಿಕ್ಕ ಚಿಕ್ಕ ಸಾಮಾಜಿಕ ವಿಭಾಗಳಾಗಿ ಹಂಚಿ ತಾಂತ್ರಿಕತೆಯಲ್ಲಿ ಬಹು ಅಲ್ಪ ರೀತಿಯ ಸ್ಥರದಲ್ಲಿದ್ದು, ಸಂಬಂಧ, ಪ್ರಾದೇಶಿಕ ಹಾಗೂ ಆರ್ಥಿಕ ವಿಷಯಗಳಲ್ಲಿ ವೈಶಿಷ್ಟ್ಯತೆ ಹೊಂದಿದ, ಇಂತಹ ಗುಣಗಳಿಂದೊಡಗೂಡಿದ ಜನಾಂಗಗಳನ್ನು ಬುಡಕಟ್ಟು ಅಥವಾ ಪ್ರಾಚೀನ ಸಮುದಾಯಗಳೆಂದು ಕರೆಯಲಾಗಿದೆ.”[೬] ಈ ಲಕ್ಷಣಗಳನ್ನು ಹೊಂದಿರುವ ಭಾರತದಲ್ಲಿನ ಅನೇಕ ಸಮುದಾಯಗಳ ಬಗ್ಗೆ ವಿಸ್ತೃತವಾದ ಮಾಹಿತಿ ದೊರಕಿಸಿಕೊಟ್ಟ ಶ್ರೇಷ್ಠತೆ ಮಾನವಶಾಸ್ತ್ರಜ್ಞರಿಗೆ ಸಲ್ಲುತ್ತದೆ. ಆದಿವಾಸಿ ಸಮುದಾಯಗಳ ಬಗ್ಗೆ ಆಳವಾದ

ಸಂಶೋಧನೆಯನ್ನು ನಡೆಸಿ ಬುಡಕಟ್ಟು ಜನರ ಬಗ್ಗೆ ಮಾಹಿತಿಯನ್ನು ಹೊರಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ವಿದ್ವಾಂಸರಾದ ಥರ್‌ಸ್ಟನ್, ಮಿಲ್ಸ್, ಸ್ಮಿತ್, ಎ.ಎ.ಡಿ ಲೂಯಿಸ್, ಕೆ.ರಂಗಾಚಾರಿ, ವೆರಿಯರ್‌ಎಲ್ವಿನ್, ವಿದ್ಯಾರ್ಥಿ, ಸಕ್ಸೇನಾ, ಮಜುಂದಾರ್, ಎಲ್.ಕೆ.ಅಯ್ಯರ್ ಮತ್ತು ಹೆಚ್.ವಿ. ನಂಜುಂಡಯ್ಯ ಮುಂತಾದ ಗಣ್ಯರಿಗೆ ಸಲ್ಲುತ್ತದೆ. ಅಲ್ಲದೆ ಅರಣ್ಯವಾಸಿಗಳ ಸಾಮಾಜಿಕ ಪರಿಸರದ ವ್ಯವಸ್ಥೆಯನ್ನು ಥರ್‌ಸ್ಟನ್ ಮತ್ತು ರಂಗಾಚಾರಿರವರು ಕುತೂಹಲದಿಂದಲೇ ಅಧ್ಯಯನಿಸಿದ್ದಾರೆ. ಬ್ರಿಟಿಷ್ ಆಡಳಿತದ ಅನುಕೂಲಕ್ಕಾಗಿ ಜನಾಂಗೀಯ ಸಮೀಕ್ಷೆ ನಡೆಸಿದ ಅಧಿಕಾರಿಗಳು ಸಹ ವಿಶೇಷವಾಗಿ ಕಂಡುಬರುತ್ತಾರೆ. ಭಾರತದ ದಕ್ಷಿಣಭಾಗದಲ್ಲಿನ ಬುಡಕಟ್ಟು ಸಮುದಾಯಗಳನ್ನು ಥರ್‌ಸ್ಟನ್ ರವರು "The Caste and Tribes of South India" ಎಂಬ ಪುಸ್ತಕದ ೭ ಸಂಪುಟಗಳಲ್ಲಿ ಬುಡಕಟ್ಟು ಸಮುದಾಯಗಳನ್ನು ಪರಿಚಯಿಸಿ ಕೊಟ್ಟಿದ್ದಾರೆ.

ವಿಸ್ತೃತ ಭಾರತವನ್ನು ವಲಯವಾರು ನಡೆಸಿರುವ ಅಧ್ಯಯನ ಕ್ರಮದಿಂದಲೂ ಮಾನವಶಾಸ್ತ್ರಜ್ಞರು ಸಮುದಾಯಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ,

ಅ) ಉತ್ತರ ಹಾಗು ಈಶಾನ್ಯವಲಯದ ಬುಡಕಟ್ಟು ಸಮುದಾಯಗಳು

ಆ) ಮಧ್ಯವಲಯದ ಬುಡಕಟ್ಟು ಸಮುದಾಯಗಳು

ಇ) ದಕ್ಷಿಣ ವಲಯದ ಬುಡಕಟ್ಟು ಸಮುದಾಯಗಳು.[೭] ಇವುಗಳ ಬಗ್ಗೆ ವೈಜ್ಞಾನಿಕವಾದ ಸಮೀಕ್ಷೆ ನಡೆಸಿ ಉತ್ಕೃಷ್ಟ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಸಮಾಜ ವಿಜ್ಞಾನಿಗಳು ಹಾಗೂ ಮಾನವ ಶಾಸ್ತ್ರಜ್ಞರು ಭಾರತದ ಅನೇಕ ಬುಡಕಟ್ಟು ಸಮುದಾಯಗಳನ್ನು ಕುರಿತು ಅನಾಗರಿಕರು, ಅಸಂಸ್ಕೃತರು, ಹಾಗೂ ನಿಗೂಢ ಪ್ರದೇಶಗಳಲ್ಲಿ ವಾಸಿಸುವವರೆಂದು ವರ್ಣಿಸಿದ್ದಾರೆ. ಈ ಬಗ್ಗೆ ಅನೇಕ ಗೊಂದಲದ ಹೇಳಿಕೆಗಳು ಪ್ರಚಲಿತದಲ್ಲಿವೆ. ಸಂವಿಧಾನದ ಅನುಸಾರ ತಯಾರಿಸಲಾದ ಪಟ್ಟಿ ಮತ್ತು ಸಮಾಜವಿಜ್ಞಾನಿಗಳು ಹಾಗೂ ಮಾನವ ಶಾಸ್ತ್ರಜ್ಞರ ಮಾನದಂಡಗಳಲ್ಲಿ ವರ್ಗೀಕರಿಸಿರುವ ಪಟ್ಟಿಯಲ್ಲಿ ಹೊಂದಾಣಿಕೆಗಳೇ ಇಲ್ಲದಿರುವುದು ಕಂಡು ಬರುತ್ತದೆ. ಇಂದಿಗೂ ಬಹುಸಂಖ್ಯಾತ ಬುಡಕಟ್ಟು ಸಮುದಾಯಗಳು ಅರಣ್ಯವನ್ನು ಅವಲಂಭಿಸಿ ತನ್ನದೇ ಆದ ಅನನ್ಯತೆ ಸೃಷ್ಟಿಸಿಕೊಂಡಿದ್ದಾರೆ. ಬುಡಕಟ್ಟು ಪದವನ್ನು ಪ್ರಪಂಚದ ವಿವಿಧ ಭಾಗಗಳಲ್ಲಿ ನೆಲೆನಿಂತಿರುವ ವಿಭಿನ್ನ ಜನ ಸಮೂಹಕ್ಕೆ ವಿಭಿನ್ನ ರೀತಿಯಲ್ಲಿ ಉಪಯೋಗಿಸಲಾಗುತ್ತಿದೆ. ಆದರೆ ಮಾನವಶಾಸ್ತ್ರಜ್ಞಾರು ಬುಡಕಟ್ಟು ಎಂಬ ಪದಕ್ಕೆ ಪರ್ಯಾಯವಾಗಿ ಆದಿವಾಸಿ ಎಂಬ ಪದ ಬಳಸುವುದು ಸೂಕ್ತವೆಂದು ವಿವರಿಸಿದ್ದಾರೆ.[೮] ಅವರ ಪ್ರಕಾರ ಆದಿ ಎಂದರೆ ಪುರಾತನ ವಾಸಿ ಎಂದರೆ ನಿವಾಸಿಗಳು ಎಂದು ವಿವರಿಸಲಾಗಿದೆ.

ಬುಡಕಟ್ಟು ಎಂಬ ಪದಕ್ಕೆ ಅರ್ಥವಿವರಣೆ ಕೊಡುವುದು ಕಷ್ಟಕರವಾಗಿದೆ. ಬುಡಕಟ್ಟು ಎಂಬ ಪದವನ್ನು ಸಮಾಜವಿಜ್ಞಾನಿಗಳು, ಮಾನವಶಾಸ್ತ್ರಜ್ಞಾರು, ಅರ್ಥಶಾಸ್ತ್ರಜ್ಞಾರು, ವಿದ್ವಾಂಸರು

ಸಂಶೋಧಕರು ಹಾಗೂ ಇತಿಹಾಸಕಾರರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನ ಮಾಡಿರುತ್ತಾರೆ. ಬುಡಕಟ್ಟು ಎಂಬ ಪದಕ್ಕೆ ಆಂಗ್ಲ ಭಾಷೆಯ ಟ್ರೈಬ್ಸ್ ಎಂಬ ಪದವನ್ನು ಸಮನಾರ್ಥ ಪದವಾಗಿ ಬಳಸಲಾಗುತ್ತಿದೆ, ಇದು ಲ್ಯಾಟಿನ್ ಭಾಷೆಯ ಟ್ರೈಬಸ್ ಎಂಬ ಪದದಿಂದ ಉಗಮಗೊಂಡಿದೆ. ನಾಗರಿಕ ಸಮಾಜದ ಜೊತೆ ಬೇರೆಯದೇ, ಭಿನ್ನವಾದ ಪ್ರತ್ಯೇಕ ಪರಿಸರ ಜೀವನವನ್ನು ನಡೆಸಿಕೊಂಡು ತಮ್ಮ ವಿಶಿಷ್ಯವಾದ ಸಂಸ್ಕೃತಿಯನ್ನು ಪ್ರಸ್ತುತದ ವರೆಗೂ ಉಳಿಸಿಕೊಂಡು ಬಂದಿರುವ ಒಂದು ಗುಂಪಿಗೆ ಸಾಮಾನ್ಯವಾಗಿ ಬುಡಕಟ್ಟು ಎಂದು ಕರೆಯಲಾಗುತ್ತದೆ.

ಬುಡಕಟ್ಟುಗಳು (Tribes) ಎಂದರೆ ಯಾರು? ಎಂಬ ಪ್ರಶ್ನೆಗೆ ಮಾನವ ವಿಜ್ಞಾನಿಗಳು ಮತ್ತು ಸಮಾಜ ವಿಜ್ಞಾನಿಗಳು ಕೆಲವು ಮಹತ್ವದ ಲೇಖನಗಳಲ್ಲಿ ಈ ಕೆಳಗಿನಂತೆ ಅರ್ಥ ವಿವರಣೆಯನ್ನು ಕೊಟ್ಟಿರುತ್ತಾರೆ.

G.P. Murdock (ಮುರ್‌ಡಾಕ್) ಅವರ ಪ್ರಕಾರ "ಆದಿವಾಸಿ ಅಥವಾ ಬುಡಕಟ್ಟು ಎಂದರೆ, ಅದು ಒಂದು ಸಾಮಾಜಿಕ ಗುಂಪು, ಅದು ಕೆಲವು ಗೋತ್ರಗಳಿಂದ ಕೂಡಿದ್ದು, ಒಂದು ನಿಶ್ಚಿತವಾದ ಭೌಗೋಳಿಕ ಪ್ರದೇಶದಲ್ಲಿ ಒಂದೇ ಭಾಷೆಯನ್ನು ಹೊಂದಿದ್ದು, ಒಂದೇ ಸಂಸ್ಕೃತಿ, ಒಂದೇ ರಾಜಕೀಯ ರಚನೆ ಇತ್ಯಾದಿಗಳನ್ನೊಳಗೊಂಡ ಒಂದು ಗುಂಪು".

Ehren Feals (ಎಹೆರೆನ್ ಫಿಯಲ್ಸ್) ಅವರ ಅಭಿಪ್ರಾಯದ ಮೇರೆಗೆ ಬುಡಕಟ್ಟು ಎಂದರೆ, "ಇತರೆ ಜನಾಂಗದಿಂದ ಬೇರ್ಪಟ್ಟ ಒಂದು ಜನಾಂಗ. ಇದು ಒಂದು ಭೌಗೋಳಿಕ ಸ್ಥಳದಲ್ಲಿ ಒಂದೇ ಭಾಷೆಯನ್ನಾಡುವ ಒಂದೇ ಸಂಪ್ರದಾಯ. ಒಂದೇ ವೃತ್ತಿಯನ್ನು ಹೊಂದಿರುವ ಒಂದು ಸಮೂಹ".

D.N. Majumdar (ಮಜುಂದಾರ್)ರವರಪ್ರಕಾರ "ಬುಡಕಟ್ಟು ಸಮುದಾಯಗಳೆಂದರೆ, ಹಲವಾರು ಕುಟುಂಬಗಳ ಸಮೂಹವು ಸಾಮಾನ್ಯ ನಾಮಾಂಕಿತವನ್ನು ಹೊಂದಿರುವ, ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿರುವ, ವಿಶಿಷ್ಟ ಭಾಷೆಯನ್ನಾಡುವ, ವಿವಾಹ ಉದ್ಯೋಗಗಳ ಬಗೆಗೆ ಕೆಲವೊಂದು ನಿಶ್ಚಿತ ಕ್ರಿಯಾ ವಿಧಿವಿಧಾನಗಳನ್ನೊಳಗೊಂಡಿರುವ, ಪರಸ್ಪರ ಸಹಕಾರ ಹಾಗೂ ತಿಳುವಳಿಕೆಗಳ ಮೇಲೆ ನೆಲೆಸಿರುವ ಸಮುದಾಯವನ್ನೇ" ಬುಡಕಟ್ಟು ಎಂದು ಕರೆಯುತ್ತಾರೆ.

Fairchild (ಫೇರ್‌ಚೈಲ್ಡ್) ಇವರು ತಮ್ಮ ಸಮಾಜಶಾಸ್ತ್ರದ ನಿಘಂಟು ಎಂಬ ಹೊತ್ತಿಗೆಯಲ್ಲಿ ಬುಡಕಟ್ಟು ಸಮುದಾಯವನ್ನು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ. "ಸಾಮಾನ್ಯವಾಗಿ, ಅಸಂಖ್ಯಾತ ರಕ್ತ ಸಂಬಂಧಗಳನ್ನು ತಂಡ ಹಾಗೂ ಉಪ ತಂಡಗಳನ್ನು ನಿಶ್ಚಿತ ಭೂ ಪ್ರದೇಶವನ್ನು ತನ್ನದೇ ಆದ ಖಚಿತ ಭಾಷೆಯನ್ನು ಸಜಾತೀಯ ಸಂಸ್ಕೃತಿ ಮತ್ತು

ತನ್ನದೇ ಆದ ರಾಜಕೀಯ ವ್ಯವಸ್ಥೆಯನ್ನು ಪಡೆದು ಹೊರಗಿನವರಿಗೂ, ತಮಗೂ ವ್ಯತ್ಯಾಸವಿದೆ ಎಂಬ ಭಾವನೆಗಳನ್ನು ಹೊಂದಿರುವ ಸಾಮಾಜಿಕ ಸಮೂಹವೇ ಬುಡಕಟ್ಟು ಸಮುದಾಯ".

Gilan and Gilan (ಗಿಲನ್ ಮತ್ತು ಗಿಲನ್) ರವರ ಪ್ರಕಾರ "ನಿಶ್ಚಿತ ಭೂ ಪ್ರದೇಶದಲ್ಲಿ ನೆಲೆಸಿರುವ ಒಂದೇ ಭಾಷೆ ಹಾಗೂ ಏಕ ರೀತಿಯ ಸಂಸ್ಕೃತಿಯನ್ನು ಹೊಂದಿರುವ ಸಮುದಾಯಗಳ ಸಮೂಹವೆಂದಿದ್ದಾರೆ".

"ಯಾವ ಜನಾಂಗ ಗತಕಾಲದಿಂದಲೂ ನಿಸರ್ಗದ ಮಡಿಲಲ್ಲಿ ಸಹಜವಾಗಿ ಬದುಕಲು ಬಯಸುವುದೋ, ಪ್ರಕೃತಿ ಜನ್ಯ ಉತ್ಪನ್ನಗಳನ್ನೇ ಭಕ್ಷಿಸಲು ಯತ್ನಿಸುವುದೋ, ತನ್ನದೇ ಆದ ಒಂದು ವಿಶಿಷ್ಟ ರೀತಿಯ ಜೀವನ ವಿಧಾನದಿಂದ ಜೀವಿಸುವ ಆಶಯವನ್ನು ಹೊಂದಿ ಆ ರೀತಿಯಲ್ಲಿಯೇ ಜೀವನ ನಡೆಸುವುದೋ ಆ ಸಮುದಾಯಕ್ಕೆ ಆದಿವಾಸಿ ಅಥವಾ ಬುಡಕಟ್ಟು" ಎಂದು ಕರೆಯಬಹುದು.[೯]

೧೯೫೦ರಲ್ಲಿ ಜಾರಿಗೆ ಬಂದ ಸಂವಿಧಾನಾತ್ಮಕ ಬೆಳವಣಿಗೆಗಳು, ಆಡಳಿತದ ಹಿತ ದೃಷ್ಟಿಯಿಂದ ಎಲ್ಲಾ ವಿಷಯಗಳನ್ನು ಕೇಂದ್ರ, ರಾಜ್ಯ ಹಾಗೂ ಸಮವರ್ತಿ ಪಟ್ಟಿಯಾಗಿ ಹಂಚಿಕೆಮಾಡಿದೆ. ಆದರೆ ಬುಡಕಟ್ಟು ಅಭಿವೃದ್ಧಿ ಅಥವಾ ಬುಡಕಟ್ಟು ನಿರ್ವಹಣೆಯ ವಿಷಯ ಯಾವುದೇ ಪಟ್ಟಿಯಲ್ಲಿ ಸೇರಿಸಲಾಗಿರಲಿಲ್ಲ. ಆದರೆ ಬುಡಕಟ್ಟು ಜನರು ನೆಲೆಸಿರುವ ಪ್ರದೇಶವನ್ನು ೫ ಮತ್ತು ೬ನೇ ಅನುಸೂಚಿತದ ಅಡಿಯಲ್ಲಿ ಸೇರಿಸಲಾಗಿದೆ.[೧೦]

ಅಲ್ಲದೇ ಭಾರತದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಬುಡಕಟ್ಟು ಸಮುದಾಯಗಳನ್ನು ಅನುಸೂಚಿತ ಪಂಗಡದವರೆಂದು ಕರೆದು ೧೯೫೦ರ ಆಜ್ಞೆಯ ಪ್ರಕಾರ ಬುಡಕಟ್ಟು ಸಮುದಾಯದ ಬಗ್ಗೆ ಈ ಕೆಳಗಿನಂತೆ ವಿವರಿಸಿದ್ದಾರೆ. "ಬುಡಕಟ್ಟು ಜನರೆಂದರೆ, ಒಬ್ಬರನ್ನೊಬ್ಬರು ಅವಲಂಬಿಸಿರುವ, ಆರ್ಥಿಕವಾಗಿ ಹಿಂದುಳಿದಿರುವ ಅವರ ವೃತ್ತಿಯಾದ ನಿಸರ್ಗದ ಸಂಪನ್ಮೂಲಗಳನ್ನು ಹಾಳು ಮಾಡುವ, ಅವರ ಆರ್ಥಿಕ ಸ್ಥಿತಿಗತಿಗಳು ಮುಂದುವರೆಯದೇ ಇರುವ, ಭೌಗೋಳಿಕವಾಗಿ ಇತರರಿಂದ ಬೇರೆಯಾಗಿರುವ ಒಂದೇ ಭಾಷೆ, ರಾಜಕೀಯ ಸಂಸ್ಥೆ ಸಂಪ್ರದಾಯಗಳನ್ನು ಮುಂದುವರಿಯಲಿಚ್ಛಿಸುವ ಜನಾಂಗಗಳು".[೧೧]

ಈ ಮೇಲಿನ ವ್ಯಾಖ್ಯಾನಗಳು ಬುಡಕಟ್ಟು ಸಮುದಾಯಗಳ ಸಾಮಾಜಿಕ ಸಾಂಸ್ಕೃತಿಕ, ಭೌಗೋಳಿಕ, ಆರ್ಥಿಕ, ರಾಜಕೀಯ ರಚನೆಗಳಲ್ಲಿ ಅನೇಕ ಕಟ್ಟು ಪಾಡುಗಳು ಇರುತ್ತವೆ ಎನ್ನುವುದು ತಿಳಿಸಿಕೊಡುತ್ತದೆ. ಭಾರತ ಸರ್ಕಾರವೂ ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ಇಂಥಾ ಲಕ್ಷಣಗಳುಳ್ಳ ಜನರನ್ನು ಪರಿಶಿಷ್ಟ ಜನಾಂಗಗಳೆಂದು ಅವರುಗಳಿಗಾಗಿ ಕಾನೂನಿನ ಬೆಂಬಲ ನೀಡಿ ಅವರ ಹಿತರಕ್ಷಣೆ ಮತ್ತು ಅಭಿವೃದ್ಧಿಗೆ ವಿಶೇಷ ಮಹತ್ವ ಕೊಟ್ಟಿದೆ. ಸರ್ಕಾರದ ಆಶಯವೂ ಸಹ ಇಂತಹ ಸಮುದಾಯಗಳು ಸಾಮಾಜಿಕ-ಆರ್ಥಿಕ ನೆಲೆಗಟ್ಟನ್ನು

ಬಲಪಡಿಸಿಕೊಂಡು ಅಭಿವೃದ್ಧಿಯತ್ತ ಸಾಗಬೇಕು ಎನ್ನುವ ಆಶಯವನ್ನೇ ಹೊಂದಿದೆ. ಸಂವಿಧಾನ ಅನುಚ್ಛೇದ ೩೩೯(೨) ರಲ್ಲಿ ಕೇಂದ್ರ ಸರ್ಕಾರಕ್ಕೆ ಇರುವ ಕಾರ್ಯಾಂಗದ ಅಧಿಕಾರದ ವ್ಯಾಪ್ತಿಯಲ್ಲಿ, ಯಾವುದೇ ರಾಜ್ಯ ಸರ್ಕಾರಕ್ಕೆ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲು ಹಾಗೂ ಅನುಷ್ಠಾನಗೊಳಿಸಲು ನಿರ್ದೇಶನವನ್ನು ಕೊಡುವ ಅಧಿಕಾರವಿದೆ. ಅನುಚ್ಛೇದ ೨೭೫ರಲ್ಲಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಕ್ಕೆ ಬೇಕಾಗುವ ಹಣಕಾಸಿನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಒಟ್ಟಾರೆ ಭಾರತದ ಬುಡಕಟ್ಟು ಸಮುದಾಯಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಅವರ ಸಂಪೂರ್ಣ ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ ಪ್ರಮುಖ ಲಕ್ಷಣಗಳನ್ನು ಗುರುತಿಸಲಾಗಿದೆ, ಅವುಗಳೆಂದರೆ,

ಸಾಮಾನ್ಯಪ್ರದೇಶ: ಬುಡಕಟ್ಟುಗಳಿಗೆ ತಮ್ಮದೇ ಆದ ನಿಶ್ಚಿತ ನೆಲೆಗಳಿರುತ್ತವೆ. ಇವರಲ್ಲಿ ಕೆಲವರು ಸಂಚಾರಿಗಳಾಗಿದ್ದರೂ, ತಾವು ಹುಟ್ಟಿದ ಪ್ರದೇಶದ ಬಗ್ಗೆ ಸಾಮುದಾಯಿಕ ಭಾವನೆಗಳು ಸದಾ ಜಾಗೃತವಾಗಿರುತ್ತವೆ. ಕಾರಣಾಂತರಗಳಿಂದ ಬೇರೆ ಬೇರೆ ಕಡೆ ವಲಸೆ ಹೋದರೂ ಮೂಲಪ್ರದೇಶದ ಬಗ್ಗೆ ಅವರಲ್ಲಿ ಗೌರವಾದಾರಗಳು ಎಂದಿಗೂ ನಶಿಸಲಾರವು. ಹಾಗಾಗಿ ನಿಶ್ಚಿತ ಪ್ರದೇಶದಲ್ಲಿ ವಾಸವಾಗಿರುವವರ ಸಂಖ್ಯೆ ಬೆಳೆಯುತ್ತಲೇ ಇದೆ. ಆ ಪ್ರದೇಶಗಳನ್ನು ಹಾಡಿ, ಹಟ್ಟಿ, ಕಾಲೋನಿ, ದೊಡ್ಡಿ ಪಾಳ್ಯ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಒಂದೇ ಭಾಷೆ: ಬುಡಕಟ್ಟುಗಳಿಗೆ ಸ್ವತಂತ್ರ ಆಡು ಭಾಷೆಗಳಿರುತ್ತವೆ. ಭಾಷೆಗೆ ಸ್ವತಂತ್ರ್ಯ ಲಿಪಿ ಇಲ್ಲದಿರಬಹುದು. ಆದರೆ ಆಯಾ ಪ್ರದೇಶದ ಭಾಷೆ ಪ್ರಭಾವ ಎದ್ದು ಕಾಣುತ್ತದೆ.

ಸವ್ಯೈಕ್ಯಸಂಸ್ಕೃತಿ: ಸಮುದಾಯಗಳ ವೇಷಭೂಷಣ, ಆಹಾರ ಪದ್ಧತಿ, ವಿವಾಹ, ನ್ಯಾಯ, ಅಂತ್ಯಸಂಸ್ಕಾರ, ವಿಧಿವಿಧಾನಗಳಲ್ಲಿ ಏಕರೂಪತೆ ಇರುತ್ತದೆ. ಇವರಲ್ಲಿ ಮೂರ್ತಿಪೂಜಕರು, ನಿಸರ್ಗಪೂಜಕರು, ಸರ್ವಚೇತನವಾದಿಗಳು, ಲಾಂಚನವಾದಿಗಳು ಎಂಬಂತೆ ಬದುಕಿನ ಧಾರ್ಮಿಕ ಮನೋಭಾವನೆಗಳು ಕಂಡುಬರುತ್ತವೆ.

ಒಂದೇ ರೀತಿಯ ರಾಜಕೀಯ ವ್ಯವಸ್ಥೆ : ಆಧುನಿಕ ಸಮಾಜದಲ್ಲಿರುವಂತಹ ಕಟ್ಟುನಿಟ್ಟಿನ ಲಿಖಿತರೂಪದ ಆಡಳಿತ ವ್ಯವಸ್ಥೆ ಇಲ್ಲದಿದ್ದರೂ, ತಮ್ಮದೇ ಆದ ಸರಳ ರಾಜಕೀಯ ವ್ಯವಸ್ಥೆಯನ್ನು ಹೊಂದಿರುವರು. ತಪ್ಪಿತಸ್ಥರಿಗೆ ಶಿಕ್ಷೆ, ದಂಡ, ಬಹಿಷ್ಕಾರ ವಿಧಿಸುವ ರೂಢಿ ಪದ್ಧತಿಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗಿಬಂದಿರುತ್ತವೆ.

ಸರಳ ಮತ್ತು ಸ್ವತಂತ್ರ ಜೀವನ : ಸೀಮಿತ ಬೇಡಿಕೆಗಳಿಗೆ ಅನುಗುಣವಾಗಿ ಆಯಾ ಸಂಕುಚಿತ ಕ್ಷೇತ್ರದಲ್ಲಿಯೇ ಪೂರೈಸಿಕೊಂಡು, ಸಂತೃಪ್ತಿ ಜೀವನವನ್ನು ಸಾಗಿಸುವವರು. ಆರ್ಥಿಕತೆಗೆ ಸಂಬಂಧಪಟ್ಟಂತೆ ಅದಲು ಬದಲು ಪದ್ಧತಿ (Barter economy) ಅಸ್ತಿತ್ವದಲ್ಲಿ ಸಂತೃಪ್ತಿ ಪಡೆಯುತ್ತಾರೆ. ಸರಳ ಮತ್ತು ಸ್ವತಂತ್ರ ಜೀವನದ ಸೌಂದರ್ಯಪ್ರಜ್ಞೆಯುಳ್ಳವರಾಗಿ ಮಾಂಸಾಹಾರ ಮತ್ತು ಮದ್ಯಪಾನ ಸೇವಿಸಿ ನಿರ್ಜನ ಇಲ್ಲವೇ ಬೆಟ್ಟಗುಡ್ಡ, ಕಾಡು-ಮೇಡುಗಳಲ್ಲಿ ವಾಸಿಸುವರು.

ಈ ಮೇಲಿನ ಹೇಳಿಕೆಗಳೆಲ್ಲವೂ ಬುಡಕಟ್ಟು ಸಮುದಾಯಗಳ ಬಗೆಗಿನ ತೀರಾ ಸರಳೀಕರಣವಾದ ವ್ಯಾಖ್ಯಾಗಳಾಗಿವೆ. ಆದರೆ ಈ ವ್ಯಾಖ್ಯೆಗಳನ್ನು ನೋಡಿದಾಗ ಅನೇಕವು ಎಲ್ಲಾ ಸಮುದಾಯಗಳಿಗೆ ಅನ್ವಯಿಸದಿರಬಹುದು ಮತ್ತು ಇತರೆ ವಿಭಾಗಗಳು ಸೇರಬಹುದು. ಒಟ್ಟಾರೆ ಎಲ್ಲಾ ವ್ಯಾಖ್ಯೆಗಳನ್ನು ಸ್ಥೂಲವಾಗಿ ಗಮನಿಸಿದಾಗ ಅನೇಕ ಬುಡಕಟ್ಟುಗಳಲ್ಲಿ ಗಲಿಬಿಲಿ ಇರುವ ಸಂಭವವಿದೆ. ಇದು ಒಂದು ರೀತಿಯ ಸಂಘರ್ಷಕ್ಕೆ ಎಡೆಮಾಡಿ ಕೊಡುವ ಸಂಭವ ಇರುವುದರಿಂದ, "ಭಾರತ ಸರ್ಕಾರವು ಇಡೀ ಭಾರತಕ್ಕೆ ಹಾಗೂ ರಾಜ್ಯಗಳಿಗೆ ಅನ್ವಯವಾಗುವಂತೆ ೧೯೫೦ರಲ್ಲಿ ಅಧಿಕೃತ ಪರಿಶಿಷ್ಟ ವರ್ಗದ ಪಟ್ಟಿಯನ್ನು ತಯಾರಿಸಿ ಅದನ್ನು ೧೯೫೬ರಲ್ಲಿ ಧೃಢೀಕರಿಸಿದೆ."[೨] ಅಂದಿನಿಂದ ಪ್ರಸ್ತುತದವರೆಗೂ ಈ ಪಟ್ಟಿಯಲ್ಲಿ ಆಗಾಗ ಪರಿಸ್ಥಿತಿಗನುಗುಣವಾಗಿ ಪರಿಷ್ಕರಣೆ ಆಗುತ್ತಲಿರುವುದು ಕಾಣಬರುತ್ತದೆ.

ಸಂವಿದಾನದ ಅನುಚ್ಛೇದ ೩೩೯ ರಲ್ಲಿ ಉಲ್ಲೇಖಿಸಲಾದಂತೆ ಬುಡಕಟ್ಟು ಜನರ ಸ್ಥಿತಿಗತಿಗಳನ್ನು ಪರಿಶೀಲಿಸಲು ಮತ್ತುಸಮುದಾಯಗಳ ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಅಭಿವೃದ್ಧಿಪಡಿಸುವಲ್ಲಿ ೧೯೬೧ ರಲ್ಲಿ ಶ್ರೀ ಬಿ.ಎನ್. ದೇಬಾರ್ ರವರ ಅಧ್ಯಕ್ಷತೆಯಲ್ಲಿ ಆಯೋಗ ರಚನೆಯಾಗಿದ್ದು, ಇದು ಸಮಸ್ತ ಬುಡಕಟ್ಟು ಜನರ ಅಭಿವೃದ್ಧಿಗೆ ವ್ಯಾಪಕವಾಗಿ ಶಿಫಾರಸ್ಸುಗಳನ್ನು ಮಾಡಿದೆ.

ದೇಶದ ಎಲ್ಲಾ ಸಮುದಾಯಗಳನ್ನು ಗಣನೆಗೆ ತೆಗೆದುಕೊಂಡು ಆಯೋಗವು ಸಮುದಾಯಗಳನ್ನು ೪ ದೊಡ್ಡ ಗುಂಪುಗಳಾಗಿ ವಿಭಾಗಿಸಿರುವಂತೆ,

1. ಆದಿವಾಸಿಗಳ ಗುಂಪು (primitive group)
2. ಬದಲಾಯಿಸುವ ಕೃಷಿಕರ ಗುಂಪು (Shifting Cultivators Group)
3. ಅಲೆಮಾರಿಗಳ ಗುಂಪು (Nomadic or Transitional Group)
4. ಸುಧಾರಿಸಿದ ಗುಂಪು (Advance Group)[*13]

ಈ ಎಲ್ಲಾ ೪ ಗುಂಪಿನ ಸಮುದಾಯಗಳು ದೇಶದ "ಪ್ರತಿಯೊಂದು ರಾಜ್ಯದಲ್ಲಿ ವಿಭಿನ್ನವಾಗಿ ಕಂಡುಬರುವ ಬುಡಕಟ್ಟು ಸಮುದಾಯಗಳು ಇಂದು ಭಾರತದಲ್ಲಿ ಪ್ರತಿಶತ ೮.೦೮% ಇವೆ. ಪ್ರಪಂಚದಲ್ಲೆ ಅತಿ ಹೆಚ್ಚು ಬುಡಕಟ್ಟು ಜನರನ್ನು ಹೊಂದಿರುವ ದೇಶದಲ್ಲಿ

ಭಾರತದೇಶ ೨ನೇ ಸ್ಥಾನದಲ್ಲಿದೆ. ಈ ದೇಶದ ಭೌಗೋಳಿಕ ಪ್ರದೇಶ ಸುಮಾರು ಶೇ. ೨೦% ಭೂ ಪ್ರದೇಶದಲ್ಲಿ ಬುಡಕಟ್ಟು ಜನರು ವಾಸಿಸುತ್ತಿದ್ದಾರೆ.*[೧೪]

ಕರ್ನಾಟಕ ರಾಜ್ಯದಲ್ಲಿಯೂ ಸಹ ಅನೇಕ ಸಮುದಾಯಗಳನ್ನು ಗುರ್ತಿಸಲಾಗಿದೆ. ೨೦೦೧ ರ ಜನಗಣತಿಯಂತೆ ಕರ್ನಾಟಕದ ಜನಸಂಖ್ಯೆ ೫೪,೬೫,೯೮೬ ಲಕ್ಷ ಇದೆ.[೧೫] ರಾಜ್ಯದ ಪಟ್ಟಿಯಲ್ಲಿ ಹಲವಾರು ಬುಡಕಟ್ಟುಗಳ ಹೆಸರನ್ನು ಸೇರಿಸಲಾಗುತ್ತಿರುವುದಲ್ಲದೇ, ಕೆಲವು ಸಮುದಾಯಗಳ ಹೆಸರುಗಳು ಪುನರಾವೃತ್ತಿ ಆಗಿದ್ದು ಇದೆ. ಅಂಕಿ ಸಂಖ್ಯೆಗಳು ಏನೇ ಇದ್ದರೂ ಇದುವರೆಗಿನ ಕರ್ನಾಟಕ ರಾಜ್ಯದ ಇಲಾಖೆಯಲ್ಲಿ ಗುರುತಿಸಲಾದ ೫೦ ಸಮುದಾಯಗಳು ಪರಿಗಣಿತವಾದವುಗಳು. ಉಳಿದವುಗಳು ಈ ಪಟ್ಟಿಯಿಂದ ಹೊರಗುಳಿದಿರಲೂಬಹುದು.

೨. ಮೂಲನಿವಾಸಿ ಬುಡಕಟ್ಟುಗಳ ಚರ್ಚೆ ಮತ್ತು ಅರ್ಥವಿವರಣೆ

ಭಾರತದಲ್ಲಿ ಸುಮಾರು ೭೬೫ ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಬುಡಕಟ್ಟು ಸಮುದಾಯಗಳು ವೈವಿಧ್ಯಮಯ ತಾಣಗಳಲ್ಲಿ ತನ್ನದೇ ಆದ ಕಲೆ, ಸಾಂಸ್ಕೃತಿಕ ಸಾಂಪ್ರದಾಯಿಕ, ವಿಭಿನ್ನ ಭೌಗೋಳಿಕ ಪರಿಸರದ ಮುಖಾಂತರ ನಾಗರೀಕತೆಯ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವಹಿಸಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಕರ್ನಾಟಕದಲ್ಲಿ ವಿಶೇಷವಾಗಿ ಕಂಡು ಬರುವ ಬುಡಕಟ್ಟು ಸಮುದಾಯಗಳು ದಟ್ಟ ಅರಣ್ಯ, ಬಯಲುಸೀಮೆ, ಮಲೆನಾಡು ಪ್ರದೇಶ, ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ವಿಸ್ತಾರವಾದ ಬೆಟ್ಟ ಮತ್ತು ಅರಣ್ಯ ಪ್ರದೇಶಗಳು ಹೆಚ್ಚಿನ ಬುಡಕಟ್ಟುಗಳ ತಾಣವೆಂದೇ ಗುರುತಿಸಲಾಗಿದೆ. ಇಂತಹ ಪ್ರದೇಶಗಳೆಂದರೆ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು, ಉಡುಪಿ, ಮೈಸೂರು, ಚಾಮರಾಜನಗರ ಜಿಲ್ಲೆಗಳಾಗಿವೆ.

ಬೆಟ್ಟ ಹಾಗೂ ಕಾಡು ಪ್ರದೇಶಗಳಲ್ಲಿರುವ ಅನೇಕ ಸಮುದಾಯಗಳು ತೀರಾ ಹಿಂದುಳಿದವುಗಳೆಂದು ಸರ್ಕಾರವೂ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇಂತಹ ಅನೇಕ ಸಮುದಾಯಗಳಲ್ಲೇ ಜೇನುಕುರುಬ ಮತ್ತು ಕೊರಗ ಬುಡಕಟ್ಟಗಳನ್ನು ತೀರಾ ಹಿಂದುಳಿದವುಗಳೆಂಬುದಾಗಿ ಘೋಷಿಸಲ್ಪಟ್ಟಿವೆ.[೧೬]

ಭಾರತದ್ಯಾಂತ ಹಲವಾರು ಮಾನವಶಾಸ್ತ್ರಜ್ಞರು, ಸಮಾಜವಿಜ್ಞಾನಿಗಳು ಅನೇಕ ಅಂಶಗಳನ್ನು ಪರಿಗಣಿಸಿ ಅವುಗಳ ಆಧಾರದ ಮೇಲೆ ಬುಡಕಟ್ಟು ಸಮುದಾಯಗಳಲ್ಲೇ ಭಿನ್ನವಾದವುಗಳನ್ನು ಮಧ್ಯಪ್ರದೇಶ, ಬಿಹಾರ್, ಜಾರ್ಖಂಡ್, ಮಹಾರಾಷ್ಟ್ರ, ಕರ್ನಾಟಕ, ಇತರೆ ರಾಜ್ಯಗಳಾದಿಯಾಗಿ ಸುಮಾರು ೭೪ ಬುಡಕಟ್ಟುಗಳನ್ನು ಗುರುತಿಸಿದ್ದಾರೆ. ಪ್ರಖ್ಯಾತ ಮಾನವಶಾಸ್ತ್ರಜ್ಞರು ಹೇಳುವಂತೆ " After India became independence the Government of India classified the Tribles in to Groups a) Tribe, b) Primitive Tribe.

This classification was based on a number of criteria. Practically all the criteria have been tested against the field realistics.

Even today the only sure way to identify a primitive tribe is its self image and identity. Obsequiously a subjective and unsatisfactory way of identification.[೧೭] ಮುಂದುವರೆದಂತೆ ಹೆಚ್ಚಿನ ಸಂಖ್ಯೆಯ ಬುಡಕಟ್ಟು ಸಮುದಾಯಗಳು ನೆಲೆಸಿರುವ ಭಾರತದ ಹೃದಯ ಭಾಗವನ್ನು ಕುರಿತಂತೆ "When the tribal heart land a large number of primitive tribes lived in different habitants and are engaged in various accupations and prosses divesse meatrials and non material culture traits. These primitive tribes are also located at different levels of social and economic development" [೧೮] ಎನ್ನುತ್ತಾರೆ.

ಭಾರತದ ಸಂವಿಧಾನದ ಅನುಚ್ಛೇದ ೩೪೨ (೧) ರಲ್ಲಿ ನೀಡಲಾದಂತೆ ಯಾವುದೇ ಸಮೂಹವನ್ನು ಬುಡಕಟ್ಟು ಸಂಗಡಕ್ಕೆ ಸೇರಿಸುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗೆ ಇದೆ. ಅದೇ ರೀತಿ ಅನುಚ್ಛೇದ ೩೪೨(೨)ರಲ್ಲಿ ಭಾರತದ ಸಂಸತ್ತಿಗೆ ಹೆಚ್ಚಿನ ಅಧಿಕಾರ ನೀಡಿ ಯಾವುದೇ ಜನಸಮೂಹವನ್ನು ಬುಡಕಟ್ಟು ಪಂಗಡದಿಂದ ತೆಗೆಯುವ ಸೇರಿಸುವ ಅಧಿಕಾರವಿದೆ. ರಾಜ್ಯಸರ್ಕಾರಗಳು ಬುಡಕಟ್ಟು ಜನರಿಗೆ ಆಗುತ್ತಿರುವ ಅನ್ಯಾಯ, ಶೋಷಣೆ ತಪ್ಪಿಸಲು ತೀವ್ರ ಪ್ರಯತ್ನ ಮಾಡುತ್ತಿವೆ. ಅದಕ್ಕಾಗಿ ಅನುಚ್ಛೇದ ೩೪೪ರಲ್ಲಿ ಭಾರತದ ರಾಷ್ಟ್ರಪತಿಯವರಿಗೆ ಬುಡಕಟ್ಟು ಸಾಂದ್ರವಾಗಿರುವ ಪ್ರದೇಶಗಳನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಿ ವಿಶೇಷ ಸೌಲಭ್ಯ ಒದಗಿಸುವ ಅಧಿಕಾರವಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಅಂತಹ ಬುಡಕಟ್ಟು ಸಾಂದ್ರ ಪ್ರದೇಶಗಳು ಇಲ್ಲದಿರುವುದರಿಂದ ಯಾವುದೇ ಪ್ರದೇಶವನ್ನು ಅನುಸೂಚಿತ ಪ್ರದೇಶವೆಂದು ಘೋಷಿಸಿಲ್ಲ. ಆ ಕಾರಣ ಕೆಲವು "ಸಮಗ್ರ ಬುಡಕಟ್ಟು ಅಭಿವೃದ್ಧಿ ಘಟಕಗಳನ್ನು (ಐ.ಟಿ.ಡಿ.ಪಿ)ಸ್ಥಾಪಿಸಿದೆ. ಈ ಘಟಕಗಳು ಹೆಗ್ಗಡದೇವನಕೋಟೆ, ನಾಗರಹೊಳೆ, ಸೋಮವಾರಪೇಟೆ, ಬೆಳ್ತಂಗಡಿ, ಉಡುಪಿ ಮತ್ತು ಕಾರ್ಕಳದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಭಾರತದ ಸಂವಿಧಾನದ ೫ನೇ ಅನುಸೂಚಿಯಲ್ಲಿ ಅನುಸೂಚಿತ ಪ್ರದೇಶದಲ್ಲಿ ವಾಸಿಸುವ ಬುಡಕಟ್ಟು ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಲು, ಕೆಲವು ನಿಯಮಾವಳಿಗಳನ್ನು ರಚಿಸಲು ರಾಜ್ಯದ ರಾಜ್ಯಪಾಲರುಗಳಿಗೆ ಅನಿರ್ಧಿಷ್ಟ ಅಧಿಕಾರಗಳನ್ನು ನೀಡಲಾಗಿದೆ. ರಾಜ್ಯಸರ್ಕಾರವು ಮೂಲನಿವಾಸಿ ಬುಡಕಟ್ಟುಗಳನ್ನು ತೀರಾ ಹಿಂದುಳಿದ ಆರ್ಥಿಕ ಸಾಮಾಜಿಕ ಸ್ಥಿರತೆಯಿಂದಲೇ ಗುರುತಿಸಲಾಗುತ್ತಿದೆ. ಆದರಂತೆ ಕರ್ನಾಟಕ ರಾಜ್ಯದಲ್ಲಿ ಸಂವಿಧಾನದ ಅನುಛೇದ ೩೪ ರಲ್ಲಿ ಪರಿಶಿಷ್ಟ ವರ್ಗದ ವಿವರಣೆಯನ್ನು ನೀಡಲಾಗಿ ಅನುಛೇದದ ವ್ಯಾಪ್ತಿಯಲ್ಲಿ ಭಾರತ ಸರ್ಕಾರವೂ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಒಟ್ಟು ೫೦ ಬುಡಕಟ್ಟು ಸಮುದಾಯಗಳನ್ನು ಪರಿಶಿಷ್ಟವರ್ಗವೆಂದೂ ಘೋಷಿಸಿದೆ. ಈ ೫೦ ಸಮುದಾಯಗಳಲ್ಲಿ ಜೇನುಕುರುಬ ಮತ್ತು ಕೊರಗ ಸಮುದಾಯಗಳನ್ನು ತೀರಾ ಹಿಂದುಳಿದ

ಮೂಲನಿವಾಸಿ ಬುಡಕಟ್ಟು ಸಮುದಾಯಗಳೆಂದು ಪರಿಗಣಿಸಲಾಗಿದೆ. "ಸರ್ಕಾರದ ಅಧಿಕೃತ ಪ್ರಕಟಣೆಯಂತೆ According to the 1971 and 1977 No. BC 12016/034/76 ST dated 27.07.77 the state Government concern two major Tribes are primitive Tribes – 1) Jannu Kuruba 2) Koragas."[೧೯] ಇತರೆ ಬುಡಕಟ್ಟು ಸಮುದಾಯಗಳಿಗಿಂತ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ತೀರಾ ಹಿಂದುಳಿದವರೆಂದು ಮನಗಂಡು ಈ ಸಮುದಾಯಗಳನ್ನು ಆದಿವಾಸಿ ಪಂಗಡ (Primitive Tribes) ಎಂದು ಗುರುತಿಸಲಾಗಿದೆ.

"ತೀರಾ ಹಿಂದುಳಿದ ಪ್ರಾದಿಮ ಅಥವಾ ಆದಿವಾಸಿ ಬುಡಕಟ್ಟುಗಳಿಗೆ (Primitive Tribes) ವಾಸ್ತವಾಗಿ ಭಾರತ ಸರ್ಕಾರದ ಗೃಹ ಸಚಿವಾಲಯ ಈ ಲಕ್ಷಣಗಳನ್ನೂ ಸೂಚಿಸಿದೆ.

೧) ಜನಸಂಖ್ಯೆ ಬೆಳವಣಿಗೆ ಕಡಿಮೆ ಇದ್ದು ಸಣ್ಣ ಗುಂಪಾಗಿ ಇರಬೇಕು.

೨) ಕೃಷಿ ಪೂರ್ವದ ಹಂತದಲ್ಲಿರುವ ಬೇಟೆ ಹಾಗೂ ಕಾಡಿನ ಆಹಾರ ಸಂಗ್ರಹದಿಂದ ಕಷ್ಟಪಟ್ಟು ಬದುಕುತ್ತಿರುವ ಪಂಗಡವಾಗಿರಬೇಕು.

೩) ಸಾಕ್ಷರತೆಯ ಪ್ರಮಾಣ ಕನಿಷ್ಠವಾಗಿರಬೇಕು.

ಮೇಲಿನ ಯಾವುದಾದರೂ ಒಂದು ಲಕ್ಷಣವಿದ್ದರೂ ಅಂತಹ ಬುಡಕಟ್ಟುಗಳನ್ನು ತೀರಾ ಹಿಂದುಳಿದ ಮೂಲನಿವಾಸಿ (Primitive) ಬುಡಕಟ್ಟು ಸಮುದಾಯಗಳೆಂದು ಗುರುತಿಸಬಹುದು ಎಂದು ತಿಳಿಸಿದೆ."[೨೦]

ಹಳೆಯ ಮೈಸೂರಿನ ಪಶ್ಚಿಮಘಟ್ಟ ಪ್ರದೇಶದ ಅರಣ್ಯ ಪ್ರದೇಶಗಳಲ್ಲಿ ತೀರಾ ಹಿಂದುಳಿದ, ಅತಿ ಕಡಿಮೆ ಜನಸಂಪರ್ಕವಿರುವ, ಅರಣ್ಯದಿಂದಲೇ ಜೀವನ ನಿರ್ವಹಣೆ ಮಾಡುತ್ತಿದ್ದ ಬುಡಕಟ್ಟುಗಳಲ್ಲಿ ಜೇನುಕುರುಬ ಮತ್ತು ಕೊರಗರನ್ನು ಗುರುತಿಸಿ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಹಣವನ್ನು ಈ ಸಮುದಾಯಗಳ ಅಭಿವೃದ್ಧಿಗೆ ಮೀಸಲಾಗಿಟ್ಟಿದುದ್ದು ತಿಳಿದುಬರುತ್ತದೆ. ಅಲ್ಲದೇ ರಾಜ್ಯ ಸರ್ಕಾರಗಳೂ ಕೂಡಾ ಪ್ರತಿವರ್ಷದ ಯೋಜನೆಯಡಿಯಲ್ಲಿ ಮೂಲನಿವಾಸಿ ಬುಡಕಟ್ಟುಗಳ ಅಭಿವೃದ್ಧಿಗೆ ಹಣ ಒದಗಿಸುತ್ತಾ ಇದೆ. ಆದರೂ ವಿದ್ವಾಂಸರು, ಸಂಶೋಧಕರು, ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮೂಲನಿವಾಸಿ ಬುಡಕಟ್ಟುಗಳೆಂದರೆ ಯಾರು ಎಂಬ ಬಗ್ಗೆ ದ್ವಂದ್ವಮಾನ ಹೇಳಿಕೆಗಳು ನೀಡುತ್ತಿರುವ ಮಧ್ಯೆ ಕೇಂದ್ರ ಹಾಗೂ ರಾಜ್ಯ ಸರ್ಕಾರವೇ ಮೂಲನಿವಾಸಿ ಬುಡಕಟ್ಟುಗಳನ್ನು ಗುರುತಿಸಿ ಅಭಿವೃದ್ಧಿಯಾಗಲು ಹಣಕಾಸು ಒದಗಿಸುತ್ತಿರುವುದರಿಂದ ಅನೇಕ ಬದಲಾವಣೆಗಳಾಗಿವೆ. ಅಭಿವೃದ್ಧಿ ಕಾರ್ಯಪ್ರಗತಿ ಮಾನವಾಭಿವೃದ್ಧಿ ನೆಲೆಗಟ್ಟಿನಲ್ಲಿ ಅನುಷ್ಠಾನಗೊಂಡು ಕೆಲವು ಸಮುದಾಯಗಳು ಜಾತಿಗಳಾಗಿ ಗುರುತಿಸಿಕೊಳ್ಳುವಂತ ಹಂತ ತಲುಪಿವೆ.

ರಾಜ್ಯದಲ್ಲಿರುವ ಬುಡಕಟ್ಟು ಸಮುದಾಯಗಳಲ್ಲೇ ವಿಶೇಷವಾಗಿರುವ ತೀರಾ ಹಿಂದುಳಿದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಬಗ್ಗೆ ಕೆಲವು ಅಧ್ಯಯನಗಳು ನಡೆದಿವೆ. ಅವುಗಳು ಸಮುದಾಯಗಳ ಜಾನಪದೀಯ, ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನಗಳಾಗಿವೆ. ಅದನ್ನು ಹೊರತು ಪಡಿಸಿದರೆ ಉಳಿದಂತೆ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಅಂತರಶಿಸ್ತೀಯ ಅಥವಾ ಬಹುಶಿಸ್ತೀಯ ಅಧ್ಯಯನಗಳು ಇಲ್ಲವೆನ್ನಬಹುದು. ಅರಣ್ಯ ಕಾಯಿದೆಗಳು ರೂಪುಗೊಂಡು ಬಂದನಂತರದ ಹಿನ್ನೆಲೆಯಲ್ಲಿ ಈ ಸಮುದಾಯಗಳನ್ನು ಅರಣ್ಯದಿಂದ ಹೊರಹಾಕಲಾಯಿತು. ನಂತರ ಸಮುದಾಯಗಳಲ್ಲಿನ ಪರಿಸರದ ಪರಿವರ್ತನೆ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಬಗ್ಗೆ ವಸ್ತುನಿಷ್ಠ ಮಾಹಿತಿ ವಿಶ್ಲೇಷಣೆಯು ಇಲ್ಲವಾದವು. ಹೀಗಾಗಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳಾದ ಜೇನುಕುರುಬ ಮತ್ತು ಕೊರಗ ಸಮುದಾಯಗಳ ಅರ್ಥಶಾಸ್ತ್ರೀಯ ಅಧ್ಯಯನ ನಡೆಯದಿರುವುದರಿಂದ ಹಾಗೂ ಇದೆ ಪ್ರಥಮವಾಗಿರುವುದರಿಂದ ಈ ಅಧ್ಯಯನಕ್ಕೆ ಹೆಚ್ಚಿನ ಗಮನವೀಯುವುದು ಅವಶ್ಯಕ ಎನ್ನಲಾಗಿ ಅಧ್ಯಯನದ ಉದ್ದೇಶಗಳನ್ನು ವಿವರಿಸಲಾಗಿದೆ.

೩. ಅಧ್ಯಯನದ ಉದ್ದೇಶಗಳು:

೧) ಜೇನುಕುರುಬ ಮತ್ತು ಕೊರಗ ಸಮುದಾಯಗಳು ನೆಲೆನಿಂತಿರುವ ಪರಿಸರ ಜೀವನಕ್ರಮದಲ್ಲಿನ ಮೂಲಭೂತ ಸೌಲಭ್ಯಗಳನ್ನು ಆಯಾ ಪರಿಸರದ ಹಿನ್ನಲೆಯಲ್ಲಿ ವಿವರಿಸುವುದು.

೨) ಎರಡು ಸಮುದಾಯಗಳಲ್ಲಿನ ಸಾಮಾಜಿಕ-ಆರ್ಥಿಕ ಸ್ಥಿತಿಗತಿಯಲ್ಲಿ ಕಂಡುಬರುವ ಮೂಲಾಂಶಗಳು ಮತ್ತು ಶೈಕ್ಷಣಿಕ-ಆರ್ಥಿಕ ಪ್ರಗತಿಯನ್ನು ವಿಶ್ಲೇಷಿಸುವುದು.

೩) ಸರ್ಕಾರವೂ ಕೈಗೊಂಡ ಅನೇಕ ಕಲ್ಯಾಣಕಾರ್ಯಕ್ರಮಗಳು ಈ ಎರಡು ಸಮುದಾಯಗಳ ಜನರಿಗೆ ಎಷ್ಟರ ಮಟ್ಟಿಗೆ ತಲುಪಿದೆ ಎಂಬುದನ್ನು ಚರ್ಚಿಸುವುದು ಮತ್ತು ಸಮುದಾಯಗಳ ಜೀವನಕ್ರಮದ ವಿಸ್ತೃತ ಅವಲೋಕನ ಮಾಡಿ ವಿವರಿಸುವುದು.

೪) ಪ್ರಸ್ತುತ ಸಂದರ್ಭದಲ್ಲಿನ ಸಮುದಾಯಗಳ ಅಭಿವೃದ್ಧಿ ಮಾರ್ಗಗಳಲ್ಲಿನ ಸಂಘಟಿತ ಹೋರಾಟ, ಸ್ವಯಂಸಂಸ್ಥೆಗಳ ಪಾತ್ರದೊಂದಿಗೆ ಅವಲೋಕಿಸಿ ಅಭಿವೃದ್ಧಿಯ ದಿಕ್ಕು-ದಿಸೆಯನ್ನು ರೂಪಿಸಿಕೊಂಡಿರುವ ಬಗ್ಗೆ ಲಭ್ಯವಿರುವ ಮಾಹಿತಿಯೊಂದಿಗೆ ವಿಸ್ತೃತವಾಗಿ ವಿವರಿಸುವುದು.

೪. ಅಧ್ಯಯನದ ಪೂರ್ವಕಲ್ಪನೆಗಳು.

೧) ಸಮುದಾಯಗಳ ಅಭಿವೃದ್ಧಿಗೆ ಪರಿಸರದ ಆರ್ಥಿಕತೆ, ಮಾನವ ಸಂಪನ್ಮೂಲ ಔದ್ಯೋಗಿಕರಣ ಅಥವಾ ಉದ್ಯೋಗ, ಭೂಮಿ ಸಂಯುಕ್ತಕಾರಕಗಳಾಗಿ ಕೆಲಸ ಮಾಡುತ್ತವೆ.

೨) ಜೀವನಮಟ್ಟದ ಪತನ, ಹಸಿವು, ನಿರುದ್ಯೋಗ, ಭೌತಿಕಸಂಪನ್ಮೂಲಗಳನ್ನು ಒದಗಿಸುವಲ್ಲಿ ತಾರತಮ್ಯಗಳು ಸಾಮಾನ್ಯವಾಗಿವೆ.

೩) ಅಭಿವೃದ್ಧಿಯು ಜೈವಿಕ ಗೋಲದ ಬದಲಾವಣೆಗೆ ಸಂಬಂಧಿಸಿದೆ.

೪) ಸಮುದಾಯಗಳ ನೈಸರ್ಗಿಕ ಪರಿಸರ ಹಾಗೂ ಮಾನವನ ಸಂಬಂಧದ ಆರ್ಥಿಕ ಸಂಘಟನೆಯು ಸಮಗ್ರ ಅಭಿವೃದ್ಧಿಗೆ ಪೂರಕವಾಗಿರುತ್ತದೆ.

೫) ಆರ್ಥಿಕಾಭಿವೃದ್ಧಿಯು ಅವ್ಯಾಹತವಾಗಿ ಸಾಗಬೇಕಾದರೆ, ಉತ್ಪಾದನೆಗೆ ಪೂರಕವಾದ ಪರಿಸರದ ವ್ಯವಸ್ಥೆಯೂ ಸಹ ನಿರಂತರವಾಗಿ ಸ್ಪಂದಿಸಬೇಕಾಗಿರುವುದು.

ಸಂಶೋಧನೆಯುದ್ದಕ್ಕೂ ಈ ಮೇಲಿನ ಪೂರ್ವಕಲ್ಪನೆಗಳ ಸ್ಪಷ್ಟತೆ. ಅನುಷ್ಠಾನ ಕ್ರಮಗಳನ್ನು ಅವಲೋಕಿಸುವ, ವಿಶ್ಲೇಷಿಸುವ ಮತ್ತು ಚರ್ಚಿಸುವ ಕಾರ್ಯ ಚಟುವಟಿಕೆಯು ಕ್ಷೇತ್ರ ಕಾರ್ಯ ಆಧರಿತವಾಗಿ ನಡೆದಿದೆ.

೫. ಅಧ್ಯಯನದ ಅವಶ್ಯಕತೆ ಮತ್ತು ಪ್ರಾಮುಖ್ಯತೆ:

ಇಂದು ಹಲವಾರು ಬುಡಕಟ್ಟು ಸಮುದಾಯಗಳು ಭಾರತದಾದ್ಯಂತ ಜಾತಿ ಸಮುದಾಯಗಳಾಗಿ ಪರಿವರ್ತಿತವಾಗುವ ನಿಟ್ಟಿನಲ್ಲಿ ತಮ್ಮ ಸಾಮಾಜಿಕ-ಆರ್ಥಿಕ, ಸಾಂಸ್ಕೃತಿಕ ಬದುಕಿನಲ್ಲಿ ಬದಲಾವಣೆಗಳು ಕಂಡಿವೆ. ಅದೇ ರೀತಿಯಾಗಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಬದಲಾವಣೆ ಕಂಡಿವೆ. ಕರ್ನಾಟಕ ರಾಜ್ಯದ ಕೆಲವೇ ತಾಲ್ಲೂಕುಗಳಲ್ಲಿ ನೆಲೆಸಿರುವ ಎರಡು ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಅರ್ಥಶಾಸ್ತ್ರೀಯ ಅಧ್ಯಯನ ಇದುವರೆಗೂ ನಡೆದಿರುವುದಿಲ್ಲ. ಆರ್ಥಿಕತೆಯನ್ನು ಒಂದು ಸಮಾಜದಲ್ಲಿನ ಜನತೆಯು ಜೀವನೋಪಾಯಕ್ಕಾಗಿ ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳ ಸಂಘಟಿತ ವ್ಯವಸ್ಥೆ ಎಂದೇ ನಿರೂಪಿಸಲಾಗುತ್ತಿರುವ ಸಂದರ್ಭದಲ್ಲಿ ಅಂತರಶಿಸ್ತೀಯ ಸಂಶೋಧನೆಗಳು ಹೆಚ್ಚಾಗುತ್ತಿವೆ. ಆರ್ಥಿಕ ಸಮಸ್ಯೆಗಳು ಸಹ ಯಾವಾಗಲೂ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿವಿಧ ಆಯಾಮಗಳಿಂದ ಬಂಧಿಸಲ್ಪಟ್ಟಿರುತ್ತವೆ ಎನ್ನುವುದು ಹೌದು.

ಪ್ರಸ್ತುತ ಅಧ್ಯಯನವು ಮೂಲನಿವಾಸಿ ಬುಡಕಟ್ಟುಗಳಾದ ಜೇನುಕುರುಬ ಮತ್ತು ಕೊರಗರ ಅಭಿವೃದ್ಧಿ ದಿಕ್ಕು ಗುರುತಿಸುತ್ತದೆ ಅಲ್ಲದೆ ಪ್ರಾದೇಶಿಕ ಅಸಮಾನತೆಯ ಸಮಸ್ಯೆಯನ್ನು ತಿಳೀಯಪಡಿಸಿವಿಶ್ಲೇಷಿಸುತ್ತದೆ. ಮತ್ತು ನಿವಾರಣೋಪಯಗಳನ್ನು ತಿಳಿಸುತ್ತದೆ. ಈಗಾಗಲೇ ಅಸ್ತಿತ್ವದಲ್ಲಿರುವ ಅಭಿವೃದ್ಧಿಯ ಮತ್ತು ಪ್ರಾದೇಶಿಕ ಅಸಮಾನತೆಗಳ ಜ್ಞಾನಶಿಸ್ತು

ಮತ್ತು ಸೈದ್ಧಾಂತಿಕ ನೆಲೆಗಟ್ಟುಗಳಿಗೆ ಹೊಸದಾದ ಕೊಡುಗೆ ನೀಡುತ್ತದೆ ಅಲ್ಲದೆ ಈ ಜನರಿಗೆ ಅವಕಾಶ ಹಾಗೂ ಸೌಲಭ್ಯಗಳಿರುವ ಅಂಶಗಳನ್ನು ತಿಳಿಸಿಕೊಡುವ ಅಗತ್ಯವು ಇದೆ ಇವರ ಮಕ್ಕಳನ್ನು ವಿದ್ಯಾವಂತರನ್ನಾಗಿ ಹಾಗೂ ಆರ್ಥಿಕ ಪ್ರಗತಿ ಹೊಂದಲು ಮಾರ್ಗದರ್ಶಕವಾಗುವುದು.

ಸಮುದಾಯಗಳ ಜಾತಿ, ಪರಿಸರ, ಪ್ರಾದೇಶಿಕತೆ, ಆಂತರಿಕ ಅಭಿವೃದ್ಧಿ ಅಸಮಾನತೆಗಳು ಕ್ಷೇತ್ರದಿಂದ ಕ್ಷೇತ್ರಕ್ಕೆ ಜೇನುಕುರುಬ ಮತ್ತು ಕೊರಗರಲ್ಲಿ ಭಿನ್ನವಾಗಿರುವುದರಿಂದ ಏಕರೂಪವಾದ ನೀತಿಗಳು ಎರಡು ಸಮುದಾಯಗಳಿಗೆ ಸರಿ ಹೊಂದಲಾರವು. ಸಮುದಾಯಗಳ ಅಸಮಾನತೆಯನ್ನು ನಿವಾರಿಸಬೇಕಾದರೆ ಕ್ಷೇತ್ರಾಧಾರಿತ ನೀತಿಗಳು ಅವಶ್ಯಕವಾಗಿರುತ್ತದೆ. ಪ್ರಸ್ತುತ ಪ್ರಬಂಧವು ಕ್ಷೇತ್ರಾಧಾರಿತ ನೀತಿಗಳನ್ನು ರೂಪಿಸಲು ಅನುಕೂಲಕರವಾಗುವಂತೆ ನೀತಿ ನಿರೂಪಕಗಳನ್ನು ತಿಳಿಸುತ್ತದೆ. ಪ್ರಸ್ತುತ ಅಧ್ಯಯನವು ನೀತಿ ನಿರೂಪಕರಿಗೆ ಸಮುದಾಯಗಳ ಅಭಿವೃದ್ಧಿ ರೂಪಕರಿಗೆ, ಸಂಶೋಧರಿಗೂ ಸಹ ಉಪಯುಕ್ತವಾಗುತ್ತದೆ. ಈ ಎಲ್ಲಾ ಸನ್ನಿವೇಶಗಳ ಹಿನ್ನೆಲೆಯಲ್ಲಿ ಈ ಅಧ್ಯಯನ ತನ್ನ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

೬. ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ

ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಅಧ್ಯಯನದ ವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವುದು. ಆದರೆ ಸಮುದಾಯಗಳು ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುವುದಿಲ್ಲ. ಕೆಲವು ಕುಟುಂಬಗಳು ಇತ್ತೀಚಿನ ದಿನಗಳಲ್ಲಿ ಉದ್ಯೋಗಕ್ಕಾಗಿ ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ವಿರಾಜಪೇಟೆ ಮತ್ತು ಸೋಮವಾರಪೇಟೆಯ ಜನರು ಕೇರಳ, ತಮಿಳುನಾಡು ರಾಜ್ಯದ ಕಡೆಗೆ ಹೋದರೆ ಮತ್ತೆ ಕೆಲವು ಕುಟುಂಬಗಳು ಬಳ್ಳಾರಿ ಜಿಲ್ಲೆಯ ಮೂಲಕ ಆಂಧ್ರಪ್ರದೇಶದ ಕಡೆಗೆ ವಲಸೆ ಹೋಗುತ್ತಿರುವ ಅಂಶಗಳು ಕಂಡು ಬರುತ್ತದೆ. ಆದರೂ ಮೂಲ ಸ್ಥಾನದಲ್ಲಿ ಜನಗಣತಿಯ ಕಾರ್ಯದಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಹೀಗಾಗಿ ರಾಜ್ಯದ ಜನಗಣತಿ ೧೯೯೧ ಮತ್ತು ೨೦೦೧ನೇ ಸಾಲಿನ ಪ್ರಕಾರ ಸಮುದಾಯಗಳು ಕರ್ನಾಟಕದ ೫ ಜಿಲ್ಲೆಗಳಲ್ಲಿ ಮಾತ್ರ ನೆಲೆಸಿರುವುದು ಕಾಣಬರುತ್ತದೆ. ಅವುಗಳೆಂದರೆ, ಮೈಸೂರು, ಚಾಮರಾಜನಗರ, ಕೊಡಗು, ದ. ಕನ್ನಡ, ಉಡುಪಿ ಜಿಲ್ಲೆಗಳಾಗಿವೆ. ಉಡುಪಿ ಮತ್ತು ಚಾಮರಾಜನಗರ ಇತ್ತೀಚಿಗೆ ಹೊಸದಾಗಿ ಅಸ್ತಿತ್ವಕ್ಕೆ ಬಂದ ಜಿಲ್ಲೆಗಳಾಗಿವೆ. ಅಂದರೆ ಇತ್ತೀಚೆಗೆ ಹೊಸದಾದ ಎರಡು ಜಿಲ್ಲೆಗಳು(ರಾಮನಗರ,ಚಿಕ್ಕಬಳ್ಳಾಪುರ) ಗಣನೆಗೆ ತೆಗೆದುಕೊಳ್ಳಲಾಗಲಿಲ್ಲ. ಏಕೆಂದರೆ ಅಧ್ಯಾಯನ ಮುಕ್ತಾಯ ಹಂತದಲ್ಲಿದ್ದ ಕಾರಣ ಹೊರತುಪಡಿಸಲಾಗಿದೆ.

೫ ಜಿಲ್ಲೆಗಳಲ್ಲಿನ ಅರಣ್ಯ, ಬೆಟ್ಟಗುಡ್ಡ ಬಯಲು ಪ್ರದೇಶಗಳನ್ನೊಳಗೊಂಡಂತೆ ಹೊಂದಿಕೊಂಡಿರುವ ಗ್ರಾಮ ಮತ್ತು ನಗರ ಪ್ರದೇಶದಲ್ಲಿನ ೧೫ ತಾಲ್ಲೂಕು ವ್ಯಾಪ್ತಿಯಲ್ಲಿ ನೆಲೆಸಿರುವ ಒಟ್ಟು ಕುಟುಂಬಗಳ ಶೇ. ೧೦% ರಷ್ಟು ಕುಟುಂಬಗಳನ್ನು ವೈಜ್ಞಾನಿಕವಾಗಿ ಕ್ಷೇತ್ರಕಾರ್ಯಕ್ಕೆ ಆಯ್ಕೆಮಾಡಿ ಕೊಳ್ಳಲಾಗಿದೆ. ಇವರ ಪರಿಸರದಲ್ಲಿನ ಮೂಲಭೂತ ಸೌಲಭ್ಯಗಳೊಂದಿಗೆ ಸಾಮಾಜಿಕ ಆರ್ಥಿಕ, ಶೈಕ್ಷಣಿಕ, ಅಭಿವೃದ್ಧಿಯ ಶೋಧಗಳು ಸಿದ್ದಪಡಿಸಿದ ಪ್ರಶ್ನಾವಳಿಯಲ್ಲಿ ಪಡೆದು ಪ್ರಗತಿಯನ್ನು ಅವಲೋಕಿಸಲಾಗಿದೆ. ಹೆಚ್ಚು ಕ್ಷೇತ್ರಕಾರ್ಯದ ಮೇಲೆ ಆಧಾರಿತವಾಗಿದ್ದು ಅಗತ್ಯವೆನಿಸಿದಲ್ಲಿ ಮಾತ್ರ ಸರ್ಕಾರದ ಮಾಹಿತಿ ಬಳಸಿಕೊಳ್ಳಲಾಗಿದೆ. ಹೀಗಾಗಿ ಈ ಅಧ್ಯಯನವು ಸಂಪೂರ್ಣ ಕ್ಷೇತ್ರಧ್ಯಯನ ಮೇಲೆ ಕೈಗೊಳ್ಳಲಾಗಿದೆ.

೭. ಅಧ್ಯಯನದ ವಿಧಾನ

ಭಾರತೀಯ ಸಾಹಿತ್ಯರಾಶಿಯಲ್ಲಿ ಬುಡಕಟ್ಟು ಸಮುದಾಯಗಳ ಮೌಖಿಕ ಹಾಗೂ ಸಾಂಸ್ಕೃತಿಕ ಜ್ಞಾನದ ಪರಂಪರೆಯು ವರ್ಣರಂಜಿತ ಚಿತ್ರಣವನ್ನು ನೀಡಿರುವುದು. ಇದನ್ನು ಅನೇಕ ಸಂಶೋಧಕರು ಮತ್ತು ಅಧ್ಯಯನಕಾರರು ಗುರುತಿಸಿದ್ದಾರೆ. ಇತ್ತೀಚಿನ ಅಧ್ಯಯನ ಕ್ರಮಗಳಲ್ಲಿ ಸಮುದಾಯಗಳ ಮಾನವಸಂಪತ್ತಿನ ಬಹುಮುಖ್ಯ ಪರಿಗಣನೆಯು ನಡೆಯುತ್ತಿದೆ. ಈ ನಿಟ್ಟಿನಲ್ಲಿ ಬಹುಶಿಸ್ತೀಯ, ಅಂತರಶಿಸ್ತೀಯ, ಬಹುಮುಖ ದೃಷ್ಟಿಕೋನದ; ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯಶಾಸ್ತ್ರ ಮತ್ತು ಸಮಾಜಶಾಸ್ತ್ರದ ಅಧ್ಯಯನಕ್ರಮದಲ್ಲಿ ಬುಡಕಟ್ಟು ಸಮುದಾಯಗಳ ಪ್ರಾಕೃತಿಕ ಭೌತಿಕ, ಜೈವಿಕ, ಆರ್ಥಿಕ-ಸಾಮಾಜಿಕ ಕ್ಷೇತ್ರಗಳ ಬಗೆಗಿನ ಸಂಶೋಧನೆಯನ್ನು ಅವರದೇ ಜ್ಞಾನಶಿಸ್ತುಗಳಲ್ಲಿ ಸಂಶೋಧನ ಮಾಡಲಾಗುತ್ತಿದೆ. ಅರ್ಥಶಾಸ್ತ್ರಜ್ಞರು ಮಾನವ ಸಂಪನ್ಮೂಲದ ನೆಲೆಯಲ್ಲಿ ನಿಂತು, ಯೋಜನೆಗಳು ಹಾಗೂ ಅಭಿವೃದ್ಧಿ ಮಾರ್ಗದ ಕ್ರಿಯಾ ಸಂಶೋಧನೆಯಲ್ಲಿ ತೊಡಗಿರುವುದು ಕಾಣಬರುತ್ತದೆ. ಈ ನಿಟ್ಟಿನಲ್ಲಿನ ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ ಎಂಬ ಈ ನಿಬಂಧವು ಅರ್ಥಶಾಸ್ತ್ರೀಯ ಅಧ್ಯಯನದ ರೂಪುರೇಷಗಳೊಂದಿಗೆ ಅಂತರಶಿಸ್ತಿಯ ವಿಧಾನಗಳ ಮೇಲೆ ಸಿದ್ಧಗೊಂಡಿದೆ.

ಪ್ರಶ್ನಾವಳಿ ವಿಧಾನ: ಅಧ್ಯಯನದ ವಿಷಯಕ್ಕೆ ಅನುಗುಣವಾಗಿ ಸೂಕ್ತ ಪ್ರಶ್ನೆಗಳನ್ನು ರಚಿಸಿಕೊಂಡು ಸಮೀಕ್ಷಿಸಲಾಗಿದೆ. ಫಲಿತಗಳನ್ನು ಪ್ರಬಂಧದಲ್ಲಿ ನಮೂದಿಸಲಾಗಿದೆ. ಅರ್ಥಶಾಸ್ತ್ರದ ಮೂಲಾಂಶಗಳ ಪ್ರಕಾರ ಪ್ರತ್ಯೇಕವಾದ ವಿಷಯಕ್ಕೆ ಅನುಗುಣವಾಗಿ ಪ್ರಶ್ನಾವಳಿ ರಚಿಸಿ ಅವುಗಳಿಂದ ಮಾಹಿತಿ ಪಡೆದು ವಿಶ್ಲೇಷಿಸಲಾಗಿದೆ.

ಸಂದರ್ಶನ ವಿಧಾನ: ಸಮುದಾಯಗಳು ನೆಲೆನಿಂತಿರುವ ಕಾಲೋನಿಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಸಮೀಕ್ಷೆ ಮಾಡಲಾಗಿದೆ. ಪ್ರತಿಕುಟುಂಬದ ವ್ಯಕ್ತಿಗತ ವಿವರದೊಂದಿಗೆ ಒಟ್ಟಾರೆ ಕುಟುಂಬದ ಆರ್ಥಿಕ-ಸಾಮಾಜಿಕ ವಿವರವನ್ನೂ ಪಡೆಯಲಾಗಿದೆ. ಸಮುದಾಯಗಳಲ್ಲಿನ

ನಾಯಕರು, ಸಂಘಟನೆಗಳು ಹಾಗೂ ಅಭಿವೃದ್ಧಿಗಾಗಿ ನೇಮಕಗೊಂಡಿರುವ ಅಧಿಕಾರಿಗಳನ್ನು ನೇರಸಂದರ್ಶನ ಮಾಡುವ ಮೂಲಕ ಅಧ್ಯಯನಕ್ಕೆ ಅವಶ್ಯವಾಗಿರುವ ಮಾಹಿತಿಯನ್ನು ಅವರಿಂದ ಕಲೆಹಾಕಲಾಗಿದೆ.

ಅವಲೋಕನ ವಿಧಾನ: ಅಧ್ಯಯನದಲ್ಲಿ ಅವಲೋಕನ ವಿಧಾನಕ್ಕೂ ಆದ್ಯತೆ ನೀಡಲಾಗಿದೆ. ಸಮುದಾಯಗಳು ಇತ್ತೀಚಿನದಿನಗಳಲ್ಲಿ ರೂಪಿಸಿಕೊಂಡಿರುವ ಬದುಕಿನ ಕ್ರಮ, ಬದಲಾದ ಪರಿಸರ ಮತ್ತು ಮೂಲಭೂತ ಸೌಲಭ್ಯಗಳು, ಹಾಗೂ ಸಾಮಾಜಿಕ ಆರ್ಥಿಕತೆಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದೆ.

ಸಂಖ್ಯಾಶಾಸ್ತ್ರೀಯ ವಿಧಾನ: ಅರ್ಥಶಾಸ್ತ್ರದಲ್ಲಿ ಪರಿಗಣಿತವಾಗುವಂತೆ ಅಂಕಿ, ಅಂಶಗಳನ್ನು ಕ್ರೋಢೀಕರಿಸಲಾಗಿದೆ. ಅಂಕಿ ಸಂಖ್ಯೆಗಳಿಂದ ಸಮುದಾಯಗಳಲ್ಲಾಗುವ ಏರಿಳಿತವನ್ನು ಆಧರಿಸಿಯೇ ಹಲವುಭಾಗದಲ್ಲಿ ವಿಶ್ಲೇಷಿಸಲಾಗಿದೆ. ಸಮೀಕ್ಷೆ ಮಾಡಲಾದ ಅಂಕಿ, ಸಂಖ್ಯೆಗಳನ್ನು ಪಟ್ಟಿಗಳ ರೂಪದಲ್ಲಿ ಪಥಕ್ಕರಿಸಲಾಗಿದೆ.

ತೌಲನಿಕ ಅಧ್ಯಯನ: ಸಮುದಾಯಗಳಲ್ಲಿ ಕಂಡುಬರುವ ಪ್ರಮುಖ ವಿಷಯವಾದ ಶೈಕ್ಷಣಿಕ ಪ್ರಗತಿ, ಭೂಹಂಚಿಕೆ ಮತ್ತು ಆದಾಯದ ನಡುವಿನ ಸಮುದಾಯಗಳಲ್ಲಿನ ಭಿನ್ನತೆಗಳು ಅರಿಯಲು ತುಲನಾತ್ಮಕವಾಗಿ ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಆ ಬಗೆಯ ಮಾಹಿತಿಯ ರೇಖಾಚಿತ್ರಗಳನ್ನು ಬಳಸಲಾಗಿದೆ. ಹೀಗಾಗಿ ಎರಡು (ಜೇನುಕುರುಬ ಮತ್ತು ಕೊರಗ) ಸಮುದಾಯಗಳ ವಿಶ್ಲೇಷಣೆಯಲ್ಲಿ ತೌಲನಿಕ ವಿಧಾನವನ್ನು ಸಹ ಅನುಸರಿಸಲಾಗಿದೆ.

ಅಲ್ಲದೆ ಅಧ್ಯಯದ ಕ್ಷೇತ್ರದಲ್ಲಿ ವಿಶೇಷವಾಗಿ ಭೂಮಿ ಹಂಚಿಕೆ ಮತ್ತುವಿಶೇಷ ಸೌಲಭ್ಯಗಳ ಪಾತ್ರವನ್ನು ಸಮೀಕ್ಷಾ ವಿಧಾನದಿಂದ ಗುರುತಿಸಲಾಗಿದೆ. ಆಶ್ರಮಶಾಲೆಯ ಮೇಲ್ವಿಚಾರಕರನ್ನು ನೇರ ಸಂದರ್ಶನದಲ್ಲಿ ಸಂದರ್ಶಿಸಲಾಗಿದೆ. ಕಲ್ಯಾಣ ಕಾರ್ಯಕ್ರಮಗಳ ಅಧಿಕಾರಿವರ್ಗ ಮತ್ತು ಯೋಜನಾ ಸಮನ್ವಯಾಧಿಕಾರಿಗಳು, ತಾಲ್ಲೂಕು ಸಮಾಜ ಕಲ್ಯಾಣಾದಿಕಾರಿಗಳ ಮೂಲಕ ಸಮಗ್ರ ಮಾಹಿತಿ ಪಡೆದು ವರ್ತಮಾನದಲ್ಲಿ ಬದುಕುತ್ತಿರುವ ಸಮುದಾಯಗಳನ್ನು ಅಧ್ಯಯನಕ್ಕೆ ಮೀಸಲಾದ ಜಿಲ್ಲೆಗಳ ಭೌಗೋಳಿಕ ಮತ್ತು ರಚನಾತ್ಮಕ ವೈವಿಧ್ಯತೆಗಳ ಬಗ್ಗೆ ಲಭ್ಯವಿದ್ದ ಅಂಕಿ. ಅಂಶಗಳನ್ನು ಪ್ರಾಥಮಿಕ ಹಾಗೂ ಅನುಭವಾತ್ಮಕವಾಗಿ ಕಂಡುಕೊಂಡ ಮಾಹಿತಿಗಳನ್ನು ಮುಖ್ಯ ಆಕಾರವಾಗಿಟ್ಟುಕೊಂಡು ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಬುಡಕಟ್ಟುಗಳನ್ನು ಆರಿಸಿದ ಕ್ರಮ

ತೀರಾ ಹಿಂದುಳಿದ ಸಮುದಾಯಗಳೆಂದು ಗುರುತಿಸಲಾದ ಜೇನುಕುರುಬ ಮತ್ತು ಕೊರಗರು ವಿಶೇಷವಾಗಿ ಚಾಮರಾಜನಗರ, ಮೈಸೂರು, ಕೊಡಗು, ಉಡುಪಿ, ದ.ಕನ್ನಡ

ಜಿಲ್ಲೆಗಳ ಅರಣ್ಯ ಮತ್ತು ಬೆಟ್ಟಪ್ರದೇಶಗಳೇ ವಾಸದ ನೆಲೆಗಳಾಗಿದ್ದು ಹೆಚ್ಚಿನ ಜನವಸತಿಗಳು ಇಲ್ಲಿವೆ. ಅದರಲ್ಲೂ ಜೇನುಕುರುಬರು ಹುಣಸೂರು, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ನಂಜನಗೂಡು, ಸೋಮವಾರ ಪೇಟೆ ಮತ್ತು ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಅಲ್ಲಲ್ಲಿ ಪುನರ್‌ವಸತಿ ಕಲ್ಪಿಸಲಾದ ಹಾಗೂ ಅರಣ್ಯಪ್ರದೇಶದಲ್ಲಿನ ತೋಟದ ಘಟ್ಟ ಪ್ರದೇಶಗಳಲ್ಲಿ ಗುಂಪು, ಗುಂಪಾಗಿ ವಾಸವಾಗಿದ್ದಾರೆ. ಕೊರಗರು ನಗರದ ಕೊಳಚೆಪ್ರದೇಶಗಳಲ್ಲಿ, ವಿಶೇಷವಾಗಿ ಮೀಸಲಾದ ಕಾಲೋನಿಗಳಲ್ಲಿ ಹಾಗೂ ಗ್ರಾಮಾಂತರ ಭಾಗದ ಪ್ರದೇಶಗಳಲ್ಲಿ ಅಲ್ಲಲ್ಲಿ ಕೆಲವೇ ಕೆಲವು ಅಂದರೆ ನಗರ ಪ್ರದೇಶಗಳಲ್ಲಿ ೩೦ ರಿಂದ ೫೦ ಕುಟುಂಬಗಳು, ಗ್ರಾಮೀಣ ಭಾಗದಲ್ಲಿ ೫–೮ ಕುಟುಂಬಗಳು ನೆಲೆ ನಿಂತು ವಾಸಿಸುತ್ತಿದ್ದಾರೆ. ವಿಶೇಷತ: ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಯಲ್ಲಿ ಅರಣ್ಯ ಮತ್ತು ಬೆಟ್ಟ ಪ್ರದೇಶಗಳು ಹೆಚ್ಚಾಗಿದ್ದು ಇಲ್ಲಿಯೇ ಮೂಲನಿವಾಸಿ ಬುಡಕಟ್ಟು ಸಮುದಾಯವಾದ ಜೇನುಕುರುಬರು ಹೆಚ್.ಡಿ.ಕೋಟೆ, ಹೂಣಸೂರು,ವಿರಾಜಪೇಟೆಯ ಕೆಲವೆಡೆ ಒಂದೇ ಸಮುದಾಯದ ಜನರು ಹೆಚ್ಚಾಗಿದ್ದರೆ ಇನ್ನೂ ಹಲವುಕಡೆ ಎರಡು ಮತ್ತು ಮೂರು ಬುಡಕಟ್ಟುಗಳ ಜೊತೆಗೆ ಕಂಡು ಬರುತ್ತಾರೆ. ಕೊರಗರು ದಕ್ಷಿಣಕನ್ನಡ, ಉಡುಪಿ ಜಿಲ್ಲೆಯಲ್ಲಿನ ನಗರ ಹಾಗೂ ಗ್ರಾಮಪ್ರದೇಶಗಳಲ್ಲಿ ಹೆಚ್ಚಾಗಿದ್ದು ಉಡುಪಿ, ಮಂಗಳೂರು, ಕುಂದಾಪುರದಲ್ಲಿ ಪ್ರಮುಖವಾಗಿ ಕಂಡು ಬರುವರು. ಇನ್ನುಳಿದಂತೆ ಇತರೆ ಜನವರ್ಗದವರೊಂದಿಗೆ ಅಲ್ಲಲ್ಲಿ ಕೆಲವು ಕುಟುಂಬಗಳು ನೆಲಸಿವೆ. ಹೀಗಾಗಿ ಈ ಪ್ರತಿ ಸಮುದಾಯಗಳ ಶೇಕಡ ೧೦ರಷ್ಟು ಕುಟುಂಬಗಳ ಮಾದರಿಯನ್ನ ಅಧ್ಯಯನಕ್ಕೆ ಆರಿಸಲಾಯಿತು.

ಮೂಲನಿವಾಸಿ ಬುಡಕಟ್ಟು ಸಮುದಾಯಗಳು ನೆಲೆಸಿರುವ ಪ್ರದೇಶದಲ್ಲೆಲ್ಲಾ ಕಲ್ಯಾಣಕರ್ಯಕ್ರಮಗಳ ಯೋಜನೆ ಮತ್ತು ಅನುಷ್ಠಾನಗಳು ನಡೆಯುತ್ತಲೇ ಬಂದಿವೆ. ಸಾಮಾನ್ಯವಾಗಿ ಸಮುದಾಯಗಳಿರುವ ಕಾಲೋನಿಗಳಲ್ಲಿ ಇಂತಹ ಕಾರ್ಯಕ್ರಮಗಳು ಸ್ವಲ್ಪ ವ್ಯಾಪಕವಾಗಿ ಮಾಡಲ್ಪಡುವುದು ಒಂದು ಪರಂಪರೆ.

ಮೂಲನಿವಾಸಿ ಬುಡಕಟ್ಟು ಸಮುದಾಯಗಳು ನೆಲೆಸಿರುವ ಪ್ರದೇಶವನ್ನು ಮಾದರಿಗೆ ಪಟ್ಟಿ ಮಾಡಲಾಯಿತು. ಈ ಪಟ್ಟಿಯ ಪ್ರಕಾರ ಎಲ್ಲಾ ೧೫ ತಾಲ್ಲೂಕು ವ್ಯಾಪ್ತಿಯಲ್ಲಿನ ಕಾಲೋನಿಗಳನ್ನು ಒಳಗೊಂಡಂತೆ, ಜೇನುಕುರುಬರ ೭೩೬೯ ಕುಟುಂಬಗಳಲ್ಲಿ ಶೇಕಡ ೧೦% ಹಾಗೂ ಕೊರಗರ ೩೩೦೮ ಕುಟುಂಬಗಳಲ್ಲಿ ಶೇ ೧೦% ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಮಾದರಿ ವಿಧಾನವನ್ನು ವೈಜ್ಞಾನಿಕವಾಗಿ ಮಾಡಲಾಯಿತು. ಇದೊಂದು ವ್ಯಾಪಕವಾದ ಅಧ್ಯಯನ ಕ್ಷೇತ್ರ ಮತ್ತು ವಸ್ತು ವಿಷಯವಾದ್ದರಿಂದ ಸಮಾಜ ವಿಜ್ಞಾನಗಳಲ್ಲಿನ ಯಾದೃಚ್ಛಿಕ ಮಾದರಿ (Random Sampling) ಅನ್ವಯ ಅರ್ಥಶಾಸ್ತ್ರದ ಅಧ್ಯಯನಕ್ರಮದಂತೆ Random Samlping System ಅನ್ವಯ ವಾಸ್ತವತೆಯ ಯತಾರ್ಥವಾದ ಮತ್ತು ವಸ್ತುನಿಷ್ಠ ದೃಷ್ಟಿಕೋನಗಳಿಂದ ಅರಿಯುವ ನಿಟ್ಟಿನಲ್ಲಿ ಸಮುದಾಯಗಳನ್ನುಸಮೀಕ್ಷೆಗೆ ಆಯ್ದು

ಕೊಳ್ಳಲಾಗಿದೆ. ನಂತರ ಸಮುದಾಯಗಳ ತಾಲ್ಲೂಕುವಾರು ಜನಸಂಖ್ಯೆಯ ನಿಖರ ಮಾಹಿತಿಯನ್ನು ಕಾಲೋನಿಗಳಿಗೆ ಅನುಗುಣವಾಗಿ ಪಟ್ಟಿ ಮಾಡಲಾಯಿತು. ಒಟ್ಟಾರೆ ಜನಸಂಖ್ಯೆಯ ಪ್ರಮಾಣವನ್ನು ತಿಳಿದು ಜೇನುಕುರುಬರ ಹಾಗೂ ಕೊರಗರ ಕಾಲೋನಿಗಳನ್ನು ಮಾಹಿತಿಯ ಮಾದರಿ ಸಂಖ್ಯೆಯಾಗಿ ಗುರುತಿಸಲಾಯಿತು. ಹೀಗಾಗಿ ಎರಡೂ ಸಮುದಾಯಗಳ ಸಮಗ್ರ ಅಧ್ಯಯನ ಕ್ಷೇತ್ರ ವಿಶಾಲವು ವ್ಯಾಪಕವು ಆದುದರಿಂದ ಇಡೀ ಕ್ಷೇತ್ರದ ಪ್ರಾತಿನಿಧಿಕ ಮಾದರಿಗಳನ್ನು ಅಧ್ಯಯನ ಮಾಡಿ ಆ ಮಾಹಿತಿ ಆಧಾರ ಮೇಲೆ ನಿರ್ಣಯಗಳನ್ನು ಕೈಗೊಂಡು ಆ ನಿರ್ಣಯವನ್ನು ಇಡೀ ಕ್ಷೇತ್ರಕ್ಕೆ ಅನ್ವಯಿಸಿ ಸಾಮಾನ್ಯೀಕರಣಗೊಳಿಸಲಾಗಿದೆ.

ಕ್ಷೇತ್ರ ಕಾರ್ಯದ ಸಾಧಕ-ಬಾಧಕಗಳು

ಕ್ಷೇತ್ರ ಕಾರ್ಯಮಾಡುವಲ್ಲಿ ಕೆಲವು ಅನುಕೂಲಗಳು ಮತ್ತು ಕೆಲವು ಕಡೆ ಅನಾನುಕೂಲಗಳು ಸಂಭವಿಸಿದವು. ಈ ಸಂಶೋಧಕ ಸ್ವಯಂಸೇವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪರಿಣಾಮ ಸಮುದಾಯಗಳು ಜನರ ಜೊತೆಗೆ ಅನ್ಯೋನ್ಯತೆಯ ಸಹಕಾರ ಸದಾ ಲಭಿಸುತ್ತಿತ್ತು. ಒಂದೆಡೆ ಮಾಹಿತಿ ಸಂಗ್ರಹಕಾರ್ಯದಲ್ಲಿ ಎರಡೂ ಸಮುದಾಯಗಳ ನಾಯಕರು, ವಿದ್ಯಾರ್ಥಿಗಳು ಜೊತೆಗಿದ್ದು ಸಹಕರಿಸಿದ್ದು ಸುಲಭವಾಯಿತು. ಬುಡಕಟ್ಟು ಸಮುದಾಯಗಳ ಕ್ಷೇತ್ರಗಳಲ್ಲಿ ಹಲವು ಮುಖ್ಯಸ್ಥ ಪರಿಚಯವಿದ್ದುದ್ದರಿಂದ ವಿಷಯ ತಿಳಿಯುವಲ್ಲಿ ಸಹಕಾರಿಯಾಯಿತು. ಕರಾವಳಿ ಪ್ರದೇಶದಲ್ಲಿ ಸ್ವಲ್ಪ ಮಟ್ಟಿಗೆ ಮಾತ್ರ ತೊಂದರೆಯಾಯಿತು. ಇನ್ನುಳಿದಂತೆ ಸಮುದಾಯಗಳಲ್ಲಿನ ಯುವ ವಿದ್ಯಾರ್ಥಿಮಿತ್ರರು ಜೊತೆಗಿದ್ದು ತಂಗಲು (ವಾಸಕ್ಕೆ) ಸಮುದಾಯಭವನ, ಶಾಲೆ ಅಲ್ಲದೇ ಕೊರಗರು ತಮ್ಮ ಮನೆಯಲ್ಲಿಯೇ ವ್ಯವಸ್ಥೆ ಮಾಡಿ ಅಧ್ಯಯನಕ್ಕೆ ಸಹಕರಿಸಿದ ಜನರು ಅನೇಕ. ಆದರೆ ಹೊರಗಿನ ಅಧಿಕಾರಿಗಳಲ್ಲಿ ಸಂಧರ್ಶನ ಮಾಡುವಾಗ ನಿರಾತಂಕವಾಗಿ ಮಾತನಾಡಲರಿಯದೆ, ಅದರಲ್ಲಿಯೂ ಕಲ್ಯಾಣ ಕಾರ್ಯಕ್ರಮಗಳ ವಿವರ ನೀಡಿ ಎಂದು ವಿಚಾರಿಸಿದಲ್ಲಿ ಬಹಳ ನಿರ್ದಯದಿಂದ ನಡೆಸಿಕೊಂಡ ಬಗ್ಗೆ ಮರೆಯಲಾಗದು. ಈ ಒಂದು ಕ್ರಮವೇ ಸಾಕು ಆಡಳಿತಾಧಿಕಾರಿಗಳ ನಿರ್ಲಕ್ಷ್ಯತನಕ್ಕೆ ಸಾಕ್ಷಿ. ಈ ಎಲ್ಲಾ ಏಳೂ-ಬೀಳುಗಳ ನಡುವೆ ಕ್ಷೇರ್ತಕಾರ್ಯ ಮಾಡಲಾಗಿದೆ.

ಅಧ್ಯಾಯಗಳ ವಿನ್ಯಾಸ

ಈ ಅಧ್ಯಾಯಗಳಲ್ಲಿ ಎರಡು ಮೂಲನಿವಾಸಿ ಬುಡಕಟ್ಟು ಸಮುದಾಯಗಳಾದ ಜೇನುಕುರುಬ ಮತ್ತು ಕೊರಗರ ಜೀವನಕ್ರಮಗಳ ಹಲವಾರು ವಿಷಯಗಳು ಒಂದು ಕ್ರಮ ಬದ್ಧತೆಯಲ್ಲಿ ಮಂಡಿಸಲಾಗಿದೆ. ಈ ಮಹಾಪ್ರಬಂಧ ೭ ಅಧ್ಯಾಯಗಳಲ್ಲಿ ಮಾಹಿತಿಯನ್ನು

ವಿವರಿಸುವ ಕ್ರಮವನ್ನು ಅನುಸರಿಸಲಾಗಿದ್ದು ಅವುಗಳನ್ನು ಕೊಡಲಾಗಿದೆ. ಇದೊಂದು ಅಂತರಶಿಸ್ತೀಯ ಅಧ್ಯಯನ ಕ್ರಮದೊಂದಿಗೆ ರೂಪುಗೊಂಡ ಅಧ್ಯಯನಕ್ರಮ ಎನ್ನಲಡ್ಡಿಯಿಲ್ಲ.

ಅಧ್ಯಾಯ : ಒಂದು

ಮೊದಲನೆಯ ಅಧ್ಯಾಯದಲ್ಲಿ ಸಂಶೋಧನಾ ವಿಷಯಕ್ಕೆ ಒಂದು ಹಿನ್ನಲೆಯನ್ನು ಒದಗಿಸುವುದರ ಜೊತೆಗೆ ಮಹಾಪ್ರಬಂಧದ ಬಗ್ಗೆ ಒಂದು ಸ್ಥೂಲ ನೋಟವನ್ನು ಬೀರುವುದು ಆಗಿದೆ. ಈ ಅಧ್ಯಾಯದಲ್ಲಿ ಪ್ರಸ್ತುತಪಡಿಸಿರುವ ವಿಷಯಗಳಲ್ಲಿ ಪ್ರಸ್ತಾವನೆ. ಬುಡಕಟ್ಟುಗಳನ್ನು ಕುರಿತಂತೆ ವ್ಯಾಖ್ಯಾನ ಮತ್ತು ಮೂಲನಿವಾಸಿ ಬುಡಕಟ್ಟುಗಳ ಅರ್ಥವಿವರಣೆ, ಪರಿಗಣನೆ, ಅಧ್ಯಯನದ ವ್ಯಾಪ್ತಿ ಮತ್ತು ಉದ್ದೇಶಗಳು ಸಂಶೋಧನೆಗೆ ಅಳವಡಿಸಿದ ವಿಧಾನ, ಬುಡಕಟ್ಟುಗಳನ್ನು ಆರಿಸಿದ ವಿಧಾನ ಹಾಗೂ ಗ್ರಂಥದ ಅಧ್ಯಾಯಗಳ ಬಗ್ಗೆ ವಿವರವಾಗಿ ಪರಿಚಯಿಸಲಾಗಿದೆ.

ಅಧ್ಯಾಯ : ಎರಡು

ಎರಡನೇ ಅಧ್ಯಾಯದಲ್ಲಿಮೂಲನಿವಾಸಿ ಬುಡಕಟ್ಟು ಸಮುದಾಯಗಳನ್ನು ಸೈದ್ಧಾಂತಿಕ ಮತ್ತು ನಿದರ್ಶನಾತ್ಮಕವಾಗಿ, ಒಟ್ಟಾರೆ ಪರಿಸರ ಜೀವನಕ್ರಮದ ಬಗ್ಗೆ ವಿವರಿಸಲಾಗಿದೆ. ಎರಡು ಸಮುದಾಯಗಳ ಪ್ರಾಕೃತಿಕ ಪರಿಸರದೊಂದಿಗಿನ ಜೀವನಕ್ರಮದಲ್ಲಿ ಕೊಡುಗೆಯಾಗಿರುವ ಪರಿಸರ ಮಹತ್ವದೊಂದಿಗೆ, ವಿವರವಾಗಿ ಈ ಅಧ್ಯಯನಕ್ಕೆ ಸೂಕ್ತವಾಗಿ ಬೇಕಾಗುವ ಮಾಹಿತಿಯನ್ನು ಸಮೀಕ್ಷೆ ಮತ್ತು ಪ್ರಾಥಮಿಕ ಮೂಲಗಳು ಹಾಗೂ ಅನೇಕ ಗ್ರಂಥಗಳಿಂದ ಆಧರಿಸಿ ಆಕರಿಸಿ ಕೊಡಲಾಗಿದೆ. ಸಮುದಾಯಗಳನ್ನು ತಿಳಿಯಲು ಅನುಕೂಲವಾಗುವಂತೆ ಅಲ್ಲದೆ ಸಮುದಾಯಗಳ ಜೀವನಶೈಲಿಯನ್ನು ವಿವರಣಾತ್ಮಕ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಅಧ್ಯಾಯ : ಮೂರು

ಸಂಶೋಧನಾ ಮಾದರಿಯಾಗಿ ಆಯ್ಕೆಯಾದ ಎರಡು ಸಮುದಾಯಗಳ ಸಾಮಾಜಿಕ – ಆರ್ಥಿಕ ಸ್ಥಿತಿಗತಿಗಳ ಸ್ಥೂಲ ಪರಿಚಯವನ್ನು ಈ ಅಧ್ಯಾಯ ಒದಗಿಸುತ್ತದೆ. ಪ್ರಸ್ತುತ ಅಧ್ಯಯನದ ಉದ್ದೇಶಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಕಾಲೋನಿಗಳ ಹಾಗೂ ಬುಡಕಟ್ಟು ಸಮುದಾಯಗಳ ಕುಟುಂಬದ ಗಾತ್ರ, ಲಿಂಗಾನುಪಾತ, ವಯಸ್ಸಿಗನುಗುಣವಾದ ಶಿಕ್ಷಣ ಮಟ್ಟ, ಭೂ ಹಿಡುವಳಿ, ಉದ್ಯೋಗಗಳ ಮಾದರಿ, ಉದ್ಯೋಗಗಳ ಕಾಲಾನುಕ್ರಮ, ಆದಾಯದ ವರ್ಗೀಕರಣ, ಮುಂತಾದ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳ ಬಗ್ಗೆ ವಿವರಗಳನ್ನು ಸಂಗ್ರಹಿಸಿ ಪ್ರಥಕ್ಕರಿಸಿದ ಅನೇಕ ಪಟ್ಟಿಗಳೊಂದಿಗೆ ನೀಡಲಾಗಿದೆ. ಅಲ್ಲದೆ ಎರಡು ಸಮುದಾಯಗಳಲ್ಲಿನ ಶೈಕ್ಷಣಿಕ ಆರ್ಥಿಕ ಮಾಹಿತಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ : ನಾಲ್ಕು

ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಸರ್ಕಾರವು ವಿಶೇಷವಾಗಿ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿರುವುದು ಸರಿಯಷ್ಟೇ. ಸಮುದಾಯಗಳಿಗೆ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಒದಗಿಸಿದ್ದರೂ ಅವುಗಳು ಕಾರ್ಯಗತವಾಗುವುದು ಮುಖ್ಯವಾಗುತ್ತದೆ. ಈ ಅಧ್ಯಾಯದಲ್ಲಿ ಸಮುದಾಯಗಳ ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ರೂಪುರೇಷೆ ಅಲ್ಲದೆ ಸರ್ಕಾರ ಕೈಗೊಂಡ ಅವುಗಳ ಅನುಷ್ಠಾನ ಹಾಗೂ ಪರಿಣಾಮ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ. ಅಲ್ಲದೆ ಅಭಿವೃದ್ಧಿ ನಿಗಮದ ಸೌಲಭ್ಯಗಳು ಸಮುದಾಯಗಳಿಗೆ ದೊರೆತ ಪ್ರಮಾಣವನ್ನು ಪಟ್ಟಿಗಳ ಮುಖಾಂತರ ಸಮುದಾಯಗಳ ತಾಲ್ಲೂಕುಗಳಿಗನುಗುಣವಾಗಿ ನೀಡಲಾಗಿದೆ.

ಅಧ್ಯಾಯ : ಐದು

ಈ ಅಧ್ಯಾಯದಲ್ಲಿ ಪ್ರಸ್ತುತ ಎರಡು ಸಮುದಾಯಗಳ ಜೀವನಕ್ರಮವನ್ನು ಅವಲೋಕಿಸಲಾಗಿದೆ. ಸಮುದಾಯಗಳ ಸಾಮಾಜಿಕಪರಿವರ್ತನೆ. ಆಯಾ ಸಮುದಾಯಗಳಲ್ಲಿನ ವಾಸಸ್ಥಾನಗಳು, ಭೌತಿಕ ಬದಲಾವಣೆಯೊಂದಿಗೆ ಶ್ರೇಣಿಕೃತ ಅಸಮಾನತೆಯ ಬಗ್ಗೆ ವಿವರಗಳು ಇಲ್ಲಿವೆ. ಎರಡು ಸಮುದಾಯಗಳಿಗೆ ಸಂಬಂಧಿಸಿದಂತೆ ಸರ್ಕಾರ ಸುಧಾರಣೆ ಬಯಸಿರುವ ಸಾಮಾಜಿಕ ನ್ಯಾಯ ಕ್ಷೇತ್ರವನ್ನು ಸಮೀಕ್ಷಿಸಲಾಗಿ ಅವುಗಳ ಫಲಾಫಲತೆಯನ್ನು ನೀಡಲಾಗಿದೆ. ಮುಂದುವರೆದಂತೆ ಜೀವನದ ಅತಿಮುಖ್ಯವಾದ ಆರ್ಥಿಕ ಕ್ಷೇತ್ರವನ್ನು ಸಮುದಾಯಗಳು ತನ್ನದೇ ಆದ ಸೀಮಿತತೆಯಲ್ಲಿ ಹೊಂದಿರುವ ಅರ್ಥವ್ಯವಸ್ಥೆಯನ್ನು ಅವಲೋಕಿಸಿ ಕಂಡು ಬಂದ ಸತ್ಯಾಂಶಗಳನ್ನು ಅಂಕಿ ಸಂಖ್ಯೆಯ ಸಹಿತ ಜನರ ಆದಾಯ, ಅನುಭೋಗ, ಉಳಿತಾಯ ಬಗ್ಗೆ ವಿಶ್ಲೇಷಿಸಲಾಗಿದೆ. ಸಂವಿಧಾನಬದ್ಧವಾಗಿ ಸಮುದಾಯಗಳಲ್ಲಿನ ರಾಜ್ಯಾಧಿಕಾರದ ಬಗ್ಗೆ ಬಡತನವನ್ನು ಸಂಕ್ಷಿಪ್ತರೂಪದಲ್ಲಿ ಚರ್ಚಿಸಲಾಗಿದೆ. ಇದೊಂದು ಪರಿವಿಕ್ಷಣ ಅಧ್ಯಯನವೆಂತೆಲ್ಲೂ ಎನ್ನಬಹುದು.

ಅಧ್ಯಾಯ : ಆರು

ಈ ಅಧ್ಯಾಯನವು ಎರಡು ಸಮುದಾಯಗಳ ಅಭಿವೃದ್ಧಿ, ಪ್ರಗತಿ ದಿಕ್ಕು-ದಿಸೆ ಎಂಬ ವಿಷಯವನ್ನು ವಿಶ್ಲೇಷಣೆಗೆ ತೆಗೆದುಕೊಂಡಿದೆ. ಸಮುದಾಯಗಳಿಗೆ ಸಂಬಂಧಿಸಿದ ಹಾಗೆ ಆಸ್ತಿತ್ವದಲ್ಲಿರುವ ಯೋಜನೆಗಳ ಸಾಫಲ್ಯದ ಮಾಹಿತಿ ಇಲ್ಲಿದೆ. ಸಮುದಾಯಗಳು ಪಡೆದಿರುವ ಸೌಲಭ್ಯಗಳ ಆಧಾರದ ಮೇಲೆ, ಅವರುಗಳ ಅಭಿವೃದ್ಧಿ ಸ್ವರೂಪನ್ನ ತಿಳಿಯಲಾಗಿದೆ. ಇಲ್ಲಿ ಯಾವುದೇ ಅಭಿವೃದ್ಧಿ ಸಿದ್ಧಾಂತ ರೂಪಿಸದೆ, ಸಮುದಾಯಗಳು ಅವಲಂಭಿಸಿ ನಡೆಯುತ್ತಿರುವ ಮಾರ್ಗವನ್ನು ನಿರೂಪಿಸಲಾಗಿದೆ. ಪೂರಕವೆಂಬಂತೆ. ಸಮುದಾಯಗಳಲ್ಲಿನ ಹೋರಾಟ, ಸ್ವಯಂ ಸಂಸ್ಥೆಗಳ ಪಾತ್ರದೊಂದಿಗೆ ನಿಜವಾಗಿಯೂ ಸಮುದಾಯಗಳು ನಡೆಯುತ್ತಿರುವ ಅಭಿವೃದ್ಧಿ ಮಾರ್ಗದ ಮಾದರಿಯನ್ನು ಸಂಕ್ಷಿಪ್ತವಾಗಿ ಕೂಡಲಾಗಿದೆ.

ಅಧ್ಯಾಯ : ಏಳು

ಈ ಅಧ್ಯಾಯವು ಮಹಾಪ್ರಬಂಧದ ಉಪಸಂಹಾರ ಭಾಗ. ಇದು ಕೊನೆಯದಾಗಿ ಅಧ್ಯಯನದ ಪ್ರಮುಖ ಅಂಶಗಳ ಸಂಕ್ಷಿಪ್ತ ಸಾರಾಂಶವಾಗಿದೆ. ಇಲ್ಲಿ ಅಧ್ಯಯನದಿಂದ ಹೊರ ಬಂದ ತಿರ್ಮಾನಗಳನ್ನು ಪ್ರಸ್ತುತ ಪಡಿಸುವುದರ ಜೊತೆ ಜೊತೆಗೆ ಅಧ್ಯಯನದ ಮಾಹಿತಿಯ ಆಧಾರದ ಮೇಲೆ ಬುಡಕಟ್ಟು ಸಮುದಾಯಗಳಿಗಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಪ್ರಗತಿಯ ಕೆಲವು ಸಲಹೆ ಸೂಚನೆಗಳನ್ನು ಕೊಡಲಾಗಿದೆ.

****

ಅಡಿಟಿಪ್ಪಣಿಗಳು

೧. The Scheduled Tribes : anthropological survey of India – K.S. Singh – Page 6

೨. Social Welfare – VO – SSNO10 – Neetimahanti – Page 13

೩. ಕರ್ನಾಟಕದ ಬುಡಕಟ್ಟು ಜನಾಂಗಗಳ ಅಭಿವೃದ್ಧಿ – ಡಾ|| ಮಾಧು – ಪುಟ ೩

೪. ಅದೇ--------------"--------------------

೫. Anthropology : Race, Language Culture – Kroeber - Page 33

೬. Introduction to social anthropology – Piddington – Page 56

೭. Chaturbhujsalu, Inidan Tribal Life. New Delhi, Swarup and Swarup 2001 : Page 403

8. Upadaya H. C (Edited) Status of scheduled tribes in India N.D Anmol Pvt. Ltd 1999-P.41

೯. ಕೆ. ಎಂ. ಮೈತ್ರಿ ಬುಡಕಟ್ಟು ಕುಲಕಸುಬುಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೨ : ಪುಟ ೨೧

೧೦. Mains Kumar Raha: Tribal India, Problem Development, Prospect (N.D. Gain Pub house) P-2-4.

೧೧. Awadhesh Kumar Singh, Dynamics of Tribal Economy. New Delhi. Serials Pub. 2003 Page No. 27.

೧೨. ಸಮಾಜ ಕಲ್ಯಾಣ ಇಲಾಖಾ ವಾರ್ಷಿಕ ವರದಿ – ಕರ್ನಾಟಕ ಸರ್ಕಾರ ಪುಟ – ೩

೧೩. Mains Kumar Raha: Tribal India, Problem Development, Prospect (N.D. Gain Pub house) P-2-4.

೧೪. Awadhesh Kumar Singh, Dynamics of Tribal Economy. New Delhi. Serials Pub. 2003 Page No. 27.

೧೫. ಕರ್ನಾಟಕ ರಾಜ್ಯದ ಜನಸಂಖ್ಯಾ ಮಾರ್ಗಸೂಚಿ. ಕೈಪಿಡಿ . ೨೦೦೧ – ಪುಟ – ೧೯

೧೬. ಇರುಳಿಗರು ಜನಪದೀಯ ಅಧ್ಯಯನ – ಡಾ|| ಬೈರೆಗೌಡ – ಪುಟ ೧೧೭

೧೭. Tribe, Ecology and Development – Renuka Pattnaik . Page 182

೧೮. ಅದೇ-------------“-------------------

೧೯. ಪರಿಶಿಷ್ಟ ವರ್ಗಗಳ ನಿರ್ದೇಶನಾಲಯ – ಕರ್ನಾಟಕ ಸರ್ಕಾರ – ಪುಟ – ೩

೨೦. National Commission for Scheduled Cost and Scheduled Tribes (Karnataka III Report – 1994-95, 95-96) Volume - II

ಅಧ್ಯಾಯ: ೨

ಸೈದ್ಧಾಂತಿಕ ಮತ್ತು ನಿದರ್ಶನಾತ್ಮಕ ಅಧ್ಯಯನ

೧. ಸಮುದಾಯಗಳ ಹಲ- ಕೆಲವು ಅಧ್ಯಯನಗಳು

೨. ಕರ್ನಾಟಕ ರಾಜ್ಯದ ಸಂಕ್ಷಿಪ್ತ ಪರಿಚಯ.

೩. ಸಮುದಾಯಗಳ ಚಾರಿತ್ರಿಕ ಐತಿಹ್ಯ

೪. ಸಮುದಾಯಗಳ ಜೀವನಕ್ರಮದಲ್ಲಿ ಪರಿಸರ

೫. ಸಮುದಾಯಗಳು ನೆಲೆನಿಂತ ಪರಿಸರದ ನಿದರ್ಶನಾತ್ಮಕ ಅಧ್ಯಯನ.

ಅ. ಜೇನುಕುರುಬರ ಸಂಕ್ಷಿಪ್ತ ಪರಿಚಯ,

ಆ. ಕೊರಗರ ಸಂಕ್ಷಿಪ್ತ ಪರಿಚಯ.

ಸೈಧ್ಧಾಂತಿಕ ಮತ್ತು ನಿದರ್ಶನಾತ್ಮಕ ಅಧ್ಯಯನ

ಕರ್ನಾಟಕ ರಾಜ್ಯದ ವಿಶಾಲ ಭೌಗೋಳಿಕ ಪರಿಸರವು ಹಲವಾರು ಬುಡಕಟ್ಟು ಸಮುದಾಯಗಳ ತಾಣವಾಗಿದೆ. ಈ ಪರಿಸರದಲ್ಲಿ ವಿಭಿನ್ನ ವರ್ಗದ ಬುಡಕಟ್ಟು ಸಮುದಾಯಗಳು ವಾಸಿಸುತ್ತಾ ತಮ್ಮದೇ ಆದ ವಿಶಿಷ್ಟ ಚಾಪು ಮೂಡಿಸಿ ಕೊಂಡಿರುವುದು ಕಂಡುಬರುತ್ತದೆ. ಇಲ್ಲಿನ ಸಮುದಾಯಗಳು ಒಂದು ಸಮುದಾಯ ಮತ್ತೊಂದು ಸಮುದಾಯಕ್ಕಿಂತ ಭಿನ್ನವಾದ ಪರಿಸರ, ಜೀವನಕ್ರಮ, ಆಚಾರ, ವಿಚಾರಗಳಲ್ಲದೇ ತನ್ನದೇ ಆದ ಸಂಸ್ಕೃತಿಯನ್ನು ರೂಢಿಸಿಕೊಂಡಿವೆ. ಮತ್ತುಬುಡಕಟ್ಟು ಸಮುದಾಯಗಳಲ್ಲೆ ತೀರಾ ಹಿಂದುಳಿದ ಸಮುದಾಯಗಳೇ ಮೂಲನಿವಾಸಿ ಬುಡಕಟ್ಟುಗಳು. ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಚಾರಿತ್ರಿಕವಾಗಿ ತನ್ನದೇ ಆದ ಇತಿಹಾಸವನ್ನು ಸಹ ಹೊಂದಿವೆ. "ಸುಮಾರು ೭ನೇ ಶತಮಾನದಿಂದ ಈ ಸಮುದಾಯಗಳ ಇತಿಹಾಸ ತಿಳಿಯಬಹುದು ಎಂಬುದಾಗಿ ೧೮೯೧ ರ- ಮದ್ರಾಸು ಜನಗಣತಿ ವರದಿಯಲ್ಲಿ ಪ್ರಕಟಿಸಲಾಗಿದೆ".[೧] ಹೀಗೆ ಐತಿಹಾಸಿಕವಾಗಿ ಗುರುತಿಸಿ ಕೊಳ್ಳುವ ಸಮುದಾಯಗಳನ್ನು ಅನೇಕರು ವಿಧ, ವಿಧವಾಗಿ ಗುರುತಿಸಿದ್ದಾರೆ. ಅರಣ್ಯ ಸಂಸ್ಕೃತಿಯ ಪರಿಸರದಲ್ಲಿ ವಿಶೇಷವಾಗಿ ರೂಪಿಸಿಕೊಂಡಿದ್ದ ವೈಶಿಷ್ಟ್ಯಗಳ ವೈವಿಧ್ಯತೆಯಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಪ್ರತ್ಯೇಕತೆಯನ್ನು ಕಾಯ್ದುಕೊಂಡವುಗಳು ಊರ ಹೊರಗಿನಿಂದ ದೂರವೇ ಉಳಿದವುಗಳು. ತಮ್ಮದೇ ಆದ ಸ್ವರಾಜ್ಯದೊಂದಿಗೆ, ಪರಿಸರದೊಂದಿಗಿನ ಸಹಭಾಗಿತ್ವದ ಪೂಜನೀಯ ಭಾವನೆಯೊಂದಿಗೆ ಹಾಡಿಗಳನ್ನು ಕಟ್ಟಿಕೊಂಡು ಸಂತೃಪ್ತ ಜೀವನಕಂಡವರು. ಆಧುನಿಕ ವ್ಯವಸ್ಥೆಯ ನಾಗರೀಕ ಜಗತ್ತಿನ ಮಂತ್ರಗಳಿಂದ ಆಧುನೀಕರಣ, ಜಾಗತೀಕರಣ ಮತ್ತು ಉದಾರೀಕರಣದಂತಹ ವ್ಯವಸ್ಥೆಗೆ ಮುಖಾಮುಖಿಯಾಗಿ ಜೀವಿಸುವ ಅನಿವಾರ್ಯತೆ ಇಂದು ಈ ಸಮುದಾಯಗಳಿಗಿದೆ. ಈ ಸಂದರ್ಭದಲ್ಲಿ ಬುಡಕಟ್ಟು ಲಕ್ಷಣಗಳು ಮಾಯವಾಗುತ್ತಾ ಜಾತಿ ಸಮಾಜ ವ್ಯವಸ್ಥೆಯಲ್ಲಿ ಲೀನವಾಗುವ ಹತ್ತಿರಕ್ಕೆ ಬಂದಿವೆ ಎನ್ನ ಬಹುದಾಗಿದೆ.

ಅತ್ಯಂತ ಹಿಂದುಳಿದ, ಅರಣ್ಯವಾಸಿ, ಆದಿಮ, ಆದಿವಾಸಿ ಎಂದೆಲ್ಲ ಕರೆಯಲಾಗುವ ಮೂಲನಿವಾಸಿ ಬುಡಕಟ್ಟುಗಳು ಶತಮಾನಗಳಿಂದ ಅನಕ್ಷರತೆಯ ಶಾಪಕ್ಕೆ ಒಳಗಾಗಿರುವ, ಶೈಕ್ಷಣಿಕವಾಗಿ, ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಹಿಂದುಳಿದ ಸಮುದಾಯಗಳಾಗಿವೆ. ಇಂತಹ ಸಮುದಾಯಗಳಲ್ಲಿದ್ದ ಪ್ರಶಾಂತ ವಾತಾವರಣದಲ್ಲಿಯೂ ಸಾಮಾಜಿಕ ವಿಕಾಸ ಹಂತ ಹಂತವಾಗಿ ಬೆಳೆದು ಬರುತ್ತಿದೆ. ಜಾತಿ ವ್ಯವಸ್ಥೆಯಲ್ಲೇ ಅಂತ್ಯಜರು ಎಂದು ಪರಿಗಣಿಸಿದ್ದ, ನಾಗರೀಕ ಸಮಾಜದಲ್ಲಿ ಬದುಕಲು ಯೋಗ್ಯರಲ್ಲ ಎಂದು ತುಚ್ಚೀಕರಿಸಲ್ಪಟ್ಟವರು, ಮತ್ತು ಮುಖ್ಯಧಾರೆಯಿಂದಲೇ ಪ್ರತ್ಯೇಕಿಸಿ ಕಾಡಿಗೆ ತಳ್ಳಲ್ಪಟ್ಟವರು ಎಂದೆಲ್ಲ ಗುರುತಿಸುತ್ತಿದ್ದ

ಸಮುದಾಯಗಳಲ್ಲಿಯೂ ಇಂದು ಅನೇಕ ಬದಲಾವಣೆಗಳನ್ನು ಕಾಣಬಹುದು. ಈ ಬದಲಾವಣೆಗಳು ಸಮುದಾಯಗಳಿಗೆ ಹೊಸತಾದರೂ ಅನಿವಾರ್ಯವಾಗಿ ರೂಢಿಸಿಕೊಳ್ಳುತ್ತಿದ್ದಾರೆ. ಅವುಗಳ ಪರಿಚಯದೊಂದಿಗೆ ಸಮುದಾಯಗಳು ಪ್ರಸ್ತುತ ಅವಲಂಬಿಸಿದ ಭೌಗೋಳಿಕ ಪರಿಸರದಲ್ಲಿನ ಜೀವನಕ್ರಮದೊಂದಿಗಿನ ಮೂಲಭೂತ ಸೌಲಭ್ಯಗಳ ಸಂಕ್ಷಿಪ್ತ ಪರಿಚಯ ಮಾಡಲಾಗಿದೆ. ಜೀವನಕ್ರಮದಲ್ಲಿ ಒಂದೊಂದು ಸಮುದಾಯ ಒಂದೊಂದು ಪರಿಸರದಲ್ಲಿ ನೆಲಸಿವೆ. ಈ ಅಧ್ಯಾಯದಲ್ಲಿ ಸಮುದಾಯಗಳ ಪರಿಸರ ಘಟಕದ ರಚನೆಯು ಮುಖ್ಯವಾಗಿ ಸಮಗ್ರ ವಿವರಗಳೊಂದಿಗೆ ಸಮುದಾಯಗಳ ಜೀವನಕ್ರಮದಲ್ಲಿ ದಾಖಲಾದ ಮಾಹಿತಿಯೊಂದಿಗೆ ಪ್ರಸ್ತುತಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಮುದಾಯಗಳ ಪ್ರಸ್ತುತ ಪರಿಸರ ಜೀವನಕ್ರಮದ ಬಗೆಗೆ ಹೆಚ್ಚು ಕೇಂದ್ರೀಕರಿಸಲಾಗಿದೆ.

೧.ಸಮುದಾಯುಗಳ ಬಗೆಗಿನ ಹಲ-ಕೆಲವು ಅಧ್ಯಯನಗಳು

ಜೇನುಕುರುಬರ ಬಗೆಗೆ ನಡೆದಿರುವ ಅಧ್ಯಯನಗಳು ಕೆಲವಿವೆ. ಈಗಾಗಲೇ ಅವರ ಸಂಸ್ಕೃತಿಯ ಎಷ್ಟೋ ಅಂಶಗಳು ಕಣ್ಮರೆಯಾಗಿವೆ. ಹಾಗೆಯೇ ಅನೇಕ ವಿವರಗಳನ್ನು ಕೊಡುವ ಕೆಲವು ಅಧ್ಯಯನಗಳು ಲಭ್ಯವಿವೆ. ಆದರೆ ಲಿಖಿತರೂಪದಲ್ಲಿರುವ ಆಧಾರಗಳು ತೀರಾ ಕಡಿಮೆ. ಅನೇಕವು ಅಪ್ರಕಟಿತ. ಹೀಗಾಗಿ ಮಾಹಿತಿ ದೊರಕುವುದಿಲ್ಲ. ಸಿಗುವ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಉದ್ದರಿಸಲಾಗಿದೆ. ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರುಗಳು The Mysore Tribes and Caste 1926 – 35 ರಲ್ಲಿ ಹೊರತಂದ ೪ ಸಂಪುಟಗಳಲ್ಲಿನ ಗ್ರಂಥದಲ್ಲಿ ಜೇನುಕುರುಬರ ತಾಣಗಳನ್ನು ಸಂಪರ್ಕಿಸಿ, ಕ್ಷೇತ್ರಕಾರ್ಯ ನಡೆಸಿ ಮಾಹಿತಿಸಂಗ್ರಹಿಸಿದ್ದಾರೆ. ಉಪಯುಕ್ತವಾದ ಮಾಹಿತಿಯನ್ನು ಬಿಡಿಲೇಖನಗಳಲ್ಲಿ ಪ್ರಕಟಿಸಿದ್ದಾರೆ. ಉದಾಹರಣೆಗೆ Development planning for the Dalit in Mysore District ಎಂಬ ಲೇಖನದಲ್ಲಿ "ಮಿಶ್ರ"ರವರು ಜನಸಂಖ್ಯೆ ಹಾಗೂ ತಾಲ್ಲೂಕುಗಳ ಬಗ್ಗೆ ಮಾಹಿತಿ ನೀಡಿದ್ದಾರೆ[*೨]. ಜೇನುಕುರುಬರ ಆರ್ಥಿಕ ಬೆಳವಣಿಗೆಯ ಬಗ್ಗೆ "ಮಿಶ್ರ"ರವರು ತಮ್ಮ ಇನ್ನೊಂದು ಲೇಖನ ಅಂದರೆ 'Economic development among the Jenu Kurubas' ದಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆಯ ತಾಲ್ಲೂಕಿನ ಬೇಗೂರು ಗ್ರಾಮದ ಜೇನುಕುರುಬರ ಬಗ್ಗೆ ಮಾಹಿತಿ ನೀಡಿದ್ದಾರೆ[*೩]. ಅಲ್ಲದೇ ಮಿಶ್ರರವರು ೧೯೬೮ರ ಅವರ ಅನೇಕ ಪ್ರಬಂಧಗಳಲ್ಲಿ ಜೇನುಕುರುಬರ ಸಾಮಾಜಿಕ ಜೀವನದ ವಿವರಣೆ ನೀಡಿದ್ದಾರೆ.

೧೯೮೨ರಲ್ಲಿ ಮಿಶ್ರ ಮತ್ತು ರಾಜಲಕ್ಷ್ಮಿರವರ ತಾತ್ವಿಕಚಿಂತನೆಯಲ್ಲಿ ದಕ್ಷಿಣ ಭಾರತದ ಐದು ಪರಿಶಿಷ್ಟ ಬುಡಕಟ್ಟುಗಳ ಸಾಮಾಜಿಕ ಜೀವನದ ಬದಲಾವಣೆಗಳ ಬಗ್ಗೆ ವಿವರಿಸುವಾಗ ಜೇನುಕುರುಬರ ಬಗ್ಗೆಯೂ ಮಾಹಿತಿ ನೀಡಿದ್ದಾರೆ. "೧೯೯೩ರಲ್ಲಿ ಮುತ್ತುರಾಯಪ್ಪನವರು Socio-Cultural Factors and Marriage among Jenu Kuruba and Kadu Kuruba

tribes of Karnataka ಎಂಬ ಲೇಖನದಲ್ಲಿ ಜೇನುಕುರುಬರ ವೈವಾಹಿಕ ಜೀವನದ ಬಗ್ಗೆ ವಿವರಣೆ ನೀಡಿದ್ದಾರೆ". ೧೯೭೪ರಲ್ಲಿ ಎಲ್.ಪಿ. ವಿದ್ಯಾರ್ಥಿರವರು ದಕ್ಷಿಣಭಾರತದ ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡುವಾಗ ಜೇನುಕುರುಬರ ಉಡುಪುಗಳು, ಧರ್ಮ, ವಾಸಸ್ಥಳದ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆದಿದ್ದಾರೆ. ೧೯೯೧ರಲ್ಲಿ ವಿನಯಚಂದ್ರರವರು ತಮ್ಮ ಕ್ಷೇತ್ರಕಾರ್ಯವರದಿಯಲ್ಲಿ ಜೇನುಕುರುಬರ ಜೀವನಕ್ರಮ ವೈವಾಹಿಕ ಜೀವನ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ೧೯೯೯ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರರಂಗವು ಹೊರ ತಂದಿರುವ ಬುಡಕಟ್ಟು ಕೋಶಗಳ ಸಂಪುಟದಲ್ಲಿ ಜೇನುಕುರುಬರ ಬಗ್ಗೆ ಹೆಚ್ಚಿನ ಮಾಹಿತಿ ನೀಡಿದ್ದಾರೆ.

ಉಪಸಂಸ್ಕೃತಿ ಮಾಲೆಯ ಪುಸ್ತಕದಲ್ಲಿ ಎ.ಸಿ. ಲಲಿತರವರು ಕಾಡುಕುರುಬರು ಮತ್ತು ಜೇನುಕುರುಬರ ಸಂಸ್ಕೃತಿ ಬಗ್ಗೆ ಮಾಹಿತಿ ನೀಡಿದ್ದಾರೆ. ರಾಜ್ಯದ ದಿನಪತ್ರಿಕೆಗಳಾದ ಪ್ರಜಾವಾಣಿ, ಕನ್ನಡಪ್ರಭ, ಡೆಕ್ಕನ್ ಹೆರಾಲ್ಡ್ ಮುಂತಾದ ಪತ್ರಿಕೆಗಳಲ್ಲದೆ, ಮೈಸೂರಿನ ದಿನಪತ್ರಿಕೆಗಳಾದ ಆಂದೋಲನ; ಮಹಾನದಿ, ಮೈಸೂರು ಮಿತ್ರ ಮುಂತಾದ ದಿನಪತ್ರಿಕೆಗಳಲ್ಲಿ ಜೇನುಕುರುಬರ ಬಗ್ಗೆ ಹಲವಾರು ಬಿಡಿ ಲೇಖನಗಳು ಪ್ರಕಟವಾಗಿವೆ.

ವಾಲ್‌ಹೌಸ್‌ರವರು ಸಾಕಷ್ಟು ಹಿಂದೆ ಬರೆದಿರುವ ಕಾರಣ ಕೊರಗರ ಸಂಸ್ಕೃತಿಯ ಅಧಿಕೃತ ಮತ್ತು ಐತಿಹಾಸಿಕವಾದ ಆದಿ ಪುರಾತನ ಗುಲಾಮಗಿರಿಯ ಬಗ್ಗೆ ತಿಳಿಸಿಕೊಡುತ್ತದೆ. ೧೯೦೦ರಲ್ಲಿ ಥರಸ್ಟನ್‌ರವರು ೭ ಸಂಪುಟಗಳಲ್ಲಿ (The caste and Tribes of Southern India) ಸಂಪುಟದಲ್ಲಿ ಗುಹೆಗಳಲ್ಲಿದ್ದ ಕೊರಗರ ಬಗ್ಗೆ ವಿವರಿಸಿದ್ದಾರೆ. ೧೮೯೧ ಮದ್ರಾಸು ಜನಗಣತಿ ವರದಿಯಲ್ಲಿಯೂ ಕೊರಗರ ಬಗ್ಗೆ ಮಾಹಿತಿ ತಿಳಿದುಬರುತ್ತದೆ. ಹೀಗೆ ಕೊರಗರ ಬಗ್ಗೆ ಹಲವು ಮೂಲಗಳಲ್ಲಿ ಅಧ್ಯಯನಗಳು ನಡೆಯುತ್ತಲೇ ಇವೆ. ನಾಗರೀಕ ಪ್ರಪಂಚದಲ್ಲಿ ಪಂಚಮರಲ್ಲಿ ಪಂಚಮರೆಂದು ಗುರುತಿಸಲಾಗಿರುವ ಆದಿಮೂಲದ ಸಮುದಾಯವನ್ನು ದಶಕಗಳ ಹಿಂದೆಯೇ ವಿಭಿನ್ನವಾಗಿ ಅಧ್ಯಯನಿಸಿದ್ದಾರೆ. ಪಿ. ಕಮಲಾಕ್ಷರವರು ದಕ್ಷಿಣಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನರ ಸಾಮಾಜಿಕ ಇತಿಹಾಸದ ಎಂಬ ಪುಸ್ತಕದಲ್ಲಿ ಕೊರಗರ ಅಧ್ಯಯನದ ದಾಖಲಾಗಿದೆ.

೧೯೫೬ರಲ್ಲಿ ಪರಿಶಿಷ್ಟವರ್ಗವೆಂದೂ ರಾಷ್ಟ್ರಪತಿಗಳ ಅಂಕಿತಪಡೆದ ಮೇಲೆ ಕ್ಷೇತ್ರಕಾರ್ಯಮಾಡಿ ಕೊರಗರ ಜೀವನಕ್ರಮದ ಬಗ್ಗೆ ಅನೇಕ ಸಾಮಾಜಿಕ ನೇತಾರರು ಲೇಖನಗಳಲ್ಲಿ ಉಪಯುಕ್ತಮಾಹಿತಿ ದಾಖಲಿಸಿದ್ದಾರೆ. ೧೯೮೨ರಲ್ಲಿ ಪ್ರೊ॥ ಅಮೃತ ಸೋಮೇಶ್ವರರು ಕೊರಗರ ಆರ್ಥಿಕ-ಸಾಮಾಜಿಕ ಜೀವನದ ಪರಿವರ್ತನೆ ಬಗ್ಗೆ ಮಾಹಿತಿ ನೀಡಿದ್ದಾರೆ. ಡಾ॥ ಅರವಿಂದ ಮಾಲಗತ್ತಿ ಮತ್ತು ಒಡೆಯರ್ ಡಿ. ಹೆಗ್ಗಡೆರವರು ಕೊರಗ ಜನಾಂಗದ ವಿಶ್ಲೇಷಾಣಾತ್ಮಕ ಅಧ್ಯಯನದಲ್ಲಿ ಆಯಾ ಕಾಲಘಟ್ಟದ ಉಪಯುಕ್ತ ಮಾಹಿತಿ ನೀಡಿದ್ದಾರೆ. ಡಾ॥ ಎಲ್.ಜಿ. ಹಾವನೂರ ರವರ ಪರಿಶಿಷ್ಟಜಾತಿ ವರ್ಗದ ಪರಿಶೀಲನಾ

ವರದಿಯಲ್ಲಿ ಕೊರಗರನ್ನು ಕುರಿತು ಅಧ್ಯಯನಿಸಿದ್ದಾರೆ. ೧೯೯೧ರಲ್ಲಿ Lawrence D Souza ರು Korag's a Primitive Tribe of South India ಎಂಬ ಪುಸ್ತಕ ಪ್ರಕಟಿಸಿದ್ದಾರೆ. ಉಲ್ಲಾಳು ರಾಘವೇಂದ್ರರಾವ್‌ರವರು ಅನೇಕ ಬಿಡಿ ಲೇಖನಗಳನ್ನು ಪ್ರಕಟಿಸಿದ್ದಾರೆ. ದಕ್ಷಿಣಕನ್ನಡ ಜಿಲ್ಲಾ ಪರಿಷತ್ತು ಕೊರಗರನ್ನು ಕುರಿತು ಹೊರತಂದಿರುವ ಕೊರಗ ಜನಾಂಗದ ವಿಶ್ಲೇಷಣಾತ್ಮಕ ಅಧ್ಯಯನ ಮತ್ತು ಮಂಗಳೂರಿನ ಯುನೆಸ್ಕೋ ಕ್ಲಬ್‌ರವರ ಕೊರಗ ಜನಾಂಗದ ಕ್ರಿಯಾವರದಿ, ಅಲ್ಲದೆ ಕೊರಗರ ಬಗ್ಗೆ ವಿಶೇಷ ಅಧ್ಯಯನ ಮಾಡಿರುವ ಡಾ॥ ಮಹಮದ್ ಪೀರ್ ರವರ ಕ್ರಿಯಾವರದಿ ಮತ್ತು ಬಿಡಿ ಲೇಖನಗಳು ಸಂಶೋಧನೆಯಲ್ಲಿ ತೊಡಗಿರುವರಿಗೆ ಉಪಯುಕ್ತವಾಗಿವೆ. ಕನ್ನಡ ವಿಶ್ವ ವಿದ್ಯಾಲಯ ಹಂಪಿ ಹೊರತಂದಿರುವ ಬುಡಕಟ್ಟು ಕೋಶಗಳಲ್ಲಿ ಮತ್ತು ಪ್ರೊ॥ ಪುರುಷೋತ್ತಮ ಬಿಳಿಮಲೆರವರ "ಕೊರಗರು" ಸಾಹಿತ್ಯ ಅಕಾಡೆಮಿಯ ಪುಸ್ತಕ, ಉಪಸಂಸ್ಕೃತಿ ಮಾಲೆ ಉಪಯುಕ್ತವಾದ ಮಾಹಿತಿ ನೀಡುತ್ತವೆ. ಆದರೆ ಜೇನುಕುರುಬ ಮತ್ತು ಕೊರಗರ ಬಗೆಗಿನ ಪರಿಸರಮಾಹಿತಿ ಒದಗಿಸುವ ಒಂದೇ ಅಧ್ಯಯನವಿಲ್ಲ. ಈ ದಿಸೆಯಲ್ಲಿ ಸಂಶೋಧನೆಯ ಅವಶ್ಯಕತೆ ಅರ್ಥಶಾಸ್ತ್ರದ ವೈಜ್ಞಾನಿಕ ದೃಷ್ಟಿಯಿಂದ ಮುಖ್ಯವಾಗಿದೆ. ಈ ಮೊದಲೇ ಹೇಳಿದ ಉದ್ದೇಶಗಳಂತೆ ಈ ಸಂಶೋಧನೆ ಕೈ ಗೊಳ್ಳಲಾಗಿದೆ.

೨.ಕರ್ನಾಟಕ ರಾಜ್ಯದ ಸಂಕ್ಷಿಪ್ತ ಪರಿಚಯ

ಭಾರತದ ಸಾಂಸ್ಕೃತಿಕ-ಸಾಮಾಜಿಕ, ಆರ್ಥಿಕ ನಕ್ಷೆಯಲ್ಲಿ ದಕ್ಷಿಣ ಭಾರತದ ವಿಶೇಷತೆಗಳು ಹಲವಾರು. ದಕ್ಷಿಣಭಾರತದಲ್ಲಿನ ಕರ್ನಾಟಕ ರಾಜ್ಯದ ಕೊಡುಗೆ ರಾಷ್ಟ್ರಮಟ್ಟದಲ್ಲಿ ಪ್ರಮುಖ ಸ್ಥಾನವನ್ನೇ ಗಳಿಸಿರುವುದು ಕಂಡುಬರುತ್ತದೆ. ಕರ್ನಾಟಕ ರಾಜ್ಯವು ವಿಸ್ತೀರ್ಣದಲ್ಲಿ ದೇಶದ ಎಂಟನೆಯ ದೊಡ್ಡ ರಾಜ್ಯ. ಜನಸಂಖ್ಯೆಯಲ್ಲಿ ಏಳನೆಯದಾಗಿ ದೊಡ್ಡದು. "ಹಿಂದೆ ಮೈಸೂರು ರಾಜ್ಯವೆಂದೇ ಹೆಸರಾಗಿದ್ದು ೧೯೭೩ರ ನವಂಬರ್‌ನಲ್ಲಿ ಕರ್ನಾಟಕವೆಂದು ನಾಮಕರಣವಾಯಿತು"[*೫]. ದಕ್ಷಿಣದಲ್ಲಿ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಪಶ್ಚಿಮದಲ್ಲಿ ಕರಾವಳಿ ತೀರ ಪ್ರದೇಶ ಮತ್ತು ಮಲೆನಾಡು ಪ್ರದೇಶ, ಉತ್ತರದ ಬಯಲುಗಳು, ಉತ್ತರದಲ್ಲಿ ಮಹಾರಾಷ್ಟ್ರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶದ ನಡುವೆ ಕರ್ನಾಟಕವಿದೆ. ಕೃಷಿ ರಾಜ್ಯದ ಜನರ ಪ್ರಮುಖ ವೃತ್ತಿ. ಸುಮಾರು ೭೬% ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೆ, ಕಾರ್ಮಿಕ ಶಕ್ತಿಯ ೬೫% ರಷ್ಟು ಜನರು ಕೃಷಿಯಲ್ಲಿಯೇ ನಿರತರು. ರಾಜ್ಯದ ಆದಾಯದಲ್ಲಿ ಕೃಷಿಯದೇ ಅರ್ಧಪಾಲು". "ಒಟ್ಟಾರೆ ೧೨೫ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವ್ಯವಸಾಯವನ್ನು ಮಾಡಲಾಗುತ್ತಿದೆ. ವ್ಯವಸಾಯದ

ಭೂಮಿಯಲ್ಲಿ ೨೧.೭% ರಷ್ಟು ಭೂಮಿ ನೀರಾವರಿಯ ಸೌಲಭ್ಯವನ್ನು ಹೊಂದಿದೆ. ಒಟ್ಟು ಭೂವಿಸ್ತೀರ್ಣದ ೧೬.೦೮% ರಷ್ಟು ಭಾಗ ಅರಣ್ಯದಿಂದ ಕೂಡಿದೆ. ಅರಣ್ಯಕ್ಷೇತ್ರದ ವಿಸ್ತೀರ್ಣ ೩೦.೬೨ ಲಕ್ಷ ಹೆಕ್ಟೇರ್‌ಗಳು. ಪ್ರತಿ ಹೆಕ್ಟೇರಿನಲ್ಲಿ ಅರಣ್ಯ ಉತ್ಪನ್ನಗಳನ್ನು ಲೆಕ್ಕಿಸಿದರೆ ರಾಜ್ಯ ದೇಶದಲ್ಲಿ ಎರಡನೇ ಸ್ಥಾನ"*[೬] ಪಡೆದಿದೆ.

ವಿಸ್ತೀರ್ಣ	:	೧,೯೧,೭೯೧ ಚ. ಕಿ. ಮೀ.
ಜನಸಂಖ್ಯೆ	:	೫,೨೭,೩೩,೯೫೮
ಬುಡಕಟ್ಟುಗಳ ಜನಸಂಖ್ಯೆ	:	೩೪.೬೩.೯೮೬
ಮೂಲನಿವಾಸಿ ಬುಡಕಟ್ಟುಗಳ ಜನಸಂಖ್ಯೆ	:	೩೭,೯೯೨
ರಾಜಧಾನಿ	:	ಬೆಂಗಳೂರು
ಸಾಕ್ಷರತೆ	:	೬೭%
		ಮಹಿಳೆಯರು : ೫೭.೪೫%
		ಪುರುಷರು : ೭೬.೨೯%
ಲಿಂಗಪ್ರಮಾಣ	:	೯೬೪ (೧೦೦೦ ಪುರುಷರಿಗೆ ಮಹಿಳೆಯರು)
ಜಿಲ್ಲೆಗಳು	:	೨೭
ಗ್ರಾಮಗಳು	:	೨೭೦೨೪
ಅಭಿವೃದ್ಧಿ ಪ್ರಮಾಣ	:	೧೭.೩% (೧೯೯೧-೨೦೦೧)
ಜನಸಾಂದ್ರತೆ	:	೨೭೫ (ಪ್ರತಿ ಚ. ಕಿ. ಮೀ. ಗೆ ಜನರು)*[೭]

(ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು)

ರಾಜ್ಯದ ಬೀದರ್‌ನಿಂದ ಹಿಡಿದು ಚಾಮರಾಜನಗರದವರೆಗೆ ಮತ್ತು ಕೋಲಾರದಿಂದ ಹಿಡಿದು ಪಶ್ಚಿಮ ಕರಾವಳಿಯ ವರೆಗಿನ ಭೌಗೋಳಿಕ ವ್ಯಾಪ್ತಿಯು ಹಲವು ಅದ್ಭುತಗಳ ತಾಣವು ಹೌದು. "ಕರ್ನಾಟಕ ರಾಜ್ಯವು ದಕ್ಷಿಣಭಾರತದ ನೈರುತ್ಯ ಭಾಗದಲ್ಲಿ ೧೧°೩೦ ರಿಂದ ೧೯°೦೦ ಅಕ್ಷಾಂಶ ಹಾಗೂ ೭೪°೭೮ ರೇಖಾಂಶಗಳ ವಿಸ್ತೀರ್ಣದಲ್ಲಿ ವ್ಯಾಪಿಸಿದೆ. ಕರಾವಳಿಯಿಂದ ಹಾದು ಪಶ್ಚಿಮ ಘಟ್ಟಗಳಲ್ಲಿ ೧೮೦೦ ಮೀ.ಗಳ ಔನ್ನತ್ಯಕ್ಕೆ ಏರಿ ಪೂರ್ವಕ್ಕೆ ಹೋದಂತೆ ೧೦೦ ಮೀ. ಎತ್ತರಕ್ಕೆ ಇಳಿಯುವ ಪ್ರದೇಶಗಳನ್ನು ಹೊಂದಿದೆ"*[೮]. ಉಷ್ಣಾಂಶದಲ್ಲಿ ೧೨°C ನಿಂದ ೪೫°C ಡಿಗ್ರಿಗಳ ಪರಿಮಿತಿಯಲ್ಲಿದ್ದು, ಮಳೆಯ ಪ್ರಮಾಣದಲ್ಲಿ ವಿಶೇಷ ವ್ಯಾತ್ಯಾಸಗಳು ಕಂಡುಬರುತ್ತದೆ. ಪಶ್ಚಿಮ ಘಟ್ಟದಲ್ಲಿ ಮಳೆಯು ಸುಮಾರು ೬೦೦-೭೦೦ ಸೆಂ.ಮೀ. ವರೆಗಿದ್ದು ಪೂರ್ವಕ್ಕೆ ಹೋದಂತೆ ಇಳಿಮುಖವಾಗಿ ಕಂಡು ಕೇವಲ ೧೫ ಸೆಂ. ಮೀ. ಬರಪ್ರದೇಶಗಳು ಕಂಡು ಬರುತ್ತದೆ.*[೯] ವಿಶಾಲಕರ್ನಾಟಕ ರಾಜ್ಯದ ಭೌಗೋಳಿಕ ವಿಸ್ತೀರ್ಣದಲ್ಲಿ ಸುಮಾರು ೫೦

ಬುಡಕಟ್ಟು ಸಮುದಾಯಗಳು ನೆಲೆಸಿವೆ. ಅದಿಕೃತವಾಗಿ ಪರಿಶಿಷ್ಟವರ್ಗದ ಇಲಾಖೆಯ ಪಟ್ಟಿಯಲ್ಲಿ ಗುರುತಿಸಲಾಗಿದೆ. ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ರಾಜ್ಯದ ೨೭ ಜಿಲ್ಲೆಗಳಲ್ಲಿನ ಒಟ್ಟು ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಹಾಗೂ ಪ್ರಮಾಣವನ್ನು ವಿವಿಧ ತಾಲ್ಲೂಕುಗಳು, ಜಿಲ್ಲೆಗಳಿಗೆ ಅನುಗುಣವಾಗಿ ಗುರುತಿಸಲಾದ ಮಾಹಿತಿಯನ್ನು ೨೦೦೧ನೇ ಜನಗಣತಿಯ ಪ್ರಕಾರ ಅನುಬಂಧದಲ್ಲಿರಿಸಲಾಗಿದೆ. ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಭಾರತದೇಶದ ಉತ್ತರದ ಹಿಮಾಲಯದಿಂದ ಹಿಡಿದು, ಮಧ್ಯಪ್ರದೇಶದ ಅರಣ್ಯವನ್ನು ಹಾದು ದಕ್ಷಿಣಭಾರತದ ನೀಲಗಿರಿ ಬೆಟ್ಟ ಸಾಲುಗಳ ವ್ಯಾಪನೆಯಲ್ಲಿ ಅಯಾ ಪರಿಸರ ಪ್ರಾಂತ್ಯಗಳಲ್ಲಿ ವಿವಿಧ ಹೆಸರುಗಳಿಂದ ಗುರುತಿಸಿರುವುದು ಕಂಡುಬರುತ್ತದೆ. ಉದಾ: ಮಹಾರಾಷ್ಟ್ರದಲ್ಲಿ ಕೋಲಮ್(Kolam) , ಕಟ್‌ಕರಿ(Katkari), ಮಾದಿಯಾಗೊಂಡ (Madiagonda), ಕರ್ನಾಟಕ ರಾಜ್ಯದಲ್ಲಿ ಜೇನುಕುರುಬ (Jenukuruba) ಮತ್ತು ಕೊರಗ (Koraga). ಹೀಗೆ ಭೌಗೋಳಿಕ ಸಾಂಸ್ಕೃತಿಕವಾಗಿ ಮೂಲನಿವಾಸಿ ಬುಡಕಟ್ಟುಗಳನ್ನು ಅನೇಕ ರೀತಿ ಗುರುತಿಸಿರುವುದು ಕಂಡುಬರುತ್ತದೆ. ವಿಶೇಷವಾಗಿ ಮೂಲನಿವಾಸಿ ಬುಡಕಟ್ಟುಗಳನ್ನು ಪುರಾತನಕಾಲದ ಪುರಾಣ ಮತ್ತು ವೇದಗಳ ಕಾಲದಿಂದ ಜಾರಿಯಲ್ಲಿರುವ ಜಾತಿ ವ್ಯವಸ್ಥೆಯ ಜೊತೆಗೆ ಸೇರದೆ, ಜಾತಿವ್ಯವಸ್ಥೆಯಿಂದ ಪ್ರತ್ಯೇಕವಾಗಿ ಗುಡ್ಡಗಾಡು, ಕೊಳ್ಳ-ಕಣಿವೆಗಳಲ್ಲಿ ಉಳಿದುಕೊಂಡು ಜೀವಿಸಿರುವ ಲಕ್ಷಣಗಳ ಮೇಲೆ ಮಾನವಶಾಸ್ತ್ರೀಯ ವಿಜ್ಞಾನಿಗಳು ಗುರುತಿಸಿದ್ದಾರೆ. ತಮ್ಮ ವಿಶಿಷ್ಟ ಸಂಸ್ಕೃತಿಯ ಘಟಕಗಳಾದ ನಂಬಿಕೆಗಳು, ಸಂಪ್ರದಾಯ, ಸಾಹಿತ್ಯ, ಕುಶಲಕಲೆ, ಉತ್ಪಾದನೆ, ಪರಿಸರದ ಸಂಕೀರ್ಣತೆಯ ಸಂಸ್ಕೃತಿಯಿಂದ ಶ್ರೀಮಂತಗೊಂಡಿರುವ ಸಮುದಾಯಗಳನ್ನ ಮಾನವಶಾಸ್ತ್ರೀಯ ವಿಜ್ಞಾನಿಗಳು ಮತ್ತು ಸಮಾಜ ವಿಜ್ಞಾನಿಗಳು ತಮ್ಮದೇ ತಾತ್ವಿಕ ಪ್ರಸ್ತಾಪದೊಂದಿಗೆ ಗುರುತಿಸಿರುವುದು ಕಂಡುಬರುತ್ತದೆ.

ಬಹುಪ್ರಾಚೀನ ಕಾಲದ ಪಳವಳಿಕೆಗಳನ್ನಿಟ್ಟುಕೊಂಡ ಮೂಲನಿವಾಸಿ ಬುಡಕಟ್ಟುಗಳನ್ನು ವಿಶೇಷವಾಗಿ ಅರಣ್ಯವಾಸಿ, ಆದಿಮೂಲನಿವಾಸಿಗಳು ಎಂದೇ ಮೈಸೂರಿನ ಮಾನವಶಾಸ್ತ್ರೀಯ ಇಲಾಖೆಯು ಗುರುತಿಸಿರುವುದು ಕಂಡುಬರುತ್ತದೆ. ವಾಸ್ತವವಾಗಿ ಈ ಮೂಲನಿವಾಸಿಗಳ ಪರಿಸರ, ಜೀವನಕ್ರಮ, ವಾಸಸ್ಥಾನ ಒಂದು ವಿಶೇಷವೆನ್ನಲಡ್ಡಿಯಿಲ್ಲ. ಅರಣ್ಯ ಹಾಗೂ ಘಟ್ಟಪ್ರದೇಶಗಳಲ್ಲಿ ಬಹು ಪುರಾತನ ಕಾಲದಿಂದ ಸ್ವಚ್ಛಂದ ಬದುಕಿನ ಸವಿ ಉಂಡ ಮುಲನಿವಾಸಿ ಬುಡಕಟ್ಟುಗಳಿಗೆ, ಭಾರತ ಸರ್ಕಾರದ ವೈಜ್ಞಾನಿಕ ನಿರ್ವಹಣೆಯ ಫಲದ ರೂಪವಾಗಿ ಬಂದ ಅಭಿವೃದ್ಧಿಕ್ರಮ ಅರಣ್ಯದಿಂದ ಹೊರಹಾಕುವಂತೆ ಮಾಡಿರುವುದು ಕಂಡುಬರುತ್ತದೆ. "೧೮೪೮ಳರಲ್ಲಿ ಡಾ|| ವೊಯಿಲ್‌ಕರ್ ಎಂಬ ಜರ್ಮನ್ ತಜ್ಞನ ಅರಣ್ಯನಿರ್ವಹಣೆಯ ವರದಿಯ ಅನ್ವಯ"[೧೧] ನಮ್ಮ ನಾಡಿನ ಅಥವಾ ದೇಶದ ಅರಣ್ಯನೀತಿಗಳು, ಕಾಯಿದೆಗಳು ಜಾರಿಗೊಳ್ಳುತ್ತಾ ಬಂದ ಪರಿಣಾಮ ಮೂಲನಿವಾಸಿ

ಬುಡಕಟ್ಟುಗಳ ಸ್ವಚ್ಛಂದ ಬದುಕಿಗೆ ಕಡಿವಾಣ ಹಾಕಿರುವುದು ಕಂಡುಬರುತ್ತದೆ. ಮೂಲನಿವಾಸಿ ಬುಡಕಟ್ಟುಗಳ ಪ್ರಾಕೃತಿಕ ಪರಿಸರ ಅರಣ್ಯವಾಗಿದ್ದು, ಆ ಪ್ರದೇಶವು ಸಾಮ್ರಾಜ್ಯ ಮತ್ತು ರಾಜಶಾಹಿ ಆಡಳಿತಕ್ಕೆ ಒಳಪಟ್ಟಿದದ್ದು ಮತ್ತು ಐತಿಹಾಸಿಕವಾಗಿ ಚರಿತ್ರೆಯಲ್ಲಿ ದಾಖಲೆಯಾಗಿರುವುದು ಕಾಣಬರುತ್ತದೆ.

ಮೂಲನಿವಾಸಿ ಬುಡಕಟ್ಟುಗಳು ದಟ್ಟ ಅರಣ್ಯ ಬೆಟ್ಟಗುಡ್ಡಗಳನ್ನೇ ವಾಸಸ್ಥಾನವಾಗಿರಿಸಿಕೊಂಡಿರುವುದು ಪ್ರಾಕೃತಿಕ ಪರಿಸರದೊಂದಿಗಿನ ನಂಟು ಎನ್ನಬಹುದು. ೭ನೇ ಶತಮಾನದಲ್ಲಿ ಉದ್ಭವಿಸಿದ ಸಾಮ್ರಾಜ್ಯಗಳ ನಿರ್ಮಾಣದ ಹೋರಾಟ, ಘರ್ಷಣೆಗಳು ಕಾರಣವಾಗಿ ಸೋತ ಜನ ಸಮುದಾಯಗಳು ಅರಣ್ಯಗಳತ್ತ ಮುಖಮಾಡಿದರು ಎನ್ನುವುದು, ಸಮುದಾಯಗಳ ಮೂಲ ಕಂಡುಹಿಡಿಯುವಲ್ಲಿ ಹಲವಾರು ಅಧ್ಯಯನಕಾರರು, ಸಂಶೋಧಕರು ಗುರುತಿಸಿದ್ದಾರೆ. ಹೋರಾಟದಲ್ಲಿ ಸೋತ ಸಮುದಾಯ ಜೀವನಾವ್ಯವಸ್ಥೆ ನಿರ್ವಹಣೆಗೆ ಅವಶ್ಯಕತೆ ಹೆಚ್ಚಾದರಿಂದ ಅರಣ್ಯಪರಿಸರದ ಅವಲಂಬನೆ ಅವಶ್ಯಕವಾಯಿತು ಎನ್ನಲಾಗುತ್ತಿದೆ. ಅರಣ್ಯಪರಿಸರ ಸಂಪನ್ಮೂಲಗಳನ್ನು ಒದಗಿಸಿಕೊಡುವ ತಾಣವಾಗಿತ್ತು. ಆದರಿಂದಲೇ ಸಮುದಾಯಗಳ ಮತ್ತು ನಿಸರ್ಗದ ಸಂಬಂಧವು ವ್ಯಾಪಕವಾಗಿ ಅವಲಂಬನೆಗೊಂಡಿತ್ತು. ಈ ಪ್ರಕ್ರಿಯೆಯು ಯುಗಾಂತರದಲ್ಲಿ ಮುಂದುವರೆದು ಬಂದ ಪರಿಣಾಮ ಮಾನವನ ಮತ್ತು ಅರಣ್ಯ ಜೀವರಾಶಿಗಳನ್ನೊಳಗೊಂಡು ಪ್ರಾಕೃತಿಕ ಪರಿಸರ ಅಪಾರ ಶಕ್ತಿನೀಡಿದೆ ಎನ್ನಬಹುದು. ಈ ಹಿನ್ನೆಲೆಯಲ್ಲಿ ನಿಸರ್ಗ ಮತ್ತು ಅರಣ್ಯದ ನೈಸರ್ಗಿಕ ಪರಿಸರದ ಅವಲಂಬನೆ ಹೆಚ್ಚಾಗಿದೆ ಎನ್ನಲಡ್ಡಿಯಿಲ್ಲ.

ಸಮುದಾಯಗಳ ಪ್ರಾಕೃತಿಕ ಪರಿಸರ ನಕ್ಷೆ ಅನುಬಂಧ ೧ ರಲ್ಲಿ ತೋರಿಸಲಾದಂತೆ, ರಾಜ್ಯದ ಗಡಿ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಕೊಡುಗು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿನ ಅರಣ್ಯಪ್ರದೇಶವನ್ನು ಹೊಂದಿದೆ. ಅರಣ್ಯ ಪ್ರದೇಶವು ಉತ್ತರಭಾರತದ ಗಿರಿಕಂದರಗಳ ಜೊತೆಗೆ ದಕ್ಷಿಣದ ನೀಲಗಿರಿಯವರೆಗೆ ಹಬ್ಬಿರುವ ಕಾರಣ ಮೂಲನಿವಾಸಿ ಬುಡಕಟ್ಟುಗಳು ಅರಣ್ಯವನ್ನೇ ಅವಲಂಬಿಸಿವೆ. ಭಾರತದಲ್ಲೆಲ್ಲಾ ಕಂಡುಬರುವ ಎಲ್ಲಾ ಮೂಲನಿವಾಸಿ ಬುಡಕಟ್ಟುಗಳು ಬಹುತೇಕ ಇಂತಹ ದಟ್ಟ ಅರಣ್ಯವನ್ನೇ ವಾಸಸ್ಥಾನವಾಗಿ ಅವಲಂಭಿಸಿವೆ. ಕರ್ನಾಟಕ ರಾಜ್ಯವನ್ನು ಆಡಳಿತದ ದೃಷ್ಟಿಕೋನದಿಂದ ೪ ಕಂದಾಯ ವಿಭಾಗಗಳಾಗಿ ರಚನೆಮಾಡಲಾಗಿದೆ. ಅವುಗಳೆಂದರೆ, "೧. ಬೆಂಗಳೂರು ನಗರ, ೨. ಬೆಳಗಾಂ ವಿಭಾಗ, ೩. ಗುಲ್ಬರ್ಗಾ ವಿಭಾಗ, ೪. ಮೈಸೂರು ವಿಭಾಗಗಳಾಗಿವೆ"[೧೧] ವಾಗಿವೆ. ರಾಜ್ಯದಲ್ಲಿ ಮೂಲನಿವಾಸಿ ಬುಡಕಟ್ಟುಗಳು ಕರ್ನಾಟಕದ ಮೈಸೂರು ವಿಭಾಗದಲ್ಲೇ ಮಾತ್ರ ಕಾಣಬರುವವರಾಗಿದ್ದಾರೆ. ಈ ಸಂಶೋಧನೆಯು ಕೂಡ ಕರ್ನಾಟಕ ರಾಜ್ಯವನ್ನು ಅಧ್ಯಯನ ಕ್ಷೇತ್ರವಾಗಿಸಿಕೊಂಡಿರುವುದಾಗಿದೆ. ಹೀಗಾಗಿ ಮೂಲನಿವಾಸಿ ಬುಡಕಟ್ಟುಗಳು ರಾಜ್ಯದ ೪ ವಿಭಾಗಗಳಲ್ಲಿನ ಮೈಸೂರು ವಿಭಾಗದಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಆದ್ದರಿಂದ ಈ

ಪ್ರದೇಶ ಪರಿಚಯದ ನೆಲೆಯಲ್ಲಿ ಮೂಲನಿವಾಸಿ ಬುಡಕಟ್ಟುಗಳ ಪರಿಚಯ ಮಾಡಬೇಕಾದದ್ದು ಅಗತ್ಯವಾದದ್ದು. ಮೈಸೂರು ವಿಭಾಗವು ರಾಜ್ಯದ ದಕ್ಷಿಣಾರ್ಧ ಪಶ್ಚಿಮಭಾಗದಲ್ಲಿದೆ. "೨೦೦೧ನೇ ಸಾಲಿನ ಜನಗಣತಿಯಂತೆ ೧೯೨ ಹೋಬಳಿಗಳು, ೪೪ ತಾಲ್ಲೂಕು ಕೇಂದ್ರಗಳನ್ನು ಹೊಂದಿದೆ. ಪ್ರಸ್ತುತ ೮ ಜಿಲ್ಲೆಗಳಿಂದ ಕೂಡಿರುವ (ಚಿಕ್ಕಮಂಗಳೂರು, ದ.ಕನ್ನಡ, ಉಡುಪಿ, ಹಾಸನ, ಕೊಡಗು, ಮಂಡ್ಯ, ಮೈಸೂರು, ಚಾಮರಾಜನಗರ) ಮೈಸೂರು ವಿಭಾಗವು ರಾಜ್ಯದ ಅತಿ ದೊಡ್ಡ ಸಂಖ್ಯೆಯ ಬುಡಕಟ್ಟು ಸಮುದಾಯಗಳ ಪ್ರಾಕೃತಿಕ ಪರಿಸರವಾಗಿದೆ"[೧೨]. ಮೈಸೂರು ವಿಭಾಗವು ಮಾನವಕುಲದ ವರ್ಣನೆಯಲ್ಲಿ ಅತ್ಯಂತ ಮಹತ್ವದ ತಾಣವೂ ಹೌದು. ಪಶ್ಚಿಮ ಘಟ್ಟಗಳ ಅರಣ್ಯಪ್ರದೇಶ, ನಿಸರ್ಗದ ಕೊಡುಗೆಯಾಗಿದ್ದು, ಅಪೂರ್ವಜೀವ ವೈವಿಧ್ಯತೆಗೆ ಆಶ್ರಯ ನೀಡಿದ ಖ್ಯಾತಿ ವಿಶ್ವದ ಗಮನ ಸೆಳೆದಿದೆ. ಸಹ್ಯಾದ್ರಿ ಬೆಟ್ಟಸಾಲು, ಅರಣ್ಯಪ್ರದೇಶ ಬಯಲು ಪ್ರದೇಶಗಳು ಮತ್ತು ಕರಾವಳಿಯ ಪ್ರದೇಶ ವಿಶೇಷವಾಗಿ ಮೈಸೂರು ವಿಭಾಗವನ್ನು ಸಂಪತ್‌ಭರಿತವಾಗಿಸಿದೆ. ಇಂತಹ ವಿಶ್ವದ ಗಮನ ಸೆಳೆದ ಭೌಗೋಳಿಕ ಹಾಗೂ ಚಾರಿತ್ರಿಕವಾದ ಪ್ರದೇಶವೇ ಮೂಲನಿವಾಸಿ ಬುಡಕಟ್ಟುಗಳ ಮೂಲ ನೆಲೆಯಾಗಿದೆ.

ಒಟ್ಟಾರೆ ೪೪ ತಾಲ್ಲೂಕು ಕೇಂದ್ರಗಳಿಂದ ಕೂಡಿರುವ ಮೈಸೂರು ವಿಭಾಗದಲ್ಲಿನ ಭೌಗೋಳಿಕ ಪರಿಸರ ೪೩.೪೭೩ ಚ. ಕಿ. ಮೀ. ಗಳಷ್ಟು ವಿಸ್ತೀರ್ಣದಲ್ಲಿ ವ್ಯಾಪಿಸಿದೆ. ಈ ಪ್ರದೇಶದ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಸಾಮಾಜಿಕ ಪರಂಪರೆಯ ರಚನೆಯನ್ನು ನಿರ್ಮಿಸಿಕೊಂಡಿವೆ. ಈ ಪ್ರದೇಶದ ಅರಣ್ಯ ಸಂಪತ್ತು ರಾಜ್ಯದ ಪತ್ತಿನಭಾಗದಲ್ಲಿ ಶೇಕಡ ೯.೪೬% (೯೮೦.೦೨೫ ಹೆಕ್ಟೇರ್)ಗಳಷ್ಟು ಹೊಂದಿರುವುದು ಕಂಡುಬರುತ್ತದೆ. ಸಾಗುವಳಿ ಮಾಡಲಾಗದ ಭೂಮಿಯಲ್ಲಿ ಬಂಜರುಭೂಮಿ, ಖಾಯಂ ಗೋಮಾಳ ಮತ್ತು ವೃಕ್ಷತೋಪುಗಳನ್ನೊಳಗೊಂಡ ಸುಮಾರು ೬೫೯೦೪೯ ಹೆಕ್ಟೇರ್ ಭೂಮಿ ಹೊಂದಿರುವುದು ಕಂಡುಬರುತ್ತದೆ.

ಪ್ರಾಕೃತಿಕ ಪರಿಸರದ ವರದಾನ ಈ ಜಿಲ್ಲೆಗಳಿಗೆ ಒಂದು ವಿಶೇಷತೆ ಎನ್ನಬಹುದಾಗಿದೆ. ನೈಸರ್ಗಿಕ ಸಂಪನ್ಮೂಲಗಳು, ಅರಣ್ಯಸಂಪತ್ತು, ವೃಕ್ಷಸಂಪತ್ತು, ಖನಿಜಸಂಪತ್ತು ಮನುಷ್ಯನ ಇಚ್ಛೆಯನ್ನು ಪೂರೈಸುತ್ತಿದ್ದ ಕಾರಣವೇ ಅನೇಕ ಬುಡಕಟ್ಟು ಸಮುದಾಯಗಳು ಇಲ್ಲಿ ನೆಲೆನಿಂತಿದ್ದಕ್ಕೆ ಕಾರಣ ಎನ್ನಲಾಗುತ್ತಿದೆ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಅರಣ್ಯಗಳು, ಭೂಪ್ರದೇಶ ಸಂಪತ್ತಿನ ಗಣಿಯಾಗಿದ್ದಿತ್ತು. ಈ ಅರಣ್ಯಗಳು ವಿಶ್ವದ ಗಮನ ಸೆಳೆದಿರುವುದು ಇತಿಹಾಸದಿಂದಲೇ ತಿಳಿದುಬರುತ್ತದೆ. ಸಂಪತ್ತಿನ ಗಣಿಯಾದ ಈ ಪ್ರದೇಶ ಅತಿಪ್ರಾಚೀನ ನಾಗರೀಕತೆಯ ಜನಸಮುದಾಯಗಳನ್ನು ತನ್ನತ್ತ ಆಕರ್ಷಿಸಿ, ಆರ್ಥಿಕತೆಗೆ ಆಸರೆಯಾದ ನಿದರ್ಶನಗಳು ಪ್ರಾಚೀನ ಮಾನವ ಸಮುದಾಯಗಳ ಜೀವನಕ್ರಮದಿಂದ ತಿಳಿಯಬಹುದು.

ಕೋಷ್ಟಕ ೨.೧ ಮೈಸೂರು ವಿಭಾಗದ ಸಮಗ್ರ ಮಾಹಿತಿ ನೋಟ

ಕ್ರ. ಸಂ.	ಜಿಲ್ಲೆಗಳು	ತಾಲ್ಲೂಕು	ಭೌಗೋಳಿಕ ವಿಸ್ತೀರ್ಣ	ಅರಣ್ಯ ಪ್ರದೇಶ	ಒಟ್ಟು ಜನಸಂಖ್ಯೆ	ಪರಿಶಿಷ್ಟ ಪಂಗಡದ ಜನಸಂಖ್ಯೆ	ಸಾಗುವಳಿ ಮಾಡಲಾಗದ ಭೂಮಿ	ಸಾಕ್ಷರತಾ ಪ್ರಮಾಣ	ಪದವಿ ಕಾಲೇಜುಗಳು
೧	ಚಿಕ್ಕ ಮಂಗಳೂರು	೭	೭.೨೦೧	೨೦೦೪೮೫	೧೧೩೯೧೦೪	೪೧೦೧೯	೧೪೩೧೭೨	೭೨.೬೩	೧೨
೨	ದ. ಕನ್ನಡ	೫	೪.೮೪೩	೧೨೮೪೭೮	೧೮೯೬೪೦೩	೬೨೯೩೬	೯೧೮೬೧	೮೩.೪೭	೧೪
೩	ಉಡುಪಿ	೩	೩.೫೯೮	೯೯೨೦೧	೧೧೦೯೪೯೪	೪೧೬೧೩	೯೨೦೫೬	೭೯.೮೭	೭
೪	ಹಾಸನ	೮	೬.೮೧೪	೫೪೦೪೦	೧೭೨೧೩೧೯	೨೬೪೫೧	೬೦೮೭೭	೬೮.೭೫	೧೦
೫	ಕೊಡಗು	೩	೪.೧೦೨	೧೩೪೫೯೭	೫೪೫೩೨೨	೪೬೧೧೫	೬೭೫೯೭	೭೮.೧೭	೧೨
೬	ಮಂಡ್ಯ	೭	೪.೯೬೧	೨೪೭೬೫	೧೭೬೬೭೧೮	೧೭೧೯೩	೮೩೭೭೬	೬೧.೨೭	೭
೭	ಮೈಸೂರು	೭	೬.೨೬೯	೬೨೮೫೧	೨೬೨೪೯೧೧	೨೭೧೩೫೧	೮೪೫೮೨	೬೩.೬೯	೧೫
೮	ಚಾಮರಾಜ ನಗರ	೪	೫.೬೮೫	೨೭೫೬೧೦	೯೬೪೨೭೫	೧೦೬೧೧೧	೩೫೧೨೮	೫೧.೨೬	೯
	ಒಟ್ಟು	೪೪	೪೩.೪೭೩	೯೮೦೦೨೫	೧೧೭೬೨೫೪೬	೬೧೨೭೮೯	೬೫೯೦೪೯		

(ಆಧಾರ: DES: 2001 ಕರ್ನಾಟಕ ಸರ್ಕಾರ, ಬೆಂಗಳೂರು)

ಸುಮಾರು ೧೧,೭೬೨,೫೪೬ ಜನಸಂಖ್ಯೆಯನ್ನು ಹೊಂದಿರುವ ಮೈಸೂರು ವಿಭಾಗದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ೬೧೨೭೮೯ ಆಗಿದೆ. ಪರಿಶಿಷ್ಟ ಪಂಗಡದಲ್ಲೇ ತೀರಾ ಹಿಂದುಳಿದವರೆಂದು ಗುರುತಿಸಲಾದ ಮೂಲನಿವಾಸಿ ಬುಡಕಟ್ಟುಗಳ ಜನಸಂಖ್ಯೆ ೩೭೯೨ ಆಗಿದ್ದು, ಒಟ್ಟು ಕುಟುಂಬಗಳ ಸಂಖ್ಯೆ ೧೦.೬೭೭ ಆಗಿದೆ. ಪರಿಸರ ಮತ್ತು ಜನಸಂಖ್ಯೆಯ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಜನಸಂಖ್ಯೆಯ ಪ್ರಮಾಣ ಕಡಿಮೆ ಇರುವುದಾಗಿ ತಿಳಿದುಬರುತ್ತದೆ. ಸಾಗುವಳಿ ಮಾಡಲಾಗದ ಭೂಮಿ ೬೫೯೦೪೯ ಹೆಕ್ಟೇರ್‌ಗಳಷ್ಟಿದ್ದು ಸ್ಪಷ್ಟವಾಗಿ ಪ್ರಕಟವಾಗಿದೆ. ಚಾಲ್ತಿ ಬೆಲೆಗಳಲ್ಲಿ ೧.೯೮೮.೬೭೮ ಮತ್ತು ಸ್ಥಿರಬೆಲೆಗಳಲ್ಲಿ ೧.೩೪೪.೬೭೫ ಲಕ್ಷ ರೂ.ಗಳಲ್ಲಿ ಆದಾಯ ಮೈಸೂರು ವಿಭಾಗದಲ್ಲಿದೆ.

೩.ಸಮುದಾಯಗಳ ಚಾರಿತ್ರಿಕ ಐತಿಹ್ಯ

ಮೈಸೂರು ವಿಭಾಗದಲ್ಲಿನ ಇತಿಹಾಸ ಹಲವಾರು ಆಡಳಿತಗಾರರ, ಸಂಸ್ಥಾನಗಳ ಸಾಮ್ರಾಜ್ಯಗಳ ಕೇಂದ್ರ ಬಿಂದುವಾಗಿ ಕಂಡುಬರುತ್ತದೆ. ಮೈಸೂರು ಸಂಸ್ಥಾನ, ಹೈದರ್ ಮತ್ತು ಟಿಪ್ಪುಸುಲ್ತಾನ್, ಕೊಡಗಿನ ಹಾಲೇರಿ ಮನೆತನ ಹಾಗೂ ಇನ್ನೂ ಅನೇಕರು ಆಡಳಿತ ನಡೆಸಿದ

ಸಣ್ಣ ಪುಟ್ಟ ನಿದರ್ಶನಗಳ ಜೊತೆಗೆ ಮೂಲನಿವಾಸಿ ಬುಡಕಟ್ಟುಗಳ ಚರಿತ್ರೆಯ ಹಿನ್ನೆಲೆಯಲ್ಲಿ ಪ್ರಾಮುಖ್ಯತೆಗಳಿಸಿದೆ. ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಸೃಷ್ಠಿ ಪುರಾಣ ಮತ್ತು ಚಾರಿತ್ರಿಕ ಮೂಲವನ್ನ ಆಯಾ ಸಮುದಾಯದ ಚಾರಿತ್ರಿಕ ಹಿನ್ನೆಲೆಯ ಅಂಶಗಳಿಂದಲೇ, ಸಮುದಾಯಗಳ ಐತಿಹ್ಯ ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಜೇನುಕುರುಬರ ಬಗ್ಗೆ ಮಿಶ್ರರವರು ಹೀಗೆ ಬರೆಯುತ್ತಾರೆ. "ಜೇನುಕುರುಬ ಮತ್ತು ಬೆಟ್ಟ ಕುರುಬರು ಪಲ್ಲವರ ಸಂತತಿಯಾಗಿ ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಕ್ರಿ.ಶ. ೭ನೇ ಶತಮಾನದಲ್ಲಿ ಬಲಿಷ್ಠ ಚಕ್ರಾಧಿಪತಿಗಳಾದ ಕಂಗೋ, ಚೋಳ ಮತ್ತು ಚಾಲುಕ್ಯರು ಪಲ್ಲವರಾದ ಕುರುಬರು ರಾಜ್ಯಭಾರ ನಡೆಸುತ್ತಿದ್ದಾಗ ಅವರನ್ನು ಸದೆಬಡಿದು ಸೋಲಿಸಿದರು. ಆಗ ಅನೇಕರು ಸತ್ತರು, ಕೆಲವರು ಚೆಲ್ಲಾಪಿಲ್ಲಿಯಾಗಿ ತಲೆಮರೆಸಿಕೊಳ್ಳಲು ಗುಡ್ಡಗಾಡನ್ನು ಹೊಕ್ಕರು. ಕಾಡು ಬೆಟ್ಟಗಳಲ್ಲಿ ನೆಲೆಸಿದ ಅವರ ಸಂತತಿಯು ಹೊರ ಜಗತ್ತಿನ ಸಂಪರ್ಕವಿಲ್ಲದೆಯೇ ಪೂರ್ಣವಾಗಿ ಕಾಡಿನಲ್ಲಿ ವಂಶಾಭಿವೃದ್ಧಿ ಹೊಂದಿ ಆದಿವಾಸಿಗಳಾಗಿ ಉಳಿದರು. ಅವರ ಪ್ರತಿನಿಧಿಗಳೇ ಮೇಲೆ ತಿಳಿಸಿದ ಪ್ರದೇಶಗಳಲ್ಲಿ ವಾಸವಾಗಿದ್ದಾರೆ."[೧೩]

ಆದಿವಾಸಿಯಾದ ಜೇನುಕುರುಬರು ಉತ್ತರ ಮಲಬಾರ್(ನಾತ್ ಮಲಭಾರ್) ಕುರುಬರನಾಡು ಎಂಬ ತಾಲ್ಲೂಕುಗಳಲ್ಲಿ ಹೆಚ್ಚಾಗಿ ನೆಲೆಸಿದ್ದ ಅವರನ್ನು ಕುರುಮಬ್ಬ್ಯಾಸ ಎಂಬುದಾಗಿ ೧೮೯೧ರ ಮದ್ರಾಸ್ ಜನಗಣತಿ ರಿಪೋರ್ಟ್‌ನಲ್ಲಿ ಪ್ರಕಟಿಸಲಾಗಿದೆ. ದಕ್ಷಿಣಭಾರತದಲ್ಲಿ ಪಲ್ಲವರ ಕುರುಹಾಗಿ ಕೆಲವೇ ಕೆಲವು ನಿದರ್ಶನಗಳಿವೆ. ೭ನೇ ಶತಮಾನದಲ್ಲಿ ಇವರ ಪ್ರಾಬಲ್ಯ ಉಚ್ಚ ಶಿಖರಕ್ಕೇರಿತ್ತು. ಆದರೆ ಇವರು ಪ್ರಾಬಲ್ಯಕ್ಕೆ ಬಂದಾಗ ೭ನೇ ಅಥವಾ ೮ನೇ ಶತಮಾನದಲ್ಲಿ ಚೋಳರರಾಜ ಎಂಬುವನು ಇವರ ಪ್ರಾಬಲ್ಯವನ್ನು ಹತ್ತಿಕ್ಕಿದ್ದನು. ನಂತರ ಇವರು ಚೆಲ್ಲಾಪಿಲ್ಲಿಯಾಗಿ ಮಲಬಾರ್ ಬೆಟ್ಟಗಳಲ್ಲಿ ನೀಲಗಿರಿ ಕೂರ್ಗ್, ವೈನಾಡು ಮತ್ತು ಮೈಸೂರು, ಚಾಮರಾಜನಗರ ಕಡೆಗಳಲ್ಲಿ ಹರಡಿಕೊಂಡ ಬಗ್ಗೆ ತಿಳಿದುಬರುತ್ತದೆ.*[೧೪] ಹೀಗಾಗಿ ಜೇನುಕುರುಬರು ಚಾರಿತ್ರಿಕ ಇತಿಹಾಸ ಹೊಂದಿರುವ ಲಕ್ಷಣಗಳು ಕಂಡುಬರುತ್ತದೆ.

ಕೊರಗರ ಮೂಲ ಕುರಿತು ವಿಧ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಭಿನ್ನಾಭಿಪ್ರಾಯಗಳನ್ನು ಅಷ್ಟೊಂದು ಸಲೀಸಾಗಿ ತಳ್ಳಿ ಹಾಕುವಂತಿಲ್ಲ. ಈ ಭಿನ್ನಾಭಿಪ್ರಾಯಗಳು ಐತಿಹಾಸಿಕ ಮತ್ತು ಪೌರಾಣಿಕ ವಿಷಯಗಳನ್ನೊಳಗೊಂಡಿವೆ. ಸಮುದಾಯದ ಹಿನ್ನೆಲೆಯನ್ನು ಪೌರಾಣಿಕ ಮತ್ತು ಚಾರಿತ್ರಿಕತೆಯ ಮೂಲ ಸ್ವರೂಪ ಒಡೆದು ಕೆದಕಬಹುದಾಗಿದೆ. ಚಾರಿತ್ರಿಕ ಹಿನ್ನಲೆಯಲ್ಲಿ ಕೊರಗರು ಕುರಿತು ಐತಿಹಾಸಿಕ ಐತಿಹ್ಯ ಹೇಳುವಂತೆ, ಕೊರಗರ ಅರಸ ಹುಭಾಸಿಗನೆಂಬುವನು ಕದಂಬರ ಮಯೂರವರ್ಮನನ್ನು ಸೋಲಿಸಿದನೆಂದು, ಮುಂದೆ ಅವನ ಅಳಿಯ/ಮಗ ಗೋಕರ್ಣದ ಲೋಕಾದಿತ್ಯನು ಹುಭಾಸಿಗನನ್ನು ಸೋಲಿಸಿದನು.*[೧೫] ಎನ್ನುವ

ಐತಿಹ್ಯವಾಗಿದೆ. ಇನ್ನೊಂದು ಸಮೀಪದ ಐತಿಹ್ಯವೆಂದರೆ "ಮಂಗಳೂರು ಸಮೀಪದ ದೊರೆ ಅಂಗಾರ ವರ್ಮನನ್ನು ದೊರೆ ಹುಭಾಸಿಗ ಸೋಲಿಸಿದಾಗ ಸೋತ ಅರಸನು ಮಾಟ ಮಂತ್ರಗಳಿಂದಾಗಿ ದೊರೆ ಹುಭಾಸಿಗನು ತೀರಿಕೊಂಡನು." ಸಾಮಾಜಿಕವಾಗಿ ರಾಜಕೀಯವಾಗಿ ಉನ್ನತಿಗೇರಿದ ದೊರೆ ಹುಭಾಸಿಗನ ಪತನದೊಂದಿಗೆ ಆ ಜನ ಸಮುದಾಯವನ್ನು ವಿವಸ್ತಗೊಳಿಸಿ ನಾಡಿನಿಂದ ಕಾಡಿಗೆ ಅಟ್ಟಲಾಯಿತೆಂದೂ ಅಲ್ಲಿ ಅವರು ಕಾಡಿನ ಸೊಪ್ಪುಗಳನ್ನು ಸೊಂಟಕ್ಕೆ ಕಟ್ಟಿಕೊಂಡು ಬದುಕತೊಡಗಿದರೆಂದೂ ಹೇಳುತ್ತಾರೆ.[೧೬].

ಮೇಲಿನ ಐತಿಹ್ಯಗಳನ್ನು ಖಚಿತ ಲಿಖಿತ ಸಾಕ್ಷ್ಯಾಧಾರಗಳಿಲ್ಲವೆಂದು ತಳ್ಳಿಹಾಕದೆ ಇದರ ಹಿಂದಿನ ವಾಸ್ತವದ ಆಶಯಗಳ ಮೂಲಕ ಕೊರಗರ ಪೂರ್ವೇತಿಹಾಸದ ಮರುರಚನೆ ಮಾಡಬಹುದು. ಬ್ರಿಟಿಷ್ ಇತಿಹಾಸ ಕಟ್ಟಿಕೊಡುವ ಮಾಹಿತಿಯಂತೆ ಹೂಬಾಸಿಗ ದೊರೆಯ ಸಂದರ್ಭ ನೆಲೆದ ಬಡತನವನ್ನು ಕೊಂದು ಇವರು ಗುಲಾಮಗಿರಿಗೆ ಒಳಗಾದರು. ಇತಿಹಾಸ ಕೂಡ ಈ ಬಗೆಗೆ ಸ್ವಲ್ಪ ಮಟ್ಟಿನ ಬೆಳಕು ಚೆಲ್ಲುತ್ತದೆ. "ಆಲುಪ ದೊರೆಗಳು ಕರಾವಳಿಯಲ್ಲಿ ಬಲಾಢ್ಯರಾಗುವ ಪೂರ್ವದ ದಿನಗಳಲ್ಲಿ ಕೊರಗರು ಕರಾವಳಿ ನೆಲೆದ ಆಡಳಿತಾತ್ಮಕ ಒಡೆತನ ಹೊಂದಿದವರಾಗಿರಬೇಕು ಎನ್ನುತ್ತಾರೆ."[೧೭] ಹೀಗಾಗಿ ಚಾರಿತ್ರಿಕ ಹಿನ್ನೆಲೆಯಲ್ಲಿ ನಾವು ಹೂಬಾಶಿಕನ ಆಳ್ವಿಕೆಯ ಪ್ರದೇಶ ಮತ್ತು ಇಂದಿನವರೆಗೂ ಕೊರಗರು ವಾಸಿಸುತ್ತಾ ಬಂದಿರುವ ಸ್ಥಳಗಳನ್ನು ಗಮನಿಸಿದರೆ ಅಲ್ಲಿರುವ ಸಾಮ್ಯತೆ ಎದ್ದು ಕಾಣುತ್ತದೆ. ಇನ್ನೊಂದು ಮಹತ್ವದ ಅಂಶವೆಂದರೆ ಕೊರಗರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ಕೈಯಲ್ಲಿ "ದಂಡ" ಇರಲೇಬೇಕು ಎಂಬ ನಿಯಮವಿದೆ. ದಂಡ ಎನ್ನುವುದು ಅಧಿಕಾರದ ಸಂಕೇತವಾಗಿದೆ. ಇದು ಹಿಂದೆ ಇದ್ದ ಅಧಿಕಾರದ ಪಳವಳಿಕೆಯನ್ನು ಸೂಚಿಸುತ್ತದೆ. ಕೊರಗರ ಹಿರಿಯ ತನಿಯನ ಕೈಯಲ್ಲಿಯೂ ಈ "ದಂಡ" ಇರುವುದು ಹೆಚ್ಚಿನ ಪುರಾವೆ ಕೊಡುತ್ತದೆ. ಹೀಗೆ ಎರಡು ಸಮುದಾಯಗಳು ಈ ನಾಡಿನಲ್ಲಿ ಆಳ್ವಿಕೆ ಮಾಡಿದ ಅಂಶಗಳನ್ನ ಚಾರಿತ್ರಿಕ ಐತಿಹ್ಯದಿಂದ ತಿಳಿಯಬಹುದು.

೪.ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಜೀವನಕ್ರಮದಲ್ಲಿ ಪರಿಸರ

ಮಾನವನ ಸಂಸ್ಕೃತಿಗಿಂತಲ್ಲೂ ಹಿಂದೆ ಸರಿದ ಪರಿಸರ ಅಕ್ಷತವಾಗಿತ್ತು. ಆ ಪರಿಸರದಲ್ಲಿನ ಮನುಷ್ಯನ ಜೀವನಕ್ರಮವು ಸುರಕ್ಷಿತವಾಗಿತ್ತು. ಪ್ರಾಕೃತಿಕ ಪರಿಸರ ಮತ್ತು ಮಾನವನ ಸಂಬಂಧ ಅನಾದಿಯಿಂದಲೂ ಜೊತೆಗೂಡಿ ಬಂದಿದೆ. ಪರಿಸರದ ಮೂಲಾಂಶಗಳಲ್ಲಿ ಒಂದಾದ ಮನುಷ್ಯನ ಮೇಲೆ ನಿಸರ್ಗ ಬೀರಿರುವ ಪ್ರಭಾವವೂ ಗಾಡವಾದದ್ದು. ಪರಿಸರ ಮಾನವನ ಜೀವನಾಡಿ, ಜೀವದಾಯಿಯಾಗಿ ಒಡನಾಡಿಯಾಗಿ ಮನುಷ್ಯನ ಬದುಕಿನಲ್ಲಿ ಹಾಸು ಹೊಕ್ಕಾಗಿದೆ. ಪರಿಸರ ಅವನ ನೆಲೆ, ಜೀವನೋತ್ಸಾಹದ ಸೆಲೆ.

ಆದರಿಂದಲೇ ಪರಿಸರ ಮನುಷ್ಯನಿಗೆ ಜೀವನಾವಶ್ಯಕವಷ್ಟೇ ಅಲ್ಲ, ಜೀವನೋತ್ಸಾಹವೂ ಹೌದು.

ಮಾನವ ಸಮುದಾಯಗಳ ಜೀವನಕ್ರಮ ಅಥವಾ ವಿಧಾನದಲ್ಲಿ ಪರಿಸರ ವಿಕಾಸದ ಕ್ಷೇತ್ರ. ಮನುಷ್ಯನ ಅಂತಃಶಕ್ತಿಯನ್ನು ಹೊರತರುವುದೇ ಪರಿಸರ. ಪರಿಸರ ಕ್ರಮ ಅಥವಾ ಜೊತೆಗಿನ ಸಂಬಂಧವೂ ಸಹ ಮನುಷ್ಯನ ವಿಕಾಸ ಮತ್ತು ಬೆಳವಣಿಗೆಗೆ ಹೆಚ್ಚೆಚ್ಚು ಪ್ರಮಾಣದ ಉದಾರವಾದ ಕೊಡುಗೆಯನ್ನೇ ನೀಡಿರುತ್ತದೆ. ಪ್ರಾಕೃತಿಕ ಪರಿಸರವೂ ಸಹ ಮನುಷ್ಯನ ಪ್ರತಿಭೆ, ದಕ್ಷತೆ ಪ್ರಮಾಣಿಕತನದ ಹೊಂದಾಣಿಕೆಯ ಜೊತೆಗೆ ಸಮಗ್ರ ವಿಕಾಸದ ಮೂಲ ನೆಲೆಯಾಗಿರುತ್ತದೆ. ಒಬ್ಬ ವ್ಯಕ್ತಿಯ ಅಥವಾ ಮನುಷ್ಯನ ವ್ಯಕ್ತಿತ್ವ ಅರಳುವುದು ಅವನ ಪ್ರಾಕೃತಿಕ ಪರಿಸರದ ಸುತ್ತಮುತ್ತಲಿನ ಬದುಕಿನ ಪ್ರಭಾವಳಿಯಿಂದಲೇ ಎನ್ನಬಹುದು. ಉತ್ತಮ ಜೀವನ ಮಟ್ಟದ ಹೊಂಗನಸು ನನಸಾಗುವುದಕ್ಕೆ ಪರಿಸರ ಒಂದು ಆಕಾರ. ಡಾ|| ಬಿ.ಆರ್. ಅಂಬೇಡ್ಕರ್‌ರವರು ಹೇಳುವಂತೆ "ವ್ಯಕ್ತಿಯ ಭವಿಷ್ಯ ಅವನು ಜೀವಿಸುತ್ತಿರುವ ಪರಿಸರ ಮತ್ತು ಸಂದರ್ಭಗಳನ್ನು ಅವಲಂಬಿಸಿರುತ್ತದೆ."[೧೮] ಹಾಗೆಯೇ ಪರಿಸರದ ಪ್ರತಿಕೂಲತೆಯಿಂದ ಅನೇಕ ಬದಲಾವಣೆಗಳು ಗುರುತಿಸಬಹುದು. (ಉದಾಹರಣೆಗೆ: ಬಡತನ, ಅಭಿವೃದ್ಧಿ, ಸಂಪನ್ಮೂಲಗಳ ಹಂಚಿಕೆ ಇತ್ಯಾದಿ).

ಸುಪ್ರಸಿದ್ಧ ಸಮಾಜ ವಿಜ್ಞಾನಿಗಳು, ಅರ್ಥಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರ ವಿಚಾರಗಳು ಈ ನಿಟ್ಟಿನಲ್ಲಿ ಭಿನ್ನವಾಗಿಯೇನು ಇಲ್ಲ. ವಾಸ್ತವದಲ್ಲಿ ಯಾರು ಈ ಪರಿಸರದ ಮಾಲೀಕರಲ್ಲ. ಹಾಗಾದರೆ ಪರಿಸರ ಎಂದರೆ ಹಲವಾರು ಪ್ರಶ್ನೆಗಳು ಸಹಜವಾಗಿಯೇ ಉದ್ಭಭಿಸುತ್ತವೆ. ಕೇವಲ ಭೂಮಿ, ನದಿ, ಅರಣ್ಯ, ನಿಸರ್ಗ, ಗಗನ ಮಾತ್ರವೇ ಪರಿಸರವೇ? ಅಥವಾ ಭೌತಿಕ ಜಗತ್ತು ಪರಿಸರವೇ ? ಎನ್ನುವ ದ್ವಂದ್ವ ಕಾಣಬರುತ್ತದೆ. ಏನೇ ಆದರೂ ಮನುಷ್ಯನ ಜೀವನದಲ್ಲಿ ಪರಿಸರದ ಪಾತ್ರ ಕಡೆಗಣಿಸುವಂತಿಲ್ಲ. ಪರಿಸರ ಒಂದು ಬದುಕಿನ ಸ್ಫೂರ್ತಿಯ ಸೆಲೆಯಾಗಿದೆ ಎನ್ನಬಹುದು. ಯಾವುದೇ ಸಮುದಾಯವಾಗಲಿ, ಅದು ಬುಡಕಟ್ಟು, ಇತರ ಜನವರ್ಗ ಅಥವಾ ಮೂಲನಿವಾಸಿ ಬುಡಕಟ್ಟು ಆಗಿರಲಿ ಪರಿಸರವನ್ನ ಅಲ್ಲ ಗೆಳೆಯುವಂತಿಲ್ಲ. ಈ ಪರಿಸರ ಸಂರಚನೆಯ ಜೀವನ ಅಥವಾ ಪರಿಸರಕ್ರಮದ ಜೀವನ ವಿಧಾನ ಮನುಷ್ಯನಿಗೆ ಏಕೆ ಅವಶ್ಯಕವಾಗಿದೆ ಎನ್ನಬಹುದು. ಪರಿಸರದ ಸ್ವಷ್ಟ ಚಿತ್ರಣ ಅಥವಾ ಜಗತ್ತು ಇಲ್ಲದೆ ಯಾವುದೇ ಜೀವ ಜಗತ್ತು ಸಾಧ್ಯವಿಲ್ಲ. ಇಲ್ಲಿ ಪರಿಸರದ ಸ್ವಷ್ಟ ಕಲ್ಪನೆಯನ್ನು ತಿಳಿದಾಗ ಅದರ ಅರ್ಥ ಮನಗಾಣಬಹುದು.

ಕಾಲು ಶತಮಾನದ ಹಿಂದೆ ಪ್ರಚಲಿತಕ್ಕೆ ಬಂದ ವ್ಯಾಖ್ಯಾನವು ಪರಿಸರಕ್ಕೆ ಸಂಕ್ಷಿಪ್ತವು, ಸಮಗ್ರವಾದುದಾಗಿ ಗುರುತಿಸಬಹುದಾಗಿದೆ. "ಒಂದು ನಿರ್ದಿಷ್ಟವಾದ ಕಾಲ ಹಾಗೂ ಸ್ಥಳದಲ್ಲಿ ನಮ್ಮನ್ನು ಸುತ್ತುವರೆದಿರುವ ವಸ್ತು ಸ್ಥಿತಿಗಳೆಲ್ಲವೂ ಒಟ್ಟಾಗಿ ನಾವು ಪರಿಸರ ಎನ್ನುತ್ತೇವೆ."[೧೯]

೧೯೮೦ರಲ್ಲಿ C.C. Park ರವರು ನೀಡಿದ ಅರ್ಥಪೂರ್ಣ ವ್ಯಾಖ್ಯಾನ "Environment refers to the sum total of conditions which surround man at a given point in space and time) ಎಂಬುದಾಗಿದೆ."[೨೦] ಈ ಪರಿಸರದಲ್ಲಿ ಸಜೀವಿ ಹಾಗೂ ನಿರ್ಜೀವಿಗಳೆಲ್ಲ ಅಂದರೆ ಜೈವಿಕ ಹಾಗೂ ಭೌತಿಕ ಘಟಕಾಂಶಗಳು ಸೇರಿರುವಂತಹ ಪರಸ್ಪರಾವಲಂಬಿಯಾಗಿರುವ ಜೀವನಾಧಾರವಾಗಿರುತ್ತದೆ. ಆ ಕಾರಣದಿಂದಲೇ ಪರಿಸರ ಅತಿ ಮುಖ್ಯವಾಗಿರುವುದು.

Ecology ಎಂಬ ಪದವನ್ನು ಮೊದಲಬಾರಿಗೆ ಸಸ್ಯಶಾಸ್ತ್ರಜ್ಞರಾದ Reiter ಎಂಬುವರು ೧೮೮೫ರಲ್ಲಿ ಉಪಯೋಗಿಸಿದ್ದಾರೆ.[೨೧] Ecology ಎನ್ನುವ ಪದವನ್ನು ಗ್ರೀಕ್ ಭಾಷೆಯ Oikos ಇಕಾಸ್ ಎಂದರೆ ಮನೆ ಅಥವಾ ವಾಸಿಸುವ ಸ್ಥಳ ಮತ್ತು ಲಾಜಿ ಎಂದರೆ ಅಧ್ಯಯನ ಎಂದು ಅರ್ಥೈಸುತ್ತದೆ.

ಫ್ರೆಂಚ್ ಭಾಷೆಯಲ್ಲಿ "Eviron" ಅಂದರೆ ಸುತ್ತಮುತ್ತ ಎನ್ನಲಾಗುತ್ತಿದೆ. ಲ್ಯಾಟಿನ್ ಭಾಷೆಯಲ್ಲಿ Viron ಮತ್ತು Etymologically ಪರಿಸರವೆಂದರೆ, ಸುತ್ತಮುತ್ತಲಿನ ಸ್ಥಿತಿ ಮತ್ತು ಜನಸಾಮಾನ್ಯರ ಜೀವನದ ಮೇಲೆ ಪರಿಣಾಮ ಬೀರುವ ಸ್ಥಿತಿಗತಿಗಳು ಎಂದು ಗುರುತಿಸಲಾಗುತ್ತಿದೆ."[೨೨]

Encyclopedia Britanica ದಲ್ಲಿ ವ್ಯಾಖ್ಯಾನಿಸಿರುವಂತೆ "ಪರಿಸರದೊಳಗಿನ ಭೌತಿಕ ಮತ್ತು ಜೈವಿಕ ಜೀವಾಣುಗಳ ಕ್ರಿಯೆ ಮತ್ತು ಅವುಗಳ ನಡುವಿನ ಪ್ರತಿಕ್ರಿಯೆಗಳ, ಒಟ್ಟಾರೆ ನಡೆಯುವ ವ್ಯಕ್ತಿಯ ಸುತ್ತಮುತ್ತಲೂ ನಡೆಯುವ ನೈಸರ್ಗಿಕ ವ್ಯವಸ್ಥೆ."[೨೩]

Mc. Graw, Hill, Encyclopedia of Evnironment Science ನಲ್ಲಿ ವ್ಯಾಖ್ಯಾನಿಸಿರುವಂತೆ ಪರಿಸರವೆಂದರೆ, ಜೀವಾಣುಗಳ ಅಭಿವೃದ್ಧಿ ಮತ್ತು ಪ್ರಗತಿಗೆ ಪ್ರತಿಕೂಲ ಮತ್ತು ಪರಿಣಾಮ ಬೀರುವ ಎಲ್ಲಾ ಬಗೆಯ ಪ್ರಭಾವಗಳ ಒಟ್ಟು ಮೊತ್ತ ಎನ್ನಲಾಗುತ್ತಿದೆ"[೨೪].

ವಿಶೇಷವಾಗಿ ಮೂಲನಿವಾಸಿ ಬುಡಕಟ್ಟುಗಳು ಮತ್ತು ಇತರೆ ಬುಡಕಟ್ಟು ಸಮುದಾಯಗಳ ಜೀವನವಿಧಾನದ ಸನ್ನಿವೇಶದಲ್ಲಿ ಪರಿಸರವನ್ನು ಕುರಿತು ವಿವಿಧ ವಿದ್ವಾಂಸರು ಗುರುತಿಸಿರುವಂತೆ, "ಅಮೇರಿಕಾದ ಪರಿಸರ ತಜ್ಞ ಫೆಡರಿಕ್ ಎಲಿಮಟ್ಸ್ ೧೯೧೬ರಲ್ಲಿ ಸಮುದಾಯದ ವಿಜ್ಞಾನವೇ ಪರಿಸರ ಎಂದಿದ್ದಾರೆ. ಬ್ರಿಟಿಷ್ ತಜ್ಞರಾದ ಚಾರ್ಲ್ಸ್ ಎಲ್‌ಟನ್ ೧೯೨೭ರಲ್ಲಿ Ecology as Secientific natural history, concerned with the sociology and Economics of animals[25] ಎಂದಿದ್ದಾರೆ. ಮತ್ತೊಬ್ಬ ತಜ್ಞರಾದ Kerbs – 1972 ರಲ್ಲಿ Ecology is the Scientific Approach to the study of environment interations with control of welfare of living thing, regulating their distribution abundance reproduction and evolution"[೨೬] ಎಂದು ಗುರುತಿಸಿದ್ದಾರೆ.

ಪರಿಸರದ ಬಗ್ಗೆ ಇದಕ್ಕಿಂತ ಚಿಕ್ಕದಾದ ಹಾಗೂ ಅರ್ಥ ಪೂರ್ಣವಾದ ವ್ಯಾಖ್ಯಾನ ನೀಡುವುದು ಬಹುಶಃ ಸಾಧ್ಯವಿಲ್ಲವೆನ್ನಬಹುದು. ಈ ಮೇಲಿನ ವ್ಯಾಖ್ಯಾನಗಳಲ್ಲಿನ ಸ್ಥಿತಿಗತಿಯಲ್ಲಿ ಒಂದಲ್ಲ ಒಂದು ಹಂತದಲ್ಲಿ ಪರಿಸರದ ಜೊತೆಗೆ ಮಾನವನ ಜೀವನ ಕ್ರಮ ಹೊಂದಿಕೊಂಡ ಅನ್ಯೋನ್ಯತೆಯ ಅನಿವಾರ್ಯತೆಯನ್ನು ನಿರ್ಮಾಣಮಾಡಿರುವುದು ಕಾಣಬಹುದು. ಪರಿಸರ ಮಾನವನ ಅವಿಭಾಜ್ಯ ಅಂಗವೆನ್ನುವುದು ಇವರಿಂದ ತಿಳಿದು ಬರುತ್ತದೆ. ಪರಿಸರದ ವ್ಯಾಪ್ತಿಯೊಳಗೆ ಮಾನವನು ತನ್ನ ಎಲ್ಲಾ ಚಟುವಟಿಕೆಗಳನ್ನು ಮಾಡುತ್ತಾನೆ. ಪರಿಸರವಿಲ್ಲದೆ ಮನುಷ್ಯನ ಅಸ್ತಿತ್ವವಿಲ್ಲ. ನೈಸರ್ಗಿಕದತ್ತವಾಗಿ ಬಂದಂತಹ ಭೂಮಿಯ ಮೇಲಿನ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುತ್ತಾ ಅವನ ಅಗತ್ಯ ಮತ್ತು ಪೂರೈಕೆಗಳೊಂದಿಗೆ ಸಂಪೂರ್ಣವಾಗಿ ಜೊತೆಜೊತೆಯಲ್ಲಿ ಬದುಕುತ್ತಿದ್ದಾನೆ.

ಪರಿಸರ ಜೀವನಕ್ರಮದಂತೆ ಎರಡು ಮುಖ್ಯ ಅಂಶಗಳೆಂದರೆ, ಪ್ರಸ್ತುತ ಜಗತ್ತಿನ ಎಲ್ಲಾ ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಸಂಸ್ಥೆಗಳು ಮಾನವ ಸಮುದಾಯಗಳ ಜೀವನಕ್ರಮ ಹಾಗೂ ಆರ್ಥಿಕತೆಯಲ್ಲಿ ಪರಿಸರದ ಪಾತ್ರ ಮನಗಂಡಂತೆ ಸಮುದಾಯಗಳಿಗೆ ನೀಡಿದ ಘೋಷಣೆಗಳೆಂದರೆ,

ಎ) ಯಾವ ಜೀವಿಯೂ (ಮನುಷ್ಯನೂ ಸೇರಿದಂತೆ) ತನ್ನ ಪರಿಸರವನ್ನು ಮೀರಿ ಬೆಳೆಯಲಾರದು.

ಬಿ) ಪರಿಸರವನ್ನು ಒಮ್ಮೆ ಹಾಳುಮಾಡಿಕೊಂಡರೆ ಅದರ ಪುನರ್‌ಸೃಷ್ಠಿ ಸಾಧ್ಯವಿಲ್ಲ.[೨೭] ಆದರಿಂದ ಪರಿಸರ ಎಂಬುದನ್ನು ವಿಶಾಲ ಅರ್ಥದಲ್ಲಿ ತಿಳಿದು ಕೊಳ್ಳಬೇಕಿದೆ. ಪರಿಸರದ ಕೊಡುಗೆಯಾಗಿ ಮಾನವನು ಜನ್ಮತಾಳಿದ್ದಾನೆ. ಪರಿಸರವಿಲ್ಲದೆ ಮಾನವನ ಯಾವುದೇ ಕೆಲಸ ಕಾರ್ಯಗಳು ನಡೆಯುವುದಿಲ್ಲ. ಭೂಮಿಯೂ ಒಂದು ಪರಿಸರ ವ್ಯೂಹವಾಗಿದೆ. ಇಲ್ಲಿನ ಜೀವಿಗಳು, ಸಸ್ಯ ಸಂಕುಲಗಳು ಮತ್ತು ಪ್ರಾಣಿ ಸಂಕುಲಗಳ ನಡುವೆ ಅತ್ಯಂತ ನಿಕಟವಾದ ಹಾಗೂ ಬೇರ್ಪಡಿಸಲಾಗದ ಸಂಬಂಧವಿದೆ. ಜಗತ್ತಿನ ಎಲ್ಲಾ ಮಾನವನ ಸಾಂಸ್ಕೃತಿಕ ಸಾಮಾಜಿಕ ಮೂಲಗಳಲ್ಲಿನ ಸಮಸ್ಯೆಯ ಮೂಲ ಉತ್ಪಾದನೆ. ಉತ್ಪಾದನೆಯ ಕೇಂದ್ರ ಬಿಂದುವೇ ಪರಿಸರ. ಇಲ್ಲಿನ ಹೋರಾಟ, ಹಾರಾಟ, ಚೀರಾಟಗಳು ನಡೆಯುತ್ತಿರುವುದು ಇದಕ್ಕಾಗಿಯೇ. ಪುರುಷಾರ್ಥಗಳೆಂದು ಗುರುತಿಸಲ್ಪಡುವ ಧರ್ಮ, ಅರ್ಥ, ಕಾಮ, ಮೋಕ್ಷಗಳೇ ಆದರೂ ನಿಜವಾದ ಪುರುಷಾರ್ಥದ ಅರ್ಥವೊಂದೇ ಎಂದು ಜಗತ್ತಿನ ಎಲ್ಲಾ ಚಟುವಟಿಕೆಗಳನ್ನು ಅಭ್ಯಸಿಸಿದಾಗ ತಿಳಿದು ಬರುತ್ತದೆ. ಇದನ್ನ ತಿಳಿದೇ ಬೇಂದ್ರೆಯವರು ಹೇಳಿರುವುದು; ಯುದ್ಧದೇವನು ಬಂಧ!

ಬುದ್ಧದೇವನು ಬಂಧ!

ಅನ್ನದೇವರು ಇನ್ನೂ ಬರಲಿಲ್ಲೋ, ಇನ್ನೂ ಬರಲಿಲ್ಲ.*[೨೮] ಎಂಬ ನುಡಿಗಟ್ಟು ಜೀವನದ ಸತ್ಯತೆ ಆರ್ಥಿಕತೆಯ ಸಮರ್ಥನೆಯಾಗಿ ಕಾಣಬಹುದು.

ಪರಿಸರವನ್ನು ಆರ್ಥಿಕತೆಯ ವಿಭಾಗವಾದ ಅರ್ಥಶಾಸ್ತ್ರದ ವಿಜ್ಞಾನವಾಗಿ ಗುರುತಿಸಲಾಗುತ್ತಿದೆ. ಪರಿಸರದಲ್ಲಿನ ಮಾನವನ ಜೀವನಕ್ರಮ ಬಹುವಿಸ್ತಾರವಾದ ಅರ್ಥವನ್ನು ಹೊಂದಿರುವುದು. ಮೂಲನಿವಾಸಿ ಬುಡಕಟ್ಟುಗಳ ಅಧ್ಯಯನ ವಿಧಾನದಲ್ಲಿ ಪರಿಸರ ಪದವನ್ನು ಮೂಲತಃವಾಗಿ ಮನೆಯ ನಿರ್ವಹಣೆ ಹಾಗೂ ಮೂಲಭೂತ ಸೌಲಭ್ಯಗಳ ನಿರ್ವಹಣೆಯ ಕಡೆಯಿಂದಲೇ ಪಡೆಯಲಾಗಿದೆ. ಸಮುದಾಯಗಳ ಪರಿಸರದ ಆರ್ಥಿಕತೆ ಹಾಗೂ ಅಂತರ ಸಂಬಂಧಗಳು ಸಾಮಾಜಿಕ-ಆರ್ಥಿಕ ಜೀವನಕ್ರಮ ರೂಪಿಸುವಲ್ಲಿ ಪಾತ್ರ ಬೀರಿರುವುದು ಕಂಡುಬರುತ್ತದೆ. ಆರ್ಥಿಕ ಚಟುವಟಿಕೆಗಳ ಪರಿಣಾಮದ ಜೊತೆಗೆ, ಆರ್ಥಿಕ ಕಾರ್ಯಕ್ರಮ ಮತ್ತು ಮಾನವನ ಕಲ್ಯಾಣದ ಮೇಲೂ ಪ್ರಭಾವ ಬೀರಿರುವುದು ಹಲವಾರು ಅಧ್ಯಯನಕಾರರು ಗುರುತಿಸಿದ್ದಾರೆ. ಅಧ್ಯಯನದ ಮೂಲನಿವಾಸಿ ಬುಡಕಟ್ಟುಗಳ ಪರಿಸರದ ವ್ಯಾಪ್ತಿಯು ನೈಸರ್ಗಿಕ ಪರಿಸರವಾಗಿದೆ. ಮನುಷ್ಯ ನಿರ್ಮಿತವಾದ ಅಥವಾ ನೈಸರ್ಗಿಕ ಪರಿಸರದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಿಸರದ ಜೊತೆಗಿನ ಅಂತರ ಅವಲಂಬನೆಯ ಅಭಿವೃದ್ಧಿಯು ಅವ್ಯಾಹತವಾಗಿ ಸಾಗಬೇಕಾದರೆ ಆರ್ಥಿಕ ಉತ್ಪಾದನೆಗೆ ಆಧಾರವಾಗಿರುವ ಪರಿಸರ ವ್ಯವಸ್ಥೆಯೂ ಸಹ ನಿರಂತರ ಸಹಕಾರಿಯಾಗಿರಬೇಕು."[೨೬] ಸಮುದಾಯಗಳಲ್ಲಿ ಪರಿಸರವೂ ಕೇವಲ ನೈಸರ್ಗಿಕ ವಸ್ತುಸ್ಥಿತಿಗೆ ಸಂಬಂಧಿಸಿರದೇ ಇತರೆ ಎಲ್ಲಾ ಪ್ರಕ್ರಿಯೆಗಳಿಗೆ ಹೊಂದಿಕೊಂಡಿರುತ್ತದೆ. ಆದರಿಂದ ಸಮುದಾಯಗಳಲ್ಲಿನ ಪರಿಸರವು ಈ ಕೆಳಗಿನ ಅಂಶಗಳಲ್ಲಿ ಜೊತೆಗೂಡಿದವುಗಳಾಗಿ ಗುರುತಿಸಬಹುದಾಗಿದೆ.

ಭೌತಿಕ ಪರಿಸರ:- ಗಾಳಿ, ಜಲ, ನೆಲ, ಕಾಡು (ಅರಣ್ಯ) ಬೆಟ್ಟ, ಹಳ್ಳ-ಕೊಳ್ಳ, ಸರೋವರ, ಸಂಪತ್ತು ನೈಸರ್ಗಿಕದತ್ತವಾದ ಪರಿಸರವಾಗಿದೆ. ಈ ಅಂಶಗಳಲ್ಲಿನ ಸಂಕ್ಷಿಪ್ತನೋಟವನ್ನು ಸಮುದಾಯಗಳ ವಾಸಸ್ಥಾನದ ಚಿತ್ರಣದೊಂದಿಗೆ ಗುರುತಿಸಬಹುದು.

ಜೈವಿಕ ಪರಿಸರ:- ನೈಸರ್ಗಿಕವಾಗಿ ಪ್ರಕೃತಿಯಲ್ಲಿ ಸಸ್ಯಗಳು ಮತ್ತು ಪ್ರಾಣಿಗಳು ಹಾಗೂ ಜೀವ ಉತ್ಪತ್ತಿಗೆ ಸಹಾಯಕವಾದ ಪರಿಸರವಾಗಿದೆ. ಮೂಲನಿವಾಸಿ ಬುಡಕಟ್ಟುಗಳು ತಮ್ಮ ದೈವಾರಾಧನೆಯನ್ನು ಸಸ್ಯಗಳ ಮುಖೇನ ಗುರುತಿಸುವುದು ಈ ನಿಟ್ಟಿನಲ್ಲಿ ಕಾಣಬಬಹುದಾಗಿದೆ.

ಸಾಮಾಜಿಕ ಪರಿಸರ:- ಸಮಾಜದಲ್ಲಿ ಮೂಲನಿವಾಸಿ ಬುಡಕಟ್ಟು ಜನರು ಇತರ ಜನರ ಜೊತೆ ಬದುಕುವ ಅಭಿಲಾಷೆ ಹೊಂದಿರುವುದು ಕಂಡು ಬರುತ್ತದೆ. ಈ ನಿಟ್ಟಿನಲ್ಲಿ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ತವಕಿಸುವ ಕುಟುಂಬ, ನಂಬಿಕೆ, ಧರ್ಮ, ಕಾನೂನು, ಪರಂಪರೆ, ನೈತಿಕ ಹೊಣೆಗಾರಿಕೆ ಸಾಹಿತ್ಯ ಕಲೆಗಳ ನಡುವಿನ ಸಂಬಂಧವನ್ನು ಸಾಮಾಜಿಕ ಪರಿಸರವೆಂದು ಗುರುತಿಸಬಹುದು.

ಆರ್ಥಿಕ ಪರಿಸರ:- ಜನರ ವ್ಯವಹಾರ, ದುಡಿಮೆ, ಸಂಪನ್ಮೂಲಗಳ ಬಳಕೆಯ ಜೊತೆಗೆ ಸಹಭಾಳ್ವೆ, ಮತ್ತು ಪರಿಸ್ಥಿತಿ ಅದರ ಜೊತೆಗಿನ ರೂಪುರೇಷಗಳು ಆರ್ಥಿಕವಾಗಿ ಎದುರಿಸಬೇಕಾದ ಇತರೆ ಪರಿಸರದ ಪ್ರಶ್ನೆಗಳ ಸಂಕಲನವಾಗಿದೆ.

ಈ ಮೇಲಿನ ಎಲ್ಲವುಗಳು ಪ್ರಕೃತಿ ವ್ಯವಸ್ಥೆಯಲ್ಲಿ ಜೀವಿಸುತ್ತಿರುವ ಪ್ರತಿಯೊಂದು ಮಾನವ ಸಮುದಾಯಗಳು ಒಂದಕ್ಕೊಂದು ಪೂರಕವಾಗಿ ತನ್ನದೇ ಆದ ರೀತಿಯಲ್ಲಿ ಅವಲಂಬಿಸಿರುತ್ತವೆ. ಇದರಿಂದ ಪ್ರಯೋಜನ ಮತ್ತು ಅನಾನುಕೂಲಗಳು ಸಹ ಎದುರಾಗುವುದು ಸಹಜವಾಗಿದೆ. ಈ ಕ್ರಮವನ್ನು ಆಧರಿಸಿಯೇ ಮೂಲನಿವಾಸಿ ಬುಡಕಟ್ಟುಗಳ ಜೀವನಕ್ರಮದಲ್ಲಿ ಕಂಡುಬರುವ, ಪರಿಸರದಲ್ಲಿನ ಸಾಮಾಜಿಕ ಮೌಲ್ಯೋತ್ಪಾದಕ ಬಂಡವಾಳವಾದ, ಮೂಲಭೂತ ಸೌಲಭ್ಯಗಳ, ಸೌಕರ್ಯಗಳು ಮತ್ತು ಅಗತ್ಯತೆಗಳು ಉತ್ಪಾದನಾ ರಂಗಕ್ಕೆ ಪೂರಕ ಅಥವಾ ಮಾರ್ಗದರ್ಶಿಯಾಗಿರುವ ಪಾತ್ರವನ್ನು ಜೀವನಕ್ರಮದ ಪರಿಸರದಲ್ಲಿ ಗುರುತಿಸಬಹುದಾಗಿದೆ.

ಮೂಲನಿವಾಸಿ ಬುಡಕಟ್ಟುಗಳ ಪರಿಸರದ ಸಂಪನ್ಮೂಲಗಳಿಗೆ ಅವರ ಅಭಿವೃದ್ಧಿಯ ದೃಷ್ಟಿಕೋನದಿಂದ ವಿಶೇಷ ಮಹತ್ವವಿದೆ. ಸಂಪನ್ಮೂಲಗಳು ಪ್ರಕೃತಿ ನೀಡಿದ ಕೊಡುಗೆಯಾಗಿದೆ. ಮಾನವಾಭಿವೃದ್ಧಿಯ ಪ್ರತಿಪಾದಕರಾದ 'ಉಲ್‌ಹಕ್'ರವರು ಹೇಳುವಂತೆ ಮನುಷ್ಯ ಇತರ ಜೀವರಾಶಿ ಹಾಗೂ ಸಂಪನ್ಮೂಲಗಳೊಡನೆ ಬಾಳುವ ಪರಿಸ್ಥಿತಿಯು ಮಾನವಾಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯ ಎನ್ನುತ್ತಾರೆ. ಅಮಾತ್ಯಸೇನ್‌ರವರು "ಅಭಿವೃದ್ಧಿಯನ್ನು ಗುರುತಿಸುವಲ್ಲಿ ಪರಿಸರವನ್ನು ಅಲ್ಲಗೆಳೆಯುವಂತಿಲ್ಲ, ಪರಿಸರದ ಮುಖಾಂತರವೇ ಅಭಿವೃದ್ಧಿ ಸಾಧ್ಯ. ಇಂತಹ ಅಭಿವೃದ್ಧಿಯೇ ನಿಜವಾದ ಮಾನವಾಭಿವೃದ್ಧಿಯ ಧ್ಯೋತಕ ಎನ್ನುತ್ತಾರೆ.[೨೦] ಮೂಲನಿವಾಸಿ ಬುಡಕಟ್ಟುಗಳ ಜೀವನಕ್ಕೆ ಸಕಲ ಸೌಲಭ್ಯಗಳನ್ನು ಮುಕ್ತವಾಗಿ ನೀಡಿದ್ದ ಆರ್ಥಿಕತೆಯ ಸುಭದ್ರಸ್ಥಿತಿಯ ಇತಿಹಾಸವನ್ನು ಅರಣ್ಯಪರಿಸರದಿಂದ ತಿಳಿಯಬಹುದು. ಪ್ರಸ್ತುತ ಮೂಲನಿವಾಸಿ ಬುಡಕಟ್ಟುಗಳ ಅಧ್ಯಯನ ಕ್ರಮದಲ್ಲಿ ಪರಿಸರ ಪದವನ್ನು ಮತ್ತು ಪರಿಸರದ ಜೀವನ ವಿಧಾನದ ಸಂರಚನೆಯನ್ನು ಸಮುದಾಯಗಳು ನೆಲೆಗೊಂಡ ಸ್ಥಳದ ಹಿನ್ನೆಲೆಯಲ್ಲಿ ಮತ್ತು ಸ್ಥಳಾಂತರದ ನಂತರ ಬೆಳೆದು ಬಂದ ಸಾಮಾಜಿಕ ಆರ್ಥಿಕ ರಚನೆಗೆ ಪೂರಕವಾದ ಪರಿಸರದ ಬದಲಾದ ಕ್ರಮವೆಂದೇ ಗುರುತಿಸಲಾಗಿದೆ.

ಮೂಲನಿವಾಸಿ ಬುಡಕಟ್ಟುಗಳ ಜೀವನವಿಧಾನವು ಸುತ್ತಮುತ್ತಲಿನ ಜೈವಿಕ ಮತ್ತು ಅಜೈವಿಕ (ಭೌತಿಕ) ಅಂಶಗಳೊಂದಿಗಿನ ಅಂತರಸಂಬಂಧದ ನಡುವೆ ಸಾಂಸ್ಕೃತಿಕ ಬದಲಾವಣೆಯನ್ನು ಬಯಸಿರುವುದು ಕಂಡುಬರುತ್ತದೆ. ಬದಲಾಗುತ್ತಿರುವ ಪರಿಸರಕ್ರಮ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಸನ್ನಿವೇಶದಲ್ಲಿ ಉಸಿರುಕಟ್ಟಿರುವುದು ಕಂಡುಬರುತ್ತದೆ. ಜೀವನಕ್ರಮದ ಮೇಲೆ ಕಂಟಕಪ್ರಾಯದ ಸಂಗತಿಗಳು ಒಂದಲ್ಲ ಒಂದು ರೀತಿ ಮೂಡಿವೆ. ಸಮುದಾಯಗಳ ಜನರು ದೊರೆಗಳಂತ್ತಿದ್ದವರು ಬೇಡುವರಾಗಿದ್ದಾರೆ. ಅರಣ್ಯದಿಂದ ಹೊರಹಾಕಿದ ನಂತರ, ಬದುಕಿನ ಒಂದು ಭಾಗದ ಆಸ್ತಿ ಹೋದಂತೆ ಆಗಿದೆ. ಆರೋಗ್ಯದ ದೃಷ್ಟಿಯಿಂದಲೂ ಬದಲಾದ ಪರಿಸರ ಸಮುದಾಯದ ಜನರಲ್ಲಿ ಪೌಷ್ಠಿಕತೆ ಇಲ್ಲದಂತಿರುವ ಗೊಂಬೆಗಳಂತೆ ಮಾಡಿರುವುದು ಕಂಡುಬರುತ್ತದೆ. "ರೂಸೋ ಹೇಳುವಂತೆ ನಿಸರ್ಗವೊಂದು ತೆರೆದ ಪುಸ್ತಕ. ಅದೊಂದು ಶ್ರೇಷ್ಠ ಗುರು."[೨೧] ಈ ಗುರುವಿನ ಸಾನಿಧ್ಯದಲ್ಲಿ ಏನೆಲ್ಲವನ್ನೂ

ಕಲಿಯಬಹುದು. ಎನ್ನುವುದನ್ನು ರೂಢಿಗತ ಮಾಡಿಕೊಂಡಿದ್ದಾರೆ. ಬದಲಾವಣೆ ಹೊಸ ಬದುಕಿನ ಆರಂಭದ ತಾಣಗಳಾಗಿವೆ. ಹೀಗಾಗಿ ಹೊಸತನದ ಪರಿಸರ ವಿಶಾಲ ಜಗತ್ತಿನ ಪ್ರಕ್ರಿಯೆಗಳಿಗೆ ತೆರೆದು ಕೊಳ್ಳುವಂತೆ ಮಾಡಿದೆ.

೫. ಸಮುದಾಯಗಳು ನೆಲೆನಿಂತ ಪರಿಸರದ ಸಂಕ್ಷಿಪ್ತ ಪರಿಚಯ

ಪರಿಸರ ನಮ್ಮ ಸುತ್ತಮುತ್ತಲಿನ ಸಮೂಹಸ್ಥಿತಿ ಎನಿಸಿದೆ. ಮನುಷ್ಯನ ಜೀವಂತ ಬಾವಗಳ ಪ್ರತಿನಿಧಿಕವಾದ ಪರಿಸರವು ವಾಸ್ತವಿಕವಾಗಿ, ಪ್ರಚಲಿತದಲ್ಲಿರುವ ಜಲ, ನೆಲ, ವಾಯು, ಕಾಡು, ನದಿ, ಪ್ರಾಣಿ, ಪಕ್ಷಿಗಳ ಸಮೂಹ ಸ್ಥಿತಿಯ ಸಾವಯವ ಬದುಕಿನ ಒಪ್ಪಂದಕ್ಕೆ ನಾವು ಪರಿಸರ ಎಂದು ರೂಢಿಗತ ಮಾಡಿಕೊಂಡಿರುವುದು. ಆದರಿಂದ ಪ್ರತಿಯೊಬ್ಬ ಪ್ರತಿಯೊಂದು ಸಮುದಾಯದ ಮನುಷ್ಯನ ಜೀವನ ಕ್ರಮದಲ್ಲಿ ಭೌಗೋಳಿಕ ಪರಿಸರವನ್ನು ಅಲ್ಲಗೆಳೆಯುವಂತಿಲ್ಲ. ಮನುಷ್ಯನ ಬದುಕು ಭಾವನೆಗಳು ಸುತ್ತಲಿನ ಪರಿಸರದೊಂದಿಗೆ ಗಾಢ ಸಂಬಂಧರ್ವೆಪಟ್ಟಿರುವುದು. ಪರಿಸರದ ಕೂಸಾದ ಮನುಷ್ಯನ ಬದುಕು ಸಹ ರೂಪುಗೊಳ್ಳುವುದು ಆ ಪರಿಸರ ಕ್ರಮದಂತೆಯೇ. ಸಾವಿರಾರು ವರ್ಷಗಳ ಹಿಂದೆ ಪರಿಸರದ ತೊಟ್ಟಿಲಿನಲ್ಲಿ ಮನುಕುಲದ ಸಂಸ್ಕೃತಿ ಅರಳಿರುವುದು, ಆಕಾರಗೊಂಡು ಬೆಳೆದು ಬಂದ ನಿದರ್ಶನ ವಿವಿಧ ನಾಗರೀಕತೆಗಳ ಬೆಳವಣಿಗೆಯ ಚಾರಿತ್ರಿಕ ಇತಿಹಾಸದಿಂದ ತಿಳಿದುಬರುತ್ತದೆ. ಇಂತಹ ಪರಿಸರದಲ್ಲಿನ ಗಾಳಿ, ನೀರು, ನೆಲ, ಬೆಟ್ಟ, ಗಿಡ, ಮರ, ಪಕ್ಷಿ, ಪ್ರಾಣಿಗಳ ಒಡನಾಟದಲ್ಲಿ ಮನುಷ್ಯನ ಭಾವಕೋಶ ಮತ್ತು ಬುದ್ಧಿ ಕೋಶಗಳು ಬಲಗೊಂಡಿವೆ. ಹೀಗಾಗಿ ಪ್ರತಿಯೊಬ್ಬ ಮನುಷ್ಯನ ಜೀವಿತದ ಚಹರೆಯಲ್ಲಿ ಭೌಗೋಳಿಕ ಪರಿಸರ ಅನೇಕ ಆಯಾಮಗಳನ್ನು ಸೃಷ್ಟಿಸಿದೆ. ಈ ನಿಟ್ಟಿನಲ್ಲಿ ನಿರ್ಧಿಷ್ಟ ಭೂಪ್ರದೇಶ, ಜನಸಂಖ್ಯೆ, ಸಾಮಾಜಿಕ ಸಂರಚನೆ, ಮೂಲಭೂತ ಸೌಲಭ್ಯಗಳೊಂದಿಗಿನ ಭೌಗೋಳಿಕ ಸಾಮಿಪ್ಯ ಮುಖ್ಯವಾದ ಅಂಶಗಳಾಗಿರುತ್ತವೆ. ಇವುಗಳು ಅಭಿವೃದ್ಧಿಯ ನಿರ್ಧಾರಕ ಅಂಶಗಳು ಸಹ.

ಮೂಲನಿವಾಸಿ ಬುಡಕಟ್ಟುಗಳಾದ ಜೇನುಕುರುಬ ಮತ್ತು ಕೊರಗರು ನೆಲೆನಿಂತಿರುವ ವಾಸಸ್ಥಳವು ಒಂದು ಭೌಗೋಳಿಕ ವಿಶೇಷತೆವಾಗಿದೆ. ರಾಜ್ಯದ ಗಡಿ ಜಿಲ್ಲೆಗಳ ಅರಣ್ಯವನ್ನು ಹೊಂದಿರುವ ಜಿಲ್ಲೆಗಳಾಗಿವೆ. ನಕ್ಷೆಯಲ್ಲಿ ೧ರಲ್ಲಿ ತೋರಿಸಲಾದಂತೆ ಇಲ್ಲಿನ ಪರಿಸರ, ಅರಣ್ಯ ಜೀವಸಂಕುಲ ಮತ್ತು ಮಾನವನೊಂದಿಗಿನ ಅಂತರಾಷ್ಟ್ರೀಯ ಮನ್ನಣೆ ಪಡೆದಿದೆ. ಇಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲದೇ ಅನೇಕ ಇತರೆ ಬುಡಕಟ್ಟು ಸಮುದಾಯಗಳು ವಾಸಿಸುತ್ತಿವೆ. ಇತರೆಲ್ಲ ಸಾಮಾನ್ಯ ಬುಡಕಟ್ಟುಗಳು ಮತ್ತು ಇತರ ಸಾಮಾನ್ಯ ಜನ ಸಮುದಾಯಗಳೊಂದಿಗೆ ಜೊತೆಗೂಡಿ ಬದುಕುತ್ತಿರುವ ಸ್ಥಿತಿ ಕಂಡುಬರುತ್ತದೆ. ಒಂದೆಡೆ ಸಮುದಾಯಗಳು ಕ್ರಿಯಾತ್ಮಕವಾಗಿ ಸ್ವತಂತ್ರವಾಗಿದ್ದವುಗಳು, ಭೌಗೋಳಿಕವಾಗಿ ಪ್ರತ್ಯೇಕತೆಯನ್ನ ಕಾಯ್ದುಕೊಂಡವುಗಳು. ಇಂದು ಇತರೆಲ್ಲಾ ಸಮುದಾಯ ಮತ್ತು ಜನವರ್ಗದವರೊಂದಿಗೆ ಸಂಕ್ರಮಣಗೊಂಡು ಜೀವಿಸುತ್ತಿದ್ದಾರೆ.

ಜೇನುಕುರುಬ ಸಮುದಾಯ

ಭೌಗೋಳಿಕ ಪ್ರದೇಶ:– ಸಾಮಾನ್ಯವಾಗಿ ತಿಳಿದು ಬರುವುದೆನೆಂದರೆ, ಇತಿಹಾಸದ ಎಲ್ಲಾ ನಾಗರೀಕತೆಗಳು ಬೆಳೆದು ಬಂದಿರುವುದು ನದಿ ತೀರ ಹಾಗೂ ಅರಣ್ಯ ಪ್ರದೇಶಗಳ ಮೂಲದಿಂದಲೇ. “ನೀರು ಒಂದು ಸಂಸ್ಕೃತಿಗೆ ಮೂಲಾಧಾರ” ಜೇನುಕುರುಬರು ನೀರು ಮತ್ತು ಕಾಡು (ಅರಣ್ಯ) ಪ್ರದೇಶಗಳಲ್ಲಿ ಸುಮಾರು ವರ್ಷಗಳಿಂದ ನೆಲೆಗೊಂಡಿದ್ದು ಹಲವು ಅಧ್ಯಯನಕಾರರು ಗುರುತಿಸಿದ್ದಾರೆ. ದಟ್ಟ ಅರಣ್ಯದ ನಡುವಿನ ಜೇನುಕುರುಬರ ವಾಸಸ್ಥಳ ಪ್ರದೇಶವು ೩ ಜಿಲ್ಲೆಗಳಲ್ಲಿ ವ್ಯಾಪಿಸಿದೆ. ಪೂರ್ವದಲ್ಲಿ ಕೇರಳದ ನೀಲಗಿರಿ, ತಮಿಳುನಾಡು ಪ್ರಾಂತ್ಯಗಳಲ್ಲೂ ಜೇನುಕುರುಬರು ನೆಲೆಸಿದ್ದು ಉಂಟು. ಪ್ರಸ್ತುತ ಬದಲಾದ ಜೀವನಕ್ರಮ, ಭೌಗೋಳಿಕ ವಿಸ್ತಾರತೆಯಂತೆ, ಜೇನುಕುರುಬರು ೩ ಜಿಲ್ಲೆಗಳ ವ್ಯಾಪ್ತಿಯಲ್ಲಿನ ಪರಿಸರಕ್ರಮದಲ್ಲಿ ಅನೇಕ ರೀತಿಯ ಬದಲಾವಣೆಗಳೊಂದಿಗೆ ಜೀವಿಸುತ್ತಿದ್ದಾರೆ. ರಾಜ್ಯದ ರಾಜಧಾನಿಗೆ ಹೊಂದಿಕೊಂಡಂತೆ ಇರುವ ಜಿಲ್ಲೆಗಳಾದ ಚಾಮರಾಜನಗರದಿಂದ ಆರಂಭಗೊಂಡು ಮೈಸೂರು ಜಿಲ್ಲೆಯ ಮುಖಾಂತರ ಕೊಡಗು ಜಿಲ್ಲೆಯ ಹಲವು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ನೆಲೆಗೊಂಡಿದ್ದಾರೆ. ಈ ೩ ಜಿಲ್ಲೆಗಳಲ್ಲಿನ ೭ ತಾಲ್ಲೂಕು ಪ್ರದೇಶವಾದ ಅರೆಮಲೆನಾಡು ಮತ್ತು ಏರಿಳಿತದೊಂದಿಗೆ ಕೂಡಿರುವ ರಾಜ್ಯದ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳಿಗೆ ಹೊಂದಿಕೊಂಡಂತೆ, ಮೈಸೂರು, ಕೇರಳದ ಕಣ್ಣಾನೂರು ಹೊಂದಿಕೊಂಡಿದೆ. ಕೊಡಗು ಜಿಲ್ಲೆಯ ಪಕ್ಕದಲ್ಲೆ ವೈನಾಡು ಜಿಲ್ಲೆಯ ಗಡಿಭಾಗವನ್ನು ಹೊಂದಿಕೊಂಡಿರುವ ಭೌಗೋಳಿಕ ವಿಶೇಷತೆಯ ಲಕ್ಷಣಗಳನ್ನು ಜೇನುಕುರುಬರು ಹೊಂದಿದ್ದಾರೆ. ಸ್ಥಳಾಂತರದ ಕಾರ್ಯ ಪ್ರಾರಂಭಗೊಂಡ ನಂತರದ ದಿನಗಳಲ್ಲೂ ಪುನರ್‌ವಸತಿ ನಿರ್ಮಿಸಿರುವುದು ಅದೇ ಜಿಲ್ಲೆಗಳ ಅರಣ್ಯಪ್ರದೇಶದಿಂದ ಹೊರಗೆ. ಅರಣ್ಯಪ್ರದೇಶದ ಪಕ್ಕದಲ್ಲೇ ನೆಲೆಸಿದ್ದರೂ, ಅರಣ್ಯ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ. ಜೇನುಕುರುಬ ವಕ್ತೃ ಹೇಳುವಂತೆ ನಮ್ಮನೇನೋ ಹೊರಹಾಕಿದರು, ಆದರೆ ನಮ್ಮ ದೇವರುಗಳು ಅರಣ್ಯದಲ್ಲೇ ಇದ್ದಾವೆ. ನಾವು ವರ್ಷಕ್ಕೆ ಒಮ್ಮೆಯಾದರೂ ಅಲ್ಲಿ ಹೋಗಿ ಹಬ್ಬ ಆಚರಣೆ ಮಾಡುತ್ತೀವಿ. ಆಗ ಅರಣ್ಯಾಧಿಕಾರಿಗಳು ಆನೆಗಳಿಂದ ತುಳಿಸಿ, ಶಿಕ್ಷೆ ನೀಡುತ್ತಾರೆ. ಆದರೂ ನಾವು ಜೇನುಕುರುಬರ ಪ್ರತಿಕುಟುಂಬವೂ ಅರಣ್ಯಕ್ಕೆ ಹೋಗಲೇಬೇಕು, ದೇವರನ್ನ ನೋಡೋಕೆ ಎನ್ನುತ್ತಾನೆ.”[೩೨] ಅವರುಗಳ ದೇವರುಗಳು ಯಾರು? ಏಕೆ ಅಲ್ಲಿದ್ದಾರೆ? ಎಂದರೆ ಅರಣ್ಯದಲ್ಲಿ ನಮಗೆ ಅನ್ನ ನೀಡಿದ ವೃಕ್ಷಗಳೇ ನಮ್ಮ ದೇವರುಗಳು ಎಂದು ತಿಳಿಸುತ್ತಾರೆ. ಇಲ್ಲಿ ಜೇನುಕುರುಬರ ವಾಸಸ್ಥಾನ/ಪ್ರದೇಶ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಜೀವನ ನಿರ್ವಹಣೆಯಲ್ಲಿ ಪ್ರಧಾನ ಪಾತ್ರ ವಹಿಸಿರುವುದು ಕಂಡುಬರುತ್ತದೆ.

ರಾಜ್ಯದ ೨೦೦೧ನೇ ಸಾಲಿನ ಪ್ರಕಾರ ಶೇಕಡವಾರು ಅನುಪಾತದಲ್ಲಿ ಮೈಸೂರಿನ ೪ ತಾಲ್ಲೂಕುಗಳಾದ ಹೆಚ್.ಡಿ.ಕೋಟೆ, ಹುಣಸೂರು, ನಂಜನಗೂಡು, ಪಿರಿಯಾಪಟ್ಟಣದಲ್ಲಿ ಶೇ.

೭೩.೫೫%, ಚಾಮರಾಜನಗರದ ತಾಲ್ಲೂಕಿನಲ್ಲಿ ಶೇ.೦೩.೫೧೦% ಮತ್ತು ಕೊಡಗು ಜಿಲ್ಲೆಯ ೨ ತಾಲ್ಲೂಕುಗಳಾದ ಸೋಮವಾರಪೇಟೆ, ವಿರಾಜಪೇಟೆಯಲ್ಲಿ ಶೇ. ೨೩.೮೩% ಜೇನುಕುರುಬರು ನೆಲೆನಿಂತಿರುವುದು ಕಂಡುಬರುತ್ತದೆ. ಈ ೩ ಜಿಲ್ಲೆಗಳ ವಿಸ್ತೀರ್ಣ ೧೬.೦೫೧ ಚ.ಕಿ.ಮಿ. ವ್ಯಾಪ್ತಿಯಲ್ಲಿ ಜೇನುಕುರುಬರು ವ್ಯಾಪಿಸಿರುವುದು ಕಂಡುಬರುತ್ತದೆ.[೩೩]

ಜನಸಂಖ್ಯೆ ಹಂಚಿಕೆ:- ಯಾವುದೇ ಪ್ರದೇಶದ ಭೌಗೋಳಿಕ ಪರಿಸರದ ಅಧ್ಯಯನದಲ್ಲಿ ಜನಸಂಖ್ಯಾ ಅಂಶವು ಅತ್ಯವಶ್ಯಕವಾದದ್ದು. ಜನಸಂಖ್ಯೆಯ ನಿರ್ದಿಷ್ಟ ಅಂಕಿ-ಅಂಶಗಳು ಆ ಪ್ರದೇಶದ ಯೋಜನೆ ಮತ್ತು ಆಡಳಿತ ವ್ಯವಸ್ಥೆಗೆ ಅಗತ್ಯವಾಗಿ ಬೇಕಾಗಿರುತ್ತದೆ. ವಿಶಾಲ ಅರಣ್ಯದಲ್ಲಿ ಹಂಚಿಹೋಗಿದ್ದ ಜೇನುಕುರುಬರು ರಾಜ್ಯದ ಹೊರಗು ಅಂದರೆ ತಮಿಳುನಾಡು, ಕೇರಳ ಪ್ರದೇಶದ ಅರಣ್ಯದಲ್ಲಿ ಬಹುವಿಸ್ತೃತವಾಗಿ ಸಾಂಪ್ರದಾಯಿಕ ಜೀವನ ರೂಢಿಸಿಕೊಂಡಿದ್ದದು ತಿಳಿದು ಬರುತ್ತದೆ. ಸಂವಿಧಾನಾತ್ಮಕ ಬೆಳವಣಿಗೆಗಳು ಬೆಳೆದು ಬಂದ ನಂತರ, ಅಭಿವೃದ್ಧಿ ಕಾರ್ಯದ ಪರವಾಗಿ ಸ್ಥಳಾಂತರದ ಕಾರ್ಯ ಮೊದಲುಗೊಂಡು ನಿರ್ದಿಷ್ಟ ಜನಸಂಖ್ಯೆಯ ಲೆಕ್ಕಾಚಾರ ಮಾಡಲಾರಂಭಿಸಿರುವುದು ಕಾಣಬಹುದಾಗಿದೆ. ಸ್ಥಳಾಂತರದ ಕಾರ್ಯ ಪ್ರಸ್ತುತದವರೆಗೂ ಗೊಂದಲಗಳ ನಡುವೆ ನಡೆಯುತ್ತಿರುವುದು ಕಂಡುಬರುತ್ತದೆ. ಇದಕ್ಕೆ ನಿರ್ದಶನವಾಗಿ ನಾಗಪುರ ೪ನೇ ಘಟಕದ ಪುನರ್‌ವಸತಿ ಕಾಲೋನಿಯ ಪ್ರಾರಂಭವನ್ನು ಹೆಸರಿಸಬಹುದು. ಅನೇಕ ಸಂಸ್ಕೃತಿಪರ ಜಾನಪದೀಯ ಅಧ್ಯಯನಕಾರರು, ಹಾಗೂ ಮಾನವಶಾಸ್ತ್ರಜ್ಞರು ಸಮುದಾಯದ ಜನಸಂಖ್ಯೆಯನ್ನು ಅರಣ್ಯವಾಸದಲ್ಲೇ ಗುರುತಿಸಿದ್ದಾರೆ. ಅವರುಗಳು ಜನಸಂಖ್ಯೆಯ ನಿಖರವಾದ ಮಾಹಿತಿ ಸಂಗ್ರಹಿಸುವುದು ಕಷ್ಟದ ಕೆಲಸವೆಂದೇ ಪರಿಗಣಿಸಿ ನಂತರ ಅಂದಾಜು ಲೆಕ್ಕಾಚಾರದ ಮಾಹಿತಿ ನೀಡಿರುವುದು ಕಂಡುಬರುತ್ತದೆ. ಜೇನುಕುರುಬರು ೧೯೭೩ರವರೆಗೂ ಕಾಡಿನಲ್ಲಿ ಪ್ರಕೃತಿಯ ವಿವಿಧ ಪ್ರಾಣಿಗಳೊಡನೆ ಸಾಮರಸ್ಯದಿಂದ ಬದುಕಿದ್ದು, ೧೯೭೩ರಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಆಣೆಕಟ್ಟು ನಿರ್ಮಾಣ ಮಾಡಿದ್ದರಿಂದ ಸಾವಿರಾರು ಎಕರೆ ಭೂಮಿ, ಅರಣ್ಯ ಮುಳುಗಡೆಯಾಗಿದ್ದರ ಪರಿಣಾಮವಾಗಿ ನಾಡಿನ ಹತ್ತಿರವಾಗಿರುವುದು ಕಾಣಬಹುದು. ಅಲ್ಲದೇ ಅಂದಾಜು ಲೆಕ್ಕಾಚಾರದ ಅಂಕಿ-ಅಂಶಗಳು ಸ್ವಲ್ಪಮಟ್ಟಿಗೆ ಸಮೀಪ ಸಂಖ್ಯೆಯನ್ನು ಪ್ರತಿನಿಧಿಸುತ್ತಿರುವುದು ಕಾಣಬಹುದು. ಕೇಂದ್ರ ಸರ್ಕಾರವು ಮೂಲನಿವಾಸಿ ಬುಡಕಟ್ಟುಗಳನ್ನು ವಿಶೇಷವಾಗಿ ಗುರುತಿಸಿರುವ ಜನಗಣತಿಯ ಮಾಹಿತಿಯಿಂದ ನಿರ್ಧಿಷ್ಠ ಜನಸಂಖ್ಯೆಯನ್ನು ಈ ಕೆಳಗಿನಂತೆ ತಿಳಿಯಬಹುದು.

"೧೯೯೧ರ ಜನಗಣತಿಯ ಪ್ರಕಾರ ಜನಸಂಖ್ಯೆ ಒಟ್ಟು = ೨೯,೩೭೧

೨೦೦೧ ರ ಜನಗಣತಿಯ ಪ್ರಕಾರ ಜನಸಂಖ್ಯೆ ಒಟ್ಟು = ೨೫,೪೮೬"[೩೪]

ಇತ್ತೀಚೆಗೆ ಸರ್ಕಾರವು ಯೋಜನೆಗಳನ್ನು ರೂಪಿಸುವ ನಿಟ್ಟಿನಲ್ಲಿ ಸಮಗ್ರ ಜನಸಂಖ್ಯೆಯನ್ನು ಕ್ರೋಢೀಕರಿಸಲಾಗಿದೆ. ೨೦೦೧ರ ಕೇಂದ್ರ ಸರ್ಕಾರದ ಜನಗಣತಿಯಂತೆ ೧೯೯೧ನೇ ಜನಗಣತಿಗಿಂತ ಕಡಿಮೆ ಕಂಡುಬರುತ್ತಾರೆ. ಇದಕ್ಕೆ ಹಲವಾರು ಕಾರಣಗಳು ಕಾರಣವೆನ್ನಬಹುದು. ಅಥವಾ ಲೆಕ್ಕಾಚಾರದಲ್ಲಿನ ಲೋಪದೋಷಗಳು ಕಾರಣವಾಗಿರಬಹುದು. ಇನ್ನು ವಲಸೆ ಪ್ರವೃತ್ತಿ ಈ ಜನರಲ್ಲಿ ಇರುವುದರಿಂದ ಜನಗಣತಿಯಲ್ಲಿ ಮೇಲಿನಂತೆ ಕಂಡುಬರುತ್ತಾರೆ. ಅಲ್ಲದೆ ಉದ್ಯೋಗಕ್ಕಾಗಿ ಅಲೆಯುತ್ತಾ ರಾಜ್ಯದ ಗಡಿ ಜಿಲ್ಲೆ ಕೇರಳ ಪ್ರದೇಶಕ್ಕೂ ವಲಸೆ ಹೋಗಿರುವುದಾಗಿ ತಿಳಿದು ಬರುತ್ತದೆ. ಕರ್ನಾಟಕ ರಾಜ್ಯದಲ್ಲಿಯೂ ಹಲವು ಕುಟುಂಬಗಳು ವಲಸೆ ಹೋಗಿರುವ ಬಗ್ಗೆ ಇಲಾಖೆಯ ಯೋಜನಾ ಸಮನ್ವಯಾಧಿಕಾರಿಗಳು ತಿಳಿಸುತ್ತಾರೆ.

ಕೋಷ್ಟಕ:೨.೨: ಕರ್ನಾಟಕದಲ್ಲಿನ ಜೇನುಕುರುಬರ ಸಮಗ್ರ ಜನಸಂಖ್ಯೆ ವಿವರ:

ಕ್ರ.ಸಂ	ತಾಲ್ಲೂಕುಗಳು	ಒಟ್ಟು ಕುಟುಂಬಗಳ ಸಂಖ್ಯೆ	ಪುರುಷರ ಸಂಖ್ಯೆ	ಮಹಿಳೆಯರ ಸಂಖ್ಯೆ	ಒಟ್ಟು ಜೇನುಕುರುಬರ ಜನಸಂಖ್ಯೆ	ಶೇಕಡಾವಾರು
೧	ಹೂಣಸೂರು	೧೭೮೪	೨೯೬೬	೨೬೦೭	೫೫೭೩	೨೧.೮೬
೨	ಹೆಚ್.ಡಿ ಕೋಟೆ	೨೬೧೭	೫೨೮೯	೪೭೧೮	೧೦೦೦೭	೩೯.೨೬
೩	ಪಿರಿಯಾಪಟ್ಟಣ	೬೬೫	೧೧೬೩	೧೨೪೨	೨೪೦೫	೯.೪೩
೪	ನಂಜನಗೂಡು	೧೩೫	೨೭೫	೨೫೫	೫೩೦	೨.೦೭
೫	ಗುಂಡ್ಲುಪೇಟೆ	೨೬೮	೪೪೯	೪೪೫	೮೯೪	೩.೫೦
೬	ವೀರಾಜಪೇಟೆ	೧೩೦೩	೨೩೨೪	೧೮೭೩	೪೧೯೭	೧೬.೪೬
೭	ಸೋಮವಾರಪೇಟೆ	೫೯೮	೯೨೧	೯೫೯	೧೮೮೦	೭.೩೭
	ಒಟ್ಟು	**೭೩೬೯**	**೧೩೩೮೭**	**೧೨೦೯೯**	**೨೫೪೮೬**	**೧೦೦%**

ಆಧಾರ: ಭಾರತದ ಜನಗಣತಿ ೨೦೦೧ : ಭಾರತ ಸರ್ಕಾರ

ಕರ್ನಾಟಕದಲ್ಲಿನ ಒಟ್ಟಾರೆ ಜೇನುಕುರುಬರ ಜನಸಂಖ್ಯೆಯನ್ನು ಅವರುಗಳು ನೆಲೆನಿಂತ ಪರಿಸರ ಕ್ರಮದಂತೆ ೨೦೦೧ ರಲ್ಲಿ ಗುರುತಿಸಲಾಗಿದೆ. ಆ ಪ್ರಕಾರ ಜೇನುಕುರುಬರ ಸಂಖ್ಯೆ ೨೫,೪೮೬. ೭ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ನೆಲೆಸಿರುವುದು ಕಂಡು ಬರುತ್ತದೆ. ಒಟ್ಟಾರೆ ರಾಜ್ಯದಲ್ಲಿ ಜೇನುಕುರುಬರ ಕುಟುಂಬಗಳ ಸಂಖ್ಯೆ೭೩೬೯ ಕಂಡು ಬರುತ್ತದೆ. ೭೩೬೯

ಕುಟುಂಬಗಳಲ್ಲಿ ಮಹಿಳೆಯರ ಸಂಖ್ಯೆ ೧೨,೮೯೯ ಮತ್ತು ಪುರುಷರ ಸಂಖ್ಯೆ ೧೩,೩೮೭ ಆಗಿದ್ದು, ಸುಮಾರು ೧೨೮೮ ಪುರುಷರು ಮಹಿಳೆಯರಿಗಿಂತ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಶೇಕಡವಾರು ಪ್ರಮಾಣದಲ್ಲಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಶೇ. ೩೯.೨೬% ಜನರಿದ್ದು ಪ್ರಥಮ ಸ್ಥಾನವಾಗಿ ಪ್ರಮುಖ ಸ್ಥಳವಾಗಿರುವುದು ಕಾಣಬಹುದು. ಅತಿ ಕಡಿಮೆ ಸಂಖ್ಯೆಯ ನಂಜನಗೂಡಿನ ವ್ಯಾಪ್ತಿಯಲ್ಲಿ ಶೇ. ೦೨.೦೭% ಜನರು ನೆಲೆನಿಂತಿರುವುದು ಕಾಣಬಹುದಾಗಿದೆ. ಒಟ್ಟಾರೆ ಮೈಸೂರು ಜಿಲ್ಲೆಯಲ್ಲಿ ಶೇ. ೭೩.೫೫% ಜನರು ನೆಲೆಸಿರುವುದರಿಂದ ಜೇನುಕುರುಬರು ಮೈಸೂರು ಜಿಲ್ಲೆಯ ಕೇಂದ್ರಿತವಾದ ಸಮುದಾಯವೆಂದೇ ಪರಿಗಣಿಸಬಹುದು.

ನೈಸರ್ಗಿಕ ಸಂಪತ್ತು:- ಯಾವುದೇ ಕ್ಷೇತ್ರದಲ್ಲಿನ ಸಾಮಾಜಿಕ ಆರ್ಥಿಕ ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳಲು ಪ್ರಕೃತಿದತ್ತವಾಗಿ ಆ ಪ್ರದೇಶಕ್ಕೆ ಕೊಡುಗೆಯಾಗಿರುವ ಪರಿಸರದಲ್ಲಿನ ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ತಿಳಿಯುವುದು ಅವಶ್ಯಕವಾಗಿದೆ, ಅವುಗಳು ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಯಲ್ಲಿ ತನ್ನದೇ ಪಾತ್ರವನ್ನು ನಿರ್ವಹಿಸುತ್ತವೆ. ಪ್ರಕೃತಿದತ್ತವಾಗಿ ನೀಡಿರುವ ವರದಾನಗಳಲ್ಲಿ ಅತಿ ಮುಖ್ಯವೆನಿಸಿದ ಭೂಮಿ ಮತ್ತು ಅರಣ್ಯವು ಸಮುದಾಯದ ಜೀವನ ವಿಧಾನಕ್ಕೆ ಪೂರಕವಾಗಿದೆ. "ನೈಸರ್ಗಿಕ ಸಂಪತ್ತನ್ನು ಎರಡು ರೀತಿಯಲ್ಲಿ ಗುರುತಿಸಲಾಗುತ್ತಿದೆ, ೧) ಮುಗಿಯುವ ಮತ್ತು ೨) ಮುಗಿಯದ ಸಂಪತ್ತು ಎಂದು, ಕೆಲವು ಸಂಪತ್ತು ಪುನಃ ಪುನಃ ಉಪಯೋಗಿಸಲು ಸಾಧ್ಯವಿದೆ. ಅಂತಹ ಸಂಪನ್ಮೂಲಗಳನ್ನು ಮುಗಿದು ಹೋಗದವುಗಳೆಂದು ಕರೆಯಲಾಗುತ್ತದೆ. ಭೂಮಿ ಮತ್ತು ಅರಣ್ಯ ಮುಗಿದು ಹೋಗದ ಸಂಪತ್ತು."*[೩೫] ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಭೂಮಿ ಮತ್ತು ಅರಣ್ಯಕ್ಕೆ ವಿಶೇಷ ಮಹತ್ವವಿದೆ. ಅವುಗಳ ಸಂಕ್ಷಿಪ್ತ ವಿವರಣೆ ಮಾತ್ರ ಅಧ್ಯಯನಕ್ಕೆ ಸೂಕ್ತವೆನಿಸಿ ನೀಡಲಾಗಿದೆ.

ಭೂಮಿ:- ವೈಜ್ಞಾನಿಕವಾಗಿ ಭೂಮಿಯು ಆರ್ಥಿಕಾಭಿವೃದ್ಧಿಗೆ ಅಗತ್ಯವಾಗಿದೆ. ಕುಮ್ರಿಬೇಸಾಯ ಕ್ರಮದ ಹಂತದಿಂದ ಭೂಮಿಯ ಜೊತೆಗಿನ ನಂಟು ಜೇನುಕುರುಬರಲ್ಲಿ ಕಾಣಬಹುದು. ಫಲಭರಿತವಾದ ಉತ್ಪನ್ನವನ್ನು ಪಡೆದು "ಭೂಮಿ"ಯನ್ನು ಮಾತೃ ಎಂದು ಸಂಭೋದಿಸುತ್ತಾ ಯಾವುದೇ ನಿರ್ದಿಷ್ಟ ಇತಿಮಿತಿಗಳಿಲ್ಲದೆ ನಂಬಿ ಬದುಕಿದವರು. ಪ್ರಸ್ತುತ ಭೂಮಿಗಾಗಿ ಪರದಾಟ ಮಾಡಬೇಕಿದೆ. ಇಡೀ ಅರಣ್ಯದ ಭೂಮಿಯ ಒಡೆಯರೆಂದೆ ಗುರುತಿಸಿಕೊಳ್ಳುತ್ತಿದ್ದವರು, ಪುನರ್‌ವಸತಿ ನಿಮಿತ್ತ ನಿರ್ದಿಷ್ಟ ಪಡಿಸಿದ ಭೂಮಿಯಲ್ಲಿ ನಿರ್ಬಂಧಿಸಿದ ಜೀವನಕ್ರಮದಲ್ಲಿ ಕಾಣಬರುತ್ತಾರೆ. ಅರಣ್ಯಭೂಮಿಯಲ್ಲಿ ಕೃಷಿ ಉತ್ಪನ್ನದಿಂದ ಆದಾಯಗಳಿಸುತ್ತಿದ್ದವರು ನಾಡಿನ ಪರಿಸರದ ಭೂಮಿಗೆ ವರ್ಗಾಯಿಸಲ್ಪಟ್ಟ ನಂತರ ಭೂಮಿಯ ಮೇಲಿನ ಹಿಡಿತವೇ ಕಳೆದುಕೊಂಡಂತೆ ಬಾಸವಾಗುತ್ತಿರುವುದು ಸಮುದಾಯದಲ್ಲಿ ಕಾಣಬರುತ್ತದೆ. ಜೇನುಕುರುಬರಿಗೆ ಒದಗಿಸಲಾದ ಭೂಮಿಯು ವಿವಿಧ ಜಿಲ್ಲೆಗಳಲ್ಲಿ ವಿವಿಧ

ರೀತಿಯ ಫಲವತ್ತತೆಯಿಂದ ಕೂಡಿರುವುದು. ಕೆಂಪು, ಕಪ್ಪು ಮಿಶ್ರಮಣ್ಣಿನಿಂದ ಕೂಡಿರುವ ಭೂಮಿ ಸಾಕಷ್ಟು ಕಂಡುಬರುತ್ತದೆ. ಬಹುತೇಕ ತಾಲ್ಲೂಕುಗಳಲ್ಲಿ ಕೆಂಪು ಮರಳು ಮಿಶ್ರಿತವಾದ ಮಣ್ಣು ಕಂಡುಬರುತ್ತದೆ. ಗುಂಡ್ಲುಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಪಶ್ಚಿಮ ಮತ್ತು ದಕ್ಷಿಣ ಮೇರೆಗಳ ಬೆಟ್ಟಸಾಲು ಭಾಗವು ಹೆಚ್ಚು ನುರುಜು ಭೂಮಿ ಮತ್ತು ಎರೆಮಣ್ಣಿನಿಂದ ಕೂಡಿರುವ ಭೂಮಿಯಾಗಿದೆ. ಒಟ್ಟಾರೆ ಈ ಜಿಲ್ಲೆಗಳಲ್ಲಿನ ಭೂ ಬಳಕೆಯ ಸಮಗ್ರ ವಿವರ ಕೋಷ್ಟಕದಿಂದ ತಿಳಿಯಬಹುದಾಗಿದೆ.

ಕೋಷ್ಠಕ: ೨.೩ : ಜೇನುಕುರುಬ ಸಮುದಾಯವು ನೆಲೆ ನಿಂತ ಪರಿಸರದ ಜಿಲ್ಲಾ ಭೂ ಬಳಕೆ ವಿವರಗಳು

ಕ್ರ.ಸಂ.	ಜಿಲ್ಲೆಗಳು	ಭೌಗೋಳಿಕ ವಿಸ್ತೀರ್ಣ	ಭೂ ಬಳಕೆಯ ವಿವರಗಳು						
			ಅರಣ್ಯ	ಬಂಜರು ಭೂಮಿ	ಸಾಗುವಳಿಗೆ ಯೋಗ್ಯವಾದ ಬಂಜರು	ಖಾಯಂ ಗೋಮಾಳ	ವೃಕ್ಷ ತೋಪು	ಬೀಳು ಭೂಮಿ	ವ್ಯವಸಾಯದ ಪ್ರದೇಶ
೧	ಮೈಸೂರು	೬೭೬೩೮೨	೬೬೯೦೪	೪೫೮೧೨	೨೧೪೬೦	೫೬೨೫೬	೬೮೬೬	೨೦೮೦೩	೪೮೬೨೬೮
೨	ಚಾಮರಾಜ ನಗರ	೫೬೯೯೦೧	೨೪೫೦೬	೨೧೪೩೪	೭೬೩೭	೨೨೭೫೦	೪೭೪೧	೫೦೨೧೫	೧೮೯೫೦೫
೩	ಕೊಡಗು	೪೧೦೭೭೫	೨೩೬೯೧	೩೧೦೧೦	೧೧೯೧೫	೧೭೮೦೪	೩೭೮೭೮	೧೨೧೬೭	೧೪೩೨೧೩
	ಒಟ್ಟು	೧೬೫೭೦೫೮	೧೧೫೧೦೧	೯೮೨೫೬	೪೧೦೦೧೨	೯೬೮೧೦	೪೯೪೮೫	೮೩೧೮೫	೮೧೮೯೮೬

ಆಧಾರ : ಡಿ.ಈ.ಎಸ್. ಬೆಂಗಳೂರು, ಕರ್ನಾಟಕ ಸರ್ಕಾರ

ಜೇನುಕುರುಬರ ೩ ಜಿಲ್ಲೆಗಳ ವ್ಯಾಪ್ತಿಯಲ್ಲಿ ಭೂ ಬಳಕೆಯ ವಿವರಗಳನ್ನು ಕೋಷ್ಟಕ ೨.೩ ರಿಂದ ತಿಳಿಯಬಹುದು. ಸುಮಾರು ೭೩೬೯ ಕುಟುಂಬಗಳಿಗೆ ಸರ್ಕಾರದ ನೀತಿಯ ಅನ್ವಯ ಪ್ರತಿ ಕುಟುಂಬಕ್ಕೆ ನಿಗದಿ ಪಡಿಸಿದ ಭೂ ಹಂಚಿಕೆ ಮಾಡಲು ಭೂಮಿ ಸಾಕಷ್ಟು ಲಭ್ಯವಿರುವುದು ಅಂಕಿ-ಅಂಶಗಳಿಂದ ತಿಳಿಯಬಹುದು. ವೃಕ್ಷತೋಪುಗಳ ೪೯೪೮೫ ಹೆಕ್ಟೇರ ಪ್ರದೇಶ, ಖಾಯಂ ಗೋಮಾಳ ೯೬೮೧೦ ಹೆಕ್ಟೇರ್ ಭೂಮಿ ಮತ್ತು ಸಾಗುವಳಿಗೆ ಯೋಗ್ಯ ವಾದ ಬಂಜರು ಭೂಮಿ ೪೧೦೦೧೨ ಹೆಕ್ಟೇರು ಭೂಮಿ ಸರ್ಕಾರದ ಆಧೀನದಲ್ಲಿದರೂ, ವಾಸ್ತವವಾಗಿ ಈ ಭೂಮಿಯನ್ನು ಉಪಯೋಗ ಮಾಡುವರು ಶ್ರೀಮಂತ ಭೂಮಲೀಕರು. ಬಡಜನರಾದ ಜೇನುಕುರುಬರಿಗೆ ಪ್ರತಿ ಕುಟುಂಬಕ್ಕೆ ನಿರ್ದಿಷ್ಟ ಪ್ರಮಾಣದ ಭೂಮಿ ಹಂಚಿಕೆಗೆ ಎಲ್ಲಾ ಸಾಧ್ಯತೆಗಳು ಈ ಜಿಲ್ಲೆಗಳಲ್ಲಿವೆ. ಆದರೆ ಸರಿಯಾದ ಕ್ರಮದಲ್ಲಿನ ವ್ಯವಸ್ಥಿತ ಭೂ

ಹಂಚಿಕೆಯಿಂದ ಸಮುದಾಯಗಳ ಎಲ್ಲಾ ಕುಟುಂಬಗಳಿಗೂ ಭೂಮಿ ಹಂಚಿಕೆಯ ಕಾರ್ಯ ಸಾಧ್ಯತೆಯನ್ನಾಗಿಸಬಹುದು.

ಅರಣ್ಯ:- ಅರಣ್ಯವು ಜೇನುಕುರುಬರಿಗೆ ಹಾರ್ಥಿಕ ವರದಾನದ ಕೊಡುಗೆಯಾಗಿತ್ತು. ಸಮುದಾಯದ ಜನರ ಬದುಕಿನ ಮತ್ತು ಕಲ್ಯಾಣದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನಿರಂತರವಾದ ಪಾತ್ರವಹಿಸಿದ್ದನ್ನು ವಕ್ತೃಗಳಿಂದಲೇ ತಿಳಿಯಬಹುದಾಗಿದೆ. ಪುರಾತನ ಜೀವನಕ್ರಮದಲ್ಲಿ ಅರಣ್ಯವು ವೈಭವತೆಯ ಸಾಂಸ್ಕೃತಿಕ ಉತ್ಪಾದನಾ ಕ್ರಮವನ್ನು ಸೃಷ್ಟಿಸಿತ್ತು. ನಾಗರಹೊಳೆ, ಬಂಡಿಪುರ, ಸಕ್ರೆಬೈಲು, ಹೆಚ್.ಡಿ.ಕೋಟೆಯಲ್ಲಿನ ದಟ್ಟಅರಣ್ಯ ಕೊಡುಗೈಧಾನಿಯಾಗಿತ್ತು. ಪಂಚವಾರ್ಷಿಕ ಯೋಜನೆಗಳು ಮತ್ತು ಅರಣ್ಯಕಾಯಿದೆಗಳು ರೂಪುಗೊಂಡು ಬಂದ ನಂತರದ ಬೆಳವಣಿಗೆಗಳು ಮೂಲಸ್ಥಾನದಿಂದ ಹೊರನಡೆಯುವಂತೆ ಮಾಡಿದ ಕ್ರಮವಾಗಿ ಜೇನುಕುರುಬರನ್ನು ಅರಣ್ಯದಿಂದ ಹೊರತಂದು ಅವರುಗಳ ಸ್ಥಳಗಳಲ್ಲಿ ರಾಷ್ಟ್ರೀಯ ಉದ್ಯಾನವನ, ರಕ್ಷಿತ ಉದ್ಯಾನವನ, ವನ್ಯಧಾಮ ಮತ್ತು ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ.

ಕೋಷ್ಟಕ೨.೪ : ಜಿಲ್ಲೆಗಳಲ್ಲಿನ ರಕ್ಷಿತ ಅರಣ್ಯಗಳು

ಕ್ರ.ಸ.	ಅರಣ್ಯ	ಜಿಲ್ಲೆಗಳು	ವಿಸ್ತೀರ್ಣ (ಚ.ಕಿ.ಮೀ)	ಅವಲಬಿಸಿರುವ ಪ್ರಾಣಿಗಳು
೧	ನಗು	ಮೈಸೂರು	೩೦ ಕಿ.ಮೀ.	ಮೊಸಳೆ, ಹುಲಿ, ಚಿರತೆ, ಜಿಂಕೆ ಇತ್ಯಾದಿ
೨	ಅರಬ್ಬಿ ತಿಟ್ಟು	ಮೈಸೂರು	೧೪ ಕಿ.ಮೀ.	ನವಿಲು, ಮಿಂಚುಳ್ಳಿ ಸಾಂಬರ್, ಹೆಬ್ಬಾವು
೩	ಬ್ರಹ್ಮಗಿರಿ	ಕೊಡಗು	೧೮೧ ಕಿ.ಮೀ.	ಚಿರತೆ, ಹುಲಿ, ಕಾಳಿಂಗ ಸರ್ಪ
೪	ಪುಷ್ಪಗಿರಿ	ಕೊಡಗು	೧೦೨ ಕಿ.ಮೀ.	ಜಿಂಕೆ, ಸಾಂಬರ್
೫	ತಲಕಾವೇರಿ	ಕೊಡಗು	೧೦೫ ಕಿ.ಮೀ.	ಹುಲಿ, ಚಿರತೆ, ಸಾಂಬರ್ ಇತ್ಯಾದಿ

ಆಧಾರ: ಮೈಸೂರು ವಿಭಾಗ ಅಂಕಿ ಅಂಶಗಳ ಸಮೀಕ್ಷೆ

ಬಂಡಿಪುರ ಮತ್ತು ನಾಗರಹೊಳೆಯು ರಾಷ್ಟ್ರೀಯ ಉದ್ಯಾನವನವಾಗಿದೆ. "ರಾಜ್ಯದಲ್ಲಿ ೫ ರಾಷ್ಟ್ರೀಯ ಉದ್ಯಾನವನಗಳಿವೆ, ೧೯ ಆಭಯಾರಣ್ಯಗಳಿವೆ.. ಬಂಡಿಪುರ ಮತ್ತು ನಾಗರಹೊಳೆಯು ೮೭೪. ೫೭೪ ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ"[**೩೬]. ಇಂತಹ ಅರಣ್ಯದಲ್ಲಿ

ಜೇನುಕುರುಬರು ಪ್ರಾಣಿಗಳ ಜೊತೆಗೆ ಸಾಮರಸ್ಯದಿಂದ ಕೂಡಿದ್ದ ಬಗ್ಗೆ ತಿಳಿದು ಬರುತ್ತದೆ. ಕೋಷ್ಟಕ ೨.೪ ರಲ್ಲಿ ತೋರಿಸಿರುವ ಬಹುತೇಕ ಅರಣ್ಯಗಳಲ್ಲಿ ಜೇನುಕುರುಬರು ನೆಲೆಸಿದ್ದಾಗಿ ತಿಳಿದು ಬರುತ್ತದೆ. ಪ್ರಸ್ತುತ ಆ ಪ್ರದೇಶಗಳನ್ನು ಸರ್ಕಾರ ವಿಶೇಷವಾಗಿ ಅಭಿವೃದ್ಧಿಪಡಿಸುತ್ತಿರುವುದು ಕಂಡುಬರುತ್ತದೆ. ನಾಗರಹೊಳೆ ಮತ್ತು ಬಂಡಿಪುರದ ಅರಣ್ಯದಲ್ಲಿ ಅಲ್ಲಲ್ಲಿ ಜೇನುಕುರುಬರು ಹೀಗಲೂ ವಾಸವಾಗಿರುವುದು ಅವರ ವಕ್ತೃಗಳಿಂದಲೇ ತಿಳಿಯಬಹುದು.

ಮೂಲಭೂತ ಸೌಲಭ್ಯಗಳು: ಅಭಿವೃದ್ಧಿ ಕ್ರಮದಲ್ಲಿ ಮೂಲಭೂತಸೌಲಭ್ಯಗಳು ಪ್ರಮುಖ ಸ್ಥಾನ ಪಡೆದಿವೆ. ಅಭಿವೃದ್ಧಿಯ ಮಾನದಂಡಗಳು ಸಹ ಮೂಲಭೂತ ಸೌಲಭ್ಯಗಳಲ್ಲಿ ತಾರತಮ್ಯ ಮಾಡದೇ ದೊರಕಿಸಿಕೊಡಬೇಕು. ಅಭಿವೃದ್ಧಿ ತಜ್ಞರು ಸೌಲಭ್ಯಗಳು ಒದಗಿಸುವಲ್ಲಿಯೂ ಭಿನ್ನತೆ ಬೇಡವೇ ಬೇಡ ಎನ್ನುತ್ತಾರೆ. ಆದರಂತೆ ಮೂಲಭೂತ ಸೌಲಭ್ಯಗಳು ಪುನರ್‌ವಸತಿಯ ನಂತರ ಸಮುದಾಯಗಳ ಕಾಲೋನಿಗಳಲ್ಲಿ ಕಂಡುಬರುವ ಪ್ರಮಾಣವನ್ನು ನಿದರ್ಶನಾತ್ಮಕವಾಗಿ ತಿಳಿಯಲಾಗಿದೆ. ಮೂಲಭೂತ ಸೌಲಭ್ಯಗಳು ಅಭಿವೃದ್ಧಿಯ ನಿರ್ಧಾರಕ ಅಂಶಗಳಲ್ಲಿ ಒಂದಾಗಿರುವುದರಿಂದ ಇಲ್ಲಿ ಬಹಳ ಮುಖ್ಯವೆನಿಸುತ್ತವೆ. ಮೂಲಭೂತ ಸೌಲಭ್ಯಗಳ ಆಧಾರದ ಮೇಲೆ ಜನರು ಅವಲಂಬಿತವಾದ ಪ್ರಮಾಣವಾರು ಸಂಖ್ಯೆಯ ಸಂಕ್ಷಿಪ್ತ ವಿವರ ಸಂಗ್ರಹಿಸಲಾಗಿದೆ.

ಸಮುದಾಯದಲ್ಲಿನ ಭೌತಿಕ ನೆರವು

ವಿದ್ಯುತ್‌ಶಕ್ತಿ: ವಿದ್ಯುತ್‌ಶಕ್ತಿ ಸಾಮಾಜಿಕ–ಆರ್ಥಿಕಾಭಿವೃದ್ಧಿಯ ಮೂಲಾಧಾರ. ಇಲ್ಲದಿದ್ದರೆ ಜೀವನ ನಿಸ್ಸಾರವಾಗುತ್ತದೆ ಎನ್ನಬಹುದು. ವಿದ್ಯುತ್‌ಶಕ್ತಿ ಬಳಕೆಯಲ್ಲಿ ರಾಜ್ಯಸರ್ಕಾರ ದಿನೇ ದಿನೇ ಹೆಚ್ಚಾಗುತ್ತಿದೆ. ಸರ್ಕಾರದ ಸಬ್ಸಿಡಿ ನೆರವು ಸಾಕಷ್ಟು ನೀಡುತ್ತಲಿರುವುದು ಕಾಣಬಹುದು. ವಿದ್ಯುತ್‌ಶಕ್ತಿ ಮೂಲ ಸೌಕರ್ಯಗಳಲ್ಲಿ ಅತಿಮುಖ್ಯವೂ ಹೌದು. ಸುಮಾರು ೩೫ ವರ್ಷಗಳ ಹಿಂದೆ ಜೇನುಕುರುಬರು ಹಾಡಿಯಿಂದ ಕಾಲೋನಿಗೆ ಸ್ಥಳಾಂತರಗೊಂಡಿದ್ದರೂ ಕಾಲೋನಿಗೆ ವಿಧ್ಯುತ್‌ಶಕ್ತಿ ನೆರವು ದೊರಕದಿರುವುದು ಕಂಡುಬರುತ್ತದೆ. ೧೯೯೯ರ ಭಾರತ ಸರ್ಕಾರದ ಮಾನವಾಭಿವೃದ್ಧಿ ಇಲಾಖೆಯ ಪ್ರಕಾರ ಗ್ರಾಮೀಣಭಾಗದಲ್ಲಿ ಬಡತನ ರೇಖೆಯ ಕೆಳಹಂತದಲ್ಲಿ ಜೀವಿಸುತ್ತಿರುವ ಎಲ್ಲಾ ಸಮುದಾಯಗಳಿಗೆ ವಿಧ್ಯುತ್‌ಶಕ್ತಿ ಒದಗಿಸುವುದು ಕಡ್ಡಾಯವಾಗಿದೆ. ಹಾಗೂ ಬುಡಕಟ್ಟು ಸಮುದಾಯಗಳಿಗೆ ವಿಶೇಷ ಹಣಕಾಸು, ಪ್ರತಿವರ್ಷ ವೆಚ್ಚ ಮಾಡಲಾಗುತ್ತಿರುವುದಾಗಿ ಸರ್ಕಾರದ ಇಲಾಖೆಗಳ ವರದಿಯಲ್ಲಿ ಕಾಣಬರುತ್ತದೆ. ಪ್ರತ್ಯೂತ್ತರವಾಗಿ ಕಾಲೋನಿಗಳಲ್ಲಿ ವಿಧ್ಯುತ್‌ಶಕ್ತಿಯ ಲಭ್ಯತೆಯ ಕುಟುಂಬಗಳನ್ನು ಗುರುತಿಸಿದಲ್ಲಿ ಕಂಡು ಬರುವ ಸತ್ಯಾಂಶವೇ ಬೇರೆಯಾಗಿದೆ.

ಜೇನುಕುರುಬರ ಕುಟುಂಬಗಳನ್ನು ಸಮೀಕ್ಷಾ ಕಾರ್ಯದಲ್ಲಿ ವಿಧ್ಯುತ್ ಶಕ್ತಿಯನ್ನು ಪಡೆದಿರುವ ಕುಟುಂಬವಾರು ಗಣತಿಮಾಡಲಾಗಿದೆ. ಎಲ್ಲಾ ೨೧ ಕಾಲೋನಿಗಳನ್ನು ಒಟ್ಟಾರೆ ಕ್ರೋಢಿಕರಿಸಿ ತಾಲ್ಲೂಕುವ್ಯಾಪ್ತಿಯಲ್ಲಿ ಪಥಕ್ಕರಿಸಿ ನೀಡಲಾಗಿದೆ. ನಿದರ್ಶನಾತ್ಮಕವಾಗಿ ಗುರುತಿಸಲಾದ ಒಟ್ಟಾರೆ ೭೪೦ ಕುಟುಂಬಗಳಲ್ಲಿ ಲಭ್ಯತೆಯ ಪ್ರಮಾಣವನ್ನು ಕೋಷ್ಟಕ ರೂಪದಲ್ಲಿ ನೀಡಲಾಗಿದೆ.

ಕೋಷ್ಟಕ:೨.೫ ಜೇನುಕುರುಬರ ಕುಟುಂಬವಾರು ವಿದ್ಯುತ್ ಶಕ್ತಿ ಲಭ್ಯತೆಯ ಪಟ್ಟಿ

ಕ್ರ. ಸ.	ತಾಲ್ಲೂಕು ವ್ಯಾಪ್ತಿ	ವಿಧ್ಯುತ್ ಸೌಲಭ್ಯ ಪಡೆದ ಕುಟುಂಬಗಳು	ಸೌಲಭ್ಯ ವಂಚಿತ ಕುಟುಂಬಗಳು	ಒಟ್ಟು ಕುಟುಂಬಗಳು
೧	ಹುಣಸೂರು	೬೭	೧೦೧	೧೬೮
೨	ಹೆಚ್.ಡಿ.ಕೋಟೆ	೮೩	೧೧೮	೨೦೧
೩	ಪಿರಿಯಾಪಟ್ಟಣ	೩೭	೪೬	೮೩
೪	ವೀರಾಜಪೇಟೆ	೬೧	೪೪	೧೦೫
೫	ಗುಂಡ್ಲುಪೇಟೆ	೨೮	೨೫	೫೩
೬	ಸೋಮವಾರಪೇಟೆ	೨೪	೪೭	೭೧
೭	ನಂಜನಗೂಡು	೨೮	೩೧	೫೯
	ಒಟ್ಟು	೩೨೮	೪೧೨	೭೪೦

ಪುನರ್‌ವಸತಿ ಕಾರ್ಯದಲ್ಲಿ ಜನರನ್ನು ಸ್ಥಳಾಂತರಗೊಳಿಸಲಾಗಿದ್ದರೂ ಭೌತಿಕ ನೆರವಿನ ವಿಧ್ಯುತ್‌ಶಕ್ತಿಯನ್ನು ದೊರೆಯುವಂತೆ ಮಾಡದಿರುವುದು ಅಭಿವೃದ್ಧಿಯ ಕ್ರಮವೇ ಅಥವಾ ಸರ್ಕಾರದ ಉದಾಸೀನತೆಯೇ ಎಂಬ ಪ್ರಶ್ನೆ ಮೂಡುತ್ತದೆ. ೨೦೦೨ನೇ ಸಾಲಿನಲ್ಲಿ ಒಂದೊಂದು ಕಾಲೋನಿಗೆ ಎರಡು ಸೋಲಾರ್ ದೀಪಗಳನ್ನು ಅಳವಡಿಸಿರುವುದು ಮಾತ್ರ ಕಂಡುಬರುತ್ತದೆ. ಸೋಲಾರ್ ದೀಪದ ಅಳವಡಿಕೆಯು ಕೆಲವೇ ಕಾಲೋನಿಗಳಿಗೆ ಮಾತ್ರ. ಸಮೀಕ್ಷೆಮಾಡಲಾದ ೭೪೦ ಕುಟುಂಬಗಳಲ್ಲಿ ೩೦೮ ಕುಟುಂಬಗಳು ವಿದ್ಯುತ್‌ಶಕ್ತಿ ಪಡೆದಿರುವುದು ಕಂಡುಬರುತ್ತದೆ. ಉಳಿದ ೪೧೨ ಮನೆಗಳಲ್ಲಿ ವಿದ್ಯುತ್‌ಶಕ್ತಿ ಲಭ್ಯತೆ ಇಲ್ಲವಾಗಿದೆ. ವಿದ್ಯುತ್‌ಶಕ್ತಿ ದೊರೆತಿರುವ ಕುಟುಂಬಗಳಲ್ಲಿ ಎರಡು ಅಥವಾ ಮೂರು ಬಲ್ಪ್‌ನ ದೀಪಗಳು ಮಾತ್ರವೇ ಕಾಣಬರುತ್ತದೆ

ಗುಂಡ್ಲುಪೇಟೆ ತಾಲ್ಲೂಕಿನ ಕಾಲೋನಿಯಲ್ಲಿ ಮಾತ್ರ ಎಲ್ಲಾ ಕುಟುಂಬಗಳಲ್ಲಿ ವಿದ್ಯುತ್‌ಶಕ್ತಿ ಲಭ್ಯವಿದೆ. ೨೫ ಕುಟುಂಬಗಳು ಪ್ರತ್ಯೇಕವಾಗಿ ಸ್ವಯಂ ಮನೆಗಳ ನಿರ್ಮಾಣ ಮಾಡಿಕೊಂಡಿರುವರಾಗಿದ್ದಾರೆ ಇತ್ತೀಚಿನ ದಿನಗಳಲ್ಲಿ ಹೊಸದಾಗಿ ಮಧುವೆಯಾದ ಕುಟುಂಬಗಳಾಗಿರುವುದರಿಂದ ಅವರ ಕುಟುಂಬಗಳಲ್ಲಿ ವಿದ್ಯುತ್ ಲಭ್ಯವಾಗದಿರುವುದು ಕಂಡುಬರುತ್ತದೆ. ಇಂತಹ ೨೫ ಕುಟುಂಬಗಳು ಕಾಲೋನಿಗಳಿಂದ ಹೊರಗೆ ಮನೆ ನಿರ್ಮಿಸಿಕೊಂಡಿರುವ ಕುಟುಂಬಗಳಾಗಿವೆ.

ಇಂಧನ ಅಥವಾ ಸೀಮೆಎಣ್ಣೆ: ಜೇನುಕುರುಬರಿಗೆ ಸೀಮೆ ಎಣ್ಣೆಯ ಮೂಲವೇ ಸರ್ಕಾರಿ ನ್ಯಾಯಬೆಲೆ ಅಂಗಡಿಯಲ್ಲಿ ದೊರೆಯುವ ಪಡಿತರ ವ್ಯವಸ್ಥೆಯೇ ಆಧಾರ. ಪ್ರತಿ ಕುಟುಂಬದ ಸದಸ್ಯರು ಪಡಿತರ ಚೀಟಿ ಹೊಂದಿದ್ದಲ್ಲಿ ೩ ಲೀಟರ್ ಸೀಮೆ ಎಣ್ಣೆಯನ್ನು ಒಂದು ತಿಂಗಳ ಕಾಲ ಮನೆಯ ದೀಪಕ್ಕೆ ಇಂಧನವಾಗಿ ಬಳಸಬೇಕಾದ ಪರಿಸ್ಥಿತಿ ಇದೆ. ಪಡಿತರ ಚೀಟಿ ಹೊಂದಿಲ್ಲದ ಕುಟುಂಬಕ್ಕೆ ಎಣ್ಣೆ ದೊರಕುವುದು ಸಾಧ್ಯವಿಲ್ಲ. ಪ್ರತಿ ಲೀಟರ್ ೧ದಕ್ಕೆ ೧೦.೫೦ ರೂ. ಕೊಟ್ಟು ಪಡೆಯಬೇಕು. ಆಹಾರ ಪದಾರ್ಥಗಳನ್ನು ಬೇಯಿಸಲು ಕಟ್ಟಿಗೆಗಾಗಿ ಅವಲಂಬಿಸಿದ್ದಾರೆ. ಊರವಲು ಕಟ್ಟಿಗೆಗಾಗಿ ಸಮುದಾಯಕ್ಕೆ ಅರಣ್ಯ ಇಲಾಖೆಯವರು ಸಣ್ಣದಾದ ಸಾಮಾಜಿಕ ಅರಣ್ಯಪ್ರದೇಶವನ್ನು ನೀಡಿದ್ದು, ಆ ಅರಣ್ಯದಲ್ಲಿ ಊರವಲು ಕಟ್ಟಿಗೆ ತಂದು ಆಹಾರ ಪದಾರ್ಥ ಬೇಯಿಸಬೇಕಿದೆ. ಮೀಸಲು ಅರಣ್ಯದ ಮೇಲೆ ಸಮುದಾಯದ ಕುಟುಂಬಗಳ ಅವಲಂಬನೆ ಹೆಚ್ಚಾಗುತ್ತಿರುವ ಕಾರಣ ಕಟ್ಟಿಗೆ ಸಂಗ್ರಹಿಸುವುದು ಕಷ್ಟಸಾಧ್ಯವಾಗಿದೆ. ಬಹುತೇಕ ಕುಟುಂಬಗಳ ಪುರುಷರು ಕೂಲಿ ಕೆಲಸವಿಲ್ಲದಿರುವ ಸಂದರ್ಭದಲ್ಲಿ ೫ ೬ ಜನರು ಸೇರಿ ಕಟ್ಟಿಗೆಗಾಗಿ ಬಹುದೂರ ಸಾಗಿ ಸಂಗ್ರಹಿಸಿ ತರುವರಾಗಿದ್ದಾರೆ.

ಪಡಿತರಚೀಟಿಯಲ್ಲಿನ ಸಾಮಗ್ರಿಗಳನ್ನು ಪಡೆಯಬೇಕಾದರೆ, ಆ ಪ್ರದೇಶದ ಗ್ರಾಮಪಂಚಾಯ್ತಿಯ ಸದಸ್ಯನ ಗ್ರಾಮಕ್ಕೆ ತೆರಳುವುದು ಅನಿವಾರ್ಯವಾಗಿದೆ. ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ಸಮುದಾಯದ ಜನರು ಹೆಚ್ಚಾಗಿದ್ದರೂ, ಯಾವ ಕಾಲೋನಿಯಾಗಲೀ ಅಥವಾ ಸಮುದಾಯದ ಸದಸ್ಯರಾಗಲಿ ನ್ಯಾಯಬೆಲೆ ಅಂಗಡಿಯ ಪರವಾನಿಗೆ ಪಡೆದಿಲ್ಲ. ಸಮುದಾಯದಲ್ಲಿನ ಮಹಿಳೆಯರಿಗೆ ವಿಶೇಷ ತರಬೇತಿ ನೀಡಿ, ಮಹಿಳಾ ಸಂಘಟನೆ ಮತ್ತು ಸ್ತ್ರೀಶಕ್ತಿಯೋಜನೆ ಸಂಘಟನೆಯ ಸದಸ್ಯರಿಗೆ ಪಡಿತರ ವಿತರಣಾವ್ಯವಸ್ಥೆಯ ತರಬೇತಿ ನೀಡಿ, ನ್ಯಾಯಬೆಲೆ ಅಂಗಡಿಯ ವಿತರಣಾವ್ಯವಸ್ಥೆ ವಹಿಸಿ ಕೊಡಬಹುದು. ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಪ್ರಮುಖವಾಗಿರಬೇಕಿದೆ. ಸಮುದಾಯದ ಸ್ವಾವಲಂಬನೆಗೆ ನ್ಯಾಯಬೆಲೆ ಅಂಗಡಿಯು ಸಮುದಾಯ ಜನರಿಗೆ ವಹಿಸಿಕೊಡುವುದರಿಂದ, ಜನರು ಅಭಿವೃದ್ಧಿಯ ಪಥದಲ್ಲಿ ಸಾಗಲು ದಾರಿ ಮಾಡಿಕೊಟ್ಟಂತಾಗುತ್ತದೆ.ಅಲ್ಲದೆ ಪಡಿತರ ವ್ಯವಸ್ಥೆಯ ವಿತರಣೆಯಲ್ಲಿ ಸಮುದಾಯದ

ಜನರು ಭಾಗವಹಿಸಬಹುದು. ಇದರಿಂದಾಗಿ ನೇರ ಸಮುದಾಯದ ಜನರು ಹಂತ ಹಂತವಾಗಿ ಅವಕಾಶಗಳ ಸದುಪಯೋಗಕ್ಕೆ ದಾರಿ ಸುಗಮವಾಗುತ್ತದೆ ಎನ್ನಬಹುದು.

ಸಾರಿಗೆ ಸಂಪರ್ಕ: ಸಾರಿಗೆ ವ್ಯವಸ್ಥೆಯು ಜನರನ್ನು ಪರಸ್ಪರ ಸನ್ನಿಹಕ್ಕೆ ತರುತ್ತದೆ. ಜೇನುಕುರುಬರ ಬಹುತೇಕ ಕಾಲೋನಿಗಳು ಗ್ರಾಮೀಣ ಭಾಗದಲ್ಲಿವೆ. ಪುನರ್‌ವಸತಿಯ ಕ್ರಮವು ಸಂಪೂರ್ಣ ಒಂದು ಗ್ರಾಮವಾಗಿ ರೂಪಿಸುವಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ. ಕಾಲೋನಿಗಳನ್ನು ಸಹ ಎರಡು ರೀತಿಯಿಂದ ಗುರುತಿಸಬಹುದಾಗಿದೆ. ಸಂಪೂರ್ಣವಾದ ಗುಡ್ಡಗಾಡು ಅರಣ್ಯಕ್ಕೆ ಹೊಂದಿಕೊಂಡಿರುವುದು. ಮತ್ತೊಂದು ರೀತಿಯೆಂದರೆ ತಾಲ್ಲೂಕು ಮುಖ್ಯರಸ್ತೆಯ ಪಕ್ಕದಲ್ಲಿ ನಿರ್ಮಾಣಗೊಂಡ ಕಾಲೋನಿಗಳು. ಎರಡು ನೆಲೆಗಳಿಗೆ ಸಂಪೂರ್ಣವಾಗಿ ಸಾರಿಗೆ ವ್ಯವಸ್ಥೆಯ ಬಸ್, ಟೆಂಪೊ, ಆಟೋರಿಕ್ಷಾಗಳನ್ನೇ ಅವಲಂಬಿಸಬೇಕಿದೆ ಜನರು. ವಾಹನಗಳ ಸೌಲಭ್ಯವೂ ಸಹ ತಾಲ್ಲೂಕು ಮುಖ್ಯರಸ್ತೆ ಅಥವಾ ಪಕ್ಕದ ಗ್ರಾಮಗಳಿಗೆ ಮಾತ್ರವೇ ಇರುವುದು. ಜೇನುಕುರುಬರು ಇಂತಹ ಸ್ಥಳದಿಂದ ಕಾಲೋನಿಗಳಿಗೆ ನಡೆದೇ ಹೋಗಬೇಕಿದೆ. ಬಹುತೇಕ ಕಾಲೋನಿಗಳಿಂದ ತಾಲ್ಲೂಕು ಕೇಂದ್ರಕ್ಕೆ ೩೦ ಕಿ.ಮೀ. ದೂರವನ್ನು ಕ್ರಮಿಸಬೇಕಿದೆ. ಒಮ್ಮೆ ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ ೫೦ ರೂ. ದರ ವೆಚ್ಚ ಬರಿಸಬೇಕಾಗುತ್ತದೆ.ಆದ್ದರಿಂದ್ ಜನರು ಒಂದು ಹಂತದಲ್ಲಿ ತಾಲ್ಲೂಕು ಕೇಂದ್ರಗಳಿಂದ ದೂರವೇ ಉಳಿದಂತೆ ಕಂಡುಬರುತ್ತಾರೆ. ಜೀವನೋಪಾಯದ ಮತ್ತು ಕೃಷಿ ಚಟುವಟಿಕೆಗಳಿಗೆ ಸಮೀಪದ ಅಥವಾ ಸುತ್ತಮುತ್ತಲಿನ ವಾರದ ಸಂತೆಗಳೇ ಆಧಾರವಾಗಿದೆ.

ಜನರಲ್ಲಿ ಹೆಚ್ಚಿನ ಆದಾಯವಿಲ್ಲ. ಹೀಗಾಗಿ ತಿರುಗಾಡುವುದು ಕಡಿಮೆ ನೆಲೆಸಿರುವ ಕಾಲೋನಿಯಿಂದ ಸುತ್ತಮುತ್ತಲಿನ ಕಾಲೋನಿಗಳಿಗೆ ನಡೆದೆಹೋಗುವುದು ರೂಢಿಗತವಾಗಿದೆ. ಕೆಲವೊಮ್ಮೆ ಬೈಸಿಕಲ್ ಇದ್ದಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಸಾಕಷ್ಟು ಕುಟುಂಬಗಳು ತಮ್ಮ ಸುತ್ತಮುತ್ತಲಿನ ಗ್ರಾಮಗಳನ್ನೇ ಆಶ್ರಯಿಸಿದ್ದಾರೆ. ದೂರಪ್ರಯಾಣ ಹೆಚ್ಚಾಗಿ ಬಯಸದ ಇವರುಗಳು ಉದ್ಯೋಗ ನಿಮಿತ್ತ ವಲಸೆ ಹೋಗುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಜೇನುಕುರುಬರನ್ನು ಹೆಚ್ಚಿನ ಜನಸಂಪರ್ಕಕ್ಕೆ ತರಭೇಕಾದರೆ ಪ್ರತಿಯೊಂದು ಕಾಲೋನಿಗೆ ಸಾರಿಗೆ ವ್ಯವಸ್ಥೆಯ ಅನುಕೂಲ ಮಾಡಿಕೊಡಬೇಕಿದೆ.

ಮಾರುಕಟ್ಟೆ ಮತ್ತು ಸಾಲದ ವ್ಯವಸ್ಥೆ: ಸಾಮಾಜಿಕ ಜೀವನದಲ್ಲಿ ಮಾರುಕಟ್ಟೆ ಮತ್ತು ಸಾಲದ ವ್ಯವಸ್ಥೆಗೆ ಬಹಳ ಮಹತ್ವ ಒದಗಿ ಬಂದಿದೆ. ವಸ್ತುವಿನಿಮಯ ಪದ್ಧತಿಯಿಂದ ಹಣಕಾಸಿನ ಸಾಲದ ಮೂಲವೇ ಕಂಡಿರದಿದ್ದ ಜೇನುಕುರುಬರು ಆಧುನಿಕತೆಯ ಪ್ರಭಾವದ ತೆಕ್ಕೆಯಲ್ಲಿ ಸಿಲುಕಿ ಮಾರುಕಟ್ಟೆ ಮತ್ತು ಸಾಲದ ಬಿಸಿ ಅನುಭವಿಸುವರಾಗಿದ್ದರೆ. ಮಾರುಕಟ್ಟೆ ಎಂದರೆ ವಸ್ತುಗಳನ್ನು ಕೊಳ್ಳುವವರು ಮತ್ತು ಮಾರಾಟಗಾರ ಒಂದೆಡೆ ಸಂಧಿಸುವ

ಸ್ಥಳವಾಗಿದೆ. ಕಾಲೋನಿಗಳ ಪ್ರಾರಂಭದಲ್ಲಿ ಅಷ್ಟೇನು ಮಹತ್ವ ನೀಡದಿದ್ದ ಜನರು ಇಂದು ಮಾರುಕಟ್ಟೆಯಲ್ಲಿ ಗ್ರಾಹಕರಾಗಿ ಪಾತ್ರವಹಿಸುತ್ತಿರುವುದು ಕಂಡುಬರುತ್ತದೆ. ಒಂದು ಕಾಲಕ್ಕೆ ಅರಣ್ಯದಲ್ಲಿ ಸಂಪೂರ್ಣ ಸ್ವಾವಲಂಬಿಗಳಾಗಿ ಜೀವಿಸಿದ್ದ ಸಮುದಾಯ, ಪ್ರಸ್ತುತ ಪ್ರತಿಯೊಂದಕ್ಕೂ ಅವಲಂಬನೆಯಾಗಿರುವುದು ಕಾಣಬಹುದು. ಇಲ್ಲಿ ಮಾರುಕಟ್ಟೆಯನ್ನು ಬಹಳ ದೊಡ್ಡ ಅಥವಾ ವಿಶಾಲವಾದ ದೃಷ್ಟಿಕೋನದಿಂದ ನೋಡುವ ಅಗತ್ಯ ಕಂಡುಬರುವುದಿಲ್ಲ ಎನ್ನಬಹುದು. ಸಮುದಾಯದ ಜನರು ತನ್ನ ದಿನನಿತ್ಯದ ಅಗತ್ಯ ವಸ್ತುಗಳನ್ನು ಕೊಳ್ಳುವ ಅಂಗಡಿಯ ಪರಿಸರದಲ್ಲೇ ಮಾರಾಟ ವ್ಯವಸ್ಥೆಯ ಪ್ರಕ್ರಿಯೆ ಕಾಣಬಹುದು. ಈ ಸಣ್ಣ ಸಣ್ಣ ಅಂಗಡಿ ಮುಗ್ಗಟ್ಟುಗಳು ಪ್ರತಿಯೊಂದು ಕಾಲೋನಿಯ ಪರಿಸರದಲ್ಲಿ ಕಂಡುಬರುತ್ತವೆ. ಕೆಲವು ಕಾಲೋನಿಗಳಲ್ಲಿ ೫ ರಿಂದ ೬ ಅಂಗಡಿಗಳಿದ್ದರೆ, ಮತ್ತೆ ಕೆಲವು ಕಾಲೋನಿಗಳಲ್ಲಿ ೨ ರಿಂದ ೩ ಅಂಗಡಿಗಳು ಜೊತೆಗೆ ಚಹಾದ ಅಂಗಡಿಗಳು ಕಾಣಬರುತ್ತವೆ. ಪ್ರತಿಯೊಂದು ಕಾಲೋನಿಯ ಸಮೀಪ ಸಾರಾಯಿ, ಮತ್ತು ಸೇಂದಿ ಅಂಗಡಿಗಳಂತೂ ನಿರ್ಮಾಣವಾಗಿದೆ ಅದರಲ್ಲಿ ಸಮುದಾಯದ ಜನರು ಸೇರಿರುತ್ತಾರೆ.

ಜೇನುಕುರುಬರ ಕಾಲೋನಿಗಳಲ್ಲಿ ಮಾರುಕಟ್ಟೆಯ ವ್ಯವಸ್ಥೆ ನಿರ್ಮಾಣ ಮಾಡಿರುವರು ಸುತ್ತಮುತ್ತಲಿನ ಶ್ರೀಮಂತರು ಹಾಗೂ ಸಣ್ಣ ಪ್ರಮಾಣದ ರಾಜಕೀಯ ನಾಯಕರುಗಳು. ಸಮುದಾಯದ ಜನರಲ್ಲಿಯೇ ಮನೆ ಅಥವಾ ಅಂಗಡಿಯನ್ನು ಬಾಡಿಗೆಗೆ ಪಡೆದು ದಿನನಿತ್ಯದ ಆಹಾರ ಸಾಮಗ್ರಿ, ತೀರಾ ಅಗತ್ಯವಸ್ತುಗಳು ಮತ್ತು ಇತರೆ ಚಿಲ್ಲರೆ ವ್ಯಾಪಾರದ ಮಾರುಕಟ್ಟೆ ನಿರ್ಮಾಣ ಮಾಡಿದ್ದಾರೆ. ಒಂದು ಕಾಲೋನಿಯಲ್ಲಿ ದಿನವೊಂದಕ್ಕೆ ೫೦೦ ರೂ. ಗಳಿಂದ ೭೦೦ ರೂ.ಗಳವರೆಗೂ ವಹಿವಾಟು ನಡೆಯುತ್ತದೆ ಎಂದು ಅಂಗಡಿ ಮಾಲೀಕ ರಾಮಕೃಷ್ಣಪ್ಪನವರು ಹೇಳುತ್ತಾರೆ.[೩೬] ಇದಲ್ಲದೆ ಸಹಕಾರ ಸಂಘವು ಸಹ ಮಾರುಕಟ್ಟೆಯನ್ನು ತಮ್ಮಲ್ಲಿಯೇ ನಿರ್ಮಾಣ ಮಾಡಿದೆ ಎನ್ನುತ್ತಾರೆ. ಸಹಕಾರ ಸಂಘದ ಅಧ್ಯಕ್ಷ ಕೃಷ್ಣಯ್ಯನವರು. ಅರಣ್ಯಪ್ರವೇಶವೇ ನಿರ್ಬಂಧಿಸಿರುವಾಗ ಅರಣ್ಯ ಉತ್ಪನ್ನ ಸಂಗ್ರಹಿಸುವುದಾದರೂ ಹೇಗೆ? ಸಹಕಾರ ಸಂಘದ ಮಳಿಗೆಯಂತು ಪೂರಾ ಖಾಲಿಯಾಗಿರುತ್ತದೆ.ಬಹುತೇಕ ಸಹಕಾರ ಸಂಘಗಳ ಪರಿಸ್ಥಿತಿಯೆ ಇದು.

ಕಾಲೋನಿಗಳಲ್ಲಿನ ಮಾರಾಟವೂ ಹಣರೂಪಿಯಾಗಿರುವುದಲ್ಲದೆ, ಸಾಲದರೂಪದಲ್ಲಿ ವಸ್ತುಗಳ ಕೊಳ್ಳುವಿಕೆ ನಡೆಯುತ್ತಿರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಸ್ವಯಂಸೇವಾ ಸಂಸ್ಥೆಗಳು ಮಾರುಕಟ್ಟೆಯ ವ್ಯವಸ್ಥೆಯನ್ನು ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಸಮುದಾಯದ ಜನರ ಉತ್ಪನ್ನದ ವಸ್ತುಗಳಿಗೆ ಸರಿಯಾದ ಬೆಲೆ ಸಿಗುವವರೆಗೂ ಮಾರುಕಟ್ಟೆಯ ಮಧ್ಯವರ್ತಿಯಾಗಿ ವಸ್ತುಗಳ ಶೇಕರಣೆಯ ಕಾರ್ಯನಿರ್ವಹಿಸುತ್ತಿರುವುದು ಕಾಣಬರುತ್ತದೆ.

ಜೇನುಕುರುಬರ ಕಾಲೋನಿಗಳಲ್ಲಿನ ಸಾಲದ ವ್ಯವಸ್ಥೆಯಲ್ಲಿ ವಿಲಕ್ಷಣತೆಯ ವಿಶೇಷತೆ ಕಂಡುಬರುತ್ತದೆ. ಸಾಂಸ್ಥಿಕ ಮೂಲದ ಸಾಲದ ರಚನೆಯ ದುರ್ಬಲತೆಯ ಪರಿಣಾಮವಾಗಿ; ಖಾಸಗಿ ಲೇವಾದೇವಿದಾರರು ಮತ್ತು ವ್ಯಾಪಾರಿಗಳ ಪ್ರಬಲ ಪೈಪೋಟಿ ಹೆಚ್ಚಾಗಿದೆ. ಖಾಸಗಿ ಲೇವಾದೇವಿದಾರರ ನೇರ ಹಿಡಿತದಲ್ಲಿ ಸಮುದಾಯದ ಜನರು ಸಿಲುಕಿದ್ದಾರೆ. ಸರ್ಕಾರದ ಸಾಲದ ಯೋಜನೆಗಳು ಹಾಗೂ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಸಾಲದ ಏಜೆನ್ಸಿಗಳು ಮತ್ತು ಸಹಕಾರ ಸಂಘಗಳು ಜನರಿಗೆ ಪರಿಹಾರ ನೀಡುವುದಕ್ಕಿಂತ ಹೆಚ್ಚು ಹೊರೆಯಾಗಿಯೇ ಪರಿಣಮಿಸಿರುವುದು. ಇದರಿಂದ ಜನರು ಖಾಸಗಿ ಲೇವಾದೇವಿದಾರರ ಕೃಪೆಯಲ್ಲಿ ಮುಳುಗಿದ್ದಾರೆ. ಖಾಸಗಿ ಲೇವಾದೇವಿದಾರರ ಹಣವು ನೇರವಾಗಿ ಸಮುದಾಯದ ಜನರ ಮನೆಬಾಗಿಲಿಗೆ ಬಂದು ತಲುಪುದು. ಯಾವುದೇ ನಿರ್ದಿಷ್ಟ ಮಿತಿಗಳಿಲ್ಲದೇ ಬಂದು ಸೇರುವ ಹಣಕ್ಕೆ ರಶೀದಿಯೂ ಸಹ ಇರುವುದಿಲ್ಲ. ಎಲ್ಲವೂ ಮೌಖಿಕವಾಗಿ ನಡೆಯುತ್ತಿರುವುದು ಕಾಣಬರುತ್ತದೆ.

ಕೋಷ್ಟಕ: ೨.೬ಜೇನುಕುರುಬರ ಸಾಲದ ಮೂಲಗಳು

ಕ್ರ. ಸಂ.	ಸಾಲದ ಮೂಲಗಳು	ಬಡ್ಡಿದರ ಶೇ.	ಹಿಂತಿರುಗಿಸುವ ವಿಧಾನ
೧	ಸಹಕಾರ ಸಂಘ	೧೩%	ಹಣರೂಪಿ ಮತ್ತು ವಸ್ತುರೂಪಿ
೨	ಎನ್.ಜಿ.ಒ. ಗಳು	೩%	ಹಣರೂಪಿ ಮತ್ತು ವಸ್ತುರೂಪಿ
೩	ಸಹಕಾರಿ ಬ್ಯಾಂಕ್	೧ ರಿಂದ ೨%	ಹಣಕಾಸಿನ ರೂಪ
೪	ಖಾಸಗಿ ಲೇವಾದೇವಿದಾರರು	೫ ರಿಂದ ೧೫ರ ವರೆಗೆ	ಹಣಕಾಸಿನ ರೂಪ
೫	ಶ್ರೀಮಂತ ಭೂಮಾಲೀಕರು	೧೦%	ಕೂಲಿಯ ರೂಪ ಮತ್ತು ಹಣರೂಪಿ

ಸಾಲ ನೀಡುವಲ್ಲಿ ಸಹಕಾರ ಸಂಘದ ಪಾತ್ರ ಅಷ್ಟೇನು ಪಾತ್ರವಹಿಸುತ್ತಿರುವುದು ಕಂಡುಬರುವುದಿಲ್ಲ. ಸ್ವಯಂ ಸೇವಾ ಸಂಸ್ಥೆಗಳು ವ್ಯವಸಾಯಕ್ಕಾಗಿ ಸಣ್ಣ ಪ್ರಮಾಣದ ಸಾಲದ ನೆರವು ನೀಡುತ್ತಿರುವುದು ಮಾತ್ರ ಕಂಡುಬರುತ್ತದೆ. ಸಂಸ್ಥೆ ನೀಡುವ ಸಾಲಕ್ಕೆ ಬಡ್ಡಿಯ ರೂಪದಲ್ಲಿ ಹಣ ಅಥವಾ ಉತ್ಪಾಧಿತ ವಸ್ತುಗಳನ್ನು ಪಡೆಯುತ್ತಿರುವುದು ಕಂಡುಬರುತ್ತದೆ. ಸಂಸ್ಥೆಯು ವಿಧಿಸುತ್ತಿರುವ ಬಡ್ಡಿಧರವು ಶೇ. ೩ರ ಪ್ರಮಾಣದಲ್ಲಿದೆ. ಸಂಸ್ಥೆ ಎಲ್ಲಾ ಕಾಲೋನಿಗಳಿಗೂ ನೆರವು ನೀಡುತ್ತಿಲ್ಲ. ಯಾವ ಕಾಲೋನಿಯ ಜನರು ಸಂಸ್ಥೆಯ ಜೊತೆಗೆ ನಿರಂತರವಾದ ಸಂಬಂಧ ವಿಶ್ವಾಸ ಹೊಂದಿದ್ದಾರೋ, ಆ ಕಾಲೋನಿಗಳಿಗೆ ಮಾತ್ರ ನೆರವು ದೊರಕಿಸಿ ಕೊಡುತ್ತಿರುವುದು ತಿಳಿದು ಬರುತ್ತದೆ. ಒಂದು ವೇಳೆ ಒಂದೇ ಕಾಲೋನಿಯಲ್ಲಿ ಎರಡು ಸಂಸ್ಥೆಗಳು ಕಾರ್ಯಚರಣೆಯಲ್ಲಿ ನಿರತವಾಗಿದ್ದಲ್ಲಿ ಭೇದಭಾವ ಮಾಡುವ ಲಕ್ಷಣಗಳು

ಕುಟುಂಬಗಳಿಗೆ ಅನುಗುಣವಾಗಿ ತಿಳಿದುಬರುತ್ತದೆ. ಸರ್ಕಾರಿ ಅಥವಾ ಸಹಕಾರಿ ಬ್ಯಾಂಕ್‌ಗಳ ಸಾಲದ ಪಾತ್ರ ಇವರುಗಳ ಕಡೆ ಮುಖಮಾಡಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಲೇವಾದೇವಿದಾರರು ಮತ್ತು ಶ್ರೀಮಂತ ಭೂಮಾಲೀಕರು ಪ್ರಮುಖ ಸಾಲ ನೀಡುವ ಏಜೆನ್ಸಿಗಳಂತೆ ಸಮುದಾಯಗಳ ಕಾಲೋನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಗಳಿಕೆಯ ಆದಾಯವು ಬಡ್ಡಿಗಾಗಿ ಮೀಸಲಾಗಿದೆ.

ಖಾಸಗಿ ಲೇವಾದೇವಿದಾರರು ಕಾಲೋನಿಗಳನ್ನು ಆಗ್ಗಿಂದಾಗೆ ಸಂದರ್ಶಿಸಿ ಜನರ ಬೇಡಿಕೆಗೆ ಅನುಗುಣವಾಗಿ ಸಾಲವನ್ನು ನೀಡುತ್ತಾರೆ. ಕೃಷಿ ಚಟುವಟಿಕೆಗಳಿಗೆ, ಹಾಗೂ ಅನುತ್ಪಾದಕ ಚಟುವಟಿಕೆಗಳಾದ ಹಬ್ಬ ಆಚರಣೆಗಳನ್ನು ನಡೆಸುವ ಉದ್ದೇಶದಿಂದ, ಜೊತೆಗೆ ಅಲ್ಪ ಮೊತ್ತದ ಹಣಕಾಸು ಮನೆಯ ವೆಚ್ಚಕ್ಕೆ, ವಸ್ತುಗಳ ಖರೀದಿಗೆ ನೀಡುತ್ತಿದ್ದಾರೆ. ಹಾಗೆಯೇ ಲೇವಾದೇವಿದಾರರು ಬಡ್ಡಿಯನ್ನು ಸಹ ವಿಧಿಸುತ್ತಿದ್ದಾರೆ. ೧೦೦ ರೂ.ಗಳಿಗೆ ೧೦ ರಿಂದ ೧೫ ರೂ.ಗಳವರೆಗೆ ಬಡ್ಡಿವಿಧಿಸಿ ಸಾಲದ ಬಲೆಯಲ್ಲಿ ಸಿಲುಕಿಸುತ್ತಿದ್ದಾರೆ. ಖಾಸಗಿ ಲೇವಾದೇವಿದಾರರಲ್ಲಿ ಹಣಕಾಸು, ಸಾಲಪಡೆದವರು ಮರಳಿಸುವಲ್ಲಿ ವಿಫಲವಾದಲ್ಲಿ ತಮ್ಮ ಭೂಮಿಯನ್ನು ಅಡಮಾನ ಮಾಡಿ (ಶ್ರೀಮಂತರಲ್ಲಿ) ಅಲ್ಲಿಂದ ಹಣತಂದು ಲೇವಾದೇವಿದಾರರಿಗೆ ನೀಡುತ್ತಾರೆ. ನಂತರ ಭೂಮಾಲೀಕ ಶ್ರೀಮಂತನಲ್ಲಿ ಕೂಲಿಗಾಗಿ ತವಕಿಸುವವರಾಗಿದ್ದಾರೆ. ಶ್ರೀಮಂತ ಭೂಮಾಲೀಕರು ಹಣಕಾಸು ನೆರವು ಸಾಲದ ರೂಪದಲ್ಲಿ ನೀಡುತ್ತಾರೆ. ಇಲ್ಲಿಯೂ ಸಹ ಶೇ. ೧೦% ಅಧಿಕ ಬಡ್ಡಿಯನ್ನು ಪಡೆಯಲಾಗುತ್ತದೆ. "ಭೂಮಾಲೀಕರಲ್ಲಿ ದುಡಿದು (ಕೃಷಿಕಾರ್ಮಿಕ) ಸಾಲ ಮರಳಿಸುವ ಅವಕಾಶ ಉಂಟು. ಕೆಲವೊಮ್ಮೆ ಬಡ್ಡಿ ಸಾಲ ಪಡೆಯದೇ ಸಾಲದ ಹಣವನ್ನು ಮಾತ್ರ ಪಡೆಯುವುದು ವಕ್ತೃ ಜವರಯ್ಯ ತಿಳಿಸುತ್ತಾರೆ.[*೩೨] ಖಾಸಗಿ ಲೇವಾದೇವಿದಾರರು ಮತ್ತು ಶ್ರೀಮಂತ ಭೂಮಾಲೀಕರು ಸಣ್ಣ ವ್ಯಾಪಾರಿಗಳು ಜನರನ್ನು ವಂಚನೆಯ ಮೂಲಕ ಶೋಷಣೆ ಮಾಡುತ್ತಿದ್ದರೂ, ಹೆಚ್ಚಿನವರು ಹಣಕ್ಕಾಗಿ ಅವರುಗಳನ್ನೇ ಅವಲಂಬಿಸಿದ್ದಾರೆ. ಸಾಲದಾತರು ಸಹ ಸಮುದಾಯದ ಜನರೊಂದಿಗೆ ಸಾಮರಸ್ಯ ಸ್ನೇಹ ಅನ್ಯೋನ್ಯತೆಯ ಸಂಬಂಧವನ್ನು ಹೊಂದಿದ್ದು ಮುಗ್ಧ ಜನರನ್ನು ಸಾಲದ ಬಲೆಯಲ್ಲಿ ಸಿಲುಕಿಸುತ್ತಿದ್ದಾರೆ. ಅಸಂಪ್ರದಾಯಿಕ ಮಾರ್ಗದ ಮೂಲಕ ವ್ಯವಹರಿಸಿ, ಸುಲಭವಾಗಿ ಹಣಕಾಸು ನೆರವು ನೀಡಿ ಹೆಚ್ಚು ಬಡ್ಡಿಯನ್ನು ಪಡೆಯುತ್ತಾ ಜನರನ್ನು ವಂಚಿಸಲಾಗುತ್ತಿದ್ದರೂ, ಜನರು ಇವರುಗಳನ್ನೇ ಅವಲಂಬಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಸಾಲದ ಹೊರೆ ಹೆಚ್ಚಾದಂತೆ ಭೂಮಿಯ ಪರಾಧೀನತೆ ಮತ್ತು ಬಡ್ಡಿಯು ಹೆಚ್ಚಾಗಿ ಸಾಲದ ಬಲೆಗೆ ಸಿಲುಕಿ ಬಡತನದಲ್ಲಿ ಕುಟುಂಬವನ್ನು ಸಿಲುಕಿಸಿರುವುದು ಕಂಡುಬರುತ್ತದೆ. ಸಾಲದ ಬಲೆಗೆ ಸಿಕ್ಕ ನಂತರ ಕೂಲಿಗಾಗಿ ವಲಸೆ, ಮಕ್ಕಳನ್ನು ಶಾಲೆ ಬಿಡಿಸುವುದು ಸಾಮಾನ್ಯವಾಗಿದೆ.

ಸಮುದಾಯದಲ್ಲಿ ಆದಾಯವೇ ಕಡಿಮೆ. ಭೂಮಿಯು ದೊರೆತಿರುವುದು ಸಹ ಕಡಿಮೆ. ಇದರಿಂದ ಗಳಿಸುವ ಉತ್ಪಾಧನೆಯೂ ಸಣ್ಣ ಪ್ರಮಾಣದಿಂದಲೇ ಕೂಡಿದೆ. ಕೃಷಿ ಉತ್ಪನ್ನದ ಸಣ್ಣ ಪ್ರಮಾಣವು ಕುಟುಂಬ ನಿರ್ವಹಣೆಗೆ ಸಾಕಾಗದ ಪರಿಸ್ಥಿತಿ. ಈ ಪರಿಸ್ಥಿತಿಯಲ್ಲಿ ಸಾಲದ ಬಲೆಗೆ ಸಿಲುಕಿದಲ್ಲಿ ಉತ್ಪನ್ನವನ್ನು ಅಲ್ಪ ಬೆಲೆಗೆ ಗ್ರಾಮೀಣ ಕೃಷಿಕರಲ್ಲಿ ಮಾರಾಟ ಮಾಡುತ್ತಾರೆ. ಇಲ್ಲಿಯೂ ಮಾರುಕಟ್ಟೆಯ ಪಾತ್ರ ಕ್ಷೀಣಿಸಿರುವುದು. ಪ್ರಥಮವಾಗಿ ಮಾರುಕಟ್ಟೆ ಮತ್ತು ಸಾಲದ ಮೂಲಗಳ ಸುಧಾರಣೆ ಅನಿವಾರ್ಯವಾಗಿದೆ. ಖಾಸಗಿ ಲೇವಾದೇವಿದಾರರ ಕಪಿಮುಷ್ಟಿಯಿಂದ ಹೊರತರುವಲ್ಲಿ ಸಹಕಾರಿ ಬ್ಯಾಂಕ್‌ಗಳು ನಿರಂತರ ಶ್ರಮಿಸಬೇಕಿದೆ. ಇಲ್ಲವಾದಲ್ಲಿ ಎಷ್ಟೇ ಯೋಜನೆಗಳು ರೂಪಿಸಿದರೂ ಸಮುದಾಯದಲ್ಲಿ ಹಣಕಾಸಿನ ನೆರವು ಇಲ್ಲದಿದ್ದರೆ ಖಾಸಗಿ ಲೇವಾದೇವಿದಾರರು ಮಧ್ಯಪ್ರವೇಶ ಮಾಡಿ ಆದಾಯಗಳಿಸಿ, ನಿರಂತರವಾಗಿ ಶೋಷಣೆಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಅಭಿವೃದ್ಧಿಗೆ ಪೂರಕವೇ ಹಣಕಾಸು. ಹಣಕಾಸಿನ ನೆರವು ಸಹ ಸಮರ್ಪಕ ರೀತಿಯಲ್ಲಿ ನಡೆದು ಬರಬೇಕು. ಸಮುದಾಯಗಳಲ್ಲಿ ಖಾಸಗಿ ಲೇವಾದೇವಿಯರ ಪಾತ್ರದ ಪ್ರಭಾವ ಕಡಿಮೆ ಮಾಡಿದಲ್ಲಿ ಅಥವಾ ನಿಯಂತ್ರಿಸಿದ್ದಲ್ಲಿ, ಸಹ ಜನರ ಆದಾಯವು ಸಮುದಾಯದಲ್ಲಿಯೇ ಉಳಿಯುತ್ತದೆ. ಈ ಬಗ್ಗೆ ತುರ್ತು ಗಮನ ಹರಿಸಬೇಕಿದೆ. ಇಲ್ಲವಾದಲ್ಲಿ ಸಮುದಾಯದ ಉತ್ಪನ್ನವು ಬಂಡವಾಳಿಗರ ಆದಾಯವಾಗಿ ಪರಿಣಮಿಸುತ್ತದೆ.

ಕುಡಿಯುವ ನೀರು: ಜೀವನದ ಸರ್ವಸ್ವವಾದ ನೀರು ಸಮಸ್ತ ಜೀವಸಂಕುಲದ ರಸಾಯನಿಕ ಕ್ರಿಯೆಯ ಮೂಲವಾಗಿದೆ. ದಿನನಿತ್ಯದ ಬದುಕಿನಲ್ಲಿ ನೀರು ಪ್ರಧಾನಪಾತ್ರ ವಹಿಸುತ್ತದೆ. ನೀರನ್ನು ಸಮರ್ಪಕವಾಗಿ ದೊರೆಕಿಸಿಕೊಡುವುದಕ್ಕಾಗಿ ಸರ್ಕಾರವು ಸಾವಿರಾರು ಕೋಟಿ ರೂ.ಗಳ ವೆಚ್ಚ ಸಹ ಮಾಡಲಾಗುತ್ತಿದೆ. ಮೂಲಭೂತ ಸೌಲಭ್ಯಗಳಲ್ಲಿ ಪ್ರಧಾನವಾದದ್ದು ಸಹ. ಸಮುದಾಯದಲ್ಲಿ ನೀರಿನ ಮೂಲಗಳು ಬೇರೆ ಬೇರೆಯಾಗಿವೆ. ಎಲ್ಲಾ ಕಾಲೋನಿಗಳಿಗೂ ಕೊಳವೆ ಬಾವಿ ಆಧಾರವೆನ್ನಬಹುದು. ಕಾಲೋನಿಗಳ ಆರಂಭದಲ್ಲಿ ನಿರ್ಮಿಸಿದ ಕೊಳವೆಬಾವಿ ಮತ್ತು ನೀರಿನ ಟ್ಯಾಂಕ್‌ಗಳು ಅಧೋಗತಿಯಲ್ಲಿವೆ. ಬಹುತೇಕ ಎಲ್ಲಾ ಕಾಲೋನಿಗಳಲ್ಲಿ ನೀರಿನ ಸಮಸ್ಯೆ ಎದ್ದು ಕಾಣುತ್ತದೆ. ಕುಡಿಯುವ ನೀರಿಗಾಗಿ ಕಷ್ಟಪಡುವರಾಗಿ ಕಂಡುಬರುತ್ತಾತೆ.

ಕೋಷ್ಟಕ೨.೭: ಒಂದು ವಾಸಸ್ಥಾನದಲ್ಲಿನ ಕುಟುಂಬವಾರು ಕುಡಿಯುವ ನೀರಿನ ಲಭ್ಯತೆ

ಕ್ರ.ಸಂ.	ನೀರಿನ ಮೂಲಗಳು	ಅವಲಂಬಿತ ಕುಟುಂಬಗಳ ಸಂಖ್ಯೆ	ನೀರಿನ ಸಮಸ್ಯೆ ಎದುರಿಸುತ್ತಿರುವ ಕುಟುಂಬಗಳ ಸಂಖ್ಯೆ	ಒಟ್ಟು ಕುಟುಂಬಗಳು
೧	ಕೈಪಂಪು	೧೮೯	೨೯೬	೭೪೦
೨	ಮಿನಿಟ್ಯಾಂಕ್	೧೦೩		
೩	ನಳ / ನಲ್ಲಿ	೧೧೧		
೪	ಬಾವಿ	೨೪		
೫	ಕೆರೆ/ಕಾಲುವೆ	೧೭		

ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ಕಾಲೋನಿಯಲ್ಲಿ ಕುಡಿಯುವನೀರಿಗಾಗಿ ಮಿನಿ ಟ್ಯಾಂಕ್‌ಗಳನ್ನು ನಿರ್ಮಾಣಮಾಡಲಾಗಿದೆ. ಆದರೆ ನೀರು ಹರಿಯುವುದು ಮಾತ್ರ ಎಂದೋ ಒಮ್ಮೆ. ಅದು ಕೆಲವೇ ಕಾಲೋನಿಗಳಲ್ಲಿ ಮಾತ್ರ. ೭೪೦ ಕುಟುಂಬಗಳಲ್ಲಿ ೧೦೩ ಕುಟುಂಬಗಳು ಮಿನಿಟ್ಯಾಂಕ್‌ಗಳ ಮೂಲಕ ನೀರಿನ ಸ್ವಲ್ಪ ಮಟ್ಟಿನ ಪ್ರಯೋಜನ ಪಡೆದಿದ್ದಾರೆ. ಗ್ರಾಮದ ಪಕ್ಕದಲ್ಲಿರುವ ಕೆಲವೇ ಕಾಲೋನಿಗಳಲ್ಲಿ ನಲ್ಲಿ/ನಳಗಳ ಮೂಲಕ ನೀರು ಪಡೆಯುತ್ತಿದ್ದಾರೆ. ಉಳಿದಂತೆ ೧೮೯ ಕುಟುಂಬಗಳು ಕೈಪಂಪುಗಳನ್ನೇ ಆಶ್ರಯಿಸಿದ್ದಾರೆ. ಇದರಿಂದ ಸ್ವಲ್ಪ ಮಟ್ಟಿಗೆ ಕುಡಿಯುವ ನೀರಿಗೆ ಪರಿಹಾರ ಕಂಡುಕೊಂಡಂತಾಗಿದೆ. ೨೪ ಕುಟುಂಬಗಳು ಕಾಲುವೆಯ ಸಮೀಪ ತಮ್ಮ ಭೂಮಿಯಲ್ಲೇ ಮನೆ ಕಟ್ಟಿಕೊಂಡಿರುವ ಕುಟುಂಬಗಳು, ಅಕ್ಕಪಕ್ಕದ ಬಾವಿಗಳನ್ನು ಆಶ್ರಯಿಸಿದ್ದಾರೆ. ಒಟ್ಟಾರೆ ೨೯೬ ಕುಟುಂಬಗಳು ನೀರಿಗಾಗಿ ಸಾಹಸಮಾಡಬೇಕಿದೆ. ಕೆಲವೊಂದು ಕಾಲೋನಿಗಳಲ್ಲಿ ಕೈಪಂಪು ರಿಪೇರಿಯಾಗಿ ಉಳಿದಿದ್ದರೆ ಬಹುತೇಕ ಕಡೆ ಮಿನಿಟ್ಯಾಂಕ್‌ಗಳು ತೋರಿಕೆಗೆ ಮಾತ್ರ ನಿರ್ಮಿಸಿರುವಂತೆ ಕಂಡುಬರುತ್ತವೆ. ಒಮ್ಮೆಯೂ ನೀರು ಹರಿದ ಬಗ್ಗೆ ಮಾಹಿತಿಯೇ ಇಲ್ಲ ಎನ್ನುತ್ತಾರೆ ವಕ್ತೃಗಳು. ಇತ್ತೀಚಿನ ದಿನಗಳಲ್ಲಿ ನೀರಿಗೆ ಪರದಾಟವಾಗಿದೆ. ಅತಿ ಹೆಚ್ಚು ಅಂದರೆ ದಿನಕ್ಕೆ ೫ ಬಿಂದಿಗೆ ನೀರು ದೊರೆತರೆ ಸಾಕು ಎನ್ನುವ ಸ್ಥಿತಿಯಲ್ಲಿದ್ದಾರೆ.

ಸಮುದಾಯದ ಜನರನ್ನು ಕಂಡರೇ ಸಾಕು ನೀರಿನ ಬಳಕೆಯ ಪಾತ್ರ ತಿಳಿಯಬಹುದು. ಹೀಗಾಗಿ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿ ಮಾಡಬೇಕಿದೆ. ಕೆಲವೊಂದು ಕಾಲೋನಿಗಳಲ್ಲಿ ದೂರದಿಂದ ನೀರನ್ನು ಹೊತ್ತು ತರಬೇಕಿದೆ. ಕುಡಿಯುವ ನೀರಿನ ಸಮಸ್ಯೆ

ಅತಿಮುಖ್ಯವಾಗಿದೆ. ಸಮಸ್ಯೆಯು ತುಂಬಾ ಕಾಲದಿಂದ ಉಳಿದು ಬಂದಿದೆ. ಗ್ರಾಮಪಂಚಾಯ್ತಿಗಳು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿ ನೀರಿನ ಸಮಸ್ಯೆ ಪರಿಹರಿಸಬಹುದಾಗಿದೆ. ನಿರ್ಮಾಣಗೊಂಡ ಮಿನಿಟ್ಯಾಂಕ್‌ಗಳಿಗೆ ನೀರು ಸರಬರಾಜು ಮಾಡುವುದರ ಮೂಲಕ ಜೀವನಾಧಾರ ನೀರು ಒದಗಿಸಿಕೊಡಬಹುದಾಗಿದೆ.

ಮನೆಗಳು: ಇಡೀ ಅರಣ್ಯ ಪ್ರದೇಶವೇ ನನ್ನ ಮನೆಯೆಂದು ತನಗೆ ಬೇಕೆಂದಲ್ಲಿ ಹಾಡಿಯನ್ನು ಅರಣ್ಯ ಪರಿಕರಗಳಿಂದಲೇ ನಿರ್ಮಿಸಿಕೊಂಡಿದ್ದ ಸಮುದಾಯ. ತಮ್ಮ ಸಾಂಸ್ಕೃತಿಕ ಪ್ರಾತಿನಿಧ್ಯತೆಯನ್ನು ಉಳಿಸಿಕೊಂಡು ಬಂದಿದ್ದವರು. ಎಂದೂ ಆಧುನಿಕತೆಯ ಜೀವನದ ಗುಹೆಗಳಲ್ಲಿ ಜೀವಿಸುವುದು ನೆನಸಿಕೊಂಡಿರಲಿಲ್ಲ. ಬದಲಾಗುತ್ತಾ ಬಂದ ಮಾನವನ ಜೀವನ ಕ್ರಮ, ರೂಪಿಸಿದ ಅರಣ್ಯ ನೀತಿಯ ಫಲವಾಗಿ ಪ್ರಕೃತಿಯ ಸುಂದರ ವಾಸದಿಂದ ಕಾಂಕ್ರೀಟ್ ನಿರ್ಮಿತ ಗವಿಗಳಲ್ಲಿ ಜೀವಿಸುವಂತೆ ಮಾಡಿದೆ. "ಮನೆ ಎಂದಲ್ಲಿ ವ್ಯಕ್ತಿ ತನ್ನ ಮತ್ತು ತನ್ನ ಕುಟುಂಬದವರಿಗಾಗಿ ನಿರ್ಮಿಸಿಕೊಂಡ ಶಿಕ್ಷಣ ವ್ಯವಸ್ಥೆ ಎಂಬುದು ಪುರುಷೋತ್ತಮ ಬಿಳಿಮಲೆಯವರ ಅಭಿಪ್ರಾಯವಾಗಿದೆ"[೩೮]. ಮನೆಗಳ ನಿರ್ಮಾಣದಲ್ಲಿ ಸಾಂಸ್ಕೃತಿಕತೆಯನ್ನು ಪ್ರತಿನಿಧಿಸುತ್ತಿದ್ದ ಜೇನುಕುರುಬರು ಅರಣ್ಯದಲ್ಲಿನ ಪರಿಕರಗಳಿಂದಲೇ ಹಾಡಿಯನ್ನು ಸುಂದರವಾಗಿ ನಿರ್ಮಿಸಿಕೊಳ್ಳುತ್ತಿದ್ದವರು. ಮನೆ ನಿರ್ಮಾಣದ ಸ್ಥಳದ ಆಯ್ಕೆ ಮತ್ತು ರೀತಿ ಕುಟುಂಬ ಭದ್ರತೆಯನ್ನು ಒದಗಿಸುತ್ತಿತ್ತು. ನೈಸರ್ಗಿಕವಾದ ಬಿದಿರು, ಸೊಪ್ಪು, ಕಟ್ಟಿಗೆ ಹುಲ್ಲುಗಳಿಂದ ವಿಶಾಲಪ್ರದೇಶದಲ್ಲಿ ನಿರ್ಮಾಣ ಮಾಡಿಕೊಳ್ಳುತ್ತಿದ್ದ ವಸತಿ ಕಲಾ ಸೌಂದರ್ಯದ ನೆಲೆಯಂತೆಯೂ ಕಂಡು ಬರುತ್ತಿತ್ತು. ಅರಣ್ಯದಿಂದ ಹೊರಹಾಕುವ ಪುನರ್‌ವಸತಿ ಕಾರ್ಯ ಪ್ರಾರಂಭಗೊಂಡ ನಂತರ ಮನೆಗಳ ನಿರ್ಮಾಣದಲ್ಲಿ ಅನೇಕ ಬದಲಾವಣೆಗಳು ಅನಿವಾರ್ಯವಾಗುವಂತೆ ಮಾಡಿದೆ. ಮನೆಯನ್ನು ನೇರಸಾಲಿನಲ್ಲಿ ಒಂದಕ್ಕೊಂದು ಎದುರು ಸಾಲುಗಳ ರೀತಿ ನಿರ್ಮಾಣಮಾಡಿಕ್ಕೊಟ್ಟಿರುವುದು ಮನೆಗಳ ಸಾಂಸ್ಕೃತಿಕ ಪರಂಪರೆಯನ್ನು ಮುರಿದಂತೆ ಎಂದು ಸಮುದಾಯದ ಜನರು ತಿಳಿಸುತ್ತಾರೆ. ಆದರೂ ಬದಲಾದ ಸ್ಥಿತಿಗೆ ಹೊಂದಿಕೊಳ್ಳುವವರಾಗಿದ್ದೇವೆ ಎನ್ನುತ್ತಾರೆ.

ಮನೆಗಳ ನಿರ್ಮಾಣದ ಪರಿಕರಗಳು, ಮನೆಯ ವಿಸ್ತೀರ್ಣ, ಕೋಣೆಗಳು, ವಿಧಾನ ಎಲ್ಲವೂ ಹೊಸತಾಗಿ ಕಂಡುಬರುತ್ತದೆ. ಆಧುನಿಕತೆಯ ಚಿತ್ರಣ ಜೇನುಕುರುಬರಲ್ಲಿ ಹೆಂಚು, ಇಟ್ಟಿಗೆ, ಮರದ ಹಲಗೆ, ಕಬ್ಬಿಣದ ಬಾಗಿಲು, ಕಿಟಕಿಗಳಿಂದ ಕೂಡಿರುವುದು, ಹೊಸತನದ ಪ್ರತೀಕವೆಂಬಂತೆ ಕಾಣುತ್ತದೆ. ಸರ್ಕಾರದ ಯೋಜನೆಗಳಲ್ಲಿ ನಿರ್ಮಾಣಗೊಂಡಿರುವ ವಸತಿ ಕ್ರಮದ ಬಗ್ಗೆ ಜನರಲ್ಲಿ ಬೇಸರವಿದೆ. ಹೆಂಚಿನ ಮನೆಗಳು ಕಾಲೋನಿಯ ಪ್ರಾರಂಭದಲ್ಲಿ ನಿರ್ಮಿಸಿದವು ಮುರಿದು ಬೀಳುವ ಹಂತ ತಲುಪಿವೆ. ಆದರೂ ಜನರೇ ಸಣ್ಣಪುಟ್ಟ ರಿಪೇರಿ ಮಾಡಿ ಅವುಗಳಲ್ಲೇ ವಾಸಿಸುತ್ತಿದ್ದಾರೆ. ಸರ್ಕಾರದಿಂದ ನಿರ್ಮಾಣಗೊಳ್ಳುತ್ತಿರುವ ಮನೆಗಳ

ವಿಸ್ತೀರ್ಣ ಹೆಚ್ಚೆಂದರೆ "೧೫ X ೨೦" ಅಡಿಗಳಿಂದ ಕೂಡಿರುವುದು. ಕುಟುಂಬದ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಮನೆಯ ಬೇಡಿಕೆ ಹೆಚ್ಚುತ್ತಾ ನಡೆದಿದೆ. ನಂತರ ಸಯಂ ಜನರೇ ಕೆಲವು ಮನೆಗಳ ನಿರ್ಮಾಣ ಮಾಡಿ ಕೊಳ್ಳುವವರಾಗಿದ್ದಾರೆ.

೧೯೯೫ ರ ನಂತರ ನಿರ್ಮಾಣಗೊಂಡ ಬಹುತೇಕ ಮನೆಗಳು ಬಹಳ ಚಿಕ್ಕದಾಗಿರುವುದು ಕಂಡುಬರುತ್ತದೆ. ಒಂದು ಕೋಣೆಯಲ್ಲಿ ಮಧ್ಯೆ ಅಡ್ಡಗೋಡೆ ನಿರ್ಮಾಣಮಾಡಿ, ಅಡುಗೆ ಮನೆಯನ್ನು ನಿರ್ಮಿಸಲಾಗಿದೆ. ನಾಗಪುರದ ಘಟಕಗಳಾದ ೧, ೨, ೩, ೪, ೫ ಹೊರತು ಪಡಿಸಿದರೆ, ಉಳಿದೆಲ್ಲ ಕಾಲೋನಿಗಳ ಮನೆಗಳು ಸಮಸ್ಯೆಯಿಂದಲೇ ಕೂಡಿದವುಗಳಾಗಿವೆ. ಸರ್ಕಾರವು ಸಹ ಮನೆ ನಿರ್ಮಿಸಿ ಕೊಡುತ್ತಿರುವುದು ಪುನರ್‌ವಸತಿಯ ಪ್ರಾರಂಭದಲ್ಲಿ ಮಾತ್ರ. ನಂತರ ಜನಸಂಖ್ಯೆ ಕುಟುಂಬಗಳ ಸಂಖ್ಯೆ ಹೆಚ್ಚಾದಂತೆ ಗಮನ ಹರಿಸದಿರುವುದರಿಂದ ಸಮುದಾಯದ ಜನರೇ ಗುಡಿಸಲು, ಟಿನ್‌ಮನೆ, ನಿರ್ಮಾಣ ಮಾಡಿಕೊಳ್ಳುವಂತಾಗಿದೆ. ಸರ್ಕಾರದಿಂದ ನಿರ್ಮಾಣಗೊಂಡ ಇತ್ತಿಚಿನ ಮನೆಗಳು ಸಿಮೆಂಟ್ ಬ್ಲಾಕ್‌ಗಳಿಂದ ನಿರ್ಮಾಣವಾಗಿವೆ ಅಂತಹ ಮನೆಗಳಿಗೆ ಗೋಡೆ ಮಾತ್ರ ನಿರ್ಮಿಸಿ ಹೆಂಚು ಹಾಕಲಾಗಿದೆ. ವ್ಯವಸ್ಥಿತವಾಗಿ ಗೋಡೆಗಳನ್ನು ಸಿಮೆಂಟ್‌ನಿಂದ ಪ್ಲಾಸ್ಟಿಂಗ್ ಸಹ ಮಾಡಿರುವುದಿಲ್ಲ. ಒಂದು ವರ್ಷದ ಹಿಂದೆ ನಿರ್ಮಾಣವಾದ ಈ ಮನೆಗಳು ಮುರಿದು ಪಾಳುಬಿದ್ದಿವೆ. ಗುಣಮಟ್ಟವಿಲ್ಲದ ಮನೆಗಳಲ್ಲಿ ವಾಸಿಸಲು ಸಮುದಾಯದ ಜನರು ಭಯಪಡುವವರಾಗಿದ್ದಾರೆ.

ಕೋಷ್ಠಕ೨.೮: ಜೇನುಕುರುಬರ ಮನೆಗಳ ಮಾದರಿ

ಕ್ರ. ಸಂ.	ಮನೆಗಳ ಮಾದರಿ	ಕುಟುಂಬಗಳು	ನಿರ್ಮಾಣ ಮಾಡಿಕೊಟ್ಟವರು
೧	ಹೆಂಚಿನಮನೆ	೪೦೦	ಅರಣ್ಯ ಇಲಾಖೆ ಮತ್ತು ಪ.ವರ್ಗ ಕಲ್ಯಾಣ ಇಲಾಖೆ
೨	ಹುಲ್ಲುಮನೆ	೧೪೬	ಸ್ವಂತ ನಿರ್ಮಾಣ
೩	ಟಿನ್‌ಮನೆ	೧೭೬	ಕಾಫಿತೋಟದ ಮಾಲೀಕರು + ಶ್ರೀಮಂತರು
೪	ಶೀಟು ಹಾಕಲಾದ ಮನೆ	೮೯	ಸರ್ಕಾರದ ಯೋಜನೆ + ಅಂಬೇಡ್ಕರ್ ಯೋಜನೆ (ಭೂಸೇನಾ ನಿಗಮ)
೫	ಮಾಳಿಗೆ ಮನೆ	೧೮	ಸ್ವಂತ ನಿರ್ಮಾಣ

ಮೇಲಿನ ಮನೆಗಳನ್ನು ಗಮನಿಸಿದಾಗ ಅತಿ ಹೆಚ್ಚಿನ ಪ್ರಮಾಣದಲ್ಲಿ ಹೆಂಚಿನಮನೆಗಳು ಪುನರ್‌ವಸತಿ ಕಾರ್ಯದಲ್ಲಿ ನಿರ್ಮಾಣಗೊಂಡಂತವುಗಳು. ೪೦೦ ಮನೆಗಳು ಅರಣ್ಯ ಇಲಾಖೆ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗಗಳ ನಿರ್ದೇಶನಾಲಯ ನಿರ್ಮಿಸಿಕೊಟ್ಟವುಗಳಾಗಿವೆ. ಇಂತಹ ಬಹುತೇಕ ಮನೆಗಳು ಮುರಿದು ಬೀಳುವ ಹಂತಕ್ಕೆ ತಲುಪಿವೆ. ಉಳಿದಂತೆ ೮೯

ಮನೆಗಳು ಸರ್ಕಾರದ ವಿವಿಧ ಯೋಜನೆಗಳ ನೆರವಿನ ಮೂಲಕ ನಿರ್ಮಾಣಗೊಂಡವುಗಳಾಗಿವೆ. ಇವುಗಳ ನಿರ್ಮಾಣದ ಕಾರ್ಯ ಭೂಸೇನಾ ನಿಗಮ ಮಾಡಿದೆ. ಸಿಮೆಂಟ್ ಬ್ಲಾಕ್‌ಗಳಿಂದ ನಿರ್ಮಾಣ ಮಾಡಿರುವ ಈ ಮನೆಗಳು ನಿರ್ಮಾಣ ಮಾಡಲಾದ ವರ್ಷದಲ್ಲೇ ಮುರಿದು ಬಿದ್ದಿವೆ. ಗುಣಾತ್ಮಕವಾದ ನಿರ್ಮಾಣ ವ್ಯವಸ್ಥೆ ಇಲ್ಲದ ಪರಿಣಾಮ ಅನೇಕ ಮನೆಗಳು ಪಾಳು ಬಿದ್ದಿವೆ. ೧೭೬ ಟಿನ್ ಮನೆಗಳು ತಗಡಿನಿಂದ ನಿರ್ಮಾಣ ಮಾಡಿದವುಗಳಾಗಿವೆ. ಕಾಫಿ ತೋಟದಲ್ಲಿ ಕೆಲಸಮಾಡುವ ಕೂಲಿ ಕಾರ್ಮಿಕರಿಗೆ ಮಾಲೀಕರು ನಿರ್ಮಿಸಿ ಕೊಟ್ಟಂತವುಗಳಾಗಿವೆ. ಸ್ವಂತ ನಿರ್ಮಾಣದ ೧೪೬ ಹುಲ್ಲುಮನೆ, ಕಾಲೋನಿಗಳ ಪ್ರತ್ಯೇಕ ವಾಸಕ್ಕೆ ಮನೆ ನಿರ್ಮಿಸಿಕೊಂಡ ಇತರರ ನೆರವಿಲ್ಲದೇ, ತಾವು ತಮ್ಮ ಹೆಂಡತಿ ಮಕ್ಕಳ ಸಹಾಯದಿಂದ ಮನೆಯನ್ನು ತಾವೇ ನಿರ್ಮಿಸಿಕೊಂಡವುಗಳಾಗಿವೆ. ಉಳಿದ ೧೮ ಮನೆಗಳು ಅಲ್ಪಸ್ವಲ್ಪ ವಿದ್ಯಾವಂತರಾಗಿ ಕ್ಷೇತ್ರದ ಚುನಾಯಿತ ಪ್ರತಿನಿಧಿಗಳ ಜೊತೆ ಜೊತೆಗೆ ಕಾರ್ಯನಿರ್ವಹಿಸುವರಾದ್ದಾಗಿದೆ. ಈ ಮನೆಗಳು ಕಲ್ಲು ಚಪ್ಪಡಿ ಹೊದಿಕೆಯಿಂದ ನಿರ್ಮಾಣಗೊಂಡ ಮಾಳಿಗೆ ಮನೆಗಳಾಗಿವೆ. ಸ್ವಂತ ಹಣಕಾಸು ವೆಚ್ಚ ಮಾಡಿ ನಿರ್ಮಿಸಿಕೊಂಡಿರುವುದಾಗಿ ವಕ್ತೃಗಳು ತಿಳಿಸುತ್ತಾರೆ.

ಹೊಸದಾಗಿ ಮದುವೆಯಾದ ಕುಟುಂಬಗಳಿಂದ ಜನವಸತಿ ಹೆಚ್ಚುತ್ತಿದೆ. ಇದರಿಂದ ಮನೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮನೆಗಳ ನಿರ್ಮಾಣಕ್ಕೆ ಜಿಲ್ಲಾ ಪಂಚಾಯಿತಿಗೆ ಬೇಡಿಕೆಯೂ ಸಲ್ಲಿಸಲಾಗಿದೆ. ಕಾಲೋನಿ ಶಾಶ್ವತವಾದರೂ ಮನೆಗಳ ಹಂಚಿಕೆಯು ಕಡಿಮೆ. ಸರ್ಕಾರ ಕೆಲವು ಕುಟುಂಬಗಳನ್ನು ಗುರುತಿಸಿ ಮನೆಗಳನ್ನು ನಿರ್ಮಾಣ ಮಾಡಿಕೊಡಬೇಕಿದೆ.

ಸಾಮಾಜಿಕ ರಚನೆ

ಮಾನವನು ಪ್ರಕೃತಿಯೊಂಧಿಗಿನ ನಿರಂತರ ಹೋರಾಟದಲ್ಲಿ ತೊಡಗಿಕೊಂಡಿರುತ್ತಾನೆ. ತನ್ನ ಒಂಟಿತನ, ಬಡತನ, ಅಭದ್ರತೆ ಮುಂತಾದವುಗಳನ್ನು ಹೋಗಲಾಡಿಸಿಕೊಳ್ಳಲು ಮತ್ತು ತನ್ನಿಂದ ತನ್ನನ್ನೇ ರಕ್ಷಿಸಿಕೊಳ್ಳಲು ಒಂದು ಒಪ್ಪಂದವನ್ನು ಮಾಡಿಕೊಂಡನು. ಆದರಂತೆ ರಾಜ್ಯ ಮತ್ತು ಸಮಾಜಗಳು ಅಸ್ಥಿತ್ವಕ್ಕೆ ಬಂದಿವೆ "ಸಮಾಜದಲ್ಲಿನ ವಿಭಾಗಗಳ ನಡುವಿನ ಕ್ರಮಬದ್ಧವಾದ ವ್ಯವಸ್ಥಿತ ಜೋಡಣೆಯನ್ನು ಸಾಮಾಜಿಕ ರಚನೆ ಎನ್ನಬಹುದು". ಇದು ಸಂಬಂಧಿಕವಾಗಿ ಸ್ಥಿರವಾದುದಾಗಿದೆ. "ಸಾಮಾಜಿಕ ರಚನೆ ಎಂಬುದು ಒಂದು ಅಮೂರ್ತಕಲ್ಪನೆ. ಇದನ್ನು ಮಾರ್ಕ್ಸ್ ಆರ್ಥಿಕ ದೃಷ್ಟಿಕೋನದಲ್ಲಿ ವಿಶ್ಲೇಷಿಸಿದರೆ, ವೆಬ್ಬರ್ "ಒಂದು ಸಮಾಜದ ಧರ್ಮವು ಆ ಸಮಾಜ ಧರ್ಮವು ಆ ಸಮಾಜದ ಸಾಮಾಜಿಕ ರಚನೆಗೆ ಕಾರಣವಾಗುತ್ತದೆ ಎನ್ನುತ್ತಾನೆ". ಮನುಷ್ಯನ ಅವಶ್ಯಕತೆಗಳು ಸಾಮಾಜಿಕ ರಚನೆಯನ್ನು ನಿರ್ಮಿಸಿವೆ. ಅಂತೆಯೇ ಸಾಮಾಜಿಕ ರಚನೆ ಎಂಬುದು ನಿರಂತರ ಪರಿವರ್ತನೆ

ಹೊಂದುವಂತದಾಗಿದೆ. ಸಾಮಾಜಿಕ ರಚನೆ ಎಂಬುದು ಸಾಮಾಜಿಕ ಪಾತ್ರಗಳ ನಡುವಿನ ಸಂಬಂಧಗಳಾಗಿವೆ. ಸಮಾಜದ ಸಂಸ್ಥೆಗಳು, ಗುಂಪುಗಳು ಮತ್ತು ಅನೇಕ ರೀತಿಯ ಸಾಮಾಜಿಕ ಕಾರ್ಯಗಳ ನಡುವಿನ ಸ್ಥಿರ ಸಂಬಂಧಗಳು ಎನ್ನಬಹುದು.

ಬ್ರಿಟಿಷ್ ಸಾಮಾಜಿಕ ಮಾನವಶಾಸ್ತ್ರಜ್ಞರು ಅಭಿಪ್ರಾಯ ಪಡುವಂತೆ ಸಾಮಾಜಿಕ ರಚನೆಯು ಸಾಮಾಜಿಕ ಸಂಬಂಧಗಳ ವಾಸ್ತವಿಕ ಒಳ ತಿರುಳಿಗಿಂತಲ್ಲೂ ಅವುಗಳಿಗೆ ಆಧಾರ ಪ್ರಾಯವಾಗಿರುವ ತತ್ವಗಳನ್ನು ಸೂಚಿಸುವುದು. "ಮೊರಿಸ್‌ಗಿನ್ಸ್‌ಬರ್ಗ್ ಪ್ರಕಾರ ಸಮಾಜಗಳು ಒಳಗೊಂಡಿರುವ ಪ್ರಮುಖ ಸಮೂಹಗಳು ಮತ್ತು ಸಂಸ್ಥೆಗಳ ಸಂಕೀರ್ಣವೇ ಸಾಮಾಜಿಕ ರಚನೆ"[೩೯]. "ಆಗ್ಬನ್ ಮತ್ತು ನಿಮ್ಕಾಪ್ ರವರ ಪ್ರಕಾರ ವ್ಯಕ್ತಿಗಳಿಂದೊಡಗೂಡಿರುವ ಸಂಘಟಿತ ಸಮೂಹವೇ ಸಾಮಾಜಿಕ ರಚನೆ ಎನಿಸಿಕೊಳ್ಳುವುದು. ಸಮೂಹವು ಏನನ್ನು ಮಾಡುತ್ತದೆ ಎಂಬುದು ಕಾರ್ಯವೆನಿಸಿಕೊಳ್ಳುತ್ತದೆ."[೪೦]

"ರ‍್ಯಾಡ್ ಕ್ಲಿಪ್‌ಬ್ರೌನ್ ಅಭಿಪ್ರಾಯದಂತೆ ಜನರ ನಡುವೆ ವಾಸ್ತವಿಕವಾಗಿ ಅಸ್ತಿತ್ವದಲ್ಲಿರುವ ಸಾಮಾಜಿಕ ಸಂಬಂಧಗಳ ಜಾಲವನ್ನು ಸಾಮಾಜಿಕ ರಚನೆ ಎನ್ನಬಹುದು"[೪೧]. ಈ ವ್ಯಾಖ್ಯಾನಗಳಂತೆ ಮನುಷ್ಯನು ರೂಢಿಸಿಕೊಂಡಿರುವ ವ್ಯವಸ್ಥಿತ ಜೀವನಕ್ರಮದಲ್ಲಿನ ವ್ಯವಸ್ಥಿತ ಕ್ರಮ ಬದ್ಧತೆಗೆ ಸಾಮಾಜಿಕ ಸಂರಚನೆ ಎನ್ನಬಹುದು. ಇದು ಪ್ರಕೃತಿಯ ವರದಾನವಾಗಿ ರೂಪುಗೊಂಡಿರುವ ಕ್ರಮವಾಗಿದೆ. ಪ್ರಕೃತಿಯಲ್ಲಿನ ಹಗಲು-ರಾತ್ರಿ, ಭಾನು-ಭೂಮಿ, ಗಿಡ-ಬಳ್ಳಿ, ಮಳೆ-ಮೋಡ ಇತ್ಯಾದಿಗಳನ್ನು ಕಂಡಾಗ ಪ್ರಕೃತಿಯಲ್ಲಿಯೇ ಒಂದು ನಿರ್ದಿಷ್ಟ ವ್ಯವಸ್ಥೆಯಿರುವುದು ಗೋಚರಿಸುತ್ತದೆ. ಮನುಷ್ಯನು ಕೂಡ ಈ ಪ್ರಕೃತಿಯದೇ ಒಂದು ಭಾಗ. ಅಂದ ಮೇಲೆ ಅವನ ಬದುಕಿನಲ್ಲಿಯೂ ಅವನದೇ ಆದ ಒಂದು ವ್ಯವಸ್ಥೆ ಇರುತ್ತದೆ. ಆ ವ್ಯವಸ್ಥೆಗೆ ಒಂದು ಎಲ್ಲೆಯೂ ಇರುತ್ತದೆಯಲ್ಲವೇ?. ಹಾಗೆಯೇ ಕುಟುಂಬ, ಸಮಾಜ, ಧರ್ಮ, ಸರ್ಕಾರ, ಸಂಸ್ಕೃತಿ ಎಲ್ಲದರಲ್ಲಿಯೂ ತನ್ನದೇ ಆದ ವ್ಯವಸ್ಥೆ ಇದೆ. ಇದು ಪ್ರಕೃತಿ ಮನುಷ್ಯನಿಗೆ ಕಲಿಸಿಕೊಟ್ಟ ಕ್ರಮವೂ ಹೌದು. ಹೊಟ್ಟೆ ತುಂಬಿಸಿಕೊಳ್ಳಲು ಬೇಟೆಯನ್ನು ಕಲಿತ, ಬಿಡುವಿನ ವೇಳೆಯಲ್ಲಿ ಮನರಂಜನೆಗೆ ಪಕ್ಷಿಗಳ ಹಾರಾಟ, ಉಲಿತ ಕುಣಿತ ಕಲಿತ, ಇಲ್ಲಿಂದ ರೂಪುಗೊಂಡ ಸಾಮಾಜಿಕ ರಚನೆ ಸರಳವಾದ ಸಾಮಾಜಿಕ ವ್ಯವಸ್ಥೆಯನ್ನು ಹೊಂದುವಂತೆ ಮಾಡಿತ್ತು. ತನ್ನ ಪರಿಸರಕ್ಕೆ ಅನುಗುಣವಾಗಿ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಂಡು ಬಂದ ಪರಿಣಾಮ, ಸಾಂಸ್ಕೃತಿಕ ಸಮಾಜವಾಗಿ ರೂಪುಗೊಂಡು ಬಂದಿದೆ.

ಪ್ರಕೃತಿಯಿಂದಲೇ ಕಲಿತ ಸಾಮಾಜಿಕ ರಚನೆ ಸಮುದಾಯದಲ್ಲಿ ಭದ್ರವಾಗಿ ತಳವೂರಿ ಬಂದ, ಹಾಗೂ ಅನೂಚನವಾಗಿ ನಡೆದು ಬಂದ ಪರಿಣಾಮ ಜನರು ತಮಗರಿವಿಲ್ಲದೆಯೇ ತಮ್ಮ ಸಂಸ್ಕೃತಿಯ ಜೊತೆಯಲ್ಲಿಯೇ ಇತರೆಲ್ಲ ಅಂಶಗಳ ಜೊತೆಗೆ ಉಳಿದು ಬರುತ್ತಿದ್ದಾರೆ.

ಯಾವುದೇ ಗ್ರಂಥ ವೇದ, ಪುರಾಣಗಳ ಧರ್ಮಶಾಸ್ತ್ರಗಳ ಆಧಾರವಿಲ್ಲದೆ ರೂಢಿಸಿಕೊಂಡಿರುವ ಬದುಕಿನ ಒಂದು ಭಾಗವೆಂಬಂತೆ ಮೌಲ್ಯಯುತವಾಗಿ ಗುರುತಿಸಿಕೊಂಡು ಬರುತ್ತಿರುವ ಸಾಮಾಜಿಕ ರಚನೆಯಲ್ಲಿನ ಸಂಕ್ಷಿಪ್ತ ಪರಿಚಯ ಸಮುದಾಯವನ್ನು ಆಧರಿಸಿ ಕೊಡ್‌ಲಾಗಿದೆ.

ಆರಾಧ್ಯ ದೈವ : ಸಣ್ಣಮ್ಮ, ಹಂಬಾಳಮ್ಮ (ಕಾಡು ದೇವರು), ಬೆಳಮ್ಮ, ಮಾರಮ್ಮ

ಭಾಷೆ : ಜೇನುನುಡಿ, ಕನ್ನಡ, (ಜೇನುನುಡಿ ಭಾಷೆ ದಕ್ಷಿಣದ ಭಾಷೆಯಾದ ಕನ್ನಡಕ್ಕೆ ಸಮೀಪವಾಗಿದೆ)

ನೆಲೆ : ಕರ್ನಾಟಕದ ಮೈಸೂರು ವಿಭಾಗದಲ್ಲಿನ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಕೊಡಗು.

ಆಹಾರ ಪದ್ಧತಿ : ಮಾಂಸಹಾರ, ಬೇಟೆ ಮೂಲ ಪ್ರವೃತ್ತಿ, ಕುಮ್ರಿಬೇಸಾಯ, ಆರಣ್ಯವಾಸ

ಸಾಮಾಜಿಕ ಸ್ಥಾನಮಾನ : ಯಾವುದೇ ಸ್ಥಾನಮಾನಗಳು ಪಡೆದಿಲ್ಲ.

ಆಚರಣೆಗಳು : ಜೀವನಾವರ್ತದ ಆಚರಣೆಗಳು, ಜನನ ಸಂಬಂಧಿ, ಋತುಸಂಬಂಧಿ, ಮರಣ ಸಂಬಂಧಿ.

ಸಾಮಾಜಿಕ ವ್ಯವಸ್ಥೆ: ಸಾಮಾಜಿಕ ವ್ಯವಸ್ಥೆ ಎಂಬುದು ಸಾಮಾಜಿಕ ರಚನೆಯ ಎಲ್ಲ ವಿಭಾಗಗಳಲ್ಲೂ ಇರುವಂತದ್ದು. ಇದು ಸುವ್ಯವಸ್ಥೆಯ ಕಾರ್ಯಕ್ಕೆ ಸಂಬಂಧಿಸಿದೆ. ಮೂಲನಿವಾಸಿ ಬುಡಕಟ್ಟುಗಳ ಸಾಮಾಜಿಕ ವ್ಯವಸ್ಥೆಯೂ ಸರಳ ಸಮಾಜದ ಲಕ್ಷಣಗಳು ಹೊಂದಿರುವಂತದ್ದು. ಒಂದೆಡೆ. ಸ್ಥಿರ ಜೀವನದ ಪರಿಸರ ಸಂರಚನೆಯನ್ನು ರೂಢಿಸಿಕೊಂಡಿರುವುದು ಕಂಡುಬರುತ್ತದೆ. ಇಲ್ಲೂ ಜಟಿಲವಾದ ಸಾಮಾಜಿಕ ವ್ಯವಸ್ಥೆ ಕಂಡುಬರುವುದಿಲ್ಲ. ಬೇರೆಲ್ಲಾ ಸಾಮಾಜಿಕ ಪರಿಸರಗಳಲ್ಲಿ ಬದುಕುತ್ತಿರುವ ಈ ಸಂದರ್ಭದಲ್ಲಿ ಇತರರ ಪ್ರಭಾವಕ್ಕೆ ಒಳಗಾದ ಲಕ್ಷಣಗಳು ಕಂಡುಬರುತ್ತ ಆಧುನಿಕ ಸಮಾಜದಲ್ಲಿ ಇದು ಔಪಚಾರಿಕವಾಗಿರುತ್ತದೆ. ಸಾಮಾಜಿಕ ರಚನೆಯ ವಿಭಾಗವೊಂದು ಕಾರ್ಯೋನ್ಮುಖವಾಗಿದೆ ಎಂದಿಟ್ಟುಕೊಂಡರೆ, ಆ ಕಾರ್ಯವು ಒಂದು ವ್ಯವಸ್ಥಿತ ಯೋಜಿತ ಮಾದರಿಯಲ್ಲಿದೆ ಎಂಬುದು ವ್ಯವಸ್ಥೆ ಎನಿಸಿಕೊಳ್ಳುತ್ತದೆ. ಇಂತಹ ವ್ಯವಸ್ಥಿತ ಜೀವನ ವಿಧಾನದಲ್ಲಿ ಮುಖ್ಯವಾದವುಗಳೆಂದರೆ,

ನ್ಯಾಯಪದ್ಧತಿ:– ಜೇನುಕುರುಬರ ಆರ್ಥಿಕ–ಸಾಮಾಜಿಕ ಸಮಸ್ಯೆಗಳನ್ನು ಸಂಪ್ರದಾಯಿಕ ರೀತಿಯಲ್ಲಿ ಹಾಡಿಯ ಯಜಮಾನನು ಬಗೆಹರಿಸುತ್ತಿದ್ದ ಲಕ್ಷಣಗಳು ಮಾಯವಾಗಿವೆ. ಹಾಡಿಯ

ಯಜಮಾನನಿಗೆ ಪ್ರತಿಯೊಬ್ಬರೂ ಗೌರವಸೂಚಿಸುತ್ತಿದ್ದ ಲಕ್ಷಣಗಳು ಮಾಯವಾಗಿವೆ. ಹಾಡಿಯಲ್ಲಿ ನಡೆಯುತ್ತಿದ್ದ ಧಾರ್ಮಿಕ ನೀತಿ ನಿಯಮಗಳು, ವಿಧಿವಿಧಾನಗಳು ಗಣನೀಯ ಪ್ರಮಾಣದಲ್ಲಿ ಬದಲಾಗಿವೆ. ಯಜಮಾನನಿಗೆ ವ್ಯತಿರಿಕ್ತವಾಗಿ ನಡೆದುಕೊಂಡವರನ್ನು ದಂಡಿಸುವ ಹಕ್ಕು ಬಾಧ್ಯತೆಗಳು ಕೆಲವೇ ಜನರಲ್ಲಿ ಉಳಿದಿವೆ. "ವಕ್ತೃ ವೆಂಕಟೇಶರವರು ಹೇಳುವಂತೆ, ಯಾವ ಯಜಮಾನ ಸಾರ್ ನಮ್ಮ ಹೊಟ್ಟೆಗೆ ಇಲ್ಲ ಅಂದ್ರೆ ತಂದು ಕೊಡುತ್ತಾನಾ?. ನಾವು ದುಡಿದರೆ ಊಟ, ನಮ್ಮ ಕಾಲೋನಿಯಲ್ಲಿ ನಮ್ಮ ಕೇರಿ ನೋಡಿ. ಆ ಕಡೆ ಕೇರಿ ನೋಡಿ, ನಮಗೆ ಸರಿಯಾದ ಮನೆಯಿಲ್ಲ, ವಿಧ್ಯುತ್‌ದೀಪ, ರಸ್ತೆ ಇಲ್ಲ, ಆ ಕೇರಿಲಿ ಎಲ್ಲಾ ಇವೆ, ನೀವೇ ನೋಡಿ ಸಾರ್, ನಾವೇನೂ ಜೇನುಕುರುಬರಲ್ಲವಾ! ನಮಗೇಕೆ ಈ ರೀತಿ ಮಾಡೋದು. ನಾವು ಸಹಕಾರ ಸಂಘದವರ ಮಾತು ಕೇಳುತ್ತೇವೆ ಅಂತ ಅವರುಗಳು DEED ನೋರ ಮಾತು ಕೇಳಲ್ಲ ಎಂದು ಹಿಂಗೆ ಮಾಡುತ್ತಾ ಬರುತ್ತಾವರೆ. ನಮ್ಮ ಜನರಲ್ಲಿ ಒಗ್ಗಟ್ಟು ಇಲ್ಲ ಸಾರ್, ಸ್ವಾರ್ಥ ತುಂಬಿಕೊಂಡ್ಯೆತೆ ಎನ್ನುತ್ತಾರೆ."[೪೩] ಈ ಒಂದು ನಿದರ್ಶನದ ಸಾಕ್ಷಿ ಬೇರೆಲ್ಲ ಕಾಲೋನಿಗಳಲ್ಲಿನ ಇದೇ ಪರಿಸ್ಥಿತಿಯನ್ನು ಪ್ರತಿನಿಧಿಸುತ್ತದೆ ಎನ್ನಬಹುದು. ಜೇನುಕುರುಬರಲ್ಲಿಯೇ ನಾನಾ ಕಾರಣಗಳಿಗೆ ತಮ್ಮ ತಮ್ಮಲ್ಲಿಯೇ ವೈಮನಸ್ಸುಗಳನ್ನು ತುಂಬಿಕೊಂಡು ನಾವು ಬದುಕುವುದು ಮುಖ್ಯಸಾರ್ ಎನ್ನುವ ಮಟ್ಟ ತಲುಪಿದ್ದಾರೆ. ಹೀಗಾಗಿ ಹಾಡಿಯ ಯಜಮಾನನು ಕೊಂಚ ಕೊಂಚ ತನ್ನ ಸ್ಥಾನ ಬಿಟ್ಟು ಕೊಡುತ್ತಿರುವುದರ ಜೊತೆಗೆ ಪ್ಯಾಂಟ್, ಷರ್ಟ್ ಹಾಕಿದ ಹುಡುಗರಲ್ಲಿ ರಾಜಕೀಯ ಪ್ರಜ್ಞೆ ಮೂಡುತ್ತಿದೆ. ಈ ಪ್ರಜ್ಞೆಯೇನು ಸ್ವಂತಿಕೆಯದಲ್ಲ. ಹಿಂಬಾಲಕರ ಸಂತತಿ ಸೃಷ್ಟಿಸುತ್ತಾ ಪ್ರತಿಯೊಂದಕ್ಕೂ ಗೌಡರು, ಶ್ರೀಮಂತರಲ್ಲಿ ನ್ಯಾಯಕ್ಕಾಗಿ ಕಾಯುವಲ್ಲಿ ನಿರತವಾಗುವಂತೆ ಬದಲಾಗಿದ್ದಾರೆ.

ವಿವಾಹ ಪದ್ಧತಿ:- ಜೇನುಕುರುಬರಲ್ಲಿ ಒಳಬಾಂಧವ್ಯ ಅಸ್ತಿತ್ವದಲ್ಲಿದ್ದು, ೧೫ ವರ್ಷತುಂಬಿದ ಹುಡುಗ, ಹುಡುಗಿಯರಿಗೆ ಮದುವೆ ಮಾಡುವ ವ್ಯವಸ್ಥೆ ಇದೆ. "ಕೂಡಾವಳಿ" ಅತಿಮುಖ್ಯವಾದದ್ದು. ಗಂಡ ಅಥವಾ ಹೆಂಡತಿ ತೀರಿಕೊಂಡರೆ ಪರ್ಯಾಯವಾಗಿ ಗಂಡ ಹೆಂಡತಿಯಾಗಿ ಬಾಳುವ ಪದ್ಧತಿ ಇದೆ. ಇವರುಗಳ ವಿವಾಹವೂ ಸರಳತೆಯಿಂದಲೇ ಕೂಡಿದೆ. ಆಧುನಿಕತೆಯ ಪ್ರೀತಿ, ಪ್ರೇಮದ ನಂಟು ಸಮುದಾಯದಲ್ಲಿ ಪೂರ್ವದಿಂದ ಉಳಿದು ಬಂದಿದೆ. ಪ್ರೀತಿಸಿ ಮದುವೆಯಾಗುವುದು ಸಾಮಾನ್ಯ. ಅದನ್ನು ಯಾರು ದಿಕ್ಕರಿಸುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಿದ್ದವರು ಅದ್ಧೂರಿ ಮದುವೆ ಸಮಾರಂಭಗಳನ್ನು ನಡೆಸುತ್ತಿದ್ದಾರೆ. ವರದಕ್ಷಿಣೆ ಪದ್ಧತಿಯು ಅವರವರ ಅನುಕೂಲಕ್ಕೆ ತಕ್ಕಂತೆ ನಡೆಯುತ್ತಿರುವುದು ಕಂಡುಬರುತ್ತದೆ. ತಾಳಿ ಕಟ್ಟುವ, ಒಡವೆ, ವಸ್ತ್ರ ಕೊಡು ಕೊಳ್ಳುವಿಕೆಯಿಂದ ಹೊಸತನದ ಬದುಕು ಪ್ರಾರಂಭಿಸುತ್ತಿರುವುದು ಕಂಡುಬರುತ್ತದೆ. ವಿವಾಹದ ನಂತರದ ಕುಟುಂಬ ಪದ್ಧತಿಯೂ ವಿಭಕ್ತ ಕುಟುಂಬ ಪದ್ಧತಿಯಾಗಿದೆ. ಅಲ್ಲಲ್ಲಿ ಅವಿಭಕ್ತ ಕುಟುಂಬಗಳಿರುವುದು ಕಂಡುಬರುತ್ತದೆ. ಕುಟುಂಬದಲ್ಲಿ ಮನೆಯ ಹಿರಿಯನೇ ಮುಖ್ಯಸ್ಥ. ಹಿರಿಯನು ಕಿರಿಯರೊಂದಿಗೆ

ಸಮಾಲೋಚನೆ ಚರ್ಚೆ ಮಾಡುವುದು. ಕುಟುಂಬದ ಒಳಿತಿನಲ್ಲಿ ಮಹಿಳೆಯರ ಅಭಿಪ್ರಾಯಪಡೆಯುವುದು, ನಿರ್ಣಯಗಳ ರೂಪಿಸುವಿಕೆಯಲ್ಲಿ ಭಾಗವಹಿಸುವಿಕೆ ಎದ್ದು ಕಾಣುತ್ತದೆ.

ಕುಟುಂಬದಲ್ಲಿನ ಹಬ್ಬ, ಆಚರಣೆ, ಸೂತಕ, ಮದುವೆ ಮುಂತಾದ ಕಾರ್ಯಚರಣೆಗಳಲ್ಲಿ ಕುಟುಂಬದ ಮುಖ್ಯಸ್ಥನ ತೀರ್ಮಾನ ಕ್ಷಿಣಿಸುತ್ತ ಬರುತ್ತಿದೆ. ಕುಟುಂಬದಲ್ಲಿ ತಾಯಿಯೇ ಪ್ರಧಾನವಾಗಿ ಗುರುತಿಸಿಕೊಂಡಿದ್ದಾಳೆ. ತಾಯಿಯ ಸ್ಥಾನ ಪ್ರಮುವಾಗಿ ಪ್ರಧಾನವಾದುದಾಗಿ ಕಾಣಬರುತ್ತದೆ.

ಕೊರಗ ಸಮುದಾಯ

ಭೌಗೋಳಿಕ ಪ್ರದೇಶ:- ಒಂದು ಸಮುದಾಯದ ಅರ್ಥಿಕಾಭಿವೃದ್ಧಿಯಲ್ಲಿ ಬಹು ಜನರು ತಮ್ಮ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಲ್ಲಿ ಭೌಗೋಳಿಕ ಪ್ರದೇಶ ಅವಶ್ಯಕ. ಆ ಪ್ರದೇಶದಲ್ಲಿನ ನೈಸರ್ಗಿಕ ಸಂಪನ್ಮೂಲಗಳು ಜೀವನಮಟ್ಟವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಬೇಕಾದ ಪರಿಕರಗಳಾಗಿವೆ. ಇಂತಹ ಅಪೂರ್ವ, ಅಮೂಲ್ಯ ಸಂಪತ್ತಿನ ಗಣಿ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು ಪಡೆದಿವೆ. ಹೀಗಾಗಿ ಈ ಜಿಲ್ಲೆಗಳಲ್ಲಿ ಸಾಂಸ್ಕೃತಿಕ-ಧಾರ್ಮಿಕ, ಸಾಮಾಜಿಕ, ಭೌಗೋಳಿಕತೆಯ ವಿಶೇಷತೆಗಳು ಹಲವಾರು. ಸಾಂಸ್ಕೃತಿಕ-ಸಾಮಾಜಿಕ ವಿಶೇಷತೆಗಳಲ್ಲಿ ಕೊರಗ ಸಮುದಾಯವೂ ಇಲ್ಲಿ ಪುರಾತನ ಕಾಲದಿಂದ ನೆಲೆನಿಂತಿರುವ ಸಂಗತಿ ಇತಿಹಾಸದಿಂದ ತಿಳಿದುಬರುತ್ತದೆ.

೨೧ನೇ ಶತಮಾನದಲ್ಲಿಯೂ ಕೆಲವೊಂದು ಸಾಂಸ್ಕೃತಿಕ-ಸಾಮಾಜಿಕ ವೈಶಿಷ್ಟತೆಯನ್ನು ಉಳಿಸಿಕೊಂಡು ಬರುತ್ತಿರುವ ಸಂದರ್ಭದಲ್ಲಿ, ಆಧುನಿಕ ಸಮಾಜ ಅವರುಗಳನ್ನು ಕೊಳಕರು, ಅಸ್ಪೃಶ್ಯರು ಎಂದೇ ಗುರುತಿಸುತ್ತಿರುವ ಲಕ್ಷಣಗಳು ಕಾಣಬಹುದು. ಅತಿ ಕಡಿಮೆ ಜನಸಂಖ್ಯೆ ಹೊಂದಿದ್ದು, ಎರಡು ಜಿಲ್ಲೆಗಳಲ್ಲಿನ, ಆಯಾ ಪರಿಸರದಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸಿಕೊಂಡಿದ್ದಾರೆ. ದ.ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಕರಾವಳಿ ತೀರ ಪ್ರದೇಶಕ್ಕೆ ಹೊಂದಿಕೊಂಡಂತ್ತಿದೆ. ಉಡುಪಿ ಜಿಲ್ಲೆಯ ಉತ್ತರಕ್ಕೆ ಉತ್ತರ ಕನ್ನಡ ಜಿಲ್ಲೆ ಹಾಗೂ ದಕ್ಷಿಣಭಾಗದಲ್ಲಿ ಕೊಡಗು ಮತ್ತು ಕೇರಳಕ್ಕೆ ಹೊಂದಿಕೊಂಡಂತೆ ವ್ಯಾಪಿಸಿದೆ.

ಪುರಾಣಕಾಲದಲ್ಲಿ ದಾಖಲಾದ ನೈಸರ್ಗಿಕ ಸಂಪತ್ತಿನ ನಾಡು ಪ್ರಾಚೀನ ಸುಂದರ ಚಿತ್ರಕಲೆ, ಕಲಾ ನೈಪುಣ್ಯತೆಗೆ ಪ್ರಸಿದ್ಧಿ ಪಡೆದ ತಾಣವಿದು. ಪಶ್ಚಿಮ ಘಟ್ಟಗಳ ಸಾಲುಪ್ರದೇಶ, ಅರಬ್ಬೀಸಮುದ್ರದಿಂದಾವರಿಸಿಕೊಂಡಿರುವ ವಿಶಾಲ ಸಮುದ್ರ ಕರಾವಳಿಯೂ ಸುಮಾರು ೬೦ ಮೈಲುಗಳ ಉದ್ದವಿದೆ. ಎಲ್ಲಿ ನೋಡಿದರೂ ತೆಂಗು, ಕಂಗು, ಬಾಳೆಗಿಡಗಳ ಜೊತೆಗಿನ ಅರಣ್ಯಸಂಪತ್ತಿನ ಪ್ರಾಕೃತಿಕ ಸೌಂದರ್ಯದ ನೆಲೆವೀಡು. ಕಾಡು, ಎತ್ತರದ ಗುಡ್ಡಗಳಿಂದಲೂ ಕೂಡಿದೆ. ಅಲ್ಲಲ್ಲಿ ಸ್ವಲ್ಪ ಭೂಮಿ ಬಯಲಿನಿಂದಾವರಿಸಿಕೊಂಡ ಪ್ರದೇಶ ಕಾಡುಪಾಲಾಗಿದೆ.

ಇಂತಹ ಬೆಟ್ಟ ಗುಡ್ಡ, ಕಾಡು ಪ್ರದೇಶಗಳಲ್ಲಿ ಆದಿಮೂಲನಿವಾಸಿ ಬುಡಕಟ್ಟುಗಳು ವಾಸಮಾಡಿಕೊಂಡಿದ್ದರು ಎಂಬುದು ಇತಿಹಾಸಕಾರರ ಅಭಿಪ್ರಾಯ ಹಾಗೂ ಸಂಶೋಧಕರ ಅಭಿಮತವಾಗಿದೆ.

ಪುನರ್‌ವಸತಿಯ ಕಾರ್ಯ ಕೊರಗರನ್ನು ನಗರೀಕರಣದತ್ತ ಬಂದು ನೆಲೆಸುವಂತೆ ಮಾಡಿದೆ. ಆದರೂ ಕೊರಗರು ಬಹುತೇಕ ಎರಡು ಜಿಲ್ಲೆಗಳಲ್ಲಿ ವಿಶಾಲವಾದ ಪ್ರದೇಶಗಳಲ್ಲಿ ಅಲ್ಲಲ್ಲಿ ಕಡಿಮೆ ಕುಟುಂಬಗಳೊಂದಿಗೆ ನೆಲೆಸಿದ್ದಾರೆ ಅಂದರೆ ೧ ರಿಂದ ೫ ಅಥವಾ ೧೦ ಕುಟುಂಬಗಳು ನೆಲೆಸಿರುವುದು ಕಂಡುಬರುತ್ತದೆ. ನಗರ ಪ್ರದೇಶದಲ್ಲಿ ಸುಮಾರು ೩೦ ರಿಂದ ೪೦ ಕುಟುಂಬಗಳು ನಿಲೆಸಿರುವುದು ಕಾಣಬರುತ್ತದೆ. ಎರಡು ಜಿಲ್ಲೆಗಳಲ್ಲಿನ ವಿಶಾಲವ್ಯಾಪ್ತಿಯು ೮ ತಾಲ್ಲೂಕುಗಳಾಗಿ ವಿಭಜಿಸಲಾಗಿದೆ ೮ ತಾಲ್ಲೂಕು ವ್ಯಾಪ್ತಿಯಲ್ಲಿ ಅತಿ ಕಡಿಮೆ ಜನರಾಗಿ ಕಂಡುಬರುತ್ತಾರೆ.

ರಾಜ್ಯದ ೨೦೦೧ನೇ ಸಾಲಿನ ಜನಗಣತಿಯ ಪ್ರಕಾರ ಶೇಕಡವಾರು ಅನುಪಾತದಲ್ಲಿ ೮ ತಾಲ್ಲೂಕುಗಳಾದ ಭಟ್ಕಾಳ, ಬೆಳ್ತಂಗಡಿ, ಮಂಗಳೂರು, ಸೂಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಶೇ. ೪೪.೭೮ ರಷ್ಟು ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲ್ಲೂಕಿನಲ್ಲಿ ಶೇ. ೮೦.೨೮ ರಷ್ಟು ಕೊರಗರು ನೆಲೆನಿಂತಿರುವುದು ಕಂಡುಬರುತ್ತದೆ.

ಜನಸಂಖ್ಯಾ ಹಂಚಿಕೆ: ಭೌಗೋಳಿಕ ವ್ಯಾಪ್ತಿಯಲ್ಲಿ ಅಥವಾ ಪ್ರದೇಶದಲ್ಲಿ ಜನಸಂಖ್ಯೆ ಅತಿಮುಖ್ಯವಾದದ್ದು. ಮಾನವ ಸಂಪತ್ತಿನ ಪರಿಗಣನೆಯಲ್ಲಿ ಅತಿಮುಖ್ಯ ಜನಸಂಖ್ಯೆ. ಗುಲಾಮಗಿರಿಯ ಪ್ರತೀಕದಂತೆ ಸಮಾಜದ ಜಾತಿವ್ಯವಸ್ಥೆಯಲ್ಲಿನ ಅಸ್ಪೃಶ್ಯರಂತೆ ಕಂಡುಬಂದಿದ್ದ ಕೊರಗರು ಈ ನಾಡಿನ ಚರಿತ್ರೆಯಲ್ಲಿ ತಮ್ಮದೇ ಸ್ಥಾನಗಳಿಸಿದ್ದವರೂ. ಸಾಮಾಜಿಕ ಅನ್ಯಾಯಕ್ಕೆ ಒಳಗಾದ ಇವರುಗಳ ಬಗ್ಗೆ ಸ್ವತಂತ್ರಕ್ಕಿಂತ ಪೂರ್ವವೇ ಸಮಾಜ ಸುಧಾರಕರ ಗಮನ ಸೆಳೆದಿದ್ದು ಕಂಡುಬರುತ್ತದೆ. ಅನೇಕ ಸಂಶೋಧಕರು ಈ ಜಿಲ್ಲೆಗಳಲ್ಲಿ ಜಾತಿ ವ್ಯವಸ್ಥೆಯು ಪ್ರಬಲವಾಗಿರುವುದರ ಬಗೆ ಗಮನ ಸೆಳೆದಿದ್ದಾರೆ. ನಿಖರ ಜನಸಂಖ್ಯೆಯ ಬಗ್ಗೆ ಗಮನ ಸೆಳೆದಾಗ ಆಂಗ್ಲ ಸಂಶೋಧನಾ ಅಧಿಕಾರಿ ಶ್ರೀಯುತ ಥರ್‌ಸ್ಟನ್ ರವರು "Cast and Tribes" ಪುಸ್ತಕದಲ್ಲಿ ತಮ್ಮ ಅಭಿಪ್ರಾಯ ನಿರೂಪಿಸಿದ್ದಾರೆ. "ಕೊರಗರು ವಿರಳ ಸಂಖ್ಯೆಯಲ್ಲಿ ಕಾಡು, ಗುಡ್ಡ, ಬೆಟ್ಟ ಪ್ರದೇಶಗಳಲ್ಲಿ ತೀರಾ ಶೋಚನೀಯ, ಸಾಮಾಜಿಕ ನಿರ್ಬಂಧದಿಂದ ಜೀವಿಸುತ್ತಿದ್ದಾರೆ" ಎಂದಿದ್ದಾರೆ.[೪೩] ಹಲವಾರು ಸಂಶೋಧಕರು, ಸಮಾಜವಿಜ್ಞಾನಿಗಳು, ವಿದ್ವಾಂಸರು ನಿಖರಮಾಹಿತಿ ನೀಡದೆ ಅಂದಾಜು ಲೆಕ್ಕಾಚಾರದಲ್ಲಿ ಕೊರಗರನ್ನು ಗ್ರಹಿಸಿರುವುದು ಕಂಡುಬರುತ್ತದೆ. ೧೯೫೦ರ ಭಾರತ ಸಂವಿಧಾನವೂ ಹಕ್ಕು ಮತ್ತು ಕರ್ತವ್ಯಗಳ ಜೊತೆಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಮೂಡಿಸಿತು. ಅಲ್ಲಿಂದ ಪ್ರತಿಸಮುದಾಯದ ಗಣತಿಯ

ಪ್ರಾರಂಭ ವೊದಲುಗೊಂಡು ಬಂದಿದೆ. ಈ ಕ್ರಮವಾಗಿ "ಕೊರಗರನ್ನು ಥರ್‌ಸ್ಟನ್ ಉಲ್ಲೇಖದಂತೆ ೧೭ ಸಾವಿರ ಜನಸಂಖ್ಯೆ ಯನ್ನು ಹೊಂದಿದ್ದಾರೆ ಎನ್ನುತ್ತಾರೆ"[೪೪].

ಕೇಂದ್ರ ಸರ್ಕಾರವು ಜನಸಂಖ್ಯೆಯನ್ನು ಪ್ರತಿ ೧೦ ವರ್ಷಗಳಿಗೊಮ್ಮೆ ಜನಗಣತಿ ಕಾರ್ಯದಲ್ಲಿ ಗುರುತಿಸಲಾದಂತೆ ಕೊರಗರ ಜನಸಂಖ್ಯೆ ತಿಳಿಯಬಹುದು.

೧೯೯೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ = ೧೬,೩೨೨

೨೦೦೧ರ ಜನಗಣತಿಯ ಪ್ರಕಾರ ಒಟ್ಟು ಜನಸಂಖ್ಯೆ = ೧೨,೫೦೬[೪೫]

(ಆಧಾರ: Cencess of India page:95 Gov. of India)

ಇತ್ತೀಚಿನ ದಿನಗಳಲ್ಲಿ ಸರ್ಕಾರವೂ ಉದ್ದೇಶಿತ ಯೋಜನೆ ಪುನರ್‌ವಸತಿ ರೂಪಿಸುವಿಕೆಗಾಗಿ ಸಮಗ್ರ ಜನಸಂಖ್ಯೆಯನ್ನು ಕ್ರೋಢಿಕರಿಸಲಾಗಿದೆ. ೨೦೦೧ರ ಜನಗಣತಿಯಂತೆ ೧೯೯೧ರಲ್ಲಿ ಇದ್ದಂತಹ ಜನಸಂಖ್ಯೆಗಿಂತ ಕಡಿಮೆ ಕಂಡುಬರುತ್ತಾರೆ. ಇದಕ್ಕೆ ಹಲವಾರು ಕಾರಣಗಳು ಹೆಸರಿಸಬಹುದು. ಅಂಕಿ–ಅಂಶಗಳ ಕ್ರೋಢಿಕರಣ ಮತ್ತು ಸಮುದಾಯಗಳ ವಲಸೆ ಮತ್ತು ಮತಾಂತರವೂ ಕಾರಣವೆನ್ನಬಹುದು.

ಒಟ್ಟಾರೆ ಕರ್ನಾಟಕ ರಾಜ್ಯದಲ್ಲಿ ೨೦೦೧ನೇ ಸಾಲಿನಲ್ಲಿ ಗುರುತಿಸಲಾದಂತೆ ಕೊರಗರ ಸಂಖ್ಯೆ ೧೨,೫೦೬.ಆಗಿದೆ ೮ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ನೆಲೆಸಿರುವುದು ಕಂಡುಬರುತ್ತದೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ನೆಲೆಸಿರುವ ಕೆಲವೇ ಮಂದಿ ಕೊರಗರು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪರಿಶಿಷ್ಟಜಾತಿ ಮತ್ತು ಪಂಗಡದ ಇಲಾಖೆಗಳು ತಮ್ಮ ತಮ್ಮ ಕಾರ್ಯವ್ಯಾಪ್ತಿಯನ್ನು ವರ್ಗೀಕರಿಸಿಕೊಂಡಿರುವ ಪ್ರಯುಕ್ತ ಜನಗಣತಿ ಮೇಲೆ ಪ್ರಭಾವ ಬೀರಿದೆ ಎನ್ನಬಹುದು. ಒಟ್ಟಾರೆ ರಾಜ್ಯದಲ್ಲಿನ ಪರಿಶಿಷ್ಟ ಪಂಗಡದ ಕೊರಗರ ಕುಟುಂಬಗಳ ಸಂಖ್ಯೆ ೩೩೦೮ ಕಂಡುಬರುತ್ತದೆ. ೩೩೦೮ ಕುಟುಂಬಗಳಲ್ಲಿನ ಒಟ್ಟಾರೆ ಜನಸಂಖ್ಯೆ ೧೨೫೦೬ ಇವರಲ್ಲಿ ಪುರುಷರು ೬೩೧೧ ಹಾಗೂ ಮಹಿಳೆಯರು ೬೧೯೫ ಆಗಿದ್ದು, ಪುರುಷರ ಸಂಖ್ಯೆ ಮಹಿಳೆಯರಿಗಿಂತ ೧೧೬ ಹೆಚ್ಚಿನ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. "ರಾಷ್ಟ್ರೀಯ ಸರಾಸರಿ ೧೦೦೦ ಮಹಿಳೆಯರಿಗೆ ಪುರುಷರ ಸಂಖ್ಯೆ ೨೦೦೧ರ ಅನುಪಾತದಲ್ಲಿಸರಾಸರಿ ೯೭೭ ಎಂದು ಜನಗಣತಿವರದಿಯೂ ಗುರುತಿಸಿದೆ.[೪೬] ಹೀಗಾಗಿ ಈ ಜಿಲ್ಲೆಗಳಲ್ಲಿ ಪುರಷರಷ್ಟೇ ಮಹಿಳೆಯಋ ಸಮಾನವಾಗಿರುವ ಹಂತದಲ್ಲಿ ಪ್ರಭಾವ ಭೀರುವವ್‌ರಾಗಿದ್ದಾರೆ.

ಶೇಕಡವಾರು ಪ್ರಮಾಣದಲ್ಲಿ ಉಡುಪಿ ಜಿಲ್ಲೆಯ ತಾಲ್ಲೂಕುಗಳಾದ ಉಡುಪಿ, ಕಾರ್ಕಾಳ, ಕುಂದಾಪುರ ವ್ಯಾಪ್ತಿಯಲ್ಲಿ ಶೇ. ೩೩.೨೪%, ೧೧.೬೪% ಮತ್ತು ೧೯.೩೦%ಜನರಿದ್ದು, ಒಟ್ಟಾರೆ ೬೪.೧೮% ಜನರೊಂದಿಗೆ ಪ್ರಥಮಸ್ಥಾನದಲ್ಲಿದ್ದರೆ, ಅತಿ ಕಡಿಮೆ

ಸಂಖ್ಯೆಯು ಸುಳ್ಯ ತಾಲ್ಲೂಕು ವ್ಯಾಪ್ತಿಯಲ್ಲಿಶೇ. ೧.೩೦% ಮಾತ್ರ ಜನರಿರುವುದು ಕಾಣಬಹುದು. ಬಹುತೇಕ ಉಡುಪಿ ಜಿಲ್ಲೆಯಲ್ಲಿ ಶೇಕಡವಾರು ಅನುಪಾತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಕೊರಗರು ಉಡುಪಿ ಕೇಂದ್ರಿತವಾಗಿರುವ ಸಮುದಾಯವೆನ್ನಬಹುದು.

ಕೋಷ್ಠಕ ೨.೯: ಕರ್ನಾಟಕದಲ್ಲಿನ ಕೊರಗರ ಸಮಗ್ರ ಜನಸಂಖ್ಯಾವಿವರ:

ಕ್ರ.ಸಂ	ತಾಲ್ಲೂಕುಗಳು	ಒಟ್ಟು ಕುಟುಂಬಗಳ ಸಂಖ್ಯೆ	ಪುರುಷರ ಸಂಖ್ಯೆ	ಮಹಿಳೆಯರ ಸಂಖ್ಯೆ	ಒಟ್ಟು ಸಂಖ್ಯೆ	ಶೇಕಡವಾರು %
೧	ಭಂಟ್ವಾಳ	೧೮೪	೩೨೦	೨೯೬	೬೧೬	೪.೯೩ %
೨	ಬೆಳ್ತಂಗಡಿ	೧೦೬	೧೬೪	೧೪೭	೩೧೧	೨.೪೮ %
೩	ಮಂಗಳೂರು	೭೭೩	೧೪೮೨	೧೫೩೪	೩೦೧೬	೨೯.೧೧ %
೪	ಸುಳ್ಯ	೫೧	೮೩	೮೦	೧೬೩	೧.೩೦ %
೫	ಪುತ್ತೂರು	೧೧೨	೧೮೪	೧೮೮	೩೭೨	೩.೦೦ %
೬	ಉಡುಪಿ	೧೦೩೬	೨೧೩೩	೨೦೨೫	೪೧೫೮	೩೩.೨೯ %
೭	ಕಾರ್ಕಳ	೩೯೦	೭೧೯	೭೩೭	೧೪೫೬	೧೧.೬೪ %
೮	ಕುಂದಾಪುರ	೬೫೬	೧೨೨೬	೧೧೮೮	೨೪೧೪	೧೯.೩೦ %
	ಒಟ್ಟು	**೩೩೦೮**	**೬೩೧೧**	**೬೧೯೫**	**೧೨೫೦೬**	**೧೦೦.೦೦ %**

(ಆಧಾರ: ಪ.ವ. ನಿರ್ದೇಶನಾಲಯ, ಬೆಂಗಳೂರು)

ಕೋಷ್ಟಕದಲ್ಲಿರುವಂತೆ ಕೊರಗರು ಹೆಚ್ಚು ನಗರಮುಖಿಗಳಾಗಿದ್ದಾರೆ. ಹೆಚ್ಚಿನ ಜನರು ಮತ್ತು ಕುಟುಂಬಗಳು ನೆಲೆನಿಂತಿರುವ ಪ್ರದೇಶಕ್ಕೆ ಅನುಗುಣವಾಗಿ ಕೋಷ್ಠಕ ೨.೯ ರಿಂದ ತಿಳಿದುಬರುತ್ತದೆ.

ನೈಸರ್ಗಿಕ ಸಂಪತ್ತು: ಅಪಾರವಾದ ಅರಣ್ಯಸಂಪತ್ತು, ಸಸ್ಯರಾಶಿ ಮತ್ತು ನದಿ ನೀರಿನಂತಹ ನೈಸರ್ಗಿಕ ಸಂಪನ್ಮೂಲಗಳು ಈ ಜಿಲ್ಲೆಗಳಲ್ಲಿ ಬಹುಮಟ್ಟಿಗೆ ಇವೆ. ನೈಸರ್ಗಿಕ ಸಂಪತ್ತು ಮನುಕುಲಕ್ಕೆ ಪ್ರಕೃತಿ ನೀಡಿದ ವರದಾನವಾಗಿದೆ. ನೈಸರ್ಗಿಕ ಸಂಪತ್ತಿನಲ್ಲಿ ಬಹುಮುಖ್ಯವಾಗಿ ಪರಿಗಣಿತವಾದದ್ದುಭೂ ಬಳಕೆ ಮತ್ತು ಅರಣ್ಯಗಳು. ಇವುಗಳೆರಡು ಅನುಕ್ರಮವಾಗಿ ಕೊರಗರ ಜೀವನಾವಸ್ಥೆಯಲ್ಲಿ ಅನೇಕ ರೀತಿಯ ಸೌಲಭ್ಯಗಳನ್ನು ದೊರಕಿಸಿ ಕೊಟ್ಟಿರುವುದು ನಿರಾಕರಿಸುವಂತಿಲ್ಲ. ಹೀಗಾಗಿ ಇವುಗಳಿಗೆ ತನ್ನದೇ ಆದ ಮಹತ್ವವಿದೆ. ಇವುಗಳ ಸಂಕ್ಷಿಪ್ತಮಾಹಿತಿ ಸಮುದಾಯಗಳಿಗೆ ಅನುಗುಣವಾಗಿ ನೀಡಲಾಗಿದೆ.

ಭೂಮಿ:– ಆರ್ಥಿಕಾಭಿವೃದ್ಧಿಗೆ ಪೂರಕವಾದುದ್ದು ಭೂಮಿ. ಭೂಮಿಯೊಂದಿಗಿನ ನಂಟು ಅರಣ್ಯವಾಸಿಗಳಾಗಿದ್ದ ಸಮಯದ ಕುಮ್ರಿಬೇಸಾಯ ಕ್ರಮದಿಂದ ತಿಳಿದು ಬರುತ್ತದೆ. ಇಲ್ಲಿನ

ಭೂಮಿಯು ಜಂಭು ಇಟ್ಟಿಗೆಯ ಮಾದರಿಯಲ್ಲಿದೆ. ಬಹುತೇಕ ಭೂಮಿ ಬೆಟ್ಟ ಗುಡ್ಡಗಳಿಂದ ಕೂಡಿದ ಇಳಿಜಾರು ಮೇಡುಗಳಿಂದ ಕೂಡಿರುವಂತಹ ಭೂಮಿಯಾಗಿದೆ.

ಕೋಷ್ಟಕ ೨.೧೦: ಜಿಲ್ಲಾವಾರು ಭೂ ಬಳಕೆಯ ವಿವರಗಳು

ಕ್ರ.ಸಂ.	ಜಿಲ್ಲೆಗಳು	ಭೌಗೋಳಿಕ ವಿಸ್ತೀರ್ಣ	ಭೂ ಬಳಕೆಯ ವಿವರಗಳು						
			ವ್ಯವಸಾಯ	ಬಂಜರು ಭೂಮಿ	ಸಾಗುವಳಿ ಯೋಗ್ಯವಾದ ಬಂಜರು	ಖಾಯಂ ಗೋಮಾಳ	ವೃಕ್ಷ ತೋಪು	ಬೀಳು ಭೂಮಿ	ಬಿತ್ತನೆಯಾದ ಪ್ರದೇಶ
೧	ದ.ಕನ್ನಡ	೪೭೭೧೪೯	೫೫೫೩೩	೫೯೧೧೯	೩೬೦೩೭	೧೯೪೪೧	೩೬೩೮೩	೧೩೪೮೧	೧೬೦೨೦೯
೨	ಉಡುಪಿ	೩೫೬೪೪೬	೩೮೨೯೫	೧೧೯೧೯	೩೨೩೮೯	೧೧೨೫೬	೪೮೪೧೧	೧೪೭೯೬	೧೩೨೫೬೯
	ಒಟ್ಟು	೮೩೩೫೯೫	೯೩೮೨೮	೭೧೦೩೮	೬೮೪೨೬	೩೦೦೯೭	೮೪೭೯೪	೨೮೨೭೭	೨೯೨೭೭೮

(ಆಧಾರ: ಕರ್ನಾಟಕ ಅಂಕಿ–ಅಂಶಗಳ ನೋಟ ೨೦೦೦–೦೧, ಕರ್ನಾಟಕ ಸರ್ಕಾರ)

ಕೊರಗರು ನೆಲೆನಿಂತಿರುವ ಈ ಎರಡು ಜಿಲ್ಲೆಗಳಲ್ಲಿ ಭೂ ಬಳಕೆಯ ವಿವರ ಕೋಷ್ಠಕ ೨.೯ ದಿಂದ ತಿಳಿಯಬಹುದು. ಸುಮಾರು ೩೩೦೮ ಕುಟುಂಬಗಳಿಗೆ ಕೇಂದ್ರ ಸರ್ಕಾರದ ಭೂಹಂಚಿಕೆಯ ಕ್ರಮದಂತೆ ಲಭ್ಯವಿರುವ ಭೂಮಿಯನ್ನು ಕೊರಗರಿಗೆ ಹಂಚಿಕೆ ಮಾಡಬಹುದಾಗಿದೆ. ಬಿತ್ತನೆಯಾದ ಭೂ ಪ್ರದೇಶವನ್ನು ಹೊರತುಪಡಿಸಿದಲ್ಲಿ ಉಳಿಯುವ ಸಾಗುವಳಿಗೆ ಯೋಗ್ಯವಾದ ಬಂಜರುಭೂಮಿ ಸುಮಾರು ೬೮೪೨೬ ಹೆಕ್ಟೇರ್‌ಗಳಷ್ಟು ಲಭ್ಯವಿದ್ದು, ಖಾಯಂಗೋಮಾಳ ಘತ್ತು ವೃಕ್ಷತೋಪುಗಳು ಅನುಕ್ರಮವಾಗಿ ೮೪೭೯೪ ಮತ್ತು ೩೦೬೯೭ ಹೆಕ್ಟೇರ್‌ನಷ್ಟು ಭೂಮಿ ಲಭ್ಯವಿದೆ. ಈ ಭೂಮಿಯು ಸರ್ಕಾರದ ಸುಪರ್ಧಿನಲ್ಲಿದ್ದರೂ, ಬೇರೆ ಬೇರೆ ರಹದಾರಿಗಳಿಂದ ರಾಜಕೀಯ ನಾಯಕರು, ಶ್ರೀಮಂತ ಭೂಮಾಲೀಕರು ತಮ್ಮ ಖಾಸಗಿ ಸ್ವತ್ತಾಗಿ ಮಾರ್ಪಡಿಸಿ ಕೊಂಡಿರುತ್ತಾರೆ. ನಿಜವಾದ ಅಭಿವೃದ್ಧಿಯಾಗಬೇಕಾದರೆ ಹೇರಳವಾದ ನೈಸರ್ಗಿಕ ಸಂಪನ್ಮೂಲವನ್ನು ಸರ್ಕಾರವೇ ನಿಗದಿಪಡಿಸಿದಂತೆ ಕೊರಗರಿಗೆ ಹಂಚಿಕೆ ಮಾಡಬಹುದು. ಇದಕ್ಕೆಲ್ಲಾ ರಾಜಕೀಯ ಇಚ್ಛಾಶಕ್ತಿ ಬೇಕಾಗುತ್ತದೆ. ಹೀಗಾಗಿ ಸಂಪತ್ತಿನ ಅಸಮಾನತೆಯ ಹಂಚಿಕೆಯನ್ನು ಅನುಸರಿಸಿಕೊಂಡುಬಂದಂತಾಗುತ್ತದೆ. ಇದರಿಂದ ಯಾವ ಅಭಿವೃದ್ಧಿ ಸಾಧ್ಯ ಎನ್ನುವುದು ಪ್ರಶ್ನೆಯಾಗಿ ಉಳಿದು ಬಿಡುವ ಸಾಧ್ಯತೆಗಳಿವೆ. ಡಾ॥ ಮೊಹಮ್ಮದ್ ಫೀರ್ ರವ್‌ರ ವರದಿ ಅನ್ವಯ ಕುಟುಂಬಗಳಿಗೆ ಭೂಹಂಚಿಕೆ ಮಾಡಬಹುದಾಗಿದೆ.

ಅರಣ್ಯ:- ಬಹುತೇಕ ಈ ಜಿಲ್ಲೆಗಳು ಮಳೆಯಾಧಾರಿತವಾಗಿವೆ. ಅತಿಹೆಚ್ಚಿನ ಮಳೆ ಪಡೆಯುವುದರಿಂದ ಹಸಿರು ಕಂಗೊಳಿಸುತ್ತಿದೆ. ಪುರಾತನ ಕಾಲದಿಂದ ಜೀವನದ ಸೆಲೆಯಾಗಿದ್ದ ಬಹುತೇಕ ಅರಣ್ಯಗಳು ಪ್ರಸ್ತುತ ಕೊರಗರ ಜೀವನ ಕ್ರಮದಲ್ಲಿ ಮಾಯವಾಗಿವೆ. ಅರಣ್ಯದ ಗುಡ್ಡಬೆಟ್ಟದ ತಪ್ಪಲಿನಲ್ಲಿ ವಾಸಿಸುವ ಕೊರಗರ ಕೆಲವೇ ಕುಟುಂಬಗಳು ಮಾತ್ರ ಅರಣ್ಯದಿಂದ ಕಟ್ಟಿಗೆ ಸಂಗ್ರಹಣೆ ಮಾಡುವವರಾಗಿದ್ದಾರೆ. ಕಟ್ಟಿಗೆಯ ಮಾರಾಟವೂ ಸಹ ಬಡಕುಟುಂಬದ ಆರ್ಥಿಕ ಜೀವನಕ್ಕೆ ಆಧಾರವಾಗಿದೆ. ವಿಶಾಲವ್ಯಾಪ್ತಿಯ ಸುಮಾರು ೨೨೭೬೯ ಚ.ಕಿ.ಮೀ. ವ್ಯಾಪ್ತಿಯನ್ನು ಹೊಂದಿರುವ ಅರಣ್ಯದಲ್ಲೇ ಕೊರಗರು ಉಳಿದಿರುವುದು ಬಹುತೇಕ ಕಡಿಮೆ. ನಗರ ಹಾಗೂ ಗ್ರಾಮದ ಸುತ್ತಲೂ ವ್ಯಾಪಿಸಿರುವ ಘಟ್ಟ ಪ್ರದೇಶಗಳಲ್ಲಿನ ಅರಣ್ಯದಲ್ಲಿ ಗೇರುಮರಗಳ ರಾಶಿಯೇ ಎದ್ದು ಕಾಣುತ್ತಿದೆ. ಇಂತಹ ಘಟ್ಟಪ್ರದೇಶಗಳಲ್ಲಿ ಅಲ್ಲಲ್ಲಿ ಒಂದೋ ಅಥವಾ ಎರಡು ಕೊರಗ ಕುಟುಂಬಗಳು ವಾಸವಾಗಿವೆ. ಆದರೆ ಅವರುಗಳ ವಾಸ ಸ್ಥಳದ ಸುತ್ತಮುತ್ತಲಿನ ಗೇರು ಬೀಜದ ಮರಗಳಿಂದ ಯಾವುದೇ ಉತ್ಪನ್ನ ಸಂಗ್ರಹಿಸುವಂತಿಲ್ಲ. ಶ್ರೀಮಂತ ಭೂಮಾಲೀಕರು ಟೆಂಡರ್ ಪಡೆದು ಸಂಗ್ರಹಣೆ ಮಾಡುತ್ತಿರುವುದು ಕಾಣಬಹುದು. ಇದರಿಂದ ಅರಣ್ಯ ಉತ್ಪನ್ನ ಸಂಗ್ರಹಣೆಗೆ ನಿರ್ಬಂಧ ವಿಧಿಸಲಾಗಿದೆ. ಉಳಿದಂತೆ ಸಣ್ಣ ಪುಟ್ಟ ಘಟ್ಟಪ್ರದೇಶದ ಅರಣ್ಯವೇ ವಾಸಸ್ಥಳ. ಇಲ್ಲಿನ ಮುಖ್ಯ ಅರಣ್ಯಗಳೆಂದರೆ,

ಕೋಷ್ಟಕ ೨.೧೧: ಜಿಲ್ಲೆಗಳಲ್ಲಿನ ರಕ್ಷಿತ ಅರಣ್ಯಗಳು.

ಕ್ರ.ಸ.	ಅರಣ್ಯ	ಜಿಲ್ಲೆಗಳು	ವಿಸ್ತೀರ್ಣ ಚ.ಕಿ.ಮೀ.ಗಳಲ್ಲಿ	ಅವಲಂಬಿಸಿರುವ ಪ್ರಾಣಿವರ್ಗ
೧	ಮುಕಾಂಬಿಕ	ದ.ಕನ್ನಡ	೨೪೭	ಜಿಂಕೆ, ಸಾಂಬರ್, ಸಿಂಹ, ಬಾಲದ ಕೋತಿ
೨	ಸೋಮೆಶ್ವರ		೮೮	ಚಿರತೆ, ಕಾಡೆಮ್ಮೆ, ಹುಲಿ ಇತ್ಯಾದಿ

(ಆಧಾರ: D.E.S. ಕರ್ನಾಟಕ ಸರ್ಕಾರ)

ಒಟ್ಟಾರೆ ಮೇಲಿನ ಎರಡು ಜಿಲ್ಲೆಗಳಲ್ಲಿ ಸರ್ಕಾರದ ಅರಣ್ಯಪ್ರದೇಶ ೨೨೭೬೯ ಹೆಕ್ಟೇರ್‌ಗಳಷ್ಟು ಕಂಡುಬರುತ್ತದೆ. ೨೨೭೬೯ ಹೆಕ್ಟೇರ್ ಪ್ರದೇಶದಲ್ಲಿ ಎರಡು ಅಭಯಾರಣ್ಯಗಳು ಕಾಣಬಹುದು. ಅಭಯಾರಣ್ಯ ವಿಸ್ತೀರ್ಣವು ಕಡಿಮೆ ೩೩೫ ಚ.ಕಿ.ಮೀ.ಗಳಷ್ಟು ಮಾತ್ರ. ಉಳಿದಂತೆ ಬಹುತೇಕ ಘಟ್ಟಪ್ರದೇಶದ ಅರಣ್ಯವಾಗಿರುವ ಸುಂದರ ಪ್ರಕೃತಿಯ ತಾಣವಾಗಿ ಕಂಡುಬರುತ್ತದೆ.

ಮೂಲಭೂತ ಸೌಲಭ್ಯಗಳು: ಕೊರಗ ಸಮುದಾಯಗಳಲ್ಲಿ ಮೂಲಭೂತ ಸೌಲಭ್ಯಗಳು ಎರಡು ರೀತಿಯಲ್ಲಿ ಗುರುತಿಸಬಹುದು. ೧) ನಗರ ಪ್ರದೇಶದಲ್ಲಿನ ಸೌಲಭ್ಯಗಳು ೨) ಗ್ರಾಮಾಂತರ ಪ್ರದೇಶದಲ್ಲಿನ ಮೂಲಭೂತ ಸೌಲಭ್ಯಗಳು. ಆದರೆ ಅಧ್ಯಯನ ಕ್ರಮದಲ್ಲಿ ಒಂದೇ ನೆಲೆಯಲ್ಲಿ ಗುರುತಿಸಲಾಗಿದೆ. ಮೂಲಭೂತ ಸೌಲಭ್ಯಗಳು ಅಭಿವೃದ್ಧಿಯ ದಿಕ್ಸೂಚಿಯಾಗಿರುವುದರಿಂದ ಪ್ರಾಮುಖ್ಯತೆ ಪಡೆದಿವೆ. ಹೀಗಾಗಿ ಸಮುದಾಯಗಳನ್ನು ವಿಭಾಗಮಾಡದೆ ಆಯಾ ಪರಿಸರಕ್ರಮದಂತೆ ಗುರುತಿಸಿ ಕ್ರೋಢಿಕರಿಸಿ ಒಟ್ಟಾರೆ ಪಾತ್ರವನ್ನು ಸಂಕ್ಷಿಪ್ತವಾಗಿ ವಿಶೇಷಿಸಲಾಗಿದೆ. ಈ ನಿಟ್ಟಿನಲ್ಲಿ ಭೌತಿಕ ನೆರವು ಪ್ರಥಮವಾಗಿದೆ.

ಸಮುದಾಯದಲ್ಲಿನ ಭೌತಿಕ ನೆರವು

ಅಭಿವೃದ್ಧಿಯ ನಿಜವಾದ ಪಾತ್ರವನ್ನು ಹೊರತರುವುದೇ ಭೌತಿಕ ನೆರವು. ಈ ನೆರವಿನಲ್ಲಿ ಅತಿಮುಖ್ಯವಾದದ್ದು ವಿದ್ಯುತ್‌ಶಕ್ತಿ. ಸುಮಾರು ವರ್ಷಗಳಿಂದ ಅಭಿವೃದ್ಧಿ ಕಾರ್ಯಚಾಲ್ತಿಯಲ್ಲಿದೆ. ಆದರೂ ಪ್ರಗತಿ ಮಾತ್ರ ಒಂದು ಪ್ರಶ್ನಾರ್ಥಕವಾಗಿದೆ. ಬಡತನರೇಖೆಯ ಕೆಳಗಿರುವರುಗಳಿಗೆ ವಿದ್ಯುತ್ ಒದಗಿಸುವ ಅನೇಕ ಯೋಜನೆಗಳನ್ನು ಸರ್ಕಾರ ರೂಪಿಸಿದೆ. ಕಾರ್ಯಗತಗೊಂಡ ಬಗ್ಗೆ ಒಂದು ಕ್ರಿಯಾ ಯೋಜನೆಯನ್ನು ರೂಪಿಸುವಷ್ಟು ಸಂಗತಿಯಾಗಿದೆ ಎನ್ನಬಹುದು. ಕೊರಗರ ಪುನರ್‌ವಸತಿ ಯೋಜನೆಯಲ್ಲಿ ಹಲವು ಕುಟುಂಬಗಳು ವಿದ್ಯುತ್‌ಶಕ್ತಿ ಸೌಲಭ್ಯ ಪಡೆದಿದ್ದರೆ ಮತ್ತೆ ಕೆಲವು ಕುಟುಂಬಗಳು ಕಡಿತಕ್ಕೆ ಒಳಗಾಗಿವೆ. ಇನ್ನುಳಿದಂತೆ ದೊರೆಯದ ಕುಟುಂಬಗಳು ಉಂಟು. ನಿದರ್ಶನಾತ್ಮಕವಾಗಿ ಸಮೀಕ್ಷೆಮಾಡಲಾದ ಕುಟುಂಬಗಳಲ್ಲಿನ ಪ್ರಮಾಣಾನುಪಾತದಿಂದ ನೆರವಿನ ಸ್ವರೂಪ ತಿಳಿದುಬರುತ್ತದೆ

ಕೋಷ್ಟಕ೨.೧೨:ವಿದ್ಯುತ್‌ಶಕ್ತಿ ಲಭ್ಯತೆಯ ಪ್ರಮಾಣ

ಕ್ರ.ಸಂ	ತಾಲ್ಲೂಕುವ್ಯಾಪ್ತಿ	ವಿಧ್ಯುತ್ ಸೌಲಭ್ಯ ಪಡೆದ ಕುಟುಂಬಗಳು	ವಿಧ್ಯುತ್ ಸೌಲಭ್ಯ ಪಡೆಯದ ಕುಟುಂಬಗಳು	ವಿಧ್ಯುತ್ ಪಡೆದು ಕಡಿತವಾದ ಕುಟುಂಬಗಳು	ಒಟ್ಟು ಕುಟುಂಬಗಳು
೧	ಕುಂದಾಪುರ	೨೯	೨೪	೧೩	೬೬
೨	ಉಡುಪಿ	೧೬	೯	೧೪	೩೯
೩	ಕಾರ್ಕಾಳ	೩೩	೧೮	೦೩	೫೪
೪	ಮಂಗಳೂರು	೩೨	೩೭	೧೭	೮೬
೫	ಬೆಳ್ತಂಗಡಿ	೧೫	೧೦	೦೨	೨೭
೬	ಭಟ್ಕಾಳ	೧೩	೧೧	೬	೩೦
೭	ಸೂಳ್ಯ	೧೧	೪	–	೧೫
೮	ಪೂತ್ತೂರು	೦೯	೧೧	೩	೨೩
	ಒಟ್ಟು	೧೫೮	೧೨೪	೫೮	೩೪೦

(ಆಧಾರ : ಕ್ಷೇತ್ರಾಕಾರ್ಯದ ಮಾಹಿತಿ)

ಅಭಿವೃದ್ಧಿ ಕಾರ್ಯಕ್ರಮ ಮತ್ತು ಪುನರ್‌ವಸತಿಯ ಯೋಜನೆಯಿಂದ ಕೊರಗರ ಕುಟುಂಬಗಳಿಗೆ ವಿದ್ಯುತ್‌ಶಕ್ತಿ ದೊರೆಕಿಸಿ ಕೊಟ್ಟಿರುವುದು ತಿಳಿಯಬಹುದು. ಒಟ್ಟಾರೆ ೩೪೦ ಕುಟುಂಬಗಳಲ್ಲಿ ೧೫೮ ಕುಟುಂಬಗಳು ವಿದ್ಯುತ್‌ಶಕ್ತಿ ಸೌಲಭ್ಯಪಡೆದಿದ್ದಾರೆ. ಉಳಿದಂತೆ ೧೨೪ ಕುಟುಂಬಗಳು ವಿದ್ಯುತ್‌ಶಕ್ತಿಯಿಂದ ವಂಚಿತವಾಗಿವೆ. ಒಮ್ಮೆ ಪಡೆದ ಕುಟುಂಬಕ್ಕೆ ನಿಗಮದವತಿಯಿಂದ ತೊಂದರೆಗಳು ಮೊದಲುಗೊಂಡು ವಿದ್ಯುತ್ ಸಂಪರ್ಕವೇ ಕಡಿತಮಾಡಲಾದ ಕುಟುಂಬಗಳು ಕಾಣಬಹುದು. ೫೮ ಕುಟುಂಬಗಳು ಭಾಗ್ಯಜ್ಯೋತಿ ಮತ್ತಿತ್ತರ ಸೌಲಭ್ಯಗಳಲ್ಲಿ ವಿದ್ಯುತ್ ಶಕ್ತಿ ಪಡೆದ ನಂತರ ನಿಗಮದವರು ಕಡಿತ ಮಾಡಿರುತ್ತಾರೆ. ಇದಕ್ಕೆ ಹಲವಾರು ಕಾರಣಗಳನ್ನೂ ನೀಡುತ್ತಾರೆ ಎನ್ನುತ್ತಾರೆ. ಕಡಿತಗೊಳಿಸಲಾದ ಕುಟುಂಬಗಳಿಗೆ ನಿಗಮದವರು ನೀಡುವ ಉತ್ತರವೆಂದರೆ, "ಭಾಗ್ಯಜ್ಯೋತಿ ಸ್ಕೀಂನಲ್ಲಿ ಸೌಲಭ್ಯ ಪಡೆದು ಟಿ.ವಿ. ಫ್ಯಾನ್, ಟೇಪ್‌ರೆಕಾರ್ಡರ್‌ಗಳನ್ನ ಬಳಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದರಿಂದ ನಾವು ಸೌಲಭ್ಯವನ್ನು ಅಂತಹ ಕುಟುಂಬಕ್ಕೆ ನಿಲ್ಲಿಸಿದ್ದೇವೆ ಎನ್ನುತ್ತಾರೆ"[೪೭]. ಕೊರಗರಲ್ಲಿ ವಿಧ್ಯುತ್‌ಶಕ್ತಿ ವಂಚಿತ ಕುಟುಂಬಗಳು ಬಹುತೇಕ ಗ್ರಾಮಭಾಗದಲ್ಲಿರುವ ಕುಟುಂಬಗಳಾಗಿವೆ. ಈ ಕುಟುಂಬಗಳು ೨ ಮತ್ತು ೩ ಇರುವ ಸ್ಥಳಗಳಲ್ಲಿ ವಿಧ್ಯುತ್ ಸಂಪರ್ಕ ಒದಗಿಸಲಾಗದಿರುವುದು ಕಂಡುಬರುತ್ತದೆ. ಉಳಿದಂತೆ ನಗರ ಪ್ರದೇಶದಲ್ಲಿರುವ ಕುಟುಂಬಗಳಲ್ಲಿ ಅಂತಹ ಸಮಸ್ಯೆ ಕಂಡುಬರುವುದಿಲ್ಲ. ಗ್ರಾಮಭಾಗದಲ್ಲಿರುವ ಕುಟುಂಬಗಳಿಗೆ ಅಗತ್ಯವಾಗಿ ವಿಧ್ಯುತ್‌ಶಕ್ತಿ ಒದಗಿಸಬೇಕಿದೆ. ಈ ನಿಟ್ಟಿನಲ್ಲಿ ಸಮುದಾಯದಲ್ಲೇ ಹೋರಾಟ ಪ್ರಾರಂಭವಾಗಿದೆ. ಇದೊಂದು ರೀತಿಯ ಉತ್ತಮ ಬೆಳವಣಿಗೆ ಎನ್ನಬಹುದು. ಯಾರಿಗೂ ಕಾಯುವ ಕೆಲಸ ಮಾಡದೇ ನಮ್ಮ ಹಕ್ಕಿಗಾಗಿ ಹೋರಾಟ ಮಾಡುತ್ತೇವೆ ಎನ್ನುವ ಹಂತಕ್ಕೆ ಸಮುದಾಯದ ಜನರು ಸಂಘಟಿತಗೊಂಡಿದ್ದಾರೆ

ಇಂಧನ ಅಥವಾ ಸೀಮೆಎಣ್ಣೆ:- ಕೊರಗರ ಕುಟುಂಬಕ್ಕೆ ಇಂಧನದ ಮೂಲವೇ ಸರ್ಕಾರದ ನ್ಯಾಯ ಬೆಲೆ ಅಂಗಡಿ. ಪಡಿತರ ವ್ಯವಸ್ಥೆಯಲ್ಲಿ ದೊರೆಯುವ ಸೀಮೆಎಣ್ಣೆಯನ್ನು ಪಡೆದು ದೀಪ ಮತ್ತು ಅಡುಗೆಗೆ ಬಳಸುವರಾಗಿದ್ದಾರೆ. ಗ್ರಾಮೀಣ ಭಾಗದಲ್ಲಿರುವ ಕುಟುಂಬವು ದೀಪಕ್ಕೆ ಇಂದನವಾಗಿ ಬಳಕೆಮಾಡಿದರೆ, ನಗರ ಪ್ರದೇಶದ ಕುಟುಂಬಗಳು ಆಹಾರ ತಯಾರಿಸುದ್ದಕ್ಕೆ ಬಳಸುತ್ತಿದ್ದಾರೆ. ಸೀಮೆ ಎಣ್ಣೆ ದೊರಕುವ ಪ್ರಮಾಣವೂ ಕಡಿಮೆ. ನಗರ ಪ್ರದೇಶದ ನ್ಯರ್ಮಲೀಕರಣದ ವಸತಿಗೃಹಗಳಲ್ಲಿ ನೆಲೆಸಿರುವ ಕುಟುಂಬಗಳು ಆಧುನಿಕತೆಯ ಪೆಟ್ರೋಲಿಯಂ ಗ್ಯಾಸ್ ಬಳಸುವರಾಗಿದ್ದಾರೆ. ಪೌರಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿರುವ ಈ ಕುಟುಂಬಗಳು ಕೊಂಚಮಟ್ಟಿನ ಆಧುನಿಕತೆಯನ್ನು ಮೈಗೂಡಿಸಿಕೊಂಡಿದ್ದಾರೆ. ಗ್ರಾಮ ಅಥವಾ ಹಳ್ಳಿಗಾಡಿನ ಕೊರಗ ಕುಟುಂಬಗಳು ಸೀಮೆಎಣ್ಣೆಯನ್ನು ನಗರದಿಂದ ಪಡೆದು ಬರುವುದಾಗಿ ತಿಳಿಸುತ್ತಾರೆ. ಇವರುಗಳ ಬಳಕೆ ಅತಿಕಡಿಮೆ. ಕಟ್ಟಿಗೆಯ ಮಾರಾಟ ಮಾಡುವ ಇವರುಗಳು ಅತಿಕಡಿಮೆ ಆದಾಯ ಸಂಗ್ರಹಣಕಾರರಾಗಿದ್ದಾರೆ ಇವರುಗಳು ಸೀಮೆಎಣ್ಣೆಯ ಮೇಲೆ

ಅವಲಂಬನೆ ಹೆಚ್ಚಾಗಿ ಮಾಡುವುದಿಲ್ಲ ಎನ್ನುತ್ತಾರೆ. ಸಂಜೆ ೭ ಗಂಟೆಗೆ ಊಟಮಾಡಿ ಮುಗಿಸಿ ಕತ್ತಲೆಯಲ್ಲಿ ರಾತ್ರಿ ಕಳೆಯುತ್ತಾರೆ. ಕುಟುಂಬಗಳಲ್ಲಿರುವ ಸಣ್ಣ ಹಣತೆ ಇಡೀ ಮನೆಗೆ ಬೆಳಕು ನೀಡಬೇಕು.

ಒಮ್ಮೊಮ್ಮೆ ಸೀಮೆಎಣ್ಣೆಯನ್ನು ಖಾಸಗಿಯಾಗಿ ಪಡೆಯುವುದು ಉಂಟು. ಖಾಸಗಿಯಾಗಿ (ಪಡಿತರ ವ್ಯವಸ್ಥೆಯನ್ನು ಬಿಟ್ಟು) ಪಡೆಯಬೇಕಾದರೆ ಪ್ರತಿ ಲೀಟರ್‌ಗೆ ೨೫ ರೂ.ಗಳು ನೀಡಬೇಕು. ೨೫ರೂಪಾಯಿ ಗಳಿಸಲು ಒಂದು ದಿನದ ಕೆಲಸ ಅಗತ್ಯವಾಗಿದೆ. ಉದ್ಯೋಗವೇ ಅನಿಶ್ಚಿತೆಯತೆಯಿಂದ ಕೂಡಿರುವಾಗ ಆದಾಯ ಗಳಿಸುವಿದು ತಿಸು ಕಷ್ಟವೇ ಸರಿ.

ಕೋಷ್ಠಕ ೨.೧೩: ಕೊರಗರ ಇಂಧನ ಬಳಕೆಯ ಪ್ರಮಾಣದ ವಿವರಗಳು.

ಕ್ರ.ಸ.	ಇಂಧನದ ಬಳಕೆ	ಪ್ರಮಾಣ	ಧರ	ಅವಲಂಬಿತ ಕುಟುಂಬಗಳ ಸಂಖ್ಯೆ
೧	ಊರವಲು ಕಟ್ಟಿಗೆ	೧ ಹೊರೆ ಕಟ್ಟು	೩೦ ರೂ.ದಿಂದ ೫೦	೭೧
೨	ಸೀಮೆಎಣ್ಣೆ (ಪಡಿತರ ವ್ಯವಸ್ಥೆಯಲ್ಲಿ)	೩ ರಿಂದ ೫ ಲೀಟರ್	ಲೀಟರ್ ೧ಕ್ಕೆ ೧೦.೫೦ ಪೈ	೧೩೪
೩	ಪೆಟ್ರೋಲಿಯಂ ಗ್ಯಾಸ್	೧ ಸಿಲಿಂಡರ್	೩೦೭ ರೂ.	೩೨
೪	ಸೀಮೆಎಣ್ಣೆ ಖಾಸಗಿಯವರ ಬಳಿಕೊಳ್ಳುವವ ಕುಟುಂಬ	೧ ಲೀಟರ್	೨೫ ರೂ.	೧೦೩

ಸರ್ಕಾರಿ ನೌಕರರುವ ಕುಟುಂಬಗಳ ೩೨ ಸಂಖ್ಯೆಯಲ್ಲಿ ಪೆಟ್ರೋಲಿಯಂ ಗ್ಯಾಸ್ ಬಳಸುತ್ತಿದ್ದಾರ್ದ್. ಮತ್ತೊಂದು ಕಡೆ ಕಟ್ಟಿಗೆ ಮಾರಾಟದಿಂದ ಜೀವನಕ್ಕೆ ಆಧಾರವಾಗಿರುವ ಕುಟುಂಬಗಳು ಕೊರಗರಲ್ಲಿ ಕಂಡುಬರುತ್ತವೆ. ಬಹುತೇಕ ಪಡಿತರ ವ್ಯವಸ್ಥೆಯನ್ನೇ ಅವಲಂಬಿಸಿರುವುದು ಕಾಣಬಹುದು. ಸುಮಾರು ೧೩೪ ಕುಟುಂಬಗಳು ಅತಿಮುಖ್ಯವಾಗಿ ಪಡಿತರ ವ್ಯವಸ್ಥೆಯ ಇಂಧನದ ಮೇಲೆ ಆಧಾರವಾಗಿವೆ ಕಂಡುಬರುತ್ತದೆ. ಖಾಸಗಿಯವರ ಬಳಿ ಪಡೆಯುವ ಸೀಮೆಎಣ್ಣೆಯ ಧರ ೧ ಲೀಟರ್‌ಗೆ ೨೫ ರೂ. ಆದರೂ ಜನರು ಅವಲಂಬಿಸಿದ್ದಾರೆ. ಇಂಧನ ಬಳಕೆಯ ವಿಧಾನದಲ್ಲಿ ಕೊರಗರು ಲಭ್ಯವಿರುವ ಅವಕಾಶವನ್ನು ತಮ್ಮ ಹಣಕಾಸಿಗೆ ಅನುಗುಣವಾಗಿ ಬಳಸಿಕೊಳ್ಳುವವರಾಗಿದ್ದಾರೆ.

ಸಾರಿಗೆ ಸಂಪರ್ಕ:– ಸಾರಿಗೆ ಮತ್ತು ಸಂಪರ್ಕ ಜನರನ್ನು ಸನ್ನಿಹಕ್ಕೆ ತರುತ್ತದೆ ಎನ್ನುವುದು ಕೊರಗರಲ್ಲಿ ವಾಸ್ತವೂ ಹೌದು. ನಗರಮುಖಿಗಳಾದ ಇವರುಗಳಲ್ಲಿ ಸಂಪರ್ಕದ ವ್ಯವಸ್ಥೆ ಉತ್ತಮವಾಗಿ ಬೆಳೆದುಬರುತ್ತಿದೆ. ಸಂಪರ್ಕದ ವ್ಯವಸ್ಥೆ ಸಮರ್ಪಕವಾಗಿ ಬಳಸಿಕೊಂಡವರು ನಗರವಾಸಿಗಳಾಗಿದ್ದಾರೆ. ಗ್ರಾಮಾಂತರದ ಪ್ರದೇಶದಲ್ಲಿರುವ ಕೊರಗರು ಅಸ್ಪೃಶ್ಯರಂತೆ

ಕಾಣಬರುತ್ತಾರೆ . ದ. ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಕೊರಗರ ಗ್ರಾಮಾಂತರದ ಕಾಲೋನಿಗಳನ್ನು ಒಂದು ಗ್ರಾಮ ಅಥವಾ ಹಳ್ಳಿಯಾಗಿ ಗುರುತಿಸಲು ಸಾಧ್ಯತೆ ಕಡಿಮೆ ಇದೆ. ಬಹುತೇಕ ಕೊರಗರ ಕುಟುಂಬಗಳು ಅಲ್ಲಲ್ಲಿ ಪ್ರತ್ಯೇಕವಾಗಿರುವುದಲ್ಲದೇ, ಘಟ್ಟಪ್ರದೇಶಗಳಲ್ಲಿ ೨ರಿಂದ ೪ ಕುಟುಂಬಗಳು ನೆಲೆನಿಂತಿದೆ. ಈ ಪ್ರದೇಶಗಳಿಗೆ ಸಂಚಾರ ಮಾಡಲು ಹರಸಾಹಸ ಮಾಡಬೇಕಾಗುತ್ತದೆ. ಮುಖ್ಯರಸ್ತೆಗಳಲ್ಲಿ ಖಾಸಗಿ ಬಸ್ಸುಗಳು ಮತ್ತುಇತರ ವಾಹನಗಳಿಂದ ಕಾಲೋನಿಗಳ ರಸ್ತೆಗೆ ಸಂಚರಿಸಬೇಕು. ನಂತರ ಮುಖ್ಯರಸ್ತೆಯಿಂದ ಕುಟುಂಬಗಳ ಕಾಲೋನಿವರೆಗೆ ಆಟೋರಿಕ್ಷಾಗಳಿಗೆ ಅಗತ್ಯವಾಗಿ ಕಾಯಬೇಕು. ಇಲ್ಲವಾದಲ್ಲಿ ನಡೆದೇ ಹೋಗಬೇಕಾದ ಸ್ಥಿತಿಯಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿನ ಕೊರಗರು ತಮ್ಮ ತಮ್ಮ ಪರಿಸರದಲ್ಲಿರುವ ಶ್ರೀಮಂತ ದಣಿಗಳ ಕೃಪೆಯಿಂದ ಸಂಪರ್ಕಪಡೆದಿರುವುದು ಕಂಡು ಬರುತ್ತದೆ. ಉಳಿದಂತೆ ನಡೆದೇ ಹೋಡಾಟ ಮಾಡುವವರಾಗಿದ್ದಾರೆ.

ಮಾರುಕಟ್ಟೆ ಮತ್ತು ಸಾಲದ ವ್ಯವಸ್ಥೆ: ಮಾರುಕಟ್ಟೆಯ ಮೂಲವಾಗಿ ಕೊರಗರಲ್ಲಿ ಸಮೀಪದ ಸಂತೆಗಳೇ ಆಧಾರವಾಗಿವೆ. ನಗರ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ನೆಲೆಯಲ್ಲಿರುವವರು ತಮ್ಮ ಕೊಳ್ಳುವಿಕೆಗೆ ಮಾರುಕಟ್ಟೆಗಳೇ ಆಧಾರ. ಕೊರಗರಲ್ಲಿ ಬಹುತೇಕರು ವಸ್ತುಗಳ ಖರೀದಿಗೆ ಹೋಗುವವರು ಕಡಿಮೆ ಎನ್ನಬಹುದು. ತನ್ನ ಸಮೀಪದ ಪರಿಸರದಲ್ಲಿ ದೊರೆಯುವ ಸಂಪನ್ಮೂಲಗಳನ್ನೇ ಜೀವನ ನಿರ್ವಹಣೆಗೆ ಬಳಸಿಕೊಳ್ಳುವರಾಗಿದ್ದಾರೆ. ಇವರುಗಳ ಜೀವನ ವಿಧಾನದಲ್ಲಿ ನಾಳೆಯ ಬಗ್ಗೆ ಎಂದು ಚಿಂತಿಸದವರೂ ಇರುವಷ್ಟು ದಿನ ತಿಂದು ಕುಡಿದು ಸಂತೋಷದಿಂದ ಇರಬೇಕು ಎನ್ನುತ್ತಾರೆ.

ಆಧುನಿಕತೆಯ ನಗರ ಸಂಸ್ಕೃತಿಯ ಪ್ರಭಾವ ಕೊರಗರ ಮೇಲೆ ದಟ್ಟವಾಗಿದೆ. ನಗರದಲ್ಲಿರುವ ಕುಟುಂಬಗಳು ಇತರ ಸಮುದಾಯಗಳ ಜನರಂತೆ ದಿನಸಿ ಅಂಗಡಿ, ಪ್ರಾವಿಜನ್ ಸ್ಟೋರ್ ಮಾರುಕಟ್ಟೆಗಳಲ್ಲಿ ನಿಯಮಿತವಾಗಿ ಅಗತ್ಯವಸ್ತುಗಳ ಖರೀದಿಗಾರರಾಗಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿರುವ ಕೊರಗ ಕುಟುಂಬಗಳಲ್ಲಿ ಸರಿಯಾದ ಉದ್ಯೋಗವಿಲ್ಲದ ಕಾರಣ ಆದಾಯವೂ ಕಡಿಮೆ. ಇವರುಗಳು ದಣಿಗಳನ್ನೇ ಆಶ್ರಯಿಸಿಕೊಂಡಿದ್ದಾರೆ. ಅಕ್ಕಿ, ತೆಂಗು, ಬೇಳೆ, ಕಾಯಿಪಲ್ಯಗಳನ್ನು ದಣಿಗಳು ಅಥವಾ ಶಾನುಭೋಗರು ನೀಡುತ್ತಾರೆ. ಉಳಿದಂತೆ ಅಲ್ಪಸ್ವಲ್ಪ ಹಣದೊರತಲ್ಲಿ ಅಂಗಡಿಗಳಿಂದ ಕೊಂಡು ತರುತ್ತೀವಿ ಎನ್ನುತ್ತಾರೆ. ಮಾರುಕಟ್ಟೆಯ ಕೊಂಡು ತಿನ್ನುವ ಪದ್ಧತಿ ಗ್ರಾಮಾಂತರದ ಕೊರಗ ಕುಟುಂಬಗಳಲ್ಲಿ ಪ್ರಥಮ ಹೆಜ್ಜೆಗಳನ್ನಿಟ್ಟಿದೆ ಎನ್ನಬಹುದು. ಸಾಲ ಪಡೆದ ಹಣವನ್ನು ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳನ್ನು ಪಡೆಯುವಲ್ಲಿ ವೆಚ್ಚಮಾಡುತ್ತಿದ್ದಾರೆ.

ಸಮುದಾಯದಲ್ಲಿ ಸಾಲದ ವ್ಯವಸ್ಥೆ ಎರಡು ರೀತಿಯಿಂದ ಗುರುತಿಸಬಹುದು. ನಗರಪ್ರದೇಶದಲ್ಲಿರುವ ಸರ್ಕಾರಿ ನೌಕರರಾಗಿರುವುದರಿಂದ ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಸಾಲ ಪಡೆಯುವರಾಗಿದ್ದಾರೆ. ಅಲ್ಲದೇ ಖಾಸಗಿ ವ್ಯಕ್ತಿಗಳ ಹಣಕಾಸು ಸಂಸ್ಥೆಗಳ ಮೂಲಕ ಸಾಲ ಕಾಲೋನಿಗಳಿಗೆ ಧಾರಾಳವಾಗಿ ಹರಿದುಬರುತ್ತಿದೆ. ಖಾಸಗಿ ಸಾಲದಾತರ ಬಡ್ಡಿದರವೂ ಸಹ ಬಹುವಿಧವಾಗಿದೆ. ಬಹುತೇಕ ಸಮುದಾಯದ ಜನರಲ್ಲಿ ಹೆಣ್ಣು ಗಂಡು ಎಂಬ ಭೇದವಿಲ್ಲದೇ ಕುಡಿತದ ಚಟ ಹೆಚ್ಚು. ಗಳಿಸುವ ಆದಾಯದಲ್ಲಿ ಬಹುಪಾಲು ಕುಡಿತಕ್ಕೆ ಮೀಸಲು. ಕುಡಿತಕ್ಕೆ ಕಾರಣ ವಕ್ತೃಹೇಳುವಂತೆ "ನಾವು ಮಾಡುವ ಕೆಲಸ ಅಂತಹುದು ಸಾರ್. ಕುಡಿದಿಲ್ಲವೆಂದರೆ ಆ ಕೆಲಸ ಮಾಡೊದಿಕ್ಕೆ ಮನಸ್ಸು ಬರಲ್ಲ. ಚರಂಡಿ, ರಸ್ತೆ, ಕಕ್ಕಸು ತೆಗೆದು ನೈರ್ಮಲ್ಯ ಮಾಡಬೇಕು. ಕೆಲವು ಸಾರಿ ಕುಡಿದೆ ತುಂಬಿರುವ ಕಕ್ಕಸು ತೆಗೆಯುವುದು. ನಮಗೆ ಬೇರೆ ಕೆಲಸ ಕೊಡಲ್ಲ ನಾವು ಏನು ಮಾಡಬೇಕು ಸಾರ್ ಎನ್ನುತ್ತಾರೆ."[೪೮] ಪ್ರತ್ಯಕ್ಷವಾಗಿ ಕೊರಗರು ಮಾಡುವ ನೈರ್ಮಲೀಕರಣದ ಕೆಲಸವನ್ನು ನೋಡಿದಲ್ಲಿ ಸಮಾಜವು ಕೊರಗರನ್ನು ದುಡಿಸಿಕೊಳ್ಳುತ್ತಿರುವ ರೀತಿ ಘೋರವಾಗಿ ಕಂಡುಬರುತ್ತದೆ. ಯಾರೇ ಆಗಲಿ ಇಂತಹ ವೃತ್ತಿ ಮಾಡುವ ಜನರನ್ನು ಮನಃಪೂರ್ವಕ ಕುಡಿಯಬೇಡ ಅನ್ನಲು ಸಾಧ್ಯವಿಲ್ಲ. ಹೀಗಾಗಿ ಕುಡಿತ ಅಂಟಿಕೊಂಡು ಬಂದಿದೆ. ಕುಡಿತದಿಂದ ಬಡತನ, ಬಡತನದಿಂದ ಸಾಲದ ಬಲೆ. ಹೀಗೆ ಒಂದಕ್ಕೊಂದು ಸುರಳಿಯಂತೆ ಸುತ್ತಿಕೊಂಡಿದೆ. ಸರ್ಕಾರಿ ನೌಕರಿ ಎಂದು ಗುರುತಿಸಿಕೊಂಡಿರುವರು ಬ್ಯಾಂಕ್‌ಗಳಿಂದ ಸಾಲಪಡೆದು ಮನೆ ನಿರ್ಮಾಣ ಹಾಗೂ ಮಕ್ಕಳಿದ್ದಲ್ಲಿ ಸ್ವಯಂ ಉದ್ಯೋಗಕ್ಕೆ ನೆರವು, ವಿವಾಹ, ಆಚರಣೆ ಹಬ್ಬ ಯಾವುದಾದರೊಂದು ಕಾರ್ಯಕ್ಕೆ ಸಾಲದ ಹಣ ವೆಚ್ಚ ಮಾಡುತ್ತಿದ್ದಾರೆ. ನೌಕರರಲ್ಲದವರು ಖಾಸಗಿ ಲೇವಾದೇವಿದಾರರ ಮೊರೆಹೋಗಿರುವುದು ಕಂಡುಬರುತ್ತದೆ. ಖಾಸಗಿ ವ್ಯಕ್ತಿಗಳು ಮತ್ತು, ಲೇವಾದೇವಿದಾರರು ಸಾಲದ ಬಲೆಯನ್ನೇ ನಿರ್ಮಿಸಿದ್ದಾರೆ. ನಗರ ಹಾಗೂ ಗ್ರಾಮಭಾಗದ ಕೊರಗರಲ್ಲಿ ಸಾಂಸ್ಥಿಕ ಮೂಲದ ಸಾಲದ ವ್ಯವಸ್ಥೆಯ ಪಾತ್ರವೇ ಕಾಣಬರುವುದಿಲ್ಲ. ಆದರಿಂದಲೇ ಕೊರಗರು ಖಾಸಗಿ ಲೇವಾದೇವಿಯರ ಮೊರೆಹೋಗಿದ್ದಾರೆ. ಖಾಸಗಿ ಲೇವಾದೇವಿದಾರರ ಬಡ್ಡಿಧರ ಒಂದೊಂದು ವಿಧವಾಗಿ ಸಮಯ, ಪಾವತಿಧಾರ ಮತ್ತು ಸಾಲದ ಮೊತ್ತದ ಮೇಲೆ ನಿರ್ಣಯ ಮಾಡುವವರಾಗಿದ್ದಾರೆ

ಕೋಷ್ಟಕ ೨.೧೪: ವಿವಿಧಸಾಲಗಳಿಗೆ ನೀಡುವ ಬಡ್ಡಿಧರದ ಪಟ್ಟಿ:

ಕ್ರ.ಸ.	ಸಾಲದ ವಿವರ	ರೂ.ಗಳಿಗೆ ವಿದಿಸುವುದು	ಬಡ್ಡಿಧರ	ಕಾಲಾವಧಿ	ಹಿಂದಿರುಗಿಸುವ ವಿಧಾನ
೧	ದಿನದಸಾಲ	೧೦೦ ರೂ.	೨೦ ರೂ.	೨೪ ಘಂಟೆ	ಸಂಜೆ ೧೨೦ ರೂ. ನಗದು ಪಾವತಿ
೨	ವಾರದಸಾಲ	೧,೦೦೦ ರೂ.	೧೫೦ ರೂ.	೧ ವಾರ	ಹಣರೂಪಿ
೩	೩ ತಿಂಗಳಸಾಲ	೧೦,೦೦೦ ರೂ.	–	೩ ತಿಂಗಳು	ಪ್ರತಿದಿನ ೧೦೦ ರೂ.ಗಳಂತೆ ಹಣರೂಪಿ
೪	ಬಡ್ಡಿಸಾಲ	೧೦,೦೦೦ ರೂ.	ಶೇ.೫ ರಿಂದ ೨೦	ಮಿತಿಇಲ್ಲ	ಹಣರೂಪಿ, ಪ್ರತಿತಿಂಗಳು ಬಡ್ಡಿ

ಕುಟುಂಬದ ನಿರ್ವಹಣೆ, ಇನ್ನಿತರ ಖರ್ಚುವೆಚ್ಚಗಳಿಗೆ ಯಾವುದೇ ಅಲೆದಾಟವಿಲ್ಲದೆ ಸಮುದಾಯದ ಜನರ ಕೈಸೇರುವ ಸಾಲಕ್ಕೆ. ವಿದಿಸುತ್ತಿರುವ ಬಡ್ಡಿಧರಗಳು ಮಾತ್ರ ಶೋಷಣೆಯ ಮತ್ತೊಂದು ರೂಪವಾಗಿದೆ. ಇಲ್ಲಿಯೂ ಸರ್ಕಾರದ ಸಾಲದ ಏಜೆನ್ಸಿಗಳು ಮತ್ತು ಸಹಕಾರ ಬ್ಯಾಂಕ್ / ಸಂಘ ಪರಿಣಾಮಕಾರಿಯಾಗದಿರುವುದು ಕಂಡುಬರುತ್ತದೆ. ಖಾಸಗಿ ಲೇವಾದೇವಿದಾರರ ಕಪಿಮುಷ್ಟಿಯಲ್ಲಿ ಸಿಲುಕಿರುವ ಸಮುದಾಯದ ಕುಟುಂಬಗಳು ಗಳಿಸುವ ಅಲ್ಪಸ್ವಲ್ಪ ಆದಾಯವೂ ನಿರಂತರವಾಗಿ ಬಡ್ಡಿಯ ರೂಪದಲ್ಲಿ ಸೋರಿಕೆಯಾಗಿ ಹೋಗುತ್ತಿದೆ.

ದಿನದ ಅಗತ್ಯಕ್ಕೆ ಅನಿವಾರ್ಯ ಸಂದರ್ಭ ಅಥವಾ ವ್ಯಾಪಾರಕ್ಕೆ ಪಡೆಯುವ ೧೦೦ ರೂ.ಗಳಿಗೆ ಸಂಜೆಯ ವೇಳೆಗೆ ೧೨೦ ರೂ. ಪಾವತಿ ಮಾಡಬೇಕು. ೧೦೦ ರಿಂದ ಆರಂಭಗೊಂಡು ೫೦೦೦ ರೂ.ಗಳ ಮಿತಿಯವರೆಗೂ ನಡೆಯುವುದಾಗಿದೆ. ವಾರದ ಸಾಲ ಶೇ. ೧೫% ಬಡ್ಡಿಧರದ ರೂಪದಲ್ಲಿ, ಹಣರೂಪಿಯಾಗಿ ಬಡ್ಡಿಸಮೇತ ಪಾವತಿಸತಕ್ಕದ್ದು. ವ್ಯಾಪಾರ, ಆಟೋರಿಕ್ಷಾ ರಿಪೇರಿ ಮುಂತಾದ ಕಾರ್ಯಗಳಿಗೆ ಪಡೆಯುವರಾಗಿದ್ದಾರೆ. ೩ ತಿಂಗಳ ಸಾಲವು ಪಡೆಯುವ ದಿನವೇ ೧೦,೦೦೦ರೂ.ಗೆ ೧೫೦೦ ರೂ. ಕಡಿತಮಾಡಿ ೮೫೦೦ ರೂ.ಗಳನ್ನು ನೀಡುತ್ತಾರೆ. ನಂತರ ೩ ತಿಂಗಳ ಕಾಲಾವಧಿಯಲ್ಲಿ ಪ್ರತಿದಿನ ೧೦೦ರೂ.ಗಳಂತೆ ೧೦,೦೦೦ ರೂ.ಗಳನ್ನು ಹಣರೂಪಿಯಾಗಿ ನೀಡಬೇಕು. ಇದೊಂದು ರೀತಿಯ ಚಕ್ರ ಬಡ್ಡಿಯಂತೆ. ಉಳಿದಂತೆ ಸಾಮಾನ್ಯವಾಗಿ ಮದುವೆ ಮತ್ತಿತರ ಗೃಹ ಖರ್ಚುಗಳಿಗೆ ನಿಗಧಿತ ಬಡ್ಡಿಧರದ ಆಧಾರದ ಮೇಲೆ ಪಡೆಯುವ ಸಾಲದ ಕ್ರಮವಾಗಿದೆ. ಬಡ್ಡಿಸಾಲದಲ್ಲಿ ಯಾವುದೇ ಕಾಲಾವಧಿ ಮಿತಿಯಿಲ್ಲದೆ ಪಾವತಿಸುವ ಹಣರೂಪಿ ಸಾಲವಾಗಿದೆ. ಪ್ರತಿತಿಂಗಳು ನಿಗದಿತಬಡ್ಡಿ ಹಣವನ್ನು ಪಾವತಿಸುವುದು. ಕೊನೆಗೆ ಹಣದ ಲಭ್ಯತೆಯ ದಿನ ಪಡೆದ ಹಣವನ್ನು ಪಾವತಿಸಬೇಕು. ಬಡ್ಡಿ ಹಣದ ವ್ಯವಸ್ಥೆಯಲ್ಲಿ ಒಂದು ಅನುಕೂಲವಿದ್ದರೂ ವಿಧಿಸುವ ಬಡ್ಡಿಯೂ ಸಹ ಶೇ. ೫ ರಿಂದ ೨೦ ರೂ ವರೆಗೂ ಕಂಡುಬರುತ್ತದೆ. ಇದು ಪಡೆಯುವ ಮತ್ತು ನೀಡುವ ವ್ಯಕ್ತಿಗಳ ಸಂಬಂಧದ ಮೇಲೆ ಆಧಾರವಾಗಿರುತ್ತದೆ.

ಕೋಷ್ಟಕ ೨.೧೫: ಕೊರಗರ ಸಾಲದ ಮೂಲಗಳು

ಕ್ರ.ಸ.	ಸಾಲದ ಮೂಲಗಳು	ಬಡ್ಡಿದರ	ಹಿಂತಿರುಗಿಸುವ ವಿಧಾನ
೧	ಲ್ಯಾಂಪ್ಸ್ ಸಹಕಾರ ಸಂಘ	೧೩% (ವಾರ್ಷಿಕ)	ಹಣರೂಪಿ
೨	ಸಹಕಾರಿ ಸಂಘ	೨-೩%	ಹಣರೂಪಿ
೩	ರಾಷ್ಟ್ರೀಕೃತ ಬ್ಯಾಂಕ್	೧%.	ಹಣರೂಪಿ
೪	ಖಾಸಗಿ ಲೇವಾದೇವಿದಾರರು	೫ ರಿಂದ ೨೦%	ಹಣರೂಪಿ

ಸಾಲ ನೀಡುವ ಮೂಲಗಳಲ್ಲಿ ಲ್ಯಾಂಪ್ ಸಹಕಾರ ಸಂಘ ಈ ಜಿಲ್ಲೆಗಳಲ್ಲಿ ಕಾರ್ಯೋನ್ಮುಖವಾಗಿದೆ. ಈ ಜಿಲ್ಲೆಗಳಲ್ಲಿ ಯಾವುದೇ ಅರಣ್ಯ ಉತ್ಪನ್ನ ಸಂಗ್ರಹಣೆ ಇಲ್ಲದೆ

ಇರುವ ಕಾರಣ ಲ್ಯಾಂಪ್ಸ್ ಸೊಸೈಟಿಯ ಸದಸ್ಯತ್ವ ಪಡೆದವರಿಗೆ ಅಲ್ಪಾವಧಿ ಸಾಲದ ನೆರವು ನೀಡಲಾಗುತ್ತಿದೆ. "ಲ್ಯಾಂಪ್ಸ್ ಸಂಸ್ಥೆಯು ಕೇವಲ ಕೊರಗರಿಗೆ ಮಾತ್ರ ನೆರವು ನೀಡುವುದಿಲ್ಲ. ತಾಲ್ಲೂಕು ವ್ಯಾಪ್ತಿಯಲ್ಲಿನ ಎಲ್ಲಾ ಬುಡಕಟ್ಟು ಸಮುದಾಯಗಳ ಸಮ್ಮಿಶ್ರಣದ ಸದಸ್ಯತ್ವ ನಮ್ಮಲ್ಲಿದೆ. ಸದಸ್ಯತ್ವ ಪಡೆದವರಿಗೆ ಸೊಸೈಟಿಯಲ್ಲಿನ ನಿಯಮಾವಳಿಗಳ ಪ್ರಕಾರ ಸಾಲ ಒದಗಿಸಲಾಗುತ್ತಿದೆ. ಸದಸ್ಯತ್ವ ಪಡೆದವರಲ್ಲಿ ಕೊರಗ ಸಮುದಾಯದವರು ತೀರಾ ಕಡಿಮೆ ನಮ್ಮಲ್ಲಿ. ನಾವು ವಾರ್ಷಿಕ ಶೇ. ೧೩% ಬಡ್ಡಿದರವನ್ನು ವಿಧಿಸುತ್ತಿದ್ದೇವೆ ಎನ್ನುತ್ತಾರೆ".[೪೯]

ಬಹುತೇಕ ಕೊರಗರಿಗೆ ಖಾಸಗಿ ಲೇವಾದೇವಿದಾರರ ಸಾಲದ ದಣಿಗಳೆ, ಆಧಾರ ಗಳಿಸುವ ಕಡಿಮೆ ಆದಾಯದಲ್ಲಿ ಬಹುಪಾಲು ಸಾಲಕ್ಕೆ ಮೀಸಲು. ಆದಾಯವನ್ನು ನಿರಾತಂಕವಾಗಿ ಖರ್ಚುಮಾಡುವ ಕೊರಗರಲ್ಲಿ ಉಳಿತಾಯ ಮೂಲಗಳು ಕಡಿಮೆ. "ಮಾತಿಗೆ ತಪ್ಪದ ಜನರು ಹೇಳಿದ ಸಮಯಕ್ಕೆ ಬಡ್ಡಿ, ಹಣ ಮರುಪಾವತಿ ಮಾಡುತ್ತಾರೆ. ಆದರಿಂದಲೇ ನಾವು ಹಣಕಾಸು ಸಹಾಯ ಕಾಲೋನಿಯ ಜನರಿಗೆ ಮಾಡುತ್ತೀವಿ. ನಮಗೆ ಯಾವುದೇ ಕಾಗದ ಪತ್ರಗಳು ಬೇಡ. ಕಾಲೋನಿಯಲ್ಲಿನ ಪರಿಚಿತ ವ್ಯಕ್ತಿ ನಮಗೆ ಸಹಾಯಮಾಡಿ ಅಂದರೆ ಸಾಕು. ನಾವು ಸಾಲ ನೀಡುತ್ತೇವೆ ಎನ್ನುತ್ತಾರೆ."[೫೦] ಕೊರಗರ ಕುಟುಂಬದ ಸದಸ್ಯನ ಮಾತಿಗೆ ಬಹಳ ಮಹತ್ವವಿರುವುದು ಇಲ್ಲಿ ಕಾಣಬಹುದು. ಹೀಗಾಗಿ ಎಲ್ಲಾ ಲೆಕ್ಕಾಚಾರಗಳು ಬಾಯಿಮಾತಿನಿಂದ ಮೌಖಿಕವಾಗಿಯೇ ನಡೆಯುತ್ತಿರುವುದು ತಿಳಿದುಬರುತ್ತದೆ.

ಸಮುದಾಯವನ್ನು ಅಭಿವೃದ್ಧಿಯತ್ತ ಕರೆದ್ಯೊಯಲು ಖಾಸಗಿ ಲೇವಾದೇವಿದಾರರ ಪ್ರಾಬಲ್ಯ ಕಡಿಮೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಕಲ್ಯಾಣಕಾರ್ಯಗಳು ಕಾಲೋನಿಗಳಲ್ಲಿ ಸಾಂಸ್ಥಿಕ ಸಾಲದ ವ್ಯವಸ್ಥೆಯ ನಿರ್ಮಾಣದಲ್ಲಿ ಮಹತ್ವದಪಾತ್ರವಹಿಸಬೇಕಿದೆ.

ಕುಡಿಯುವ ನೀರು: ಸರ್ಕಾರದ ಆದ್ಯ ಕರ್ತವ್ಯ ಜೀವ ಜಲ ಒದಗಿಸುವುದು. ಇಲ್ಲಿನ ಕುಡಿಯುವ ನೀರಿನ ಮೂಲ ಜಿಲ್ಲಾ ಪಂಚಾಯತ್ ಒದಗಿಸುತ್ತಿರುವ ಕೊಳವೆಗಳು ಅಥವಾ ನಲ್ಲಿ. ನಗರಸಭೆ ಮತ್ತು ಪುರಸಭೆಯ ವ್ಯಾಪ್ತಿಯಲ್ಲಿನ ಕಾಲೋನಿಗಳಿಗೆ ನಲ್ಲಿಗಳ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ಗ್ರಾಮೀಣ ಭಾಗದಲ್ಲಿರುವ ಕುಟುಂಬಗಳಿಗೆ ಹತ್ತಿರದಲ್ಲಿ ಕೈಪಂಪು ಮತ್ತು ಮಿನಿಟ್ಯಾಂಕ್‌ಗಳನ್ನು ನಿರ್ಮಾಣಮಾಡಲಾಗಿದೆ. ದೂರದ ಕುಟುಂಬಗಳು ನೀರಿನ ಬವಣೆ ಎದುರಿಸುತ್ತಿವೆ. ಅಲ್ಲಲ್ಲಿ ೧ ರಿಂದ ೪, ೫ ಕುಟುಂಬಗಳು ಬಹುದೂರದಿಂದ ನೀರನ್ನು ಹೊತ್ತು ತರಬೇಕಾದ ಪರಿಸ್ಥಿತಿ ಕಂಡುಬರುತ್ತದೆ.

ಕೋಷ್ಟಕ ೨.೧೬: ಕುಟುಂಬವಾರು ನೀರಿನ (ಕುಡಿಯುವ) ಅವಲಂಬನೆ ವಿವರ:

ಕ್ರ.ಸ.	ನೀರಿನ ಮೂಲಗಳು	ಅವಲಂಬಿತ ಕುಟುಂಬಗಳ ಸಂಖ್ಯೆ	ನೀರಿನ ಸಮಸ್ಯೆ ಎದುರಿಸುತ್ತಿರುವ ಕುಟುಂಬಗಳ ಸಂಖ್ಯೆ
೧	ಕೈಪಂಪು	೫೨	೧೪೧
೨	ಮಿನಿಟ್ಯಾಂಕ್	೮೧	
೩	ನಲ್ಲಿ/ಸಾರ್ವಜನಿಕ ಗಳ	೬೦	
೪	ಬಾವಿ	–	–
೫	ಕೆರೆ	–	–
೬	ಕಾಲುವೆ	೬	

ಬಹುತೇಕ ನಗರವಾಸಿಗಳು ಮತ್ತು ಮುಖ್ಯರಸ್ತೆಯಲ್ಲಿನ ಕುಟುಂಬಗಳು ನೀರಿನ ಸೌಲಭ್ಯ ಪಡೆದವುಗಳಾಗಿವೆ. ದೂರ ದೂರದ ಪ್ರದೇಶಗಳಲ್ಲಿ ನೆಲೆನಿಂತಿರುವ ಕುಟುಂಬಗಳು ನೀರಿನ ಸಮಸ್ಯೆ ಎದುರಿಸುತ್ತಿವೆ. ಇಲ್ಲಿಯೂ ದಾನಿಗಳು ಕೈಪಂಪುಗಳನ್ನು ನಿರ್ಮಿಸುವಲ್ಲಿ ಉದಾರ ನೆರವು ನೀಡಿರುವುದು ಕಂಡುಬರುತ್ತದೆ. ಆದರೂ ೧೪೧ ಕುಟುಂಬಗಳು ಕುಡಿಯುವ ನೀರಿಗಾಗಿ ಸುಮಾರು ಮೈಲಿ ನಡೆದು ಹೋಗಿ ಹೊತ್ತು ತರಬೇಕಾದ ಪರಿಸ್ಥಿತಿ ಇದೆ. ಇದಕ್ಕೆ ಪ್ರತ್ಯೇಕ ವಾಸವು ಕಾರಣವೆನ್ನಬಹುದಾಗಿದೆ.

ಸಮಾಜದ ಶ್ರೀಮಂತ ದಾನಿಗಳು ನೀರು ಒದಗಿಸುವಲ್ಲಿ ಪಾತ್ರ ವಹಿಸಿರುವುದರಿಂದ ನೀರಿನ ಸಮಸ್ಯೆ ಸಮಸ್ಯೆಯಾಗಿಲ್ಲ. ಒಂದು ಅಥವಾ ಎರಡು ಕುಟುಂಬಗಳು ನೆಲೆಸಿರುವ ಕಡೆಗಳಲ್ಲಿ ಸೌಲಭ್ಯವಿಲ್ಲ. "ನಮ್ಮ ಶಾನುಭೋಗರು ಸಹಾಯ ಮಾಡುತ್ತಾರೆ. ನಮ್ಮ ಸಮಸ್ಯೆಗಳಿದ್ದರೆ ನಾವು ಅವರಲ್ಲಿ ಹೇಳಿಕೊಳ್ಳುತ್ತೇವೆ. ಸರ್ಕಾರದವರು ಏನು ಮಾಡಿಲ್ಲ ಎನ್ನುತ್ತಾರೆ".[೫೧] ಕುಡಿಯುವ ನೀರು ಒದಗಿಸುವಲ್ಲಿ ದಾನಿಗಳ ಪಾತ್ರ ಕಡೆಗಣಿಸುವಂತಿಲ್ಲ. ಕೊರಗರ ಸೌಲಭ್ಯವಂಚಿತ ಕುಟುಂಬಗಳತ್ತ ಸರ್ಕಾರದ ಯೋಜನೆಗಳು ಮುಖಮಾಡಬೇಕಿದೆ.

ಮನೆ: ಕುಟುಂಬದ ಸದಸ್ಯರ ರಕ್ಷಾ ಕವಚ. ಮನೆಯ ನಿರ್ಮಾಣದಲ್ಲಿ ಆಯಾ ಸಾಂಸ್ಕೃತಿಕ ಪರಿಸರದ ಪ್ರಭಾವ ಪ್ರಧಾನವಾಗಿ ಕಂಡುಬರುತ್ತದೆ. ಕೊರಗರಲ್ಲಿ ಮನೆಗಳಿಗೆ ಒಂದು ವಿಶೇಷತೆ ಕಂಡುಬರುತ್ತದೆ. ಸರ್ಕಾರಿ ವಸತಿ ಗೃಹಗಳನ್ನು ಹೊರತು ಪಡಿಸಿದಲ್ಲಿ ಬಹುತೇಕ ಮನೆಗಳು ಮಣ್ಣಿನ ಇಟ್ಟಿಗೆಯಿಂದ ನಿರ್ಮಾಣಗೊಂಡ ಹೆಂಚಿನಮನೆಗಳಾಗಿವೆ. ಇಂತಹ ಮನೆಗಳ ನಿರ್ಮಾಣದಲ್ಲಿ ದಾನಿಗಳು, ಸ್ವಯಂಸೇವಾ ಸಂಸ್ಥೆಗಳು ಉದಾರ ಕೊಡುಗೆಯನ್ನೇ ನೀಡಿದ್ದಾರೆ. ಅಭಿವೃದ್ಧಿಯೋಜನೆಯ ಐ.ಟಿ.ಡಿ.ಪಿ ಮತ್ತು ಐ.ಆರ್.ಡಿ.ಪಿ ಗ್ರಾಮಾಂತರದ ಪ್ರದೇಶಗಳಲ್ಲಿ ಮನೆಗಳ ನಿರ್ಮಾಣ ಮಾಡಿಕೊಟ್ಟಿದೆ. ಸರ್ಕಾರದ ಯೋಜನೆಯಲ್ಲಿ

ನಿರ್ಮಾಣಗೊಂಡ ಮನೆಗಳು ಬಹಳ ಚಿಕ್ಕದಾದ ವಿಸ್ತೀರ್ಣದಿಂದ ಕೂಡಿವೆ. ಗ್ರಾಮಾಂತರ ಪ್ರದೇಶದಿಂದ ಜನರು ನಗರಕ್ಕೆ ಉದ್ಯೋಗಕ್ಕಾಗಿ ವಲಸೆ ಬರುತ್ತಿರುವವರು ಹೆಚ್ಚಿನವರು ಕಾಲೋನಿಗಳಲ್ಲಿ ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಸರ್ಕಾರಿ ನೌಕರರಾಗಿರುವರು ಮತ್ತು ನಗರಸಭೆ ಮತ್ತು ಮಹಾನಗರಪಾಲಿಕೆಯಲ್ಲಿ ನೌಕರರಾಗಿರುವರು ವಸತಿ ಗೃಹಗಳನ್ನು ಪಡೆದಿದ್ದಾರೆ. ವಸತಿ ಗೃಹಗಳು ಸಹ ಚಿಕ್ಕದಾದ ೧ ಕುಟುಂಬ ವಾಸಿಸುವ ಅಂದರೆ ಗಂಡ, ಹೆಂಡತಿ ಮಗು ವಾಸಿಸುವಷ್ಟು ಮಟ್ಟಿಗೆ ಇದೆ. ಇಂತಹ ವಸತಿ ಗೃಹಗಳಲ್ಲೂ ಜನಸಂಖ್ಯೆ ಹೆಚ್ಚಾಗುತ್ತಿದೆ. ಮನೆಯ ಗುಣಮಟ್ಟವಾಗಲೀ, ನೈರ್ಮಲ್ಯದ ಕಡೆಗಾಗಲಿ ಗಮನ ನೀಡದೇ ವಾಸಿಸುತ್ತಿರುವುದು ಕಾಲೋನಿ ಕಂಡ ತಕ್ಷಣ ಕಂಡು ಬರುತ್ತದೆ. ಅತಿ ಹೆಚ್ಚು ಜನರು ನಗರ ಮುಖಿಗಳಾಗುತ್ತಿರುವುದರಿಂದ, ನಗರದ ಕಾಲೋನಿಯಲ್ಲಿ ಸ್ಥಳದ ಅವಕಾಶ ಕಡಿಮೆಯಾಗಿದೆ ಇದರಿಂದ ಸಣ್ಣ ಸಣ್ಣ ಗೂಡುಗಳಂತೆ ತಾವೇ ಗುಡಿಸಲುಗಳು ಮನೆಗಳು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ.

ಕೋಷ್ಟಕ ೨.೧೭: ಕೊರಗ ಸಮುದಾಯದ ಮನೆಗಳ ಮಾದರಿ:

ಕ್ರ.ಸ.	ಮನೆಗಳ ಮಾದರಿ	ಕುಟುಂಬಗಳು	ನಿರ್ಮಾಣ ಮಾಡಿಕೊಟ್ಟವರು
೧	ಹೆಂಚಿನ ಮನೆ	೬೧	ಸರ್ಕಾರ+ದಾನಿಗಳು
೨	ಗುಡಿಸಲು	೧೦೭	ಸ್ವಂತ ನಿರ್ಮಾಣ
೩	ಆರ್.ಆರ್.ಸಿ. ಮನೆ	೧೩	ಸ್ವಂತ ನಿರ್ಮಾಣ
೪	ಸರ್ಕಾರದ ವಸತಿ ಗೃಹ	೧೦೨	ನಗರಪಾಲಿಕೆ
೫	ಶೀಟು ಹಾಕಿದ ಮನೆ	೨೭	ಅಂಬೇಡ್ಕರ್ ಯೋಜನೆ

ಸಮೀಕ್ಷೆಯಲ್ಲಿನ ೩೪೦ ಕುಟುಂಬಗಳಲ್ಲಿ ೧೦೨ ಕುಟುಂಬಗಳು ಸರ್ಕಾರದ ವಸತಿಗೃಹಗಳಾಗಿವೆ. ಉಳಿದಂತೆ ಹೆಚ್ಚಿನ ಮನೆಗಳು ಮತ್ತು ಗುಡಿಸಲುಗಳಾಗಿರುವುದು ಕಂಡುಬರುತ್ತದೆ. ಸುತ್ತಮುತ್ತಲಿನ ತೆಂಗಿನ ಗರಿಗಳು, ತಾಳೆ ಗರಿಗಳಿಂದ ಕಾಲೋನಿಗಳಲ್ಲಿ ಗುಡಿಸಲುಗಳು ನಿರ್ಮಾಣ ಮಾಡಿಕೊಂಡಿರುವುದು ಕಾಣಬರುತ್ತದೆ. ಹೆಚ್ಚಿನ ಜನವಸತಿ ಇರುವ ಕಡೆ ಇತ್ತೀಚಿಗೆ ಸರ್ಕಾರದ ವತಿಯಿಂದ ಪುನರ್‌ವಸತಿ ಕಲ್ಪಿಸಲಾಗಿದೆ. ಕುಂದಾಪುರ ತಾಲ್ಲೂಕಿನ ಮೂದೂರು ಗ್ರಾಮದ ಪಕ್ಕದಲ್ಲಿಯೇ ನಿರ್ಮಿಸಲಾಗಿರುವ ಉದಯನಗರದ ಕಾಲೋನಿ ೨೦೦೦–೨೦೦೧ನೇ ಸಾಲಿನಲ್ಲಿ ೧ ಕೋಟಿ ರೂ.ಗಳ ವೆಚ್ಚದಲ್ಲಿ ಕಾಲೋನಿ ನಿರ್ಮಿಸಲಾಗಿದೆ. ಕುಂದಾಪುರದಿಂದ ೩೦ ಕಿ.ಮೀ. ದೂರದಲ್ಲಿರುವ ಈ ಕಾಲೋನಿಯಲ್ಲಿ ಸುಮಾರು ೫೦ ಮನೆಗಳ ನಿರ್ಮಾಣಮಾಡಿದ್ದಾರೆ. ನಿರ್ಮಾಣ ಮಾಡಿದ ಮರು ವರ್ಷವೇ ಮುರಿದು ಬಿದ್ದಿವೆ. ಕಳಪೆ ಕಾಮಗಾರಿ, ಮೂಲಭೂತ ಸೌಲಭ್ಯಗಳಿಲ್ಲದ ಕಾಲೋನಿಯ ಮನೆಗಳಲ್ಲಿ ಕೆಲವೇ ಮಂದಿ ವಾಸವಿದ್ದಾರೆ. ಉಳಿದವುಗಳು ಮುರಿದು ಬಿದ್ದಿವೆ. ಇಂತಹ ವಸತಿ ವ್ಯವಸ್ಥೆ ಒಂದು

ಸಮಸ್ಯೆಯಾಗಿ ಕಂಡುಬರುತ್ತದೆ.ಮೂಲನಿವಾಸಿ ಬುಡಕಟ್ಟುಗಳಲ್ಲೇ ಅತ್ಯಂತ ಹೀನ ಸ್ಥಿತಿಯಿಂದ ಭೌತಿಕವಾಗಿ, ಮಾನಸಿಕವಗಿ ನೊಂದು ಎಚ್ಚೆತ್ತಿರುವ ಕೊರಗ ಸಮುದಾಯ ಇಂದು ಜಾತೀಯತೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸಿಕೊಳ್ಳುವಂತೆ ಆಗಿದೆ. ಆದರೂ ಬದುಕಿನ ವಿವಿಧ ಮಜಲುಗಳಲ್ಲಿ ಸಮುದಾಯದ ಸಂಪ್ರದಾಯ, ನಡೆ, ರೂಢಿ ಪದ್ಧತಿಗಳು ಉಳಿಸಿಕೊಂಡೇ ಹೊಸತನವನ್ನು ಬರಮಾಡಿಕೊಳ್ಳುತ್ತಿದ್ದಾರೆ. ತಮ್ಮ ಸಮುದಾಯದ ಹಿತ ರಕ್ಷಣೆಗಾಗಿ ಕುಲದೈವ, ಹಿರಿಯರ ಸೇವೆ, ಶವಸಂಸ್ಕರಗಳು ಉಳಿಸಿಕೊಂಡಿರುವರಾಗಿದ್ದಾರೆ. ನಗರೀಕರಣದ ಪ್ರಭಾವ ಬೀರಿದ್ದರೂ, ಕುಲಾಚಾರಗಳಲ್ಲಿ ಬಹಳಷ್ಟು ಉಳಿಸಿ ನಡೆಸಿಕೊಂಡು ಬರುತ್ತಿದ್ದಾರೆ. ಸಂಘರ್ಷದ ನಡುವೆಯೂ ವಿದ್ಯಾವಂತ ಕೊರಗರಾಗಿರುವುದು ಒಂದು ವಿಶೇಷತೆ.

ಆರಾಧ್ಯ ದೈವ	: ತನಿಯಾ ಕೊರಗ, ಸೂರ್ಯ ದೇವರು
ಭಾಷೆ	: ತನ್ನದೇ ಆದ ಭಾಷೆಯನ್ನು ಬೈಗುಳ್ಳಕ್ಕೆ ಬಳಸುವವರು, ಉಳಿದಂತೆ ತುಳು, ಕನ್ನಡ ಭಾಷೆಯನ್ನು ಬಳಸುತ್ತಾರೆ.
ನೆಲೆ	: ಕರ್ನಾಟಕದ ದ.ಕನ್ನಡ ಮತ್ತು ಉಡುಪಿ ಜಿಲ್ಲೆಗಳಾಗಿವೆ.
ಆಹಾರ ಪದ್ಧತಿ	: ಮಾಂಸಾಹಾರ, ಸಸ್ಯಹಾರ.
ಸಾಮಾಜಿಕ ಸ್ಥಾನಮಾನ	: ಯಾವುದೇ ಸ್ಥಾನಮಾನಗಳು ಪಡೆದಿಲ್ಲ. ಪ್ರಗತಿಯ ದಿಕ್ಕಿನಲ್ಲಿದ್ದಾರೆ.
ಆಚರಣೆಗಳು	: ಮರಣಸಂಬಂಧಿ, ಜೀವನಾವರ್ತದ, ಆಚರಣೆ ಸತ್ತವರನ್ನು ಊಳುತ್ತಾರೆ.

ಸಾಮಾಜಿಕ ವ್ಯವಸ್ಥೆ: ಸಮುದಾಯದ ಸಮಸ್ತ ಬದುಕಿನ ಭಾಗವೇ ಸಾಮಾಜಿಕ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಸರಳ ರೀತಿಯಿಂದ ಕೂಡಿರುವ ಒಂದು ವಿಶೇಷತೆಯ ಪದ್ಧತಿ ಮೈಗೂಡಿಸಿಕೊಂಡಿರುವರು. ಕೊರಗರು ಬದುಕುತ್ತಿರುವ ಕಾಲೋನಿಗಳಲ್ಲಿ ಪರಾಂಪರಿಕವಾಗಿ ಉಳಿದು ಬಂದ ಪದ್ಧತಿಯನ್ನು ಒಂದೆಡೆ ಮುಂದುವರೆಸುತ್ತಿದ್ದಾರೆ.

ಸಮುದಾಯದಲ್ಲಿನ ಹಿರಿಯರ ಸ್ಥಾನಮಾನವನ್ನು ಗೌರವದಿಂದ ಕಾಣಲಾಗುತ್ತಿದೆ. ಎಷ್ಟೇ ಭೌತಿಕ ಮತ್ತು ಜೈವಿಕ ಬದಲಾವಣೆಗಳಾದರೂ ಕಾಲೋನಿಯಲ್ಲಿ ನ್ಯಾಯ ಪದ್ಧತಿ ಹಿರಿಯರಿಂದ ನಡೆಯುತ್ತಿದೆ. ಕೊರಗರ ಹಿರಿಯ ತನಿಯಕೊರಗ ಮತ್ತು ಕೊರಗಜ್ಜನ ಸಮಾಧಿಗಳ ಸ್ಥಳದಲ್ಲಿ ಎಲ್ಲರೂಸೇರಿ ಮರಣಸಂಬಂಧಿ ಆಚರಣೆಗಳನ್ನು ನೆರವೇರಿಸುತ್ತಿದ್ದಾರೆ. ಕಾಲೋನಿಯಲ್ಲಿ ಯಾರಾದರೂ ಸತ್ತರೆ, ಕಾಲೋನಿಯ ಶುದ್ಧಿ. ಕಾಲೋನಿಯಲ್ಲಿನ ದೇವತೆಗೆ ಪರಿಹಾರ, ಇಡೀ ಕಾಲೋನಿಯ ಜನರಿಗೆ ಮಾಂಸಹಾರದ ಊಟ ರಾತ್ರಿಪೂರ್ತಿ ದೈವದ ಪೂಜೆ ಪುರಸ್ಕಾರಗಳು ಉಳಿಸಿಕೊಂಡು ಬರುತ್ತಿದ್ದಾರೆ.

ಹುಟ್ಟಿನಿಂದ ಸಾವಿನವರೆಗೂ ಕೆಲವು ಸಂಸ್ಕಾರಗಳನ್ನು ಪರಂಪರಾಗತವಾಗಿ ನಡೆಸಿಕೊಂಡು ಬರುವರಾಗಿದ್ದಾರೆ. ಹೆರಿಗೆಯು ತಾಯಿಯ ಮನೆಯಲ್ಲಿ ನಡೆಯುತ್ತಿದೆ. ನಗರದಲ್ಲಿರುವ ಕುಟುಂಬಗಳು ಸಾರ್ವಜನಿಕ ಆಸ್ಪತ್ರೆಗಳ ಮೋರೆ ಹೋಗಿದ್ದರೂ ನಂತರ, ಗಿಡ ಸೊಪ್ಪುಗಳ ರಸ ಸೇವನೆ ಇಂಗ್ಲಿಷ್ ಔಶಧಿಗಳ ಉಪಯೋಗದೊಂದಿಗೆ ಆಧುನಿಕ ಹೆಸರುಗಳನ್ನೂ ಸಹ ಬಳಕೆಮಾಡುವವರಾಗಿದ್ದಾರೆ. ಅಂತರಜಾತಿ, ಧರ್ಮ, ಬುಡಕಟ್ಟುಗಳೊಂದಿಗೆ ಪ್ರೀತಿಸಿ ಮದುವೆಯಾಗುವ ತಮ್ಮದೇ ಸ್ವತಂತ್ರ ಜೀವನದ ಕುಟುಂಬದ ನಿರ್ವಹಣೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದಾರೆ. ಇತರರಿಂದ ಉತ್ತಮ ವಿಧಾನವನ್ನು ಬಳಸಿಕೊಳ್ಳುವ ತಮ್ಮದೇ ಸಂಪ್ರದಾಯ ಮುಂದುವರೆಸುತ್ತಿರುವ ಲಕ್ಷಣಗಳು ಕಾಣಬಹುದು.

ನ್ಯಾಯ ಪದ್ಧತಿ ಮತ್ತು ಭಾಷೆ, ಶಿಕ್ಷಣದಲ್ಲಿ ಪರಿವರ್ತನೆಯಾದರೂ ಪ್ರಸ್ತುತ ಬದುಕಿನ ಕ್ರಮ, ನಂಬಿಕೆಗಳು, ಸಂಬಂಧಗಳು ಇತ್ಯಾಧಿ ಎಲ್ಲವನ್ನೂ ಅವಲೋಕಿಸಿದಾಗ ತುಂಬಾ ಸಹಜವೆಂಬಂತೆ ಕಂಡುಬರುತ್ತಾರೆ ನಿರ್ಣಯಗಳ, ಜವಾಬ್ದಾರಿಗಳಲ್ಲಿ ಪುರುಷ ಮಹಿಳೆಯರು ಸಮಾನವಾಗಿ ಪಾತ್ರರಾಗುತ್ತಿದ್ದಾರೆ.

****

ಅಡಿಟಿಪ್ಪಣಿಗಳು:

1. ರಾಘವೇಂದ್ರರಾವ್, 1886 ಕೊರಾಗಾಸ್: ಮದ್ರಾಸು ಕ್ರಿಶ್ಚಿಯನ್ ಕಾಲೇಜಿನ ವಾರ್ಷಿಕ ಸಂಚಿಕೆ, ಮದ್ರಾಸು.
2. Economic Development among the Jenukuruba man in India Vo. Mishra - 1975.
3. Economic Development among the Jenukuruba man in India Vo. Mishra – 1975.
4. ಮಧು: ಕರ್ನಾಟಕದ ಬುಡಕಟ್ಟು ಜನಾಂಗಗಳ ಅಭಿವೃದ್ಧಿ:ವಿಮೋಚನಾ ಪ್ರಕಾಶನ, ಚಿತ್ರದುರ್ಗ.
5. B.S. ಉಮಾಮಹೇಶ್ವರಿ : ಕರ್ನಾಟಕ ಇತಿಹಾಸ(1399-1980) ಗೌರಿಪ್ರಕಾಶನ, ಚಿತ್ರದುರ್ಗ
6. D.E.S ಕರ್ನಾಟಕ ಸರ್ಕಾರ, ಕೈಪಿಡಿ
7. ಆರ್ಥಿಕ ಮತ್ತು ಸಾಂಖಿಕ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ಸರ್ಕಾರ
8. Karnataka State Gazetter. Editor, B.S. Satyanarayana
9. Karnataka State Gazetter. Editor, B.S. Satyanarayana
10. ಆರಣ್ಯ ಕಾಯಿದೆ ಆದಿನಿಯಮ : ಲಾಯರ್ಸ್ ಬುಕ್ ಹೌಸ್
11. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ಸರ್ಕಾರ
12. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು, ಕರ್ನಾಟಕ ಸರ್ಕಾರ
13. ಕೆ.ಮಧು: ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ ವಿಮೋಚನಾ ಪ್ರಕಾಶನ

14. ಎಂ.ಎಂ. ಬಸವರಾಜು, ಜೇನುಕುರುಬರು ಅಪ್ರಕಟಿತ ಕ್ಷೇತ್ರಕಾರ್ಯವರದಿ, ಮೈ.ವಿ.ವಿ

15. ಸ್ವರಕ್ 1894 ದಕ್ಷಿಣ ಕನ್ನಡ ಜಿಲ್ಲಾ ಮ್ಯಾನುವೆಲ್, ಮದ್ರಾಸ್

16. ಪ್ರೊ. ಅರವಿಂದ ಮಾಲಗತ್ತಿ; 2004 : ಜಾನಪದ ಅಭಿಯಾನ : ರಾಜ್ ಪ್ರಕಾಶನ ಮೈ.

17. ರಾಘವೇಂದ್ರರಾವ್ ೧೮೮೬, ಕೂರಾಗ್ರಸ್ ಕ್ರಿಶ್ಚಿಯನ್ ಕಾಲೇಜಿನ ವಾರ್ಷಿಕ ಸಂಚಿಕೆ, ಮದ್ರಾಸು.

18. ಡಾ॥ ಬಿ.ಆರ್. ಅಂಬೇಡ್ಕರ್ ಬರಹ ಮತ್ತು ಭಾಷಣಗಳು, ಸಂಪುಟ 5

19. ಡಾ॥ S.P. ಪದ್ಮಪ್ರಸಾದ್: 2004: ಶಿಕ್ಷಣ ಮತ್ತು ರಾಷ್ಟ್ರೀಯ ಕಾಳಜಿಗಳು: ಸುಮುಖಪ್ರಕಾಶನ, ವಿಧ್ಯಾರಣ್ಯಪುರ, ಬೆಂಗಳೂರು-೨೩

ಸಾಲೆತ್ತೂರು ಬಿ.ಎ.

20. ಡಾ॥ ಎಸ್.ಪಿ. ಪದ್ಮಪ್ರಸಾದ್: 2004: ಶಿಕ್ಷಣ ಮತ್ತು ರಾಷ್ಟ್ರೀಯ ಕಾಳಜಿಗಳು: ಸುಮುಖಪ್ರಕಾಶನ, ವಿಧ್ಯಾರಣ್ಯಪುರ, ಬೆಂಗಳೂರು-23

21. ಡಾ॥ ಎಸ್. ಮಂಗಳಮೂರ್ತಿ: ಭಾರತ ಸಂವಿಧಾನ, ಮಾನವಹಕ್ಕುಗಳು ಮತ್ತು ಪರಿಸರ: ಚೇತನ ಬುಕ್‌ಹೌಸ್, ಮೈ.

22. ಡಾ॥ ಎಸ್. ಮಂಗಳಮೂರ್ತಿ: ಭಾರತ ಸಂವಿಧಾನ, ಮಾನವಹಕ್ಕುಗಳು ಮತ್ತು ಪರಿಸರ: ಚೇತನ ಬುಕ್‌ಹೌಸ್, ಮೈ.

23. ಡಾ॥ ಎಸ್. ಮಂಗಳಮೂರ್ತಿ: ಭಾರತ ಸಂವಿಧಾನ, ಮಾನವಹಕ್ಕುಗಳು ಮತ್ತು ಪರಿಸರ: ಚೇತನ ಬುಕ್‌ಹೌಸ್, ಮೈ.

24. ಡಾ॥ ಎಸ್. ಮಂಗಳಮೂರ್ತಿ: ಭಾರತ ಸಂವಿಧಾನ, ಮಾನವಹಕ್ಕುಗಳು ಮತ್ತು ಪರಿಸರ: ಚೇತನ ಬುಕ್‌ಹೌಸ್, ಮೈ.

25. ಯೋಜನಾ ಮಾಸಪತ್ರಿಕೆ: 2001 ಫೆಬ್ರವರಿ, ಭಾರತ ಸರ್ಕಾರ

26. ರೇಣುಕ ಪಟ್ನಾಯಕ್: Ecology and Development: Basu P New delhi.

27. ಡಾ॥ S.P. ಪದ್ಮ ಪ್ರಸಾದ್: ೨೦೦೪ ಶಿಕ್ಷಣ ಮತ್ತು ರಾಷ್ಟ್ರೀಯ ಕಾಳಜಿಗಳು: ಸಮುಖಪ್ರಕಾಶನ, ಬೆಂ

28. ಡಾ॥ ಚೆನ್ನಣ್ಣವಾಲೀಕಾರ: ಕರ್ನಾಟಕ ದೇವದಾಸಿಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ರಾಜಕೀಯ ಸಮಸ್ಯೆಗಳ ಸಮಗ್ರ ಆಧ್ಯಯನ

29. ಯೋಜನಾ ಮಾಸಪತ್ರಿಕೆ: ಮೆ 2003, ಭಾರತ ಸರ್ಕಾರ.

30. T.R. ಚಂದ್ರಶೇಖರ್: ಅಮಾರ್ತ್ಯಸೇನ್‌ರ ಅಭಿವೃದ್ಧಿ ಕಥನ, ಪ್ರಸಾರಾಂಗ ಕ.ವಿ.ವಿ.ಹಂಪಿ.

31. ಡಾ॥ H.T. ರಾಮಲಿಂಗಪ್ಪ: 1993: ಪ್ರಪಂಚದ ಇತಿಹಾಸ: ಕಲಾಪ್ರಕಾಶನ, ಬೆಂ

32. ವಕ್ತೃ: ಕಾಳಸ್ವಾಮಿ, ದಾಗಪುರ ಘಟಕ ೪, ಹೂಣಸೂರು ಸಂದರ್ಶನ 22/06/04

33. ಪರಿಶಿಷ್ಟವರ್ಗಗಳ ಕಲ್ಯಾಣ ನಿರ್ದೇಶನಾಲಯ : ಕರ್ನಾಟಕ ಸರ್ಕಾರ, ಜನಗಣತಿ ವರದಿ 2001

34. ಭಾರತ ಸರ್ಕಾರದ ಜನಗಣತಿ 2001

35. ಡಾ॥ ಪ್ರಭಾಕರ ಶಿಶಿಲ : 2000 : ಭಾರತದ ಅರ್ಥವ್ಯವಸ್ಥೆಯ ಸಮಸ್ಯೆಗಳು

36. ವಿ.ವಿ.ಕೆ. ಸುಬ್ಬರಾಜು : ಸುರಾ ಇಯರ್ ಬುಕ್ 2005, ಕಾಲೇಜ್ ಆಫ್ ಕಾಂಪಿಟೇಶನ್, ಮ.

37. ವಕ್ತೃ : ರಾಮಕೃಷ್ಣಪ್ಪ, ದಾಗಪುರ ಘಟಕ 4, ಹುಣಸೂರು ಸಂದರ್ಶನ 21/06/04

38. ವಕ್ತೃ : ಜವರಯ್ಯ, ಬಲ್ಲೇನಹಳ್ಳಿ, ಮೈಸೂರು ಜಿಲ್ಲೆ, ಸಂದರ್ಶನ, 21/06/2004

39. ದೊಡ್ಡಮುನಿಲೋಕರಾಜು, 2005: ಕರ್ನಾಟಕ ಸಿಂದೋಳ್ಳು ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಪಿ.ಎಚ್.ಡಿ. ಪ್ರಬಂಧ ಕ.ವಿ.ವಿ.

40. ಕೆ.ಶ್ರೀನಿವಾಸ ರೆಡ್ಡಿ: ಸಮಾಜಶಾಸ್ತ್ರ: ಚೈತ್ರ ಪ್ರಕಾಶನ, ವಿಜಯನಗರ, ಬೆಂ.

41. ಕೆ.ಶ್ರೀನಿವಾಸ ರೆಡ್ಡಿ: ಸಮಾಜಶಾಸ್ತ್ರ: ಚೈತ್ರ ಪ್ರಕಾಶನ, ವಿಜಯನಗರ, ಬೆಂ.

42. ಕೆ.ಶ್ರೀನಿವಾಸ ರೆಡ್ಡಿ: ಸಮಾಜಶಾಸ್ತ್ರ: ಚೈತ್ರ ಪ್ರಕಾಶನ, ವಿಜಯನಗರ, ಬೆಂ.

43. ವಕ್ತೃ : ವೆಂಕಟೇಶ, ಕೊಳವಿಗೆ; ಸಂದರ್ಶನ ದಿನಾಂಕ 22/06/2004

44. Edgar Thurstion : Caste and Tribes of Southern India : Vo 3

45. ಪ್ರೊ. ಪುರುಷೋತ್ತಮ ಬಿಳಿಮಲೆ; ಉಪಸಂಸ್ಕೃತಿ ಮಾಲೆ

46. ಭಾರತದ ಜನಗಣತಿ ವರದಿ 2001, ಭಾರತ ಸರ್ಕಾರ

47. ಭಾರತದ ಜನಗಣತಿ ವರದಿ 2001, ಭಾರತ ಸರ್ಕಾರ

48. ವಕ್ತೃ : ಸುರೇಶ್ ಹಂಗಳೂರು : A.E. ಮೆಸ್ಕಾಂ, ಕುಂದಾಪುರ, ಸಂದರ್ಶನ 14/03/05

49. ವಕ್ತೃ : ಶಶಿಧರ ಕೆ. ಊರ್ವಸರ್ಕಲ್ ಮಂಗಳೂರು, ಸಂದರ್ಶನ 05/03/05

50. ವಕ್ತೃ : ವಾಸುನಾಯಕ್ ಅಧ್ಯಕ್ಷ, ಲ್ಯಾಂಪ್ಸ್ ಸೊಸೈಟಿ, ಕುಂದಾಪುರ, ಸಂದರ್ಶನ 14/03/05

51. ವಕ್ತೃ : ಖಾಸಗಿ ಹಣಕಾಸು ನೀಡುವವ, ರಮೇಶ್ ಶೆಟ್ಟಿ, ಕೋಡಿಕಲ್, ಮಂ. ಸಂದರ್ಶನ 06/03/05

52. ವಕ್ತೃ : ಶ್ರೀಮತಿ ಅಮ್ಮಣಿ: ಕೋಟೆಶ್ವರ, ಕುಂದಾಪುರ ತಾ. ಸಂದರ್ಶನ 15/03/05

ಅಧ್ಯಾಯ ೩

ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಸಾಮಾಜಿಕ – ಆರ್ಥಿಕ ಸ್ಥಿತಿಗತಿ ವಿಶ್ಲೇಷಣೆ:

೧. ಜೇನುಕುರುಬ ಸಮುದಾಯದ ಸಾಮಾಜಿಕ–ಆರ್ಥಿಕ ಸ್ಥಿತಿ.

೨. ಕೊರಗ ಸಮುದಾಯದ ಸಾಮಾಜಿಕ–ಆರ್ಥಿಕ ಸ್ಥಿತಿ.

೩. ಶೈಕ್ಷಣಿಕ ಮತ್ತು ಆರ್ಥಿಕ ಮಾಹಿತಿಯ ವಿಶ್ಲೇಷಣೆ

ರಾಜ್ಯದ ೫ ಜಿಲ್ಲೆಗಳಲ್ಲಿ ನೆಲೆನಿಂತ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರದಲ್ಲಿನ ಜೀವನಕ್ರಮದ ಸ್ಥೂಲ ಪರಿಚಯ ಈ ಹಿಂದಿನ ಅಧ್ಯಾಯದಲ್ಲಿ ಕೊಡಲಾಗಿತ್ತು. ಪ್ರತಿಯೊಂದು ಪರಿಸರ ಕ್ರಮದಂತೆ ಸಾಮಾಜಿಕ–ಆರ್ಥಿಕ ಜೀವನಕ್ರಮ ಮತ್ತು ಉತ್ಪಾದನೆಯನ್ನು ಹೊಂದಿರುವ, ವಿವಿಧ ಘಟಕಗಳ ಕ್ಷೇತ್ರಾಧಾರಿತವಾದ ಮಾಹಿತಿಯ ಮೇರೆಗೆ ಎರಡು ಸಮುದಾಯಗಳಲ್ಲಿನ ಸಾಮಾಜಿಕ–ಆರ್ಥಿಕ ಜೀವನ ಮಟ್ಟವನ್ನು ತಿಳಿಯಲು ಈ ಬಗ್ಗೆ ಅವಶ್ಯಕವಾದ ಮಾಹಿತಿಗ್ರಂಥಗಳು; ಅಲ್ಲದೇ ಅನೇಕ ಜನರ ಒಡಗೂಡಿ, ನಿಷ್ಠವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಲ್ಲಿ ಹೆಚ್ಚಿನ ವಕ್ತೃಗಳು ತಮಗೆ ಏನೂ ತಿಳಿಯದು ಎಂದು ಅಭಿಪ್ರಾಯ ತಿಳಿಸುತ್ತಾರೆ. ಎಷ್ಟೋ ಜನರು ಈ ರೀತಿ ಬಂದು ಬರೆದುಕೊಂಡು ಹೋಗಿದ್ದಾರೆ. ಅವರುಗಳು ಒಂದು ಸ್ವಲ್ಪವಾದರೂ ಕಾಲೋನಿಗಳ ಸಮಸ್ಯೆಗಳಿಗೆ ಪರಿಹಾರ ತೋರಿಸಿಲ್ಲ. ಈಗ ನೀವೂ ಏನು ಮಾಡುತ್ತೀರಾ?. ಎಂದು ಕೇಳುವ ಕಾರಣಗಳ ಮಧ್ಯೆಯೇ ವಸ್ತುನಿಷ್ಠವಾದ ಮಾಹಿತಿಯನ್ನು ಗೊತ್ತಿಲ್ಲವೆಂದು ಹೇಳುವವರೇ ಹೆಚ್ಚು. ಆದಾಗ್ಯೂ ಈ ಬಗ್ಗೆ ವಸ್ತುನಿಷ್ಠ ಮಾಹಿತಿ ಆಯಾ ಸಮುದಾಯದ ಹಿರಿಯ ವಕ್ತೃಗಳ ಮನವೊಲಿಸಿ ಅವರುಗಳಿಂದಲೇ ತಿಳಿದು ಇಲ್ಲಿ ಎರಡು ಭಾಗಗಳಲ್ಲಿ ವಿಶ್ಲೇಷಿಸಲಾಗಿದೆ.

೧. ಜೇನುಕುರುಬ ಸಮುದಾಯದ ಸಾಮಾಜಿಕ ಸ್ಥಿತಿ

ಸರಳ ಸಮಾಜದ ಲಕ್ಷಣಗಳನ್ನು ಹೊಂದಿರುವ ಜೇನುಕುರುಬರು, ಗುಂಪು ಜೀವನ ಪದ್ಧತಿಯಿಂದ ಕಾಲೋನಿಯ ಜೀವನ ಪದ್ದತಿಗೆ ಬದಲಾಗಿದ್ದಾರೆ. ಅಲೆಮಾರಿತನ ಮಾಯವಾಗಿ ಸ್ಥಿರವಾಗಿ ಒಂದೆಡೆ ನೆಲೆನಿಂತ ವ್ಯವಸ್ಥಿತ ಜೀವನ ಪದ್ಧತಿಯಾಗಿದೆ. ಪೂರ್ವದ ಸಮುದಾಯಗಳು ಅರಣ್ಯವ್ಯಾಪ್ತಿಯಲ್ಲಿ ನಿರ್ಮಿಸಲಾಗುತ್ತಿದ್ದ ಮನೆಗಳ ಬದಲಾಗಿ ಹೊಸತನದ ಕ್ರಮವನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ. ಇಂತಹ ಕಾಲೋನಿಗಳ ಹಿರಿಯ ವಕ್ತೃಗಳು ಹೇಳುವಂತೆ, ಇವರುಗಳ ಬದುಕಿನ ಸಾರ ಸಂಗ್ರಹಸಿ ವಿವೇಚಿಸಲಾಗಿದೆ. ಈ ನಿಟ್ಟಿನಲ್ಲಿ ಏನೆಲ್ಲಾಬದಲಾವಣೆಗಳಾದರೂ ತಮಗರಿವಿಲ್ಲದೆ ಕೆಲವು ಕಟ್ಟು ಪಾಡುಗಳನ್ನು ಅನುಚನವಾಗಿ ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಮುಖ್ಯವಾಗಿ ಇವರುಗಳ ಸಾಮಾಜಿಕ ಜೀವನ ಕ್ರಮದಲ್ಲಿ ಇದ್ದ ಬಿಗಿಕಟ್ಟು ಪಾಡು, ಬುಡಕಟ್ಟು ನ್ಯಾಯ ಇಲ್ಲವಾಗುತ್ತಾ ಬರುತ್ತಿದೆ. ಸಂಘಟಿತ ಜೀವನ ನಡೆಸಿದ ವ್ಯವಸ್ಥೆಯ ಕ್ರಮ, ಅತಂತ್ರ ಸ್ಥಿತಿ ತಲುಪಿ ಪ್ರತಿ ಕುಟುಂಬವು ತನ್ನ ಪಾಡಿಗೆ ತಾನು ಬದುಕುವ ಎನ್ನುವ ಮಂತ್ರಕ್ಕೆ ಜೋತು ಬಿದ್ದಿದ್ದಾರೆ. ಇವರುಗಳ ಸಾಮಾಜಿಕ ಸ್ಥಿತಿಯ ಜೀವನ, ಸಮುದಾಯದ ಜೀವನ ಶೈಲಿ, ಆ ಸಮುದಾಯದ ಸಂಸ್ಕೃತಿ ಮತ್ತು ಪರಂಪರೆಯಲ್ಲಿನ ಮೌಲ್ಯಗಳನ್ನು ಆಧರಿಸಿ ರೂಪುಗೊಂಡಿರುವ ಬದಲಾವಣೆಗಳು ನಿಶ್ಚಯವಾಗಿ

ಗುರುತಿಸಬಹುದಾಗಿದೆ. "ಸಂಸ್ಕೃತಿಯೂ ಅಷ್ಟೇ ಆಂತರಿಕ ಮತ್ತು ಬಾಹ್ಯ ಒತ್ತಡಗಳಿಂದಾಗಿ ಬದಲಾಗುವ ಸಾವಯವ ಸಾರಭೂತವಾದ್ದರಿಂದ ಅಯಾ ಬದಲಾವಣೆಗಳಿಗೆ ತಕ್ಕಂತೆ ಜೀವನ ವಿಧಾನವೂ ಆಗಾಗ ಮಾರ್ಪಾಡಿಗೆ ಒಳಗಾಗುತ್ತದೆ"[7]. ಈ ಹೇಳಿಕೆಯಂತೆ ಜೇನುಕುರುಬರು ಸಹ ತಾವು ವಾಸಿಸುವ ಪರಿಸರದೊಂದಿಗೆ ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುತ್ತಾ ಬದಲಾಗುತ್ತಿರುವ ಕಾಲ, ಪ್ರದೇಶ, ಸಾಂಸ್ಕೃತಿಕ ಪರಿಸರಕ್ಕೆ ಅನುಗುಣವಾಗಿ ಸಾಮಾಜಿಕ ವ್ಯವಸ್ಥೆಯನ್ನು ಸಹ ಪರಿಸರದ ಕ್ರಮದಂತೆಯೇ ಕಲಿಯುತ್ತಿದ್ದಾರೆ.

ಸಾಮಾಜಿಕ ಜೀವನಕ್ರಮದ ವ್ಯವಸ್ಥೆಯಲ್ಲಿ ಶಿಕ್ಷಣ ಮತ್ತು ಕುಟುಂಬದ ಗಾತ್ರ, ಲಿಂಗಾನುಪಾತ ಅತಿ ಮುಖ್ಯವೆಂದು ಪರಿಗಣಿಸಬಹುದು. ಈ ಅಂಶಗಳ ಮಾಹಿತಿಯನ್ನು ಪೃಥಕ್ಕರಿಸಿ ಪಟ್ಟಿಗಳ ಮೂಲಕ ಅವುಗಳ ವಿಶ್ಲೇಷಣೆ ಮಾಡಲಾಗಿದೆ. ಸಮುದಾಯವು ರೂಢಿಸಿಕೊಂಡ ನೀತಿ, ಹಾಗೂ ಇತರ ಜನಸಮೂಹ ಮತ್ತು ಬುಡಕಟ್ಟು ಸಮುದಾಯಗಳ ಜೊತೆಗೆ ಜೀವಿಸುವ ಅವಕಾಶವಿರುವ ಪರಿಸ್ಥಿತಿಯನ್ನು ಮತ್ತು ಗ್ರಾಮೀಣ ಭಾಗದ, ಗ್ರಾಮ ಕಲ್ಪನೆಯ ಪಾತ್ರದ ಪ್ರಭಾವ ಮತ್ತು ಆಡಳಿತಕ್ಕೆ ಒಳಗಾದ ಸನ್ನಿವೇಶ ತಿಳಿಯ ಪಡಿಸಬಹುದಾಗಿದೆ. ಪ್ರತ್ಯೇಕ ಕಾಲೋನಿನಿವಾಸಿಗಳಾದರೂ ಇತರ ಜನರೊಂದಿಗೆ ಮತ್ತು ಸಮುದಾಯಗಳೊಂದಿಗೆ ಅನ್ಯೋನ್ಯತೆ ಅಥವಾ ಅನಿವಾರ್ಯತೆಗಳಿಂದ ಬದುಕುತ್ತಿರುವುದು ಸಮೀಕ್ಷೆಯಲ್ಲಿನ ಕಾಲೋನಿಗಳಲ್ಲಿ ಕಂಡುಬರುತ್ತದೆ. ಇಂತಹ ಸಂದರ್ಭವಿದ್ದರೂ ಕಾಲೋನಿಗಳಲ್ಲಿಇವರುಗಳ ಸಮಸ್ಯೆ ಹಾಗೆಯೇ ಉಳಿದು ಬಂದಿದೆ. ಸುಮಾರು ವರ್ಷಗಳ ಹಿಂದೆಯೇ ಸ್ಥಳಾಂತರದ ಕಾರ್ಯ (೧೯೬೨ ರಿಂದ) ಆರಂಭಗೊಂಡಿದ್ದರೂ, ಪುನರ್‌ವಸತಿ ಸ್ಥಳಗಳಲ್ಲಿ ಶಾಶ್ವತವಾದ ಪರ್ಯಾಯ ವ್ಯವಸ್ಥೆ ಮತ್ತು ಮೂಲಭೂತ ಸೌಲಭ್ಯಗಳು ವ್ಯವಸ್ಥಿತವಾಗಿ ಒದಗಿಸುವ ಕ್ರಮವೂ ಇನ್ನೂ ಸುಧಾರಿಸಿಲ್ಲದಿರುವುದು ಕಾಣಬಹುದಾಗಿದೆ.

ಜೇನುಕುರುಬ ಸಮುದಾಯದ ಕುಟುಂಬಗಳ ಗಾತ್ರ

೭೪೦ ಕುಟುಂಬಗಳ ಸಮೀಕ್ಷಾ ಕಾರ್ಯದಲ್ಲಿ ಕಂಡುಬರುವ ವಿಷಯವೆಂದರೆ, ಬಹಳಷ್ಟು ಕುಟುಂಬಗಳು ವಿಭಜಿತವಾಗಿವೆ. ಕೂಡು ಕುಟುಂಬದ ವ್ಯವಸ್ಥೆಯು ಮಾಯವಾಗಿದೆ. ಕಾಲೋನಿಗಳ ಪ್ರಾರಂಭದಲ್ಲಿದ್ದ ಕುಟುಂಬಗಳ ಸಂಖ್ಯೆಗಿಂತ ಅಧಿಕ ಪ್ರಮಾಣದ ಕುಟುಂಬಗಳು ಪ್ರಸ್ತುತ ಕಂಡುಬರುತ್ತವೆ. ಇಲ್ಲಿಯೂ ವಸತಿ ಸಮಸ್ಯೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿರುವುದು ಕಂಡು ಬರುತ್ತದೆ. ಪ್ರತಿ ಕುಟುಂಬಕ್ಕೆ ದೊರೆಯಬೇಕಾದ ಸೌಲಭ್ಯಗಳು ಈ ಕ್ರಮದಿಂದ ಪೂರ್ಣಗೊಂಡಿಲ್ಲ. ಸರ್ಕಾರ ಮತ್ತು ಚುನಾಯಿತ ಪ್ರತಿನಿಧಿಗಳು ಭರವಸೆ ನೀಡುತ್ತಾ ನಡೆಯುತ್ತಿದ್ದಾರೆ. ಹೀಗಾಗಿ ಕಾಲೋನಿಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿರುವುದು ಗುರುತಿಸಬಹುದಾಗಿದೆ.

೩ ಜಿಲ್ಲೆಗಳಲ್ಲಿನ ೨೧ ಕಾಲೋನಿಗಳನ್ನು ಸಮೀಕ್ಷೆ ಮಾಡಿ ಆಯಾ ತಾಲ್ಲೂಕು ವ್ಯಾಪ್ತಿಯನ್ನು ಸಮಗ್ರವಾದ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ. ಅಂಕಿ, ಅಂಶಗಳನ್ನು ಪ್ರತಿ ತಾಲ್ಲೂಕು ಮಾಹಿತಿಯ ಆಕಾರವಾಗಿ ಪಥಕ್ಕರಿಸಲಾಗಿದೆ. ಇದರಿಂದ ಅತಿ ಹಿಂದುಳಿದ ತಾಲ್ಲೂಕು ಗುರುತಿಸಲು ಸಾಧ್ಯವಾಗುತ್ತದೆ. ಪ್ರತಿ ಕುಟುಂಬ ಪ್ರಧಾನ ಪಾತ್ರವಹಿಸಿರುವ ಮಾಹಿತಿ ಆ ತಾಲ್ಲೂಕು ವ್ಯಾಪ್ತಿಯಲ್ಲಿನ ಮಾನವ ಸಂಪನ್ಮೂಲ ಸದ್ಬಳಕೆ ಮತ್ತು ಸಾಮಾಜಿಕ, ಶೈಕ್ಷಣಿಕ ಮಾಹಿತಿಯ ಮಟ್ಟವನ್ನು ಗುರುತಿಸುವುದಕ್ಕೆ ಸಹಕಾರಿಯಾಗಿದೆ. ಈ ಮೂಲಕ ಮಾನವ ಸಂಪನ್ಮೂಲದ ಸದ್ಬಳಕೆಗೆ ಪೂರಕವಾದ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಈ ಮಾಹಿತಿಯ ಆಧಾರವಾಗಿ ಕೈಗೊಳ್ಳಬಹುದಾಗಿದೆ.

ಕೋಷ್ಟಕ ೩.೧ : ಜೇನುಕುರುಬ ಕುಟುಂಬಗಳ ಗಾತ್ರದ ಪಟ್ಟಿ

ಕ್ರ. ಸಂಖ್ಯೆ	ತಾಲ್ಲೂಕು ಕೇಂದ್ರ (ವ್ಯಾಪ್ತಿಯ ಪ್ರದೇಶ)	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಕುಟುಂಬದ ಗಾತ್ರ (ಜನಸಂಖ್ಯೆಗನುಸಾರವಾಗಿ)						
			೧ ರಿಂದ ೩		೪ ರಿಂದ ೬		೭ +		ಸರಾಸರಿ ಕುಟುಂಬ
			NO	%	NO	%	NO	%	
೧	ಹೂಣಸೂರು	೧೬೯	೯೧	೫೪.೧೬	೫೯	೩೫.೧೧	೧೮	೧೦.೭೩	೩
೨	ಹೆಚ್.ಡಿ ಕೋಟೆ	೨೦೧	೧೩೧		೪೦		೩೦		೩
೩	ಪಿರಿಯಾಪಟ್ಟಣ	೮೩	೩೨		೩೯		೧೨		೩
೪	ಗುಂಡ್ಲುಪೇಟೆ	೫೩	೨೮		೨೧		೪		೩
೫	ವೀರಾಜಪೇಟೆ	೧೦೫	೬೧		೨೬		೧೮		೩
೬	ಸೋಮವಾರಪೇಟೆ	೭೧	೩೨		೨೧		೧೮		೩
೭	ನಂಜನಗೂಡು	೫೯	೩೦		೨೫		೪		೩
	ಒಟ್ಟು	೭೪೦	೪೦೫	೫೪.೭೨	೨೩೧	೩೧.೨೧	೧೦೪	೧೪.೦೭	

ಸಮೀಕ್ಷೆ ಮಾಡಲಾದ ೭೪೦ ಕುಟುಂಬಗಳ ೭ ತಾಲ್ಲೂಕು ವ್ಯಾಪ್ತಿಯ ಕಾಲೋನಿಗಳಲ್ಲಿ ಶೇ. ೫೪.೭೨%(೪೦೫) ಕುಟುಂಬಗಳು ೧ ರಿಂದ ೩ ಜನ ಸದಸ್ಯರಿರುವ ಕುಟುಂಬಗಳಾಗಿವೆ. ಎರಡನೇ ಹಂತದ ೪ ರಿಂದ ೬ ಜನ ಸದಸ್ಯರಿರುವ ಶೇ. ೩೧.೨೧ (೨೩೧) ಕುಟುಂಬಗಳು ಮಧ್ಯಮ ಗಾತ್ರವನ್ನು ಹೊಂದಿವೆ. ಉಳಿದಂತೆ ೭ ಜನಕ್ಕಿಂತಲ್ಲೂ ಹೆಚ್ಚಿನ ಕುಟುಂಬಗಳಾದ ೧೦೪ ಶೇ. ೧೪.೦೭% ಎಲ್ಲಾ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕಂಡು ಬಂದರೂ ಅತಿ ಹೆಚ್ಚಿನ ಕುಟುಂಬಗಳು ಹೆಚ್.ಡಿ ಕೋಟೆ, ಪಿರಿಯಾಪಟ್ಟಣ, ವಿರಾಜಪೇಟೆ, ಸೋಮವಾರಪೇಟೆ ಮತ್ತು ಹುಣಸೂರು ತಾಲ್ಲೂಕು ಕೇಂದ್ರಗಳಲ್ಲಿ ಕ್ರೋಢಿಕರಣಗೊಂಡಿವೆ. ಕುಟುಂಬಗಳ ಸರಾಸರಿ ಅನುಪಾತ ಗಮನಿಸಿದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿರುವ ೩ ರಿಂದ ೪ ಜನರ ಮಧ್ಯದ ಅನುಪಾತ ತಿಳಿದುಬರುತ್ತದೆ. ಗುಂಡ್ಲುಪೇಟೆ, ವಿರಾಜಪೇಟೆ, ಸೋಮವಾರ ಪೇಟೆಯಲ್ಲಿ ಕುಟುಂಬಗಳ ಸಂಖ್ಯೆ ಅತಿ ಕಡಿಮೆ. ಆದರೆ ಪ್ರತಿ ಕುಟುಂಬದಲ್ಲಿ ಸದಸ್ಯರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಈ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕೂಲಿಕೆಲಸಕ್ಕೆ ವಲಸೆ ಬರುವರ

ಪ್ರಮಾಣ ಹೆಚ್ಚಾಗಿರುವುದರಿಂದ ಮತ್ತು ಗುಂಡ್ಲುಪೇಟೆ ವೀರಾಜಪೇಟೆ, ಸೋಮವಾರಪೇಟೆ ಆರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವುದು ಒಂದು ಕಾರಣವೆನ್ನಬಹುದು. ಹೀಗಾಗಿ ಇಲ್ಲಿನ ಕುಟುಂಬಗಳು ೪ ರಿಂದ ೬ ಮತ್ತು ೭ ಕ್ಕಿಂತ ಹೆಚ್ಚಿನ ಸದಸ್ಯರನ್ನು ಹೊಂದಿರುವ ಪ್ರಮಾಣ ಆಧಿಕವಾಗಿದೆ.

ಬಹಳಷ್ಟು ಕುಟುಂಬಗಳು ಹೂಣಸೂರು, ಹೆಚ್.ಡಿ. ಕೋಟೆ, ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ನೆಲೆ ನಿಂತಿರುವುದು ಕಾಣಬರುತ್ತದೆ. ಈ ಕೇಂದ್ರಗಳಲ್ಲಿ ಅರಣ್ಯ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಪುನರ್ವಸತಿ ಕಲ್ಪಿಸಿದ ಸ್ಥಳವಾಗಿದೆ. ಈ ಕಾಲೋನಿಗಳು ಪ್ರಾರಂಭದಲ್ಲಿ ಸಣ್ಣ ಸಣ್ಣವಾಗಿದ್ದವುಗಳು. ಆದರೆ ಇತ್ತೀಚಿಗೆ ಜನಸಂಖ್ಯೆ ಏರಿಕೆಯಾದಂತೆ ಕಾಲೋನಿಗಳು ಸಹ ವಿಸ್ತಾರಗೊಳ್ಳುತ್ತಿವೆ. ಒಂದು ಕಾಲೋನಿಯಲ್ಲಿ ೧೦ ರಿಂದ ೧೫ ಕುಟುಂಬಗಳಿಗೆ ನೆಲೆ ಒದಗಿಸಲಾಗಿತ್ತು. ಈ ಕುಟುಂಬಗಳ ಸಂಖ್ಯೆ ೩೦ ರಿಂದ ೪೦ ಕ್ಕೆ ಹೆಚ್ಚಾಗಿವೆ. ಆದ್ದರಿಂದಲೇ ಶೇ. ೫೪.೭೨% ಅಂದರೆ, ೪೦೫ ಕುಟುಂಬಗಳು ಸಣ್ಣ ಗಾತ್ರದಿಂದ ಕೂಡಿರುವುದು ಕಾಣಬರುತ್ತದೆ.

ಲಿಂಗಾನುಪಾತ

ಸಮುದಾಯದ ಸದಸ್ಯರ ನಡುವಿನ ಪುರುಷರು ಮತ್ತು ಮಹಿಳೆಯರ ಪ್ರಮಾಣಾಧಾರಿತ ಮಾಹಿತಿಯಿಂದ, ಈ ಸಮುದಾಯದ ಜನರಿಗೆ ರೂಪಿಸಬೇಕಾದ ಕಾರ್ಯಕ್ರಮಗಳಿಗೆ ಪೂರಕ ಮಾಹಿತಿಯಾಗುತ್ತದೆ. ಲಿಂಗಾನುಪಾತದ ಪ್ರಮಾಣದಿಂದ ಯಾವುದೇ ಭೌಗೋಳಿಕ ಪರಿಸರ ಅಥವಾ ಪ್ರದೇಶದಲ್ಲಿನ ಜನಸಂಖ್ಯೆಯು ನೇರ ಅಥವಾ ಪರೋಕ್ಷ ಪ್ರಭಾವದೊಂದಿಗಿನ ಅಭಿವೃದ್ಧಿಯ ಪಥ ಗುರುತಿಸಲು ಸಹಾಯಕವಾಗುತ್ತದೆ.

ಜೇನುಕುರುಬರ ೭೪೦ ಕುಟುಂಬಗಳಿಂದ ೨೯೩೮ ಸದಸ್ಯರಿರುವುದು ಕಂಡುಬರುತ್ತದೆ. ಓಟ್ಟಾರೆ ಜನರನ್ನು ೨ ವಿಭಾಗದಲ್ಲಿ ಪ್ರತ್ಯೇಕವಾಗಿ ಗುರುತಿಸಲಾಗಿದೆ. ಮೊದಲಿಗೆ ೧೮ ವರ್ಷಕ್ಕಿಂತ ಮೇಲ್ಪಟ್ಟವರು, ಅವರಲ್ಲಿ ಪುರುಷ, ಮಹಿಳೆಯರನ್ನು ಪ್ರತ್ಯೇಕವಾಗಿ ಗುರುತಿಸಲಾಗಿದೆ. ಇದರಿಂದ ಸಮುದಾಯದಲ್ಲಿರುವ ಪುರುಷ / ಮಹಿಳೆಯರ ವಿಭಾಗವಾರು ಬೆಳವಣಿಗೆಯನ್ನು ಗುರುತಿಸಬಹುದು. ೨ನೇದಾಗಿ ಅಪ್ರಾಪ್ತಕರ ಪ್ರಮಾಣದಲ್ಲಿ ಸಹ ಪುರುಷ, ಮಹಿಳೆಯರನ್ನು ಗುರುತಿಸಲಾಗಿದೆ. ಈ ಎರಡು ವಿಭಾಗಗಳಿಂದ ತಿಳಿದು ಬರುವ ಅಂಶವೆಂದರೆ, ಸಮುದಾಯದಲ್ಲಿನ ಜನಸಂಖ್ಯಾ ಬೆಳವಣಿಗೆ, ಮತ್ತು ನಿರ್ಧಿಷ್ಟವಾದ ವಿಭಾಗ ಯಾವುದೆಂದು ಗುರುತಿಸಬಹುದಾಗಿದೆ. ಓಟ್ಟು ೨೯೩೮ ಜನರಲ್ಲಿ ಪುರುಷರ ಪ್ರಮಾಣ ೧೬೭೨ ಹಾಗೂ ಮಹಿಳೆಯರು ೧೨೬೬ ಆಗಿದೆ. ಪುರುಷರಲ್ಲಿ ೧೮ ವರ್ಷ ಮೇಲ್ಪಟ್ಟವರು ೧೧೯೫ ಜನ ಹಾಗೂ ಅಪ್ರಾಪ್ತಕರು ೫೭೭ ಜನರಿಂದ ಕೂಡಿದೆ. ಹಾಗೆಯೇ ಮಹಿಳೆಯರಲ್ಲಿ ೧೮ ವರ್ಷಕ್ಕೆ ಮೇಲ್ಪಟ್ಟವರು ೭೭೨ ಮತ್ತು ಅಪ್ರಾಪ್ತಕರಲ್ಲಿ ೪೯೪ ಇದ್ದಾರೆ. ಅಂದರೆ ಓಟ್ಟು ಅಪ್ರಾಪ್ತಕರಲ್ಲಿ

೧೦೭೧ ಜನರಿರುವುದು ಗಮನಿಸಿದಾಗ ಹೆಚ್ಚಾಗಿ ಈ ವರ್ಗದ ಜನರಿಗೆ ಶೈಕ್ಷಣಿಕ ಪ್ರಗತಿಯ ಕಾರ್ಯಕ್ರಮಗಳನ್ನು ಆಗತ್ಯವಾಗಿ ರೂಪಿಸಬೇಕಿದೆ. ಪಟ್ಟಿ ೩.೧ ರಲ್ಲಿ ತೋರಿಸಿದಂತೆ ಜೇನುಕುರುಬರ ಜನಸಂಖ್ಯೆ ೨೯೩೮, ಪ್ರತಿಯೊಂದು ಕಾಲೋನಿಗಳಲ್ಲಿ ಕಂಡುಬರುವರಾಗಿದ್ದಾರೆ. ಕಾಲೋನಿಗಳಲ್ಲಿ ಬಹುತೇಕ ಎಲ್ಲಾ ತಾಲ್ಲೂಕು ವ್ಯಾಪ್ತಿಯ ಕುಟುಂಬಗಳು ಗ್ರಾಮೀಣ ಪ್ರದೇಶದಲ್ಲಿರುವಂತವುಗಳೇ ಆಗಿವೆ. ಒಟ್ಟಾರೆ ಈ ವರ್ಗೀಕರಣದಿಂದ ಕಂಡುಬರುವ ಮಹತ್ವವೆಂದರೆ ವಯಸ್ಕರಷ್ಟೇ ಸಮೀಪಕ್ಕೆ ಅಪ್ರಾಪ್ತಕರಿರುವುದು ಹಾಗೂ ಪುರುಷರ ಸಂಖ್ಯೆ ಅಧಿಕವಿರುವುದು ತಿಳಿದು ಬರುತ್ತದೆ.

ಕೋಷ್ಟಕ ೩.೨ : ಜೇನುಕುರುಬರ ಲಿಂಗಾನುಪಾತದ ಪಟ್ಟಿ

ಕ್ರ. ಸಂ.	ಕಾಲೋನಿಗಳು	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಒಟ್ಟು ಜನಸಂಖ್ಯೆ	೧೮ ವರ್ಷಕ್ಕಿಂತ ಮೇಲ್ಪಟ್ಟವರು			ಅಪ್ರಾಪ್ತರು		
				ಗ	ಹೆ	ಒಟ್ಟು	ಗ	ಹೆ	ಒಟ್ಟು
೧	ಹೂಣಸೂರು	೧೬೯	೬೯೮	೨೫೨	೧೩೯	೩೯೧	೧೮೬	೧೨೧	೩೦೭
೨	ಹೆಚ್.ಡಿ ಕೋಟೆ	೨೦೧	೧೧೪೭	೪೫೮	೩೧೨	೭೭೦	೧೮೩	೧೯೪	೩೭೭
೩	ಪಿರಿಯಾಪಟ್ಟಣ	೮೩	೨೩೬	೫೮	೬೨	೧೨೦	೭೦	೪೬	೧೧೬
೪	ಗುಂಡ್ಲುಪೇಟೆ	೫೩	೧೭೧	೪೧	೩೨	೭೩	೪೩	೫೫	೯೮
೫	ವೀರಾಜಪೇಟೆ	೧೦೫	೩೧೧	೧೩೯	೯೩	೨೩೨	೩೮	೪೧	೭೯
೬	ಸೋಮವಾರಪೇಟೆ	೭೧	೨೫೫	೧೩೧	೯೭	೧೯೮	೩೬	೨೧	೫೭
೭	ನಂಜನಗೂಡು	೫೯	೧೨೦	೪೬	೩೭	೮೩	೨೧	೧೬	೩೭
	ಒಟ್ಟು	೭೪೦	೨೯೩೮	೧೦೯೫	೭೭೨	೧೮೬೭	೫೭೭	೪೯೪	೧೦೭೧

ಶಿಕ್ಷಣ ಮತ್ತು ಸಾಕ್ಷರತೆಯ ಪ್ರಮಾಣ

ಪ್ರಗತಿಗೆ ಪೂರಕವೇ ಶಿಕ್ಷಣ. ಈ ಶತಮಾನದ ಮಹಾನ್ ತಜ್ಞ ಡಾ॥ ಬಿ.ಆರ್. ಅಂಬೇಡ್ಕರ್ ರವರ ಅಭಿಮತವಾಗಿತ್ತು. ಶಿಕ್ಷಣದಿಂದಲ್ಲೇ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಮತ್ತು ರಾಜಕೀಯ ಸಮಾನತೆ ಸಾಧ್ಯ ಎಂದಿದ್ದರು. ಬಹುಶ: ತಜ್ಞರು ಈ ತರಹದ ಮೂಲನಿವಾಸಿ ಸಮುದಾಯಗಳನ್ನೇ ಗಮನದಲ್ಲಿಟ್ಟುಕೊಂಡು ಚಿಂತಿಸಿದ ಕ್ರಮವಿರಬಹುದು ಎನ್ನಬಹುದು. “ಇನ್ನೂ ಭಾರತದ ಜನಗಣತಿಯ ಪ್ರಕಾರ ಓದುವುದು, ಬರೆಯುವುದು ಗೊತ್ತಿದ್ದು ಯಾವುದೇ ಭಾಷೆಯನ್ನು ಅರ್ಥಮಾಡಿಕೊಳ್ಳಲು ಸಮರ್ಥನಿರುವ ವ್ಯಕ್ತಿಗೆ ಸಾಕ್ಷರನೆಂದು ಕರೆಯಲಾಗಿದೆ.”[2] ಒಬ್ಬ ವ್ಯಕ್ತಿ ಕೇವಲ ಓದುವುದು ಕಲಿತು ಬರೆಯುವುದು ಬರುವುದಿಲ್ಲವೆಂದರೆ, ಆತನನ್ನು ಸಾಕ್ಷರನೆಂದು ಪರಿಗಣಿಸಲಾಗುವುದಿಲ್ಲ. ಆದುದರಿಂದ

ಯಾವುದೇ ವ್ಯಕ್ತಿ ಓದುವುದು, ಬರೆಯುವುದನ್ನು ಕಲಿತು ಕನಿಷ್ಟ ವಿಧ್ಯಾರ್ಹತೆಯನ್ನು ಹೊಂದಿದ್ದರೆ ಸಾಕ್ಷರ ಎನ್ನಬಹುದಾಗಿದೆ.

ಕೋಷ್ಟಕ ೩.೩ : ಜೇನುಕುರುಬ ಸಮುದಾಯದ ತಾಲ್ಲೂಕುವಾರು ಸಾಕ್ಷರತೆ

ಕ್ರ. ಸಂ	ಕಾಲೋನಿಗಳು	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಒಟ್ಟು ಜನಸಂಖ್ಯೆ	ಒಟ್ಟು ಜನಸಂಖ್ಯೆಯಲ್ಲಿನ ಶಿಕ್ಷಣದ ಪ್ರಮಾಣ				
				೬೫ ವರ್ಷಕ್ಕಿಂತ ಮೇಲ್ಪಟ್ಟವರು	೫ ವರ್ಷಕ್ಕಿಂತ ಕೆಳಗಿನವರು	ಓದಿದವರು	ಶಿಕ್ಷಣ ಪಡೆದವರು	ಅನಕ್ಷರಸ್ಥರು
೧	ಹೂಣಸೂರು	೧೬೯	೬೯೮	೭೮	೯೪	೫೨೬	೨೧೨	೩೧೪
೨	ಹೆಚ್.ಡಿ ಕೋಟೆ	೨೦೧	೧೧೪೭	೧೧೭	೨೨೯	೮೦೧	೩೪೭	೪೫೪
೩	ಪಿರಿಯಾಪಟ್ಟಣ	೮೩	೨೩೬	೨೧	೪೯	೧೬೬	೭೯	೮೭
೪	ಗುಂಡ್ಲುಪೇಟೆ	೫೩	೧೭೧	೯	೫೮	೧೦೪	೩೪	೭೦
೫	ವೀರಾಜಪೇಟೆ	೧೦೫	೩೧೧	೧೪	೩೪	೨೬೩	೪೮	೨೧೫
೬	ಸೋಮವಾರಪೇಟೆ	೭೧	೨೫೫	೧೧	೪೦	೨೦೪	೬೧	೧೪೩
೭	ನಂಜನಗೂಡು	೫೯	೧೨೦	೮	೩೨	೮೦	೧೮	೬೨
	ಒಟ್ಟು	**೭೪೦**	**೨೯೩೮**	**೨೫೮**	**೫೩೬**	**೨೧೪೪**	**೭೯೯**	**೧೩೪೫**

ಕ್ರೋಢಿಕರಣದ ಜನಸಂಖ್ಯೆಯಲ್ಲಿ ಸಾಕ್ಷರತೆಯ ಪ್ರಮಾಣವನ್ನು ೬೫ ವರ್ಷಕ್ಕಿಂತ ಹೆಚ್ಚಿನವರು ಮತ್ತು ೫ ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಂತರದವರನ್ನು ಹೊರತು ಪಡಿಸಿ, ಉಳಿದಂತಹ ಜನಸಂಖ್ಯೆಯಲ್ಲಿ ಸಾಕ್ಷರತೆಯ ಪ್ರಮಾಣವನ್ನು ಪಟ್ಟಿಯಲ್ಲಿ ನೀಡಲಾಗಿದೆ.

ಕೋಷ್ಟಕ ೩.೩ ರ ಪ್ರಕಾರ ಜೇನುಕುರುಬರ ೭೪೦ ಕುಟುಂಬಗಳಿದ್ದು, ಜನಸಂಖ್ಯೆ ೨೯೩೮ (೬೫ ವರ್ಷಕ್ಕಿಂತ ಮೇಲ್ಪಟ್ಟವರು ೨೫೮ ಮತ್ತು ೫ ವರ್ಷಕ್ಕಿಂತ ಕಡಿಮೆ ವಯಸ್ಸಿನವರು ೫೩೬). ಒಟ್ಟಾರೆ ೬೫ +೫ ವರ್ಷದ ವರ ಸಂಖ್ಯೆ ೭೯೪ ಪ್ರತಿ ಕಾಲೋನಿಯ ಅಂಕಿ, ಅಂಶಗಳನ್ನು ಕ್ರೋಢಿಕರಿಸಿ ತಾಲ್ಲೂಕುವಾರು ಗುರುತಿಸಲಾಗಿದೆ. ಪ್ರತಿ ತಾಲ್ಲೂಕು ವ್ಯಾಪ್ತಿಯಲ್ಲಿ ಸಮುದಾಯಗಳಲ್ಲಿನ ಶಿಕ್ಷಣದ ಮಟ್ಟ ನೋಡಿದಾಗ ಪ್ರಗತಿ ಒಟ್ಟಾರೆ ಶೇಕಡ ೩೭.೨೮% ಆಗಿದೆ. ಇನ್ನೂ ಶಾಲೆಗೆ ಹೋಗದ ಅನಕ್ಷರತೆಯ ಪ್ರಮಾಣ ೬೨.೭೨% ಗಮನಿಸಿದಲ್ಲಿ ಶಿಕ್ಷಣದ ಪ್ರಭಾವ ಸಮುದಾಯದಲ್ಲಿ ಕಡಿಮೆ ಎನ್ನಬಹುದು. ಶಿಕ್ಷಣ ಪಡೆದವರಲ್ಲಿ ಹೆಚ್.ಡಿ ಕೋಟೆ, ತಾಲ್ಲೂಕಿನ ವ್ಯಾಪ್ತಿಯೇ ಪ್ರಥಮ ಸ್ಥಾನದಲ್ಲಿದೆ ಎನ್ನಬಹುದು. ಶೇ. ೪೩.೩೨% ಪ್ರಗತಿ ಈ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕಂಡುಬರುತ್ತದೆ. ಅತಿ ಕಡಿಮೆ ಪ್ರಮಾಣದ ಕೇಂದ್ರ ವಿರಾಜಪೇಟೆ ಶೇ. ೧೮.೨೫% ಇದೆ. ಇಲ್ಲಿ ಒಂದು ಅಂಶ ಹೇಳುವುದು ಅವಶ್ಯಕ, ಹೆಚ್.ಡಿ ಕೋಟೆ ಮತ್ತು ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಓದು ಮುಂದುವರೆಸಲು ಆನೇಕ ಸ್ವಯಂ ಸಂಸ್ಥೆಗಳು ಕಾರಣವಾಗಿವೆ. ಆಶ್ರಮಶಾಲೆಗಳು

ಹೆಚ್ಚಾಗಿ ಕಾರ್ಯನಿರ್ವಹಿಸುತ್ತಿವೆ. ಆದರೂ ಪ್ರಗತಿ ಮಾತ್ರ ಕಡಿಮೆ. ಇನ್ನುಳಿದಂತೆ ಗುಂಡ್ಲುಪೇಟೆ, ಸೋಮವಾರಪೇಟೆ, ನಂಜನಗೂಡು ವ್ಯಾಪ್ತಿಯಲ್ಲಿ ಅತಿಕಡಿಮೆ ಸಾಕ್ಷರತೆ ಇರುವುದಕ್ಕೆ ಹಲವಾರು ಕಾರಣಗಳಿವೆ. ಈ ತಾಲ್ಲೂಕುಗಳ ವ್ಯಾಪ್ತಿಯಲ್ಲಿನ ಜೇನುಕುರುಬರಲ್ಲಿ ಇನ್ನೂ ಅಲೆಮಾರಿತನ ಜೀವಂತವಾಗಿದೆ. ಉದ್ಯೋಗದ ನಿಮಿತ್ತ ಇವರುಗಳು ಅಲೆದಾಡುತ್ತಿದ್ದಾರೆ. ಇಂತಹ ಕುಟುಂಬಗಳಲ್ಲಿ ಅವರ ತಂದೆ-ತಾಯಿಗಳೇ ಮಕ್ಕಳ ಶಿಕ್ಷಣದ ಬಗ್ಗೆ ಪ್ರೋತ್ಸಾಹ ಮಾಡದಿರುವುದು ಗಮನಿಸಬಹುದಾದ ಅಂಶವಾಗಿ ಕಂಡುಬರುತ್ತದೆ.

ಸಾಕ್ಷರತೆಯ ಪ್ರಮಾಣ ೨೧೪೪ ಜನಸಂಖ್ಯೆಯಲ್ಲಿ ಸುಮಾರು ೭೮೯ ಜನರು ಮಾತ್ರ ಶಿಕ್ಷಣ ಪಡೆದವರಾಗಿದ್ದಾರೆ. ಸರ್ಕಾರವೂ ೧೯೮೦ರ ದಶಕದಿಂದಲೂ ಪ್ರಾಥಮಿಕ ಶಿಕ್ಷಣಕ್ಕೆ ವಿಶೇಷ ಒತ್ತು ಕೊಟ್ಟು ಎಲ್ಲಾ ಹಳ್ಳಿಗಳಲ್ಲಿಯೂ ಪ್ರಾಥಮಿಕ ಶಾಲೆಗಳನ್ನು ಮತ್ತು ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಿದೆ ಎನ್ನುವ ಅಂಕಿ ಅಂಶಗಳು ಜಿಲ್ಲಾ ಆರ್ಥಿಕ-ಸಾಂಖಿಕ ಇಲಾಖೆಯ ಯೋಜನಾ ವಿಭಾಗದಲ್ಲಿ ಮಾಹಿತಿ ದೊರೆಯುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಎಲ್ಲಾ ಕಾಲೋನಿಗಳು ಅಪವಾದವಾಗಿರುವುದು ಕಂಡು ಬರುತ್ತದೆ. ಇಲ್ಲಿನ ಅನಕ್ಷರತರ ಸಂಖ್ಯೆ ಹೆಚ್ಚು ಇದ್ದು ಇವರುಗಳ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವುದು ಕಡಿಮೆಯಾಗಿದೆ. ಒಟ್ಟಾರೆ ಜೇನುಕುರುಬರು ಶಿಕ್ಷಣಕ್ಕೆ ಅಷ್ಟಾಗಿ ಹೆಚ್ಚು ಗಮನವಿತ್ತಂತ್ತಿಲ್ಲ. ಇವರುಗಳ ಜೀವನ ಅರಣ್ಯದ ಅಸುಪಾಸು, ಮತ್ತು ಹೆಚ್ಚಾಗಿ ಕಾಡಿನ ಜೀವನಕ್ಕೆ ಒಗ್ಗಿಕೊಂಡವರು. ಇಲ್ಲಿ ಶಿಕ್ಷಣಕ್ಕೆ ಸಿಕ್ಕ ಮಹತ್ವ ಅಂಕಿ, ಅಂಶಗಳಿಂದ ತಿಳಿದು ಬಂದರೂ ಗಮನಾರ್ಹವಾದ ಪ್ರಗತಿಇಲ್ಲವಾಗಿದೆ. ಸಮುದಾಯದ ಈ ಜನರಿಗೆ ಈ ಬಗ್ಗೆ ಶಿಕ್ಷಣಕ್ಕೆ ಸಾಕಷ್ಟು ಸೌಲಭ್ಯ ಪ್ರಾಪ್ತವಾಗಬೇಕಾದ ಅನಿವಾರ್ಯತೆ ಬಹಳಷ್ಟು.

ಶಿಕ್ಷಣದ ಪ್ರಮಾಣ ವಯಸ್ಸಿನ ವರ್ಗೀಕರಣದ ಪ್ರಕಾರ

ಜೇನುಕುರುಬರ ೭೪೦ ಕುಟುಂಬಗಳ ಜನಸಂಖ್ಯೆಯ ಮಾಹಿತಿಯನ್ನು ಕೋಷ್ಟಕ ೩.೩ ರಲ್ಲಿ ನೀಡಲಾದಂತೆ ಒಟ್ಟು ೨೯೩೮ ಜನರಲ್ಲಿ ಅಕ್ಷರಸ್ಥರ ಸಂಖ್ಯೆ ೭೮೯ ಜನರು ಮಾತ್ರ. ಈ ೭೮೯ ಜನರಲ್ಲಿ ಪ್ರತಿ ಹಂತದ ವಿದ್ಯಾಭ್ಯಾಸದ ವರ್ಗೀಕರಣವನ್ನು ನೀಡಲಾಗಿದೆ. ವಯೋವರ್ಗದ ಮಿತಿಯಿಂದ ಶಿಕ್ಷಣದ ಮಟ್ಟ ಅಳೆಯುವುದು ಮುಖ್ಯ ಅಂಶವೆಂದಲ್ಲಿ ೬-೧೦ ವಯೋವರ್ಗದಲ್ಲಿ ಪ್ರಾಥಮಿಕ ಶಾಲೆಯಲ್ಲಿ ೬೮ ಹಾಗೂ ಮಾಧ್ಯಮಿಕ ಶಾಲೆಯಲ್ಲಿ ೪೭ ಮತ್ತು ಒಟ್ಟು ಪ್ರಾಥಮಿಕ ಹಂತದ ಶಿಕ್ಷಣ ಪಡೆದವರು ೩೨೯ ಜನರು. ಅಂದರೆ ಹೆಚ್ಚಾಗಿ ಪ್ರಾಥಮಿಕ ಶಾಲೆಯಲ್ಲಿ ಸ್ವಲ್ಪ ಮಟ್ಟಿಗೆ ಕಲಿಯುವ ಇಚ್ಛೆ ಹೊಂದಿರುವ ಅಂಶ ತಿಳಿದುಬರುತ್ತದೆ. ವಯೋವರ್ಗ ೧೦-೧೫ ರ ಗುಂಪಿನಲ್ಲಿ ಮಾಧ್ಯಮಿಕ ಹಂತದಲ್ಲಿ ಕ್ರಮವಾಗಿ ಪ್ರೌಢಶಾಲೆಯಲ್ಲಿ ೪೧ ವಿದ್ಯಾರ್ಥಿಗಳು ಕಂಡುಬರುತ್ತಾರೆ. ಮಾಧ್ಯಮಿಕ ಶಾಲೆಯಲ್ಲಿ ಕಲಿತವರ ಸಂಖ್ಯೆ ಒಟ್ಟು ೩೦೬ ಜನರು. ಇನ್ನು ೧೫-೨೦ರ ವರೆಗೆ ಕೂಡ ಪ್ರಾಥಮಿಕ ಶಿಕ್ಷಣ ಪಡೆದವರು

೧೧೧. ಕ್ರಮವಾಗಿ ಮಾಧ್ಯಮಿಕ ಶಾಲೆಯಲ್ಲಿ ೫೭ ಮತ್ತು ಪ್ರೌಢಶಾಲೆಯಲ್ಲಿ ೨೩ ವಿದ್ಯಾರ್ಥಿಗಳು ಕಂಡು ಬರುತ್ತಾರೆ. ಈ ಹಂತದಲ್ಲಿ ಪದವಿಪೂರ್ವದ ೨೧ ವಿದ್ಯಾರ್ಥಿಗಳ ಜೊತೆಗೆ ಒಟ್ಟಾರೆ ೯೭ ಜನ ಶಿಕ್ಷಣ ಪಡೆದವರಾಗಿದ್ದಾರೆ. ೨೦-೨೫ ರ ವಯಸ್ಸಿನ ಗುಂಪಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ೭೩. ಮಾಧ್ಯಮಿಕ ಹಂತದಲ್ಲಿ ೩೧ ಮತ್ತು ಪ್ರೌಢಶಾಲೆಯಲ್ಲಿ ೩೧. ಪದವಿಪೂರ್ವ ಹಂತದಲ್ಲಿ ೧೧. ಮತ್ತು ಪದವಿಯಲ್ಲಿ ೭ ಜನ ಶಿಕ್ಷಣ ಪಡೆದಿದ್ದಾರೆ. ಇದೊಂದು ಪ್ರಗತಿಪರವಾದ ಅಂಶವೆಂದೆ ಗುರುತಿಸಬಹುದು. ೨೫-೩೦ ವಯಸ್ಸಿನ ಅನುಪಾತದಲ್ಲಿ ಪದವಿ ತರಗತಿಯಲ್ಲಿ ೧೩ ಮತ್ತು ೩೦ ರ ನಂತರದ ವರ್ಗದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆದ ಒಟ್ಟು ೭೫ ಜನರನ್ನು ಕಾಣಬಹುದು.

ಜೇನುಕುರುಬರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರು ತಮ್ಮ ಕಾಲೋನಿಗಳ ಸುತ್ತಮುತ್ತಲಿನ ಶಾಲೆಗಳಲ್ಲಿ ಕಲಿತವರಾಗಿದ್ದಾರೆ. ನಂತರದ ಮಾಧ್ಯಮಿಕ ಶಾಲೆ ಮುಂದುವರೆಕೆಗೆ ಬೇರೆ ಗ್ರಾಮದವರೆಗೆ ಸಾಗಬೇಕಿದೆ. ಈ ಹಂತದ ಶಿಕ್ಷಣದಲ್ಲಿ ಇಳಿಕೆಯ ಪ್ರಮಾಣ ಗುರುತಿಸಬಹುದು. ಪ್ರೌಢಶಾಲೆಯ ಶಿಕ್ಷಣಕ್ಕೆ ತಾಲ್ಲೂಕು ಕೇಂದ್ರಗಳಿಗೆ ಬರಬೇಕಾಗಿರುವುದರಿಂದ ಈ ಪ್ರಮಾಣ ಗಣನೀಯವಾಗಿ ಇಳಿಕೆ ಪ್ರಮಾಣದಲ್ಲಿದೆ. ಈ ಹಂತದಲ್ಲಿ ೭೩ ಜನ ವಿದ್ಯಾರ್ಥಿಗಳು ಶಿಕ್ಷಣಪಡೆದಿರುವುದು ಕಾಣಬಹುದು. ಪ್ರೌಢಶಿಕ್ಷಣ ಹಾಗೂ ನಂತರದ ಶಿಕ್ಷಣಕ್ಕೆ, ನಗರ ಪ್ರದೇಶಕ್ಕೆ ಹೋಗುವುದು ಅನಿವಾರ್ಯವಾಗುತ್ತದೆ. ಪದವಿಪೂರ್ವ ಹಂತದಲ್ಲಿ ೩೯ ಜನ, ಪದವಿ ವಿಭಾಗದಲ್ಲಿ ೨೪ ಜನ. ಮತ್ತು ಇತರ ಐ.ಟಿ.ಐ. ತರಭೇತಿ ಪಡೆದಂತಹ ೮ ವಿದ್ಯಾರ್ಥಿಗಳನ್ನು ಕಾಣಬಹುದು. ಆದರೆ ಈ ಸಮುದಾಯದ ಜನರು ತಮ್ಮ ಬಡತನ ಮತ್ತು ಅಜ್ಞಾನದಿಂದ ಮುಂದಿನ ಶಿಕ್ಷಣಕ್ಕಾಗಿ ಅಷ್ಟಾಗಿ ಪ್ರಾಶಸ್ತ್ಯ ಕೊಟ್ಟಿರುವುದಿಲ್ಲವೆಂದೆನಿಸುತ್ತದೆ. ಕಾಲೇಜು ಶಿಕ್ಷಣಕ್ಕೂ ಸಹ ಇದೂ ಅನ್ವಯವಾಗುತ್ತದೆ. ಸ್ನಾತಕ ಪದವಿ ಪಡೆದ ಒಬ್ಬ ವಿದ್ಯಾರ್ಥಿ ಶಿಕ್ಷಣ ಬೇಕು ಸಾರ್ ಎನ್ನುತ್ತಾನೆ.

ಕೋಷ್ಟಕ ೩.೪ ರಲ್ಲಿರುವಂತೆ ಪ್ರತಿವರ್ಗದ, ವಯೋಮಾನದಲ್ಲಿನ ಪ್ರಗತಿ ಬೆರಳೆಣಿಕೆಯಷ್ಟು ಮಾತ್ರ. ಹೀಗಾಗಿ ಈ ಸಮುದಾಯದ ಜನರನ್ನು ವಿಶೇಷವಾಗಿ ಕಾಲೋನಿಯನ್ನು ಗಮನಿಸಿ ಶೈಕ್ಷಣಿಕ ಆದ್ಯತೆಯನ್ನು ಮೊದಲ ಪ್ರಾಶಸ್ತ್ಯವಾಗಿಸಿ, ಇವರುಗಳ ಶಿಕ್ಷಣದ ಬಗ್ಗೆ ಆಸ್ಥೆವಹಿಸಬೇಕಿದೆ.

ಕೋಷ್ಟಕ ೩.೪ : ವಯಸ್ಸಿಗನುಗುಣವಾಗಿ ವರ್ಗೀಕರಿಸಿದ ಶಿಕ್ಷಣದ ಅನುಪಾತ

ಕ್ರ.ಸಂ.	ವಯಸ್ಸಿನ ವರ್ಗೀಕರಣ	ಪ್ರಾಥಮಿಕ (೧-೪)	ಮಾಧ್ಯಮಿಕ (೫-೭)	ಪ್ರೌಢಶಾಲೆ (೮-೧೦)	ಪದವಿ ಪೂರ್ವ (೧೧-೧೨)	ಪದವಿ	ಸ್ನಾತಕ	ಇತರೆ
೧	೬-೧೦	೬೮	೮೨	-	-	-	-	-
೨	೧೦-೧೫	೧೨	೪೧	೪೧	-	-	-	-
೩	೧೫-೨೦	೧೧೧	೫೭	೨೩	೨೧	-	-	೧
೪	೨೦-೨೫	೭೩	೩೧	೩೧	೧೧	೭	-	೪
೫	೨೫-೩೦	೪೧	೫೩	೨	೭	೧೩	೧	೩
೬	೩೦ -	೧೯	೪೨	-	-	೪	-	-
ಒಟ್ಟು		೩೨೯	೩೦೬	೯೭	೩೯	೨೪	೧	೮

ಅಲ್ಲದೆ, ಸಂವಿಧಾನದ ೪೫ ನೇ ಕಲಂನಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿರುವುದು ಅರಿತು ಈ ಜನ ಸಮುದಾಯಗಳ ತಾಲ್ಲೂಕು ಮತ್ತು ಗ್ರಾಮಪಂಚಾಯತಿಗಳು ಉತ್ತೇಜನಕಾರಿ ಸಂಪರ್ಕದೊಂದಿಗೆ ಶೈಕ್ಷಣಿಕ ಆದ್ಯತೆಯನ್ನು ಅನುಷ್ಠಾನಗೊಳಿಸಬೇಕಿದೆ. ಆಶ್ರಮಶಾಲೆಗಳು ದಶಕದಿಂದ ವಂಚಿತವಾಗಿರುವ ಇವರುಗಳಿಗೆ ನಿರುತ್ಸಾಹ ತೋರದೆ ಪ್ರತಿ ಕಾಲೋನಿಗೂ ಉತ್ತೇಜನ ನೀಡಿ ಶೈಕ್ಷಣಿಕ ಕ್ರಾಂತಿ ಮಾಡುವತ್ತ ಸಾಗಬೇಕಿದೆ.

ಆರ್ಥಿಕ ಸ್ಥಿತಿಯ ಸ್ಥಾನಮಾನ

ಯಾವುದೇ ಒಂದು ಸಮುದಾಯ ತನ್ನ ಜೀವಂತ ಛಾಯೆಯ ಲಕ್ಷಣಗಳನ್ನು ಕೊಟ್ಟರೆ, ಅದು ಅವರುಗಳ ಆರ್ಥಿಕತೆಯ ಅತಿ ಮುಖ್ಯ ಅಂಗವಾಗಿರುತ್ತದೆ. ಆರ್ಥಿಕತೆ ಎನ್ನುವುದು ಸಮುದಾಯದ ಜೀವನ ವಿಧಾನದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಪ್ರಧಾನ ಪಾತ್ರದ ಅಂಶಗಳನ್ನು ತಿಳಿಯಪಡಿಸುತ್ತದೆ. ಆದರಿಂದಲೇ ಸಮುದಾಯದ ಅಭ್ಯಾಸಕ್ಕೆ ಆರ್ಥಿಕ ಸ್ಥಿತಿಗತಿಯ ಅಧ್ಯಯನ ಅತಿಮುಖ್ಯವಾಗುತ್ತದೆ. ಇದು ಮಾನವಾಭಿವೃದ್ಧಿ ಬಯಸುವ ಪ್ರಸ್ತುತದ ದಿನಗಳಲ್ಲಿ ಮಾನವ ಸಂಪನ್ಮೂಲದಿಂದಲ್ಲೇ ಆಯಾ ಸಮುದಾಯದ ಜನರ ಆರ್ಥಿಕ ಮಟ್ಟದ ಅರಿವು ಅವಶ್ಯಕವಾಗಿರುತ್ತದೆ. ಆರ್ಥಿಕತೆಯ ಅಂಶಗಳು ಸಹ ಮನುಷ್ಯನ ಜೊತೆಗೂಡಿ ಬರುವ ಅವನ ಬಯಕೆಗಳ ರೂಪದ ಮೂಲಕ ವಿಶಾಲ ವ್ಯಾಪ್ತಿಯಿಂದ ಕೂಡಿರುತ್ತವೆ. ಬಯಕೆಗಳೇ ಇಲ್ಲದ ಮನುಷ್ಯನನ್ನು ಕಾಣಲು ಸಾಧ್ಯವಿಲ್ಲ. ಹೀಗಾಗಿ ಆರ್ಥಿಕತೆ ಸಮಸ್ತ ಮನುಷ್ಯನ ಕುಟುಂಬ

ಜೀವನದ ನೈಜ ಸ್ಥಿತಿಯ ಚಿತ್ರಣವನ್ನು ತಿಳಿಸುತ್ತದೆ. ಈ ಆರ್ಥಿಕತೆಯ ವಿವಿಧ ಮಜಲುಗಳನ್ನು ಅನೇಕ ರೀತಿಯಿಂದಾಗಿ ಗುರುತಿಸಲೂಬಹುದು. ಆದರಿಂದಲೇ ಇಲ್ಲಿ ಸಮುದಾಯದಲ್ಲಿ ಮುಖ್ಯವಾದ ಮೂಲಾಂಶಗಳನ್ನು ಮಾತ್ರ ಗುರುತಿಸಿ, ಅವುಗಳ ಆಧಾರದ ಮೇಲೆ ಸಂಪೂರ್ಣ ಸಮುದಾಯದ ಅಭಿವೃದ್ಧಿಯ ಪಥವನ್ನು ಗುರುತಿಸಲಾಗಿದೆ.

ಭೂ ಹಿಡುವಳಿ: ಭೂಮಿ ಪ್ರಾಚೀನ ಕಾಲದಿಂದಲ್ಲೂ ಸಮಾಜದ ನಡುವಿನಲ್ಲಿ ಒಂದು ರೀತಿಯ ಅವಿನಾಭಾವ ಸಂಬಂಧವನ್ನು ಹೊಂದಿರುವುದು ಕಾಣಬರುತ್ತದೆ. ಖಾಸಗಿ ಆಸ್ತಿಯಾಗಿ ರೂಪುಗೊಳ್ಳುವ ಮುನ್ನ ಮುಕ್ತವಾದ ಕುಮ್ರಿಬೇಸಾಯ ಪದ್ಧತಿಯಲ್ಲಿ ಇದ್ದ ಸಮುದಾಯದಲ್ಲಿನ ಆಶೋತ್ತರಗಳು ಸ್ವತಂತ್ರನಂತರದ ಹೊಸ ಪರಿಕ್ರಮಗಳು ಹಂತ ಹಂತದ ಅಧಿಕಾರ ಮತ್ತು ಸರ್ಕಾರದ ಪ್ರಾಬಲ್ಯ ಬೆಳೆದು, ಭೂ ಹಿಡುವಳಿಯಿಂದ ಬಹುದೂರ ಕೊಂಡ್ಯೊಯಿದಿದೆ. ಭೂಸುಧಾರಣೆಗಳ ಅಸಮರ್ಪಕ ಜಾರಿಗೆ ಈ ನಾಡಿನ ಮಣ್ಣಿನ ಮಕ್ಕಳಾದ ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಶ್ರೇಣಿಕೃತ ಅಸಮಾನತೆ ತಂದು ನಿಲ್ಲಿಸಿ ವಂಚಿಸುತ್ತಿರುವುದು ಕಾಣಬಹುದಾಗಿದೆ. ಈ ಅಂಶಗಳನ್ನು ಭಾರತದ ಅಸಂಖ್ಯಾತ ಸಮೀಕ್ಷೆ ಹಾಗೂ ಮಾದರಿಗಳನ್ನು ವಿಶ್ಲೇಷಿಸಿರುವ ವೈಜ್ಞಾನಿಕ ಚಿಂತಕರು ಇದನ್ನು ಸ್ಪಷ್ಟಪಡಿಸಿದ್ದಾರೆ.

ಜೇನುಕುರುಬ ಸಮುದಾಯದ ಕಾಲೋನಿಗಳನ್ನು ಅನುಲಕ್ಷಿಸಿದಲ್ಲಿ ಭೂ ಹಿಡುವಳಿಯ ಒಡೆತನ, ಜಾತಿ ವ್ಯವಸ್ಥೆಯ ನಡುವೆ ನೇರ ಸಂಬಂಧವಿದೆ. ಭೂಮಿಯು ಗ್ರಾಮೀಣಭಾಗದ ಭೌತಿಕ ಆಸ್ತಿ. ಈ ಭೂ ಹಂಚಿಕೆಯಲ್ಲೂ ಸಹ ಪಾರದರ್ಶಕತೆ ಇಲ್ಲವಾಗಿದೆ. ಇಂತಹ ಭೌತಿಕ ಆಸ್ತಿಯು ಸಹ ಸರಿಯಾದ ಪ್ರಮಾಣದಲ್ಲಿ ವಿತರಣೆಯಾಗದಿರುವುದು ಇವರುಗಳ ಬಡತನಕ್ಕೆ ಕಾರಣವೆನ್ನಬಹುದು. ಹೀಗಾಗಿ ಈ ಸಮುದಾಯದ ಜನರ ಬಡತನಕ್ಕೆ ಭೂಮಿಯ ಅಸಮರ್ಪಕವಾದ ಹಂಚಿಕೆಯಾಗಿದೆ. ಭಾರತದ ಸಂವಿಧಾನದ ಅನುಚ್ಛೇದ ೩೮ ಮತ್ತು ೩೯ ನ್ನು ಪ್ರಸ್ತುತದ ವರೆಗೂ ವ್ಯವಸ್ಥಿತ ಕ್ರಮದಲ್ಲಿ ಜಾರಿ ಮಾಡದಿರುವುದರಿಂದ ಈ ಸಮುದಾಯಗಳು ಭೂಹಿಡುವಳಿ ಇಲ್ಲದೆ ಬಡತನದಲ್ಲಿ ಮುಂದುವರೆಯಲು ಒಂದು ಕಾರಣವೆನ್ನಬಹುದು.

ಕೋಷ್ಟಕ ೩.೫ ರಲ್ಲಿ ಭೂ ಹಿಡುವಳಿ ಜೇನುಕುರುಬರಿಗೆ ದೊರೆತ ಪ್ರಮಾಣದ ವಿವರವಿದೆ. ಮುಖ್ಯವಾಗಿ ಎರಡು ವಿಭಾಗಗಳನ್ನು ಇಲ್ಲಿ ಗುರುತಿಸಲಾಗಿದೆ. ಅಂದರೆ, ಭೂಮಿ ಹೊಂದಿಲ್ಲದ ಕುಟುಂಬಗಳು, ೨ ನೇ ವಿಭಾಗದಲ್ಲಿ ಭೂಹಿಡುವಳಿ ಹೊಂದಿರುವ ಕುಟುಂಬಗಳು. ಭೂ ಹಿಡುವಳಿ ಹೊಂದಿರುವವರಲ್ಲಿ ೦–೧ ಎಕರೆ, ೧–೨ ಎಕರೆ, ೨–೩ ಎಕರೆ, ಮತ್ತು ೩–೪ ಎಕರೆ ಮತ್ತು ೫ ಎಕರೆ ಎಂದು ಪ್ರಮಾಣಾನುಗುಣವಾಗಿ ವರ್ಗೀಕರಿಸಲಾಗಿದೆ. ಪಟ್ಟಿ ೩. ೫ ರಲ್ಲಿ ಕೊಟ್ಟ ಮಾಹಿತಿಗೆ ಅನುಗುಣವಾಗಿ ಜೇನುಕುರುಬರ ೨೧ ಕಾಲೋನಿಗಳ ೭೪೦ ಕುಟುಂಬಗಳು ಹೊಂದಿರುವ ಭೂಹಿಡುವಳಿಯ ಸಮಗ್ರ ಮಾಹಿತಿಯಾಗಿದೆ. ೭೪೦ ಕುಟುಂಬಗಳಲ್ಲಿ ೨೬೬ ಕುಟುಂಬಗಳಿಗೆ ಯಾವುದೇ ಭೂಮಿ ಲಭ್ಯವಿಲ್ಲ. ಹಿಂದೆ ಸರ್ಕಾರ

ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಕೃಷಿ ಮಾಡಲು ಭೂಮಿ ಒದಗಿಸಿದ್ದರೂ, ಭೂಹೀನ ಕುಟುಂಬಗಳ ಸಂಖ್ಯೆ ೨೬೬ ಆಗಿದೆ. ಇನ್ನುಳಿದಂತೆ ಪ್ರತಿಯೊಂದು ಕಾಲೋನಿಯಲ್ಲಿ ಭಿನ್ನವಾದ ಮಾಹಿತಿ ದೊರೆಯುತ್ತದೆ. ೪೭೪ ಕುಟುಂಬಗಳ ಕಾಲೋನಿಗಳಲ್ಲಿ ಕಂಡುಬರುವ ಮಾಹಿತಿಯೆಂದರೆ, ಸಾಮಾನ್ಯವಾಗಿ ೦-೧ ಎಕರೆ ಭೂಮಿ ಹೊಂದಿರುವ ಕುಟುಂಬಗಳ ಸಂಖ್ಯೆ. ೧೫೫ ಎಕರೆವಾರು ಪ್ರಮಾಣದಲ್ಲಿ ೧-೨ ಎಕರೆ ೧೪೭ ಕುಟುಂಬಗಳು, ೨-೩ ಎಕರೆ ಪ್ರಮಾಣದಲ್ಲಿ ೮೪ ಕುಟುಂಬಗಳು ಮತ್ತು ೩-೪ ಎಕರೆಗಳಲ್ಲಿ ೫೫ ಕುಟುಂಬಗಳಿಗೆ ಲಭ್ಯವಾಗಿರುವ ಭೂಹಿಡುವಳಿ ವಿಭಿನ್ನ ಸ್ಥಿತಿಯನ್ನು ತಿಳಿಯಪಡಿಸುತ್ತದೆ. ಇಲ್ಲಿ ಕೂಡ ಸರ್ಕಾರದ ಕೃಷಿ ಭೂಮಿ ವಿತರಣೆ ಇವರಿಗೆ ಸರಿಯಾದ ಕ್ರಮದಲ್ಲಿ ಲಭ್ಯವಾಗಿಲ್ಲವೆನ್ನಬಹುದು.

ಜೇನುಕುರುಬರು ಸುಮಾರು ವರ್ಷಗಳ ಹಿಂದೆ ಸ್ಥಳಾಂತರಗೊಂಡಿದ್ದರೂ ಅವರುಗಳಿಗೆ ಒದಗಿಸಬೇಕಾಗಿರುವ ಭೂಹಿಡುವಳಿ, ಸಮಸ್ಯೆಯ ರೂಪದಲ್ಲೇ ಇದೆ. ಅತಿ ಹೆಚ್ಚಿನ ಕುಟುಂಬಗಳು ೦-೧ ಎಕರೆ ಪ್ರಮಾಣದಲ್ಲಿರುವ ಕುಟುಂಬಗಳಾಗಿವೆ. ಹೀಗಾಗಿ ಎಲ್ಲಾ ಕಾಲೋನಿಗಳಲ್ಲಿ ಜಮೀನು ಇರುವರು ತೀರಾ ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಹೊಸ ಘಟಕವಾದ ನಾಗಪುರದಲ್ಲಿ ಇತ್ತೀಚೆಗೆ ಸ್ಥಳಾಂತರಗೊಂಡ ಕುಟುಂಬಗಳಿಗೆ ೫ ಎಕರೆ ಭೂಮಿಯನ್ನು ಒದಗಿಸಿರುವುದು ಕಂಡುಬರುತ್ತದೆ. ಒಂದೇ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅಕ್ಕ ಪಕ್ಕದ ಗ್ರಾಮಗಳು ಅಂದರೆ ಮೂರರಿಂದ ಐದು ಕಿಲೋಮೀಟರ್ ದೂರ ವ್ಯಾಪ್ತಿಯಲ್ಲಿರುವ ಒಂದೇ ಸಮುದಾಯಕ್ಕೆ ಒದಗಿಸಿರುವ ಭೂಮಿಯಲ್ಲಿ (ವಿಸ್ತೀರ್ಣದಲ್ಲಿ) ತಾರತಮ್ಯ ಗೋಚರಿಸುತ್ತದೆ. ಜೇನು ಕುರುಬರು ಅಧಿಕ ಸಂಖ್ಯೆಯಲ್ಲಿದ್ದರೂ ಭೂಹೀನ ಕುಟುಂಬಗಳೇ ಅಧಿಕವಾಗಿವೆ.

ದೊಡ್ಡಹೊಸೂರು, ಮರಳಕುಂಟೆ, ಸಿದ್ದಾಪುರ ಕಾಲೋನಿಗಳನ್ನು ಹೊರತು ಪಡಿಸಿದರೆ, ಇತರ ಎಲ್ಲ ಕಾಲೋನಿಗಳಲ್ಲಿ ಕೃಷಿಯೇ ಪ್ರಧಾನವಾಗಿದೆ. ಆದರೆ ಭೂ ಹಿಡುವಳಿ ಪ್ರಮಾಣ ತೀರಾ ಕಡಿಮೆ. ಅಂದರೆ ೦-೨ ಎಕರೆ ಹೊಂದಿದ ಜಮೀನಿನ ಮಿತಿಯಲ್ಲಿಯೇ ಇದೆ. ಸರ್ಕಾರದ ನೀತಿ ಸಮುದಾಯಕ್ಕೆ ಒದಗಿಸಿರುವ ಕೃಷಿ ಭೂಮಿ ಒಂದು ಪರಿಣಾಮಕಾರಿಯಾದ್ದದೇ. ಆದರೆ ಒದಗಿಸಿರುವ ಭೂ ಹಿಡುವಳಿ ಪ್ರಮಾಣ ಮತ್ತು ಪರಿಸರ (ಸ್ಥಳ) ಕೃಷಿಗೆ ಯೋಗ್ಯವಾದಂತಹ ಭೂಮಿಯೇ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. ಆದಾಗ್ಯೂ ಒದಗಿಸಿರುವ ಭೂಮಿಯಲ್ಲಿ ನೀರಾವರಿ ಸೌಲಭ್ಯಗಳಿಲ್ಲದೇ ಮಳೆಯನ್ನೇ ಆಶ್ರಯಿಸಬೇಕಿದೆ.

ಕೋಷ್ಟಕ ೩.೫ : ಜೇನುಕುರುಬರ ಭೂ ಹಿಡುವಳಿಯ ಪ್ರಮಾಣ

ಕ್ರ.ಸ.	ಸಮೀಕ್ಷೆಯ ಕಾಲೋನಿಗಳು	ಭೂಮಿ ಇಲ್ಲದ ಕುಟುಂಬಗಳು	ಭೂಮಿ ಹೊಂದಿರುವ ವಿವರ (ಎಕರೆಗಳ ವಿಸ್ತೀರ್ಣದಲ್ಲಿ)				
			೦–೧	೧–೨	೨–೩	೩–೪	೫
೧	ಬಲ್ಲೇನಹಳ್ಳಿ	೧೧	೮	೧೬	೩	–	–
೨	ವಾರಂಚಿ	೨೩	೨೦	೪	೩	–	–
೩	ನಾಗಪುರ ಘಟಕ (೪)	೧೩	–	–	–	೪೧	–
೪	ನಾಗಪುರ ಘಟಕ (೫)	೫	–	–	–	–	೩೩
೫	ಕೊಟ್ಟಿಗೆಕವಲು	೧೩	೧೦	೦೭	–	–	–
೬	ಪೆಂಜಳ್ಳಿ	೩೮	೧೨	೧೪	೩	–	–
೭	ನೆರಳಕುಪ್ಪೆ	೨೦	೩೨	೪	೩	–	–
೮	ಶೆಟ್ಟಿಹಳ್ಳಿ	೧೮	೧೬	೮	೧	–	–
೯	ಮರಳಕುಂಟೆ	೬	೨೪	೧೫	–	–	–
೧೦	ದೊಡ್ಡ ಹೊಸೂರು	೧೦	೧೦	೪	೫	–	–
೧೧	ಲಕ್ಷ್ಮೀಪುರ	೯	–	೧೨	–	–	–
೧೨	ಮದ್ದೂರು	೭	೮	೬	೫	–	–
೧೩	ಆರಕೇರಿ	೧೫	೧೧	–	–	–	–
೧೪	ಸಿದ್ದಾಪುರ	೨೩	–	೧೬	೧೨	–	–
೧೫	ಮಾವಿನಹಳ್ಳಿ	೧೪	–	–	–	–	–
೧೬	ಆರಳಹಳ್ಳಿ	೮	೩	೨	೫	೧೧	–
೧೭	ದಾಸನಪುರ	೮	–	–	೧೦	–	–
೧೮	ಬನ್ನಿಕುಪ್ಪೆ	೧೪	೧	೫		೩	–
೧೯	ಮುಕ್ತಿಕಾಲೋನಿ	೨	–	೬	೧೪	–	–
೨೦	ಬಂಡಿಪುರ	೨	–	–	೨೦	–	–
೨೧	ಮೇಲ್‌ಕಾಮನಹಳ್ಳಿ	೭	–	೨೮	–	–	–
	ಒಟ್ಟು	೨೬೬	೧೫೫	೧೪೭	೮೪	೫೫	೩೩

ಸಮುದಾಯಗಳ ಅವಿಭಕ್ತ ಕುಟುಂಬಗಳು ಒಡೆದು ಸರಳ ಕುಟುಂಬಗಳಾಗಿ, ತಮಗಾಗಿ ಬೇರೆ ಜಮೀನಿನ ಬೇಡಿಕೆ ಸಲ್ಲಿಲಾಗುತ್ತಿದೆ. ಇಂತಹ ಕುಟುಂಬಗಳಿಗೆ ಭೂಮಿ ಒದಗಿಸುವುದು ಕಷ್ಟವಾದರೂ ನೂರಾರು ಎಕರೆಗಳ ಸರ್ಕಾರಿ ಭೂಮಿಯನ್ನು ಸಮುದಾಯದ ಜನರೇ ತೋರಿಸುತ್ತಾರೆ. ಸಮುದಾಯಕ್ಕೆ ಯೋಜನೆಯ ಸೂಕ್ತ ಫಲದೊರೆಕ ಬೇಕಿದ್ದರೆ, ಸರ್ವಸಮ್ಮತವಾದ ಸರ್ವೆಕಾರ್ಯ ನಡೆದು ಸಮುದಾಯದ ಜನರಿಗೆ ಭೂಮಿ ಒದಗಿಸುವುದು ಸೂಕ್ತ ವಿಚಾರವೇ ಸರಿ. ಇಲ್ಲವಾದಲ್ಲಿ ಆರ್ಥಿಕ ಆಸಮಾನತೆಯನ್ನು ಪೋಷಿಸಿಕೊಂಡು ಬಂದಂತಾಗುತ್ತದೆ.

ಉದ್ಯೋಗಗಳ ಮಾದರಿ

ಸಮುದಾಯದ ಕುಟುಂಬಗಳ ಉದ್ಯೋಗಗಳಲ್ಲಿ ಬಹಳಷ್ಟು ಮಹತ್ವದ ಬದಲಾವಣೆ ಸ್ಪಷ್ಟವಾಗಿ ಕಂಡು ಬರುತ್ತದೆ. ಬಹುಸಂಖ್ಯಾತ ಕುಟುಂಬಗಳು ಸಂಪ್ರದಾಯಿಕ ಪದ್ಧತಿಯ ವೃತ್ತಿಗಳನ್ನು ತೊರೆದು, ತಮ್ಮ ಪರಿಸರಕ್ಕೆ ಅನುಗುಣವಾದಂತಹ ವಿಭಿನ್ನ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ಅನಿವಾರ್ಯವು ಸಹ, ಪೂರ್ವದಲ್ಲಿನ ಜೇನುಸಂಗ್ರಹಣೆ ಅರಣ್ಯ ಉತ್ಪನ್ನಗಳ ಮಾರಾಟ, ವಸ್ತುವಿನಿಮಯ ಪದ್ಧತಿಯು ಮಾಯವಾಗಿದೆ. ಕಾಲೋನಿ ಆರಂಭದಲ್ಲಿ ಆಹಾರದ ಸಲುವಾಗಿಯೇ ತೊಡಗಿಸಿಕೊಂಡ ವೃತ್ತಿಗಳು ಪ್ರಸ್ತುತ ಅನಿವಾರ್ಯವಾಗಿ ಮಾಡುವಂತೆ ಮಾಡಿದೆ. ಸರ್ಕಾರದ ಸ್ಥಳಾಂತರ ಕಾರ್ಯದ ನಂತರದ ದಿನಗಳು ಸ್ಥಳೀಯ ಪರಿಸರ ಮತ್ತು ಸ್ಥಳೀಯ ವೃತ್ತಿಗಳಲ್ಲಿ ತೊಡಗಿಸಿ ಕೊಳ್ಳುವಂತೆ ಮಾಡಿದೆ. ಈ ಬದಲಾವಣೆಗಳು ಸಮುದಾಯದಲ್ಲಿ ಎರಡು ಅತಿಮುಖ್ಯ ಬದಲಾವಣೆಗಳನ್ನು ಸೃಷ್ಟಿಸಿವೆ. (೧) ಸ್ಥಳೀಯ ವೃತ್ತಿಗಳು ಸಮುದಾಯದಲ್ಲಿನ ಆಂತರಿಕ ಉದ್ಯೋಗಗಳ ಮಾದರಿಯನ್ನೇ ಬದಲಾಯಿಸಿದೆ. (೨) ಉದ್ಯೋಗಗಳಲ್ಲಿನ ಬದಲಾವಣೆಗಳು ಸಂಪೂರ್ಣ ಸಮುದಾಯವನ್ನು ಆವರಿಸಿಕೊಂಡು ಸಂಪ್ರದಾಯಿಕ ವೃತ್ತಿಗಳ ಜೀವನ ವಿಧಾನದಿಂದ ದೂರ ತಂದು ನಿಲ್ಲಿಸಿದೆ. ಉದ್ಯೋಗಗಳಲ್ಲಿನ ಈ ಬದಲಾವಣೆ ಒಮ್ಮಿಂದಲ್ಲೇ ರೂಢಿಗೆ ಬಂದವುಗಳು ಅಲ್ಲ. ಇವುಗಳು ಹಲವಾರು ಹಂತಗಳಲ್ಲಿ ಹಂತ, ಹಂತವಾಗಿ ಬೆಳೆದು ಬಂದವುಗಳೇ ಆಗಿವೆ. ಈ ಪ್ರತಿ ಹಂತದ ಬೆಳವಣಿಗೆಯಲ್ಲಿ ಸ್ಥಳೀಯ ಅಗತ್ಯತೆಯ ಪ್ರಭಾವ, ಪರಿಸರದ ಜೀವನಕ್ರಮದಲ್ಲಿ, ಬದುಕುವ ಪರಿಯು ಮಹತ್ವದ ಪಾತ್ರ ವಹಿಸಿದೆ. ಒಂದು ಕಾಲದಲ್ಲಿ ಸಮುದಾಯದಲ್ಲಿದ್ದ ಆಹಾರದ ಸಂಗ್ರಹಣೆ ಮುಖ್ಯ ವೃತ್ತಿಯಾಗಿದ್ದಿತ್ತು. ನಂತರದ ವನ್ಯಮೃಗಗಳ ಸಂರಕ್ಷಣಾಯೋಜನೆ, ಹಾಗೂ ರಾಷ್ಟ್ರೀಯ ಅರಣ್ಯ ನೀತಿಯಿಂದ ಸ್ವಾಭಾವಿಕ ಜೀವನ ಪದ್ಧತಿಗೆ ಮಾರಕವಾಯಿತು. ನಂತರ ಜೀವನಕ್ಕೆ ಅಡ್ಡಿ ಅಂತಕಗಳು ನಿರಾಂತಕವಾದ ಮೇಲೆ ವ್ಯವಸಾಯ, ಕೂಲಿ, ಕಾರ್ಮಿಕವೃತ್ತಿಯೇ ಅವರ ಬದುಕಿನ ಬೆನ್ನೆಲುಬು ಆಗಿದೆ. ಅಲ್ಲದೆ ಕೆಲವು ಜನರಿಗೆ ಅರಣ್ಯ ಇಲಾಖೆಯಲ್ಲಿ ಕೆಲಸ, ದಿನಕೂಲಿ ಮತ್ತೆ ಕೇಲವರಿಗೆ ಸರ್ಕಾರದ ಭೂಮಿ ದೊರೆತ ಕಾರಣ ಜೀವನ ಕ್ರಮದ ಮೇಲೆ ಪರಿಣಾಮ ಬೀರಿರುವುದು ಕಾಣಬಹುದು.

ಸಮುದಾಯುದ ಪೂರ್ವದ ಉದ್ಯೋಗಗಳು

ಅರಣ್ಯ ಉತ್ಪನ್ನಗಳ ಸಂಗ್ರಹ:- ಜೇನುಕುರುಬರಲ್ಲಿ ಅರಣ್ಯ ಜೀವನ ಕ್ರಮ ಮೊದಲಿನಿಂದಲೂ ಜೊತೆಗೂಡಿ ಬಂದಂತದ್ದು. ಅರಣ್ಯಗಳಲ್ಲಿ ಸಿಗುವ ಕಿರು ಉತ್ಪನ್ನಗಳಾದ ಕಳಲೇಕಾಯಿ, ಕಕ್ಕೆ, ಚಕ್ಕೆ, ಪಾಚಿ, ದೂಪ, ನೆಲ್ಲಿಕಾಯಿ, ಸೀಗೆಕಾಯಿ, ಹುಣಸೆ ಇತ್ಯಾದಿಗಳನ್ನು ಸಂಗ್ರಹಿಸಿ ಗುತ್ತಿಗೆದಾರರಿಗೆ, ಇಲ್ಲವೇ ಸುತ್ತಮುತ್ತಲಿನ ಗ್ರಾಮಗಳ ದಲ್ಲಾಳಿಗೆ ವಸ್ತುವಿನಿಮಯ ಪದ್ಧತಿಯ ಕ್ರಮದಂತೆ ಮಾರಾಟ ಮಾಡುತ್ತಿದ್ದರು. ನಂತರ ಆರಂಭಗೊಂಡ ಸಹಕಾರ ಸಂಘಕ್ಕೆ

ಮಾರಾಟ ಮಾಡಿ ತಮ್ಮ ಜೀವನಕ್ಕೆ ಬೇಕಾದ ದವಸ, ಹಾಗೂ ಆಹಾರವಸ್ತು, ಗೃಹ ಬಳಕೆಯ ಪರಿಕರಗಳನ್ನು ಪಡೆದು ಜೀವನ ಸಾಗಿಸುತ್ತಿದ್ದರು. "ಅತ್ಯಂತ ಪ್ರಾಚೀನ ಸ್ಥಿತಿಯಲ್ಲಿದ್ದ ಸಂಪೂರ್ಣ ಕಾಡುಮಯವಾಗಿದ್ದ ಸಂದರ್ಭದಲ್ಲಿ ಗೆಡ್ಡೆಗೆಣಸು, ಹಣ್ಣುಹಂಪಲು, ಜೇನುಸಂಗ್ರಹಣೆಯಿಂದಲೇ ಸಂಪ್ರದಾಯಿಕ ಜೀವನ ಮತ್ತು ವೃತ್ತಿಯನ್ನು ಬೆಳೆಸಿಕೊಂಡು ಬಂದಿದ್ದೆವು ಎನ್ನುತ್ತಾರೆ ವಕ್ತೃ ಬೋರಯ್ಯನವರು."[೩]

ಜೇನು ಸಂಗ್ರಹಣೆ: ಜೇನು ಸಂಗ್ರಹಿಸುವುದು ವಂಶ ಪಾರಂಪರ್ಯವಾಗಿ ಬಂದ ಮೂಲ ವೃತ್ತಿಯಾಗಿದೆ. ಸಮುದಾಯದ ಸೃಷ್ಠಿ ಪುರಾಣದ ಐತಿಹ್ಯದಲ್ಲೇ ಈ ಅಂಶವನ್ನು ತಿಳಿಯಬಹುದು. ಹಾರುವ ಒಂದು ಜೇನಿನ ಹುಳುವಿನಿಂದ ಅದರ ಗೂಡು ಕಂಡು ಹಿಡಿಯುವ ಚತುರರು. ಎತ್ತರದ ಕೊಂಬೆಗಳಲ್ಲಿ ಜೋತಾಡುವ ಹೆಜ್ಜೇನನ್ನು, ಮರದ ಪೊಟರೆ, ಹುತ್ತಗಳಲ್ಲಿರುವ ತುಡುಬೆ ಜೇನನ್ನು ಸಂಗ್ರಹಿಸುತ್ತಾರೆ. ಜೇನಿನಲ್ಲಿರುವ ಬಿಳಿ ಮೊಟ್ಟೆಗಳಿಂದ ಕೂಡಿರುವ ಭಾಗವನ್ನು ಯಾರಿಗೂ ಮಾರಾಟ ಮಾಡುವುದಿಲ್ಲ. ಈ ತುಪ್ಪದ ಮೊಟ್ಟೆಯ ಭಾಗವನ್ನು ಹಾಡಿನ ಜನರೆಲ್ಲರೂ ಸಮನಾಗಿ ಹಂಚಿಕೊಂಡು ತಿನ್ನುತ್ತಿದ್ದರು. ಅದು ಸತ್ವಯುಕ್ತ ಪೌಷ್ಠಿಕ ಆಹಾರವೆನ್ನುವುದು ಅವರುಗಳ ನಂಬಿಕೆ. ಜೇನುಕುರುಬರ ಹೆಸರಿನ ಹಿನ್ನಲೆ ಮತ್ತು ಐತಿಹ್ಯದಲ್ಲಿಯೂ ಜೇನು ಸಂಗ್ರಹದ ಸಾಮಾಜಿಕ-ಆರ್ಥಿಕ ಜೀವನದ ನಂಟು ಕಾಣಬಹುದು.

"ಜೇನು ಸಂಗ್ರಹಣೆಯ ಪ್ರಾರಂಭಕ್ಕೆ ಮುಂಚೆ "ಬರೆ" ಎಂಬ ಮರಕ್ಕೆ ಪೂಜೆ ಸಲ್ಲಿಸುತ್ತಾರೆ"[೪] ಜೇನು ಸಂಗ್ರಹಣೆ ರಾತ್ರಿ ವೇಳೆ ಮಾಡುತ್ತಾರೆ. ಒಂದು ಜೇನುಗೂಡಿನಿಂದ ೨೫ ಲೀಟರ್ ಸಂಗ್ರಹಿಸಿದ ದಿನಗಳು ನೆನೆಯುತ್ತಾರೆ. ಜೇನುಸಂಗ್ರಹದಲ್ಲಿ ೪ ರೀತಿ ಮುಖ್ಯವಾಗಿದೆ.

ಹೆಜ್ಜೇನು: ದೊಡ್ಡ ಅರಣ್ಯದ ಮಧ್ಯದಲ್ಲಿರುವ ಬರೆ ಮರಗಳಲ್ಲಿ ಮತ್ತು ದೊಡ್ಡ ಕಲ್ಲು ಬಂಡೆಗಳಲ್ಲಿ ಈ ಜೇನುಗೂಡಿರುತ್ತದೆ. ಹೆಚ್ಚು ತುಪ್ಪ ಹಾಗೂ ಮೇಣದಿಂದ ಕೂಡಿರುತ್ತದೆ.

ತುಡುಬೆ ಜೇನು: ಇದು ಹುತ್ತದೊಳಗೆ ಗೂಡು ಕಟ್ಟಿಕೊಂಡಿರುವುದು ಸ್ವಲ್ಪಪ್ರಮಾಣದ ತುಪ್ಪವನ್ನು ಹೊಂದಿರುತ್ತದೆ.

ಕಿರುಜೇನು: ಬೊಂಬು ಮತ್ತು ಕುರುಚಲು ಪೊದೆಗಳಲ್ಲಿ ಗೂಡು ಕಟ್ಟುವ ಜೇನು. ಇದು ಇತರ ಎಲ್ಲಾ ಜೇನು ತುಪ್ಪಕ್ಕಿಂತ ಹೆಚ್ಚು ಸಿಹಿಯಾಗಿ ಮತ್ತು ರುಚಿಯಾಗಿರುತ್ತದೆ.

ಮಿಶ್ರಜೇನು: ಮರದ ಪೊಟರೆಗಳಲ್ಲಿ ಕಟ್ಟಿರುವ ಜೇನು. ಇದರ ತುಪ್ಪವು ಔಷಧಿಗಳ ತಯಾರಿಕೆಗೆ ಶ್ರೇಷ್ಠ ವಾದುದಾಗಿದೆ.

ಜೇನು ಸಂಗ್ರಹಣೆಯು ಸಾಮಾನ್ಯವಾಗಿ ಜೂನ್, ಜುಲೈ ಮತ್ತು ನವಂಬರ್ – ಡಿಸೆಂಬರ್ ತಿಂಗಳುಗಳಲ್ಲಿ ಮಾತ್ರ ಸಂಗ್ರಹ ಮಾಡುತಿದ್ದವರು.

ಬೇಟೆ: ಬೇಟೆಯು ಜೇನುಕುರುಬರಲ್ಲಿ ಆಹಾರದ ಮೂಲವಾಗಿತ್ತು. ಪೂರ್ವದ ಅರಣ್ಯ ಪರಿಸರದಲ್ಲಿ ನೆಲೆಸಿದ್ದ ಇವರುಗಳು ಅಪೂರ್ವವಾದ ಕಾಡು ಮೃಗಗಳ ಸಂಪತ್ತಿನ ಜೊತೆಗಿದ್ದರೂ, ಎಂದು ಆ ಪ್ರಾಣಿಗಳನ್ನು ಬೇಟೆಯಾಡುತ್ತಿರಲಿಲ್ಲ. ಸಣ್ಣ ಪ್ರಾಣಿ ಮತ್ತು ಪಕ್ಷಿಗಳನ್ನು ಹೆಚ್ಚಾಗಿ ಬಲೆಯನ್ನು ಮಾತ್ರ ಬಳಸಿ ಬೇಟೆ ಮಾಡುತ್ತಿದ್ದರು. ಕೋವಿಯಂತಹ ಸಲಕರಣೆ ಬಳಸುತ್ತಿರಲಿಲ್ಲ. ಕುಡಗೊಲ್ಲು, ಮಚ್ಚು, ಕತ್ತಿ ಮುಂತಾದ ಆಯುಧಗಳಿಂದ ಬೇಟೆಮಾಡುತ್ತಿದ್ದರು. ಇವರ ಆಹಾರ ಸಂಗ್ರಹಣೆಯ ಬೇಟೆಯ ಬಗ್ಗೆ ವಕ್ತೃ ಹೇಳುವಂತೆ "ಚಿಕ್ಕ ಬಲೆಗಳಿಂದ ಸಣ್ಣ ಪ್ರಾಣಿ, ಪಕ್ಷಿ ಮತ್ತು ಗಾಳದಿಂದ ಮೀನು ಹಿಡಿಯುತ್ತಾ ಜೀವಿಸುತ್ತಿದ್ದದಲ್ಲದೇ, ಕಾಡು ಪ್ರದೇಶದಲ್ಲಿ ಸತ್ತ ಪ್ರಾಣಿಗಳ ಮಾಂಸ, ಕೆಲವು ಪಕ್ಷಿಗಳ ಮೊಟ್ಟೆಯನ್ನು ಸಂಗ್ರಹಿಸುತ್ತಿದ್ದೆವು ಎನ್ನುತ್ತಾರೆ".[೫] ಅರಣ್ಯ ಇಲಾಖೆಯ ಇತ್ತೀಚಿನ ಕಾನೂನು ಕಾಡು ಪ್ರಾಣಿ ಮತ್ತು ಪಕ್ಷಿಗಳ ಬೇಟೆ ಮಾಡುವಂತಿಲ್ಲ ಹಾಗೂ ಬಲೆಹಾಕುವಂತಿಲ್ಲವೆಂದು, ಈ ಕಾರಣಕ್ಕೆ ಜೇನುಕುರುಬರ ಅನೇಕ ಬೇಟೆಯ ಅಂದರೆ ಬಲೆ ಕತ್ತಿ ಇತ್ಯಾದಿ ಸಲಕರಣೆಗಳನ್ನು ಅರಣ್ಯ ಇಲಾಖೆಯವರು ವಶ ಪಡಿಸಿಕೊಂಡಿದ್ದಾರೆ.

ಕಾಡು ಪ್ರಾಣಿಗಳನ್ನು ಪಳಗಿಸುವುದು: ಮೈಸೂರು ವಿಭಾಗದಲ್ಲಿರುವ ದಟ್ಟ ಅರಣ್ಯಗಳಾದ ನಾಗರಹೊಳೆ, ಬಂಡಿಪುರ, ಕಾಕನಕೋಟೆಯಲ್ಲಿ ಜೇನುಕುರುಬರು ಕಾಡು ಪ್ರಾಣಿಗಳಲ್ಲಿಯೇ ದೈತ್ಯವಾದ ಆನೆಯನ್ನು ಹಿಡಿಯುವ ಹಾಗೂ ಪಳಗಿಸುವ ವೃತ್ತಿಯಲ್ಲಿ ಪರಿಣತರಾಗಿದ್ದಾರೆ.[೬] ದೊಡ್ಡ ಗಾತ್ರದ ಆನೆಯನ್ನು ತಮ್ಮ ಮಾತಿನಂತೆ ನಡೆಯುವ ರೀತಿ ಕಲಿಸಿರುವುದು ವಿಶ್ವ ವಿಖ್ಯಾತ ದಸರ ಉತ್ಸವದಲ್ಲಿನ ಗಂಭೀರ ನಡಿಗೆಯಿಂದ ಕಾಣಬಹುದಾಗಿದೆ. ಸುಮಾರು ೭೫೦ ಕೆ.ಜಿ. ತೂಕದ ಚಿನ್ನದ ಅಂಬಾರಿಯೊಂದಿಗೆ ಸದ್ದು ಗದ್ದಲದ ಲಕ್ಷಾಂತರ ಜನರ ನಡುವೆ ಸೌಜನ್ಯಯುತ ನಡಿಗೆ ರೂಢಿಸುವ ರೂವಾರಿಗಳಾಗಿದ್ದಾರೆ. ಈ ವೃತ್ತಿಯು ಸರ್ಕಾರದ ಕಾಯಿದೆಯ ಅನುಷ್ಠಾನದ ನಂತರ ಸರ್ಕಾರದ ಕೆಲಸವೆಂದು ಧೃಡೀಕರಿಸಲಾಗಿದೆ. ಈ ಮೂಲಕ ಅರಣ್ಯದಲ್ಲಿ ಆನೆಯನ್ನು ಹಿಡಿಯಲು ಮತ್ತು ಪಳಗಿಸಲು ಮತ್ತು ಅರಣ್ಯದಲ್ಲಿರುವ ತಮ್ಮದೇ ಸಮುದಾಯಗಳನ್ನು ಒಕ್ಕಲೆಬ್ಬಿಸಲು ಬಳಸಲಾಗುತ್ತಿದೆ. ಎನ್ನುತ್ತಾರೆ ವಕ್ತೃ. ಇವರುಗಳು ಸಂಪೂರ್ಣ ಅರಣ್ಯಮಾಹಿತಿಯ ವಕ್ತಾರರು ಹೌದು. ಆದರೆ ಇವರುಗಳ ಬುದ್ಧಿಶಕ್ತಿ ಕನಿಷ್ಠ ಮಟ್ಟದ ದುಡಿಮೆಯಲ್ಲಿ ತೊಡಗಿಸಿಕೊಂಡು ದುಡಿಯುತ್ತಿರುವ ಡೋಲಾಯಮಾನ ಸ್ಥಿತಿ ಕಾಣಬರುತ್ತದೆ.

ಸಮುದಾಯದಲ್ಲಿನ ಉದ್ಯೋಗಗಳ ವಿಕಸನ ಹಂತಗಳು

ಸಮುದಾಯದ ಆಧಾರಸ್ಥಂಭವೇ ಅರಣ್ಯ. ಮುಕ್ತ ಜೀವನದ ಪರಿಸರದಲ್ಲಿ ಪ್ರಾಥಮಿಕ ಸ್ಥಾನವೇ ಅರಣ್ಯದಾಗಿತ್ತು. ಅರಣ್ಯ ಉತ್ಪನ್ನಗಳ ಸಂಗ್ರಹಣೆ ಎರಡು ರೀತಿಯಿಂದ

ಅನುಕೂಲಗಳನ್ನು ಮಾಡಿಕೊಟ್ಟಿತ್ತು. (೧) ಆಹಾರದ ಉತ್ಪನ್ನಗಳಾಗಿ ದೊರೆಕುತ್ತಿದ್ದ ವಸ್ತುಗಳು (೨) ಆದಾಯಗಳಿಸುವಂತಹ ಉತ್ಪನ್ನಗಳು ಬಹುಮುಖ್ಯವಾಗಿದ್ದವು. ಅರಣ್ಯ ಸಂಪತ್ತಿನ ಮೇಲೆ ನಡೆದ ಒತ್ತಡ ಹಾಗೂ ಖಾಸಗಿ ಜನರ ನೇರ ದೃಷ್ಟಿಯಿಂದ ಉತ್ಪನ್ನಗಳು ಗಣನೀಯವಾಗಿ ಕ್ಷೀಣಿಸುವಂತಾದವು. ಇಂತಹ ಸಂದರ್ಭದಲ್ಲಿಯೇ ರೂಪಗೊಂಡ ಅರಣ್ಯಕಾಯಿದೆ ನಿಯಮಗಳು ಮತ್ತಷ್ಟು ಜಟಿಲತೆಯನ್ನು ಉಂಟುಮಾಡಿದ್ದವು.

ಕೋಷ್ಟಕ ೩.೬ : ೫ ಕಾಲ ಘಟ್ಟಗಳಲ್ಲಿನ ವಿಕಸನದ ಸ್ವರೂಪ

ಆರ್ಥಿಕತೆಯ ಬೆಳವಣಿಗೆಯ ಹಂತಗಳು	ಕಾಲಾನುಕ್ರಮ	ಉದ್ಯೋಗಗಳು		ಸಂಪನ್ಮೂಲಗಳ ಅವಲಂಬನೆ	ಸಂಪನ್ಮೂಲಗಳು ಬಳಕೆಯಲ್ಲಿರುವುದು	ವಾಸ	ನೆಲೆನಿಂತ ಪರಿಸರ	ವಿಶೇಷ ಒತ್ತುಗಳು ಹಾಗೂ ಹೊಂದಾಣಿಕೆ
		ಪ್ರಾಥಮಿಕ	ಅನುಷಂಗಿಕ					
೧	ಆರಂಭದಿಂದ ೧೯ನೇ ಶತಮಾನ	ಜೇನು ಉತ್ಪನ್ನದ ಸಂಗ್ರಹಣೆ	ಬೇಟೆ ಕಾಡಿನ ಉತ್ಪನ್ನಗಳ ಸಂಗ್ರಹ	ಸಂಪೂರ್ಣ ಅರಣ್ಯದ ಸಂಪತ್ತು	ಅರಣ್ಯದ ಸಂಪತ್ತು ಸಸ್ಯರಾಶಿ	ಅರಣ್ಯದಲ್ಲಿ ಅಲೆಮಾರಿ ಜೀವನಕ್ರಮ	ಅರಣ್ಯಾಧಾರಿತ ವಾದದ್ದು	ಅರಣ್ಯದೊಳಗಿನ ಪರಿಸರ್‌ದೊಳಗೆ
೨	ಆರಂಭದ ಮಾಧ್ಯ ಶತಮಾನ	ಜೇನುಮೇಣ ತುಪ್ಪ	ಬೇಟೆ ಮೀನು ಹಿಡಿಯುವುದು	ಪ್ರಾಣಿಗಳು ಪಕ್ಷಿಗಳು ಸಸ್ಯರಾಶಿ ಮೀನುಗಳು	ಅರಣ್ಯ ಮತ್ತು ಸಸ್ಯರಾಶಿ	ಅಲೆಮಾರಿ ಜೀವನಕ್ರಮ	ಅರಣ್ಯಾಧಾರಿತವಾದದ್ದು	ಅರಣ್ಯಸಂಪತ್ತಿನ ಜೊತೆಗೆ ಸಹಜೀವನ
೩	೨೦ನೇ ಶತಮಾನದ ಮಾಧ್ಯ ಭಾಗದಿಂದ ಸ್ವಾತಂತ್ರ್ಯದವರೆಗೆ	ಕಾಡಿನ ಉತ್ಪನ್ನ ಕುಮ್ರಿಬೇಸಾಯ	ವಸ್ತುವಿನಿಮಯ ಪದ್ಧತಿ	ಹಣ್ಣುಗಳು ಸೊಪ್ಪುಗಳು ಭೂಮಿ, ನೀರು	ಅರಣ್ಯದೊಳಗಿನ ಮಣ್ಣಿನ ಉಪಯೋಗದ ಉತ್ಪತ್ತಿ	ಅರೆ ಅಲೆಮಾರಿತನದ ಜೀವನಕ್ರಮ	ಅರಣ್ಯ ಪರಿಸರ	ಅರಣ್ಯದಲ್ಲಿನ ಪ್ರದೇಶಗಳ ಇತರ ಸಮುದಾಯಗಳ ಜೊತೆಗೆ
೪	೧೯೫೦ರಿಂದ ೧೯೭೫ರ ವರೆಗೆ	ಅರಣ್ಯ ಉತ್ಪನ್ನ ಕುಮ್ರಿ ಬೇಸಾಯ	ವಸ್ತುವಿನಿಮಯ ಪದ್ಧತಿ ಕೃಷಿ	ತರಕಾರಿ, ಹಣ್ಣಿನ ಗಿಡಗಳು ಕೃಷಿಭೂಮಿ	ಅರಣ್ಯ ಮತ್ತು ಇತರೆ	ಸ್ಥಿರವಾದ ನೆಲೆ ಕಾಲಾನುಕ್ರಮದ ಅಲೆಮಾರಿತನ	ಕೆಳದರ್ಜೆಯ ಪರಿಸರದ ನಿರ್ಮಾಣ ಕ್ರಮ	ಪ್ರತ್ಯೇಕ ಕಾಲೋನಿಯ ಪರಿಸರದ ಜೀವನ
೫	೧೯೭೫ ರಿಂದ ಪ್ರಸ್ತುತ ವರೆಗೆ	ದಿನಗೂಲಿ ಕೃಷಿಕಾರ್ಮಿಕ	ಕೃಷಿ ಹಂಗಾಮಿ ಗ್ರಾಮೀಣಭಾಗದ ಕೃಷಿಕಾರ್ಮಿಕ	ಕೃಷಿ ಭೂಬಳಕೆ ತರಕಾರಿ ಸೊಪ್ಪು	ಅರಣ್ಯ ಮರಗಳು ಗ್ರಾಮೀಣ ಭಾಗದಲ್ಲಿ	ಸ್ಥಿರವಾದ ನೆಲೆ ಅರಣ್ಯ ಸುತ್ತಮುತ್ತ ಗುಡ್ಡಗಾಡು ಪ್ರದೇಶ	ಹಳ್ಳಿಗಾಡಿನ ಪರಿಸರದ ಪ್ರತ್ಯೇಕ ಕಾಲೋನಿ	ಗ್ರಾಮೀಣ ಭಾಗದ ಇತರೊಂದಿಗೆ ಹಳ್ಳಿಗಾಡಿನ ಜನರೊಂದಿಗೆ ಸಹ ಸಂಬಂಧ

ಪ್ರಸ್ತುತದ ಉದ್ಯೋಗಗಳು

ಸಮುದಾಯದ ಜನರು ಬೇರೆ ಬೇರೆ ಸ್ಥಳಗಳಿಗೆ ಸಾಗುತ್ತಿದ್ದಂತೆಯೇ ವೈವಿಧ್ಯಮಯವಾದ ಉದ್ಯೋಗ ಅವಕಾಶಗಳಿಗೆ ತೆರೆದುಕೊಂಡು ವಿಸ್ತ್ರುತಗೊಂಡಿದ್ದಾರೆ. ಅರಣ್ಯ ಕಾಯಿದೆಯಲ್ಲಿ ಕಾಣದ ಕೈಗಳ ಪ್ರಭಾವದಿಂದ ಇವರುಗಳ ವೃತ್ತಿಗಳು ಅನಿವಾರ್ಯವಾಗಿ ಬದಲಾಗಬೇಕಾಯಿತು. ಆದರೆ ಒಂದೇ ವೃತ್ತಿಯಲ್ಲಿ ಸಂಪೂರ್ಣ ಸಮುದಾಯ ಪರಿಣತಿ ಪಡೆಯುವಲ್ಲಿ ವಿಫಲವಾಗಿ ಉಳಿದಿದೆ. ಇರುವ ಅಲ್ಪ ಸ್ವಲ್ಪ ಭೂಮಿಯಲ್ಲಿ ಕೃಷಿಕರಾಗಿ, ಕೃಷಿ ಕಾರ್ಮಿಕರಾಗಿರುವರೇ ಹೆಚ್ಚು.

ಕೋಷ್ಟಕ ೩.೭ : ಪ್ರಸ್ತುತದ ಉದ್ಯೋಗಗಳು

ಕ್ರ. ಸಂಖ್ಯೆ	ಕಾಲೋನಿ	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಸ್ಥಾನೀಕರಣ ಗೊಂಡ ಸ್ಥಳ	ಅವಲಂಬಿತ ವೃತ್ತಿ / ಉದ್ಯೋಗಗಳು					
				ದಿನಕೂಲಿ	ಕೃಷಿ ಕಾರ್ಮಿಕ	ವ್ಯಾಪಾರ	ವ್ಯವಸಾಯ	ಸರ್ಕಾರಿ	ಹಂಗಾಮಿ
೧	ಬಲ್ಲೇನಹಳ್ಳಿ	೩೮	ಪ್ರತ್ಯೇಕ ಕಾಲೋನಿ	೧೭	೧೦	೧	೩	೧	೬
೨	ವಾರಂಚಿ	೫೦	ಪ್ರತ್ಯೇಕ ಕಾಲೋನಿ	೨೩	೧೧	-	೧೪	-	೨
೩	ನಾಗಪುರ ಘಟಕ ೪	೫೪	ಮುಖ್ಯ ರಸ್ತೆ	೮	-	-	೧೪	೩	೨೯
೪	ನಾಗಪುರ ಘಟಕ ೫	೩೮	ಮುಖ್ಯ ರಸ್ತೆ	೫	೨೧	೨	-	-	೧೦
೫	ಕೊಟ್ಟಗೆಕವಲು	೩೦	ಗ್ರಾಮದ ನಡುವೆ	೧೭	-	-	೩	-	೧೦
೬	ವೆಂಜಳ್ಳಿ	೬೭	ಗ್ರಾಮದ ನಡುವೆ	೩೩	೧೮	-	೫	-	೧೧
೭	ನೆರಳಕುಪ್ಪೆ	೫೯	ಕಾಲೋನಿ	೨೧	-	೧	೧೪	೧	೨೨
೮	ಶೆಟ್ಟಿಹಳ್ಳಿ	೪೩	ಕಾಲೋನಿ	೧೧	೨೨	-	-	೧	೯
೯	ಮರಳ್‌ಕುಂಟೆ	೪೫	ಗ್ರಾಮದ ನಡುವೆ	೧೩	-	-	೧೯	-	೧೩
೧೦	ದೊಡ್ಡ ಹೊಸುರು	೨೯	ಗ್ರಾಮದ ನಡುವೆ	೭	-	-	೮	-	೧೪
೧೧	ಲಕ್ಷ್ಮೀಪುರ	೨೧	ಕಾಲೋನಿ	೧೧	-	-	೬	೧	೩
೧೨	ಮದ್ದೂರು	೨೬	ಕಾಲೋನಿ	೧೩	-	-	೩	-	೧೦
೧೩	ಆರಕೇರಿ ಅರಣ್ಯ	೨೬	ಅರಣ್ಯ	೫	-	-	೧೦	೧	೧೦
೧೪	ಸಿದ್ಧಾಪುರ	೫೧	ಅರಣ್ಯ	೨೨	೧೦	-	೮	-	೧೧
೧೫	ಮಾವಿನಹಳ್ಳ	೧೪	ಅರಣ್ಯ	೩	೩	-	೫	-	೩
೧೬	ಆರಹಳ್ಳಿ	೨೯	ಕಾಲೋನಿ	೫	-	-	೭	೧	೧೬
೧೭	ದಾಸನಪುರ	೧೮	ಕಾಲೋನಿ	೫	-	-	೧೦	-	೨
೧೮	ಬನ್ನಿಕುಪ್ಪೆ	೨೩	ಕಾಲೋನಿ	೫	೧೧	-	೭	-	-
೧೯	ಮುಕ್ತಿಕಾಲೋನಿ	೨೨	ಕಾಲೋನಿ	೪	-	-	೧೫	-	೩
೨೦	ಬಂಡೀಪುರ	೨೨	ಅರಣ್ಯ	೨	-	-	೬	-	೧೪
೨೧	ಮೇಲ್‌ಕಾಮನಹಳ್ಳಿ	೩೫	ಕಾಲೋನಿ	೭	-	-	೧೪	-	೧೪
	ಒಟ್ಟು	೭೪೦		೨೩೭	೧೦೬	೫	೧೭೧	೯	೨೧೨

ದಿನಗೂಲಿ: ಜೀವನಾಧಾರ ವ್ಯವಸ್ಥೆಗೆ ಪರ್ಯಾಯವಾಗಿ ವಿಧಿ ಇಲ್ಲದೆ ಹೊಸತನದ ವೃತ್ತಿಗಳಲ್ಲಿ ದುಡಿಯಲ್ಲೇ ಬೇಕಾದ ಸಂಧರ್ಭ ಇವರುಗಳದು. ಪ್ರತಿಯೊಂದು ಕಾಲೋನಿಯಲ್ಲಿ ದಿನಕೂಲಿ ನೌಕರರು ಕಂಡು ಬರುತ್ತಾರೆ. ೨೩೭ ಕುಟುಂಬಗಳು ಈ ರೀತಿಯ ದಿನಕೂಲಿಯಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳಾಗಿವೆ. ದಿನನಿತ್ಯದ ಕೂಲಿಗಾಗಿ ಶ್ರೀಮಂತ ಭೂಮಾಲೀಕರಲ್ಲಿ, ರೈತರ ಹೊಲ, ತೋಟಗಳಲ್ಲಿ, ಗಾರೆಕೆಲಸ, ಮತ್ತು ಮನೆ ಕೆಲಸಗಳಲ್ಲಿ

ದುಡಿಯುತ್ತಾರೆ. ಆ ದಿನದ ಕೂಲಿಯನ್ನು ನಗದು ಹಣದ ರೂಪದಲ್ಲಿ ಆ ದಿನವೇ ಪಡೆಯುವರು. ಹಲವರು, ವಾರಕೊಮ್ಮೆ ಪಡೆಯುವರಿದ್ದಾರೆ. ದಿನಕೂಲಿಯನ್ನು ದುಡಿಮೆಗೆ ಅನುಗುಣವಾಗಿ ಕೊಡಲಾಗುತ್ತಿದೆ. ವಯಸ್ಕ ಗಂಡಸರು ಮತ್ತು ಹೆಂಗಸರಿಗೆ ದಿನಕ್ಕೆ ಬೇರೆ, ಬೇರೆ ಕೂಲಿ ಕೊಡುತ್ತಾರೆ. ಇಲ್ಲಿ ೧೪ ವರ್ಷಕ್ಕಿಂತ ಚಿಕ್ಕ ವಯಸ್ಸಿನವರನ್ನು ಕಡಿಮೆ ಕೂಲಿಗೆ ದುಡಿಸುತ್ತಿರುವ ನಿದರ್ಶನ ಕಂಡು ಬರುತ್ತದೆ.

ದಿನಕೂಲಿಗಾಗಿ ದೂರದ ಕೊಡಗು ಜಿಲ್ಲೆಯ ಕಾಫಿ ತೋಟದ ಭೂಮಾಲೀಕರಲ್ಲಿಗೆ ತೆರಳುವುದು ವಿಶೇಷವಾಗಿದೆ. ಎಷ್ಟೋ ಜನರು ಕಾಫಿ ತೋಟದ ಕೆಲಸಕ್ಕೆ ಹೋದರೆ ವಸತಿ, ಊಟದ ವ್ಯವಸ್ಥೆ ದೊರೆಯುತ್ತದೆ ಎನ್ನುತ್ತಾರೆ. ದಿನಗೂಲಿಯಲ್ಲಿ ವಾರ್ಷಿಕ ಅಥವಾ ಆಗಾಗ ಕೂಲಿಧರ ಹೆಚ್ಚು ಕಡಿಮೆಯಾಗುತ್ತಾ ಸ್ಥಳೀಯ ಬೇಡಿಕೆಗೆ ಅನುಸಾರವಾಗಿ ಇರುತ್ತದೆ.

ಕೃಷಿಕಾರ್ಮಿಕರು: ಭೂಮಿಯನ್ನು ಹೊಂದಿಲ್ಲದ ಇತರ ಕುಟುಂಬಗಳು ನೆಲೆನಿಂತ ಪರಿಸರಕ್ಕೆ ತಕ್ಕಂತೆ ಅಕ್ಕಪಕ್ಕದ ಗ್ರಾಮಗಳಲ್ಲಿ ನೆಲೆಸಿರುವ ರೈತ ಕುಟುಂಬಗಳಿಗೆ, ಪ್ರತಿವರ್ಷದ ಎರಡು ಋತುಮಾನಗಳಲ್ಲಿ ಬೇಸಾಯ ಮತ್ತು ಇತರರ ತೋಟಗಳಲ್ಲಿ ಕೃಷಿಕಾರ್ಮಿಕರಾಗಿ ವಿವಿಧ ಕೆಲಸವನ್ನು ಮಾಡುವರಾಗಿದ್ದಾರೆ. ಕೃಷಿಕಾರ್ಮಿಕರಾಗಿ ೧೦೬ ಕುಟುಂಬಗಳು ತೊಡಗಿಸಿಕೊಂಡಿವೆ. ಸುತ್ತಮುತ್ತಲಿನ ೫ ರಿಂದ ೬ ಕಿ.ಮಿ. ದೂರದ ವರೆಗಿನ ರೈತರಲ್ಲಿ ಕೃಷಿಕಾರ್ಯಗಳಾದ ಉಳುಮೆ ಮಾಡುವುದು, ಕಟಾವು, ನಾಟಿ ಮಾಡುವುದು, ಕಣಮಾಡುವುದು ಅಲ್ಲದೆ ರೈತನ ಮನೆ ಕೆಲಸವನ್ನು ಸಹ ಮಹಿಳೆ ಮತ್ತು ಪುರುಷರೆನ್ನದೆ ನಿರ್ವಹಿಸುತ್ತಿದ್ದಾರೆ. ಬಹುತೇಕ ಕೃಷಿ ಕಾರ್ಮಿಕರು ಭೂ ಮಾಲೀಕರಲ್ಲಿ ಸಾಲಮಾಡಿರುವವರೇ. ತಮ್ಮ ಕುಟುಂಬದ ನಿರ್ವಹಣೆಗೆ ಮೊದಲೇ ಮಾಡಿದ ಸಾಲ ತೀರಿಸಬೇಕಾದ ಪರಿಸ್ಥಿತಿ ಕೂಲಿಯನ್ನು ಹೆಚ್ಚಿಗೆ ಕೇಳುವ ಆಗಿಲ್ಲ. ಮತ್ತು ಕೆಲವು ಕುಟುಂಬಗಳು ಪರ್ಯಾಯವೆಂಬಂತೆ, ಬೀಜ, ಗೊಬ್ಬರ, ಉಳುಮೆ ಮಾಡುವ ಎತ್ತುಗಳು, ಟ್ರ್ಯಾಕ್ಟರ್ ಸಹಾಯ ಸಹ ಪಡೆಯುವರಾಗಿದ್ದಾರೆ. ಈ ರೀತಿಯ ಕೆಲಸ ಕಾರ್ಯ ಮಾಡುವಾಗ ಕೆಲವು ಕುಟುಂಬಗಳು ಸ್ವಲ್ಪ ಹಣ ಹಾಗು ಆಹಾರ ಧಾನ್ಯಗಳ ರೂಪದಲ್ಲಿ ಕೂಲಿಯನ್ನು ಪಡೆಯುತ್ತಿದ್ದಾರೆ.

ವ್ಯವಸಾಯ: ಸ್ಥಳಾಂತರ ಕಾರ್ಯದ ಮೂಲಕ ಸರ್ಕಾರ ಇವರುಗಳ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಿ ಭೂ ಹಿಡುವಳಿಯನ್ನು ಒದಗಿಸಿದೆ. ಸ್ವಂತ ದುಡಿಮೆಯ ವ್ಯವಸಾಯದಲ್ಲಿ ಮನೆಮಂದಿಯವರೆಲ್ಲಾ ಸೇರಿ ದುಡಿಯುತ್ತಾರೆ. ಸರ್ಕಾರವು ಉಚಿತವಾಗಿ ನೀಡಿದ ಎತ್ತುಗಳು, ಹಾಗೂ ಪರಿಕರಗಳು ಮತ್ತು ಕೆಲವು ಕುಟುಂಬಗಳು ಸ್ವಂತ ದುಡಿಮೆಯಿಂದ ಗಳಿಸಿದ ಪರಿಕರಗಳಿಂದ ಬೇಸಾಯ ಮಾಡುತ್ತಿದ್ದಾರೆ. ಸರ್ಕಾರ ಒದಗಿಸಿರುವ ಭೂ ಹಿಡುವಳಿಯ ಗುಣಮಟ್ಟ ತೀರ ಕಡಿಮೆ. ನೀರಾವರಿ ಸೌಲಭ್ಯಗಳಿಲ್ಲದ ಭೂಹಿಡುವಳಿಯು ಸಾಮಾನ್ಯವಾಗಿ ಹೊಲಗಳೇ ಆಗಿರುವುದರಿಂದ ಮಳೆಯನ್ನೇ ಆಸರೆಯಾಗಿಸಿ ಕೊಂಡಿದ್ದಾರೆ. ೪೭೪

ಕುಟುಂಬಗಳಲ್ಲಿ ಭೂಮಿ ಇದ್ದರೂ ಅದರ ಪ್ರಮಾಣ ತೀರಾ ಕಡಿಮೆ. ಇವರುಗಳ ವ್ಯವಸಾಯವನ್ನು ಎರಡು ಭಾಗಗಳಲ್ಲಿ ಗುರುತಿಸಲಾಗಿದೆ. ೧) ಮಳೆಯಾಧಾರಿತವಾದ ೨) ನೀರಾವರಿ ಅಥವಾ ನಾಲಾ ಆಧರಿಸಿದ್ದು ಬಹುತೇಕ ಕುಟುಂಬಗಳು ಮಳೆಯನ್ನೇ ನಂಬಿವೆ. ರಾಗಿ, ಜೋಳ, ಕಡ್ಲೆಕಾಯಿ, ಹುರುಳಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ನಾಲಾ ನೀರಾವರಿ ಸೌಲಭ್ಯ ಇರುವ ಕೆಲವು ಕುಟುಂಬಗಳು ಭತ್ತ, ಹೊಗೆಸೊಪ್ಪು, ಮೆಣಸಿನಕಾಯಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಒಟ್ಟಾರೆ ೧೭೧ ಕುಟುಂಬಗಳು ವ್ಯವಸಾಯದಲ್ಲಿ ತೊಡಗಿವೆ. ಬೇಸಾಯದ ಕ್ರಮ ಮತ್ತು ಭೂಹಿಡುವಳಿ ಗಾತ್ರ ಚಿಕ್ಕದಾಗಿರುವುದರಿಂದ ಆದಾಯ ಅಷ್ಟಕ್ಕಷ್ಟೆ. ಇವರು ಬೇಸಾಯದಿಂದ ಸಂಪೂರ್ಣ ಆದಾಯ ಪಡೆಯಲಾಗುತ್ತಿಲ್ಲ. ಸರ್ಕಾರದಿಂದ ದೊರೆತ ಭೂಮಿಯನ್ನು ಬೇರೆಯವರಿಗೆ ಭೋಗ್ಯಕ್ಕೆ ಬಿಟ್ಟು ಕೊಟ್ಟು ಅವರುಗಳು ಜಮೀನ್ದಾರರ ಜಮೀನಿನಲ್ಲಿ ವ್ಯವಸಾಯ ಮಾಡಿ, ಕೊಟ್ಟ ಕೂಲಿ ಮತ್ತು ಧಾನ್ಯಗಳಿಂದ ಜೀವಿಸುತ್ತಿದ್ದಾರೆ. ಆದರೂ ಅನೇಕರು ತಾವೇ ತಮ್ಮ ಜಮೀನಿನಲ್ಲಿ ಕೃಷಿ ಮಾಡಲು ಸಾಗಿದ್ದಾರೆ. ಇವರುಗಳಿಗೆ ಕೃಷಿ ಇಲಾಖೆಯ, ಬೀಜ ಹಾಗೂ ಸಾಮಾಗ್ರಿಗಳು, ಕಾಲಕಾಲಕ್ಕೆ ನೆರವು ಮತ್ತು ಮಾರ್ಗದರ್ಶನ ದೊರತಲ್ಲಿ ಉತ್ತಮ ವ್ಯವಸಾಯಗಾರರನ್ನಾಗಿ ರೂಪಿಸಬಹುದು.

ವ್ಯಾಪಾರ: ಆರ್ಥಿಕ ತೊಂದರೆಯಿಂದ ಬಳಲುತ್ತಿರುವ ಈ ಜನರು ಸಂಪೂರ್ಣ ಸರ್ಕಾರದ ಭೂಹಿಡುವಳಿಯನ್ನು ಪಡೆಯದ ಕುಟುಂಬಗಳು. ಸಣ್ಣ ಪೆಟ್ಟಿ ಅಂಗಡಿಗಳಲ್ಲಿ, ತಳ್ಳು ಗಾಡಿಗಳಲ್ಲಿ ತರಕಾರಿ, ಹಣ್ಣು, ಪ್ಲಾಸ್ಟಿಕ್ ಸಾಮಾನು, ಕಡ್ಲೆಕಾಯಿ ಮುಂತಾದ ವಸ್ತುಗಳನ್ನು ತಮ್ಮ ಕಾಲೋನಿಗಳಲ್ಲಿ, ಮತ್ತು ಬೀದಿಗಳಲ್ಲಿ ಮಾರಾಟ ಮಾಡುವ ಬೀದಿ ವ್ಯಾಪಾರಿಗಳಾಗಿ, ಸಣ್ಣ ಮತ್ತು ಅತಿ ಸಣ್ಣ ವ್ಯಾಪಾರಗಾರರಾಗಿ ಜೀವನೋಪಾಯಕ್ಕಾಗಿ ಈ ವಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವ ಜೇನುಕುರುಬರ ೫ ಕುಟುಂಬಗಳ ವ್ಯಾಪಾರ ಮಾತ್ರ ಮೂರುಕಾಸಿನ ವ್ಯವಹಾರವಾಗಿರುವುದು ಕಾಣಬರುತ್ತದೆ.

ಸರ್ಕಾರಿ ನೌಕರರು: ಜೇನುಕುರುಬರು ಅರಣ್ಯದ ಬಗ್ಗೆ ಅಗಾದ ಜ್ಞಾನವನ್ನು ಹೊಂದಿರುವರು. ಅರಣ್ಯದ ಕಾಡು ಪ್ರಾಣಿಗಳ ಬಗೆಗಿನ ಅವರುಗಳಲ್ಲಿ ವಿಶೇಷ ಮಾಹಿತಿಯೇ ಇದೆ. ವಿಶೇಷವಾಗಿ ಆನೆಗಳ ಜೊತೆಯಲ್ಲಿ ಮೈತ್ರಿಯನ್ನು ಸಂಪಾದಿಸುವುದರ ಜೊತೆಗೆ ಆನೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ. ಚಿಕ್ಕಂದಿನಿಂದಲ್ಲೂ ಆನೆಗಳ ವರ್ತನೆಯ ಬಗೆ ತಿಳಿದಿರುವ ಇವರನ್ನು ಮಾವುತರಾಗಿ ಸರ್ಕಾರವು ಕೆಲವರನ್ನು ಖಾಯಂ ಕೆಲಸದ ಮೇಲೆ ತೆಗೆದುಕೊಂಡಿದ್ದಾರೆ. ಅದಲ್ಲದೆ, ಅರಣ್ಯದಲ್ಲಿದ್ದ ಕುಟುಂಬಗಳಲ್ಲಿ ಕೆಲವರನ್ನು ಅರಣ್ಯ ಇಲಾಖೆಯಲ್ಲಿ ಅರಣ್ಯ ರಕ್ಷಕರಾಗಿ (ವಾಚರ್‌ಗಳಾಗಿ) ಸೇವೆಗೆ ನೇಮಕಮಾಡಿದ್ದಾರೆ. ಹೀಗೆ ಸರ್ಕಾರಿ ಕೆಲಸದಲ್ಲಿರುವ ೯ ಕುಟುಂಬಗಳ ಸದಸ್ಯರೆಲ್ಲರೂ 'ಡಿ' ದರ್ಜೆಯ ಉದ್ಯೋಗಿಗಳಾಗಿದ್ದಾರೆ. ಇಂತಹ ಕುಟುಂಬಗಳಲ್ಲಿ ಸ್ವಲ್ಪ ಮಟ್ಟಿನ ವ್ಯವಸ್ಥಿತವಾಗಿ ಜೀವನ ಸುಧಾರಿಸುತ್ತಿರುವ ಲಕ್ಷಣಗಳು

ಕಾಣಬಹುದು. ಆದರೆ ಸರ್ಕಾರಿ ಉದ್ಯೋಗ ಬಹುತೇಕ ಜೇನುಕುರುಬರಿಗೆ ಗಗನ ಕುಸುಮವೇ ಆಗಿದೆ.

ಪೂರಕ ವೃತ್ತಿಗಳು

ಹಂಗಾಮಿ ನೌಕರರು: ವರ್ಷದ ಸಾಮಾನ್ಯ ದಿನಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಕಾರ್ಯಗತಗೊಳಿಸುವ ಸಂದರ್ಭಗಳ ದೊರೆಕುವ ಕೆಲಸವಾಗಿದೆ. ಹಂಗಾಮಿಯಾಗಿ ಮರಕಡಿಯುವುದು, ಅರಣ್ಯದಲ್ಲಿ ಬೆಂಕಿಹಾರಿಸುವುದು, ಆನೆಯನ್ನು ಹಿಡಿಯಲು, ಮತ್ತು ಪಳಗಿಸಲು, ಅರಣ್ಯದಲ್ಲಿನ ಮರಗಳ ಪೋಷಣೆ, ಸಾಮಾಜಿಕ ಅರಣ್ಯಕಾರ್ಯಕ್ರಮದಲ್ಲಿ ಗಿಡ ನೆಡುವುದು, ಅರಣ್ಯದಲ್ಲಿ ರಸ್ತೆ ನಿರ್ಮಾಣದ ಕಾರ್ಯ, ಹುಲ್ಲು ಕುಯ್ಯುವುದು ಮೊದಲಾದ ಕೆಲಸಗಳಿಗೆ ಕೆಲಸವಿದ್ದ ದಿನಗಳಲ್ಲಿ ಇವರನ್ನು ಉಪಯೋಗಿಸಿಕೊಂಡು ನಿಗದಿತ ಕೂಲಿಯನ್ನು ಕೊಡಲಾಗುತ್ತದೆ. ಈ ಉದ್ಯೋಗವು ವರ್ಷಪೂರ್ತಿದೊರೆಯದೇ ವರ್ಷದಲ್ಲಿ ೨ ರಿಂದ ೩ ತಿಂಗಳು ಅಂದರೆ ಅಕ್ಟೋಬರ್ – ಡಿಸೆಂಬರ್ ತಿಂಗಳುಗಳಲ್ಲಿ ದೊರೆಯುವ ಕೆಲಸದಿಂದ ಸ್ವಲ್ಪ ಆದಾಯಗಳಿಸುತ್ತಾರೆ. ಬಹುತೇಕ ಎಲ್ಲಾ ಕಾಲೋನಿಗಳಲ್ಲಿ ಇಂತಹ ಪಡೆಯನ್ನು ಕಾಣಬಹುದು. ಬಿಡುವಿನ ವೇಳೆಯಲ್ಲಿ ಶ್ರೀಮಂತ ಭೂ ಮಾಲೀಕರಲ್ಲಿ ದೊರೆಯುವ ಕೆಲಸಗಳಿಗೂ ತೆರಳುತ್ತಾರೆ. ಬಹುತೇಕರು ಶಿಕ್ಷಣದಿಂದ ವಂಚಿತರಾದವರುಗಳೇ ಕೋಷ್ಟಕದಲ್ಲಿರುವ ೨೧೨ ಕುಟುಂಬಗಳು ಸದಾ ಕಾಲೋನಿಗಳಲ್ಲಿ ಜಾತಕ ಪಕ್ಷಿಯಂತೆ ಹಂಗಾಮಿ ಕೆಲಸಗಳಿಗೆ ಕಾಯುವ ಕುಟುಂಬಗಳೆ ಆಗಿವೆ. ಪ್ರತಿಯೊಂದು ಕಾಲೋನಿಗಳಲ್ಲಿ ನಿರುದ್ಯೋಗಿ ಪಡೆಯು ದಿನನಿತ್ಯ ಉದ್ಯೋಗಕ್ಕಾಗಿ ಜಾತಕ ಪಕ್ಷಿಯಂತೆ ಕಾಯುವ ಜನರಾಗಿ ಕಾಣಬರುತ್ತಾರೆ.

ಅರಣ್ಯ ಉತ್ಪನ್ನಗಳ ಮಾರಾಟ: ಕಾಡಿನಲ್ಲಿ ಹೇರಳವಾಗಿ ದೊರೆಯುವ ಬಿದಿರಿನಿಂದ ತಯಾರಿಸಿದ ಮೊರ, ಚಂದ್ರಿಕೆ ಮುಂತಾದ ಸಾಮಾನುಗಳನ್ನು ತಯಾರಿಸಿ ಮಾರಾಟ ಮಾಡುವುದು ಪೂರಕ ವೃತ್ತಿಯಾಗಿದೆ. ಬಂಡಿಪುರ, ನಾಗರಹೊಳೆಯಲ್ಲಿದ್ದ ಜನರು ಸ್ಥಳಾಂತರಗೊಂಡ ನಂತರ ಅರಣ್ಯದಲ್ಲಿದ್ದ ಸಣ್ಣ ಸಣ್ಣ ಉತ್ಪನ್ನಗಳನ್ನು ಮೀಸಲು ಅರಣ್ಯ ಕ್ಷೇತ್ರದಲ್ಲಿ ಪಡೆಯಲು ಅರಣ್ಯದವರು ಅನುಮತಿ ನೀಡುತ್ತಾರೆ. ಹುಣಸೂರು, ಪಿರಿಯಾಪಟ್ಟಣ, ತಾಲ್ಲೂಕು ವ್ಯಾಪ್ತಿಯಲ್ಲಿನ ಕಾಲೋನಿಗಳಿಗೆ ಕೆಲವು ನಿರ್ದಿಷ್ಟ ಮರಗಳು ನೀಡಿದ್ದಾರೆ. ಅವುಗಳಲ್ಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಾಗಿದ್ದಾರೆ. ಹುಣಸೆಹಣ್ಣು, ಮಾವಿನ ಹಣ್ಣು, ಸೀಗೆಕಾಯಿಯನ್ನು ಸುಮಾರು ೧೫ ವರ್ಷಗಳ ಹಿಂದೆ ೨೦ ರಿಂದ ೨೫ ಚೀಲ (ಮೂಟೆ) ಸಂಗ್ರಹಿಸಿ ಸಹಕಾರ ಸಂಘಕ್ಕೆ ಮಾರಾಟ ಮಾಡುತ್ತಿದ್ದ ಕುಟುಂಬಗಳು. ಈಗ ಕೇವಲ ೫–೬ ಮೂಟೆಗಳ ಮಾರಾಟಕ್ಕೆ ಸೀಮಿತವಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅರಣ್ಯ ಇಲಾಖೆ ಮತ್ತು ಸುತ್ತಮುತ್ತಲಿನ ಗ್ರಾಮದ ಶ್ರೀಮಂತ ಭೂಮಾಲೀಕರ ನಿರ್ಬಂಧದ ನಡುವೆ ಈ ವೃತ್ತಿಯನ್ನು ಬೆಳೆಸಿಕೊಳ್ಳಲು ತುಂಬಾ ಕಷ್ಟದಾಯಕವಾದ ಸ್ಥಿತಿ ಒದಗಿದೆ.

ಉದ್ಯೋಗಗಳ ಕಾಲಾನುಕ್ರಮ

ಕಾಲಾನುಕ್ರಮದ ಮಾದರಿಯನ್ನು ಸಮುದಾಯದ ಜನರು ತೊಡಗಿಸಿ ಕೊಂಡಿರುವ ಉದ್ಯೋಗಗಳು ಹಾಗೂ ಪೂರಕ ವೃತ್ತಿಗಳ ವಿವಿಧ ಕಾಲಬದ್ಧ ಕಾಲಾವಧಿಯನ್ನು ಪರಿಗಣಿಸಿ; ಸಮುದಾಯದ ಜನರು ಒಂದು ವರ್ಷದ ಅವಧಿಯಲ್ಲಿ ಯಾವ ಯಾವ ಉದ್ಯೋಗಗಳಲ್ಲಿ ತೊಡಗಿಸಿ ಕೊಂಡಿದ್ದಾರೆ ಎಂಬುದು ಸಾಮಾನ್ಯಿಕರಿಸಿ ನೀಡಲಾಗಿದೆ. ಇವರುಗಳ ಸುಮಾರು ವರ್ಷಗಳ ಉದ್ಯೋಗಗಳನ್ನು ಸಾಮಾನ್ಯೀಕರಿಸುವುದು ಅಸಾಧ್ಯವಾದುದು. ಆದ್ದರಿಂದಲೇ ಪ್ರಸ್ತುತದ ಒಂದು ವರ್ಷದ ಅವಧಿಯಲ್ಲಿನ ವೃತ್ತಿಗಳ ಕಾಲದ ಮಾದರಿಯನ್ನು ನೀಡಲಾಗಿದೆ.

ಕೋಷ್ಟಕ ೩.೮ : ವಾರ್ಷಿಕ ಅವೃತ್ತದಲ್ಲಿನ ಅವರ ವೃತ್ತಿ ಜೀವನಕ್ರಮ

ಕ್ರ.ಸ.	ವಿವಿಧ ವೃತ್ತಿ / ಉದ್ಯೋಗಗಳು	ವೃತ್ತಿಗಳಲ್ಲಿ ತೊಡಗಿಸಿ ಕೊಂಡಿರುವ ತಿಂಗಳುಗಳ ಕಾಲಾನುಕ್ರಮ											
		ಜ	ಫೆ	ಮಾ	ಏ	ಮೇ	ಜೂ	ಜು	ಆ	ಸೆ	ಅ	ನ	ಡಿ
೧	ದಿನಕೂಲಿ												
೨	ಕೃಷಿಕಾರ್ಮಿಕ												
೩	ವ್ಯವಸಾಯ	O	O	O	O	O	O	O	O	O	O	O	O
೪	ತೋಟದ ಕೆಲಸ												
೫	ವ್ಯಾಪಾರ		=	=	=				=	=	=	=	=
೬	ಹಂಗಾಮಿ ಕೆಲಸ	★	★	★	★	★	★	★	★	★	★	★	★

ಸೂಚಿಗಳು

★ ತಿಂಗಳಲ್ಲಿ ಯಾವುದಾದರೂ ದಿನ ಆಗಬಹುದು.

[· · ·] ನಿರ್ಧಿಷ್ಟ ದಿನದ ಲೆಕ್ಕಾಚಾರವಿರುವುದಿಲ್ಲ.

O ನಿರ್ಧಿಷ್ಟವಾಗಿ ನಿಗದಿಪಡಿಸಲಾಗುವುದಿಲ್ಲ ಭೂಮಿಯಲ್ಲಿ ಇತರೆ ಕೆಲಸದಲ್ಲಿ ತೊಡಗಿಸಿಕೊಳ್ಳುವುದರಿಂದ.

ಈ ಉದ್ಯೋಗಗಳ ಕ್ರಮದಲ್ಲಿ ಸಾಕಷ್ಟು ಸಂದರ್ಭನುಸಾರ ಬದಲಾಗುತ್ತಾ ಬಂದಿವೆ. ಸಂದರ್ಶನ ಮಾಡಲಾದ ೨೧ ಕಾಲೋನಿಗಳಲ್ಲಿ ಜನರು ತೊಡಗಿಸಿ ಕೊಂಡಿರುವ ವೃತ್ತಿಗಳು ಭಿನ್ನವೇ ಆದರೂ ಸಮುದಾಯದ ಎಲ್ಲಾ ಕಾಲೋನಿಗಳಲ್ಲಿನ ಉದ್ಯೋಗಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಆದರೂ ದಿನಕೂಲಿ, ಕೃಷಿಕಾರ್ಮಿಕ, ಹಂಗಾಮಿ, ವ್ಯವಸಾಯ ವೃತ್ತಿಗಳನ್ನೇ ಹೆಚ್ಚಿನ ಜನರು ಅವಲಂಬಿಸಿರುವುದು ಮುಖ್ಯವಾಗಿ ಕಾಣಬರುತ್ತದೆ. ಹೀಗಾಗಿ ಕಾಲಾವಧಿಯ ಚಿತ್ರಣವನ್ನು ಸಮುದಾಯದ ಜನರು ನಿರತರಾದ ವರ್ಷದ ಅವಧಿಯಲ್ಲಿನ ತಿಂಗಳ ಕ್ರಮದಲ್ಲಿ ಚಿತ್ರದ ಮೂಲಕ ಗುರುತಿಸಲಾಗಿದೆ.

ಕಾಲಬದ್ಧತೆಯ ಕಾಲಾನುಕ್ರಮವು ಈ ಜನರ ವಿರಾಮ ಹಾಗೂ ಕಡಿಮೆ ಸಂಖ್ಯೆಯ ಜನರು ರೂಢಿಸಿಕೊಂಡ ವೃತ್ತಿಗಳ ಅವಧಿಯನ್ನು ತಿಳಿದು, ನಂತರ ಬಿಡುವಿನ ಅವಧಿಯಲ್ಲಿ ಪರ್ಯಾಯ ವೃತ್ತಿ ತರಭೇತಿ ಕಾರ್ಯಕ್ರಮ ಹಮ್ಮಿಕೊಳ್ಳಲು ಸಹಾಯಕವಾಗುತ್ತದೆ. ಹೀಗಾಗಿ ವರ್ಷದ ಪ್ರತಿ ತಿಂಗಳ ಅನುಪಾತ ಪ್ರಥಕ್ಕರಿಸಿ ನೀಡಲಾಗಿದೆ.

ಕೋಷ್ಟಕ ೩.೮ ರಲ್ಲಿ ತೋರಿಸಲಾದಂತೆ ಇಲ್ಲಿನ ಎಲ್ಲಾ ಉದ್ಯೋಗಗಳು ಗಮನಿಸಿದಲ್ಲಿ, ಗ್ರಾಮೀಣ ಭಾಗದ ಜನರು ಹೆಚ್ಚಿನ ಮಹತ್ವ ನೀಡುವ ಆ ಪರಿಸರದ ಉದ್ಯೋಗ ಕ್ರಮದಂತೆ ಕಂಡುಬರುತ್ತದೆ. ಪ್ರತಿಯೊಂದು ವೃತ್ತಿಯು ಭಿನ್ನವಾದ ಕ್ರಮದಲ್ಲಿದ್ದು ಜೀವನ ನಿರ್ವಹಣೆಗೆ ಅನಿವಾರ್ಯವಾಗಿದೆ. ಪ್ರತಿಯೊಂದು ಕಾಲೋನಿಯ ಕೃಷಿಕಾರ್ಮಿಕರು ಅನಿವಾರ್ಯವಾಗಿ ದುಡಿಯಲೇಬೇಕಾದ ಪರಿಸ್ಥಿತಿ ಇದೆ. ವರ್ಷದ ಪ್ರತಿ ತಿಂಗಳು ದಿನಗೂಲಿಯಲ್ಲಿ ದುಡಿಯುವ ಜನರು, ಗಂಡು ಹೆಣ್ಣು ಎಂಬ ಭೇದವಿಲ್ಲದೆ ದುಡಿಯುವರಾಗಿದ್ದಾರೆ. ಆದರೆ ಪ್ರತಿ ತಿಂಗಳು ಎಲ್ಲಾ ದಿನಗಳಲ್ಲಿ ಉದ್ಯೋಗ ದೊರೆಕುತ್ತದೆ ಎನ್ನುವುದು ನಂಬಲಸಾಧ್ಯ. ಹೀಗಾಗಿ ತಿಂಗಳಲ್ಲಿ ಸಿಗುವ ೫ ರಿಂದ ೧೦ ದಿನಗಳ ದಿನಕೂಲಿಯೇ ಜೀವನಕ್ಕೆ ಆಸರೆಯಾಗಿದೆ. ಇನ್ನೊಂದೆಡೆ, ಕೃಷಿಕಾರ್ಮಿಕರಾಗಿ, ದುಡಿಯುವಂತೆ ಮಾಡಿದೆ. ಭೂ ಹಿಡುವಳಿ ಹೊಂದಿಲ್ಲದ ಬಹುತೇಕ ಕುಟುಂಬಗಳು ಪರ್ಯಾಯವಾಗಿ ಕೃಷಿಕಾರ್ಯ ರೂಢಿಸಿಕೊಂಡಿದ್ದಾರೆ. ವರ್ಷದ ಮಾರ್ಚ್ ತಿಂಗಳಿಂದ ಮೇ ವರೆಗೆ ಹಾಗೂ ಜುಲೈ ನಿಂದ ಅಕ್ಟೋಬರ್ ತಿಂಗಳವರೆಗೆ ಕೃಷಿ ಕಾರ್ಮಿಕರಾಗಿ ಭೂ ಮಾಲೀಕರಲ್ಲಿ ದುಡಿಯುವರಾಗಿದ್ದಾರೆ. ವ್ಯವಸಾಯದಲ್ಲಿ ತೊಡಗಿಸಿಕೊಳ್ಳುವರು ತಮ್ಮ ಸ್ವಂತ ಭೂಮಿಯಲ್ಲಿ ದುಡಿಯುವರು. ವರ್ಷದ ಮಳೆಯನ್ನೇ ಆಧರಿಸಿ ದುಡಿಯುವಂತ ಕುಟುಂಬಗಳಾಗಿವೆ. ವರ್ಷಪೂರ್ತಿ ತಮ್ಮ ಸ್ವಲ್ಪವೇ ಭೂಮಿಯಲ್ಲಿ ಕುಟುಂಬಕ್ಕೆ ಆಧಾರವಾದಂತಹ ರಾಗಿ, ಬೆಳೆ ಮತ್ತಿತರ ಧಾನ್ಯಗಳನ್ನು ಬೆಳೆಯುವಲ್ಲಿ ತೊಡಗಿಸಿಕೊಳ್ಳುತ್ತಾರೆ. ವ್ಯವಸಾಯದಲ್ಲಿ ತೊಡಗಿಸಿಕೊಳ್ಳುವರು ವರ್ಷಪೂರ್ತಿ ಇದೆ ವೃತ್ತಿಗಾಗಿ ಕಾಯುವ ಮತ್ತು ದುಡಿಯುವರಾಗಿದ್ದಾರೆ. ವಿರಾಮದ ವೇಳೆ, ಅಥವಾ ದಿನಗಳಲ್ಲಿ ಕಾಲೋನಿಗಳಲ್ಲಿ ಯಾಜಮಾನಿಕೆಯ ಸ್ಥಾನ ನಿರ್ವಹಿಸುತ್ತಾ ಕಾಲೋನಿಗಳಲ್ಲಿ ನಿರುದ್ಯೋಗಿಗಳಂತೆ ಕಾಣಸಿಗುತ್ತಾರೆ.

ತೋಟದ ಕೆಲಸವು ನಿರ್ದಿಷ್ಟವಾಗಿ ಆಯಾ ಪ್ರದೇಶದ ಅವಧಿಯನ್ನದೇ ಶ್ರೀಮಂತ ಭೂ ಮಾಲೀಕರು ವರ್ಷದಲ್ಲಿ ಬೆಳೆಯುವ ಬೆಳೆಯ ಅವಧಿಯನ್ನೇ ಅವಲಂಬಿಸಿರುತ್ತದೆ. ಹೆಚ್ಚಾಗಿ ವರ್ಷದ ಫೆಬ್ರವರಿ ತಿಂಗಳಿನಿಂದ ಮಾರ್ಚ್, ಹಾಗೂ ಸೆಪ್ಟೆಂಬರ್‌ನಿಂದ ಡಿಸೆಂಬರ್ ಅವಧಿಯಲ್ಲಿ ಇತರೆ ಕೆಲಸವಲ್ಲದೆ ಶ್ರೀಮಂತ ಭೂಮಾಲೀಕರ ಮನೆಗಳಲ್ಲಿ ತೋಟದ ಕೆಲಸದಲ್ಲಿ ದುಡಿಯುವರಾಗಿದ್ದಾರೆ. ವ್ಯಾಪಾರದಲ್ಲಿ ಕೆಲವೇ ಕೆಲವು ಕುಟುಂಬಗಳು ತೊಡಗಿಸಿಕೊಂಡಿದ್ದರೂ ಯಾವುದೇ ದಿನಗಳನ್ನು ನಿಗಧಿ ಗೊಳಿಸಲಾಗಿಲ್ಲ. ಸಮುದಾಯದ ವಕ್ತೃಗಳೇ ಹೇಳುವಂತೆ ಹೆಚ್ಚಾಗಿ ಫೆಬ್ರವರಿ ಯಿಂದ ಏಪ್ರಿಲ್, ಮತ್ತು ಜುಲೈನಿಂದ

ಡಿಸೆಂಬರ್ ಅವಧಿಯಲ್ಲಿ ಸಣ್ಣ ವ್ಯಾಪಾರ ಮಾಡುತ್ತಿರುವುದಾಗಿ ತಿಳಿದು ಬರುತ್ತದೆ. ವರ್ಷದ ಸಾಮಾನ್ಯ ದಿನಗಳಲ್ಲಿ ಯಾವುದೇ ದಿನಗಳೆನ್ನದೇ, ತಿಂಗಳುಗಳೆನ್ನದೇ ವರ್ಷಪೂರ್ತಿ ದೊರೆಯುವ ಕೆಲಸಕ್ಕಾಗಿ ಜಾತಕ ಪಕ್ಷಿಯಂತೆ ಕಾಯುವರಾಗಿದ್ದಾರೆ. ಪ್ರತಿವರ್ಷದಲ್ಲಿ ಬದುಕು ನಡೆಸಲು ಯಾವುದಾದರೊಂದು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯ. ಅದೇ ರೀತಿ ವರ್ಷದ ಎಲ್ಲಾ ಉದ್ಯೋಗಗಳು ಅನಿಚ್ಚಿತತೆಯಿಂದಲೇ ಕೂಡಿದವುಗಳು. ಆಯಾ ಋತುಮಾನಕ್ಕೆ ತಕ್ಕಂತೆ ದೊರಕುವ ವೃತ್ತಿ ಅವಲಂಬಿಸಿರುವುದು ಇದರಿಂದ ತಿಳಿದು ಬರುತ್ತದೆ. ಆದುದರಿಂದಲೇ ಪರ್ಯಾಯ ಉದ್ಯೋಗ, ತರಬೇತಿ, ಯೋಜನೆ ರೂಪಿಸುವಾಗ ಬದುಕಿನ ಭಾಗವಾದ ಉದ್ಯೋಗದ ಬಗ್ಗೆ ಸೂಕ್ತ ನಿರ್ವಹಣೆ ಬಹಳ ಅಗತ್ಯ.

ಆದಾಯದ ವರ್ಗೀಕರಣ

ಆದಾಯದ ವ್ಯಾತ್ಯಾಸಗಳು ನಾಗರೀಕ ಸಮಾಜದ ಸಾಮಾನ್ಯ ಜನವರ್ಗದಲ್ಲಿಯೇ ವಿಭಿನ್ನವಾಗಿದೆ. ಇನ್ನೂ ಬುಡಕಟ್ಟು ಸಮುದಾಯದಲ್ಲಿ ಹೇಳತೀರದು. ಜೇನುಕುರುಬರು ಆದಾಯಕ್ಕಾಗಿ ಕೂಲಿಯನ್ನೇ ನೆಚ್ಚಿಕೊಂಡಿದ್ದಾರೆ. ಸರ್ಕಾರಿ ಕೆಲಸದ ಕುಟುಂಬಗಳನ್ನು ಹೊರತು ಪಡಿಸಿದಲ್ಲಿ, ಇನ್ನುಳಿದ ಎಲ್ಲಾ ಕುಟುಂಬಗಳಿಂದ ಆದಾಯದ ಬಗ್ಗೆ ನಿರುತ್ತರ ಬರುತ್ತದೆ. ಇವರ ಆದಾಯದ ಮಾಹಿತಿ ಸಂಗ್ರಹಿಸುವುದು ಬಲು ಕಷ್ಟ. ವಿವಿಧ ಇಲಾಖೆಯ ಸಂಶೋಧಕರು, ಅರಣ್ಯದವರು, ಸಮಾಜಕಲ್ಯಾಣ ಇಲಾಖೆಯವರು ನಿರಂತರ ಮಾಹಿತಿ ಸಂಗ್ರಹಿಸುವುದರಿಂದ, ಕಾಲೋನಿಗಳಿಗೆ ಮತ್ತು ಜನ ಸಮುದಾಯದಕ್ಕೆ ಸಿಕ್ಕ ಲಾಭವಾದರೂ ಏನು ಎಂದು ಶಪಿಸುತ್ತಾ ಹಾರಿಕೆಯ ಉತ್ತರ ನೀಡುತ್ತಾರೆ. ಇಂತಹ ಕ್ಲಿಷ್ಟ ವಿಷಯವಾದ ಆದಾಯದ ವಿಷಯ ಸಂಗ್ರಹಣೆ ಕುಟುಂಬದ ಸದಸ್ಯರ ವೃತ್ತಿಗಳು ಹಾಗೂ ಗಳಿಕೆಯ ಹಣರೂಪಿ ಆದಾಯವನ್ನು ಇಲ್ಲಿ ಪಥಕ್ಕರಿಸಲಾಗಿದೆ. ಪ್ರತಿಯೊಂದು ಕುಟುಂಬವು ತನ್ನ ಸದಸ್ಯರೊಂದಿಗೆ ದುಡಿಯುವ ಕ್ಷೇತ್ರಗಳು, ಅಂತಹ ಕ್ಷೇತ್ರಗಳ ಕೂಲಿಯ ದರದ ಮೂಲಕವೇ ಆದಾಯವನ್ನು ಪಡೆಯಲಾಗುತ್ತಿದೆ. ಇಲ್ಲಿ ಆದಾಯದ ಮೂಲಕ ಬಡತನವನ್ನು ಗುರುತಿಸುವುದು ಇದರ ಉದ್ದೇಶವಲ್ಲ. ಬಡತನ ರೇಖೆಯನ್ನು ಗುರುತಿಸುವುದು ಸರ್ಕಾರದ ಕೆಲಸವಾದರಿಂದ ಬಡತನ ರೇಖೆಯಲ್ಲಿ ಆಗಾಗ ಬದಲಾವಣೆಗಳು ಸಾಮಾನ್ಯವಾಗಿವೆ. ಈ ಎಲ್ಲಾ ಅಂಶಗಳನ್ನು ಗಣನೆಯಲ್ಲಿಟ್ಟುಕೊಂಡು ಕುಟುಂಬಗಳ ಸಂದರ್ಶನದಲ್ಲಿ ಮಾಹಿತಿ ಪಡೆಯಲಾಯಿತ್ತು. ಬಹುತೇಕ ಜೇನುಕುರುಬರ ಉದ್ಯೋಗಗಳು ಅನಿಶ್ಚಿತತೆಯಿಂದಿರುವುದರಿಂದ, ಅವರ ಆದಾಯದ ಮೇಲು ಈ ಪರಿಣಾಮ ಕಾಣಬಹುದು. ಪ್ರತಿಯೊಂದು ಕುಟುಂಬದ ವೈಯಕ್ತಿಕ ವಿವರ ಪಡೆದು ಒಟ್ಟಾರೆ ತಾಲ್ಲೂಕು ವ್ಯಾಪ್ತಿಯಲ್ಲಿ ಕ್ರೋಢಿಕರಿಸಲಾಗಿದೆ. ಎಲ್ಲಾ ಬಹುತೇಕ ಜೇನುಕುರುಬರ ಕಾಲೋನಿಗಳಲ್ಲಿ ಒಂದು ರೀತಿಯ ಸಾಮ್ಯತೆ ಕಂಡು ಬರುವುದರಿಂದ ಪಟ್ಟಿಯನ್ನು ತಾಲ್ಲೂಕುವಾರು ನೀಡಲಾಗಿದೆ.

ಕೋಷ್ಟಕ ೩.೯ : ಆದಾಯ ವರ್ಗೀಕರಣ

ಕ್ರ. ಸಂಖ್ಯೆ	ಕಾಲೋನಿ / ತಾಲ್ಲೂಕು ವ್ಯಾಪ್ತಿ	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಆದಾಯದ ವರ್ಗೀಕರಣ (ರೂಪಾಯಿಗಳಲ್ಲಿ)			
			ರೂ. ೧ ರಿಂದ ೨೦೦೦	೨೦೦೦ ರಿಂದ ೪೦೦೦	೪೦೦೦ ರಿಂದ ೬೦೦೦	೬೦೦೦ ಕ್ಕಿಂತ ಹೆಚ್ಚಿನದು
೧	ಹುಣಸೂರು	೧೬೮	೮೪	೫೭	೨೧	೬
೨	ಹೆಚ್.ಡಿ. ಕೋಟೆ	೨೦೧	೩೯	೯೭	೫೨	೧೩
೩	ಪಿರಿಯಾಪಟ್ಟಣ	೮೩	೨೪	೪೩	೧೩	೩
೪	ಗುಂಡ್ಲುಪೇಟೆ	೫೩	೩೧	೧೩	೯	-
೫	ವೀರಾಜಪೇಟೆ	೧೦೫	೧೬	೨೮	೪೭	೧೪
೬	ಸೋಮವಾರಪೇಟೆ	೭೧	೨೨	೧೧	೨೯	೯
೭	ನಂಜನಗೂಡು	೫೯	೩೧	೨೧	೭	-
	ಒಟ್ಟು	೭೪೦	೨೪೭ (೩೩.೩೭%)	೨೭೦ (೩೬.೪೮%)	೧೭೮ (೨೪.೦೬%)	೪೫ (೬.೦೯%)

ಕೋಷ್ಟಕ ೩.೯ರಲ್ಲಿ ತೋರಿಸಿರುವಂತೆ ಜೇನುಕುರುಬರಲ್ಲಿ ಆದಾಯವು ಇತರೆಲ್ಲಾ ಸಮುದಾಯಗಳಿಗಿಂತ ಕಡಿಮೆ ಎನ್ನಬಹುದು. ಈ ಜನರು ಹೆಚ್ಚು ಕೂಲಿಯ ಮೇಲೆ ಅವಲಂಬಿತರಾಗಿರುವುದು ಇವರುಗಳ ಕಡಿಮೆ ಮಟ್ಟದ ಆದಾಯಕ್ಕೆ ಕಾರಣವೆನ್ನಬಹುದಾಗಿದೆ. ಸಮೀಕ್ಷೆಯಲ್ಲಿ ೭೪೦ ಕುಟುಂಬಗಳನ್ನು, ೪ ಹಂತಗಳ ಆದಾಯಕ್ಕೆ ಅನುಗುಣವಾಗಿ ವರ್ಗೀಕರಿಸಲಾಗಿದೆ.

ಪ್ರಾರಂಭದ ರೂ.೧ ರಿಂದ ೨೦೦೦ ರೂ. ವರೆಗೆ, ೨೦೦೧ ರಿಂದ ೪೦೦೦ ರೂ. ವರೆಗೆ, ಹಾಗೂ ೪೦೦೧ ರಿಂದ ೬೦೦೦ ರೂ. ವರೆಗೆ ಮತ್ತು ೬೦೦೧ ಕ್ಕಿಂತ ಹೆಚ್ಚು ಗಳಿಕೆಯ ಕುಟುಂಬಗಳನ್ನು ಗುರುತಿಸಲಾಗಿದೆ. ಪಟ್ಟಿಯನ್ನು ಅನುಲಕ್ಷಿಸಿದಲ್ಲಿ ಶೇಕಡ ೩೬.೪೮% ಅಂದರೆ ೨೭೦ ಕುಟುಂಬಗಳು ರೂ. ೪೦೦೦ ರೂಗಳ ಆದಾಯ ಗಳಿಸುತ್ತಿರುವುದು ಕಾಣಬಹುದು. ಶೇ. ೩೩.೩೭% ಅಂದರೆ ೨೪೭ ಕುಟುಂಬಗಳು ೨೦೦೦ ರೂ.ಗಳ ಆದಾಯಗಳಿಸುವ ಹಂತದಲ್ಲಿವೆ. ಇವೆಲ್ಲವು ಸಣ್ಣ ಕುಟುಂಬಗಳೇ ಎನ್ನಬಹುದು. ಉಳಿದಂತೆ ಶೇ. ೨೪.೦೬% ಅಂದರೆ ೧೭೮ ಕುಟುಂಬಗಳು ೬೦೦೦ ರೂ.ವರೆಗಿನ ಆದಾಯದ ಹಂಚಿನಲ್ಲಿವೆ. ನಗರ, ತಾಲ್ಲೂಕು ಕೇಂದ್ರ ಹಾಗೂ ಮುಖ್ಯ ರಸ್ತೆಯ ಮಾರ್ಗದಲ್ಲಿರುವ, ಮತ್ತು ಸರ್ಕಾರಿ ನೌಕರರನ್ನು ಹೊಂದಿರುವ ೪೫ ಕುಟುಂಬಗಳಲ್ಲಿ ಶೇ. ೦೬.೦೯% ಕುಟುಂಬಗಳು ೬೦೦೦ ರೂ.ಗಿಂತ ಹೆಚ್ಚಿನ ಪ್ರಮಾಣದ ಆದಾಯವನ್ನು ಹೊಂದಿರುವ ಕುಟುಂಬಗಳಾಗಿವೆ.

ಪ್ರತಿಹಂತದ ಶೇಕಡವಾರು ಮತ್ತು ಕುಟುಂಬಗಳ ಸಂಖ್ಯೆಯನ್ನು ಗಮನಿಸಿದಲ್ಲಿ ಬಡತನದ ರೇಖೆಯ ಕೆಳಗಿನವರೇ ಪ್ರಧಾನವಾಗಿದ್ದಾರೆ. ಹುಣಸೂರು ತಾಲ್ಲೂಕು ವ್ಯಾಪ್ತಿಯಲ್ಲಿ

ಕಂಡುಬರುವ ಬಹುತೇಕ ಕುಟುಂಬಗಳು ಕೂಲಿ ಕೆಲಸ ಹಾಗೂ ಹಂಗಾಮಿ ವೃತ್ತಿಗಳಲ್ಲಿ ತೊಡಗಿಸಿಕೊಂಡ ಕುಟುಂಬಗಳಾಗಿವೆ. ಬಹಳಷ್ಟು ಜೇನುಕುರುಬ ಕುಟುಂಬಗಳು ತಮ್ಮ ದಿನನಿತ್ಯದ ಜೀವನ ನಿರ್ವಹಣೆಗೆ ಮತ್ತು ಆಹಾರದ ಸಲುವಾಗಿ ದುಡಿಯುತ್ತಿರುವ ಕುಟುಂಬಗಳಾಗಿವೆ. ಗುಂಡ್ಲುಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿರುವ ೩೧ ಕುಟುಂಬಗಳು ೨೦೦೦ ರೂ.ಗಳ ಆದಾಯ ಪಡೆಯುತ್ತಿದ್ದಾರೆ. ಅಲ್ಲದೆ ಇಲ್ಲಿನ ಕಾಲೋನಿಯ ಜನರು ಪ್ರಸ್ತುತವೂ ವಸ್ತು ರೂಪದಲ್ಲಿ ಕೂಲಿಯನ್ನು ಪಡೆಯುತ್ತಿರುವುದು ಇವರುಗಳ ಬಡತನವನ್ನು ತೋರಿಸುತ್ತದೆ. ಉಳಿದಂತೆ ಹೆಚ್.ಡಿ.ಕೋಟೆ, ಪಿರಿಯಾಪಟ್ಟಣದ ತಾಲ್ಲೂಕು ವ್ಯಾಪ್ತಿಯಲ್ಲಿ ಸ್ವಯಂ ಸಂಸ್ಥೆಗಳ ಪಾತ್ರ ಪ್ರಭಾವ ಬೀರಿರುವುದರಿಂದ ಸ್ವಲ್ಪ ಮಟ್ಟಿನ ಚೇತರಿಕೆಯ ಬಡತನದ ಜೀವನ ಪ್ರಧಾನವಾಗಿ ಕಾಣಬರುತ್ತದೆ.

ಆದಾಯದ ಅನುಭೋಗ

ಸಮುದಾಯದಲ್ಲಿ ಶಿಕ್ಷಣದ ಪಾತ್ರವೇ ಕಡಿಮೆ. ಇವರುಗಳಲ್ಲಿ ಉಳಿತಾಯದ ಮನೋಭಾವವೇ ಇಲ್ಲ. ಗಳಿಸುವ ಅಲ್ಪ ಸ್ವಲ್ಪ ಆದಾಯದಲ್ಲಿ ಜೀವನೋಪಾಯವೇ ದುಸ್ಥಿತಿಯಲ್ಲಿದೆ. ಕೂಲಿ, ವ್ಯವಸಾಯ, ದಿನಕೂಲಿ ವೃತ್ತಿಗಳೇ ಪ್ರಧಾನ ಆಸರೆಯಾಗಿರುವುದರಿಂದ ಗಳಿಸುವ ಹಣವನ್ನು ಲೆಕ್ಕ ಇಡುವರಲ್ಲ. ಇವರುಗಳ ಅನುಭೋಗದ ಕ್ಷೇತ್ರಗಳು ಸೀಮಿತವಾಗಿವೆ. ಅರಣ್ಯದಂಚಿನಲ್ಲಿ ನೆಲೆನಿಂತಿರುವ ಇವರುಗಳ ಅಗತ್ಯವಾದ ಊಟ, ವಸತಿ, ಬಟ್ಟೆ ಸಿಗರೇಟು/ಬೀಡಿ, ಪ್ರಮುಖವಾದವುಗಳು. ದಣಿದ ದೇಹಕ್ಕೆ ಪರಿಹಾರವೆಂಬಂತೆ ಸಾರಾಯಿ/ಸೇಂದಿ ಅನಿವಾರ್ಯವಾಗಿದೆ. ಇದರಿಂದ ತಿಳಿದು ಬರುವುದೆನೆಂದರೆ ಸಮುದಾಯದಲ್ಲಿ ಉಳಿತಾಯವಿಲ್ಲ. ಮೈ ತುಂಬಾ ಸಾಲ ಮಾಡಿಕೊಂಡು ಅದನ್ನು ಪಾವತಿಸಲು ದೈಹಿಕವಾಗಿ ಸಿದ್ಧರಾಗುತ್ತಿದ್ದಾರೆ. ಹೀಗಾಗಿ ಆದಾಯದ ಅನುಭೋಗವನ್ನು ಗುರುತಿಸುವುದು ಒಂದು ಕ್ಲಿಷ್ಟಪ್ರಶ್ನೆಯಾಗಿದೆ.

ಕೃಷಿಯಿಂದ ಉಪಜೀವನ ಸಾಗಲಾರದೇ ಇರುವ ಕಾರಣ ಬೇರೆ ಉದ್ಯೋಗಕ್ಕೆ ಅವಕಾಶವಿಲ್ಲದೆ, ಈ ಜನರು ಸಿಕ್ಕ ದಿನದ ಕೂಲಿಗಾಗಿ ಪರಿತಪಿಸುತ್ತಿದ್ದಾರೆ. ವರ್ಷದ ಕೆಲವೇ ದಿನ ಕೂಲಿಯಲ್ಲಿ ದುಡಿಯುವುದರಿಂದ ಬಡತನ ಇವರುಗಳನ್ನು ಅನಿವಾರ್ಯವೆಂಬಂತೆ ವಸ್ತುರೂಪದ ವಿನಿಮಯಕ್ಕೆ ಎಡೆಮಾಡಿಕೊಟ್ಟಿದೆ. ಕುಟುಂಬದಲ್ಲಿನ ಉದ್ಯೋಗದಲ್ಲಿ ಅನಿಶ್ಚಿತತೆ ಇದ್ದು ಜೀವನ ಸಾಗಿಸುವುದು ಕಷ್ಟಕರವಾಗಿದೆ. ಆದಾಯದ ಪಟ್ಟಿಯಲ್ಲಿರುವಂತೆ ಶೇಕಡವಾರು ಕುಟುಂಬಗಳ ಮಾಹಿತಿಯನ್ನು ವಿಶ್ಲೇಷಿಸಿದಲ್ಲಿ ಈ ಜನರ ಜೀವನೋಪಾಯದ ಅಡಿಗಲ್ಲು ಅಭದ್ರತೆಯಿಂದಲೇ ಕೂಡಿದೆ. ಈ ದಿಶೆಯಲ್ಲಿ ಇವರ ಆರ್ಥಿಕ ಜೀವನ ಸುಧಾರಿಸುವತ್ತ ದೃಷ್ಟಿ ಹರಿಸುವುದು ಅತಿಮುಖ್ಯ ಮಹತ್ವದ ವಿಷಯವೆಂದು ಈ ಸಂದರ್ಭದಲ್ಲಿ ಹೇಳುವುದು ಅವಶ್ಯಕ. ಉತ್ತಮ ತರಬೇತಿ ಹಾಗೂ ವಿವಿಧ ಸಾಂಸ್ಥಿಕ ಮೂಲಗಳು ಸಮುದಾಯದ ಕ್ಷೇತ್ರಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಿದೆ.

೨. ಕೊರಗ ಸಮುದಾಯದ ಸಾಮಾಜಿಕ ಸ್ಥಿತಿ-ಗತಿ

ಕೊರಗ ಮೂಲನಿವಾಸಿ ಬುಡಕಟ್ಟು ಸಮುದಾಯದ ಕುಟುಂಬ ಜೀವನ ವಿಧಾನದ ಸಾಮಾಜಿಕ ವ್ಯವಸ್ಥೆಯಲ್ಲಿನ ಕತ್ತಲಿನ ದಿನಗಳು ಬಹುವಾಗಿ ಮಾಯಾವಾಗುತ್ತಾ ಬರುತ್ತಿವೆ. ನಿರಂತರ ಸಮಾಜಸೇವಕರ ಹೋರಾಟ, ಸರ್ಕಾರದ ಸೌಲಭ್ಯಗಳು ಸುಖಾಂತ್ಯದತ್ತ ತರುವಲ್ಲಿ ನಡೆದ ಪ್ರಯತ್ನಗಳ ಪರಿಣಾಮವಾಗಿ ಈ ಜನರಲ್ಲಿ ಸ್ವತಂತ್ರ್ಯ ಜೀವನದ ಪರಿಸ್ಥಿತಿ ಕಾಣಬಹುದು. ಅಸ್ಪ್ರುಶ್ಯತೆಯ ಘೋರ ಶಿಕ್ಷೆಯನ್ನು ಅನುಭವಿಸಿ, ಪ್ರಸ್ತುತ ಹಕ್ಕು ಬಾಧ್ಯತೆಗಳನ್ನು ಪಡೆಯುವಲ್ಲಿ ಸ್ವಲ್ಪಮಟ್ಟಿನ ಪ್ರಯೋಜನವನ್ನು ಮಾತ್ರ ಪಡೆದಿದ್ದಾರೆ. ಸಮುದಾಯದ ಜನರಲ್ಲಿ ಪೂರ್ವದ ಅಜಲು ಸೇವೆ ಮಾಯವಾಗುತ್ತಾ, ಪ್ರತ್ಯುತ್ತರವಾಗಿ ಸಾಮಾಜಿಕ ವ್ಯವಸ್ಥೆಯ ಜೀವನಕ್ರಮ "ಹೊರಗೆ ಶೃಂಗಾರ ಒಳಗೆ ಸೊಪ್ಪು" ಎಂಬ ನಾಣ್ನುಡಿಯಂತೆ ಇವರುಗಳ ಜೀವನ ತ್ರಿಶಂಕು ಸ್ಥಿತಿಯ ಕಡೆಗೆ ಮುಖಮಾಡಿದೆ. ಜೀತ ಪದ್ಧತಿಯ ಪರಿಸ್ಥಿತಿ, ಅನ್ನಕ್ಕಾಗಿ ಧನಿಗಳ ಮನೆಗಳಲ್ಲಿ ದಿನವಿಡೀ ಬೆಂದು ಬೆಂಡಾಗಿ ದುಡಿದ ಜೀವಗಳು ಇನ್ನೂ ತನ್ನ ಮೂಲ ಚಹರೆಯನ್ನು ಬಿಟ್ಟು ಕೊಡದೆ ಇರುವುದು ಕೊರಗರು ನೆಲೆಸಿರುವ ಕುಟುಂಬಗಳಲ್ಲಿ ಕಾಣಬಹುದಾಗಿದೆ.

ಬಹುತೇಕ ಕೊರಗರು ಪಶ್ಚಿಮ ಕರಾವಳಿಯ ಎರಡು ಜಿಲ್ಲಾ ಕೇಂದ್ರಗಳಲ್ಲಿ ನೆಲೆಸಿ, ವಿಶೇಷವಾದ ಪರಿಸರದ ಕಾಲೋನಿಗಳಲ್ಲಿ ಪ್ರಸ್ತುತ ಕಾಣಬರುತ್ತಾರೆ. ಕೊರಗರ ಬಹುತೇಕ ಕುಟುಂಬಗಳು ಮೂಲವೃತ್ತಿಯಾಗಿ ಪೂರ್ವದ ಸಫಾಯಿ ಕರ್ಮಚಾರಿ ಉದ್ಯೋಗ ಆಶ್ರಯಿಸಿಯೇ ಉಳಿದಿದ್ದಾರೆ. ಗ್ರಾಮಭಾಗದಲ್ಲಿನ ಕಾಲೋನಿಗಳು ಸಾಮಾಜಿಕವಾಗಿ ಶೋಚನೀಯ ಸ್ಥಿತಿಯಲ್ಲಿಯೇ ಉಳಿದಿವೆ. ಈ ಕುಟುಂಬಗಳು ದಿನನಿತ್ಯದ ಆಹಾರ ಸಾಮಾಗ್ರಿಗಳಿಗಾಗಿ ಗ್ರಾಮೀಣ ಭಾಗದ ಶ್ರೀಮಂತ ಧನಿಗಳ ಮನೆಯಲ್ಲಿ ಜೀತಗಾರಿಕೆ ಮಾಡಿಕೊಂಡು ಬದುಕುವ ಪರಿಸ್ಥಿತಿಯೂ ಕಾಣಬರುತ್ತದೆ. ಇವರುಗಳ ಕಸಬು, ಉಪಕಸಬು ಬದಲಾದರೂ ವಾಸಿಸುವ ಕಾಲೋನಿಗಳ ಪರಿಸರದಲ್ಲಿ ತನ್ನದೇ ವ್ಯವಸ್ಥೆ ಉಳಿಸಿಕೊಂಡಿದ್ದಾರೆ. ಸಂಪ್ರದಾಯ, ನ್ಯಾಯ, ಆಡಳಿತ, ಆಚರಣೆ, ಸಾಂಸ್ಕೃತಿಕ ಪ್ರತಿಬಿಂಬ ಇನ್ನೂ ಜೀವಂತವಾಗಿ ಉಳಿಸಿಕೊಂಡು ಬರುತ್ತಿದ್ದಾರೆ. ಸಾಮಾಜಿಕ ಪರಿವರ್ತನೆ ಸಾಮಾನ್ಯವಾಗಿದ್ದರೂ ಪ್ರತಿಯೊಂದು ಕಾಲೋನಿಯ ಹಿರಿಯರು ತಮ್ಮ ತಮ್ಮ ಕಾಲೋನಿಗಳಲ್ಲಿ ಬಿಗಿಯಾದ ಸಂಪ್ರದಾಯಿಕ ಒಳಾಡಳಿತ ವ್ಯವಸ್ಥೆಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿರುವುದು ಒಂದು ವಿಶೇಷವಾಗಿದೆ.

ಜಾತೀಯತೆಯ ಅರಿವಿಲ್ಲದ ಆದಿಮ ಸಂಸ್ಕೃತಿಯ ಮೂಲನಿವಾಸಿಗಳಾದ ಕೊರಗರು ತಮ್ಮ ವರ್ಗದಲ್ಲಿನ ಹಲವು ಸಮುದಾಯಗಳಲ್ಲೇ ಇವರುಗಳನ್ನು ಕೀಳು ಜನರೆಂದು ಕರೆಯುತ್ತಿರುವುದು ಕಂಡು ಬರುತ್ತದೆ. ಕೊರಗರ ವಾಸಸ್ಥಾನಗಳು ಪ್ರಸ್ತುತದಲ್ಲಿ ಮಿಶ್ರ

ಸಮುದಾಯಗಳೊಂದಿಗೆ ಜೊತೆಗೂಡಿದ್ದರೂ, ಇವರುಗಳನ್ನು ಗುರುತಿಸುತ್ತಿರುವ ಕ್ರಮ ವಿಶೇಷವಾಗಿದೆ. ಕಾಲೋನಿಗಳು ಸಣ್ಣ ಗುಂಪಿನ ೧ ರಿಂದ ೫ ಕುಟುಂಬಗಳು ಗ್ರಾಮೀಣ ಭಾಗದಲ್ಲಿದ್ದರೆ, ನಗರ ಪ್ರದೇಶದಲ್ಲಿ ಸುಮಾರು ೨೦ ರಿಂದ ೩೦ ಕುಟುಂಬಗಳಿವೆ. ಹಳ್ಳಿಗಾಡು ಪ್ರದೇಶದಲ್ಲಿ ನೆಲೆಸಿರುವವರು ಅತ್ಯಂತ ಬಡಸ್ಥಿತಿಯ ಕೆಳಮಟ್ಟದ ಜೀವನ ಸ್ಥಿತಿಯಲ್ಲಿರುವವರಾಗಿದ್ದಾರೆ. ಜಿಲ್ಲಾ ಮತ್ತು ತಾಲ್ಲುಕು ಕೇಂದ್ರಗಳಲ್ಲಿ ನೆಲೆಸಿರುವ ಕುಟುಂಬಗಳು ಸರ್ಕಾರದ ವತಿಯಿಂದ ನಿರ್ಮಿತವಾದ ವಸತಿ ತಾಣಗಳಾಗಿವೆ. ಈ ಎಲ್ಲಾ ಕುಟುಂಬಗಳು ಪೌರ ಕಾರ್ಮಿಕರ ವಸತಿ ಗೃಹ ಹಾಗೂ ಸರ್ಕಾರದಿಂದ ನಿರ್ಮಿತವಾದ ಕಾಲೋನಿಗಳಾಗಿವೆ. ಪ್ರಸ್ತುತದ ದಿನಗಳಲ್ಲಿ ಬಹಳಷ್ಟು ಸುಧಾರಣೆಯನ್ನು ಬಯಸುತ್ತಿರುವ ನಿದರ್ಶನ ಇಲ್ಲಿ ಕಾಣ ಬರುತ್ತದೆ. "ಕೊರಗರು ಅತ್ಯಂತ ಪ್ರಾಮಾಣಿಕರು ಯಾವುದೇ ಅಪರಾದದಲ್ಲಿ ಇವರು ಬೀಳುವುದೇ ಅಪರೂಪವೆಂದು ಸರ್ಕಾರಿ ವರದಿಯಲ್ಲಿದೆ.[೭] ಸದ್ಯಕ್ಕೆ ಲಭ್ಯವಿದ್ದ ಮಾಹಿತಿಯು ಸಮುದಾಯದ ಕಾಲೋನಿಗಳಲ್ಲಿ ಜಾತಿ ಕಲಹ ಹಾಗೂ ಸಂಪ್ರದಾಯಿಕ ನಡವಳಿಕೆಯನ್ನು ಗುರಿಕಾರನೇ ತಿರ್ಮಾನಿಸುತ್ತಿದ್ದಾನೆ. ಸಾಮಾಜಿಕ ವಿಧಿ ವಿಧಾನಗಳನ್ನು ಮೂಲ ಸಂಪ್ರದಾಯದಂತೆ ತುಳು ಭಾಷೆಯನ್ನು ಬಳಸಿ ಪೂರ್ವದ ವಿಧಿ ವಿಧಾನಗಳನ್ನು ಆಚರಣೆ ಮಾಡುತ್ತಿರುವುದು ಕಾಲೋನಿಯ ಪರಿಸರದಲ್ಲಿಯೇ ಕಂಡು ಬರುತ್ತದೆ. ಭೂತ ದೈವ, ಪ್ರಾಣಿಬಲಿ, ದೇವತಾರಾಧನೆ, ಚರ್ಮದ ಡೋಲಿಯನ್ನು ನುಡಿಸುತ್ತಿರುವುದು ಕೊರಗರ ಸಂಪ್ರದಾಯಿಕ ಕಲಾವೈಶಿಷ್ಟತೆಯಾಗಿ ಕಾಣಬಹುದಾಗಿದೆ.

ಕೊರಗರ ಕುಟುಂಬಗಳ ಗಾತ್ರ

ಸಮೀಕ್ಷೆಯ ೩೪೦ ಕುಟುಂಬಗಳಲ್ಲಿ ಕೊರಗರ ಪ್ರಸ್ತುತ ಕುಟುಂಬದ ಗಾತ್ರವನ್ನು ಸಮೀಕ್ಷಿಸಲಾಗಿ ಕುಟುಂಬದ ಸದಸ್ಯರ ಸಂಖ್ಯೆ, ಜೀವನ ಕ್ರಮವನ್ನು ತಿಳಿಯುವಲ್ಲಿ ಸಹಕಾರಿಯಾಗಿದೆ. ಒಟ್ಟು ೧೪೫೬ ಜನರಲ್ಲಿ ಕುಟುಂಬ ಸದಸ್ಯರ ಸಂಖ್ಯೆ ೩ ವರ್ಗದಲ್ಲಿರುವುದು ಕೋಷ್ಟಕ ೩.೧೦ ರಲ್ಲಿ ಕೊಡಲಾಗಿದೆ. ಮೊದಲ ಹಂತದಲ್ಲಿ ೧ ರಿಂದ ೪ ಜನರಿರುವ ಕುಟುಂಬಗಳು ೧೪೫(೪೨.೬೪%) ಅದೇ ರೀತಿ ೪ ರಿಂದ ೬ ಜನರ ಕುಟುಂಬಗಳ ಸಂಖ್ಯೆ ೧೪೩ (೪೨.೦೫%). ೩ನೇಯ ಹಂತದಲ್ಲಿ ೭ ಜನ ಸದಸ್ಯರಿಗಿಂತ ಹೆಚ್ಚಿನ ಸದಸ್ಯರಿರುವ ಕುಟುಂಬಗಳ ಸಂಖ್ಯೆ ೫೨ (೧೫.೦೩%) ಕಂಡುಬರುತ್ತದೆ. ಸಮೀಕ್ಷೆಯ ೮ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಕಾಲೋನಿಗಳನ್ನು ಕ್ರೋಢಿಕರಿಸಿ ನೋಡಿದಲ್ಲಿ ಸರಾಸರಿ ಕುಟುಂಬದ ಸದಸ್ಯರ ಸಂಖ್ಯೆ ಸಾಮಾನ್ಯವಾಗಿ ೪ ಜನರಿರುವರೇ ಎಂದು ಗುರುತಿಸಬಹುದು.

ಕೋಷ್ಟಕ ೩.೧೦ : ಕೊರಗರ ಸಮುದಾಯದ ಕುಟುಂಬದ ಗಾತ್ರ

ಕ್ರ. ಸಂ	ತಾಲ್ಲೂಕು ಕೇಂದ್ರ (ವ್ಯಾಪ್ತಿಯ ಪ್ರದೇಶ)	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಕುಟುಂಬದ ಗಾತ್ರ (ಜನಸಂಖ್ಯೆಗನುಸಾರವಾಗಿ)						
			೧ ರಿಂದ ೩		೪ ರಿಂದ ೬		೭ +		ಸರಾಸರಿ ಕುಟುಂಬ
			NO	%	NO	%	NO	%	
೧	ಕುಂದಾಪುರ	೬೬	೨೪		೨೯		೧೩		೪
೨	ಉಡುಪಿ	೩೯	೧೩		೧೭		೯		೪
೩	ಕಾರ್ಕಳ	೫೪	೨೭		೨೪		೩		೩
೪	ಮಂಗಳೂರು	೮೬	೩೧		೩೪		೨೧		೪
೫	ಬೆಳ್ತಂಗಡಿ	೨೭	೧೧		೧೪		೨		೪
೬	ಬಟ್ವಾಳ	೩೦	೧೯		೧೧		೦		೩
೭	ಸೂಳ್ಯ	೧೫	೯		೫		೧		೩
೮	ಪುತ್ತೂರು	೨೩	೧೧		೯		೩		೩
	ಒಟ್ಟು	೩೪೦	೧೪೫	೪೨.೬೪	೧೪೩	೪೨.೦೫	೫೨	೧೫.೩೦	

೮ ತಾಲ್ಲೂಕುಗಳಲ್ಲಿನ ಮಾಹಿತಿಯು ಪಟ್ಟಿಯಲ್ಲಿ ಕೊಟ್ಟಿರುವಂತೆ, ಹೆಚ್ಚಿನ ಪ್ರಮಾಣದಲ್ಲಿರುವ ೧೪೩ ಕುಟುಂಬಗಳು ಮಾಧ್ಯಮಗಾತ್ರವನ್ನು ಹೊಂದಿರುವ ಕೂಡು ಕುಟುಂಬಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಕೂಡು ಕುಟುಂಬದ ವ್ಯವಸ್ಥೆ ಮಾಯಾವಾಗುತ್ತಿದ್ದರೂ ಕೊರಗರಲ್ಲಿ ಕಾಣಬರುತ್ತದೆ. ಬಹುಸಂಖ್ಯಾತ ೧೪೩ ಕುಟುಂಬಗಳ ವಾಸಸ್ಥಾನವೂ ನಗರ ಪ್ರದೇಶದಲ್ಲಿಯೇ ಸ್ಥಾನೀಕರಣಗೊಂಡಂತಹ ಕುಟುಂಬಗಳಾಗಿವೆ. ಹೆಚ್ಚಿನ ಜನರು ಉದ್ಯೋಗ ನಿಮಿತ್ತ ನಗರಕ್ಕೆ ವಲಸೆ ಬರುತ್ತಿರುವುದರಿಂದಲೂ ಕುಟುಂಬದ ಗಾತ್ರ ೪ ರಿಂದ ೬ರ ಹಂತದಲ್ಲಿದೆ ಎನ್ನಬಹುದು. ೩ನೇ ಹಂತದಲ್ಲಿನ ೭ ಜನ ಸದಸ್ಯರಿಗಿಂತ ಹೆಚ್ಚಿನವರ ಕುಟುಂಬಗಳು ೫೨. ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಿವೆ.

ಒಟ್ಟಾರೆ ೧೪೫೬ ಜನಸಂಖ್ಯೆಯಲ್ಲಿ ಎಲ್ಲಾ ೩೪೦ ಕುಟುಂಬಗಳ ಗಾತ್ರವನ್ನು ನೋಡಿದಾಗ ಎಲ್ಲಾ ಕಾಲೋನಿಗಳಲ್ಲಿನ ಅಂಕಿ, ಅಂಶಗಳ ಸರಾಸರಿ ಜನಸಂಖ್ಯೆ ೩-೪ರ ಅನುಪಾತದಲ್ಲಿದೆ. ಗ್ರಾಮಾಂತರ ಮತ್ತು ನಗರ ಪ್ರದೇಶದಲ್ಲಿನ ಕುಟುಂಬಗಳಲ್ಲಿ ಸಾಮ್ಯತೆ ಕಂಡು ಬಂದರೂ ೪ ರಿಂದ ೬ ಜನಸಂಖ್ಯೆಯ ಕುಟುಂಬಗಳೇ ಎರಡು ಪ್ರದೇಶದಲ್ಲಿ ಸ್ಥಾನೀಕರಣ ಗೊಂಡಿರುವುದು ಕಂಡುಬರುತ್ತದೆ. ಆದರೂ ಸಹ ಸ್ಥಾನೀಕರಣಗೊಂಡ ಕಾಲೋನಿಗಳನ್ನು ಗುರುತಿಸಿದಾಗ ೧ ರಿಂದ ೪ ಮತ್ತು ೪ ರಿಂದ ೬ ಜನಸಂಖ್ಯೆಯ ಕುಟುಂಬಗಳೇ ಬಹುಪಾಲು ಕಾರ್ಕಳ ಮತ್ತು ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿನ

ಕುಟುಂಬಗಳು ಗ್ರಾಮ ವಾಸಸ್ಥಾನ, ಬೆಟ್ಟ, ಗುಡ್ಡ ಮತ್ತು ಸಣ್ಣ ರಸ್ತೆಯ ಬದಿಯಲ್ಲಿ ಸ್ಥಾನೀಕರಣಗೊಂಡವುಗಳಲ್ಲಿ ಪ್ರಮುಖ ಕುಟುಂಬಗಳಾಗಿವೆ. ನಗರ ಸುತ್ತಲಿನ ಕೊರಗರ ಕುಟುಂಬಗಳಲ್ಲಿ ಯುವಕರು ಮದುವೆಯ ನಂತರ ಪ್ರತ್ಯೇಕವಾಗಿ ವಾಸ ಮಾಡುತ್ತಿರುವ ಕಾರಣ ಮುಂದುವರೆಯುತ್ತಿರುವುದು ಕಾಲೋನಿಗಳಲ್ಲಿ ಕಾಣಬರುತ್ತದೆ. ಹಾಗೂ ಸರ್ಕಾರಿ ಸೌಲಭ್ಯ ಸದುಪಯೋಗ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಪ್ರತ್ಯೇಕವಾಸ ಬಯಸುತ್ತಿದ್ದಾರೆ. ಅಂತಹ ಕುಟುಂಬಗಳು ಕಾಲೋನಿಯಲ್ಲಿಯೇ ತೆಂಗಿನಗರಿಗಳ ಸಣ್ಣ ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಇದರಿಂದಾಗಿ ಮನೆಗಳ ಬೇಡಿಕೆಗೆ ಒತ್ತಾಯ ಸಹ ಮಾಡುತ್ತಿದ್ದಾರೆ.

ಲಿಂಗಾನುಪಾತ: ಅಭಿವೃದ್ಧಿಯ ಮಾರ್ಗಸೂಚಿಯಲ್ಲಿ ಮಾನವ ಸಂಪನ್ಮೂಲಕ್ಕೆ ವಿಶೇಷ ಮಹತ್ವದ ಸ್ಥಾನವಿದೆ. ಅದೇ ತೆರನಾಗಿ ಅಭಿವೃದ್ಧಿಯಲ್ಲಿ ಲಿಂಗಾನುಪಾತದ ಲಕ್ಷ್ಯತೆಯು ಬಹುಮುಖ್ಯವಾದ್ದುದೇ ಆಗಿದೆ. ಈ ನಿಟ್ಟಿನಲ್ಲಿ ಕೊರಗರು ಸ್ಥಾನೀಕರಣಗೊಂಡ ಕಾಲೋನಿಗಳಲ್ಲಿ ಪುರುಷ ಮತ್ತು ಮಹಿಳೆಯರ ಪ್ರಮಾಣವನ್ನು ವಯಸ್ಸಿನ ಆಧಾರದ ಮೇಲೆ ಗುರುತಿಸಲಾಗಿದೆ. ಪ್ರತಿಕಾಲೋನಿಯ ಮಕ್ಕಳು, ವಯಸ್ಕರು, ಅವರುಗಳಲ್ಲಿನ ಪುರುಷ ಮತ್ತು ಮಹಿಳೆಯರ ಅಂಕಿ, ಅಂಶಗಳ ಕ್ರೋಢಿಕೃತ ಮಾಹಿತಿಯನ್ನು ಇಲ್ಲಿ ನಿರೂಪಿಸಲಾಗಿದೆ. ಈ ಅಂಶಗಳು ಸಮುದಾಯದಲ್ಲಿನ ಬಹುಸಂಖ್ಯಾತ ಜನರಿಗೆ ರೂಪಿಸಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳ ರೂಪಿಸುವಿಕೆಗೆ ಸಹಾಯಕವಾಗುತ್ತದೆ.

ಲಿಂಗಾನುಪಾತದ ಜನಸಂಖ್ಯೆಯು ಪುರುಷ ಮತ್ತು ಮಹಿಳೆಯರ ಒಟ್ಟು ಮೊತ್ತದ ಜನಸಂಖ್ಯೆಯ ನಿರ್ಧಿಷ್ಟ ಪಾತ್ರ ತಿಳಿಯಪಡಿಸುತ್ತದೆ. ಮೇಲಿನ ಪಟ್ಟಿಯಲ್ಲಿರುವಂತಹ ಲಿಂಗಾನುಪಾತದಲ್ಲಿ ವಯಸ್ಕರು ಹಾಗೂ ೧೮ ವರ್ಷಕ್ಕಿಂತ ಕೆಳಗಿನ ಅಪ್ರಾಪ್ತರ ಸಂಖ್ಯೆಯನ್ನು ಪ್ರತ್ಯೇಕವಾಗಿ ಗುರುತಿಸಿದೆ. ೧೮ ವರ್ಷಕ್ಕಿಂತ ಮೇಲ್ಪಟ್ಟವರು ಹಾಗೂ ಕೆಳಗಿನವರು ೮ ತಾಲ್ಲೂಕು ವ್ಯಾಪ್ತಿಯ ೨೭ ಕಾಲೋನಿಗಳ ಜನಸಂಖ್ಯೆಯಿಂದ ಕ್ರೋಢಿಕರಿಸಲಾಗಿದೆ. ಒಟ್ಟಾರೆ ೧೮೫೬ ಜನಸಂಖ್ಯೆಯಲ್ಲಿ ೭೬೩ ಪುರುಷ, ೬೯೩ ಮಹಿಳೆಯರ ಪ್ರಮಾಣವು ಒಟ್ಟು ಗೂಡಿಸಿ ಕೊಡಲಾಗಿದೆ.

ಕೋಷ್ಟಕ . ೩.೧೧ : ಲಿಂಗಾನುಪಾತದ ಪ್ರಮಾಣ

ಕ್ರ. ಸಂ	ಕಾಲೋನಿಗಳು	ಸಮೀಕ್ಷೆ ಕುಟುಂಬಗಳ ಸಂಖ್ಯೆ	ಒಟ್ಟು ಜನಸಂಖ್ಯೆ	೧೮ ವರ್ಷಕ್ಕಿಂತ ಮೇಲ್ಪಟ್ಟವರು			ಅಪ್ರಾಪ್ತರು		
				ಗ	ಹೆ	ಒಟ್ಟು	ಗ	ಹೆ	ಒಟ್ಟು
೧	ಕುಂದಾಪುರ	೬೬	೩೧೦	೮೯	೮೧	೧೭೦	೬೪	೭೬	೧೪೦
೨	ಉಡುಪಿ	೩೯	೧೮೮	೩೫	೩೧	೬೬	೫೫	೬೭	೧೨೨
೩	ಕಾರ್ಕಳ	೫೪	೨೪೦	೭೦	೫೨	೧೨೨	೬೦	೫೮	೧೧೮
೪	ಮಂಗಳೂರು	೮೬	೩೯೪	೧೪೦	೧೨೮	೨೬೮	೭೧	೫೫	೧೨೬
೫	ಬೆಳ್ತಂಗಡಿ	೨೭	೧೩೮	೫೧	೩೨	೮೩	೩೨	೨೩	೫೫
೬	ಬಟ್ವಾಳ	೩೦	೬೮	೨೨	೨೧	೪೩	೧೪	೧೧	೨೫
೭	ಸೂಳ್ಯ	೧೫	೪೧	೧೩	೧೪	೨೭	೯	೫	೧೪
	ಪುತ್ತೂರು	೨೩	೭೭	೨೧	೨೦	೪೧	೧೭	೧೯	೩೬
	ಒಟ್ಟು	೩೪೦	೧೪೫೬	೪೪೧	೩೭೯	೮೨೦	೩೨೨	೩೧೪	೬೩೬

ಈ ಹಂತದ ಲಿಂಗಾನುಪಾತ ಅಂಶದಿಂದ ತಿಳಿದು ಬರುವಂತಹ ನಿದರ್ಶನವೆಂದರೆ ಮಹಿಳೆಯರ ಅನುಪಾತದ ಅಂಶಗಳು ಮುಖ್ಯವಾಗಿದೆ. ವಯಸ್ಕರ ವಿಭಾಗದಲ್ಲಿ ೮೨೦ (೫೬.೩೧%) ಜನರನ್ನು ಕಾಣಬಹುದು. ಅಪ್ರಾಪ್ತಕರಲ್ಲಿ ಪುರುಷರು ೩೨೨ ಹಾಗೂ ಮಹಿಳೆಯರು ೩೧೪ ಒಟ್ಟು ೬೩೬ (೪೩.೬೮%) ಜನರು ಕಂಡು ಬರುತ್ತಾರೆ.

ಸಾಕ್ಷರತೆಯ ಪ್ರಮಾಣ

ವ್ಯಕ್ತಿಯು ಅಕ್ಷರಜ್ಞಾನವನ್ನು ಕಲಿತು ಒದುವುದು, ಬರೆಯುವುದು, ಜೊತೆಗೆ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿದ್ದರೆ ಸಾಕ್ಷರ ಎನ್ನುವ ನಿಟ್ಟಿನಲ್ಲಿ ಕೊರಗ ಸಮುದಾಯವನ್ನು ವೈಜ್ಞಾನಿಕವಾಗಿ ಗುರುತಿಸಲಾಗಿಧೆ. ೨೭ ಕಾಲೋನಿಗಳಲ್ಲಿ ಬಹುಮುಖ್ಯವಾಗಿ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿಯೇ ಅತಿ ಹೆಚ್ಚು ಕುಟುಂಬಗಳು ನೆಲೆಗೊಂಡಿರುವುದು ತಿಳಿದು ಬರುತ್ತದೆ. ಪ್ರತಿಯೊಂದು ತಾಲ್ಲೂಕು ವ್ಯಾಪ್ತಿಯ ಕುಟುಂಬಗಳ ಮಾಹಿತಿಯನ್ನು ಪಟ್ಟಿಯಲ್ಲಿ ಕ್ರೋಢಿಕರಿಸಲಾಗಿದೆ. ಸಾಕ್ಷರತೆಯನ್ನು ಗುರುತಿಸುವ ನಿಟ್ಟಿನಲ್ಲಿ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿಭಾಗಿಸಲಾಗಿದೆ. ಶೈಕ್ಷಣಿಕವಾಗಿ ಗುರುತಿಸುವಲ್ಲಿ ೧ ರಿಂದ ೫ ವರ್ಷದ ವಯಸ್ಸಿನ ಮೊದಲ ಹಂತ ಹಾಗೂ ಎರಡನೇ ಹಂತ ೬೫ ವರ್ಷಕ್ಕಿಂತ ಮೇಲ್ಪಟ್ಟವರು .ಈ ಎರಡು ವಿಭಾಗದ ಜನರನ್ನು ಹೊರತುಪಡಿಸಿ ಉಳಿದ ೫ ವರ್ಷದ ನಂತರ ೬೫ ವರ್ಷದ ನಡುವಿನ ಅಂತರದಲ್ಲಿರುವರನ್ನು ಗುರುತಿಸಲಾಗಿದೆ. ಪ್ರತಿಯೊಂದು ಕುಟುಂಬದಲ್ಲಿನ ಶಿಕ್ಷಣ ಪಡೆದ ಹಾಗೂ ಅನಕ್ಷರಸ್ಥರನ್ನು ಪಟ್ಟಿಯಲ್ಲಿ ವಿಂಗಡಿಸಲಾಗಿದೆ. ಒಟ್ಟಾರೆ ೧೪೫೬ ಜನಸಂಖ್ಯೆಯಲ್ಲಿ ೧ ರಿಂದ ೫ ವರ್ಷದ ನಡುವಿನ ಜನರ ಸಂಖ್ಯೆ ೧೫೧

ಅದೇ ರೀತಿ ೬೫ ವರ್ಷ ಮೇಲ್ಪಟ್ಟವರ ಸಂಖ್ಯೆ ೧೮೨ ಆಗಿದೆ. ಇವೆರಡರ ಒಟ್ಟು ಜನಸಂಖ್ಯೆ ೩೩೩ ಸದಸ್ಯರನ್ನು ಹೊರತು ಪಡಿಸಿದಲ್ಲಿ ೧೧೨೩ ಜನಸಂಖ್ಯೆಯಲ್ಲಿನ ಸಾಕ್ಷರತೆಯನ್ನು ವೈಜ್ಞಾನಿಕ ಅಧ್ಯಯನದಲ್ಲಿ ಗುರುತಿಸಲಾಗಿದೆ. ಸುಮಾರು ದಶಕಗಳಿಂದಲ್ಲೂ ಶಿಕ್ಷಣದ ಪ್ರಸರಣದಲ್ಲಿ ದ.ಕನ್ನಡ ಜಿಲ್ಲೆ ಹಾಗೂ ಕರಾವಳಿಯ ಜಿಲ್ಲೆಗಳಲ್ಲಿ ನಿರಂತರ ಹೋರಾಟ ನಡೆಯುತ್ತಾ ಬಂದಿದೆ. ಆದರೂ ಸಹ ಕೊರಗರ ಜೀವನ ವಿಧಾನದಲ್ಲಿ ಶೇ. ೧೦೦% ಶಿಕ್ಷಣದಪಾತ್ರ ಇಲ್ಲವೆ ಇಲ್ಲ ಎನ್ನಬಹುದಾಗಿದೆ.

ಕೋಷ್ಟಕ ೩.೧೨ : ಸಾಕ್ಷರತೆಯ ಪ್ರಮಾಣ

ಕ್ರ.ಸ	ಕಾಲೋನಿ	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಒಟ್ಟು ಜನಸಂಖ್ಯೆ	ಒಟ್ಟು ಜನಸಂಖ್ಯೆ			ಒಟ್ಟು ಜನಸಂಖ್ಯೆ	
				65 ವರ್ಷಕ್ಕಿಂತ ಮೇಲ್ಪಟ್ಟು	5 ವರ್ಷ ಕೆಳಗಿನವರು	ಉಳಿದವರು	ಶಿಕ್ಷಣ ಪಡೆದವರು	ಅನಕ್ಷರಸ್ಥರು
೧	ಕುಂದಾಪುರ	೬೬	೩೧೦	೨೭	೧೯	೨೬೪	೧೧೭	೧೪೭
೨	ಉಡುಪಿ	೩೯	೧೮೮	೧೩	೨೧	೧೫೪	೯೬	೫೮
೩	ಕಾರ್ಕಳ	೫೪	೨೪೦	೩೧	೨೪	೧೮೫	೧೦೨	೮೩
೪	ಮಂಗಳೂರು	೮೬	೩೯೪	೩೭	೪೩	೩೧೪	೨೧೧	೧೦೩
೫	ಬೆಳ್ತಂಗಡಿ	೨೭	೧೩೮	೬೧	೧೪	೧೧೭	೬೭	೫೧
೬	ಬಟ್ವಾಳ	೩೦	೬೮	೩	೦೭	೫೮	೨೭	೩೧
೭	ಸೂಳ್ಯ	೧೫	೪೧	೫	೧೦	೨೬	೯೦	೭
೮	ಪುತ್ತೂರು	೨೩	೭೭	೫	೧೩	೫೯	೨೭	೩೨
	ಓಟ್ಟು	೩೪೦	೧೪೫೬	೧೮೨	೧೫೧	೧೧೭೭	೬೬೬	೫೧೨

ಪಟ್ಟಿಯನ್ನು ಅನುಲಕ್ಷ್ಮಿಸಿದಲ್ಲಿ ಕೊರಗರ ಸಾಕ್ಷರತೆಯ ಪ್ರಮಾಣದ ಅಂಶವನ್ನು ತಿಳಿಯಬಹುದು. ಒಟ್ಟಾರೆ ೧೧೭೭ ಜನಸಂಖ್ಯೆಯಲ್ಲಿ ಶಿಕ್ಷಣ ಪಡೆದವರು ೬೬೬ (೫೬.೫೮%) ಅನಕ್ಷರಸ್ಥರ ಸಂಖ್ಯೆ ೫೧೨ (೪೩.೫೦%) ಆಗಿದೆ. ಶಿಕ್ಷಣದ ಮಟ್ಟ ನೋಡಿದಾಗ ತಿಳಿದು ಬರುವುದೆನೆಂದರೆ, ಸುಮಾರು ದಶಕಗಳಿಂದಲೂ ಇವರುಗಳ ಸುಧಾರಣೆಗೆ ಹೋರಾಟ ನಡೆಯುತ್ತಾ ಬಂದಿದ್ದರೂ ಶಿಕ್ಷಣದ ಮಹತ್ವವನ್ನು ಮನಗಂಡ ಕುಟುಂಬಗಳು ಕಡಿಮೆ ಇವೆ. ಶಿಕ್ಷಣದ ಅನುಪಾತವನ್ನು ನೋಡಿದಾಗ ಮಂಗಳೂರು ತಾಲ್ಲೂಕು ವ್ಯಾಪ್ತಿಯು ಪ್ರಥಮ ಸ್ಥಾನದಲ್ಲಿದೆ. ಶೇ. ೬೭.೧% ಶಿಕ್ಷಣವನ್ನು ಪಡೆದಿರುವ ಅಂಶ ಕಾಣಬಹುದು. ಅತಿ ಕಡಿಮೆ ಶಿಕ್ಷಣದ ಪ್ರಗತಿಯು ಕುಂದಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಶೇ. ೪೪.೩% ಕಂಡುಬರುತ್ತದೆ. ಒಟ್ಟಾರೆ ಮೇಲಿನ ಅಂಶಗಳು ಕೊರಗರ ವ್ಯಾಪ್ತಿಯಲ್ಲಿನ ತಾಲ್ಲೂಕುಗಳಲ್ಲಿ ಶೇ. ೧೦೦% ಶಿಕ್ಷಣ ಪಡೆದ ಅಂಶ ಕಂಡುಬರುವುದಿಲ್ಲ. ಸ್ವತಂತ್ರ ಪೂರ್ವದಿಂದಲ್ಲೂ ಕೊರಗ ಸಮುದಾಯದ ಜನರ ಪ್ರಗತಿಗೆ ಅನೇಕ ನಾಯಕರು ನಿರಂತರ ಪ್ರಯತ್ನ ಮಾಡುತ್ತಾ ಬಂದಿದ್ದರೂ ಸಂಪೂರ್ಣ

ಸಾಕ್ಷರತೆ ಸಾಧ್ಯವಾಗಿಲ್ಲ. ರಾಜ್ಯದ ಸಾಮಾನ್ಯ ಸಾಕ್ಷರತೆಯಲ್ಲಿ ದ.ಕನ್ನಡ ಜಿಲ್ಲೆ ಪ್ರಥಮ ಸ್ಥಾನಗಳಿಸಿದೆ. ಸರ್ಕಾರದ ಅಂಕಿ–ಅಂಶಗಳಲ್ಲಿ ಸಂಪೂರ್ಣ ಪ್ರಮಾಣದ ಸಾಕ್ಷರತೆ ಪಡೆದ ಜಿಲ್ಲೆಗಳೆಂಬ ಅಂಕಿ ಅಂಶಗಳು ಲಭ್ಯವಾಗುತ್ತದೆ. ಸಮೀಕ್ಷೆಯಲ್ಲಿ ಇಲ್ಲಿನ ಜನರು ಯೋಜನೆ ಹಾಗೂ ಸಂಘಟನೆಗಳಿಂದ ದೂರವೇ ಉಳಿದ ಕುಟುಂಬಗಳಾಗಿ ಕಂಡುಬರುತ್ತಾರೆ. ರಾಷ್ಟ್ರವ್ಯಾಪ್ತಿ ಕಾರ್ಯಕ್ರಮವಾದ ಸರ್ವಶಿಕ್ಷಣ ಅಭಿಯಾನ, ಹಾಗೂ ವಿವಿಧ ಸ್ವಯಂ ಸಂಸ್ಥೆಗಳ ಪ್ರಯತ್ನ ಇಲ್ಲಿನ ಶಿಕ್ಷಣಕ್ಕೆ ಸ್ವಲ್ಪ ಮಹತ್ವ ದೊರಕಿಸಿಕೊಟ್ಟಿರುವುದು ಗುರುತಿಸಬಹುದಾಗಿದೆ.

ಶಿಕ್ಷಣ ಮಟ್ಟ ಮತ್ತು ಅವರ ವಯಸ್ಸಿನ ವರ್ಗೀಕರಣ

ಪ್ರಗತಿಯ ಮಾರ್ಗಸೂಚಿಯಲ್ಲಿ ಮಾನವ ಸಂಪನ್ಮೂಲದ ವಯೋಮಾನ ಬಹು ಪರಿಗಣನೆಯ ವಿಧಾನವಾಗಿದೆ. ಸಾಕ್ಷರತೆಯ ಪ್ರಮಾಣದಲ್ಲಿ ಕೊರಗ ಕುಟುಂಬದವರ ವಯಸ್ಸಿಗೆ ಅನುಗುಣವಾಗಿ ಪಡೆದ ಶಿಕ್ಷಣವನ್ನು ಪ್ರತ್ಯೇಕವಾಗಿ ಗುರುತಿಸಲಾಗಿದೆ. ಶಿಕ್ಷಣವನ್ನು ಪಡೆದ ಸಾಕ್ಷರತೆಯ ಒಟ್ಟು ೬೬೬ (೫೪.೫೪%) ಜನರಲ್ಲಿ ಅವರ ವಯಸ್ಸಿಗೆ ಅನುಗುಣವಾದ ಮಾಹಿತಿಯು ಯೋಜನೆಯನ್ನು ರೂಪಿಸುವಾಗ ಗಮನಿಸಿ ಪ್ರತ್ಯೇಕ ವಯಸ್ಸಿಗೆ ತಕ್ಕಂತ ಪ್ರಾಶಸ್ತ್ಯ ನೀಡಬೇಕಾದ ಅಗತ್ಯತೆ ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಮಾಹಿತಿಯನ್ನು ಕ್ರೋಢೀಕರಿಸಿ ಪ್ರತ್ಯೇಕವಾಗಿ ಕೊಡಲಾಗಿದೆ.

ಕೋಷ್ಟಕ ೩.೧೩ : ಶಿಕ್ಷಣದ ಮಟ್ಟ ವಯಸ್ಸಿಗನುಗುಣವಾಗಿ

ಕ್ರ.ಸ.	ವಯಸ್ಸಿನ ವರ್ಗೀಕರಣ	ಪ್ರಾಥಮಿಕ (೧–೪)	ಮಾಧ್ಯಮಿಕ (೫–೮)	ಪ್ರೌಢಶಾಲೆ (೮–೧೦)	ಪದವಿ ಪೂರ್ವ (೧೧–೧೨)	ಪದವಿ	ಸ್ನಾತಕ	ಇತರೆ
೧	೬–೧೦	೧೧೪	೫೩	–	–	–	–	–
೨	೧೦–೧೫	೮೮	೬೫	೨೧	–	–	–	–
೩	೧೫–೨೦	೨೧	೩೭	೩೯	೪೮	೨	–	–
೪	೨೦–೨೫	೩೫	೨೧	೨೬	೨೬	೩	೧	೬
೫	೨೫–೩೦	೧೩	೯	೧೧	೧೧	–	೩	–
೬	೩೦ –	೧೩	೦	೦	–	–	–	–
ಒಟ್ಟು		೨೮೪	೧೮೫	೯೭	೮೫	೫	೪	೬

ಆಧುನಿಕ ಶಿಕ್ಷಣ ಕ್ರಮದ ನಡುವೆಯೂ ಸಹ ಸರ್ಕಾರದ ಪ್ರಾಥಮಿಕ ಶಾಲೆಗೆ ಹೋಗುವರ ಸಂಖ್ಯೆನಿಂತಿಲ್ಲ. ಈ ಹಂತದಲ್ಲಿ ಕುಟುಂಬದ ಸದಸ್ಯರ ಶಿಕ್ಷಣದ ಮಟ್ಟವನ್ನು ಪಟ್ಟಿಯಲ್ಲಿ ವಯೋಮಿತಿಗೆ ಅನುಗುಣವಾಗಿ ಗುರುತಿಸಲಾಗಿದೆ.

೬ ವರ್ಷದಿಂದ ೩೦ ವರ್ಷದ ನಡುವಿನ ಜನರಲ್ಲಿ, ವಿವಿಧ ಹಂತಗಳಲ್ಲಿ ಪಡೆದ ಶಿಕ್ಷಣವನ್ನು ಪಟ್ಟಿಯಲ್ಲಿ ನೀಡಲಾಗಿದೆ. ಶಾಲೆಗೆ ಹೋಗುವ ಬಾಲಕ–ಬಾಲಕಿಯರ ೬ ರಿಂದ

೧೦ ವಯಸ್ಸಿನ ವರ್ಗದಲ್ಲಿ ಬರುವರನ್ನು ಗಮನಿಸಿದರೆ ಪ್ರಾಥಮಿಕ ಶಾಲೆಗೆ ಹೋಗುವರ ಸಂಖ್ಯೆ ೧೧೪. ಇದೆ. ವಯೋಮಾನದಲ್ಲಿ ಮಾಧ್ಯಮಿಕ ಶಾಲೆಗೆ ಹೋಗುವವರ ಸಂಖ್ಯೆ ೫೩. ಇನ್ನು ೧೦ ರಿಂದ ೧೫ ರ ವಯಸ್ಸಿನ ಗುಂಪಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ೮೮ ಕಲಿಕೆಯಲ್ಲಿದ್ದರೆ, ಮಾಧ್ಯಮಿಕ ಶಾಲೆಯಲ್ಲಿ ೬೫ ಹಾಗೂ ಪ್ರೌಢಶಾಲೆಯಲ್ಲಿ ೨೧ ಬಾಲಕ-ಬಾಲಕಿಯರು ಕಂಡುಬರುತ್ತಾರೆ. ಇದೊಂದು ಒಳ್ಳೆಯ ಸೂಚನೆ. ೧೫-೨೦ರ ವಯಸ್ಸಿನ ಗುಂಪಿನಲ್ಲಿ ಬಾಲಕ-ಬಾಲಕಿಯರ ವಿದ್ಯಾರ್ಹತೆ ಉತ್ತಮವಾಗಿದೆ ಎನ್ನಬಹುದು. ಪ್ರಾಥಮಿಕ ಶಾಲೆಯಲ್ಲಿ ೨೧ ವಿಧ್ಯಾರ್ಥಿಗಳು ಕಲಿತು, ಮಾಧ್ಯಮಿಕ ಶಾಲೆಯಲ್ಲಿ ೩೭, ಪ್ರೌಢಶಾಲೆಯಲ್ಲಿ ೩೯ ಮತ್ತು ಪದವಿಪೂರ್ವ ವಿಭಾಗದಲ್ಲಿ ೪೮, ಪದವಿ ವಿಭಾಗದಲ್ಲಿ ೨ ವಿದ್ಯಾರ್ಥಿಗಳು ಕಲಿತವರಾಗಿ ಕಂಡುಬರುತ್ತಾರೆ. ೨೦-೨೫ರ ವಯಸ್ಸಿನ ಗುಂಪಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ೩೫, ಮಾಧ್ಯಮಿಕ ಶಾಲೆಯಲ್ಲಿ ೨೧ ಮತ್ತು ಪ್ರೌಢಶಾಲೆಯಲ್ಲಿ ೨೬, ಪದವಿಪೂರ್ವವಿಭಾಗದಲ್ಲಿ ೨೬ ಮತ್ತು ಪದವಿಯಲ್ಲಿ ೩ ಸ್ನಾತಕ ಪದವಿ ೧. ಇತರೆ ತರಬೇತಿಯಲ್ಲಿ ೬ ಜನ ಶೈಕ್ಷಣಿಕವಾಗಿ ಗುರುತಿಸಿ ಕೊಂಡವರಾಗಿದ್ದಾರೆ. ೨೫-೩೦ ವರ್ಗದಲ್ಲಿನ ಪ್ರಾಥಮಿಕ ಶಾಲೆಯಲ್ಲಿ ೧೩ ಮತ್ತು ಮಾಧ್ಯಮಿಕ ಶಾಲೆಯಲ್ಲಿ ೯ ಹಾಗೂ ಪ್ರೌಢಶಾಲೆಯ ೧೧, ಪದವಿಪೂರ್ವ ಹಂತದಲ್ಲಿ ೧೧, ಸ್ನಾತಕಪದವಿಯಲ್ಲಿ ೩ ಜನ ಅಕ್ಷರಸ್ಥರನ್ನು ಗುರುತಿಸಬಹುದು. ೩೦ ನೇ ವರ್ಷಕ್ಕೆ ಮೇಲ್ಪಟ್ಟ ವರ್ಗದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಕಲಿತ ೧೩ ಜನರನ್ನು ಮಾತ್ರ ಕಾಣಬಹುದು. ಶಾಲೆಗಳಿಗೆ ಹೋಗುವ ಮಕ್ಕಳಲ್ಲಿ ಅಂದರೆ ವಯೋಮಾನದ ಮಿತಿಯಿಂದ ೬-೧೦ ಮತ್ತು ೧೦-೧೫ನೇ ವಯಸ್ಸಿನವರನ್ನು ಪರಿಗಣಿಸಬೇಕಾಗುತ್ತದೆ. ಇನ್ನಿತರ ವರ್ಗದಲ್ಲಿ ೧೬ ರಿಂದ ೩೦ ವರ್ಷಕ್ಕೆ ಮೇಲ್ಪಟ್ಟ ವರೆಗಿನ ೪ ಹಂತದ ವರ್ಗೀಕರಣವಲ್ಲಿರುವವರು ಹೆಚ್ಚಾಗಿ ಶಿಕ್ಷಣ ಪಡೆದು ಓದು ಬಿಟ್ಟವರಾಗಿರುತ್ತಾರೆ. ಶಾಲೆ ಬಿಟ್ಟ ಅಕ್ಷರಸ್ಥರಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಾಲಾ ಮಟ್ಟದಲ್ಲೇ ಶಿಕ್ಷಣ ಹೊಂದಿದ್ದಾರೆ. ಪ್ರೌಢಶಾಲೆಯ ೯೭ ಜನರಲ್ಲಿ ೨೧ ಜನರು ಮಾತ್ರ ಶಾಲೆಗೆ ಹೋಗುತ್ತಿರುವ ಅಂಶ ತಿಳಿದು ಬರುತ್ತದೆ. ಶಾಲಾ ಜೀವನದ ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗೆ ಹೋಗುತ್ತಿರುವರ ಸಂಖ್ಯೆ ಆಶಾದಾಯಕವಾಗಿದೆ. ಇಲ್ಲಿ ಒಂದು ಅಂಶ ಹೇಳುವುದು ಅವಶ್ಯಕ. ಹೆಚ್ಚಿನ ಶಿಕ್ಷಣ ಪಡೆದವರು ಮಂಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿಯೇ ಕಾಣಬರುತ್ತಾರೆ. ಇನ್ನುಳಿದಂತೆ ಇತರೆ ತಾಲ್ಲೂಕುಗಳು ಹಳ್ಳಿಗಳಿಂದ ಅಲ್ಲದೆ ನಗರದಿಂದ ದೂರವಿದ್ದು ಓದು ಮುಂದುವರೆಸಲು ಸಾಧ್ಯವಾಗುತ್ತಿಲ್ಲ. ಆಶ್ರಮ ಶಾಲೆಗಳು ಪ್ರಾಥಮಿಕ ಶಾಲೆಯ ಮಟ್ಟಿಗೆ ಮಹತ್ವನೀಡಿವೆ. ನಗರದ ವಸತಿ ಪ್ರದೇಶಗಳಲ್ಲಿರುವರು ವಿದ್ಯಾವಂತರಾಗುತ್ತಿದ್ದಾರೆ. ಹೀಗಾಗಿ ಕೊರಗ ಬುಡಕಟ್ಟು ಜನರಲ್ಲಿ ಪದವಿ, ಸ್ನಾತಕ ಪದವಿ ಪಡೆದ ವಿದ್ಯಾವಂತರು ಹೆಚ್ಚು ಇದ್ದಾರೆ. ಇದೊಂದು ಶಿಕ್ಷಣಮಟ್ಟವನ್ನು ತಿಳಿದವರಲ್ಲಿ ಸ್ವಲ್ಪ ಮಟ್ಟಿನ ಬೆಳವಣಿಗೆ ಕಂಡುಬರುತ್ತಿದೆ.

ಕೊರಗ ಸಮುದಾಯದ ಆರ್ಥಿಕ ಸ್ಥಿತಿಯ ಸ್ಥಾನಮಾನ

ಯಾವುದೇ ಸಮುದಾಯದ ಅಭಿವೃದ್ಧಿಯಲ್ಲಿ ಆಯಾ ಜನರ ಆರ್ಥಿಕ ಮಟ್ಟದ ಅರಿವು ಅವಶ್ಯಕವಾಗುತ್ತದೆ. ಕೊರಗರದು ಸೀಮಿತ ವ್ಯಾಪ್ತಿ ಹಾಗೂ ಜನಸಂಖ್ಯೆಯನ್ನು ಹೊಂದಿರುವುದರಿಂದ ಇವರುಗಳ ಬಡತನದ ಜೀವನ ಅನೇಕ ಆರ್ಥಿಕ ಸಮಸ್ಯೆಗಳಿಗೆ ತೆರೆದು ಕೊಳ್ಳುವಂತೆ ಮಾಡಿದೆ. ಪ್ರಸ್ತುತ ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯಲ್ಲಿ ಸಮುದಾಯದ ಆರ್ಥಿಕ ಸ್ಥಿತಿಯ ಬಗ್ಗೆ ಮಾಹಿತಿಯನ್ನು ಪಟ್ಟಿಗಳಲ್ಲಿ ಕೊಡಲಾಗಿದೆ. ಸಮುದಾಯದ ಆರ್ಥಿಕ ಸ್ಥಿತಿಯಲ್ಲಿ ಭೂ ಹಿಡುವಳಿ, ಆದಾಯದ ವರ್ಗೀಕರಣ, ಪ್ರಸ್ತುತದ ಉದ್ಯೋಗಗಳು ಮತ್ತು ಆದಾಯದ ಅನುಭೋಗ ಅತಿ ಮಹತ್ವದ ಮೂಲಾಂಶಗಳಾಗಿವೆ. ಈ ಎಲ್ಲಾ ಮೂಲಾಂಶಗಳನ್ನು ಪಟ್ಟಿಗಳ ರೂಪದಲ್ಲಿ ಕ್ರೋಢಿಕರಿಸಿ ನೀಡಲಾಗಿದೆ. ಪ್ರತಿಯೊಂದು ಹಂತದ ಮುಖ್ಯ ಮಾಹಿತಿಯಾದ ಉದ್ಯೋಗಗಳು, ಭೂ ಹಿಡುವಳಿ ಬಗ್ಗೆ ವಿವರಣಾತ್ಮಕವಾಗಿ ಕೊಡಲಾಗಿದೆ.

ಭೂ ಹಿಡುವಳಿ: ಭೂಮಿಯ ಬಗ್ಗೆ ಬುಡಕಟ್ಟು ಸಮುದಾಯಗಳಲ್ಲಿ ವಿಶೇಷ ಸ್ಥಾನವಿದೆ. "ಭಾರತದ ಆದಿಮ ಸಮಾಜಗಳ ಸಂಸ್ಕೃತಿ ರೂಪ ಗೊಂಡಿರುವುದೇ ಭೂಮಿಯ ಜೊತೆಗಿನ ನಿರಂತರ ಅನುಸಂಧಾನದ ಫಲವಾಗಿಯೇ, ವಿಕಾಸಶೀಲ ಪ್ರವೃತ್ತಿ ಮೈಗೂಡಿ ಬಂದಿವೆ."[5] ಹೀಗಾಗಿ ಆರ್ಥಿಕತೆಯಲ್ಲಿ ಭೂ ಹಿಡುವಳಿ ಪ್ರಮುಖವಾಗಿದೆ. ಭೂಮಿ, ಉದ್ಯೋಗ, ಆದಾಯ, ಸಾಮಾಜಿಕ, ಸಾಂಸ್ಕೃತಿಕ ವೈವಿಧ್ಯತೆಗೆ ಕೊಡುಗೆಯಾಗಿದೆ.

ಭೂಮಿಯನ್ನು ಎರಡು ಹಂತದಲ್ಲಿ ಗುರುತಿಸಲಾಗಿದೆ. ಮೊದಲನೆಯ ಹಂತದಲ್ಲಿ ಭೂಮಿ ಇಲ್ಲದ ಕುಟುಂಬಗಳು ಮತ್ತು ೨ ನೇ ಹಂತದಲ್ಲಿ ಭೂಮಿಯನ್ನು ಹೊಂದಿರುವ ಕುಟುಂಬಗಳನ್ನು ಮುಖ್ಯವಾಗಿ ನಾಲ್ಕು ವಿಭಾಗಗಳಲ್ಲಿ, ಅಂದರೆ ೦-೧ ಎಕರೆ, ೧-೨ ಎಕರೆ, ೨-೩ ಎಕರೆ ಮತ್ತು ೩-೪ ಎಕರೆ ಮೇಲ್ಪಟ್ಟು ಎಂದು ಭೂಮಿಯನ್ನು ವರ್ಗೀಕರಿಸಲಾಗಿದೆ. ಸಮೀಕ್ಷೆ ಮಾಡಲಾದ ೨೭ ಕಾಲೋನಿಗಳ ೩೪೦ ಕುಟುಂಬಗಳಲ್ಲಿನ ಮಾಹಿತಿ ವಿಶೇಷವಾಗಿ ಕಾಣಬಹುದಾಗಿದೆ. ಕೆಲವು ಸ್ಥಳದಲ್ಲಿ ಮಾಹಿತಿ ಸಂಗ್ರಹದ ಕಾರ್ಯ ಸವಲಾಗಿ ಪರಿಣಮಿಸಿದೆ. ಬಹುವಿಸ್ತಾರವಾಗಿ ನೆಲೆಗೊಂಡಿರುವ ಕೊರಗರ ಕಾಲೋನಿಗಳ ವಿವರ ಕೋಷ್ಟಕ ೩.೧೪ರಲ್ಲಿ ಕೊಡಲಾಗಿದೆ.

ಕೋಷ್ಟಕ ೩.೧೪ : ಕೊರಗ ಸಮುದಾಯದ ಭೂ ಹಿಡುವಳಿ

ಕ್ರ. ಸಂಖ್ಯೆ	ಕಾಲೋನಿಗಳು	ಭೂಮಿ ಹೊಂದಿಲ್ಲದ ಕುಟುಂಬಗಳು	ಭೂಮಿ ಹೊಂದಿರುವ ಕುಟುಂಬಗಳು (ಎಕರೆವಾರು)			
			೦ – ೧	೧ – ೨	೨ – ೩	೩ – ೪
೧	ಶಿರೂರು	೨	೧	–	–	–
೨	ಬೈಂದೂರು	೧	೩	೨	–	–
೩	ಶಂಕರನಾರಾಯಣ	೨	೩	–	–	–
೪	ತಲ್ಲೂರು	೫	೨	–	–	–
೫	ಅಂಬೇಡ್ಕರ್‌ನಗರ	೩೦	–	–	–	–
೬	ಕೋಟೆಶ್ವರ	೨	೨	೫	೨	–
೭	ತಾರಸಿ	೦	೨	೫	–	–
೮	ಬೀಡಿನಗುಡ್ಡೆ	೧೫	–	–	–	–
೯	ಬೈಲೂರು	೪	೩	೩	೧	–
೧೦	ಪದ್ಮನಾಭನಗರ	೬	–	–	–	–
೧೧	ಕೋಡಿಬೆಟ್ಟ	೩	೧	೩	–	–
೧೨	ಸಾಚರ್‌ಪೇಟೆ	೫	೩	೨	–	–
೧೩	ರಮೇಟ್ ಪಾಲ್ಕೆ	೨	೩	೪	೨	೪
೧೪	ಮುಲ್ಲಡ್ಕ	–	೨	೪	೨	೨
೧೫	ಕಡೆತಾಲ್	೬	–	–	–	–
೧೬	ಸನ್ನೂರು	೮	೨	೧	೨	–
೧೭	ಊರ್ವ ಸರ್ಕಲ್	೨೪	–	–	–	–
೧೮	ಟೌನ್ ಮುನಿಸಿಪಾಲಿಟಿ	೫	೬	೪	೫	೨
೧೯	ಕಂಕನಾಡಿ	೧೫	–	–	–	–
೨೦	ಕೋಡಿಕಲ್	೨೫	–	–	–	–
೨೧	ಧರ್ಮಸ್ಥಳ	೬	೪	೨	–	–
೨೨	ಉಜಿರೆ	೨	೩	೨	–	–
೨೩	ಹೊಸ ಅಂಗಡಿ	–	೪	೪	–	–
೨೪	ಬೆಳಲು	೧೩	೫	–	–	–
೨೫	ಕಣಿಯೂರು	೮	೩	೨	–	–
೨೬	ಕೋಡಂಬಾಡಿ	೧೧	–	೫	೨	–
೨೭	ಪಾಂಜ	೧೬	೩	–	–	–
	ಒಟ್ಟು	೨೧೮	೫೨	೪೮	೧೬	೮

ಕೋಷ್ಟಕ ೩.೧೪ ರಲ್ಲಿ ಕೊಟ್ಟ ಮಾಹಿತಿಗೆ ಅನುಗುಣವಾಗಿ ಕೊರಗರ ೨೭ ಕಾಲೋನಿಗಳಲ್ಲಿರುವರಲ್ಲಿ ಹೆಚ್ಚಾಗಿ ಭೂಮಿ ಇಲ್ಲದವರೇ ಇರುವರು. ೨೧೬ ಕುಟುಂಬಗಳು ಯಾವುದೇ ಸರ್ಕಾರದ ಅಥವಾ ಸ್ವಂತ ಭೂಮಿ ಹೊಂದಿಲ್ಲದ ಕುಟುಂಬಗಳಾಗಿವೆ. ಇನ್ನೂಳಿದ ೧೨೪ ಕುಟುಂಬಗಳಲ್ಲಿ ಭೂ ಹಿಡುವಳಿಯ ಸ್ಥಿತಿ ವಿಭಿನ್ನವಾಗಿದೆ. ಇವರುಗಳಲ್ಲಿ ಕೆಲವು ಕುಟುಂಬಗಳು ಸ್ವಂತ ಭೂಮಿಯನ್ನು ಹೊಂದಿದ್ದಾರೆ. ಭೂಮಿ ಹೊಂದಿರುವವರಲ್ಲಿ ಎಕರೆವಾರು ಪ್ರಮಾಣ ಈ ರೀತಿಯಾಗಿದೆ. ಒಂದು ಎಕರೆ ಜಮೀನು ಪ್ರಮಾಣದಲ್ಲಿರುವ ೫೨ ಕುಟುಂಬಗಳಿವೆ. ಹಿಂದೆ ಸರ್ಕಾರ ಬುಡಕಟ್ಟು ಜನಾಂಗಗಳ ಅಭಿವೃದ್ಧಿಗಾಗಿ ಕೃಷಿ ಮಾಡಲು ೨

ಎಕರೆ ಜಮೀನು ಕೊಡುತ್ತಿದ್ದರು ಕೆಲವು ಕುಟುಂಬಗಳು ಕ್ರಮವಾಗಿ ಎರಡು ಎಕರೆ ಹೊಂದಿರುವ ಕುಟುಂಬಗಳ ಸಂಖ್ಯೆ ೪೮, ಮೂರು ಎಕರೆ ಹೊಂದಿರುವವರ ಸಂಖ್ಯೆ ೧೬ ಮತ್ತು ೪ ಎಕರೆ ಭೂಮಿ ಹೊಂದಿರುವರು ೮ ಕುಟುಂಬಗಳಿವೆ. ಇಲ್ಲಿ ಕೂಡ ಸರ್ಕಾರದ ಕೃಷಿ ಭೂಮಿ ವಿತರಣೆಯ ಯೋಜನೆ ಲಭ್ಯವಾಗಿದೆಯೆನ್ನಬಹುದು ಅಷ್ಟೇ. ಕೊರಗರು ನಗರಪ್ರದೇಶದಲ್ಲಿ ನೆಲೆಸಿರುವ ಕುಟುಂಬಗಳಲ್ಲಿ ಭೂಮಿ ಇರುವವರು ತೀರಾ ಕಡಿಮೆ. ಇಲ್ಲಿ ಭೂ ಹೀನ ಕುಟುಂಬಗಳೇ ಹೆಚ್ಚು. ಕೊರಗರಲ್ಲಿ ಕೆಲವು ಕುಟುಂಬಗಳಿಗೆ ಮಾತ್ರ ೨-೩ ಎಕರೆ ಜಮೀನು ಇದೆಯೆಂದು ಪಟ್ಟಿಯಿಂದ ಗೊತ್ತಾಗುತ್ತದೆ. ಕೊರಗರು ಭೂಮಿ ಪಡೆಯುವುದು ಗಗನ ಕುಸುಮವೇ ಆಗಿದೆ. ದ.ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಸರ್ಕಾರದ ಭೂಮಿ ಇದ್ದರೂ ಸಹ ಇವರುಗಳಿಗೆ ನೀಡಿರುವ ಪ್ರಮಾಣವೂ ಅತ್ಯಲ್ಪವಾಗಿದೆ. ಸರ್ಕಾರದ ಆದೇಶಾನುಸಾರ ಪ್ರತಿಕುಟುಂಬಕ್ಕೆ ನೀಡಬೇಕಾದ ಭೂಮಿ ೨ ರಿಂದ ೪ ಎಕರೆ. ಈ ಭೂ ಹಂಚಿಕೆಯು ಇಲ್ಲಿ ಸಂಪೂರ್ಣ ಯಶ್ವಸ್ವಿಯಾಗಿಲ್ಲ. ಸರ್ಕಾರದ ನೀತಿ ಸಮುದಾಯಗಳಿಗೆ ಕೃಷಿಗಾಗಿ ಸ್ವಲ್ಪ ಮಟ್ಟಿಗೆ ಭೂಮಿ ಒದಗಿಸುವುದು ಪರಿಣಾಮಕಾರಿಯಾಗಿಲ್ಲ ಎನ್ನಬಹುದು. ಅವಿಭಕ್ತ ಕುಟುಂಬಗಳು ಒಡೆದು ಸರಳ ಕುಟುಂಬಗಳಾಗಿ ನಡೆಯುತ್ತಿರುವುದು ಹಾಗೂ ನಗರೀಕರಣದ ಸಮೀಪ ಸ್ಥಾನೀಕರಣಗೊಂಡಿರುವುದು ಭೂಮಿ ಒದಗಿಸುವಲ್ಲಿ ಕಷ್ಟಕರವಾಗಿದೆ ಎನ್ನಲಾಗುತ್ತಿದೆ.

ಉದ್ಯೋಗಗಳ ಮಾದರಿ: ಭಾರತಧಾದ್ಯಂತ ಬುಡಕಟ್ಟು ಸಮುದಾಯಗಳಲ್ಲಿ ಕಂಡುಬರುವ ವಿಶೇಷತೆಯಂತೆ ಕರ್ನಾಟಕದಲ್ಲಿನ ಕೊರಗರಲ್ಲಿಯೂ ವಿಶೇಷತೆ ಗುರುತಿಸಬಹುದು. ಇವರುಗಳಲ್ಲಿ ವಿಶೇಷವಾಗಿ ಕಾಣಬರುವ ಉದ್ಯೋಗದಲ್ಲಿನ ಬದಲಾವಣೆ ಒಂದು ನಿಶ್ಚಿತವಾದ ಅಥವಾ ಬೇರೆಯದೇ ಆದ ಕಾರಣಗಳೂ ತಿಳಿದು ಬರುತ್ತವೆ. ಇವರುಗಳಲ್ಲಿನ ಬದಲಾವಣೆ ಅವರ ಪರಿಸರದಲ್ಲಿನ ಜೀವನ ಕ್ರಮವನ್ನು ಸುತ್ತುವರಿದೆ ನಡೆಯುತ್ತಿರುವಂತವುಗಳಾಗಿವೆ. ಸಮುದಾಯದಲ್ಲಿ ಉಳಿದು ಬಂದಿದ್ದ ಪೂರ್ವದ ನೈರ್ಮಲೀಕರಣದ ಮೂಲ ವೃತ್ತಿಯನ್ನು ಬಿಟ್ಟು ಬಿಡದೆ ಉಳಿದಿದ್ದಾರೆ. ನಗರದ ಬೆಳವಣಿಗೆ, ಕೈಗಾರೀಕರಣ ಮತ್ತು ನಗರೀಕರಣದಿಂದ ಈ ಜನರು ನಗರಕ್ಕೆ ಹತ್ತಿರವಾಗುತ್ತಿರುವ, ಪ್ರಸ್ತುತದ ಸಂಧರ್ಭದಲ್ಲಿಯೂ ವೃತ್ತಿಗಳಲ್ಲಿನ ವೈವಿಧ್ಯತೆಯಲ್ಲಿ ಹೆಚ್ಚಿನ ಪ್ರಗತಿ ಮಾತ್ರ ಕಾಣದಿರುವುದು ವಿಪರ್ಯಾಸ. ಸಮುದಾಯದ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಬಹಳ ಕಡಿಮೆ ವೇತನದ ಉದ್ಯೋಗಗಳಲ್ಲಿ ಜನರು ತೊಡಗಿರುವುದು ಕಾಣಬಹುದು. ಇಲ್ಲಿನ ಎರಡು ಅತಿಮುಖ್ಯವಾದ ವಿಶೇಷತೆಗಳೆಂದರೆ, ಅಲ್ಪ ಸ್ವಲ್ಪ ಶಿಕ್ಷಣ ಪಡೆದ ವಿದ್ಯಾವಂತ ಯುವ ಜನರು ತೊಡಗಿಸಿಕೊಂಡಿರುವ ಮೂಲ ವೃತ್ತಿಗಳ, ಸಾಂಪ್ರದಾಯಿಕತೆಯನ್ನೇ ತೊರೆದಿದ್ದಾರೆ. ಮತ್ತೊಂದು ಗುಂಪು ನೈರ್ಮಲೀಕರಣವನ್ನೇ ಮೈಗೂಡಿಸಿಕೊಂಡು ಅನುಸರಿಸುತ್ತಾ ಬರುತ್ತಿರುವ ಗುಂಪು. ಈ ನಡುವಿನ ಬಹುತೇಕ ಎಲ್ಲಾ ಕುಟುಂಬಗಳು ನಗರ ಜೀವನಕ್ರಮಕ್ಕೆ ಹತ್ತಿರವಾಗಿದ್ದರೂ ಸಹ ಜೀವನಕ್ರಮದಲ್ಲಿನ ಸಾಮಾಜಿಕ-ಸಾಂಸ್ಕೃತಿಕ-ಆರ್ಥಿಕತೆಯ ವಿಸ್ತಾರತೆಯ ಬದಲಾದ ಕ್ರಮ ತೀರ ಕಡಿಮೆ.

ಪೂರ್ವದಲ್ಲಿನ ಉದ್ಯೋಗ ಕ್ರಮದಲ್ಲಿದ್ದ ಜೀವನ ಪದ್ಧತಿಯಂತೆ ಸಮುದಾಯದ ಕಾಲೋನಿಗಳು ಕೊಳಚೆ ಪ್ರದೇಶಗಳಾಗಿ ಕಂಡುಬರುತ್ತದೆ. ಇಲ್ಲಿನ ಪರಿಸರದಲ್ಲಿನ ವಾಸ್ತವದ ಸ್ಥಿತಿ ಕಂಡೊಡನೆ ಈ ಮಾಹಿತಿ ತಿಳಿದು ಬರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಉದ್ಯೋಗಗಳಲ್ಲಿನ ಬದಲಾವಣೆ ಎಷ್ಟರಮಟ್ಟಿಗೆ ಕೊರಗರ ಜೀವನದಲ್ಲಿ ಉತ್ತಮತೆಯನ್ನು ತಂದಿದೆ ಎನ್ನುವ ಅಂಶ ಸಮೀಕ್ಷೆಯ ೨ ಹಂತಗಳಲ್ಲಿ ಗುರುತಿಸಲಾಗಿದೆ. ಪ್ರತಿಯೊಂದು ಹಂತದಲ್ಲಿನ ಬಹುಮುಖ್ಯ ಉದ್ಯೋಗಗಳನ್ನು ಅವುಗಳ ಪ್ರಾಧಾನ್ಯತೆಯ ಆಧಾರದ ಮೇಲೆ ದೊಡ್ಡದಾದ ಅಥವಾ ಪ್ರಧಾನವಾದ ಮತ್ತು ಚಿಕ್ಕದಾದ ಅಥವಾ ಅಲ್ಪ ಪ್ರಧಾನವಾದ ಉದ್ಯೋಗಗಳು ಎಂಬುದಾಗಿ ಗುರುತಿಸಲಾಗಿದೆ. ಶೈಕ್ಷಣಿಕ ಕ್ರಾಂತಿಯ ಹರಿವು ಇಲ್ಲಿನ ಉದ್ಯೋಗಗಳತ್ತ ಬದಲಾವಣೆಗೆ ಮುಖ ಮಾಡಿದ್ದರೂ ಸಹ ಸಾಂಪ್ರದಾಯಿಕ- ಸಾಂಸ್ಕೃತಿಕ ನಂಟು ಈ ಸಮುದಾಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉಳಿದಿರುವುದರಿಂದ ಅವರುಗಳಲ್ಲಿನ ಜೀವನಕ್ರಮದ ಉದ್ಯೋಗಗಳ ಕ್ರಮದ ಮೇಲೂ ಪ್ರಭಾವ ಬೀರಿರುವುದು ಕಾಣಬಹುದಾಗಿದೆ.

ಪೂರ್ವದ ಉದ್ಯೋಗಗಳು: ಕೊರಗರು ನಿಜವಾಗಿಯೂ ಜಿಲ್ಲೆಯ ಆದಿವಾಸಿಗಳು ಎನ್ನುವ ವಿಚಾರವಾಗಿ ಹಲವಾರು ಮಾಹಿತಿ ಗ್ರಂಥಗಳು ಲಭ್ಯವಿವೆ. ಪೂರ್ವಿಕರ ಅಭಿಪ್ರಾಯದಲ್ಲಿ ಕೊರಗರಿಗೆ ಒಬ್ಬ ರಾಜನಿದ್ದನೆಂದೂ ತಿಳಿದು ಬರುತ್ತದೆ. ಇಂತಹ ಕೊರಗ ಸಮುದಾಯ ಕಡು ಬಡತನದ ಅವಿದ್ಯಾವಂತರಾಗಿ ಪಶುಗಳಂತೆ ಜೀವನ ಮಾಡಿರುವ ಸಂಗತಿಯನ್ನು ಹಲವಾರು ಸಂಶೋಧಕರು ಪರಿಶೋಧಿಸಿದ್ದಾರೆ. ಬದುಕಿನ ಪ್ರಯಾಣದಲ್ಲಿ ಅತ್ಯಂತ ಅನಾಗರೀಕ ಎಂಬ ಹಣೆ ಪಟ್ಟಿಯನ್ನು ಪಡೆದು ಜೀವಿಸುತ್ತಿದ್ದ ಇವರುಗಳು ಸಾರ್ವಜನಿಕ ರಸ್ತೆಯಲ್ಲಾಗಲೀ ಸ್ಥಳದಲ್ಲಾಗಲೀ ಉಗಳಬಾರದು ಎಂದು ನಿಷೇಧಿಸುವುದರೊಂದಿಗೆ ಇವರನ್ನು ಸಮಾಜದಿಂದಲ್ಲೇ ದೂರೀಕರಿಸಿದ್ದರು.

ಸಂಶೋಧನಾಕಾರಿ ಥರ್‌ಸ್ಟನ್ ರವರ ಪ್ರಕಾರ ತಮ್ಮ ಕಾಸ್ಟ್ ಅಂಡ್ ಟ್ರೈಬ್ಸ್ ಪುಸ್ತಕದಲ್ಲಿ ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸಿದಂತೆ "ಪೂರ್ವದಲ್ಲಿ ಕೊರಗರು ಕಾಡು, ಗುಡ್ಡಪ್ರದೇಶ, ಗಿರಿಕಂದರಗಳ ದಟ್ಟ ಅರಣ್ಯದ ನಡುವಿನ ಜೀವನ ಕ್ರಮವಾಗಿತ್ತು. ಸ್ಥಳೀಯ ಪಟ್ಟಣ ಅಥವಾ ಗ್ರಾಮ ಸ್ಥಳಗಳಿಗೆ ಬರಬೇಕಾದರೆ ಗ್ರಾಮದ ಅಧಿಕಾರಿ ಅಪ್ಪಣೆ ಪಡೆದೆ ಬರಬೇಕಿತ್ತು. ಅಪಶಕುನದ ಮುದ್ರೆ ಕೊರಗರ ಕೊರಳಿಗೆ ಜೋತಾಕಲಾಗಿತ್ತು."[೯]

ಬೇಟೆ: ಅತಿ ಪೂರ್ವಧ್ಲಲ್ಲಿ ಇವರುಗಳು ಹೆಚ್ಚಾಗಿ ಗುಡ್ಡಗಾಡುಗಳಲ್ಲಿಯೂ, ಗಿರಿಕಂದರಗಳಲ್ಲಿಯೂ ವಾಸಮಾಡುತ್ತಿದ್ದು ಕಾಡುಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು.[೧೦] ಇನ್ನೂ ಕೆಲವರು ಗುಡ್ಡದ ತಪ್ಪಲು ಪ್ರದೇಶಗಳಲ್ಲಿ ವಾಸಿಸುತ್ತಿದ್ದವರು. ಆಹಾರದ ಸಲುವಾಗಿ ಬೇಟೆಯನ್ನು ರೂಢಿಸಿಕೊಂಡಿದ್ದರು. ಕಾಡು ಪ್ರಾಣಿಗಳಿಂದ ಮಾಂಸ, ಪ್ರಾಣಿಗಳ ಚರ್ಮ,

ಅವುಗಳ ಎಲುಬುಗಳನ್ನು ಸಂಗ್ರಹಿಸಿ ಮಾರಾಟಮಾಡುತ್ತಿದ್ದವರು. ಬೇಟೆ ಸಂಸ್ಕೃತಿಯ ಪದ್ಧತಿಯಿಂದ ಇವರುಗಳು ಬೇಟೆಯ ಉತ್ಪನ್ನಗಳನ್ನು ವಿಕ್ರಯಮಾಡಿ ಕೊಳ್ಳುವುದು ಅರಿತವರಾಗಿದ್ದರು. ಹೀಗೆ ಬೇಟೆಯು ಪೂರ್ವದ ಮುಖ್ಯವಾದ ಉದ್ಯೋಗವಾಗಿ ಸಮುದಾಯಗಳಲ್ಲಿ ಉಳಿದುಬಂದಿತ್ತು.

ಬಿದಿರಿನ ಕೆಲಸ: ಸುತ್ತಮುತ್ತಲಿನ ಕಾಡಿನ ಪ್ರದೇಶದಲ್ಲಿ ದೊರೆಯುವ ಬಿದರಿನ ಬೀಳುಲುಗಳಿಂದ ಅನೇಕ ವಿಧವಾದ ವಸ್ತುಗಳನ್ನು ತಯಾರಿಸುತ್ತಿದ್ದ ವೃತ್ತಿಕೌಶಲ್ಯವು ಸಹ ಕೊರಗರಲ್ಲಿತ್ತು. "ಸಮುದಾಯದ ಅನೇಕರು ಕಾಲಿನ ಚಾಪೆ, ಬುಟ್ಟಿ, ಕುಕ್ಕೆ ಹಾಗೂ ಹಗ್ಗ ಸೊಪ್ಪು ಕಲ್ಲುಗಳನ್ನು ತಯಾರಿಸುತ್ತಿದ್ದರು. ಬಿದಿರಿನ ಕೆಲಸದ ನೈಪುಣ್ಯತೆಯು ಪ್ರಸ್ತುತವೂ ಉಳಿದು ಬಂದಿದೆ. ಇತ್ತೀಚಿಗೆ ಸರ್ಕಾರವು ಸಹ ತರಬೇತಿಯನ್ನು ಸಹ ನೀಡುತ್ತಿರುವುದು ಅವರುಗಳ ವೃತ್ತಿಯ ವೈಶಿಷ್ಟಕ್ಕೊಂದು ಕೀರಿಟವಿದ್ದಂತೆ ಸರಿ. ಬುಟ್ಟಿ, ಚಾಪೆ, ಕುಡುಪು, ಕುರ್ಚಿಗೆ, ಬೆತ್ತದ ನೆಯ್ಗೆಯು ಪ್ರಮುಖವಾದವುಗಳಾಗಿವೆ. ಬೆತ್ತದ ನೆಯ್ಗೆ ಅವರುಗಳ ಕೌಶಲ್ಯದ ಅದ್ಬುತ ಕಲೆಯಾಗಿ ಉಳಿದು ಬಂದಿದೆ".[೧೧] ಇಂತಹ ಎಲ್ಲ ಪರಿಕರಗಳನ್ನು ತಯಾರಿಸಿ ಸಂತೆಗಳಲ್ಲಿ ವಸ್ತುವಿನಿಮಯ ಪದ್ಧತಿಯಂತೆ ವಿಕ್ರಯ ಮಾಡಿ ಜೀವಿಸುತ್ತಿದ್ದವರು, ಇಂದು ಕೆಲವೇ ಜನ ಹಿರಿಯರು ಮಾತ್ರ ಮಾಡುತ್ತಾರೆ. ಬೆತ್ತದ ಸರಬರಾಜು ಇಲ್ಲದ ಕಾರಣ ಸಣ್ಣ ಚಾಪೆ, ಬುಟ್ಟಿ ಹೆಣೆದು ಪಟ್ಟಣದಲ್ಲಿ ಮಾರಾಟಮಾಡುವವರಾಗಿದ್ದಾರೆ. ಇದರಿಂದ ಲಭಿಸುವ ಅಲ್ಪ ಹಣ ಕುಟುಂಬ ನಿರ್ವಹಣೆಗೆ ಸಾಕಾಗುವುದಿಲ್ಲ. ಬಹುತೇಕ ಬೆತ್ತದ ಕೆಲಸವನ್ನು ಅರಣ್ಯದಂಚಿನಲ್ಲಿರುವ ಉದ್ಯೋಗಗಳಿಲ್ಲದ ಬಡ ಕುಟುಂಬಗಳೇ ಕೂಲಿ ಕೆಲಸ ದೊರೆಯದ ದಿನಗಳಲ್ಲಿ ದುಡಿಯುವುದಾಗಿ ತಿಳಿಸುತ್ತಾರೆ.

ಮಂಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿನ ಬೆಟ್ಟಗುಡ್ಡಗಳಲ್ಲಿರುವ ಕುಟುಂಬಗಳು ಜೀವನಕ್ಕಾಗಿ ಕಟ್ಟಿಗೆ ಮಾರಾಟ ಇಲ್ಲಿವೆ ಮುಂಡಿಗೆ ಗರಿಗಳಿಂದ ಹಣೆದ ಚಾಪೆಯನ್ನು ನೆಯ್ದು ಮಾರಾಟ ಮಾಡುತ್ತಾರೆ. ಅಲ್ಲದೆ ಬಹಳಷ್ಟು ಕುಟುಂಬಗಳು ಛಾಪೆಗಳಾಗಿ ಉಪಯೋಗಿಸುತ್ತಿದ್ದಾರೆ. ಒಣಗಿದ ಮುಂಡಿಗೆ ಗರಿಗಳಿಂದ ಮುಳ್ಳುಗಳನ್ನು ತೆಗೆದು, ನಂತರ ಗರಿಗಳನ್ನು ಉದ್ದಕ್ಕೆ ಎರಡು, ಮೂರಾಗಿ ಸೀಳಿ ನೀರಿನಲ್ಲಿ ನನಸಿ ಮತ್ತೆ ಒಣಗಿಸಿ ಚಕ್ಕುಲಿಯಾಕಾರದಂತೆ ಸುರಳಿ ಸುತ್ತುತ್ತಾರೆ. ಆಗ ಗರಿಗಳಲ್ಲಿನ ದೊರಗುಹೋಗಿ ನಯವಾಗುತ್ತದೆ. ಇದರಿಂದ ಚಾಪೆ ಹೆಣೆಯುತ್ತಾರೆ.

ಇಂತಹ ಚಾಪೆಯನ್ನು ಕೊರಗರು ಮಾತ್ರ ಹಣೆಯುವುದಾಗಿ ತಿಳಿಸುತ್ತಾರೆ. ಪ್ರತಿಯೊಂದು ಕೊರಗ ಕುಟುಂಬ ವರ್ಷದಲ್ಲಿ ೪ ರಿಂದ ೫ ಚಾಪೆಗಳನ್ನು ಕೊಳ್ಳುತ್ತಿದ್ದವರೂ ನಗರ ಹೊಸ ಪ್ಲಾಸ್ಟಿಕ್ ಚಾಪೆಗಳು ಬಂದ ನಂತರ ನಮ್ಮಿಂದ ಕಾಣೆಯಾಗುತ್ತಿವೆ ಎನ್ನುತ್ತಾರೆ.

ಸುಮಾರು ೬೦ ವರ್ಷ ದಾಟಿದ ಮುದುಕಿ, ಕರಪ್ಪೋಳು ಹೇಳುವಂತೆ ನಮ್ಮ ಚಾಪೆ ಅಂಗಡಿಯಲ್ಲಿ ೪೦ ರಿಂದ ೫೦ ರೂ.ಗೆ ದೊರೆಯುತ್ತದೆ. ನಾವು ೨೦ ರೂ. ಗೆ ಅಂಗಡಿಗೆ ಕೊಡುತ್ತೀವಿ ಎನ್ನುತ್ತಾಳೆ. ಚಾಪೆ ಹೆಣೆಯುವುದು ತೋರಿಸು ಎಂದಾಗ ಕರಪ್ಪೋಳು ಪಜೆ ಮುಡೆಪ್ಪುನಾ ತೂವೋಡಾ? ಆಯಿನೆಂಚಿನ ತೂಪುನೇ (ಚಾಪೆ ಹೆಣೆಯುವುದನ್ನು ನೋಡಬೇಕಾ? ಅದನ್ನೆಂತದು ನೋಡುವುದು?) ಎಂದು ಹೆಣೆದು ತೋರಿಸುತ್ತಾಳೆ.

ಹಿಂದೆ ಕುಟುಂಬದಲ್ಲಿ ಗಂಜಿ ಅಕ್ಕಿ ಇಲ್ಲದಿದ್ದರೆ ರಾತ್ರಿಯಿಡೀ ಕುಳಿತು ಒಂದು ಚಾಪೆಯನ್ನು ಹೆಣೆದು ಬೆಳಿಗ್ಗೆ ಅದನ್ನು ಮಾರಿ ಅಕ್ಕಿ ತಂದು ಅಡುಗೆ ಮಾಡುತ್ತಿದ್ದೆವು. ಈಗ ಈ ವಿಧ್ಯೆ ಯಾರಿಗೂ ಬೇಡ. ಪೇಟೆಯಲ್ಲಿ ಬೇರೆ ಬೇರೆ ಹುಲ್ಲಿನ ಪ್ಲಾಸ್ಟಿಕ್ ಚಾಪೆ ಸಿಗುತ್ತದೆ. ಹೀಗಾಗಿ ಈ ಚಾಪೆ ಯಾರು ತೆಗೆದುಕೊಳ್ಳುತ್ತಾರೆ ಎನ್ನುತ್ತಾಳೆ.[೧೨]

ಜೀತಗಾರಿಕೆ: ಅರಣ್ಯವಾಸಿಗಳಾಗಿ ಜೀವಿಸುತ್ತಿದ್ದ ಸಮಯದಲ್ಲಿ ಆಹಾರದ ಸಲುವಾಗಿ ದೊಡ್ಡ ಶ್ರೀಮಂತ ದಣಿಗಳ ಮನೆಯಲ್ಲಿ ಜೀತಗಾರಿಕೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ ನಿದರ್ಶನ ವಕ್ತೃಗಳೇ ತಿಳಿಸುತ್ತಾರೆ. ಗಂಜಿಗಾಗಿ ಶ್ರೀಮಂತರ ಮನೆಯಲ್ಲಿ ಮನೆ ಕೆಲಸ ನಿರ್ವಹಿಸುತ್ತಿದ್ದರು. ನಂಬಿಕೆಗೆ ಅರ್ಹರಾದ ಕೊರಗರು ದಣಿಗಳ ಮನೆಯಲ್ಲಿ ಎಲ್ಲಾ ಕೆಲಸಗಳನ್ನು ಅಚ್ಚು ಕಟ್ಟಾಗಿ ನಿರ್ವಹಿಸುವ ಪಾತ್ರ ಪ್ರಧಾನವಾಗಿತ್ತು. ಇವರುಗಳಲ್ಲಿ ಬಹುತೇಕರು ನೈರ್ಮಲೀಕರಣ ಹಾಗೂ ವ್ಯವಸಾಯ ಅಥವಾ ಕೃಷಿಯಲ್ಲಿ ದುಡಿಯುವುದು ಒಂದು ಮೂಲ ವೃತ್ತಿಯಾಗಿ ಗುರುತಿಸಿ ಕೊಂಡಿದ್ದರು. ಜೀತಗಾರಿಕೆಯು ಕುಟುಂಬದ ಒಬ್ಬ ಸದಸ್ಯನ ನಂತರ ಆ ಕುಟುಂಬದ ಇತರ ಸದಸ್ಯರೊಂದಿಗೆ ನಿರಂತರವಾಗಿ ಮುಂದುವರೆಯುತ್ತಾ ಬರುತ್ತಿತ್ತು. ಹೀಗಾಗಿ ಪೂರ್ವದಲ್ಲಿ ಜೀತಗಾರಿಕೆಯು ಒಂದು ವೃತ್ತಿಯಾಗಿತ್ತು.

ಪ್ರಸ್ತುತದ ಉದ್ಯೋಗಗಳು: ಸ್ವಾತಂತ್ರ್ಯ ನಂತರದ ಹಾದಿಯನ್ನು ಗಮನಿಸಿದಲ್ಲಿ ಕೊರಗರು ನಡೆದು ಬಂದ ಸ್ಥಿತ್ಯಂತರದ ಬದುಕಿನಲ್ಲಿ ಅನೇಕ ಸಮಾಜ ಸುಧಾರಕರ ಪ್ರಭಾವ ಪ್ರತಿಭಿಂಬಿಸುತ್ತದೆ. ಬಹಳಷ್ಟು ಸಮಾಜ ಸೇವಾ ಸುಧಾರಕರು ಇವರುಗಳ ಜೀವನವಿಧಾನದಲ್ಲಿ ಉಳಿದು ಬಂದಿದ್ದ ಬಹು ಕಾಲದ ವೃತ್ತಿಗಳ ಬದಲಾವಣೆಗಾಗಿ ಶ್ರಮ ವಹಿಸಿ ದುಢಿದಿದ್ದಾರೆ. ಕೊರಗರ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಸಂಘ, ಸಂಸ್ಥೆಗಳು ಸೇವಾ ಮನೋಭಾವದಿಂದ ದುಡಿದ ಫಲವಾಗಿ ಪ್ರಸ್ತುತ ಇವರುಗಳು ನಗರೀಕರಣದ ಜೀವನಕ್ಕೆ ಹತ್ತಿರವಾಗುತ್ತಿದ್ದಾರೆ. ಇವರ ಜೀವನ ಸಂಕಷ್ಟಗಳ ನಿಜ ಸ್ಥಿತಿಯಿಂದ ಹೊರತರುವ ನಿಟ್ಟಿನಲ್ಲಿ ಶಿಕ್ಷಣವೇ ಪ್ರಧಾನ ಅಸ್ತ್ರವಾಗಿ ಬಳಸಿ ಸಂವಿಧಾನಾತ್ಮಕ ಹಕ್ಕುಗಳಿಗೆ ಹೋರಾಡುವಂತೆ ಮಾಡಿದ್ದಾರೆ. ಈ ಎಲ್ಲಾ ಬೆಳವಣಿಗೆಗಳ ಪ್ರತಿಫಲದಂತೆ ವೈವಿಧ್ಯತೆಯ ಉದ್ಯೋಗಗಳು ರೂಢಿಗತವಾಗುತ್ತಾ ಬರುತ್ತಿವೆ.

ಜನರು ವಾಸವಾಗಿರುವ ಪರಿಸರ ಕ್ರಮದಂತೆ ವಿವಿಧ ವೃತ್ತಿಗಳು ಪ್ರಸ್ತುತ ಮೈಗೂಡಿಸಿಕೊಂಡಿರುವುದು ಕಂಡು ಬರುತ್ತದೆ. ಅವುಗಳೆಂದರೆ.

ಕೋಷ್ಟಕ ೩.೧೮ : ಪ್ರಸ್ತುತ ಅವಲಂಭಿತ ಉದ್ಯೋಗಗಳು

ಕ್ರ. ಸಂಖ್ಯೆ	ಕಾಲೋನಿಗಳು	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಸ್ಥಾನೀಕರಣಗೊಂಡ ಸ್ಥಳ	ಅವಲಂಬಿತ ಉದ್ಯೋಗಗಳು						
				ದಿನ ಕೂಲಿ	ಕೃಷಿ ಕಾರ್ಮಿಕ	ವ್ಯಾಪಾರ	ವ್ಯವಸಾಯ	ಸರಕಾರಿ ನೌಕರಿ	ಆಟೋ ಚಾಲಕ	ಹಂಗಾಮಿ ನೌಕರರು
೧	ಶಿರೂರು	೩	ಮುಖ್ಯ ರಸ್ತೆ	–	–	–	–	೩	–	–
೨	ಬೈಂದೂರು	೬	ಗ್ರಾಮ	೨	೧	–	೧	–	–	೨
೩	ಶಂಕರನಾರಾಯಣ	೫	ಗ್ರಾಮ	೨	೧	–	–	–	–	೨
೪	ತಲ್ಲೂರು	೭	ಗ್ರಾಮ	–	೨	೧	೨	–	೧	೧
೫	ಅಂಬೇಡ್ಕರ್‌ನಗರ	೩೦	ನಗರ	೨	–	೨	–	೧೭	೩	೬
೬	ಕೋಟೇಶ್ವರ	೧೧	ಮುಖ್ಯ ರಸ್ತೆ	೧	೩	೧	೩	–	೧	೨
೭	ತಾರಸಿ	೪	ಗ್ರಾಮ	–	೨	–	–	–	–	೨
೮	ಬೀಡಿನಗುಡ್ಡೆ	೧೫	ನಗರ	೧	–	೧	–	೧೧	–	೧
೯	ಬೈಲೂರು	೧೧	ಗ್ರಾಮ	೧	೩	೧	೨	–	೨	೨
೧೦	ಪದ್ಮನಾಭನಗರ	೬	ನಗರ	೨	–	–	–	೩	–	೧
೧೧	ಕೋಡಿಬೆಟ್ಟು	೭	ಗ್ರಾಮ	–	–	೧	–	೪	೨	–
೧೨	ಸಾಚರ್‌ಪೇಟೆ	೧೦	ನಗರ	೧	–	–	–	೬	೧	೨
೧೩	ರಮೇಟ್ ಪಾಲ್ಕೆ	೧೫	ನಗರ	೧	–	೨	೪	೨	೧	೫
೧೪	ಮುಲ್ಲಡ್ಕ	೧೦	ಗ್ರಾಮ	೧	೨	–	೫	–	–	೨
೧೫	ಕಡೆತಾಲ್	೬	ಗ್ರಾಮ	೧	–	೧	–	–	೧	೩
೧೬	ಸನ್ನೂರು	೧೩	ಗ್ರಾಮ	೧	–	–	೫	–	೨	೫
೧೭	ಊರ್ವ ಸರ್ಕಲ್	೨೪	ನಗರ	೨	–	೪	೧	೧೧	೩	೩
೧೮	ಟೌನ್ ಮುನಿಸಿಪಾಲಿಟಿ	೨೨	ನಗರ	೨	–	–	೫	೧೦	೧	೪
೧೯	ಕಂಕನಾಡಿ	೧೫	ನಗರ	೩	–	೨	–	೫	೨	೩
೨೦	ಕೋಡಿಕಲ್	೨೫	ನಗರ	೫	–	೫	೨	೮	೩	೨
೨೧	ಧರ್ಮಸ್ಥಳ	೧೨	ಗ್ರಾಮಾಂತರ ಪ್ರದೇಶ	೫	೨	–	೨	–	೧	೨
೨೨	ಉಜರೆ	೭	ಗ್ರಾಮ	೩	–	–	–	೪	–	–
೨೩	ಹೊಸ ಅಂಗಡಿ	೮	ಗ್ರಾಮಾಂತರ ಪ್ರದೇಶ	೧	೩	೧	–	–	೧	೨
೨೪	ಬೆಳಲು	೨೩	ಗ್ರಾಮ	೧೧	೯	–	–	–	೧	೨
೨೫	ಕಣಿಯೂರು	೧೭	ಗ್ರಾಮ	–	೭	೧	–	–	–	೯
೨೬	ಕೊಡಂಬಾಡಿ	೬	ಗ್ರಾಮಾಂತರ ಪ್ರದೇಶ	೫	೧	–	–	–	–	–
೨೭	ಪಂಜಾ	೨೨	ಗ್ರಾಮಾಂತರ ಪ್ರದೇಶ	೧೬	೫	–	–	–	–	೧
	ಒಟ್ಟು	೩೪೦		೬೯	೪೧	೨೩	೩೨	೮೪	೨೬	೬೪

ದಿನಗೂಲಿ: ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸವಿರುವ ಕುಟುಂಬಗಳು ಜೀವನ ನಿರ್ವಹಣೆಗೆ ಆಧಾರವೆಂಬಂತೆ ದಿನಕೂಲಿಯಲ್ಲಿ ತೊಡಗಿಸಿ ಕೊಂಡಿದ್ದಾರೆ. ಪುರುಷ ಮತ್ತು ಮಹಿಳೆಯೆನ್ನದೇ ಬಹುತೇಕರು ದುಡಿಮೆಯಲ್ಲಿ ನಿರತರಾಗಿದ್ದಾರೆ. ನಗರ ಪ್ರದೇಶದ ವಿವಿಧ ಕೈಗಾರಿಕೆ, ಕಾರ್ಖಾನೆಗಳಲ್ಲಿ ಹಾಗೂ ಕಟ್ಟಡ ನಿರ್ಮಾಣದಲ್ಲಿ ದುಡಿಯುವರಾಗಿದ್ದಾರೆ. ಒಟ್ಟು ೬೯ ಕುಟುಂಬಗಳು ಆದಾಯದ ಮೂಲವಾಗಿ ತೊಡಗಿಸಿಕೊಂಡ ವೃತ್ತಿ ದಿನಕೂಲಿಯಾಗಿದೆ. ಈ ಕುಟುಂಬಗಳಿಗೆ ಸರ್ಕಾರದಿಂದ ಯಾವುದೇ ಭೂಮಿ/ಭೂ ಹಿಡುವಳಿ ದೊರೆಯದ ಕುಟುಂಬಗಳಾಗಿವೆ. ಹೊಸತನದ ಬದುಕಿನ ಪಯಣದಲ್ಲಿ ದಿನಕೂಲಿಯಲ್ಲಿ ಜನರು ಅಲ್ಪ ಸ್ವಲ್ಪ ಶಿಕ್ಷಣ ಪಡೆದ, ನಿರುದ್ಯೋಗ ಪಡೆಯ ಯುವಕರು ಹೆಚ್ಚಾಗಿರುವ ಹಾಗೂ ವಲಸೆ ಬಂದ

ಕುಟುಂಬಗಳಾಗಿವೆ. ಮನೆ ಆರ್ಥಿಕತೆಯ ಆಧಾರವಾಗಿ ದುಡಿಯುವ ಪ್ರಬಲ ಶಕ್ತಿಯಾಗಿ ದಿನಕೂಲಿ ಹೊರಹೊಮ್ಮಿದೆ. ಯಾವುದೇ ಉಳಿತಾಯವಿಲ್ಲದ ತಾತ್ಕಾಲಿಕ ಉದ್ಯೋಗ ಪಟ್ಟಣದ ಅರಿವಿನ ಶ್ರಮಜೀವನಕ್ಕೆ ಅನಿವಾರ್ಯವೆಂಬಂತೆ ಇದೆ. ಮಾರುಕಟ್ಟೆ ಪ್ರದೇಶ, ಬಸ್ ನಿಲ್ದಾಣ, ಹಾಗೂ ಶ್ರೀಮಂತರಲ್ಲಿ ದಿನಕೂಲಿ ಕೆಲಸದಲ್ಲಿ ತೊಡಗಿಸಿಕೊಂಡಿರುವುದು ಕಾಣಬರುತ್ತದೆ. ಬಹುತೇಕ ಎಲ್ಲಾ ಕಾಲೋನಿಗಳಲ್ಲಿ ಒಂದಲ್ಲಾ ಒಂದು ಕುಟುಂಬ ದಿನಕೂಲಿ ಕೆಲಸದಲ್ಲಿ ತೊಡಗಿಸಿಕೊಂಡಿರುವುದು, ದಿನಕೂಲಿಯ ಮಹತ್ವವನ್ನ ತಿಳಿಯಪಡಿಸುತ್ತದೆ.

ಕೃಷಿಕಾರ್ಮಿಕರು: ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಸರ್ಕಾರ ಒದಗಿಸಬೇಕಾದ ಭೂ ಹಿಡುವಳಿಯ ಹಂಚಿಕೆಯು ಕೊರಗರಲ್ಲಿ ಬಹುತೇಕ ಇಲ್ಲವಾಗಿದೆ. ಇನ್ನೂ ಭೂ ಹಿಡುವಳಿಯನ್ನು ಹೊಂದಿರುವ ಕುಟುಂಬಗಳು ಅತ್ಯಲ್ಪವಾಗಿವೆ. ನಗರ ಪ್ರದೇಶದಲ್ಲಿರುವ ಕುಟುಂಬಗಳಿಗೆ ವಾಸವಿರುವ ಮನೆಗಳೆ ಕೊಡುಗೆ. ಗ್ರಾಮ ಮತ್ತು ಹಳ್ಳಿಯ ಪ್ರದೇಶಗಳಲ್ಲಿ ನೆಲೆನಿಂತ ಕುಟುಂಬಗಳಿಗೆ ಮಾತ್ರ ಸ್ವಲ್ಪ ಪ್ರಮಾಣದ ಭೂಮಿಯನ್ನು ಒದಗಿಸಲಾಗಿದೆ. ಈ ನಿಟ್ಟಿನಲ್ಲಿ ಕೊರಗರು ಕೃಷಿ ಕಾರ್ಮಿಕರಾಗಿ ವೃತ್ತಿಯನ್ನು ರೂಪಿಸಿಕೊಂಡ ಕುಟುಂಬಗಳು ಬಹಳಷ್ಟು ಕಡಿಮೆ. ಕೃಷಿಕಾರ್ಮಿಕರಿಗೆ ವರ್ಷದ ಪೂರ್ತಿ ಉದ್ಯೋಗ ದೊರೆಯದ ಕಾರಣ, ಕಡಿಮೆ ಜನರು ಅವಲಂಬಿಸಿದ್ದಾರೆ. ಈ ಪ್ರದೇಶಗಳಲ್ಲಿ ಕೃಷಿಯ ಚಟುವಟಿಕೆಗಳು ಕಡಿಮೆ ಇರುವುದು ಒಂದು ಕಾರಣವಾಗಿದೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ, ಘಟ್ಟಪ್ರದೇಶ ಹಾಗೂ ತೋಟದ ಪ್ರದೇಶಗಳಲ್ಲಿ; ಕೊರಗರು ದಿನಕೂಲಿ ಆಧಾರಿತವಾದಂತಹ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಒಟ್ಟಾರೆ ೩೪೦ ಕುಟುಂಬಗಳಲ್ಲಿ ೪೧ ಕುಟುಂಬಗಳು ಮಾತ್ರ ಕೃಷಿ ಕಾರ್ಮಿಕರ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕುಟುಂಬಗಳ ಸದಸ್ಯರು ಕೃಷಿ ಕಾರ್ಮಿಕರಾಗಿ ದುಡಿಯುವುದರಿಂದ ಅಹಾರದ ಸಾಮಾಗ್ರಿ ಮತ್ತು ಸ್ವಲ್ಪ ಮಟ್ಟಿನ ಹಣರೂಪದ ಆದಾಯ ದೊರೆಯುವುದು ನೆನೆಯುತ್ತಾರೆ. ಸಂಕಷ್ಟದಲ್ಲಿ ಕೃಷಿ ಭೂ ಮಾಲೀಕರು ಇವರುಗಳಿಗೆ ಸಾಲದ ರೂಪದಲ್ಲಿ ಹಣದ ಸಹಾಯ ಮಾಡುತ್ತಾರೆ. ಇಲ್ಲಿ ಕೂಲಿಯೂ ಒಂದು ನಿರ್ದಿಷ್ಟವಾಗಿ / ನಿಗದಿತವಾಗಿ ನಿಗದಿಗೊಳಿಸಿಲ್ಲ. ಸಾಕಷ್ಟು ಕಾಲದಿಂದಲ್ಲೂ ದುಡಿಯುತ್ತಿದ್ದರೂ ಕೂಲಿಯ ಬಗ್ಗೆ ಚರ್ಚೆ ನಡೆದಿಲ್ಲ ಎನ್ನುತ್ತಾರೆ. ಮತ್ತೆ ಕೆಲವು ಕೊರಗರ ಕುಟುಂಬಗಳು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಯಂ ಸಂಸ್ಥೆ ನೀಡಿರುವ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಆದರೆ ಇಲ್ಲಿನ ಸಂಖ್ಯೆ ತೀರ ಕಡಿಮೆ.

ವ್ಯಾಪಾರ : ಆಧುನಿಕತೆಯ ಪ್ರಭಾವ ಹಾಗೂ ಅಕ್ಷರ ಜ್ಞಾನದ ಅರಿವಿನಿಂದ ಕೊರಗರಲ್ಲಿ ವ್ಯಾಪಾರದ ಮನೋಭಾವ ಬೆಳೆಯುತ್ತಿದೆ. ನಗರದ ಸುತ್ತಮುತ್ತಲಿನ ಕುಟುಂಬಗಳು ತನ್ನದೇ ಕಾಲೋನಿಗಳಲ್ಲಿ ಸಣ್ಣ ಪ್ರಮಾಣದಲ್ಲಿ ವ್ಯಾಪಾರದ ಅಂಗಡಿಗಳನ್ನು ಪ್ರಾರಂಭಿಸಿದ್ದಾರೆ. ತರಕಾರಿ, ಹಣ್ಣು, ಪ್ಲಾಸ್ಟಿಕ್ ಸಾಮಾನು, ಮನೆಬಳಕೆಯ ದಿನಸಿ, ಕಡ್ಲೆಕಾಯಿ, ಅಂಗಡಿಗಳನ್ನು ತಳ್ಳುವ ನಾಲ್ಕು ಚಕ್ರದ ಗಾಡಿಯಲ್ಲಿ ಹಾಗೂ ಕಾಲೋನಿಯಲ್ಲಿ ಪೆಟ್ಟಿ ಅಂಗಡಿ ನೆರವಿನಿಂದ

ವ್ಯಾಪಾರ ಮಾಡುವರಾಗಿದ್ದಾರೆ. ಬೀದಿ ಬದಿಯಲ್ಲಿ ವ್ಯಾಪಾರ ಮಾಡುತ್ತಿರುವ ೨೩ ಕುಟುಂಬಗಳು ದಿನನಿತ್ಯದ ಮೂರು ಕಾಸಿನ ವ್ಯಾಪಾರದಲ್ಲಿ ತೊಡಗಿವೆ.

ವ್ಯವಸಾಯ: ಭೂಮಿ ದೊರೆತ ಕುಟುಂಬಗಳೇ ಕಡಿಮೆ ಇವೆ. ಬೆಟ್ಟ ಗುಡ್ಡ ಪ್ರದೇಶಗಳಲ್ಲಿರುವ ಈ ಭೂಮಿಯಿಂದ ಆದಾಯವೂ ಸಹ ಕಡಿಮೆ. ಭೂ ಹಿಡುವಳಿಯ ದೃಷ್ಟಿಯಲ್ಲಿ ಕೊರಗರ ಕುಟುಂಬಗಳು ನತದೃಷ್ಟರೇ ಎನ್ನಬಹುದು. ಭೂಮಿ ಮತ್ತು ವ್ಯವಸಾಯ ಗ್ರಾಮೀಣ ಆರ್ಥಿಕತೆಯ ವಿಷಯದಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತಿವೆ. ಆರ್ಥಿಕತೆಯ ಅವಿಭಾಜ್ಯ ಅಂಗವೇ ವ್ಯವಸಾಯ. ಒಂದು ಸಮುದಾಯದ ಆರ್ಥಿಕ-ಸಾಮಾಜಿಕ ಜೀವನದಲ್ಲಿನ ಅಂತಸ್ತನ್ನು ಭೂಮಿಯೇ ನಿರ್ಧರಿಸುತ್ತಿದೆ. ಭೂಮಿ ಇರುವ ಕುಟುಂಬಗಳು ಹೆಚ್ಚಿನ ಪ್ರಮಾಣದ ಉತ್ಸಾಹ ಹಾಗು ಆಸಕ್ತಿಯನ್ನು ವ್ಯಕ್ತಪಡಿಸುತ್ತಾರೆ. ಸಮರ್ಪಕ ಮಾನವ ಸಂಪನ್ಮೂಲ ವಿನಿಯೋಗಿಸುವ ಮತ್ತೊಂದು ಕೊಡುಗೆಯ ಕ್ಷೇತ್ರವಾಗಿರುವುದರಿಂದ ಭೂಮಿಯಲ್ಲಿನ ದುಡಿಮೆಗೆ ಮಹತ್ವವಿದೆ.[೧೩] ಕೊರಗರು ಭೂಮಿಯಲ್ಲಿ ದುಡಿಯುತ್ತಿರುವ ಕುಟುಂಬಗಳ ಸಂಖ್ಯೆ ೩೨ ಆಗಿದೆ. ಸಣ್ಣ ಪ್ರಮಾಣದ ಭೂಮಿ ಹೊಂದಿರುವ ಈ ಕುಟುಂಬಗಳು ವರ್ಷದಲ್ಲಿ ೨ ಬಾರಿ ಭತ್ತ ಹಾಗೂ ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಇಲ್ಲಿ ಕುಟುಂಬದ ಸದಸ್ಯರೆಲ್ಲರೂ ಕೂಡಿ ದುಡಿಯುವರಾಗಿದ್ದಾರೆ.

ಆಟೋ ಚಾಲಕ: ಪೌರ ಕಾರ್ಮಿಕರಾಗಿ ದುಡಿಯುತ್ತ ನಗರಪ್ರದೇಶದಲ್ಲಿ ನೆಲೆಸಿರುವ ಕುಟುಂಬಗಳ ಸದಸ್ಯರು ಹಾಗೂ ಯುವಕರು ಸರ್ಕಾರದ ತರಬೇತಿಯಾದಂತಹ ವಾಹನ ಚಾಲನೆಯ ತರಬೇತಿ ಮತ್ತು ಪರವಾನಿಗೆ ಪಡೆದು ಆಟೋರಿಕ್ಷಾ ಚಾಲನೆಯ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ನಗರ ಪ್ರದೇಶದಲ್ಲಿ ಸ್ವಯಂ ಸಂಘಟಿತವಾಗಿರುವ ಯುವಕ ಸಂಘದ ವತಿಯಿಂದ ಹಾಗೂ ಸರ್ಕಾರದ ವಿಶೇಷ ಯೋಜನೆಯ ಸಾಲ ಸೌಲಭ್ಯದ ಮೂಲಕ ಆಟೋರಿಕ್ಷಾ ಪಡೆದಿದ್ದಾರೆ. ಸುಮಾರು ೨೬ ಕುಟುಂಬಗಳು ಆಟೋರಿಕ್ಷಾ ಚಾಲನೆಯ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು ಪರ್ಯಾಯ ಉದ್ಯೋಗವನ್ನಾಗಿ ರೂಢಿಸಿಕೊಂಡಿದ್ದಾರೆ. ಪ್ರತಿದಿನ ನಗರದಲ್ಲಿನ ಬೇಡಿಕೆಗನುಸಾರವಾಗಿ ಆದಾಯವನ್ನು ಗಳಿಸುತ್ತಾರೆ. ಇಲ್ಲಿನ ದುಡಿಮೆಯೂ ಸಹ ಅನಿಶ್ಚಿತತೆಯಿಂದಲ್ಲೇ ಕೂಡಿದೆ. ಆಗಾಗ ಸಂಭವಿಸುವ ಮುಷ್ಕರ, ವಾಹನ ದುರಸ್ತಿ ಇನ್ನಿತರ ಸಂದರ್ಭ ಹೊರತು ಪಡಿಸಿ, ಉಳಿದಂತೆ ಕೆಲಸದಲ್ಲಿ ನಿರತರಾಗಿ ಜೀವನ ಸಾಗಿಸುತ್ತಿದ್ದಾರೆ.

ಸರ್ಕಾರಿ ನೌಕರರು: ಕೊರಗರು ಪೂರ್ವದಿಂದ ಉಳಿಸಿಕೊಂಡು ಬಂದಂತಹ ನೈರ್ಮಲೀಕರಣದ ಕಾರ್ಯವನ್ನು ಪ್ರಸ್ತೂತವೂ ವಂಶಪಾರಂಪತೆಯಂತೆ ಉಳಿಸಿಕೊಂಡು ಬರುತ್ತಿದ್ದಾರೆ. ನಗರಸಭೆ, ಮಹಾನಗರಪಾಲಿಕೆಯಲ್ಲಿನ ಈ ನೈರ್ಮಲೀಕರಣದ ಕೆಲಸವು "ಡಿ" ದರ್ಜೆಯ ನೌಕರಿಯಾಗಿದೆ. ಒಟ್ಟಾರೆ ೮೪ ಕುಟುಂಬಗಳಲ್ಲಿ, ೧೧ ಕುಟುಂಬವು ವಿವಿಧ

ವೃತ್ತಿಗಳಾದ ದ್ವಿತೀಯ ದರ್ಜೆ ಗುಮಾಸ್ತ, ಭದ್ರತಾ ಮುಖ್ಯಸ್ಥ, ಮತ್ತು ಎನ್.ಎಮ್.ಪಿ.ಟಿ. ಬಂದರಿನಲ್ಲಿ ಭದ್ರತಾ ಸಹಾಯಕರಾಗಿ ದುಡಿಯುತ್ತಿದ್ದಾರೆ. ಇವರುಗಳ ದುಡಿಮೆಯಲ್ಲಿ ಗಂಡು, ಹೆಣ್ಣು ಎಂಬ ತಾರತಮ್ಯವಿಲ್ಲದೇ ತೊಡಗಿಸಿಕೊಂಡಿದ್ದಾರೆ. ನೈರ್ಮಲೀಕರಣದ ಉದ್ಯೋಗ ಮೊದಲಿಗೆ ಸುಲಭವಾಗಿ ದೊರೆಯುತ್ತಿತ್ತು. ಯಾಕೆಂದರೆ ಈ ಕೆಲಸಕಾರ್ಯದಲ್ಲಿ ಅವರು ಸರ್ವತಾ ನಿಷ್ಣಾತರಾಗಿದ್ದರು. ಈಗ ಇವರನ್ನು ಹಿಂದೆ ಹಾಕುವ ಅನೇಕರು ಪರಿಶಿಷ್ಟ ಜಾತಿ ವರ್ಗದಲ್ಲಿ ಹೆಚ್ಚಿನ ಜನರು ಸೇರ್ಪಡೆ ಗೊಳ್ಳುತ್ತಿದ್ದಾರೆ. ಇದರಿಂದ ಇಲ್ಲೂ ಉದ್ಯೋಗ ದೊರಕುವುದು ದುಸ್ಸಾಹಸವಾಗಿದೆ. ಉಳಿದಂತೆ ೭೩ ಕುಟುಂಬವು ಸ್ವಚ್ಛತಾ ಕಾರ್ಯದ ಉದ್ಯೋಗದಲ್ಲಿ ತೊಡಗಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿರುವವರಾಗಿದ್ದಾರೆ.


ಹಂಗಾಮಿ ನೌಕರರು: ನಿರುದ್ಯೋಗ ಪಡೆಯ ಮತ್ತೊಂದು ಕೆಲಸವೇ ಹಂಗಾಮಿ ಕೆಲಸ ಮಾಡುವುದು. ಶಾಲೆಯನ್ನು ಅರ್ಧಕ್ಕೆ ಬಿಟ್ಟ ಹಾಗೂ ಪ್ರೌಢಶಾಲೆಯ ಹಂತದ ವರೆಗೆ ಕಲಿತ ಯುವಕ / ಯುವತಿಯರು ವರ್ಷದಲ್ಲಿ ಹಂಗಾಮಿಯಾಗಿ ದೊರೆಯುವ ಕೆಲಸಗಳಾದ ರಸ್ತೆ ನಿರ್ಮಾಣ, ಮಹಾನಗರ ಪಾಲಿಕೆಯ ವಿಶೇಷ ಸ್ವಚ್ಛತಾ ಕಾರ್ಯ ಮತ್ತು ದೇವಸ್ಥಾನ ಪರಿಸರದಲ್ಲಿನ ಸ್ವಚ್ಛತಾಕಾರ್ಯ ಗ್ರಾಮ ಪಂಚಾಯ್ತಿಯ ಕಾರ್ಯಗಳು, ಮನೆಕೆಲಸ, ಮನೆಯ ನಿರ್ಮಾಣದ ಕೆಲಸ, ಅಕ್ಕಪಕ್ಕದ ಕೃಷಿ ಕಟಾವು ಕಾಲದಲ್ಲಿ ಕುರುಚಲು ಗಿಡ ಕಡಿಯುವುದು ಹಾಗೂ ಇನ್ನಿತರ ಸಂದರ್ಭಗಳಲ್ಲಿ ದೊರಕಬಹುದಾದ ಕೆಲಸ ಕಾರ್ಯಗಳಿಂದ ೬೪ ಕುಟುಂಬಗಳು ಪಡೆವ ಅಲ್ಪ ಆದಾಯದಿಂದ ಜೀವಿಸುತ್ತಿದ್ದಾರೆ. ಈ ಎಲ್ಲಾ ಹಂಗಾಮಿ ಕೆಲಸವು ಯಾವುದೇ ಸಮಯವೆನ್ನದೆ ಹಾಗೂ ಕೂಲಿಯ ದರ ನಿಗದಿ ಪಡಿಸಿಲ್ಲ. ಅನೇಕ ಕುಟುಂಬಗಳು ಹಂಗಾಮಿ ವೃತ್ತಿಗಳಲ್ಲಿ ಇತ್ತೀಚೆಗೆ ಜನರು ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಂಡಿರುವುದು ಕಾಣಬರುತ್ತದೆ. ಈ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಾ, ಬರುವ ಗಳಿಕೆಯಲ್ಲಿ ಜೀವನ ನಡೆಸುತ್ತಿರುವುದು ಕೊರಗರಲ್ಲಿ ಒಂದು ವಿಶೇಷತೆಯಾಗಿ ಕಂಡುಬರುತ್ತದೆ.

ಉದ್ಯೋಗಗಳ ಕಾಲಾನುಕ್ರಮದ ಅನುಪಾತ

ಸಮುದಾಯದ ಜನರು ದಿನ ನಿತ್ಯದ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವ ಉದ್ಯೋಗಳ ಕಾಲಾವಧಿಯನ್ನು ಪರಿಗಣಿಸಿ, ಉದ್ಯೋಗಗಳ ಕಾಲಾನುಕ್ರಮದ ತಿಂಗಳುಗಳ ಮಾದರಿಯನ್ನು ಗುರುತಿಸಲಾಗಿದೆ. ಪೂರ್ವದ ಉದ್ಯೋಗದ ಕ್ರಮ ಹಾಗೂ ಬದಲಾದ ಜೀವನ ಕ್ರಮದಂತೆ ಪ್ರಸ್ತುತ ಗುರ್ತಿಸಿಕೊಂಡ ಉದ್ಯೋಗಗಳ ಪ್ರಮುಖ ಪಾತ್ರ ಸಂದರ್ಶನದಲ್ಲಿ ತಿಳಿಯಲಾಗಿದೆ. ಇವರುಗಳ ಉದ್ಯೋಗಗಳಲ್ಲಿನ ಪ್ರಮುಖ ಅಂಶವೆಂದರೆ, ಸ್ಥಾನೀಕರಣಗೊಂಡ ಸ್ಥಳ ಮತ್ತು ಆ ಸ್ಥಳದ ಮೇಲೆ ಅವಲಂಬನೆ ಮುಖ್ಯವಾಗಿದೆ. ಕ್ಷೇತ್ರ ಕಾರ್ಯದ ಪ್ರಮುಖ ೭ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ನೆಲೆನಿಂತ ಸ್ಥಳಗಳಲ್ಲಿನ ದಿನಕೂಲಿ, ಕೃಷಿಕಾರ್ಮಿಕ, ವ್ಯಾಪಾರ, ವ್ಯವಸಾಯ, ಸರ್ಕಾರಿ ನೌಕರಿ ಆಟೋ ಚಾಲಕ, ಮತ್ತು ಹಂಗಾಮಿ ವೃತ್ತಿಗಳು

ಇಲ್ಲಿ ಪ್ರಮುಖವಾಗಿವೆ. ನಗರ ಪ್ರದೇಶದ ಪ್ರಮುಖ ಸ್ಥಳಗಳಲ್ಲಿ ನೆಲೆಗೊಂಡಿರುವ ಜನರು ದಿನಕೂಲಿ, ಹಂಗಾಮಿ ಜೊತೆಗೆ ಸರ್ಕಾರಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕಾಲಾನುಕ್ರಮದ ಆಧಾರದ ಮೇಲೆ ಉದ್ಯೋಗಗಳನ್ನು ಗುರುತಿಸ ಹೊರಟಾಗ ಸರ್ಕಾರಿ ನೌಕರರು ವಿರಾಮದ ವೇಳೆಯಲ್ಲಿ ಹಂಗಾಮಿ ನೌಕರರಾಗಿಯೂ ಸಹ ದುಡಿಯುವರಾಗಿ ಕಾಣಸಿಗುತ್ತಾರೆ.

ಕೋಷ್ಟಕ ೩.೧೯ : ವಾರ್ಷಿಕ ಆವೃತ್ತದಲ್ಲಿನ ಅವರ ವೃತ್ತಿ ಜೀವನ ಕ್ರಮ



ಸೂಚಿಗಳು

★ ನಕ್ಷತ್ರದ ತಿಂಗಳುಗಳು ವರ್ಷದ ಯಾವುದೇ ತಿಂಗಳೆನ್ನದೆ ದೊರೆಯಬಹುದಾಗಿದೆ.

▒ ಸರ್ಕಾರಿ ನೌಕರರು ಪ್ರತಿ ತಿಂಗಳು ಕಡ್ಡಾಯವಾದ ಸೇವೆ.

△ ಯಾವುದೇ ತಿಂಗಳು ಗಣನೆ ಇಲ್ಲದೇ ನಡೆಸುವ ಉದ್ಯೋಗವಾಗಿದೆ.

◀▶ ದಿನ ಅಥವಾ ತಿಂಗಳ ಗಣನೆ ಇಲ್ಲದೆ ದುಡಿಯುವರು

ವರ್ಷದ ೧೨ ತಿಂಗಳುಗಳಲ್ಲಿ ಪ್ರತಿ ತಿಂಗಳು ಆ ಪರಿಸರದ ಕ್ರಮಾನುಸಾರ ಪ್ರಚಲಿತದಲ್ಲಿ ದೊರೆಯುವ ಉದ್ಯೋಗಗಳಲ್ಲಿ ತೊಡಗಿಸಿಕೊಂಡವರಾಗಿದ್ದಾರೆ. ಗ್ರಾಮೀಣ ಭಾಗದ ಅಥವಾ ಗ್ರಾಮಾಂತರ ಪ್ರದೇಶದಲ್ಲಿರುವ ಜನರು ಮತ್ತು ಭೂಮಿ ದೊರೆಯದ ಬಹುತೇಕ ಕುಟುಂಬಗಳು ಯಾವುದೇ ತಿಂಗಳಿನ ಪರಿಗಣನೆ ಇಲ್ಲದೇ ಜೀವನಾಧರಕ್ಕೆ ಆಧಾರವೆಂಬಂತೆ ದುಡಿಯುವರಾಗಿದ್ದಾರೆ.

ಪ್ರತಿವರ್ಷದ ಪ್ರತಿತಿಂಗಳು ಒಂದಲ್ಲ ಒಂದು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದು ಜನರಿಗೆ ಅನಿವಾರ್ಯವಾಗಿದೆ. ಸರ್ಕಾರಿ ನೌಕರರು ಮತ್ತು ಆಟೋ ಚಾಲನೆಗೆ ನಿರ್ಧಿಷ್ಟವಾದ ತಿಂಗಳಿಲ್ಲ. ಹೀಗಾಗಿ ಪ್ರತಿ ವರ್ಷದ ಎಲ್ಲಾ ದಿನ ಮತ್ತು ತಿಂಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೀವನಾಧಾರ ಆರ್ಥಿಕ ಚಟುವಟಿಕೆಗೆ ಯಾವುದೇ ಉದ್ಯೋಗಗಳೆನ್ನದೇ ಪ್ರತಿ ಕುಟುಂಬವು ವರ್ಷದ ಪೂರ್ತಿತೊಡಗಿಸಿಕೊಂಡಿರುವ ಉದ್ಯೋಗಗಳು ವಿವಿಧ ತಿಂಗಳಲ್ಲಿನ ಪಾತ್ರವನ್ನು ಇಲ್ಲಿ ಕಾಣಬಹುದಾಗಿದೆ. ಆರ್ಥಿಕ ಚಟುವಟಿಕೆಗೆ ಹಣರೂಪಿ ಆದಾಯ ಅಥವಾ ಗಳಿಕೆ ಮುಖ್ಯವಾಗಿದೆ. ಮೇಲಿನ ಎಲ್ಲಾ ಚಟುವಟಿಕೆಗಳು ಸಾಮಾಜಿಕ ಉತ್ಪಾದನಾ ಮತ್ತು ಆರ್ಥಿಕತೆಯ ನಡುವಿನ ಸಂಬಂಧದಿಂದಲ್ಲೇ ಕೂಡಿದೆ. ಹೀಗಾಗಿ ಜನರು ಆರ್ಥಿಕತೆಯಲ್ಲಿ ತೊಡಗಿಸಿಕೊಂಡ ಪ್ರತಿಯೊಂದು ಉದ್ಯೋಗ

ಮೂಲಾಂಶವೆಂದೇ ಪರಿಗಣಿಸಲೂಬಹುದಾಗಿದೆ. ಜನರು ವರ್ಷದ ಎಲ್ಲಾ ತಿಂಗಳು ಒಂದಲ್ಲ ಒಂದು ವೃತ್ತಿಯಲ್ಲಿ ನಿರತರಾಗಿದ್ದಾರೆ. ದಿನಕೂಲಿಯಲ್ಲಿ ತೊಡಗಿಸಿಕೊಂಡ ಕುಟುಂಬಗಳು ಯಾವುದೇ ತಿಂಗಳಲ್ಲಿ ನಿರ್ಧರಿತವಾಗಿ ತೊಡಗಿಸಿ ಕೊಂಡ ತಿಂಗಳಿಲ್ಲ. ಹೀಗಾಗಿ ವರ್ಷಪೂರ್ತಿ ದೊರೆಯುವ ಕೂಲಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕೃಷಿಕಾರ್ಮಿಕರು ಮೇ ತಿಂಗಳಿನಿಂದ ಆಗಸ್ಟ್ ತಿಂಗಳ ವರೆಗೆ ಗ್ರಾಮಾಂತರ ಪ್ರದೇಶದಲ್ಲಿ ಕೃಷಿ ಭೂಮಿ ಇರುವ ಶ್ರೀಮಂತ ಭೂ ಮಾಲಿಕರಲ್ಲಿ ಕಾರ್ಮಿಕರಾಗಿ ದುಡಿಯುವರಾಗಿದ್ದಾರೆ. ವರ್ಷದ ಕೆಲವೇ ನಿರ್ಧಿಷ್ಟ ತಿಂಗಳಲ್ಲಿ ಮಾತ್ರ ಕೆಲಸ ದೊರಕುವುದರಿಂದ ಉಳಿದಂತೆ, ಇತರರಲ್ಲಿ ದೊರೆಕುವ ಕೆಲಸಕ್ಕೆ ಜಾತಕ ಪಕ್ಷಿಯಂತೆ ಕಾಯುವ ಪ್ರವೃತ್ತಿಯವರಾಗಿ ಕಾಣಬರುತ್ತಾರೆ.

ನಗರ ಪ್ರದೇಶದ ಹತ್ತಿರ ಜೀವನ ಸಾಗಿಸುತ್ತಿರುವ ಕೆಲವು ಕುಟುಂಬಗಳು ವ್ಯಾಪಾರದಲ್ಲಿ ತೊಡಗಿಸಿಕೊಂಡ ಕುಟುಂಬಗಳಾಗಿವೆ. ವರ್ಷಪೂರ್ತಿ ತನ್ನ ತಳ್ಳುವ ಗಾಡಿಯಲ್ಲಿ ಮೂರುಕಾಸಿನ ವ್ಯಾಪಾರ ಮಾಡುತ್ತಿರುವುದು ಕಂಡು ಬರುತ್ತದೆ. ವ್ಯವಸಾಯದಲ್ಲಿ ತೊಡಗಿಸಿಕೊಂಡಿರುವವರು ಮಾರ್ಚ್, ಏಪ್ರಿಲ್, ಮೇ ತಿಂಗಳು ಬಿಟ್ಟು ಉಳಿದಂತೆ ಕೃಷಿಯ ಉತ್ಪಾದನಾ ಕಾರ್ಯಕ್ರಮದ ವಿವಿಧ ಕೆಲಸಗಳಲ್ಲಿ ತೊಡಗಿ ಕೊಂಡಿದ್ದಾರೆ. ಸರ್ಕಾರಿ ನೌಕರರು ನೈರ್ಮಲೀಕರಣದ ಕೆಲಸ ವರ್ಷಪೂರ್ತಿ ಮಾಡುತ್ತಲೇ ಬರುತ್ತಿದ್ದಾರೆ. ಆಟೋ ಚಾಲಕ ದಿನಪೂರ್ತಿ ದುಡಿಯುವರಾಗಿದ್ದಾರೆ. ಉಳಿದಂತೆ ಹಂಗಾಮಿ ನೌಕರರು ದೊರಕುವ ಕೆಲಸದ ಸಂದರ್ಭನುಸಾರ ಕೆಲಸದಲ್ಲಿ ತೊಡಗಿಸಿಕೊಳ್ಳುವರಾಗಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಅತಿ ಕಡಿಮೆ ಕುಟುಂಬಗಳು ವಾಸವಾಗಿವೆ. ಗ್ರಾಮ ಪರಿಸರದ ಕೊರಗರ ಸ್ಥಿತಿ ಚಿಂತಾಜನಕವಾಗಿದೆ. ಬಡತನ, ನಿರುತ್ಸಾಹ, ನಿರುದ್ಯೋಗ ಹೆಚ್ಚಾಗಿ ಕಂಡುಬರುತ್ತದೆ. ನಗರ ಪ್ರದೇಶದಲ್ಲಿ ನೆಲೆಸಿರುವ ಕುಟುಂಬದ ಸದಸ್ಯರು ವರ್ಷಪೂರ್ತಿ ಒಂದೇ ಕುಟುಂಬದ ಸದಸ್ಯರು ಒಂದೇ ಸಮಯದಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿರುವುದು ಕಂಡು ಬರುತ್ತದೆ. ಇವರುಗಳ ಉದ್ಯೋಗಗಳಲ್ಲಿ ವರ್ಷದ ಪ್ರತಿತಿಂಗಳು ಸಣ್ಣದೊಂದು ವೃತ್ತಿಯಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯವಾಗಿದೆ. ಆದ್ದರಿಂದಲೇ ಕೃಷಿಕಾರ್ಮಿಕ ಮತ್ತು ವ್ಯವಸಾಯದ ಉದ್ಯೋಗಗಳಲ್ಲಿ ಮಾತ್ರವೇ ಒಂದು ಕ್ರಮಬದ್ಧತೆ ಕಾಣಬಹುದು. ಉಳಿದಂತೆ ಬಹುತೇಕ ಎಲ್ಲಾ ವೃತ್ತಿಗಳು ವರ್ಷಪೂರ್ತಿ ಒಂದು ಹಂತದಲ್ಲಿ ಸಾಗುತ್ತಿರುವ ನಿದರ್ಶನದ ಸಾಮ್ಯತೆಯನ್ನು ಉಳಿದಂತಹ ವೃತ್ತಿಗಳಲ್ಲಿಯೂ ಕಾಣಬಹುದಾಗಿದೆ. ಕೃಷಿ ಭೂಮಿಯು ಸಾಕಷ್ಟು ಕುಟುಂಬಗಳಿಗೆ ದೊರೆಯದ ಕಾರಣ, ಬಹಳ ಕಡಿಮೆ ಕುಟುಂಬಗಳು ಕೃಷಿಯನ್ನು ಅವಲಂಬಿಸಿವೆ. ವ್ಯವಸಾಯವೂ ಸಹ ಸಾಕಷ್ಟು ಸಮಸ್ಯೆಗಳಿಂದಲ್ಲೇ ಕೂಡಿರುವುದರಿಂದ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿಸಿ ಕೊಳ್ಳುವಂತೆ ಮಾಡಿದೆ. ಇವರುಗಳಿಗೆ ಸಾಕಷ್ಟು ಸೌಲಭ್ಯಗಳು ಒದಗಿಸಬೇಕಾದ ತುರ್ತುಕಾರ್ಯವಿದೆ. ಉತ್ತಮ ಸಣ್ಣ ಕೈಗಾರಿಕಾ ತರಬೇತಿ, ವೃತ್ತಿ ತರಬೇತಿ, ಅಗತ್ಯವಾಗಿದೆ. ಸರ್ಕಾರಿ ನೌಕರರಾಗಿ ದುಡಿಯುತ್ತಿರುವ ಬಹುತೇಕ ಕುಟುಂಬದ ಸದಸ್ಯರ

ಆರೋಗ್ಯ ದೃಷ್ಟಿಯಿಂದಲೂ ಎಚ್ಚರಿಕೆ ವಹಿಸಬೇಕಿದೆ. ಉಳಿದಂತೆ ವಿದ್ಯಾವಂತ ಯುವ ಜನತೆಯ ಸಮೂಹಕ್ಕೆ ಹೆಚ್ಚಿನ ಸ್ಥಾನಮಾನ ದೊರಕಿಸಿ ಕೊಡಬೇಕಾಗಿದೆ.

ಕುಟುಂಬದ ಆದಾಯದ ವರ್ಗೀಕರಣ

ಕೊರಗರ ಆರ್ಥಿಕತೆಯು ಸಹ ಅವರುಗಳ ಉದ್ಯೋಗಗಳ ಮೇಲೆ ಆಧಾರಿತವಾಗಿರುವುದು. ಉದ್ಯೋಗಗಳಿಂದ ದೊರಕುವ ಹಣರೂಪಿ ಆದಾಯವು ಅವರುಗಳ ಕೂಲಿಯ ಧರವನ್ನು ಅವಲಂಬಿಸಿದೆ. ಇವರುಗಳ ಕೂಲಿಯ ಧರವು ಸಹ ಅತ್ಯಂತ ಕಡಿಮೆ. ಕ್ಷೇತ್ರಕಾರ್ಯದಲ್ಲಿ ಪ್ರತಿಯೊಂದು ಕುಟುಂಬದ ಆದಾಯವನ್ನು ಕಲೆಹಾಕುವುದು ಮಹಾಸಾಹಸವೇ ಸರಿ. ಕುಟುಂಬದ ವೃತ್ತಿಗಳ ಆಧಾರದ ಮೇಲೆ ಹಾಗೂ ಅಲ್ಲಿನ ಗಳಿಕೆಯ ಮೇಲೆ ಆದಾಯವನ್ನು ವರ್ಗೀಕರಿಸಲಾಗಿದೆ. ಇಲ್ಲಿನ ಎಲ್ಲಾ ಕುಟುಂಬಗಳಲ್ಲಿನ ಆದಾಯದ ಹಂಚಿಕೆಯು ಸಹ ಗಣನೀಯವಾಗಿ ಕಡಿಮೆ ಇರುವುದು ತಿಳಿದು ಬರುತ್ತದೆ. ಒಟ್ಟಾರೆ ಕಾಲೋನಿಗಳಲ್ಲಿ, ಒಂದೆರಡು ಕಾಲೋನಿಗಳನ್ನು ಹೊರತು ಪಡಿಸಿದರೆ, ಉಳಿದಂತೆ ಎಲ್ಲಾ ಕಾಲೋನಿಗಳಲ್ಲಿ ಆದಾಯ ಬಹಳ ಕಡಿಮೆ ಇದೆ. ಈ ಜನರ ಕಲ್ಯಾಣಕ್ಕಾಗಿ ಸರ್ಕಾರ ವಿಶೇಷ ಯೋಜನೆಗಳನ್ನೇ ರೂಪಿಸಿದೆ. ಅದರೂ ಅವುಗಳ ಅನುಷ್ಠಾನ ಹಾಗೂ ಫಲಾನುಭವಿಗಳನ್ನು ಗುರುತಿಸಿದಾಗ ತಿಳಿದು ಬರುವ ಸಂಗತಿಯೇ ಬೇರೆಯಾಗಿದೆ. ಕೋಷ್ಟಕ ೩.೨೦ ರಲ್ಲಿ ತೋರಿಸಿದಂತೆ ಆದಾಯದಲ್ಲಿ ಕಾಲೋನಿಯ ಜನರು ಯಾವ ಹಂತದಲ್ಲಿದ್ದಾರೆ ಎನ್ನುವುದು ತಿಳಿದು ಬರುತ್ತದೆ. ಜನರ ಆತ್ಮೀಯತೆ ಗಳಿಸಿ ಆದಾಯದ ವಿಷಯ ಸಂಗ್ರಹಿಸಿ ಪಥಕ್ಕರಿಸಿದ ಮಾಹಿತಿಯನ್ನೇ ಪಟ್ಟಿಯ ರೂಪದಲ್ಲಿ ಕೊಡಲಾಗಿದೆ.

ಕೋಷ್ಟಕ ೩.೨೦ : ಕ್ರೋಢಿಕೃತ ಆದಾಯದ ಪಟ್ಟಿ.

ಕ್ರ. ಸಂಖ್ಯೆ	ಕಾಲೋನಿ / ತಾಲ್ಲೂಕು ವ್ಯಾಪ್ತಿ	ಸಮೀಕ್ಷಾ ಕುಟುಂಬಗಳ ಸಂಖ್ಯೆ	ಆದಾಯದ ವರ್ಗೀಕರಣ (ರೂಪಾಯಿಗಳಲ್ಲಿ)			
			ರೂ. ೧ ರಿಂದ ೨೦೦೦	೨೦೦೦ ರಿಂದ ೪೦೦೦	೪೦೦೦ ರಿಂದ ೬೦೦೦	೬೦೦೦ ಕ್ಕಿಂತ ಹೆಚ್ಚಿನದು
೧	ಕುಂದಾಪುರ	೬೬	೯	೮	೩೧	೧೮
೨	ಉಡುಪಿ	೩೯	೫	೧೭	೧೧	೬
೩	ಕಾರ್ಕಳ	೫೪	೧೧	೨೦	೨೧	೨
೪	ಮಂಗಳೂರು	೮೬	–	೨೬	೪೭	೧೩
೫	ಬೆಳ್ತಂಗಡಿ	೨೭	೧೬	೨	೮	೧
೬	ಬಟ್ವಾಳ	೩೦	೦೬	೧೩	೨	–
೭	ಸೂಳ್ಯ	೧೫	೩	೯	೩	–
೮	ಪುತ್ತೂರು	೨೩	೫	೧೮	೫	೪
	ಒಟ್ಟು	೩೪೦	೫೫ (೧೬.೧೭%)	೧೧೩ (೩೩.೨೩%)	೧೨೮ (೩೭.೬೪%)	೪೪ (೧೨.೯೪

ಒಟ್ಟಾರೆ ೩೪೦ ಕುಟುಂಬಗಳಲ್ಲಿನ ಆದಾಯದ ಪ್ರಮಾಣದಲ್ಲಿ ಮಂಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ ಶೇ. ೨೦೦೦ ರೂ. ಗಿಂತ ಕಡಿಮೆ ಆದಾಯ ಹೊಂದಿರುವ ಕುಟುಂಬವೇ ಕಂಡುಬರುವುದಿಲ್ಲ. ಇದಕ್ಕೆ ನಗರ ಜೀವನವೇ ಕಾರಣವೆನ್ನಬಹುದು. ಪಟ್ಟಿಯಲ್ಲಿರುವಂತೆ ೧ ರೂ. ನಿಂದ ೨೦೦೦ ರೂ.ವರೆಗಿನ ಆದಾಯದ ಪ್ರಮಾಣ ೫೫ (೧೬.೧೭) ಕುಟುಂಬಗಳು ಗ್ರಾಮೀಣಭಾಗದಲ್ಲಿ ಕೇಂದ್ರೀಕೃತ ಗೊಂಡವುಗಳಾಗಿವೆ. ಅತಿ ಹೆಚ್ಚಿನ ಗ್ರಾಮಭಾಗದ ಕುಟುಂಬಗಳು ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿವೆ. ಇವರುಗಳ ಉದ್ಯೋಗಗಳು ಸಹ ಅನಿಶ್ಚಿತತೆಯಿಂದಲ್ಲೇ ಕೂಡಿರುವಂತವು. ಈ ಎಲ್ಲಾ ಕುಟುಂಬಗಳು ಬಡತನ ರೇಖೆಯ ಕೆಳಗಿರುವಾಗಿವೆ. ೨೦೦೧ ರಿಂದ ೪೦೦೦ ರೂ.ವರೆಗಿನ ೧೧೩ ಕುಟುಂಬಗಳು ಶೇಕಡ ೩೩.೨೩% ನಗರ ಪ್ರದೇಶ ಹಾಗೂ ಗ್ರಾಮಗಳ ನಡುವಿನ ಪರಿಸರ ಸಂಬಂಧ ಹೊಂದಿರುವಾಗಿವೆ. ಅತಿಹೆಚ್ಚಿನ ೪೦೦೧ ರಿಂದ ೬೦೦೦ ರೂ. ವರೆಗಿನ ೧೨೮ ಕುಟುಂಬಗಳು ಶೇ. ೩೭.೬೪ ಇರುವವರು ಹೆಚ್ಚಾಗಿ ಸರ್ಕಾರಿ ನೌಕರರು, ವಿವಿಧ ಇಲಾಖೆಗಳಲ್ಲಿ ಕೆಲಸಮಾಡುವ ತಿಂಗಳ ವೇತನ ಪಡೆಯುವ ಕುಟುಂಬಗಳಾಗಿವೆ. ಇನ್ನು ೬೦೦೦ ರೂ ಕ್ಕಿಂತಲೂ ಹೆಚ್ಚಿನ ಕುಟುಂಬಗಳು ೪೪ ಶೇ. ೧೨.೯೪ ರವರು ಸರ್ಕಾರಿ ಸಂಬಳದವರೇ ಆಗಿದ್ದು, ಜೊತೆಗೆ ಸ್ವಯಂ ಉದ್ಯೋಗದಲ್ಲಿ ತೊಡಗಿರುವ ಕುಟುಂಬಗಳಾಗಿವೆ.

ಅತಿ ಮುಖ್ಯವಾಗಿ ಗಮನಿಸಬಹುದಾದ ಆದಾಯ ವಿಭಾಗವು ೪೦೦೧ ರಿಂದ ೬೦೦೦ ರೂ. ಹಾಗೂ ೬೦೦೦ ಕ್ಕಿಂತ ಅಧಿಕವಾದಂತಹ ಕುಟುಂಬಗಳು ನಗರ ಜೀವನದಲ್ಲಿ ಕೇಂದ್ರಿತವಾದವುಗಳಾಗಿವೆ. ನಗರ ಜೀವನದ ಆದಾಯದ ಅನುಪಾತಕ್ಕೆ ಹೋಲಿಸಿದಲ್ಲಿ ಈ ಕುಟುಂಬಗಳ ಆದಾಯವು ಕಡಿಮೆ ಎನ್ನಬಹುದು. ಈ ಎರಡು ಹಂತಗಳಲ್ಲಿನ ಕುಟುಂಬದ ಸದಸ್ಯರು ಯಾವುದೇ ಭೂ ಹಿಡುವಳಿ ಇಲ್ಲದಿದ್ದರೂ, ಇವರು ಸರ್ಕಾರಿ ನೌಕರರಾಗಿ ಗುರುತಿಸಿಕೊಂಡಿದ್ದಾರೆ. ಒಟ್ಟಾರೆ ಭೂ ಹಿಡುವಳಿ ಮತ್ತು ವಾರ್ಷಿಕ ಆದಾಯದ ಗುಂಪುಗಳನ್ನು ಪರಿಶೀಲಿಸಿದಾಗ ಕೃಷಿ ಮತ್ತು ಕೂಲಿ ಕೆಲಸ ಈ ಜನರ ಆರ್ಥಿಕಸ್ಥಿತಿಯನ್ನು ಅಷ್ಟಾಗಿ ಸುಧಾರಿಸಿಲ್ಲವೆನ್ನಬಹುದು. ಕೃಷಿಯಲ್ಲಿ ತೊಡಗಿಸಿಕೊಂಡ ಕುಟುಂಬಗಳು ಆದಾಯ ಗಳಿಕೆಯಲ್ಲಿ ಹಿಂದುಳಿದಂತೆ ಕಂಡುಬರುತ್ತವೆ. ನಗರ ಜೀವನದ ಪರಿಸರದಲ್ಲಿರುವರು ಇತರೆ ಮೂಲಗಳಿಂದ ಹಣರೂಪಿ ಆದಾಯ ಗಳಿಸುವ ಏರುಮುಖ ಏರುಪೇರುದಲ್ಲಿದ್ದರೂ ಗಳಿಸುತ್ತಿರುವ ಆದಾಯದಿಂದ ನಗರ ಜೀವನದಲ್ಲಿ ಬಡತನ ರೇಖೆಯ ಕೆಳಗಿರುವವರಾಗಿದ್ದಾರೆ. ಇವರುಗಳ ಆದಾಯ ನೆಲೆನಿಂತ ಪರಿಸರದ ಹಿನ್ನೆಲೆಯಲ್ಲಿ ನೋಡಿದಾಗ ಅತಿ ಕಡಿಮೆ ಎನ್ನಬಹುದಾಗಿದೆ.

ಕುಟುಂಬದ ಆದಾಯದ ಅನುಭೋಗ

ಆರ್ಥಿಕ–ಸಾಮಾಜಿಕ ವ್ಯವಸ್ಥೆಯ ಅಂಚಿನಲ್ಲಿರುವ ಕೊರಗರು ವೆಚ್ಚದ ನೆಲೆಯಲ್ಲಿ ಆರ್ಥಿಕ ಚಟುವಟಿಕೆಗಳಿಗೆ ನೀಡುತ್ತಿರುವ ಕೊಡುಗೆ ಅಪಾರ. ಇವರುಗಳ ದುಡಿಮೆಯಿಂದ ಹಣ

ಸಂಪಾದನೆಯಾಗುವುದಾದರೂ ಕೇವಲ ಹಣಕ್ಕಾಗಿಯೇ ಜನರು ಕೆಲಸಮಾಡುತ್ತಾರೆ ಎಂದು ಹೇಳುವುದು ತಪ್ಪಾಗುತ್ತದೆ. ಜೀವನದ ಅತ್ಯಾವಶ್ಯಕ ವಸ್ತುಗಳನ್ನು ಯೋಗ್ಯಪ್ರಮಾಣದಲ್ಲಿ ಪಡೆಯಲಾಗದ ಅಥವಾ ಬಡತನದಲ್ಲಿರುವ ಕುಟುಂಬಗಳು ದುಡಿಯುತ್ತಿರುವುದು ಹಣಕ್ಕಾಗಿ ಎಂಬುದೇನೋ ನಿಜ. ಆದರೆ ಹಣದ ಸಂಪಾದನೆಯು ಜೀವನದ ಭದ್ರತೆಯನ್ನು ಉತ್ತಮಪಡಿಸಿಕೊಳ್ಳಲು, ಉತ್ತಮಸ್ಥಾನಮಾನ, ಹೆಚ್ಚಿನ ಪ್ರವೃತ್ತಿ, ಗೃಹಬಳಕೆ, ಮಾನಸಿಕ ತೃಪ್ತಿ, ಒಳ್ಳೆಯ ಪರಿಸರ ನಿರ್ಮಾಣದಂತಹ ಅನುಭೋಗದ ಕ್ಷೇತ್ರಗಳತ್ತ ಇವರುಗಳ ಗಳಿಕೆಯ ಒಂದಂಶ ಮುಖ್ಯವಾಗಿ ಪ್ರೇರಣೆ ಯಾಗುತ್ತಿಲ್ಲ. ಸಮುದಾಯದ ಜನರಲ್ಲಿ ಶಿಕ್ಷಣದ ಪ್ರಸರಣ ಕಡಿಮೆ. ಆದರಿಂದಲ್ಲೇ ಅವರುಗಳು ತನ್ನ ಆದಾಯದ ಬಹುಭಾಗವನ್ನು ಯಾವುದೇ ತೆರನಾದ ಉಳಿತಾಯದಲ್ಲಿ ತೊಡಗಿಸಿಲ್ಲ. “ಪ್ರತಿಯೊಂದು ಕುಟುಂಬವು ಬದುಕಲಿಕ್ಕಾದರೂ ಕನಿಷ್ಠ ಪ್ರಮಾಣದ ಖರೀದಿದಾರನಾಗಿರುವುದನ್ನ ಯಾವ ಅರ್ಥಶಾಸ್ತ್ರಜ್ಞನೂ ಅಲ್ಲಗೆಳೆಯಲಾರ. ಪ್ರತಿ ಕುಟುಂಬದ ಅನುಭೋಗದ ಖರೀದಿ ದಿನನಿತ್ಯದ ಅವಶ್ಯ ವಸ್ತುಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿರುವುದರಿಂದ ಖರ್ಚು ಮಾಡುವುದು ತಪ್ಪಿಸಲು ಸಾಧ್ಯವಿಲ್ಲ. “ಆದರಿಂದಲ್ಲೇ ದುಡಿಮೆಯೂ ಒಂದು ಸಾರ್ವತ್ರಿಕವಾದ ಆರ್ಥಿಕ-ಸಾಮಾಜಿಕ ಪ್ರಕ್ರಿಯೆಯಾಗಿದೆ”.[೧೪] ಪ್ರತಿಕುಟುಂಬದ ಹಣರೂಪಿ ಆದಾಯ ಹಾಗೂ ವೃತ್ತಿಗಳಲ್ಲಿನ ಗಳಿಕೆಗಳ ವ್ಯಾತ್ಯಾಸಗಳು ಒಂದೇ ರೀತಿಯಿಂದ ಕೂಡಿಲ್ಲದಿರುವುದು ಕಾಣಬಹುದು. ಒಂದು ರೀತಿಯಲ್ಲಿ ಸರ್ಕಾರಿ ವೇತನ ಪಡೆಯುವವರಲ್ಲಿ ಮಾತ್ರ ಆದಾಯ ಅನುಭೋಗದ ಪ್ರಮಾಣವನ್ನು ಗುರುತಿಸಬಹುದು. ಹಣರೂಪಿ ಆದಾಯ ಅನುಭೋಗದ ಸಾರ್ವತ್ರಿಕ ನಿಲುವು ಮಾತ್ರ ಇಲ್ಲಿ ನಿರೂಪಿಸಬಹುದಾಗಿದೆ. ೪ ರಿಂದ ೫ ಜನರಿರುವ ಒಂದು ಕುಟುಂಬವು ಪ್ರತಿ ತಿಂಗಳೂ ಏನಿಲ್ಲವೆಂದರೂ ನಿತ್ಯೋಪಯೋಗಿ ವಸ್ತುಗಳಿಗೆ ಮಾಡುವ ಖರ್ಚಿನ ಮೌಲ್ಯ ಕನಿಷ್ಠ ೩೦೦೦-೪೫೦೦ ರೂ.ಗಳು ಎಂದಾದಲ್ಲಿ ಪ್ರತಿಯೊಂದು ಕುಟುಂಬವು ಗ್ರಾಹಕರಾಗಿರುವುದು ಇಲ್ಲಿ ಕಾಣಬಹುದು. ಇವರುಗಳು ಕೂಲಿಗಾರರಿರಬಹುದು, ಬಡವರಿರಬಹುದು. ಆದರೆ ಜೀವನದ ಪ್ರಕ್ರಿಯೆಯಲ್ಲಿ ಅನುಭೋಗದಾರರಾಗಿರುವುದಂತೂ ಸತ್ಯ. ಇದರಿಂದ ಗಳಿಸುವ ಇವರುಗಳ ಆದಾಯವು ಯಾವುದೇ ನಿರ್ಧಿಷ್ಟ ನಿರ್ಬಂಧಗಳಿಲ್ಲದೆ ನಿರಂತರ ಚಲಿಸುತ್ತಿರುತ್ತದೆ. ಖರ್ಚಿನ ಈ ವಿಧಾನದಲ್ಲಿ ಪ್ರತಿಯೊಂದು ಕುಟುಂಬ ಮತ್ತು ಕಾಲೋನಿಯ ಜನರು ಭಿನ್ನವಾಗಿರುವುದು ಈ ಸಮುದಾಯದಲ್ಲಿ ಕಾಣಬರುತ್ತದೆ.

ಮೂಲನಿವಾಸಿ ಬುಡಕಟ್ಟು ಸಮುದಾಯಗಳಾದ ಜೇನುಕುರುಬ ಮತ್ತು ಕೊರಗರ ಸಾಮಾಜಿಕ ಸ್ಥಿತಿಗತಿ ಬೇರೆಯಾಗಿ ಕಂಡುಬರುತ್ತದೆ. ಸ್ವಾವಲಂಬನೆಯ ಪರಿಕಲ್ಪನೆಯನ್ನು ಸಮಗ್ರವಾಗಿ ಅರಿಯದಿದ್ದರೂ, ಆಯಾ ಸನ್ನಿವೇಶದ ಪರಿವರ್ತನೆಗೆ ಅನುಗುಣವಾಗಿ ಜನರು ಮನೋವೃತ್ತಿಯನ್ನು ಬೆಳೆಸಿಕೊಂಡು ಹೋರಾಟ ನಡೆಸುವರಾಗಿದ್ದಾರೆ. ಅಂಧಶ್ರದ್ಧೆ ಸಂಪ್ರದಾಯಿಕ ಮೌಢ್ಯ ಹಾಗೂ ಸಂಕುಚಿತ ಮನೋವೃತ್ತಿಗಳು ಹಂತ ಹಂತವಾಗಿ

ಬಿಡುಗಡೆಗೊಳ್ಳುತ್ತಿವೆ. ಜನರ ಸಂಪರ್ಕ ಸಾಧ್ಯವಾದಂತೆಲ್ಲಾ, ಅವರುಗಳ ಅಗತ್ಯಗಳಲ್ಲಿಯೂ ಅವಕಾಶದ ಬಾಗಿಲು ತೆರೆಯಲಾಗುತ್ತಿರುವ ನಿದರ್ಶನ ಕಂಡು ಬರುವುದು. ಸಮುದಾಯಗಳಲ್ಲಿ ಶೈಕ್ಷಣಿಕ ಕ್ರಾಂತಿಯನ್ನು ರೂಪಿಸುತ್ತಿರುವ ಯುವಕರು, ಜನರ ಅಭಿವೃದ್ಧಿಗಾಗಿ ಮಹತ್ವದ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದಾರೆ. ಇತರ ಜನ ಸಮುದಾಯಗಳೊಂದಿಗೆ ಸ್ಪರ್ಧಿಸುವ ತುಲನೆಮಾಡುವ ಹಾಗೂ ಗುರುತಿಸಿಕೊಳ್ಳುವಂತಹ ಪ್ರಯತ್ನಗಳಿಗೆ ಬೆಂಬಲ ವ್ಯಕ್ತವಾಗುತ್ತಿದೆ.

ಆರ್ಥಿಕ ಸ್ಥಿತಿಗತಿಯಲ್ಲಿನ ಸ್ಥಾನಮಾನವು ಹಿಂದುಳಿದ ಈ ಸಮುದಾಯಗಳಿಗೆ ವೃತ್ತಿಪೂರಕ ಅಥವಾ ಸಮಸ್ಯೆಗಳಿಗೆ ಸಂಪೂರ್ಣವಾದ ಪರಿಹಾರ ನೀಡಲಾರವು. ಜೇನುಕುರುಬರ ವೃತ್ತಿಗಳು ಕೂಲಿಯಲ್ಲಿ ಭಾಗಶಃವಾಗಿದ್ದರೆ, ಇನ್ನುಳಿದಂತೆ ವ್ಯವಸಾಯ, ವ್ಯವಸಾಯೇತರವಾಗಿರುವ ಗ್ರಾಮಾಂತರ ಮಟ್ಟದಲ್ಲಿ ಬೆಳೆದು ಬರುತ್ತಿರುವ ಪ್ರಯತ್ನಗಳು ಹೆಚ್ಚಿನ ಪ್ರಮಾಣದಲ್ಲಿ ಹಳ್ಳಿಗಾಡುಗಳನ್ನೇ ಆಧರಿಸಿವೆ. ಕೊರಗರ ವೈಜ್ಞಾನಿಕ ಮನೋದೃಷ್ಟಿಕೋನ ನಗರಜೀವನದ ಅಗತ್ಯ ಅರಿಯುವಲ್ಲಿ ಸ್ವಲ್ಪ ಪ್ರಮಾಣದಲ್ಲಿ ಯಶಸ್ವಿಯಾಗಿ ನಗರೀಕರಣ ಜನಸಾಮಾನ್ಯರ ನಡುವೆ ಅಗತ್ಯವಾಗಿ ವ್ಯವರಿಸುತ್ತಿರುವ ಸಾಧ್ಯತೆ ಕಂಡುಬರುತ್ತದೆ. ನಗರ ಮತ್ತು ಗ್ರಾಮ ಮಟ್ಟದಲ್ಲಿ ರೂಪಿಸಲಾಗುತ್ತಿರುವ ಅಭಿವೃದ್ಧಿ ಯೋಜನೆ, ಮಾದರಿಗಳು ಎರಡು ಸಮುದಾಯಗಳಿಗೆ ಅತೃಪ್ತಿ ಹಾಗೂ ಅನಿಶ್ಚಿತತೆಯನ್ನು ಬೆಳೆಸುವುದರ ಜೊತೆಗೆ ಅಪವ್ಯಯ, ನಿರರ್ಥಕತೆಯನ್ನು ದೃಢಗೊಳಿಸಿವೆ. ಮಾನವ ಸಂಪನ್ಮೂಲದ ಜಾಣ್ಮೆಯ ಉಪಯೋಗದಿಂದ ಪರಿಸರಕ್ಕೆ ತಕ್ಕಂತಹ ಅಭಿವೃದ್ಧಿಗೆ ಪ್ರೋತ್ಸಾಹ ನೀಡಬೇಕಿದೆ. ಸಮಸ್ಯೆಗಳ ಸಮ್ಮುಖದಲ್ಲಿ ದೂರದೃಷ್ಟಿಯ ಸಾಧನೆಯೊಂದಿಗೆ ಎರಡು ಸಮುದಾಯಗಳ ಮಾನವ ಸಂಪನ್ಮೂಲವನ್ನ ಗಮನದಲ್ಲಿಟ್ಟುಕೊಂಡು ಉದ್ಯೋಗ ಸೃಷ್ಟಿಮಾಡಬೇಕಿದೆ. ಭೂಮಿ ಹಂಚಿಕೆಯ ಕಾರ್ಯ ಮತ್ತು ಮಾನವ ಸಂಪನ್ಮೂಲದ ಸಹಭಾಗಿತ್ವದಿಂದ ಅಭಿವೃದ್ಧಿ ವ್ಯವಸ್ಥೆಯು ಸಮರ್ಥವಾಗಿ ಸಾಗುವ ನಿಟ್ಟಿನಲ್ಲಿ ಸಂಪತ್ತಿನ ಸೃಷ್ಟಿಯೊಂದಿಗೆ ಸಂಬಂಧಿಸಿದ ಹೊಸ ಉನ್ನತೀಕೃತ ವೃತ್ತಿಗಳೊಂದಿಗೆ ಮಾನವ ಶಕ್ತಿಯ ಅಗತ್ಯಗಳನ್ನು ಬೆಳೆಸಲು ಸಮರ್ಥವಾಗಬೇಕಾದ ಅನಿವಾರ್ಯತೆ ಎರಡು ಸಮುದಾಯಗಳಿಗೆ ಭರವಸೆ ನೀಡಬೇಕಿದೆ.

೩. ಶೈಕ್ಷಣಿಕ ಮತ್ತು ಆರ್ಥಿಕ ಮಾಹಿತಿಯ ವಿಶ್ಲೇಷಣೆ

ಎರಡು ಸಮುದಾಯಗಳ ಆಯ್ದ ಕಾಲೋನಿಗಳಲ್ಲಿರುವ ಪ್ರತಿಯೊಂದು ಕುಟುಂಬಗಳಲ್ಲಿರುವ ಶಿಕ್ಷಣದ ಮಟ್ಟ, ಜನಸಂಖ್ಯೆ, ಭೂ ಹಿಡುವಳಿ ಮತ್ತು ಉದ್ಯೋಗಗಳು ಹಾಗೂ ಆದಾಯದ ವರ್ಗೀಕರಣವನ್ನು ಬೇರೆ ಬೇರೆ ಪಟ್ಟಿಗಳ ಮೂಲಕ ಪ್ರಥಕ್ಕರಿಸಿ ತಾಲ್ಲೂಕುವಾರು ಮಾಹಿತಿಯನ್ನು ನೀಡಲಾಗಿದೆ. ಇವೆಲ್ಲವುಗಳ ನಡುವೆ ಸಮುದಾಯಗಳ ಅಭಿವೃದ್ಧಿ ಗುರುತಿಸುವ ವಿಚಾರವಾಗಿ ಒಟ್ಟಾರೆ ಚರ್ಚೆ ಅಗತ್ಯವಾಗಿದೆ. ವಿವಿಧ ತಾಲ್ಲೂಕು ವ್ಯಾಪ್ತಿಯ ಸಮುದಾಯಗಳ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಈ ಮೂಲಕ

ತಿಳಿಯುಬಹುದು. ಇದು ಒಂದು ದೃಷ್ಟಿಯಿಂದ ತೌಲನಿಕವಾಗಿ ವಿಶ್ಲೇಷಿಸಿದ ಭಾಗ. ಬಹುಮುಖ್ಯವಾಗಿ ೩ ಹಂತದಲ್ಲಿ ಮಾಹಿತಿ ಪಥಕ್ಕರಿಸಿ ೩ ಪಟ್ಟಿಗಳ ಮೂಲಕ ವಿವರಗಳನ್ನು ಕೊಡಲಾಗಿದೆ. ಸಮಗ್ರ ವಿಶ್ಲೇಷಣ ದೃಷ್ಟಿಕೋನದಿಂದ ೩ ಅಂಶಗಳ ಮೂರು ಲಂಬ ರೇಖಾ ಚಿತ್ರಗಳು ಸಂಪೂರ್ಣ ಸಮುದಾಯಗಳ ಚಿತ್ರಣ ನೀಡುತ್ತವೆ. ಈ ಮಾಹಿತಿಯು ಮುಂದಿನ ಅಧ್ಯಾಯವು ೬ ರಲ್ಲಿನ ಸಮಗ್ರ ಅಭಿವೃದ್ಧಿಯ ನೆಲೆಯಲ್ಲಿನ ವಿಶ್ಲೇಷಣೆಗೆ ಸಹಾಯಕವಾಗುತ್ತದೆ. ಒಂದೊಂದು ಪಟ್ಟಿಯಲ್ಲಿ ಕೊಡಲಾದ ಮಾಹಿತಿಯನ್ನು ಬೇರೆ ಬೇರೆಯಾಗಿ ತಾಲ್ಲೂಕುಗಳ ಅನುಗುಣವಾಗಿ ಅವುಗಳ ಪೂರ್ತಿ ಪ್ರಥಕ್ಕರಣವನ್ನು ಈ ಕೆಳಗೆ ಕೊಡಲಾಗಿದೆ.

ಶೈಕ್ಷಣಿಕ ಪ್ರಗತಿ


ಲಂಬ ರೇಖಾಚಿತ್ರ ೩.೧ ರಲ್ಲಿ ತೋರಿಸಲಾದಂತೆ ಎರಡು ಮೂಲನಿವಾಸಿ ಬುಡಕಟ್ಟುಗಳ ಶೈಕ್ಷಣಿಕ ಪ್ರಗತಿ ತಾಲ್ಲೂಕುವಾರು ಸಮುದಾಯಗಳಿಗೆ ಅನುಗುಣವಾಗಿ ಕೊಡಲಾಗಿದೆ. ಜೇನುಕುರುಬರಲ್ಲಿ ಶಿಕ್ಷಣಮಟ್ಟ ಶೇ. ೪೭.೯೮% ಪಿರಿಯಾಪಟ್ಟಣದಲ್ಲಿ ಕಂಡುಬರುತ್ತದೆ. ಇನ್ನುಳಿದಂತೆ ೬ ತಾಲ್ಲೂಕುಗಳಲ್ಲಿ ಶೇಕಡವಾರು ಇಳಿಕೆ ಕಂಡುಬರುತ್ತದೆ. ಮಾಧ್ಯಮಿಕ, ಪ್ರೌಢಶಾಲೆ ಹಂತಗಳ ಬೆಳವಣಿಗೆಯೂ ಬಹಳಷ್ಟು ಕಡಿಮೆ. ಬಹುತೇಕ ಜೇನುಕುರುಬರ ಕಾಲೋನಿಗಳು ಸುರಕ್ಷಿತ ಅರಣ್ಯವಲಯದ ಪಕ್ಕ ಅಥವಾ ಸಮೀಪವೇ ಇವೆ. ನಗರ ಪ್ರದೇಶಗಳಿಗೆ ಜೇನುಕುರುಬರ ಕಾಲೋನಿಗಳು ದೂರವಾಗಿದ್ದು ಸಮುದಾಯದ ಜನರ ಸಂಪರ್ಕ ಕಡಿಮೆ. ಜೇನುಕುರುಬರು ಸರ್ವ ಚೇತನವಾದ ಪ್ರಕೃತಿ ಆರಾಧಕರು. ಆದರಿಂದ ಕಾಡೇ ಪ್ರಧಾನವಾಗಿರುವುದರಿಂದ ಶಾಲೆಗೆ ಹೋಗುವ ಮಕ್ಕಳು ಸುತ್ತಮುತ್ತಲಿನ ಮಾಧ್ಯಮಿಕ ಶಾಲೆಯಲ್ಲಿ ಓದಿ ತದನಂತರ ಓದಲು ಸಾಧ್ಯವಾಗದೇ, ತಮ್ಮ ಪರಿಸರದ ನಿಜ ಪರಿಸ್ಥಿತಿಗೆ ಅಂಟಿಕೊಳ್ಳುವುದು ಸ್ವಾಭಾವಿಕ. ಕಾಲೋನಿಗಳು ಸಹ ಪ್ರಸ್ತುತದವರೆಗೂ ಸ್ಥಳಾಂತರಕ್ಕೆ ಅಂಟಿಕೊಂಡಿವೆ. ಈ ಅಂಶಗಳ ಕಾರಣವೇ ಶಿಕ್ಷಣದ ಪ್ರಗತಿ ಕುಂಟಿತವಾಗಿರಲು ಕಾರಣವಾಗಿದೆ ಎನ್ನಬಹುದು.


ಹುಣಸೂರು ತಾಲ್ಲೂಕು ವ್ಯಾಪ್ತಿಯಲ್ಲಿನ ಕಾಲೋನಿಗಳಲ್ಲಿ ಶೇ. ೪೦.೩೦% ಶೈಕ್ಷಣಿಕ ಪ್ರಗತಿ ಕಾಣಬಹುದು. ಸಮರ್ಪಕ ಉದ್ಯೋಗಗಳಿಲ್ಲದ, ಅರಣ್ಯಪ್ರದೇಶದ, ಒಣಭೂಮಿಯಾಗಿರುವ ಕಾರಣ ಉದ್ಯೋಗದ ನಿಮಿತ್ತ ವಲಸೆ ಹೋಗುವ ಪ್ರವೃತ್ತಿ ಕೂಡ ಇಲ್ಲಿನ ಜನರಿಗಿದೆ. ಗ್ರಾಮ ಪ್ರದೇಶವಾದ ಕಾಲೋನಿಗಳಿಗೆ ಸಮರ್ಪಕವಾದ ಸಾರಿಗೆ ಸಂಪರ್ಕದ ವ್ಯವಸ್ಥೆ ಕಾಣಬರುವುದಿಲ್ಲ. ಹೆಚ್.ಡಿ.ಕೋಟೆ ತಾಲ್ಲೂಕು ವ್ಯಾಪ್ತಿಯಲ್ಲಿನ ಕಾಲೋನಿಗಳಲ್ಲಿ ಶೈಕ್ಷಣಿಕ ಮಟ್ಟ ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ ಎನ್ನಲಡ್ಡಿಯಿಲ್ಲ. ಪಿರಿಯಾಪಟ್ಟಣದ ವ್ಯಾಪ್ತಿಯಲ್ಲಿ ಸ್ವಲ್ಪ ಮಟ್ಟಿನ ಪ್ರಗತಿ ಕಂಡುಬರುತ್ತದೆ. ಇತ್ತೀಚಿಗೆ ನಿರ್ಮಿಸಲಾದ ಆಶ್ರಮಶಾಲೆ ಶೈಕ್ಷಣಿಕ ಪ್ರಗತಿಪೂರಕವಾಗಿದೆ. ಇನ್ನುಳಿದಂತೆ ಆಶ್ರಮಶಾಲೆಗಳು

ವ್ಯವಸ್ಥಿತವಾಗಿರುವುದಿಲ್ಲ. ಶಿಕ್ಷಣ ನೀಡುತ್ತಿರುವ ಇಲಾಖೆಯ ತಾತ್ಸರ, ಶಿಕ್ಷಕರ ವರ್ಗಾವಣೆ, ಇಲ್ಲಿನ ಆಶ್ರಮಶಾಲೆಗಳಲ್ಲಿ ಬಹುಮುಖ್ಯ ಸಮಸ್ಯೆಯಾಗಿ ಉಳಿದಿರುವುದು ಕಂಡುಬರುತ್ತದೆ. ಎಲ್ಲಾ ಆಶ್ರಮಶಾಲೆಗಳಲ್ಲಿ ಇತರ ಬುಡಕಟ್ಟು ಸಮುದಾಯಗಳ ಮಕ್ಕಳು ಕಲಿಕೆಯಲ್ಲಿ ತೊಡಗಿರುವುದು ಜೇನುಕುರುಬರ ವಿದ್ಯಾರ್ಥಿಗಳಿಗೆ ವಿಶೇಷ ಆಸಕ್ತಿಯೇನು ವಹಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ಹೀಗಾಗಿ ತೀರಾ ಹಿಂದುಳಿದ ಸಮುದಾಯಗಳ ಮಕ್ಕಳಿಗೆ ವಿಶೇಷವೆಂಬಂತೆ ಸರ್ಕಾರ ಯೋಜನೆ, ಹಣಕಾಸು, ಅನುದಾನ ನೀಡುತ್ತಿದ್ದರೂ ನಿಜವಾಗಿಯೂ ಎಲ್ಲೂ ಚಾಲ್ತಿಯಲ್ಲಿ ಕಂಡುಬರುವುದಿಲ್ಲ. ಈ ಸಮುದಾಯಗಳ ಮಕ್ಕಳಿಗೆ ವಿಶೇಷ ಕಲಿಕಾ ವಿದಾನ, ಆಸಕ್ತಿ ರೂಪಿಸುವ ಕಾರ್ಯಕ್ರಮಗಳು ಕಂಡುಬರುವುದಿಲ್ಲ. ಆದರಿಂದಲೇ ಶೈಕ್ಷಣಿಕವಾಗಿ ಹಿಂದುಳಿಯತ್ತಿರುವುದು ಎನ್ನಬಹುದು.

ಗುಂಡ್ಲುಪೇಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಶೈಕ್ಷಣಿಕ ಪ್ರಗತಿ ಶೇ. ೩೨.೬೯% ಇಲ್ಲಿ ಉತ್ತಮವಾದ ಆಶ್ರಮಶಾಲೆಯು ಲಭ್ಯವಿದ್ದರೂ, ಜೇನುಕುರುಬರು ಅವಕಾಶವಂಚಿತರು. ಸರ್ಕಾರದಿಂದ ದೊರೆಯುವ ಶೈಕ್ಷಣಿಕ ಸೌಲಭ್ಯಗಳು ಪಡೆಯಲು ಪ್ರಯಾಸ ಪಡಬೇಕು. ಅಲ್ಲದೇ ಇತರೆ ಬುಡಕಟ್ಟು ಜನರೊಂದಿಗೆ ಹೊಂದಿಕೊಳ್ಳಬೇಕು. ವಸತಿನಿಲಯ, ಶಿಷ್ಯಾವೇತನ, ಆಹಾರ, ಉಡುಗೆ, ತೊಡುಗೆ, ಪಠ್ಯಪುಸ್ತಕ ಪಡೆಯಲು ಸಾಕಷ್ಟು ಪ್ರಯತ್ನ ಮಾಡಿದಲ್ಲಿ ಪ್ರತಿಫಲ ಅಲ್ಪ ಮಾತ್ರ.

ಲಂಬರೇಖಾ ಚಿತ್ರ ೩.೧ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಶೈಕ್ಷಣಿಕ ಪ್ರಗತಿ





ವೀರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಶೇ. ೧೮.೨೫ ಮತ್ತು ೨೯.೯೦% ಶೈಕ್ಷಣಿಕ ಪ್ರಗತಿ ಇದೆ. ಇಲ್ಲಿ ಸಮುದಾಯಗಳು ಹೆಚ್ಚಿನ ಪ್ರಗತಿಯ ಮಟ್ಟವನ್ನು ತಲುಪಿರುವುದು ಕಂಡುಬರುವುದಿಲ್ಲ. ಇಲ್ಲಿನ ಜೇನುಕುರುಬ ಕುಟುಂಬಗಳು ಉದ್ಯೋಗಕ್ಕಾಗಿ ವಲಸೆ ಬಂದವರುಗಳಲ್ಲಿ ಅನೇಕರಾಗಿದ್ದಾರೆ. ಎರಡು ತಾಲ್ಲೂಕು ವ್ಯಾಪ್ತಿಯಲ್ಲಿ ಪರ್ಯಾಯ ಉದ್ಯೋಗವಾಗಿ ಕಾಫಿತೋಟದಲ್ಲಿ ಕೂಲಿಕಾರ್ಮಿಕರಾಗಿ ದುಡಿಯುವ ಅವಕಾಶವಿದೆ. ಆದ್ದರಿಂದ ಬಹಳಷ್ಟು ಜನರು ಕೂಲಿಯನ್ನೇ ಆರಿಸಿಕೊಂಡಿದ್ದಾರೆ. ಸೋಮುವಾರಪೇಟೆಯಲ್ಲಿ ಐ.ಟಿ.ಪಿ.ಸಿ. ಕೇಂದ್ರ ಆಶ್ರಮಶಾಲೆಯನ್ನು ನಡೆಸುತ್ತಿದ್ದು, ಆಶ್ರಮ ಶಾಲೆಯಲ್ಲಿ ಜೇನುಕುರುಬ ಮಕ್ಕಳು ಕಲಿಕೆಯಲ್ಲಿ ತೊಡಗಿರುವವರು ಬೆರಳೆಣಿಕೆಯಷ್ಟು ಮಾತ್ರ. ಇಲ್ಲಿ ಎಲ್ಲಾ ಕುಟುಂಬಗಳು ಉದ್ಯೋಗಕ್ಕಾಗಿ ಕೇರಳ ಪ್ರದೇಶದ ಕಡೆಗೆ ವಲಸೆ ಹೋಗುವವರಾಗಿದ್ದಾರೆ.

ಕೊರಗರಲ್ಲಿ ಶೈಕ್ಷಣಿಕ ಪ್ರಗತಿ ಉತ್ತಮ ಸ್ಥಿತಿಯಲ್ಲಿ ರೂಪುಗೊಳ್ಳುತ್ತಿರುವುದು ಕಂಡುಬರುತ್ತದೆ. ಶೇ. ೧೦೦% ಶೈಕ್ಷಣಿಕ ಪ್ರಗತಿಗಾಗಿ ದುಡಿಯುತ್ತಿರುವವರಲ್ಲಿ ಅನೇಕರ ಸಂಯೋಜನೆ ಬಹುಮುಖ್ಯವಾಗಿ ಕಂಡುಬರುತ್ತದೆ. ಒಂದು ರೂಪದಲ್ಲಿ ನಗರ ಸಂಸ್ಕೃತಿಯಲ್ಲಿ ಇವರುಗಳ ಶೋಷಣೆಯೂ ನಡೆಯುತ್ತಿದೆ. ಜೊತೆಗೆ ಅದನ್ನು ಪ್ರಶ್ನಿಸುವ ಒಂದು ಹೊಸ ವ್ಯವಸ್ಥೆ ರೂಪುಗೊಳ್ಳುತ್ತಾ ಬರುತ್ತಿದೆ. ನಗರ ಪ್ರದೇಶದಲ್ಲಿ ಕೆಲವೊಂದು ಮೂಲಭೂತ ರಚನಾತ್ಮಕ ಬದಲಾವಣೆಯನ್ನು ಕಾಣಬಹುದು. ಇದರಲ್ಲಿ ಶೈಕ್ಷಣಿಕ ಪ್ರಗತಿಯೂ ಒಂದಾಗಿದೆ. ಆದರಿಂದ ಒಟ್ಟಾರೆ ಕೊರಗರಲ್ಲಿ ಶೇ. ೫೬.೫೮% ಪ್ರಗತಿ ಕಾಣಬಹುದು. ಪ್ರತಿಯೊಂದು ಕಾಲೋನಿಯಲ್ಲಿ ಶಿಕ್ಷಣದ ಅಗತ್ಯತೆ ಮತ್ತು ಅನಿವಾರ್ಯತೆಯನ್ನು ಸಮುದಾಯದ ಯುವಕರು ಮನದಟ್ಟು ಮಾಡಿ ಕೊಡುತ್ತಿದ್ದಾರೆ. ೮ ತಾಲ್ಲೂಕುಗಳಲ್ಲಿ ಮಂಗಳೂರು ಅತಿ ಹೆಚ್ಚು ೬೭% ಶೈಕ್ಷಣಿಕ ಪ್ರಗತಿಯಾಗಿರುವ ಬಗ್ಗೆ ತಿಳಿದುಬರುತ್ತದೆ. ಮೂಲನಿವಾಸಿ ಬುಡಕಟ್ಟುಗಳಲ್ಲೇ ಕೊರಗರು ವಿದ್ಯಾಕ್ಷೇತ್ರದಲ್ಲಿ ಒಂದು ವಿಶೇಷವಾದ ಸ್ಥಾನವನ್ನು ಪಡೆದು ಕೊಂಡಿದ್ದಾರೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳು ಶಿಕ್ಷಣದ ಬಗ್ಗೆ ರೂಪಿಸಿದ ನೀತಿ ಯೋಜನೆಗಳು ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗೆ ಕಾರಣವೆನ್ನಬಹುದು. ಆದರೆ ಒಂದು ಹಳ್ಳಿಗೆ ಒಂದು ಶಾಲೆ ಎನ್ನುವಂತ ಸರ್ಕಾರದ ನೀತಿ ಪಾಲನೆಯಾಗಬೇಕಿದೆ. ಶಾಲೆಗಳಿಗೆ ಸಮರ್ಪಿತ ಶಿಕ್ಷಕರನ್ನು ಒದಗಿಸುವುದು ಪ್ರಧಾನವಾದ ಕಾರ್ಯವೆಂದೇ ಬಾವಿಸಬಹುದಾಗಿದೆ.

ಪ್ರತ್ಯೇಕ ತಾಲ್ಲೂಕುವಾರು ಸಂಖ್ಯೆಗಳನ್ನು ಅವಲೋಕಿಸಿದರೆ, ಶಾಲೆಗಳ ಹಂಚಿಕೆ, ಉಡುಪಿ, ಮಂಗಳೂರು, ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅವುಗಳ ಶೇಕಡ ಪ್ರಮಾಣ ಕ್ರಮವಾಗಿ ೬೨.೩೩, ೬೭.೦೧ ಮತ್ತು ೫೭.೨೬ರಷ್ಟು. ಉಳಿದ ತಾಲ್ಲೂಕುಗಳಲ್ಲಿ ಸುಧಾರಣಾ ಮಟ್ಟ ಶೇಕಡವಾರು ಕಡಿಮೆ ಪ್ರಮಾಣವನ್ನು ಹೊಂದಿದ್ದವು. ಇದು ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಹೆಗ್ಗಳಿಕೆಯೆಂದೇ ಹೇಳಬಹುದು. ನಗರ ಜೀವನದ ನಡುವೆ ಸಾಕಷ್ಟು ಸಂಪನ್ಮೂಲವು ಇಲ್ಲದೆ, ಶೈಕ್ಷಣಿಕ ಪ್ರಗತಿಗೆ ದಕ್ಕೆ ಬಾರದ


ರೀತಿಯಲ್ಲಿ ಜೀವನ ನಡೆಸುತ್ತಿರುವ ಸಾಮುದಾಯಿಕ ಗುಂಪು ಜೀವನ ಪದ್ಧತಿ ಇವರುಗಳದಾಗಿದೆ. ನಗರ ಜೀವನದಲ್ಲೂ ಬೇರೆ ಬೇರೆ ಸಮುದಾಯಗಳ ಜೊತೆಗಿದ್ದರೂ ಶೈಕ್ಷಣಿಕ ಪ್ರಗತಿ ಅನೇಕ ಗುಂಪುಗಳಲ್ಲಿ ನೆಲೆಸಿರುವ ಇವರುಗಳನ್ನು ರೂಪಾಂತರ ಗೊಳಿಸುವಲ್ಲಿ ಶಿಕ್ಷಣ ಯಶಸ್ವಿಯಾಗುತ್ತಿದೆ.

ಶೈಕ್ಷಣಿಕ ಪ್ರಗತಿಗಾಗಿ ಮೂಲನಿವಾಸಿ ಬುಡಕಟ್ಟುಗಳಿಗೆ ವಿಶೇಷ ಆದ್ಯತೆ ಒದಗಿಸಲಾಗಿದೆ. ಆದರೂ ಸಮುದಾಯಗಳು ನೆಲೆನಿಂತ ಪರಿಸರದ ಪ್ರತೀಕೂಲತೆಯು ಶೈಕ್ಷಣಿಕ ಪ್ರಗತಿಯ ಮೇಲೆ ಪ್ರಭಾವ ಬೀರುತ್ತದೆ ಎನ್ನಬಹುದು.


ಭೂಮಿಯ ಒಡೆತನ

ಎರಡು ಸಮುದಾಯಗಳಲ್ಲಿನ ಭೂಮಿಯ ಒಡೆತನವನ್ನು ವಸ್ತುಶಃ ವಿವರಿಸುವುದೇ ರೇಖಾಚಿತ್ರದ ಉದ್ದೇಶ. ಮುಖ್ಯವಾಗಿ ಭೂಮಿಯನ್ನು ೪ ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪ್ರತಿ ಕುಟುಂಬಕ್ಕೆ ೨.೫ ಎಕರೆ ಕನಿಷ್ಠ ಜಮೀನು ಇರಲೇಬೇಕು ಎನ್ನುವುದು ಸರ್ಕಾರದ ನಿಯಮ. ಯೋಜನೆಯ ಫಲಾನುಭವಿಗಳು ಮತ್ತು ಪೂರ್ಣಗೊಂಡ ಅಭಿವೃದ್ಧಿ ಕಲ್ಪನೆ ಇದರಿಂದ ತಿಳಿಯಬಹುದು. ಎರಡು ಸಮುದಾಯಗಳಲ್ಲಿನ ಭೂಹೀನರು ಮತ್ತು ಭೂಮಿ ಹೊಂದಿರುವವರು ಎಕರೆವಾರು ವಿಸ್ತೀರ್ಣದಲ್ಲಿ ಗುರುತಿಸಲಾಗಿದೆ. ಸರ್ಕಾರ ನಿಗದಿ ಪಡಿಸಲಾದ ನಿರ್ದಿಷ್ಟ ಭೂ ಹಂಚಿಕೆಯ ಕಾರ್ಯಕ್ರಮದ ಫಲಿತವನ್ನು ಈ ಕ್ರಮ ತಿಳಿಯಪಡಿಸುತ್ತದೆ.


ಲಂಬರೇಖಾ ಚಿತ್ರ ೩.೨ ಸಮುದಾಯಗಳಲ್ಲಿನ ಭೂ ಒಡೆತನದ ಪ್ರಮಾಣ



ಶೇಕಡವಾರು ಪ್ರಗತಿಯಲ್ಲಿ ಜೇನುಕುರುಬರು ಶೇ. ೬೪.೦೫% ಭೂ ಒಡೆತನಹೊಂದಿದ್ದರೆ, ಕೊರಗರು ಶೇ. ೩೬.೪೭% ಮಾತ್ರ ಭೂಮಿಯ ಒಡೆತನ ಹೊಂದಿರುವರಾಗಿದ್ದಾರೆ. ಎಕೆರೆವಾರು ವಿಸ್ತೀರ್ಣದಲ್ಲಿಯೂ ಸಹ ಸಮತೋಲನ ಕಂಡುಬರುವುದಿಲ್ಲ. ೦-೧ ಎಕರೆ ವಿಸ್ತೀರ್ಣದಲ್ಲಿ ಮಾತ್ರವಲ್ಲದೆ, ಎಲ್ಲಾ ೪ ಹಂತದ ಭೂಮಿ ಹಂಚಿಕೆಯಲ್ಲಿ ವ್ಯಾತ್ಯಾಸಗಳು ಕಾಣಬಹುದು. ಇವರಲ್ಲಿ ಕನಿಷ್ಠ ಭೂಮಿ ಹೊಂದಿರುವರು ಮತ್ತು ಭೂಮಿ ಹೊಂದಿಲ್ಲದವರಿಗೆ ಭೂಮಿ ಯಾಕೆ ಸಿಕ್ಕಿಲ್ಲ ಎಂಬುದಕ್ಕೆ ಉತ್ತರ ಸಮುದಾಯ ನೆಲೆನಿಂತ ಪರಿಸರಕ್ಕೆ ಅನುಗುಣವಾಗಿ ಚರ್ಚಿಸಬಹುದು.



ಜೇನುಕುರುಬರು ಅರಣ್ಯಕ್ಕೆ ಹೊಂದಿಕೊಂಡ ಮತ್ತು ಅರಣ್ಯದೊಳಗೆ ಇರುವ ಕಾರಣ ಇದು ಸರ್ಕಾರದ ರಕ್ಷಿತ ಅರಣ್ಯವಾಗಿದೆ. ಸ್ಥಳಾಂತರದ ಕಾರ್ಯದಲ್ಲಿ ಭೂಮಿ ನೀಡುವುದಾಗಿ ಹೇಳಲಾಗುತ್ತಿದೆ. ಆದ್ದರಿಂದಲೇ ಜೇನುಕುರುಬರಲ್ಲಿ ಸ್ವಲ್ಪ ಮಟ್ಟಿನ ಅಂದರೆ ಶೇ. ೬೪% ಭೂಮಿ ಹೊಂದಿರುವರಾಗಿದ್ದಾರೆ. ಕೊರಗರಲ್ಲಿ ಶೇ. ೩೬% ಮಾತ್ರ ಭೂಮಿಹೊಂದಿರುವರು. ಕೊರಗರು ಉದ್ಯೋಗದ ನಿಮಿತ್ತ ನಗರ ಕಡೆಗೆ ವಲಸೆಹೋಗುತ್ತಿರುವುದು ಭೂಮಿ ಹೊಂದುವಲ್ಲಿ ತೊಡಕು ಎನ್ನಬಹುದಾಗಿದೆ. ಮತ್ತು ಭೂಮಿ ಹಂಚಿಕೆಯಲ್ಲಿ ಸರಿಯಾದ ಕ್ರಮ ನಡೆಯದಿರುವುದು ಕಾರಣವಾಗಿ ತಿಳಿದು ಬರುತ್ತದೆ. ಕೊರಗರಲ್ಲಿ ಅರ್ಧಕ್ಕಿಂತಲ್ಲೂ ಹೆಚ್ಚು ಕುಟುಂಬಗಳು ಭೂ ಹೀನರೆ ಆಗಿದ್ದಾರೆ. ಭೂಮಿ ಹೊಂದಿರುವರಲ್ಲಿ ಕಡಿಮೆ ಭೂ ಹಿಡುವಳಿ ಹೊಂದಿರುವವರೇ ಹೆಚ್ಚು. ಅಂದರೆ ೦-೨ ಎಕರೆ ವರ್ಗದಲ್ಲಿ ಭೂಮಿ ಹೊಂದಿರುವರಾಗಿದ್ದಾರೆ. ಭೂಮಿಯು ಆದಾಯ ಮತ್ತು ಆಸ್ತಿಯ ಭಾಗವಾಗಿ ಪರಿಗಣಿತವಾಗುತ್ತಿರುವ ಸಂದರ್ಭದಲ್ಲಿ ಹಂಚಿಕೆ ಮಾತ್ರ ನಿಧಾನಗತಿಯಲ್ಲಿದೆ.



"ಭೌತಿಕ ಆಸ್ತಿಯ ರೂಪದಲ್ಲಿನ ಭೂಮಿಯೂ ಸಮಾನ ಹಂಚಿಕೆಯಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಬೌದ್ಧಿಕ ಆಸ್ತಿಯು ಶಿಕ್ಷಣ, ತರಬೇತಿ, ಕೌಶಲ್ಯವಾದರೆ ಭೌತಿಕ ಆಸ್ತಿಯು ಭೂಮಿ, ಕೈಗಾರಿಕೆ, ಹಣಕಾಸು ರೂಪದಲ್ಲಿದೆ."[೧೫] ಹೀಗಾಗಿ ಭೂಹೀನತೆ ಬಂಡವಾಳದ ಕೊರತೆ (ಆದಾಯ) ಮತ್ತು ಅನಕ್ಷರತೆ (ಶೈಕ್ಷಣಿಕ ಪ್ರಗತಿ) ಬಡತನಕ್ಕೆ ನೀಡಿರುವ ಬಹುಮುಖ್ಯಕಾರಣಗಳಾಗಿವೆ. ಸಮುದಾಯಗಳಲ್ಲಿನ ಈ ವಿಭಾಗಗಳನ್ನು ಆಸ್ತಿ ಮತ್ತು ಬಡತನ ಕ್ರಮದಲ್ಲಿನ ಅಂಶಗಳ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ.

P = F(A) - P = ಬಡತನ, A = ಆಸ್ತಿ, F = ಕಾರ್ಯ.


ಬಿಂಬಕದಲ್ಲಿ (ಕಾರ್ಯ) ಬಡತನವನ್ನು ಅವಲಂಬಿಸಿದೆ. ಸಮುದಾಯಗಳು ಅರ್ಥವ್ಯಸ್ಥೆಯಲ್ಲಿ ಭೂಮಿಯ ಒಡೆತನವನ್ನು ಹೊಂದಿದ್ದರೆ, ಅದರ ಸಹಾಯದಿಂದ ಉದ್ಯೋಗ ಮತ್ತು ಆದಾಯವನ್ನು ಸಂಪಾದಿಸಬಹುದು. ಪ್ರತಿಕುಟುಂಬ ಯೋಗ್ಯ ಜೀವನ ನಡೆಸುವಷ್ಟೇ ಆದಾಯ ಗಳಿಸಬೇಕಾದರೆ ಉದ್ಯೋಗ ಮುಖ್ಯ, ಉದ್ಯೋಗ ದೊರೆಯಬೇಕಾದರೆ ಆ ಕುಟುಂಬವು ಭೌತಿಕ ಮತ್ತು ಬೌದ್ಧಿಕ ಆಸ್ತಿಯ ರೂಪದಲ್ಲಿನ ಮೂಲಾಂಶಗಳ ಒಡೆತನ ಹೊಂದಿರಬೇಕಾಗುತ್ತದೆ. ಆಗ ಬಡತನ ನಿವಾರಣೆಯಾಗುತ್ತದೆ. "ಅಂದರೆ ಆಸ್ತಿ ಹೀನತೆಯೇ ಬಡತನವಾಗಿದೆ (Depreration of Assets)".[೧೬] ವ್ಯವಸ್ಥಿತ ಕ್ರಮವಾಗಿ ಭೂಮಿ ಮತ್ತು ಭೌದ್ಧಿಕ ಆಸ್ತಿ ಶಿಕ್ಷಣ ಮತ್ತು ತರಬೇತಿ ಆಯಾ ಪರಿಸರಕ್ಕೆ ಅನುಗುಣವಾಗಿ ಒದಗಿಸುವುದು ಉತ್ತಮವಾದ ಅಭಿವೃದ್ಧಿ ಕ್ರಮವೆನ್ನಬಹುದು.

ಆದಾಯದ ವರ್ಗೀಕರಣ

ರೇಖಾಚಿತ್ರದಲ್ಲಿ ತೋರಿಸಿದಂತೆ ಮೂಲನಿವಾಸಿ ಬುಡಕಟ್ಟುಗಳ ೧೫ ತಾಲ್ಲೂಕು ವ್ಯಾಪ್ತಿಯಲ್ಲಿನ ಕಾಲೋನಿಗಳ ಪ್ರತಿ ಕುಟುಂಬದ ಆದಾಯದ ವಿವರ ಪ್ರತ್ಯೇಕ ಪಟ್ಟಿಗಳಲ್ಲಿ ನೀಡಲಾಗಿದೆ. ಇಲ್ಲಿ ಎರಡು ಸಮುದಾಯಗಳಲ್ಲಿನ ಭಿನ್ನತೆಗಳು ತೌಲನಿಕವಾಗಿ ವಿಶ್ಲೇಷಿಸಲಾಗುತ್ತಿದೆ. ಬಡತನ, ಆಸ್ತಿ ಒಡೆತನ, ರಾಜ್ಯಾಧಿಕಾರಕ್ಕೆ ಅಡ್ಡಿಯಾಗಿರುವ ಆದಾಯ ಇವರುಗಳ ಆರ್ಥಿಕ ಬಡತನಕ್ಕೆ ಕಾರಣವಾಗಿದೆ. ೪ ಹಂತಗಳಲ್ಲಿ ಹಂಚಿಕೆಯಾದ ಆದಾಯದ ವರ್ಗೀಕರಣವನ್ನು ರೂಪಾಯಿಗಳಲ್ಲಿ ಗುರುತಿಸಲಾದಂತೆ ಜೇನುಕುರುಬರ ವಾರ್ಷಿಕ ಆದಾಯದ ವರ್ಗದಲ್ಲಿ ೧ ರೂ.ನಿಂದ ೨೦೦೦ ರೂ.ವರೆಗೆ ಶೇಕಡ ೩೩.೩೭% ಕುಟುಂಬಗಳು ಕಂಡುಬಂದರೆ, ಕೊರಗರಲ್ಲಿ ಶೇ. ೧೬.೧೭% ರಷ್ಟು ಕಾಣಬಹುದು. ಎರಡು ಸಮುದಾಯಗಳಲ್ಲಿನ ಆದಾಯದ ಮಾಹಿತಿಯನ್ನು ವಿಶ್ಲೇಷಿಸಿದಾಗ ಆದಾಯದ ಶೇಕಡವಾರು ಪ್ರಮಾಣ ಕೊರಗರಲ್ಲಿ ಶೇಕಡ ೩೭.೬೪(೧೨೮) ರಷ್ಟು ೪೦೦೧ ರಿಂದ ೬೦೦೦ ರೂ.ಗಳಲ್ಲಿರುವುದು ಕಂಡುಬರುತ್ತದೆ. ೬೦೦೦ ರೂ.ಗಳಿಗಿಂತ ಹೆಚ್ಚಿನ ಅನುಪಾತದಲ್ಲಿ ಶೇ. ೬.೦೯% ಜೇನುಕುರುಬರು ಮತ್ತು ೧೨.೯೪% ಕೊರಗರು ಇದ್ದು, ಜೇನುಕುರುಬರಿಗಿಂತ ಸ್ವಲ್ಪ

ಉತ್ತಮ ಮಟ್ಟದಲ್ಲಿ ಕೊರಗರು ನೆಲೆಸಿದ್ದಾರೆ ಎನ್ನಬಹುದು. ಕೊರಗರು ೪೦೦೧–೬೦೦೦ ಹಾಗೂ ೬೦೦೦ಕ್ಕೂ ಮೇಲ್ಪಟ್ಟವರ್ಗದಲ್ಲಿ ಜೇನುಕುರುಬರಿಗಿಂತ ಇನ್ನೂ ಹೆಚ್ಚಿನ ಆರ್ಥಿಕ ಮಟ್ಟದಲ್ಲಿದ್ದಾರೆ. ಇದಕ್ಕೆ ಅನೇಕರು ಇವರಲ್ಲಿ ಸರ್ಕಾರಿ ನೌಕರಿಯಲ್ಲಿರುವವರು, ಇವರುಗಳಿಗೆ ಸರ್ಕಾರಿ ವೇತನ ಬರುವುದು. ಮತ್ತೆ ಕೆಲವರು ಸ್ವಯಂ ಉದ್ಯೋಗಿಗಳಾಗಿರುವುದು ಇವರ ಆರ್ಥಿಕ ಚೈತನ್ಯ ಸುಧಾರಿಸಲು ಸಹಕಾರಿಯಾಗಿದೆ.

ಲಂಬರೇಖಾ ಚಿತ್ರ ೩.೩ ಸಮುದಾಯಗಳ ಆದಾಯದ ಅನುಪಾತ




ರೂ. ೧ ರಿಂದ ೨೦೦೦ ಮತ್ತು ೨೦೦೧ ರಿಂದ ೪೦೦೦ ರೂ.ಗಳ ಅಂತರದಲ್ಲಿ ಜೇನುಕುರುಬರು ಹೆಚ್ಚಿನ ಜನರು ಅವಲಂಬಿಸಿದ್ದಾರೆ. ನಂತರದ ೪೦೦೧ ರಿಂದ ೬೦೦೦ ಮತ್ತು ೬೦೦೦ಕ್ಕೂ ಹೆಚ್ಚು ಕೊರಗರು ಅವಲಂಬಿಸಿರುವುದು ಕಾಣಬಹುದು. ಕೊರಗರು ಒಂದೊಂದು ಸಣ್ಣ ಕಾಲೋನಿಯಲ್ಲಿ ನೆಲೆಸಿದ್ದರೂ ಭೂ ಹಿಡುವಳಿ ಇಲ್ಲ. ಜೇನು ಕುರುಬರು ಇರುವ ಸ್ವಲ್ಪ ಭೂ ಹಿಡುವಳಿಯಿಂದ ಬೇಸಾಯ ಮಾಡುವವರಾಗಿದ್ದಾರೆ. ಉತ್ಪತ್ತಿ ಕೂಡಾ ತೀರಾ ಕಡಿಮೆ ಇದೆ. ಅಂದರೆ ಇಲ್ಲಿರುವ ಎರಡೂ ಬುಡಕಟ್ಟುಗಳು ಬಡತನದ ಸ್ಥಿತಿಯಲ್ಲಿಯೇ ಇರುವರೆಂದು ಈ ಮಾಹಿತಿಯಿಂದ ತಿಳಿಯಬಹುದು.

ಮೇಲೆ ಹೇಳಿದಂತೆ ಇವರ ಆರ್ಥಿಕತೆ ಮತ್ತು ಬಡತನದ ಹಿನ್ನಲೆಗೆ ಕಾರಣ ಆಸ್ತಿಯ ಒಡೆತನ ಇಲ್ಲದಿರುವುದು ಎನ್ನಬಹುದು. ಕಾರಣ ಮತ್ತು ಪರಿಣಾಮ ಸಿದ್ಧಾಂತದ ಪ್ರಕಾರ ಆಸ್ತಿಯ ಒಡೆತನ ಮತ್ತು ಬಡತನದ ನಡುವೆ ವಿರುದ್ಧ ಸಂಬಂಧವಿದೆ.[೧೨] ಅಂದರೆ ಆಸ್ತಿಯ ಒಡೆತನದ ಪ್ರಮಾಣ ಹೆಚ್ಚಾಗ ಬೇಕಾದರೆ ಸಮರ್ಪಕವಾಗಿ ಭೌತಿಕ ಮತ್ತು ಬೌದ್ಧಿಕ ಆಸ್ತಿಯ




ಹಂಚಿಕೆ ವ್ಯವಸ್ಥಿತವಾಗಿ ನಿರ್ಧರಿತ ಪ್ರಮಾಣದಲ್ಲಿ ಸಮುದಾಯಗಳಿಗೆ ದೊರೆಕಬೇಕು. ಮಾನವಸಂಪನ್ಮೂಲದ ಸಮರ್ಪಕ ಸದ್ಬಳಕೆಗೆ ಉದ್ಯೋಗಗಳ ವಿಸ್ತಾರತೆ ಹೆಚ್ಚಾಗಬೇಕು ಮತ್ತು ಭೂ ಹಂಚಿಕೆ ವೃತ್ತಿತರಬೇತಿಗಳು ಆಯಾ ಪರಿಸರಕ್ಕೆ ಅನುಕೂಲವಾಗುವಂತೆ ನೀಡಿದಲ್ಲಿ ಬಡತನದ ಪ್ರಮಾಣ ಕಡಿಮೆಯಾಗುತ್ತದೆ. ಅದೇ ರೀತಿ ಉದ್ಯೋಗಗಳಿಲ್ಲದ್ದಿದ್ದರೆ ದುಡಿಮೆಯು ಕಡಿಮೆಯಾಗಿ ಬಡತನದ ಪ್ರಮಾಣ ಹೆಚ್ಚಾಗುತ್ತದೆ.

ರೇಖಾ ಚಿತ್ರ ೩.೧ ಬಡತನ ರೇಖಾ ಚಿತ್ರ



ರೇಖಾಚಿತ್ರದಲ್ಲಿ ತೋರಿಸಿರುವಂತೆ ಬಡತನರೇಖೆಯು ಎಡದಿಂದ ಬಲಕ್ಕೆ ಇಳಿಜಾರನ್ನು ಹೊಂದಿದೆ. ಬಡತನದ ತೀವ್ರತೆಯು ಮೂರು ಅಂಶಗಳ ಆಸ್ತಿಯ ಒಡೆತನದ ಪ್ರಮಾಣವನ್ನು ಅವಲಂಬಿಸಿದೆಯೆಂದು ತಿಳಿಸುತ್ತದೆ. OX ಅಕ್ಷದ ಮೇಲೆ ಬಡತನದ ಪ್ರಮಾಣವನ್ನು OY ಅಕ್ಷದ ಮೇಲೆ ೩ ಅಂಶಗಳ ಆಸ್ತಿಯ ಒಡೆತನದ ಪ್ರಮಾಣವನ್ನು ವ್ಯಕ್ತಪಡಿಸಲಾಗಿದೆ. ಸಮುದಾಯಗಳು ಅಥವಾ ಕುಟುಂಬವು OB ಪ್ರಮಾಣದಷ್ಟು ಆಸ್ತಿಯ ಒಡೆತನ ಹೊಂದಿದ್ದಾಗ OC ಪ್ರಮಾಣದಷ್ಟು ಬಡತನವನ್ನು ಹೊಂದಿರುತ್ತವೆ. ಅದೇ ರೀತಿ OA ಪ್ರಮಾಣದಷ್ಟು ಆಸ್ತಿಯ ಒಡತನ ಹೊಂದಿದ್ದಾಗ OD ಪ್ರಮಾಣದಷ್ಟು ಬಡತನವಿರುತ್ತದೆ. ಅಂದರೆ ಆಸ್ತಿಯ ಒಡೆತನದ ಪ್ರಮಾಣ ಹೆಚ್ಚಾದಂತೆ ಬಡತನದ ಪ್ರಮಾಣ ಕಡಿಮೆಯಾಗಿದೆ. ಮತ್ತು ಆಸ್ತಿಯ ಒಡೆತನದ ಪ್ರಮಾಣ ಕಡಿಮೆಯಾದಂತೆ ಬಡತನದ ಪ್ರಮಾಣ ಹೆಚ್ಚಾಗಿದೆ. ಅರ್ಥಶಾಸ್ತ್ರಜ್ಞರ ಅಭಿಪ್ರಾಯದಂತೆ ಯಾವುದೇ ಜನ ಸಮುದಾಯದಲ್ಲಿ ಆಸ್ತಿಯ ಒಡೆತನದ ಪ್ರಮಾಣ ಕಡಿಮೆ ಇದ್ದರೆ, ಆ ಜನ ಸಮುದಾಯದಲ್ಲಿ ಹೆಚ್ಚಿನ ಜನಸಂಖ್ಯೆ ಬಡತನದಲ್ಲಿ ಇರುವುದನ್ನ ಸೂಚಿಸುತ್ತದೆ.[೧೮]



ಭೂ ಹಂಚಿಕೆಯ ವಿವರಣೆಯಲ್ಲಿಯೂ ಸಹ ಆಸ್ತಿ ಹಂಚಿಕೆ ಪಾತ್ರ ಗುರುತಿಸಬಹುದು. ೧೦೦ ಎಕರೆ ಭೂ ವಿಸ್ತೀರ್ಣವನ್ನು ಸಮಾನವಾಗಿ ಹಂಚಿಕೆ ಮಾಡಿದ್ದಲ್ಲಿ ಇರುವ ಸೀಮಿತ ಜನಸಂಖ್ಯೆಯಲ್ಲಿ ಯಾರು ಬಡವರು ಮತ್ತು ಶ್ರೀಮಂತರು ಎಂದು ಗುರುತಿಸಲು ಸಾಧ್ಯವಿಲ್ಲದ, ಎಲ್ಲರೂ ಆರೋಗ್ಯಕರ ಜೀವನ ಮಟ್ಟ ಮತ್ತು ಜೀವನ ನೆಡೆಸಲು ಸಾಕಾಗುತ್ತಿತ್ತು. ಆದರೆ ಇಲ್ಲಿ ಎರಡೇ ಸಮುದಾಯಗಳಾದರೂ ಒಟ್ಟಾರೆ ಕುಟುಂಬಗಳ ಸಂಖ್ಯೆ ೧೦,೬೭೭. ಇವರುಗಳಿಗೆ ಮಾದರಿ ಭೂ-ಆಸ್ತಿ ಹಂಚಿಕೆ ನಡೆದಿದ್ದಲ್ಲಿ, ಎಲ್ಲೂ ಬಡತನದ ಸಾಧ್ಯತೆ ತಿಳಿದು ಬರುತ್ತಿರಲಿಲ್ಲ. ಆದ್ದರಿಂದಲೇ ಸಾಮಾಜಿಕ ವ್ಯವಸ್ಥೆ ಶ್ರೇಣಿಕೃತ ವ್ಯವಸ್ಥೆ ಹೊಂದಿರುವುದಕ್ಕೆ ಕಾರಣವಾಗಿದೆ. ಸಮುದಾಯಗಳಲ್ಲಿ ಅಸಮಾನವಾಗಿ ಹಂಚಿಕೆಯಾದ ಭೂಮಿ, ಆದಾಯ, ಶಿಕ್ಷಣ ಬಹುಜನರ ಬಡತನಕ್ಕೆ ಮೂಲ ಕಾರಣವಾಗಿದೆ.

ಸಮುದಾಯಗಳ ಜನರು ಜೀವನ ನಿರ್ವಹಣೆಗೆ ಭೌತಿಕ ಮತ್ತು ಬೌದ್ಧಿಕ ಆಸ್ತಿಯ ಒಡೆತನವನ್ನು ಹೊಂದಿರದೆ ಕೇವಲ ದೈಹಿಕ ಶ್ರಮಶಕ್ತಿಯನ್ನು ಅವಲಂಬಿಸಿರುವರು. ಏಕೆಂದರೆ ಈ ಶ್ರಮದ ಮೌಲ್ಯ ಕುಗ್ಗುತ್ತಿದೆ ಒಂದೆಡೆ. ಈ ಸಮುದಾಯಗಳಲ್ಲಿ ಗ್ರಾಮೀಣ ಭಾಗದಲ್ಲಿರುವವರು ಕಡಿಮೆ ಪ್ರಮಾಣದ ಸಣ್ಣ ರೈತರು, ಭೂ ರಹಿತ ಕೃಷಿ ಕಾರ್ಮಿಕರು, ಕೂಲಿ ಕಾರ್ಮಿಕರು ಕರಕುಶಲ ಕರ್ಮಿಗಳಾದರೆ, ನಗರ ಪ್ರದೇಶದ ಕೊಳಚೆ ಪ್ರದೇಶದಲ್ಲಿ ನೆಲೆಸಿದ ಅನಿಶ್ಚಿತ ಕಾರ್ಮಿಕರು, ಕೂಲಿಕಾರ್ಮಿಕರು, ಸಣ್ಣ ವ್ಯಾಪಾರಗಾರರು, ಮನೆಕೆಲಸದವರು ರಸ್ತೆ ಬದಿಯಲ್ಲಿನ ಮೂರು ಕಾಸಿನ ಮಾರಾಟಗಾರರು ಬಡವರಾಗಿದ್ದಾರೆ.

ಮೇಲಿನ ವಿಶ್ಲೇಷಣೆಯಿಂದ ತಿಳಿದು ಬರುವುದೆನೆಂದರೆ, ರಾಜ್ಯ ಮತ್ತು ರಾಷ್ಟ್ರದಲ್ಲಿ ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆಯಾದ ಜಾತಿಪದ್ಧತಿಗನುಗುಣವಾಗಿ ಆಸ್ತಿ ಮತ್ತು ಭೂ ಹಿಡುವಳಿ, ಬಡತನ, ಹಂಚಿಕೆಯಾಗಿರುವುದು ಸ್ಪಷ್ಟವಾಗುತ್ತದೆ. ಅಲ್ಲದೆ ಅಸಮಾನ ಹಂಚಿಕೆಯೇ ಈ ಮೂಲನಿವಾಸಿ ಬುಡಕಟ್ಟುಗಳ ಬಡತನಕ್ಕೆ ಮೂಲ ಕಾರಣವೆಂಬುದೂ ಕೂಡ ಸ್ಪಷ್ಟವಾಗುತ್ತದೆ.

ಸ್ವತಂತ್ರದ ೫೯ ವರ್ಷಗಳೂ ಕಳೆದರೂ, ಲಕ್ಷ-ಕೋಟಿ ರೂ.ಗಳನ್ನು ವೆಚ್ಚಮಾಡಿದರೂ, ಇನ್ನೂ ಬಡತನ ಮುಂದುವರೆಯುತ್ತಿದೆ. ಆಸ್ತಿಯ ಅಸಮಾನ ಹಂಚಿಕೆ ಒಂದಾದರೆ, ಭಾರತ ಸಂವಿಧಾನದ ಅನುಚ್ಛೇಧ ೩೮ ಮತ್ತು ೩೯ನ್ನು ಪ್ರಸ್ತುತದ ವರೆಗೂ ಸಮುದಾಯಗಳಿಗಾಗಿ ಪ್ರಸ್ತುತದ ವರೆಗೂ ಜಾರಿಮಾಡದಿರುವುದು ಮೂಲ ನಿವಾಸಿಗಳ ಬಡತನ ಮುಂದುವರೆಯಲು ರಾಜಕೀಯ ಕಾರಣವಾಗಿದೆ. ಸಂವಿಧಾನದ ಇಚ್ಛೆ ಆರ್ಥಿಕ ಶಕ್ತಿಯ ಕೇಂದ್ರೀಕರಣವನ್ನು ತಡೆಗಟ್ಟಿ ಆಸ್ತಿ ಮತ್ತು ಆದಾಯ ಸಮನಾಗಿ ಹಂಚಿಕೆಯಾಗಬೇಕು. ಹಾಗೂ ಜೀವನಕ್ಕೆ ಸಾಕಾಗುವಷ್ಟು ಸಾಧನ ಸಂಪನ್ಮೂಲಗಳು ಎಲ್ಲಾರಿಗೂ ಪುರುಷ ಮತ್ತು ಮಹಿಳೆಯರೆಲ್ಲರಿಗೂ ಸಮನಾಗಿ ದೊರೆಕುವಂತೆ ಮಾಡಬೇಕು ಎಂದು ಸರ್ಕಾರಕ್ಕೆ ಸಂವಿಧಾನ ಸೂಚಿಸುತ್ತದೆ.[೧೯] ಇದು ಜಾರಿಯಾಗಬೇಕಾದರೆ ರಾಜ್ಯಾಧಿಕಾರದ ಕಾರ್ಯಾಂಗ ಮತ್ತು

ಶಾಸಕಾಂಗವು ಪ್ರಬಲ ಪಾತ್ರವಹಿಸಬೇಕಿದೆ. ಅಭಿವೃದ್ಧಿಯತ್ತ ತರುವಲ್ಲಿ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ನಿರ್ಧಿಷ್ಟ ಗತಿಯಲ್ಲಿ ಸಾಗಬೇಕಿದೆ.

ಒಟ್ಟಾರೆ ಎರಡು ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಗುರುತಿಸಲಾದ ೩ ಅಂಶಗಳಾದ ಶೈಕ್ಷಣಿಕ ಪ್ರಗತಿ, ಭೂ ಹಂಚಿಕೆ ಮತ್ತು ಆದಾಯದ ವರ್ಗೀಕರಣ. ಇವುಗಳಲ್ಲಿನ ಬಹುಮುಖ್ಯ ಅಂಶಗಳ ತೌಲನಿಕ ವಾಸ್ತವಿಕತೆಯನ್ನು ಅಧ್ಯಯನದಲ್ಲಿ ವಿವರಿಸಲಾಗಿದೆ. ಸಮುದಾಯಗಳಿಗೆ ರೂಪಿಸಲಾದ ಅನೇಕ ಕಾರ್ಯ ತಂತ್ರಗಳು ಮತ್ತು ಯೋಜನೆಗಳು ಕಾಗದದ ಮೇಲೆ ಬಹಳ ಆಕರ್ಷಕವಾಗಿ ಕಾಣುತ್ತವೆ. ಈ ಕಾರ್ಯತಂತ್ರ ಮತ್ತು ಯೋಜನೆಗಳು ಬರೀ ಆದರ್ಶಗಳನ್ನೇ ಮುಂದಿಟ್ಟು ಕೊಂಡಿವೆ. ವಾಸ್ತವಿಕ ಸ್ಥಿತಿಯನ್ನು ಮತ್ತು ಪರಿಸರವನ್ನು ಗಣನೆಗೆ ತೆಗೆದುಕೊಳ್ಳದೇ ರೂಪಿಸಿದ ಯೋಜನೆಗಳು ದಿಕ್ಕಪಾಲಾಗಿರುವುದು ಇಲ್ಲಿ ತಿಳಿಯಬಹುದು. ಸಮುದಾಯಗಳ ಒಳಿತಿಗಾಗಿ ರೂಪಿಸಿದ ಕಾರ್ಯತಂತ್ರ ಪರಿಣಾಮಕಾರಿಯಾಗಬೇಕಾದರೆ ಅದನ್ನು ರೂಪಿಸುವಾಗ ತುಂಬಾ ಎಚ್ಚರಿಕೆ ವಹಿಸಬೇಕಾಗುತ್ತದೆ. ಅನುಷ್ಠಾನದಿಂದ ದೊರೆಯುವ ಫಲಿತಾಂಶವೂ ಒಂದು ಮಾದರಿಯಾಗಬೇಕು. ಸಮುದಾಯಗಳ ಪರಿಸರ ಹಾಗೂ ಸಂಪನ್ಮೂಲಗಳನ್ನು ವಾಸ್ತವಿಕ ದೃಷ್ಟಿಯಲ್ಲಿಟ್ಟುಕೊಂಡು ಅಂದಾಜು ಮಾಡಬೇಕು. ಹೀಗಾಗಿ ಸೂಕ್ಷ್ಮ ಅಂಶಗಳನ್ನೇ ಅರಿತು ನೀತಿಯನ್ನು ಬೆಳಸಬೇಕು. ಶೈಕ್ಷಣಿಕ ಕ್ರಾಂತಿಯಿಂದ ಹಿತಕರ ಸಮಾಜವೊಂದರ ನಿರ್ಮಾಣಕ್ಕೆ ನೆರವಾಗುವುದು ನಿಜಕ್ಕೂ ಒಂದು ಸಾಹಸವೇ ಸರಿ. ಶಿಕ್ಷಣ ಕ್ಷೇತ್ರಗಳಲ್ಲಿ ಇನ್ನೂ ೧೫-೨೦ ವರ್ಷಗಳ ಅವಧಿಯ ಅತ್ಯಂತ ಪ್ರಭಾವಶಾಲಿಯಾದ ವಾತಾವರಣವನ್ನು ಆಯಾ ಸಮುದಾಯಗಳ ವಾಸ್ತವಿಕ ನೆಲೆನಿಂತ ಪರಿಸರಕ್ಕೆ ಅನುಗುಣವಾಗಿ ಒದಗಿಸಿಕೊಡುವುದು ಧ್ಯೇಯವಾಗಬೇಕಿದೆ.

ಶೈಕ್ಷಣಿಕ ಪ್ರಗತಿ, ಭೂ ಹಂಚಿಕೆ, ಆದಾಯ ಪ್ರಮಾಣದಲ್ಲಿ ಎರಡು ಸಮುದಾಯಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಆದರೆ ಯೋಜನೆಯನ್ನು ಎರಡು ಸಮುದಾಯಗಳಿಗನುಗುಣವಾಗಿ ರೂಪಿಸಲಾಗಿದೆ. ಇದನ್ನು ಹೊರತುಪಡಿಸಿ ಸಮುದಾಯಗಳ ವಾಸ್ತವಿಕ ಪರಿಸರದ ಹಿನ್ನೆಲೆಯಲ್ಲಿ ದುರ್ಬಲವೆನಿಸಿದ ಕ್ಷೇತ್ರವನ್ನು ಆದ್ಯತೆಮೇರೆಗೆ ಅಭಿವೃದ್ಧಿ ಕಾರ್ಯಗಳಿಗೆ ಒಳಪಡಿಸಬೇಕಿದೆ. ಸಾಮಾಜಿಕ ಬೆಳವಣಿಗೆಯೊಂದಿಗೆ ಆರ್ಥಿಕ ಸಬಲತೆ ಸಾಧಿಸಲು ಹಾಗೂ ಹಣಕಾಸಿನ ನೆರವಿನಿಂದ ವಂಚಿತವಾಗಿರುವ ಕುಟುಂಬಗಳನ್ನು ಗುರುತಿಸುವ ಮೂಲಕ ಸೌಲಭ್ಯಗಳನ್ನು ವಿಸ್ತರಿಸಬೇಕಿದೆ.

ಹೀಗಾಗಿ ಈ ಜನರು ಆರ್ಥಿಕವಾಗಿ ಹಿಂದೆ ಇರುವುದು ತಪ್ಪಿಸಲೂಬಹುದು. ಅವರ ಪರಿಸರಕ್ಕೆ ಅನುಗುಣವಾಗಿ ಸಮರ್ಪಕ ಮಾನವ ಸಂಪನ್ಮೂಲದ ಸ್ವಯಂ ಅಭ್ಯುದಯದ ಅಗತ್ಯಕ್ಕನುಗುಣವಾಗಿ ಸೌಲಭ್ಯಗಳ ನೀಡಿಕೆಯನ್ನು ನಿರ್ಧರಿಸಬೇಕಿದೆ.

ಅಡಿ ಟಿಪ್ಪಣಿಗಳು:

1. ಇರುಳಿಗರು ಜಾನಪದ ಅಧ್ಯಯನ : ಡಾ॥ ಬೈರೆಗೌಡ : ಪುಟ ೬೩
2. ಯೋಜನಾ ಮಾಸ ಪತ್ರಿಕೆ : ನವೆಂಬರ್ ೨೦೦೨ : ಭಾರತ ಸರ್ಕಾರ ಪ್ರಕಟಣೆ : ಪುಟ ೧೩
3. ವಕ್ತೃ : ಬೋರಯ್ಯ : ನಾಗಪುರ : ಸಂದರ್ಶನ : ೨೫:೫:೨೦೦೩
4. ಕಾಡುಕುರುಬರು ಮತ್ತು ಜೇನುಕುರುಬರು ಸಂಸ್ಕೃತಿ : ಎ.ಸಿ. ಲಲಿತ : ಪುಟ ೧೮
5. ವಕ್ತೃ : ಮರಳಕುಂಟೇ : ಕೆಂಪಮ್ಮ : ಸಂದರ್ಶನ : ೨೪:೫:೨೦೦೩
6. ವಕ್ತೃ : ಮರಳಕುಂಟೇ : ಕೆಂಪಮ್ಮ : ಸಂದರ್ಶನ : ೨೪:೫:೨೦೦೩
7. ಕರ್ನಾಟಕ ರಾಜ್ಯ ಗೆಜೆಟಿಯರ್ : ಪುಟ ೬೩. ಭಾಗ.
8. ಬುಡಕಟ್ಟು ಬದುಕಿನ ಸ್ಥಿತ್ಯಂತರ : ಎ.ಎಸ್. ಪ್ರಭಾಕರ. ಪುಟ ೧೪೧
9. Castes and Tribes of Southern India : E. Tharston VD II
10. ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ : ಕಮಲಾಕ್ಷಿ ಪುಟ ೧೭
11. ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ : ಕಮಲಾಕ್ಷಿ ಪುಟ ೧೭
12. ವಕ್ತೃ : ಮಹಿಳೆ. ಕರಿಪ್ಪೋಳು, ಮಂಗಳೂರು ಸಂದರ್ಶನ ೧೩.೩.೨೦೦೩
13. ಭಾರತದ ಆರ್ಥವ್ಯವಸ್ಥೆ : ಶರಣಪ್ಪ : ಪುಟ ೧೯೧
14. ಭಾರತದ ಆರ್ಥವ್ಯವಸ್ಥೆ : ಶರಣಪ್ಪ : ಪುಟ ೧೯೧
15. ಬಡತನ ಮತ್ತು ಪರಿಹಾರ : ವಿ. ಷಣ್ಮುಗಂ : ಪುಟ ೯
16. ಯೋಜನಾ ಮಾಸ ಪತ್ರಿಕೆ : ಸಂಪುಟ : ಪುಟ ೨೫
17. ಬಡತನ ಮತ್ತು ಪರಿಹಾರ : ವಿ. ಷಣ್ಮುಗಂ : ಪುಟ ೪೩
18. ಬಡತನ ಮತ್ತು ಪರಿಹಾರ : ವಿ. ಷಣ್ಮುಗಂ : ಪುಟ ೪೩
19. ಡಾ॥ ಬಿ.ಆರ್. ಅಂಬೇಡ್ಕರ್ ಬರಹ ಮತ್ತು ಬಾಷಣಗಳು ಸಂಪುಟ ೫

ಅಧ್ಯಾಯ ೪

ಮೂಲನಿವಾಸಿ ಬುಡಕಟ್ಟುಸಮುದಾಯಗಳ ಕಲ್ಯಾಣ ಕಾರ್ಯಕ್ರಮಗಳು ಮತ್ತು ಅನುಷ್ಠಾನ:

೧. ಸಮುದಾಯಗಳ ಅಭಿವೃದ್ಧಿಗಿರುವ ಮಾರ್ಗಗಳು

೨. ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ

೩. ಆರ್ಥಿಕ ಚೈತನ್ಯದ ಕಾರ್ಯಕ್ರಮಗಳು


೪. ವಿಶೇಷ ಕಾರ್ಯಕ್ರಮಗಳು ಹಾಗೂ ಆರ್ಥಿಕ ಚೈತನ್ಯದ ಉಪಯೋಜನೆಗಳು

೫. ಅಭಿವೃದ್ಧಿ ನಿಗಮದ ವಿಶೇಷ ಸೌಲಭ್ಯಗಳು.

ಮೂಲನಿವಾಸಿ ಬುಡಕಟ್ಟುಗಳ ಅಭಿವೃದ್ಧಿ ಕಲ್ಯಾಣ ಕಾರ್ಯಕ್ರಮಗಳು ಮತ್ತು ಅನುಷ್ಠಾನ:

ಭಾರತದಲ್ಲಿ ಶೇ. ೮೫% ಜನರಿಂದ ಕೂಡಿರುವ ಮೂಲನಿವಾಸಿ ಬಹುಸಂಖ್ಯಾತರಲ್ಲಿ ಶೇ. ೮.೦೮% ಪರಿಶಿಷ್ಟ ವರ್ಗದ ಜನರೆಂದು ಯೋಜನಾ ಇಲಾಖೆ ಗುರುತಿಸಿದೆ. ಶೇ.೮.೦೮% ಇರುವ ಪರಿಶಿಷ್ಟ ವರ್ಗದ ಜನರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಪ್ರಗತಿಗಾಗಿ ಆದ್ಯತೆಯ ಮೇರೆಗೆ ಸಂವಿಧಾನಬದ್ಧ ಯೋಜನೆಗಳು ೧೯೫೦ ರ ನಂತರದ ಪಂಚವಾರ್ಷಿಕ ಯೋಜನೆಗಳಿಂದಲೇ ಜಾರಿಗೆ ಬಂದಿರುವುದು ಕಾಣಬಹುದು.[೧] ಶೇಕಡಾವಾರು ೮.೦೮% ಇರುವ ಪರಿಶಿಷ್ಟ ವರ್ಗದ ಜನರ ಪಟ್ಟಿಯಲ್ಲಿನ ಅಂಕಿ, ಅಂಶಗಳು ಕಾಲದಿಂದ ಕಾಲಕ್ಕೆ ಅಲ್ಪ-ಸ್ವಲ್ಪ ಬದಲಾಗುತ್ತಲೆ ಬರುತ್ತಿದೆ. ಆದರಿಂದಲೇ ೧೯೫೦ ರ ನಂತರದ ಕೇಂದ್ರಸರ್ಕಾರ, ೧೯೫೬ ರಲ್ಲಿ ಈ ಸಮುದಾಯದ ಪಟ್ಟಿಯನ್ನು ಕ್ರೋಢೀಕರಿಸಿ ರಾಜ್ಯಗಳಿಗೆ ಮತ್ತು ಕೇಂದ್ರಕ್ಕೆ ಅನ್ವಯಿಸುವಂತೆ ಧೃಢೀಕರಿಸಿದೆ.

ಪ್ರತಿಯೊಂದು ಜನ ಸಮೂಹದ ವೈಶಿಷ್ಟತೆಗೆ ಅನುಗುಣವಾಗಿ ಅವರುಗಳ ಸರ್ವತೋಮುಖ ಅಭಿವೃದ್ಧಿಗಾಗಿ ಯೋಜನೆಗಳನ್ನು ಸಂವಿಧಾನ ತಜ್ಞರು ರೂಪಿಸಿದ್ದಾರೆ. ಜನಸಂಖ್ಯೆ ಆಧಾರದ ಮೇಲೆ ಆ ಜನರ ಸಾಮಾಜಿಕ, ಆರ್ಥಿಕ ಹಿತಕ್ಕೆ ಅನುಗುಣವಾಗಿ ವಿತರಣೆಯ ಪ್ರಕ್ರಿಯೆ ನಡೆಯಬೇಕೆಂದಿದ್ದಾರೆ. ಮೂಲನಿವಾಸಿ ಬುಡಕಟ್ಟು ಜನರ ಅಧ್ಯಯನದಲ್ಲಿ ತೊಡಗಿಸಿಕೊಂಡ ಸಂಶೋಧಕರ ನಿಲುವು ಈ ನಿಟ್ಟಿನಲ್ಲಿಬೇರೆಯಾಗಿವೆ. ಆಂಧ್ರಪ್ರದೇಶ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಿಗಳಾದ, ಬಿ.ಬಿ. ರಾವ್, ಎಂ. ನಾಯ್ಡು, ಬಿ.ವಿ.ಆರ್. ಪ್ರಸಾದ್ ಹಾಗೂ ಕಲ್ಕತ್ತ ವಿಶ್ವವಿದ್ಯಾಲಯದ ಪ್ರೊ. ಮಜುಂದಾರ್ ಮತ್ತು ಸಹಪಾಠಿಗಳು ತಳಿ ಉತ್ಪತ್ತಿಯಲ್ಲಿನ ಭಾರತದ ಜನಸಮುದಾಯಗಳಲ್ಲಿ ಮೂಲನಿವಾಸಿ ಬಹುಸಂಖ್ಯಾತ ಜನರ ಪ್ರಮಾಣವನ್ನು ಪಿರಿಮಿಡ್ಡಿನ ಆಕೃತಿಯಲ್ಲಿ; ಸಮುದಾಯಗಳಿಗೆ ಅನುಗುಣವಾಗಿ ಶೇಕಡವಾರು ಪ್ರಮಾಣವನ್ನು ಪ್ರತ್ಯೇಕ ಅಧ್ಯಯನದಿಂದ ಗುರುತಿಸಿದ್ದಾರೆ.



ಆಧಾರ : Who are we, The people of India:The Hindu

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಪರಿಶಿಷ್ಟ ವರ್ಗದ ಜನರು ದಾಸ್ಯ ವರ್ಗದವರಾಗಿದ್ದಾರೆ. ಇವರುಗಳು ವಿಚಿತ್ರ ವೃತ್ತಿಗಳನ್ನು ನಂಬಿ ಕಾಡು ಮೇಡುಗಳಲ್ಲಿ, ಅರಣ್ಯ, ಸಶ್ಮಾನ ಹಾಗೂ ಮರಗಳ ಕೆಳಗೆ ವಾಸಮಾಡುವ ಜನರಾಗಿದ್ದಾರೆ.[೨] ಬಹುಶಃ ಇವೆಲ್ಲವು ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಅನ್ವಯವಾಗುತ್ತವೆ. ಇಂತಹ ವ್ಯತ್ಯಾಸಗಳನ್ನು ಪರಿಗಣಿಸಿದ ಸಂವಿಧಾನ ತಜ್ಞರು ಮೂಲ ನಿವಾಸಿ ಬುಡಕಟ್ಟು ಸಮುದಾಯಗಳನ್ನು ಅವರ ವೈಶಿಷ್ಟತೆಯಂತೆ ಪ್ರತ್ಯೇಕವಾಗಿಯೇ ಬಿಂಬಿಸುತ್ತಿದ್ದಾರೆ.

ಯೋಜನಾ ಅವಧಿಯನ್ನು ಪ್ರಾರಂಭಿಸಿದ ನೆಹರುರವರು ಈ ಸಮುದಾಯಗಳ ಅಭಿವೃದ್ಧಿಗಾಗಿ, ಬಡತನ ನಿವಾರಣೆ ಸೂಕ್ತವೆನಿಸಿ ವಿಶೇಷ ಕಾಳಜಿವಹಿಸಿದರು. ಇತರೆ ಸಮುದಾಯಗಳಿಗಿಂತ ಭಿನ್ನವೆಂಬಂತೆ ಕಂಡದ್ದು ಇವರುಗಳ ಪರಿಸರ, ಜೀವನಕ್ರಮ, ಜನಸಂಖ್ಯೆ ಕುಟುಂಬಪದ್ಧತಿ, ಆಚರಣೆಗಳು ಮತ್ತು ಸಂಪ್ರದಾಯಗಳು ಇತರರ ಸಂಪರ್ಕದಿಂದ ದೂರವೇ ಉಳಿಸುವಂತೆ ಮಾಡಿತ್ತು. ಈ ಅಂಶಗಳನ್ನು ಮನಗಂಡ ನೆಹರೂ ರವರು ಇವರುಗಳಲ್ಲಿನ ಅತಿಕೆಳಸ್ಥರದ ಮತ್ತು ಹಿಂದುಳಿದ ಆರ್ಥಿಕ ಮತ್ತು ತಾಂತ್ರಿಕತೆಯಲ್ಲಿನ ಅಂಶವನ್ನು ಪರಿಗಣಿಸಿ ಇವರುಗಳ ಜೀವನ ಮಟ್ಟ ಸುಧಾರಿಸುವ ದೃಷ್ಟಿಯಿಂದ ಬಹುಶಿಸ್ತೀಯ ತಜ್ಞರ ಅಭಿಮತ, ಅಭಿಪ್ರಾಯ ಹಾಗೂ ಸಲಹೆ ಸೂಚನೆ ಪಡೆದು ಪಂಚವಾರ್ಷಿಕ ಯೋಜನೆಗಳಲ್ಲಿ ವಿಶೇಷ ಪ್ರಾತಿನಿಧ್ಯ ದೊರಕುವಂತೆ ಮಾಡಿದರು. ಹಂತ ಹಂತದ ಬೆಳವಣಿಗೆಗಳು ಅನೇಕ ಬದಲಾವಣೆಗಳನ್ನು ಮಾಡುತ್ತಿರುವ ಹಾಗೆಯೇ ೬ನೇ ಪಂಚವಾರ್ಷಿಕ ಯೋಜನೆಯ ವೇಳೆಗೆ ೭೫ ಬುಡಕಟ್ಟು ಸಮುದಾಯಗಳು ವಿವಿಧ ರಾಜ್ಯಗಳಲ್ಲಿ ವಿಶೇಷವಾಗಿ ಗುರುತಿಸಲಾಯಿತು. "೭೫ ಸಮುದಾಯಗಳನ್ನು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆಯಾಗಿ ತನ್ನ ಹೆಸರಿನಿಂದ ಗುರುತಿಸಿಕೊಂಡಿರುವುದು ತಿಳಿದು ಬರುತ್ತದೆ. ಉದಾ: ಮಹಾರಾಷ್ಟ್ರದಲ್ಲಿ ಮದಿಯಾಗೊಂಡ, ಕೋಲಮ್, ಕರ್ನಾಟಕ ರಾಜ್ಯದಲ್ಲಿ ಜೇನುಕುರುಬ ಮತ್ತು ಕೊರಗರು".[೩] ಇವರುಗಳ ಅಭಿವೃದ್ಧಿಗಾಗಿ ಬುಡಕಟ್ಟು ಸಮುದಾಯಗಳಿಗಿರುವ ಯೋಜನೆಗಳು ಅಲ್ಲದೇ ವಿಶೇಷ ಯೋಜನೆಗಳ ನೆರವು ಉಂಟು.

ಸಂವಿಧಾನಾತ್ಮಕ ಬೆಳವಣಿಗೆಗಳು ಈ ಸಮುದಾಯಗಳ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವಿಶೇಷ ಚೌಕಟ್ಟಿನಲ್ಲಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಅಭಿವೃದ್ಧಿಯ ದೃಷ್ಟಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಮೂಲಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿರುವುದು ಕಂಡುಬರುತ್ತದೆ. ಕರ್ನಾಟಕ ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವನ್ನು ಸ್ಥಾಪಿಸಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ಒದಗಿಸುತ್ತಿದೆ. ಮೂಲನಿವಾಸಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ೫ ಸುಸಂಘಟಿತ ಗಿರಿಜನ ಅಭಿವೃದ್ಧಿ ಯೋಜನಾ ಘಟಕಗಳನ್ನು ಪ್ರಾರಂಭಿಸಲಾಗಿದೆ. ಸರ್ಕಾರವು ಸಮುದಾಯಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಆಡಳಿತದ ಹಿತದೃಷ್ಟಿಯಿಂದ ಹಾಗೂ ಸಮುದಾಯಗಳ

ಜನರ ಪ್ರಗತಿಗಾಗಿ ಜಿಲ್ಲಾ ಮಟ್ಟದ ಕೇಂದ್ರವನ್ನು ಮೈಸೂರು, ಚಾಮರಾಜನಗರ, ದ.ಕನ್ನಡ, ಉಡುಪಿ, ಕೊಡಗು ಜಿಲ್ಲೆಗಳಲ್ಲಿ ಪ್ರಾರಂಭಿಸಿದೆ. ಇಲ್ಲಿ ಯೋಜನಾ ಸಮನ್ವಯಾಧಿಕಾರಿಗಳು ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಗಿರಿಜನ ಉಪಯೋಜನೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಅಲ್ಲದೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಮುದಾಯಗಳ ಅಭಿವೃದ್ಧಿಗಾಗಿ ೫ ಐ.ಟಿ.ಡಿ.ಪಿ. ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಬುಡಕಟ್ಟು ಸಂಶೋಧನಾಕೇಂದ್ರಗಳು ಅಂಕಿಅಂಶಗಳ ಸಂಗ್ರಹಣೆ, ಯೋಜನೆಯ ಮೌಲ್ಯ ಮಾಪನ ಮತ್ತು ಸಮುದಾಯಗಳ ಜನರಿಗೆ ತರಬೇತಿ ಕಾರ್ಯಗಾರ, ಕಮ್ಮಟಗಳನ್ನು ನಡೆಸುತ್ತಿದೆ. ಇದಕ್ಕಾಗಿ ೨೦೦೧-೦೨ನೇ ಸಾಲಿನಲ್ಲಿ ಕೇಂದ್ರಸರ್ಕಾರವು ೨೨ ಲಕ್ಷಗಳನ್ನು ರಾಜ್ಯಗಳಿಗೆ ಬಿಡುಗಡೆ ಮಾಡಿದೆ. ಮೊದಲನೆ ಪಂಚವಾರ್ಷಿಕ ಯೋಜನೆಯಿಂದ – ೧೧ನೇ ಪಂಚವಾರ್ಷಿಕ ಯೋಜನೆಯವರೆಗೆ ಹಣಕಾಸು, ಅನುದಾನದ ನೆರವು ಹಂತಹಂತವಾಗಿ ಏರುತ್ತಾ ಬರುತ್ತಿದೆ. ಜೊತೆಗೆ ಸರ್ಕಾರೇತರ ಸ್ವಯಂ ಸಂಸ್ಥೆಗಳು ಮೂಲನಿವಾಸಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ.

ಅಭಿವೃದ್ಧಿಗೆ ಸಂಬಂಧಿಸಿದ ಅಧ್ಯಯನದ ಸಂಶೋಧನೆ, ಸಂವಾದ, ಬೋಧನೆಗಳೆಲ್ಲಾ ಸಂಪ್ರದಾಯಿಕ ಅರ್ಥಶಾಸ್ತ್ರದ ಚೌಕಟ್ಟಿನಲ್ಲೇ ನಡೆಯುತ್ತಿರುವ ವಾಸ್ತವ ನಮ್ಮ ಮುಂದಿದೆ. ಬಡತನ ಹಸಿವು ನಿರುದ್ಯೋಗಗಳೆಲ್ಲಾ; ಅರ್ಥಶಾಸ್ತ್ರದ ನಿಯಮ, ರೇಖಾಚಿತ್ರ, ಸೂತ್ರ ಸಮೀಕರಣಗಳಲ್ಲಿಯೇ ವಿಶ್ಲೇಷಣೆಗೆ ತುತ್ತಾಗಿವೆ. ಅಭಿವೃದ್ಧಿಯನ್ನು ಹೀಗೆ ಅರ್ಥಶಾಸ್ತ್ರದ ಚೌಕಟ್ಟಿಗೆ ಸೀಮಿತಗೊಳಿಸುವುದರ ಬಗ್ಗೆ ಸಮಾಜ ವಿಜ್ಞಾನಿಗಳಲ್ಲಿ ಆಕ್ಷೇಪವಿದೆ. ಆದ್ದರಿಂದಲೇ ಅಭಿವೃದ್ಧಿ ಎಂದರೆ ಸರ್ವತೋಮುಖ ಪ್ರಗತಿ ಎಂದು ವಿವರಿಸಬಹುದು. ಅದರಂತೆ ಕಲ್ಯಾಣ ಅಂದರೂ ಹೆಚ್ಚು ಕಡಿಮೆ ಅದೇ ಪರ್ಯಾಯ ಅರ್ಥಕೊಟ್ಟರೂ, ಅದು ಅನುಷ್ಠಾನಕ್ಕೆ ಹೆಚ್ಚು ಸೂಕ್ತವಾಗಬಹುದು. ಹೀಗಾಗಿ ಮೂಲನಿವಾಸಿ ಬುಡಕಟ್ಟುಗಳ ಅಭಿವೃದ್ಧಿ ಎಂದಲ್ಲಿ ಒಂದು ರೀತಿಯ ತಾತ್ವಿಕಥೆ ಆದರೆ, ಕಲ್ಯಾಣವೊಂದು ಅನುಷ್ಠಾನಿಕ ವೈಕಲ್ಪವೆಂದು ವಿವರಿಸಬಹುದು. ಈ ಚಿಂತನೆಯನ್ನು ಗಮನಿಸಿ, ಇಲ್ಲಿನ ಎರಡು ಸಮುದಾಯಗಳಾದ ಜೇನುಕುರುಬ ಮತ್ತು ಕೊರಗರನ್ನು ಅನುಲಕ್ಷಿಸಿ ಇವರುಗಳಿಗೆ ಸಿಕ್ಕ ಕಲ್ಯಾಣ ಕಾರ್ಯಕ್ರಮಗಳ ಸಾಫಲ್ಯ ಮತ್ತು ವೈಫಲ್ಯಗಳನ್ನು ತಾಲ್ಲೂಕುವಾರು ಮಾಹಿತಿಯೊಂದಿಗೆ ಪ್ರಸ್ತುತಪಡಿಸಲಾಗಿದೆ.

ಅಭಿವೃದ್ಧಿ ಎಂಬ ಪ್ರಕ್ರಿಯೆ ಕಳೆದ ೧೦೦ ವರ್ಷಗಳ ನಿರ್ವಚನದಲ್ಲಿ ವಿವಿಧ ಬದಲಾವಣೆಯ ಸಿದ್ಧಾಂತಗಳನ್ನು ಸಮಾಜ ವಿಜ್ಞಾನಗಳ ಜ್ಞಾನ ಶಿಸ್ತುಗಳು ಪರಿಬಾವಿಸಿಕೊಂಡು ಬಂದಿದ್ದಾರೆ. ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳು ಕಾಲದಿಂದ ಕಾಲಕ್ಕೆ ಪರಿಸರದಿಂದ ಪರಿಸರಕ್ಕೆ ವೈವಿಧ್ಯಮಯವಾದ ಸಿದ್ಧಾಂತಗಳಲ್ಲಿ ರೂಪುಗೊಂಡಿರುವುದು ಕಾಣಬಹುದು. ಸಮಾಜವಿಜ್ಞಾನಿಗಳು ಅಭಿವೃದ್ಧಿಯ ಕಲ್ಪನೆಯನ್ನು ಅತ್ಯಂತ ಸೀಮಿತ ನೆಲೆಯಿಂದ ವಿಶಾಲವಾದ ವ್ಯಾಪ್ತಿಯಲ್ಲಿ ನೆಲೆಗೊಳಿಸುತ್ತಿರುವುದು ಕಾಣಬರುತ್ತದೆ. ಅಭಿವೃದ್ಧಿ ಕ್ರಿಯೆಯಲ್ಲಿ

ಆರ್ಥಿಕ ಚಲಕಗಳ ಪಾತ್ರ ಮಹತ್ವವಾದದ್ದು ನಿಜ. ಆದರೆ ಅಭಿವೃದ್ಧಿಗೆ ಅದಷ್ಟೇ ಸಾಕಾಗುವುದಿಲ್ಲ. ಆರ್ಥಿಕೇತರ ಅಂಶಗಳು ಸಹ ಅಭಿವೃದ್ಧಿಯ ಮೇಲೆ ನಿರ್ಣಾಯಕ ಪ್ರಭಾವ ಬೀರಬಲ್ಲವಾಗಿವೆ. ಬದುಕಿನ ಧೋರಣೆ, ದುಡಿಮೆ, ಅಧಿಕಾರ, ನೌಕರಶಾಹಿ, ಆಡಳಿತವ್ಯವಸ್ಥೆ, ಕುಲಸಂಬಂಧಿ ಅಂಶಗಳು, ಸಾಮಾಜಿಕ ವ್ಯವಸ್ಥೆ, ನ್ಯಾಯ ವ್ಯವಸ್ಥೆ, ಭೂ ಮಾಲಿಕತ್ವ, ಮೌಲ್ಯವ್ಯವಸ್ಥೆ ಹಾಗೂ ಕ್ರಿಯಾಶೀಲ ಪ್ರಜ್ಞೆ ಮುಂತಾದ ಸಾಮಾಜಿಕ-ಸಾಂಸ್ಕೃತಿಕ ಅಂಶಗಳೂ ಅಭಿವೃದ್ಧಿಯನ್ನು ನಿರ್ಧರಿಸುವ ಚಲಕಗಳಾಗಿದ್ದಾವೆ.[೪] ಅಭಿವೃದ್ಧಿಯನ್ನು ಮೊದಲಿಗೆ ರಾಷ್ಟ್ರೀಯ ಉತ್ಪನ್ನದಲ್ಲಿ ಗುರುತಿಸಲಾಗುತ್ತಿತ್ತು. ೧೯೭೦ ರ ದಶಕದಲ್ಲಿ ಜನರ ಮೂಲ ಅಗತ್ಯಗಳಾದ ಶಿಕ್ಷಣ, ಆರೋಗ್ಯ, ಪಡಿತರವ್ಯವಸ್ಥೆ, ನೀರು, ವಿದ್ಯುತ್‌ಶಕ್ತಿ ಹಾಗೂ ಕುಟುಂಬಯೋಜನೆ ಮುಂತಾದ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವ ಪರಿಯೇ ಅಭಿವೃದ್ಧಿ ಎಂದು ತಿಳಿದು ಗುಣಾತ್ಮಕ ವಿಚಾರಗಳಿಗೆ ಗಮನಹರಿಸಲಾಯಿತು.

೧೯೮೦ ರ ದಶಕದಲ್ಲಿ ಸಾಮಾಜಿಕ ನ್ಯಾಯ ದೂರವಾಯಿತು. ಅಲ್ಲಿಂದಲೇ ತಳಮಟ್ಟದ ಜನರ ಸಹಭಾಗಿತ್ವದ ವಿಕೇಂದ್ರೀಕೃತವಾದ ಅಭಿವೃದ್ಧಿ ಕಲ್ಪನೆ ರೂಪುಗೊಂಡು ಬಂದಿದೆ. ಈ ಚಿಂತನೆಯ ಕ್ರಮವೇ ಮಾನವಾಭಿವೃದ್ಧಿ ಎಂಬ ಚಿಂತನೆಯ ಕ್ರಮಕ್ಕೆ ದಾರಿಮಾಡಿಕೊಟ್ಟಿದೆ. ಈ ಬಗ್ಗೆ ಸಾಕಷ್ಟು ವಿವರವಾದ ಸಾಹಿತ್ಯ ಕೂಡ ಅರ್ಥಶಾಸ್ತ್ರದಲ್ಲಿ ಲಭ್ಯವಿದೆ. ಮಾನವಾಭಿವೃದ್ಧಿ ವಿಷಯಕ್ಕೆ ಸಂಬಂಧಿಸಿದಂತೆ ನೋಬೆಲ್ ಪ್ರಶಸ್ತಿ ವಿಜೇತರಾದ ಅರ್ಥ ಶಾಸ್ತ್ರಜ್ಞ ಅಮಾತ್ಯ ಸೇನ್‌ರವರು ಮಾನವನ ಸಾಮಾರ್ಥ್ಯ ಹೆಚ್ಚಿಸುವಂತಹ ಗುರಿಗೆ ಆದ್ಯತೆ ನೀಡಿದ್ದಾರೆ. ಸೇನ್‌ರವರು ಉನ್ನತ ಜೀವನ ಮಟ್ಟ, ಆರೋಗ್ಯ, ಅರಿವು, ಶಿಕ್ಷಣ ಸಾಮುದಾಯಿಕ ಜೀವನ ಮೂಲಭೂತ ಸೌಲಭ್ಯಗಳ ಪರಿಣಾಮಕಾರಿ ಪಾತ್ರದ ಭಾಗವಹಿಸುವಿಕೆಯ ಮೂಲಕ ಮಾನವನ ಒಳಿತಿನ ಗುರಿ ನಿರ್ದೇಶಿಸಿದ್ದಾರೆ. ಹೀಗಾಗಿ ಅಮಾತ್ಯ ಸೇನ್‌ರವರು ಹೇಳುವಂತೆ “ಸಮಾಜದ ಸಮುದಾಯಗಳ ಜೀವನ ಮಟ್ಟವನ್ನು ಒಟ್ಟು ರಾಷ್ಟ್ರೀಯ ಉತ್ಪನ್ನ ಮತ್ತು ನಿರ್ದಿಷ್ಟ ಸರಕುಗಳ ಪೂರೈಕೆಯಿಂದ ಅಳೆಯುವುದರ ಬದಲು ಜನರ ಸಾಮರ್ಥ್ಯದಿಂದ ಅಳೆಯಬೇಕು. ಅಂದರೆ ಒಬ್ಬ ವ್ಯಕ್ತಿ ಏನನ್ನು ಮಾಡಬಲ್ಲ ಅಥವಾ ಮಾಡಲಾರ, ಮಾಡಬಹುದು ಮತ್ತು ಮಾಡಬಾರದು ಎಂಬುದು ಮುಖ್ಯವಾಗುತ್ತದೆ ಎನ್ನುತ್ತಾರೆ.”[೫] ಇಂತಹ ಕ್ರಮದಲ್ಲಿನ ಮೂಲಾಂಶಗಳನ್ನು ಆಧರಿಸಿ ಈ ಅಧ್ಯಯನದ ಅಭಿವೃದ್ಧಿ ಕ್ರಮದಲ್ಲಿ ಪ್ರಸ್ತಾಪಿಸಲಾಗಿದೆ.

ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಬಗ್ಗೆ ಸೂಕ್ತ ಮಾಹಿತಿ ಸಂಗ್ರಹಿಸಿ ವಿದ್ಯಾರ್ಥಿ ಮತ್ತು ರಾಯ್‌ರವರು ವಿವರಣೆಗಳನ್ನು ೧೯೭೭ರಲ್ಲಿ ನೀಡಿದ್ದಾರೆ. ಸ್ವತಂತ್ರ ನಂತರದ ಕ್ರಮ ಮತ್ತು ಸ್ವಾತಂತ್ರ್ಯದ ಪೂರ್ವದಲ್ಲಿನ ಬಹುಮುಖ್ಯ ಬೆಳವಣಿಗೆ ಅನೇಕ ತರಹದ ಕಾನೂನುಗಳೂ, ಬುಡಕಟ್ಟುಗಳ ಹಿತರಕ್ಷಣೆಯಲ್ಲಿ ಬೆಳಕಿಗೆ ಬಂದವು. ಇಲ್ಲಿಯೂ ವೈರುದ್ಧಾತ್ಮಕ ವಿಚಾರವಂತರು ಬುಡಕಟ್ಟುಗಳ ಅಭಿವೃದ್ಧಿಯ ವಕ್ತಾರರಾದರು. ವೆರಿಯರ್

ಎಲ್ವಿನ್ ಮತ್ತು ಎ.ಬಿ. ಠಕ್ಕರ್‌ಬಾಪ ರವರು ನೆನಪಿನಲ್ಲಿ ಉಳಿಯುತ್ತಾರೆ. ಕಳೆದ ೫೦ ವರ್ಷಗಳಲ್ಲಿ ದೇಶದ ಸುಮಾರು ೧ ಕೋಟಿ ಆದಿವಾಸಿಗಳನ್ನು ಸ್ಥಳಾಂತರಿಸಲಾಗಿದೆ.[೬] ಇದರಲ್ಲಿ ೧೯ ಲಕ್ಷ ಆದಿವಾಸಿಗಳಿಗೆ ಪುನರ್‌ವಸತಿ ಕಲ್ಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಉದ್ಯಾನ, ಅಣೆಕಟ್ಟು, ಮತ್ತು ಗಣಿಗಾರಿಕೆ ಹೆಸರಿನಲ್ಲಿ ಈ ವರೆಗೆ ೧೩ ಸಾವಿರ ಆದಿವಾಸಿ ಬುಡಕಟ್ಟು ಸಮುದಾಯ (ಸುಮಾರು ೭೫ ಸಾವಿರಕ್ಕೂ ಹೆಚ್ಚು ಜನರನ್ನು) ಗಳನ್ನು ಕಾಡಿನಿಂದ ಹೊರಗಟ್ಟಲಾಗಿದೆ. ಆದರಲ್ಲಿ ಶೇ. ೨೦% ಕುಟುಂಬಗಳಿಗೆ ಜನತಾಮನೆಗಳು ಹಾಗೂ ೧ರಿಂದ ೨ ಎಕರೆ ಭೂಮಿ ನೀಡಿ ಪುನರ್‌ವಸತಿ ಕಲ್ಪಿಸಲಾಗಿದೆ.

“ಅಲ್ಲದೆ ರಾಜ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಆದಿವಾಸಿ ಹಳ್ಳಿಗಳಿವೆ. ಈ ಆದಿವಾಸಿಗಳಿಗೆ ಸುಮಾರು ೫೦ ಸಾವಿರ ವರ್ಷದ ಇತಿಹಾಸವಿರುವ ಅರಣ್ಯವೇ ಪ್ರಪಂಚವಾಗಿದೆ”[೭]. ೨೦ನೇ ಶತಮಾನದ ನಂತರದ ದಿನಗಳಲ್ಲಿಯೂ ಅತ್ಯಂತ ಕರಾಳ ದಿನಗಳನ್ನು ಕಂಡ ಮೂಲವಾಸಿ ಬುಡಕಟ್ಟುಗಳು ಈಗ ಕೊಂಚ ನಿಟ್ಟುಸಿರು ಬಿಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆಯಾದರೂ ಸಂಪೂರ್ಣ ಸಂತೃಪ್ತಿ ಜೀವನದ ಛಾಯೆ ಎಲ್ಲೂ ಕಂಡು ಬರುವುದಿಲ್ಲ.

ಜೇನುಕುರುಬ ಮತ್ತು ಕೊರಗರು ವಿರಳಸಂಖ್ಯೆಯ ಅಲ್ಲಲ್ಲಿ ಸಣ್ಣ, ಸಣ್ಣ ಪಂಗಡಗಳಲ್ಲಿ ವಿಸರಣಗೊಂಡು ಸಾಮುದಾಯಿಕ ಜೀವನ ರೂಪಿಸಿಕೊಂಡವರು. ಕಳೆದ ೨೫-೩೦ ವರ್ಷಗಳಲ್ಲಿ ಈ ಜನರ ಹೋರಾಟ, ಸರ್ಕಾರದ ನಿರಂತರ ಪ್ರಯತ್ನದಿಂದ ಬದಲಾವಣೆಯತ್ತ ಮುಖಮಾಡಿದ್ದಾರೆ. ಸುಮಾರು ೨೫,೪೮೬ ಜೇನುಕುರುಬ ಜನರು ೭ ತಾಲ್ಲೂಕುಗಳಲ್ಲಿ ನೆಲೆಸಿದ್ದಾರೆ. ಕೊರಗರು ಸುಮಾರು ೧೨,೫೦೬ ಜನರು ೮ ತಾಲ್ಲೂಕು ವ್ಯಾಪ್ತಿಯಲ್ಲಿ ಅತಿ ಸಣ್ಣದಾಗಿ ಗುಂಪುಜೀವನ ಮಾಡುತ್ತಿದ್ದಾರೆ. ಅತಿ ಕಡಿಮೆ ಜನಸಂಖ್ಯೆಯಿಂದಿರುವ ಮೂಲನಿವಾಸಿ ಬುಡಕಟ್ಟುಗಳು ಇತರ ಬುಡಕಟ್ಟು ಜನರಿರುವ ಪ್ರದೇಶಗಳಲ್ಲಿ ಮತ್ತು ಸಾಮಾನ್ಯ ಜನರೊಂದಿಗೆ ಕಲೆತು ಜೀವಿಸುತ್ತಿದ್ದಾರೆ. ವಿಪರೀತ ಬಡತನದಿಂದ ಕೂಡಿರುವ ಸಮುದಾಯಗಳು ಮೂಲಭೂತ ಅಭಿವೃದ್ಧಿಗಾಗಿ ಪರಿತಪಿಸುತ್ತಿವೆ. ಭಾರತ ಸರ್ಕಾರವು ಸಹ ಈ ಸಮುದಾಯಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಿಸುತ್ತಲೇ ನಡೆದಿರುವುದು ಹಲವಾರು ಇಲಾಖೆಗಳ ಕಾರ್ಯವೈಖರಿಯಿಂದ ತಿಳಿದು ಬರುತ್ತದೆ.

ಎರಡು ಮೂಲನಿವಾಸಿ ಬುಡಕಟ್ಟು ಸಮುದಾಯಗಳಾದರೂ ಅವರುಗಳ ಪರಿಸರ, ವಾಸಸ್ಥಾನ, ಜೀವನಕ್ರಮ ಮತ್ತು ಸಮಸ್ಯೆಗಳು ಆಯಾ ಪರಿಸರ ಕ್ರಮದಂತೆ ಬೇರೆ ಬೇರೆಯಾಗಿರುವುದು ಸಾಮಾನ್ಯವಾಗಿದೆ. ನಗರ ಮತ್ತು ಗ್ರಾಮ ಸಂಸ್ಕೃತಿಯ ನಡುವೆ ಹಂಚಿಕೆಯಾಗಿರುವ ವಾಸಸ್ಥಾನಗಳು ಕೆಲವೊಂದು ವಿಷಯಗಳಲ್ಲಿ ಒಂದೇ ರೀತಿಯಾಗಿರುವುವು. ಉದಾ: ಕೊರಗರು ನಗರ ಜೀವನ ಕ್ರಮದಕಡೆಗೆ ಮುಖ ಮಾಡಿದ್ದಲ್ಲಿ, ಜೇನುಕುರುಬರು ಗ್ರಾಮ ಜೀವನಕ್ಕೆ ಹತ್ತಿರವಾಗುತ್ತಿದ್ದಾರೆ. ಸೀಮಿತವಾದ ಜನಸಂಖ್ಯೆಯಿಂದ ಕೂಡಿರುವ

ಮೂಲನಿವಾಸಿ ಬುಡಕಟ್ಟುಗಳಿಗೆ ಕನಿಷ್ಠ ಅವಶ್ಯಕತೆಗಳಾದ ಆಹಾರ, ವಸತಿ, ಬಟ್ಟೆ, ವಿದ್ಯೆ ಹಾಗೂ ಆರೋಗ್ಯ, ಸೌಲಭ್ಯಗಳನ್ನು ಪೂರೈಸಲು ಬೇಕಾದ ಮತ್ತು ಸರಕು-ಸೇವೆಗಳನ್ನು ಉತ್ಪಾದಿಸಲು ಸಾಕಾಗುವಷ್ಟು ಪ್ರಮುಖ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ಜಲ, ಅರಣ್ಯ ಸಮುದಾಯಗಳು ನೆಲೆ ನಿಂತ ಪರಿಸರದಲ್ಲಿಯೇ ಲಭ್ಯವಿದೆ. ಈ ಬಗ್ಗೆ ಆಧ್ಯಾಯ ೨ರಲ್ಲಿ ಅಂಕಿ ಅಂಶಗಳನ್ನು ನೀಡಲಾಗಿದೆ. ಆದರೆ ಅವಶ್ಯಕವಾಗಿ ಪೂರೈಕೆಮಾಡುವುದು ವ್ಯವಸ್ಥಿತವಾಗಿ ನಡೆಯುತ್ತಿಲ್ಲ ಎನ್ನಬಹುದು. ಹೀಗಾಗಿ ಸ್ವತಂತ್ರ ಕಳೆದು ೫೯ ವರ್ಷಗಳಾದರೂ ಸಮುದಾಯಗಳು ದಾಸ್ಯದಿಂದ ಮುಕ್ತಿ ಪಡೆದಿಲ್ಲ ಎನ್ನಬಹುದು.

ಇಲ್ಲಿ ಸಮುದಾಯಗಳ ಅಭಿವೃದ್ಧಿಯೆಂದರೆ ಜನರು ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳುವುದು. ಅಂದರೆ ಸಂಪತ್ತನ್ನು ಸಂಗ್ರಹಿಸಿಕೊಳ್ಳುವುದು ಎಂದು ಅರ್ಥವಲ್ಲ. ದೀರ್ಘಕಾಲದ ಬದುಕುವ ಅವಕಾಶಗಳನ್ನು ವರ್ಧಿಸಿಕೊಳ್ಳುವುದು ಎಂದು ಅರ್ಥವೇ ವಿನಾ ಅಪಾರ ವರಮಾನಗಳಿಸುವುದು ಎಂದು ಅರ್ಥವಲ್ಲ. ಈ ಜನರು ನೆಲೆನಿಂತ ಪರಿಸರದಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ ಬದುಕನ್ನು ಉತ್ತಮ ಪಡಿಸಿಕೊಳ್ಳುವ ಅವಕಾಶಗಳ ವಿಸ್ತರಣೆಗೆ ಹರಿದು ಬರುವ ಅವಕಾಶಗಳಲ್ಲಿ ತನಗೆ ಮುಖ್ಯವೆನಿಸಿದ್ದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಅಭಿವೃದ್ಧಿಯ ದೃಷ್ಟಿಕೋನವಾಗಿದೆ. ಸಾರಿಗೆ ಸಂಪರ್ಕ, ಆಹಾರ, ವಸತಿ, ಉದ್ಯೋಗಾವಕಾಶಗಳು, ಸಾಮುದಾಯಿಕ ಕೊಡು-ಕೊಳ್ಳುವ ಪದ್ಧತಿ, ಬಡತನ ಹಾಗೂ ಇತರ ಜನರೊಂದಿಗಿನ ಸಂಬಂಧ ಬಂದಲ್ಲಿ ಅವರ ಶೋಷಣೆ ಇತ್ಯಾಧಿಗಳು ಪ್ರಮುಖ ಅಂಶವಾಗಿವೆ. ಆದ ಕಾರಣ ಸಮುದಾಯಗಳ ಅಭಿವೃದ್ಧಿಯಲ್ಲಿ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ವಿಶಾಲ ಅರ್ಥದಲ್ಲಿ ಜನರ ಜೀವನಕ್ರಮದಲ್ಲಿನ ಬಹು ಮುಖ್ಯ ಅಂಶಗಳ ಪರಿಗಣನೆಯ ಆಧಾರಿತವಾದದ್ದು. ಕಾರ್ಲ್‌ಮಾರ್ಕ್ಸ್‌ರವರು ಪರಿಭಾವಿಸಿಕೊಂಡು ಬಂದಂತಹ ಅನ್ಯ ಜ್ಞಾನ ಶಿಸ್ತುಗಳ ಮೂಲಕ ಆರ್ಥಿಕ ಸಮಸ್ಯೆಗಳನ್ನು ನೋಡುವ ವಿಧಾನದ, ಕ್ರಮದಂತೆ ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿನ ಅಭಿವೃದ್ಧಿ ಯೋಜನೆಗಳ ಸಾಫಲ್ಯ ವೈಫಲ್ಯವನ್ನು ಪ್ರಸ್ತುತ ೩ ಭಾಗಗಳಲ್ಲಿ ವಿಶ್ಲೇಷಿಸಲಾಗಿದೆ.

೧.ಸಮುದಾಯಗಳ ಅಭಿವೃದ್ಧಿಗಿರುವ ಮಾರ್ಗಗಳು

ಮೂಲನಿವಾಸಿ ಬುಡಕಟ್ಟುಗಳ ತ್ವರಿತ ಅಭಿವೃದ್ಧಿಗಾಗಿ ಸ್ವತಂತ್ರ ನಂತರದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಸ್ಥಳೀಯ ಸರ್ಕಾರಗಳು ತುಂಬಾ ಪ್ರಾಮುಖ್ಯತೆ ಕೊಟ್ಟಿರುವುದನ್ನು ೨ನೇ ಪಂಚವಾರ್ಷಿಕ ಯೋಜನೆಗಳಿಂದ ತಿಳಿಯಬಹುದು. ಹೆಚ್ಚಾದ ಜನವಸತಿ ಪ್ರದೇಶಗಳಲ್ಲಿ ಕಲ್ಯಾಣಕಾರ್ಯಕ್ರಮಗಳಿಗಾಗಿ ವಿಶೇಷ ಬ್ಲಾಕ್‌ಗಳನ್ನು ತೆರೆದು ಅಭಿವೃದ್ಧಿಯ ಮಾರ್ಗದೆಡೆಗೆ ಕರೆತರಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ವಿಶೇಷ ಅಭಿವೃದ್ಧಿ ವಿಭಾಗಗಳನ್ನು ಪರಿಚಯಿಸಲಾಗಿದೆ. ಬುಡಕಟ್ಟು ಜನರಿರುವ ಪ್ರದೇಶಗಳಲ್ಲಿ ವಿಶೇಷ ಆಸಕ್ತಿವಹಿಸಿ ಉಪವಿಭಾಗಗಳನ್ನು ಆರಂಭಿಸಲಾಗಿದೆ. ಕೇಂದ್ರ ಸರ್ಕಾರದ ಧನಸಹಾಯ ೧ನೇ ಪಂಚವಾರ್ಷಿಕ ಯೋಜನೆಯಿಂದಲೇ ಪ್ರಾರಂಭಗೊಂಡು, ಪ್ರಸ್ತುತದಲ್ಲಿಯ ೧೧ನೇ ಯೋಜನೆಯವರೆಗೆ ಹಣಕಾಸಿನ ನೆರವು ಏರಿಕೆಯಾಗುತ್ತಲೇ ಇದೆ.[೮]

ಸಂಮ್ಮಿಳಿತ ಮಾರ್ಗ : ಅಭಿವೃದ್ಧಿ ಯೋಜನೆಗಳು ಸಫಲವಾಗಬೇಕಿದ್ದರೆ ರಾಜಕೀಯ, ಆಡಳಿತಾತ್ಮಕ, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕರ್ತರು ಒಟ್ಟಾರೆ ಸೇರಿ ಮಾನವಶಾಸ್ತ್ರಜ್ಞರ ಅನುಭವ ಹಾಗೂ ಅವರ ಜೊತೆಗೂಡಿ ಕಾರ್ಯಕ್ರಮ ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು ಒಂದು ಮಾರ್ಗ.

ಪ್ರಾದೇಶಿಕ ಅಭಿವೃದ್ಧಿ ಮಾರ್ಗ: ಜನರಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಯೋಜನೆಗಳು ಪ್ರಾದೇಶಿಕತೆ ಅನುಸರಿಸುವುದು. ಇದರಿಂದ ಬುಡಕಟ್ಟು ಸಮುದಾಯಗಳಿರುವ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ ಗುರುತಿಸಬಹುದು. ಜನಸಂಖ್ಯೆಗೆ ಅನುಗುಣವಾಗಿ ವರ್ಗೀಕರಿಸಿ ಆಯಾ ಪರಿಸರಕ್ಕೆ ತಕ್ಕಂತೆ ಅಭಿವೃದ್ಧಿ ಕಾರ್ಯ ರೂಪಿಸಬಹುದು.

ಅ) ಹೆಚ್ಚು ಜನರಿರುವ ಪ್ರದೇಶ (ಭೌಗೋಳಿಕ ಪ್ರದೇಶವನ್ನೊಳಗೊಂಡಂತೆ)

ಆ) ಮಧ್ಯವರ್ಗೀಯ ಪ್ರದೇಶ (೫ ಲಕ್ಷ ಜನಸಂಖ್ಯೆ)

ಇ) ಅತಿ ಚಿಕ್ಕ ಪ್ರದೇಶ (೧೦,೦೦೦ ಜನಸಂಖ್ಯೆಗೆ ಅನುಗುಣವಾಗಿ)

ಈ) ಚಿಕ್ಕ ಚಿಕ್ಕ ದೂರ ದೂರ ಹರಡಿರುವ ಬುಡಕಟ್ಟು ಜನರಿರುವ ಭಾಗ

ಈ ಕ್ರಮದಲ್ಲಿನ ಅಭಿವೃದ್ಧಿಗೆ ಪ್ರಾಮುಖ್ಯತೆ ಕೊಡುವುದು ಅವಶ್ಯಕವಾಗಿದೆ.

ಒಂದೇ ರೀತಿಯ ಆಡಳಿತಾತ್ಮಕ ಮಾರ್ಗ : ಒಬ್ಬರೇ ಅಧಿಕಾರಿ ಅಧೀನದಲ್ಲಿ ಕಾರ್ಯಕ್ರಮಗಳ ಅನುಷ್ಠಾನದ ಹೊಣೆ ಇದ್ದಲ್ಲಿ ಆಡಳಿತಾತ್ಮಕವಾಗಿ ಯಶಸ್ವಿಯಾಗಲು ಸಾಧ್ಯ. ಬುಡಕಟ್ಟು ಸಮುದಾಯದ ಸಂಸ್ಕೃತಿ ಬಗ್ಗೆ ತಿಳುವಳಿಕೆ ಇರುವ ತಜ್ಞರನ್ನು ಸಹಾಯಕ ಅಧಿಕಾರಿಯಾಗಿ ನೇಮಿಸಿಕೊಂಡು ಆಡಳಿತಾತ್ಮಕ ನಿರ್ವಹಣೆ ನಿರ್ವಹಿಸುವುದು ಮುಖ್ಯವಾಗಿದೆ.

ಚಿಕ್ಕ ಚಿಕ್ಕ ಜಿಲ್ಲೆಗಳ ಅಭಿವೃದ್ಧಿ ಮಾರ್ಗ : ದೊಡ್ಡ ಜಿಲ್ಲೆಗಳನ್ನು ಚಿಕ್ಕ ಚಿಕ್ಕ ಬುಡಕಟ್ಟು ಅಭಿವೃದ್ಧಿ ಬ್ಲಾಕ್‌ಗಳಾಗಿ ಪರಿವರ್ತಿಸಿದಲ್ಲಿ, ಸಾಕಷ್ಟು ಅಭಿವೃದ್ಧಿ ಕಾರ್ಯ ಅನುಷ್ಠಾನಗೊಳಿಸಲು ಅನುಕೂಲವಾಗುತ್ತದೆ.

ಬುಡಕಟ್ಟು ಜನಸಮುದಾಯಗಳ ಅಭಿವೃದ್ಧಿಗಾಗಿ ಬೇರೆಯ ಕಾರ್ಯಕ್ರಮಗಳನ್ನು ರೂಪಿಸುವುದು: ಸಮುದಾಯಗಳ ಪರಿಸರ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸುಧಾರಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇತರ ಜನರೊಂದಿಗೆ ಹೊಂದಾಣಿಕೆಯಾಗದಂತೆ ಬೇರೆಯೇ ರಚಿಸುವುದು.[8]

ಈ ಎಲ್ಲಾ ಚಿಂತನೆಗಳು ಹಾಗೂ ಕ್ರಮಗಳಿಗೆ ಅನುಗುಣವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕಾನೇಕ ಕಾರ್ಯಕ್ರಮಗಳು, ಯೋಜನೆಗಳು, ರೂಪಿಸಿ ಅವುಗಳ ಅನುಷ್ಠಾನಕ್ಕೆ ತರುವಲ್ಲಿ ಸತತ ಪ್ರಯತ್ನ ನಡೆದೆ ಇದೆ. ಇಂತಹ ಯೋಜನೆಗಳ ಮಾರ್ಗಗಳು ವಿಚಾರಗಳು ಈ ರೀತಿ ಇವೆ.

ಗಿರಿಜನ ಉಪಯೋಜನೆಗಳು:

ವಿವಿಧ ಅಭಿವೃದ್ಧಿ ಇಲಾಖೆಗಳು, ನಿಗಮ ಹಾಗೂ ಮಂಡಳಿಗಳು ತಮ್ಮ ಯೋಜನಾ ಆಯ-ವ್ಯಯದಲ್ಲಿ ಶೇ. ೩% ನ್ನು ಈ ಸಮುದಾಯಗಳಿಗೆ ಮೀಸಲಾಗಿಟ್ಟಿದೆ. ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸವಲತ್ತುಗಳ ಜೊತೆಗೆ ವಸತಿ, ಕುಡಿಯುವ ನೀರು, ಸಂಪರ್ಕ, ರಸ್ತೆ ನೈರ್ಮಲೀಕರಣ, ಆರೋಗ್ಯ ಮುಂತಾದ ಮೂಲಭೂತ ಸೌಲಭ್ಯ ಮತ್ತು ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗುತ್ತಿದೆ. ಎಲ್ಲಾ ಇಲಾಖೆ ನಿಗಮ, ಮಂಡಳಿಗಳು ಸಮುದಾಯಗಳ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳೆಂದರೆ,

ಕೃಷಿ ಇಲಾಖೆ

ಅ) ಶೇ. ೧೦೦ ರ ಸಹಾಯಧನ ರೂಪದಲ್ಲಿ ರೂ. ೨೮೦೦-೦೦ ಬೆಲೆಯ ಕೃಷಿಪರಿಕರಗಳ ಪೂರೈಕೆ.

ಆ) ಶೇ. ೧೦೦ ರ ಸಹಾಯಧನದಲ್ಲಿ ೨೦೦೦-೦೦ ಬೆಲೆಯ ಗರಿಷ್ಠ ಮಿತಿಯಲ್ಲಿ ಧಾನ್ಯ ಸಂಗ್ರಹಣಾ ಕಣಜಗಳ ಪೂರೈಕೆ.

ಇ) ಶೇ. ೭೫ ರ ಸಹಾಯಧನದಲ್ಲಿ ರೂ. ೫೦೦೦೦-೦೦ ಗಳಲ್ಲಿ ಪವರ್‌ಟಿಲ್ಲರ್ ಒದಗಿಸುವುದು.

ಈ) ಆಧುನಿಕ ಕೃಷಿ ಉಪಕರಣಗಳ ಬಳಕೆಗೆ ತರಬೇತಿ.

ಉ) ತುಂತುರು ನೀರಾವರಿ ಘಟಕಗಳು ಹಾಗು ನೀರಾವರಿ ಘಟಕಗಳ ಪೂರೈಕೆ.

ಊ) ಶೇ. ೭೫ ರ ಸಹಾಯಧನದಲ್ಲಿ ರೂ. ೧೦೦೦೦-೦೦ ಗರಿಷ್ಠ ಮಿತಿಯಲ್ಲಿ ಹಣ ಒದಗಿಸುವುದು.

ಋ) ಡೀಸಲ್ ಯಂತ್ರ ಚಾಲಿತ ಸಸ್ಯ ಉಪಕರಣಗಳ ಪೂರೈಕೆ ೧೦೦೦-೦೦ ಗರಿಷ್ಠ ಮಿತಿಯಲ್ಲಿ ಒದಗಿಸುವುದು.

ಋೂ) ನಬಾರ್ಡ್ ಧರದಲ್ಲಿ ಉಳುಮೆ ಎತ್ತು ಮತ್ತು ಎತ್ತಿನಗಾಡಿ ವಿತರಣೆ.

ಕೃಷಿ ಇಲಾಖೆಯು ನೀರಾವರಿ ಸೌಲಭ್ಯಕ್ಕಾಗಿ ತುಂತುರು ನೀರಾವರಿ ಘಟಕದ ಸ್ಥಾಪನೆಗೆ ಮತ್ತು ಬೇಸಾಯ ಮಾಡಲು ಎತ್ತುಗಳನ್ನು ನೀಡುವ ಯೋಜನೆಯಾಗಿದೆ. ಇಲ್ಲಿ ಶೇ. ೭೫% ಭಾಗ ಸಹಾಯಧನ ಮತ್ತು ಶೇ. ೨೫% ಭಾಗ ಸಾಲ ನೀಡಲಾಗುತ್ತದೆ. ಈ ಯೋಜನೆಯನ್ನು ನಬಾರ್ಡ್ ನೆರವಿನಿಂದ ಕೂಡಿರುವುದಾಗಿದೆ.

ತೋಟಗಾರಿಕೆ

ಅ) ರೂ. ೨೧೬೫-೦೦ ರಿಂದ ೨೭೦೦-೦೦ ರ ವರೆಗಿನ ವೆಚ್ಚದಲ್ಲಿ ಅರ್ಧ ಎಕರೆ ತೆಂಗಿನ ತೋಟ, ೧ ಎಕರೆ ಹಣ್ಣಿನ ತೋಟ, ಹೂವಿನ ತೋಟ ನಿರ್ಮಾಣ.

ಆ) ತೋಟಗಳ ಪಾಲನೆಗೆ ಮೊದಲನೆಯ ವರ್ಷ ರೂ. ೬೫೦-೦೦ ಮತ್ತು ಎರಡನೆಯ ವರ್ಷ ರೂ. ೩೫೦-೦೦ ಗಳ ಸಹಾಯಧನ ನೀಡುವುದು.

ಇ) ತೋಟಗಾರಿಕೆಯಲ್ಲಿ ತರಭೇತಿ.

ಈ) ಪ್ರತಿ ಕುಟುಂಬಕ್ಕೆ ಎರಡು ತೆಂಗಿನ ಸಸಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಪಶುಸಂಗೋಪನೆ

ಅ) ಪರಿಶಿಷ್ಟವರ್ಗದ ಫಲಾನುಭವಿಗಳಿಗೆ ನಬಾರ್ಡ್ ಧರಗಳಲ್ಲಿ ಶೇಕಡ ೭೫ರ ಸಹಾಯಧನದಲ್ಲಿ ಮಿಶ್ರತಳಿ ಹಸು ಘಟಕ, ಎಮ್ಮೆ ಘಟಕ, ಕುರಿ ಘಟಕ ಮತ್ತು ಹಂದಿ ಘಟಕಗಳ ಸ್ಥಾಪನೆಗೆ ಸೌಲಭ್ಯ ಒದಗಿಸುವುದು.

ಹಸುಘಟಕದ ವೆಚ್ಚ ರೂ. ೧೭,೨೦೦ ರೂ. ಸಹಾಯಧನ ರೂ. ೧೨,೯೦೦ ರೂ.

ಎಮ್ಮೆಘಟಕದ ವೆಚ್ಚ ರೂ. ೧೨,೨೦೦ ರೂ. ಸಹಾಯಧನ ರೂ. ೯,೧೫೦ ರೂ.

ಕುರಿಘಟಕದ ವೆಚ್ಚ ರೂ. ೧೧,೨೦೦ ರೂ. ಸಹಾಯಧನ ರೂ. ೮,೪೦೦ ರೂ.

ಹಂದಿಘಟಕದ ವೆಚ್ಚ ರೂ. ೭,೩೪೫ ರೂ. ಸಹಾಯಧನ ರೂ. ೫,೫೦೮ ರೂ.

ಯೋಜನೆಯನ್ನು ನಬಾರ್ಡ್‌ನಿಂದ ಅನುಷ್ಠಾನ ಗೊಳಿಸಲಾಗುತ್ತಿದೆ.

ಅರಣ್ಯ ಇಲಾಖೆ

ಅರಣ್ಯ ಇಲಾಖೆಯಿಂದ ಸಮುದಾಯಗಳಿಗೆ ಆರ್ಥಿಕ ನಿರ್ವಹಣೆಯ ಸಲುವಾಗಿ ಭದ್ರತಾನೆಡುತೋಪು ಸಹಾಯ ಅರ್ಧ ಹೆಕ್ಟೇರ್‌ಗಾಗಿ ನೀಡಲಾಗುತ್ತಿದೆ. ಅಲ್ಲದೆ ಕಸಬುದಾರರಿಗೆ ಬುಟ್ಟಿ ಹೆಣೆಯಲು ಮತ್ತು ಇತರೆ ಬಿದಿರಿನ ಕೆಲಸ ಮಾಡಲು ಬೇಕಾಗುವ ಬೆತ್ತ ಮತ್ತು ಬಿದಿರಿನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ಪ್ರತಿಫಲಾನುಭವಿಗಳಿಗೆ ೫೦೦ ರಿಂದ ೫೦೦೦ ಬೆತ್ತಗಳನ್ನು ನೀಡಲಾಗುತ್ತಿದೆ.

ಅ) ಸಾಮಾಜಿಕ ಭದ್ರತಾ ನೆಡುತೋಪು ರೂ. ೨೫೦೦ ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು.

ಆ) ಕುಶಲಕರ್ಮಿಗಳಿಗೆ ಉಚಿತ ಬಿದಿರು ಬೆತ್ತ ಸರಬರಾಜು.

ಇ) ಮನೆಗಳ ನಿರ್ಮಾಣಕ್ಕೆ ರೂ. ೧೦೦೦೦-೦೦ ಮಿತಿಯಲ್ಲಿ ಗೃಹನಿರ್ಮಾಣ ವಸ್ತುಗಳ ಸರಬರಾಜು.

ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳು

ಅ) ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಆಸಕ್ತಿ ಹೊಂದಿರುವ ಪರಿಶಿಷ್ಟ ಬುಡಕಟ್ಟುಗಳ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುವಂತೆ ಜೇನುಸಾಕಾಣಿಕೆ ಬಡಗಿತನ, ಬಿದಿರು, ಚೆತ್ತದ ಮತ್ತು ಇತರ ವೃತ್ತಿಗಳಲ್ಲಿ ತರಬೇತಿ.

ಆ) ವಿವಿಧ ವೃತ್ತಿಗಳನ್ನು ನಿರ್ವಹಿಸುವ ಗ್ರಾಮೀಣ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಉಚಿತ ಉಪಕರಣಗಳ ವಿತರಣೆ.

ಇ) ಪರಿಶಿಷ್ಟ ಪಂಗಡದವರಿಗೆ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಲಿವಿಂಗ್ ಕಮ್ ವರ್ಕ್‌ಶೆಡ್‌ಗಳನ್ನು ನಿರ್ಮಿಸಲು ಘಟಕಕ್ಕೆ ರೂ. ೨೫೦೦೦ ಗಳ ಸಹಾಯಧನ ಮಂಜೂರಾತಿ.

ರೇಷ್ಮೆ ಕೃಷಿ

ಅ) ಹಿಪ್ಪು ನೇರಳೆ ಬೇಸಾಯಕ್ಕೆ ೨೦೦೦ ರೂ.ವರೆಗೆ ಸಹಾಯಧನ.

ಆ) ರೇರಿಂಗ್ ಹೌಸ್‌ಗಳ ನಿರ್ಮಾಣಕ್ಕೆ ಶೇ. ೬೦ ರ ಸಹಾಯಧನ, ಗರಿಷ್ಟ೨೫೦೦೦-೦೦ ರೂ.ಗಳಿಗೆ ಒಳಪಟ್ಟು ನೀಡಲಾಗುವುದು.

ಇ) ಪ್ಯಾಕೇಜ್ ಅಫ್ ಬೆನಿಫಿಟ್ಸ್ ಯೋಜನೆ.

ಈ) ನೀರಾವರಿ ಪಂಪ್ ಸೆಟ್ಟುಗಳಿಗೆ ಸಹಾಯ.

ಉ) ರೇಷ್ಮೆ ಹುಳುಗಳನ್ನು ಸಾಕುವ ಸಲಕರಣೆಗಳ ಸರಬರಾಜು

ಕರ್ನಾಟಕ ವಿಧ್ಯುತ್ ಪ್ರಸರಣಾ ನಿಗಮ

ಅ) ಪರಿಶಿಷ್ಟ ವರ್ಗದ ಕಾಲೋನಿಗಳ ವಿಧ್ಯುದೀಕರಣ.

ಆ) ಪರಿಶಿಷ್ಟ ವರ್ಗದವರ ನೀರಾವರಿ ಪಂಪ್‌ಸೆಟ್ಟುಗಳಿಗೆ ಸಂಪರ್ಕ ಕಲ್ಪಿಸುವುದು.

ಇ) ಕುಟೀರ ಜ್ಯೋತಿ ಯೋಜನೆಯಡಿ ಪರಿಶಿಷ್ಟ ಪಂಗಡದವರ ಮನೆಗಳಿಗೆ ವಿದ್ಯುತ್ ಸೌಲಭ್ಯ ಒದಗಿಸುವುದು.

ಉದ್ಯೋಗ ಮತ್ತು ತರಬೇತಿ

ಅ) ಹೊಲಿಗೆ ಮುಂತಾದ ವೃತ್ತಿಯಲ್ಲಿ ತರಬೇತಿ ನೀಡುವುದು.

ಆ) ತರಬೇತಿ ಅವಧಿಯಲ್ಲಿ ಅಭ್ಯರ್ಥಿಗೆ ಮಾಸಿಕ ರೂ. ೫೦೦-೦೦ ಶಿಷ್ಯಾವೇತನ.

ಇ) ಅಭ್ಯರ್ಥಿಗಳ ಪೋಷಕರಿಗೆ ರೂ. ೧೦೦-೦೦ ಪ್ರೋತ್ಸಾಹಧನ.

ಈ) ತರಬೇತಿ ಪಡೆದ ಅಭ್ಯರ್ಥಿಗಳಿಗೆ ಉಚಿತ ಯಂತ್ರಗಳ ಪೂರೈಕೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಅ) ಗ್ರಾಮೀಣ ಪ್ರದೇಶದ ಬಾಲಕಿಯರಿಗೆ ಹಾಜರಾತಿ ವಿದ್ಯಾರ್ಥಿವೇತನ ಸಹಾಯಧನ.

ಆ) ವಿಧವೆಯರಿಗೆ ಆರ್ಥಿಕ ಸೌಲಭ್ಯ ನೀಡಲು ನವಜೀವನ ಕಾರ್ಯಕ್ರಮದಡಿಯಲ್ಲಿ ಧನಸಹಾಯ ನೀಡುವುದು.

ಇ) ಪರಿಶಿಷ್ಟ ವರ್ಗದ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿಕೆ.

ಈ) ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಸ್ತ್ರೀಶಕ್ತಿ ಯೋಜನೆಯಡಿ ಸಹಾಯಧನ.

ಉ) ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಪರಿಶಿಷ್ಟ ವರ್ಗದ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿಗೆ ವೃತ್ತಿಪರ ತರಬೇತಿ.

ತಾಂತ್ರಿಕ ಶಿಕ್ಷಣ ಇಲಾಖೆ

ತಾಂತ್ರಿಕಶಿಕ್ಷಣಇಲಾಖೆವತಿಯಿಂದ ಪರಿಶಿಷ್ಟಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಾಗುವಂತೆ ರೂ. ೧೨೦೦ ಮಿತಿಯೊಳಗೆ ಡ್ರಾಯಿಂಗ ಉಪಕರಣಗಳ ಉಚಿತ ವಿತರಣೆ.

ಕಾಲೇಜು ಶಿಕ್ಷಣ ಇಲಾಖೆ

ಕಾಲೇಜುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಮತ್ತಿತರ ಸಾಮಾಗ್ರಿಗಳ ಉಚಿತ ವಿತರಣೆ.

ಸಾರ್ವಜನಿಕ ಶಿಕ್ಷಣ ಇಲಾಖೆ

೧. ವಿದ್ಯಾವಿಕಾಸ ಕಾರ್ಯಕ್ರಮದಡಿ ೧ರಿಂದ೭ ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಗಳನ್ನು ಒದಗಿಸುವುದು.

೨. ೧ ರಿಂದ ೭ ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ಬಾಲಕಿಯರಿಗೆ ಶಾಲಾ ಬ್ಯಾಗ್‌ಗಳನ್ನು ವಿತರಿಸುವುದು.

೩. ಪ್ರಾಥಮಿಕ ೫ ರಿಂದ ೭ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿ.

೪. ೭ ರಿಂದ ೧೦ ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿಧ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿ.

೫. ಪರಿಶಿಷ್ಟ ವರ್ಗದ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಪೂರೈಕೆ.

೬. ಪರಿಶಿಷ್ಟ ವರ್ಗದ ವಿಧ್ಯಾರ್ಥಿಗಳಿಗೆ ಸರ್ಕಾರೇತರ ಶುಲ್ಕ ಮರುಪಾವತಿ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ

ಸಮಗ್ರ ಗಿರಿಜನ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ ಉದ್ಯೋಗ ಮತ್ತು ಜೀವನ ಮಟ್ಟವನ್ನು ಸುಧಾರಿಸಲು ಕೆಳಕಂಡ ಕಾರ್ಯಕ್ರಮಗಳ ಅಡಿಯಲ್ಲಿ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಅ) ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆ.

ಆ) ಎಸ್. ಜೆ. ಆರ್. ವೈ(S.J.R.Y).

ಇ) ಸಮಗ್ರ ಗ್ರಾಮೀಣ ವಸತಿ ಯೋಜನೆ

ಈ) ಪ್ರಧಾನ ಮಂತ್ರಿ ಗ್ರಾಮೀಣ ಯೋಜನೆ.

ಉ) ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಅಭಿವೃದ್ಧಿಗೆ ಅನುಧಾನ.

ರಸ್ತೆ ಮತ್ತು ಸೇತುವೆ

ಲೋಕೋಪಯೋಗಿ ಇಲಾಖಾವತಿಯಿಂದ ಪರಿಶಿಷ್ಟವರ್ಗದ ಕಾಲೋನಿಗಳಿಗೆ ಸಂಪರ್ಕ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಗಿರಿಜನ ಉಪಯೋಜನೆಯಡಿ ಜಿಲ್ಲಾವಲಯದಲ್ಲಿ ಕೈಗೊಳ್ಳಲಾಗುತ್ತಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮೀಣ ನೀರು ಪೂರೈಕೆ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳು ಹಾಗೂ ಕಿರುನೀರು ಸರಬರಾಜು ಯೋಜನೆಗಳ ಮೂಲಕ ಒದಗಿಸಲಾಗುತ್ತದೆ.

ಕೇಂದ್ರ ಸರ್ಕಾರದ ಯೋಜನೆಗಳು

ಕೇಂದ್ರ ಸರ್ಕಾರವು ಈ ಸಮುದಾಯಗಳ ಜನರ ಸರ್ವಾಂಗೀಣ ಅಭಿವೃದ್ಧಿಗೆ ಕೆಳಕಂಡ ಯೋಜನೆಗಳಡಿ ಅನುಧಾನ ಬಿಡುಗಡೆ ಮಾಡಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಹಕರಿಸುತ್ತಿದೆ.

ಅ) ಬುಕ್ ಬ್ಯಾಂಕ್ ಯೋಜನೆ.

ಆ) ಆಶ್ರಮ ಶಾಲೆ / ಹಾಸ್ಟೆಲ್‌ಗಳ ಕಟ್ಟಡ ನಿರ್ಮಾಣಕ್ಕೆ ಶೇ. ೫೦ರ ಸಹಾಯಧನ.

ಇ) ಪರೀಕ್ಷಾ ಪೂರ್ವ ತರಬೇತಿ ಕಾರ್ಯಕ್ರಮಗಳು.

ಈ) ಮೆಟ್ರಿಕ್‌ನಂತರದ ವಿದ್ಯಾರ್ಥಿವೇತನಗಳು.

ಉ) ಮಾದರಿ ವಸತಿ ಶಾಲೆಗಳ ಸಂಕೀರ್ಣಸ್ಥಾಪನೆ.

ಊ) ವಿಶೇಷ ಕೇಂದ್ರಿಯ ಸಹಾಯ.

ಋ) ಸಂವಿಧಾನದ ಅನುಚ್ಛೇದ ೨೭೫ (೧) ರಡಿ ಧನಸಹಾಯ.

ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರೀಯ ಸಹಾಯ

ಆರ್ಥಿಕ ಅಭಿವೃದ್ಧಿಗೆ ಗಿರಿಜನರ ಉಪಯೋಜನೆಗೆ ಹೆಚ್ಚುವರಿಯಾಗಿ ಕೇಂದ್ರಸರ್ಕಾರವೂ ವಿಶೇಷ ಕೇಂದ್ರಿಯ ಸಹಾಯವನ್ನು ಮಂಜೂರು ಮಾಡುತ್ತಿದ್ದು ಈ ಅನುಧಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಕೆಳಕಂಡ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುವುದು.

೧. ಪರಿಶಿಷ್ಟ ವರ್ಗದವರ ಕುಟುಂಬಗಳಿಗೆ ಬಡತನ ರೇಖೆಯಿಂದ ಮೇಲೆ ಬರಲು ಸಹಕಾರಿಯಾಗುವಂತಹ ನಿರಂತರ ಆದಾಯ ತರುವಂತಹ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಗ್ರಾಮೀಣ ಸಣ್ಣ ಕೈಗಾರಿಕೆ ಮತ್ತು ಮೀನುಗಾರಿಕೆ ಕಾರ್ಯಕ್ರಮಗಳಿಗೆ ಸಹಾಯಧನ ಮಂಜೂರಾತಿ.

೨. ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವ ಮೂಲಭೂತ ಸೌಲಭ್ಯ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಧನಸಹಾಯ.

೩. ನಿರುದ್ಯೋಗಿ ಯುವಕ / ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಮಹಿತಿ ತಂತ್ರಜ್ಞಾನವೂ ಸೇರಿದಂತೆ ವಿವಿಧ ವೃತ್ತಿಪರ ತರಭೇತಿ ಕಾರ್ಯಕ್ರಮಗಳ ಅನುಷ್ಠಾನ.

ಭಾರತ ಸಂವಿಧಾನದ ಅನುಚ್ಛೇದ ೨೭೫ (೧)ರಡಿ ರಾಜ್ಯ ಯೋಜನೆಗಳಿಗೆ ಕೇಂದ್ರೀಯ ನೆರವು

ಭಾರತದ ಸಂವಿಧಾನದ ಅನುಚ್ಛೇಧ ೨೭೫ (೧) ರಡಿ ರಾಜ್ಯ ಯೋಜನೆಗಳಿಗೆ ಕೇಂದ್ರೀಯ ನೆರವಿನಡಿ ಕೇಂದ್ರ ಸರ್ಕಾರವು ಕೆಳಕಂಡ ನಿರ್ಧಿಷ್ಟ ಯೋಜನೆಗಳಿಗೆ ಅನುಧಾನವನ್ನು ಮಂಜೂರು ಮಾಡುತ್ತಿದೆ.

೧. ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಹ್ಯಾಂಡ್‌ಪಂಪ್, ಕೊಳವೆಭಾವಿ ಮತ್ತು ಕಿರು ನೀರು ಸರಬರಾಜು ಯೋಜನೆಯಡಿ ಕುಡಿಯುವ ನೀರು ಪೂರೈಕೆ.

೨. ಆರೋಗ್ಯ ತಪಾಸಣೆ ಮತ್ತು ಔಷಧೋಪಚಾರಕ್ಕೆ ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆ.

೩. ಕಾಲೋನಿಗಳಲ್ಲಿ ಚರಂಡಿ ಮತ್ತು ನೈರ್ಮಲೀಕರಣ ಕಾಮಗಾರಿಗಳ ಅನುಷ್ಠಾನ.

೪. ಕಾಲೋನಿಗಳಿಗೆ ಸಂಪರ್ಕ ರಸ್ತೆ ನಿರ್ಮಾಣ ಮತ್ತು ಅಭಿವೃದ್ಧಿ.

೫. ಲ್ಯಾಂಪ್ ಸಹಕಾರ ಸಂಘಗಳ ಮೂಲಕ ಕಿರು ಅರಣ್ಯ ಉತ್ಪನ್ನಗಳ ಸಂಸ್ಕರಣ ಘಟಕ ಸ್ಥಾಪನೆ.

೬. ಕಾಲೋನಿಗಳಿಗೆ ಸೋಲಾರ್ ಬೀದಿ ದೀಪ ಸೌಲಭ್ಯ ಒದಗಿಸುವುದು.

೭. ಜನರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತ ಸಮುದಾಯ ಭವನ ನಿರ್ಮಾಣ.

೮. ಫಲಾನುಭವಿಗಳಿಗೆ ಏತನೀರಾವರಿ, ತುಂತುರು ನೀರಾವರಿ, ಹನಿ ನೀರಾವರಿ ಸೌಲಭ್ಯ ಒದಗಿಸುವ ಕಾರ್ಯಕ್ರಮಗಳ ಅನುಷ್ಠಾನ.

೯. ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವೈಯಕ್ತಿಕ ಕೊಳವೆಬಾವಿ.

೧೦. ಜಮೀನಿನಲ್ಲಿ ಕೃಷಿ ಇಲಾಖೆಯ ವತಿಯಿಂದ ಜಲಾನಯನ ಕಾಮಗಾರಿ ಅನುಷ್ಠಾನ.

೧೧. ಅಶ್ರಮ ಶಾಲೆಗಳಲ್ಲಿ ೪ನೇ ತರಗತಿಯಿಂದ ೭ನೇ ತರಗತಿಗೆ ಮೇಲ್ದರ್ಜೆಗೇರಿಸುವುದು.[೧೦]

ಈ ಎಲ್ಲಾ ಕಾರ್ಯಕ್ರಮಗಳು ಎಲ್ಲಾ ಬುಡಕಟ್ಟು ಸಮುದಾಯಗಳಿಗೆ ದೊರೆಕುವವಾಗಿವೆ. ಇವುಗಳು ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೂ ಸಹ ಲಭ್ಯವಾಗಿದ್ದು ಉಪಯೋಜನೆ, ಗಿರಿಜನ ಉಪಯೋಜನೆ ಮತ್ತು ಕೇಂದ್ರೀಯ ನೆರವು ದೊರೆಕುತ್ತಿದ್ದು ವಿಶೇಷವಾಗಿಯೇ ಕೆಲವು ಯೋಜನೆಗಳನ್ನು ಸಹ ರೂಪಿಸಲಾಗಿದೆ.

ಉಪಯೋಜನೆ

ಕೇಂದ್ರ ಮತ್ತು ರಾಜ್ಯಸರ್ಕಾರಗಳು ತೀರಾ ಹಿಂದುಳಿದ ಜನಸಮುದಾಯಗಳ ಹಿತಾಸಕ್ತಿ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿ ಅನೇಕ ಸೌಲಭ್ಯ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿದೆ. ಅಲ್ಲದೆ

ಸಂವಿಧಾನದ ಚೌಕಟ್ಟಿನಲ್ಲಿ ೧೪, ೧೫, ೧೬ ಮತ್ತು ೪೬ನೇಯ ವಿಧಿಗಳು ಸಮಾನತೆಯ ತತ್ವವನ್ನು ಒತ್ತಿ ಹೇಳುತ್ತವೆ. ಇದರ ಪ್ರಯುಕ್ತ ಪಂಚವಾರ್ಷಿಕ ಯೋಜನೆಗಳಲ್ಲಿ ಸಮುದಾಯಗಳ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ರಾಜ್ಯದಲ್ಲಿ ಬುಡಕಟ್ಟು ಸಮುದಾಯಗಳ ಕಲ್ಯಾಣ ಕಾರ್ಯಕ್ರಮಗಳು ೧೯೪೦ ರಿಂದಲೇ ಜಾರಿಯಲ್ಲಿವೆ. ಕರ್ನಾಟಕ ರಾಜ್ಯದ ಉದಯದ ನಂತರ ಪರಿಶಿಷ್ಟ ವರ್ಗಗಳ ಕಲ್ಯಾಣ ಸೇವೆಯನ್ನು ಸಮಾಜ ಕಲ್ಯಾಣ ಇಲಾಖೆಗೆ ವಹಿಸಿಕೊಡಲಾಗಿ ವ್ಯಾಪಕ ಕಲ್ಯಾಣಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಜನರ ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಮತ್ತು ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಹೊಣೆಗಾರಿಕೆ ಹೊತ್ತಿದೆ. ಹಿಂದುಳಿದ ಆರ್ಥಿಕ ಮತ್ತು ತಾಂತ್ರಿಕತೆಯಲ್ಲಿ ಕೆಲವು ಸಮುದಾಯಗಳನ್ನು ಮುಂದೆ ತರಲು ಹಾಗೂ ಅವರ ಜೀವನಮಟ್ಟ ಸುಧಾರಿಸುವ ದೃಷ್ಟಿಯಿಂದ ಅವುಗಳನ್ನು ವಾಸ್ತವವಾಗಿ ಬೇರೆಯಾಗಿವೇ ಕಾಣುವ ನಿಟ್ಟಿನಲ್ಲಿ ರಾಜ್ಯಘಟನೆಯ ಕಲಾಮು ವಿಶೇಷ ಆಸಕ್ತಿ ವಹಿಸಿದೆ. ಸಂವಿಧಾನಾತ್ಮಕವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ತೀರಾ ಹಿಂದುಳಿದಿರುವ ಸಲುವಾಗಿ ಉಪಯೋಜನೆಯನ್ನು ಒಂದೇ ಚೌಕಟ್ಟಿನಲ್ಲಿ ತಯಾರಿಸಿದೆ.

ಭಾರತದ ಸಂವಿಧಾನದಲ್ಲಿ ಎರಡೂ ವರ್ಗಗಳ ಅಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಬುಡಕಟ್ಟು) ಕ್ಕೆ ಸೇರಿದ ಜನರ ಕಲ್ಯಾಣಕಾರ್ಯಕ್ರಮಗಳಿಗಾಗಿಯೇ ರೂಪಿಸಿದ ಯೋಜನೆಗಳಾದರಿಂದ, ಇವೆರಡು ವರ್ಗ ಯಾವಾಗಲೂ ಕಾನೂನಿನ ಚೌಕಟ್ಟಿನಲ್ಲಿ ಬರುತ್ತವೆಯಾದ್ದರಿಂದ ಇಲ್ಲಿ ಕೂಡ ಜೊತೆಜೊತೆಯಾಗಿಯೇ ವಿವರಿಸಬೇಕಾಗಿದೆ. ನಂತರದ ರಾಜ್ಯ ಸರ್ಕಾರದ ಬಗ್ಗೆ ಪ್ರಸ್ತಾಪಿಸುವಾಗ ಬುಡಕಟ್ಟುಗಳ ಬಗೆಗಿನ ವಿವರಣೆಗೆ ಸೀಮಿತವಾಗಿದೆ. ಅದರಂತೆ ಕರ್ನಾಟಕ ರಾಜ್ಯ ಸರ್ಕಾರ ಕೈಗೊಂಡ ಪ್ರಮುಖ ಅಂಶಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಬುಡಕಟ್ಟು ವರ್ಗಗಳನ್ನು ಕುರಿತಾಗಿ ಆದರಿಸಿರುವ ಕೆಲವು ಮುಖ್ಯವಾದ ಅಭಿವೃದ್ಧಿ ಕಾರ್ಯಗಳನ್ನು ಈ ಕೆಳಗೆ ನಮೂದಿಸಿದ ವರದಿಗಳನ್ವಯ ಅಥವಾ ಇಲಾಖೆಗಳ ಆಧಾರವಾಗಿ ತೆಗೆದುಕೊಳ್ಳಲಾಗಿದೆ. ಅವೆಂದರೆ,

- ಸಮಗ್ರ ಗಿರಿಜನ ಯೋಜನಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆಗಳು
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರಗತಿ ಚಿತ್ರ, ಮೈಸೂರು ವಿಭಾಗದ ಕಂದಾಯ ಜಿಲ್ಲೆಗಳು
- ಸಮಾಜಕಲ್ಯಾಣ ಇಲಾಖೆ, ವರದಿ ಬೆಂಗಳೂರು ೨೦೦೧-೦೫

ಈ ಇಲಾಖೆಗೆ ಸೇರಿದ ಬುಡಕಟ್ಟು ಸಮುದಾಯಗಳು ಮತ್ತು ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಜನರ ಸ್ಥಿತಿಗತಿ ಉತ್ತಮ ಪಡಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವು ಈ ರೀತಿ ಇವೆ.

ಶೈಕ್ಷಣಿಕ ಕಾರ್ಯಕ್ರಮಗಳು

ಶೈಕ್ಷಣಿಕೇತರ ಕಾರ್ಯಕ್ರಮಗಳು

ಆರ್ಥಿಕ ಪರಿಸ್ಥಿತಿ ಸುಧಾರಣಾ ಕಾರ್ಯಕ್ರಮಗಳು

ವಸತಿ ಮತ್ತಿತರ ಕಾರ್ಯಕ್ರಮಗಳು

ಈ ಎಲ್ಲಾ ಕಾರ್ಯಕ್ರಮಗಳು ಸಮುದಾಯಗಳಿಗಿರುವ ಅಭಿವೃದ್ಧಿಮಾರ್ಗವೆಂದೇ ಪರಿಭಾವಿಸಲಾಗಿ, ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ ನೀಡಲಾಗಿದೆ.

ಶೈಕ್ಷಣಿಕ ಕಾರ್ಯಕ್ರಮಗಳು

ಅ. ನರ್ಸರಿ (ಮಕ್ಕಳ) ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು

ಬೆಳೆಯುವ ಪೈರಿಗೆ ಮೊಳಕೆಯಲ್ಲೇ ಹಾರೈಕೆ ಮಾಡಿದರೆ ಫಸಲು ಚೆನ್ನಾಗಿ ಬರುತ್ತದೆ ಎಂಬ ಸರ್ವಕಾಲಿಕ ಸತ್ಯದ ತಳಹದಿಯ ಮೇಲೆ ಯೋಜನೆಯನ್ನು ರೂಪಿಸಲಾಗಿದೆ. ೫ ವರ್ಷದ ಗಂಡು ಮತ್ತು ೩ ವರ್ಷದ ಹೆಣ್ಣು ಮಕ್ಕಳನ್ನು ದಾಖಲಿಸಿಕೊಂಡು ಅವರ ತಾಯಿ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಶಿಕ್ಷಣ ಹಾಗೂ ಆರೋಗ್ಯದ ಪ್ರಾಥಮಿಕ ತರಬೇತಿ ನೀಡಲಾಗುತ್ತದೆ. ಪ್ರತಿಯೊಂದು ಕೇಂದ್ರದಲ್ಲಿ ಒಬ್ಬ ಸಂಚಾಲಕಿ ಹಾಗೂ ನಿರ್ವಹಕಿಯರು ಇರುತ್ತಾರೆ. ಮಹಿಳೆಯರಿಗೆ ಕೈ ಕಸುಬುಗಳ ತರಬೇತಿ, ಮಕ್ಕಳಿಗೆ ಪೂರ್ವ ಶಿಕ್ಷಣ ನೀಡಲಾಗುತ್ತದೆ. ಪ್ರತಿಕೇಂದ್ರದ ಮಗುವಿಗೆ ದಿನಕ್ಕೆ ೧.೦೦ ರೂಪಾಯಿ ವೆಚ್ಚದಲ್ಲಿ ಮಧ್ಯಾಹ್ನದ ಉಪಹಾರ ಮತ್ತು ವರ್ಷಕ್ಕೆ ೨ ಜೊತೆ ಉಡುವುಗಳನ್ನು ಉಚಿತವಾಗಿ ಪೂರೈಸಲಾಗುವುದು.

ರಾಜ್ಯದಲ್ಲಿ ಇಂತಹ ಕೇಂದ್ರಗಳು ೭೦ ಕಾರ್ಯನಿರತವಾಗಿವೆ. ಪ್ರತಿ ಕೇಂದ್ರದಲ್ಲಿ ೫೦ ಮಕ್ಕಳಿಗೆ ಪ್ರವೇಶಾವಕಾಶವಿದ್ದು ಒಟ್ಟಾರೆ ೨೦೦೧ ನೇ ಸಾಲಿನಲ್ಲಿ ದಾಖಲಾದಂತೆ ೩.೨೮ಲ ಮಕ್ಕಳು ಕಲಿಕೆಯಲ್ಲಿದ್ದಾರೆ.

ಆ. ಆಶ್ರಮಶಾಲೆಗಳು

೧೯೯೦-೯೧ ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಈ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಕೇಂದ್ರವು ರಾಜ್ಯಗಳಿಗೆ ಶೇ ೫೦% ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಶೇ ೧೦೦% ಅನುದಾನ ನೀಡುತ್ತಿದೆ. ಈ ಆಶ್ರಮ ಶಾಲೆಗಳಲ್ಲಿ ೧ ರಿಂದ ೫ ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಕಲಿಯುವ ಅವಕಾಶದ ಜೊತೆಗೆ ಉಚಿತ ವಸತಿ ನಿಲಯದ ಸೌಕರ್ಯವನ್ನು ಒದಗಿಸುತ್ತಿದೆ. ಪ್ರತಿತರಗತಿಗೆ ೨೫ ವಿದ್ಯಾರ್ಥಿಗಳಂತೆ ೧೨೫ ವಿದ್ಯಾರ್ಥಿಗಳು ದಾಖಲಾಗಲು ಅವಕಾಶವಿದೆ. ರಾಜ್ಯದಲ್ಲಿ ಸುಮಾರು ೯೧ ಆಶ್ರಮ ಶಾಲೆಗಳು ಕಾರ್ಯನಿರತವಾಗಿವೆ. ಪ್ರತಿಯೊಂದು ಆಶ್ರಮ ಶಾಲೆಯ ವಿದ್ಯಾರ್ಥಿಗೆ ಸರ್ಕಾರ ಭರಿಸುತ್ತಿರುವ ವೆಚ್ಚ ವಾರ್ಷಿಕವಾಗಿ ೪೦೬೭.೦೦ರೂ ಗಳಾಗಿದೆ.

ಕೋಷ್ಟಕ ೪.೧ ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿರುವ ವೆಚ್ಚದ ವಿವರ

ಕ್ರಮ ಸಂಖ್ಯೆ	ವೆಚ್ಚದ ವಿವರ ಪ್ರತಿ ವಿದ್ಯಾರ್ಥಿಗೆ	ರೂ.ಗಳಲ್ಲಿ
೧	ಭೋಜನ ವೆಚ್ಚ ಮಾಹೆಯಾನ ೧೦ ತಿಂಗಳಿಗೆ ರೂ ೩೫೦	೩೫೦೦
೨.	ಸಮವಸ್ತ್ರ ವಾರ್ಷಿಕವಾಗಿ ರೂ ೨೦೦ ರರಂತೆ	೨೦೦
೩.	ಇತರೆ ವೆಚ್ಚ ೧೦ ತಿಂಗಳಿಗೆ ಮಾಹೆಯಾನ ರೂ ೧೫	೧೫೦
೪.	ಬಟ್ಟೆ ತೊಳೆಯುವ ಭತ್ಯೆ ರೂ ೧೦ ರಂತೆ ೧೦ ತಿಂಗಳಿಗೆ	೧೦೦
೫.	ಕ್ಷೌರದ ವೆಚ್ಚ ವಾರ್ಷಿಕ ೬ ಬಾರಿ ರೂ ೨ ರಂತೆ	೧೨
೬.	ವೈದ್ಯಕೀಯ ವೆಚ್ಚ ವಾರ್ಷಿಕ ೫ರೂ ರಂತೆ	೫
೭	ಹಾಸಿಗೆ ಹೊದಿಕೆ ೩ ವರ್ಷಗಳಿಗೊಮ್ಮೆ ರೂ ೧೦೦	೧೦೦
	ಒಟ್ಟು:	೪೦೬೭

(ಆಧಾರ: ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು)

ಇ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು

ಗ್ರಾಮೀಣ ಪ್ರದೇಶದಲ್ಲಿರುವ ಬುಡಕಟ್ಟು ಜನರು ವಿದ್ಯಾರ್ಥಿಗಳು, ಶಾಲೆಯ ಸಮೀಪದಲ್ಲಿ ಉಳಿದು ಕಲಿಯಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗಿದೆ ೫ ರಿಂದ ೧೦ನೇ ತರಗತಿವರೆಗೆ ವ್ಯಾಸಂಗ ಮಾಡುವ ಕನಿಷ್ಟ ೫.ಕಿ.ಮೀ ದೂರದಿಂದ ಶಾಲೆಗೆ ಬರುವ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನರ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶದ ಅವಕಾಶವಿದೆ. ೫ ರಿಂದ ೧೦ನೇ ತರಗತಿವರೆಗೆ ಕಲಿಯುವ ಗ್ರಾಮಾಂತರ ಪ್ರದೇಶದ ಬಾಲಕ–ಬಾಲಕಿಯರಿಗೆ ಅವಕಾಶ ನೀಡಲಾಗಿದೆ. ಪ್ರತಿ ವಿದ್ಯಾರ್ಥಿಗೆ ಆಹಾರವೆಚ್ಚಕ್ಕಾಗಿ ೪೦೦ ರೂ, ವಾರ್ಷಿಕ ೨ ಜೊತೆ ಉಡುಪು ರೂ ೩೫೦, ಪಠ್ಯಪುಸ್ತಕ, ಲೇಖನ ಸಾಮಾಗ್ರಿಗಾಗಿ ೨೫೦, ಹಾಸಿಗೆ ಹೊದಿಕೆ ೩ ವರ್ಷಗಳಿಗೊಮ್ಮೆ ರೂ.೩೫೦ ಇತರೆ ವೆಚ್ಚ ರೂ ೪೦, ಹಾಗೂ ಬಾಲಕರಿಗೆ ಕ್ಷಾರಕ್ಕಾಗಿ ವಾರ್ಷಿಕವಾಗಿ ರೂ.೫೦ ವಿಶೇಷ ಭೋಧನೆ ವೈದ್ಯಕೀಯ ಸೌಲಭ್ಯ ಹಾಗೂ ವಾಚನಾಲಯಗಳನ್ನು ಕಲ್ಪಿಸಲಾಗಿದೆ.

ಈ. ಖಾಸಗಿ ವಿದ್ಯಾರ್ಥಿ ನಿಲಯದ ಧನಸಹಾಯ

ಬುಡಕಟ್ಟು ವಿದ್ಯಾರ್ಥಿಗಳಿಗೆ ವಸತಿ ನಿಲಯ ಸೌಲಭ್ಯ ನೀಡುವ ಅನುದಾನಿತ ಖಾಸಗಿ ಸಂಘ ಸಂಸ್ಥೆಗಳಿಗೆ ಕೂಡ ಸರ್ಕಾರದ ಕೂಡ ಸರ್ಕಾರ ಧನ ಸಹಾಯ ನೀಡಿ ಪ್ರೋತ್ಸಾಹಿಸುತ್ತಿದೆ. ವಿದ್ಯಾರ್ಥಿನಿಲಯಗಳ ಬಾಡಿಗೆ ಸಿಬ್ಬಂದಿ ವೆಚ್ಚ ಹಾಗೂ ನೀರು ಮತ್ತು ವಿದ್ಯುತ್‌ಶಕ್ತಿಯ ವೆಚ್ಚಕ್ಕಾಗಿ ನಿಗದಿತ ಮೊತ್ತವನ್ನು ಸರ್ಕಾರ ನೀಡುತ್ತಿದೆ. ಈ ವಿದ್ಯಾರ್ಥಿನಿಲಯಗಳಿಗೆ ಬುಡಕಟ್ಟು ಜನರ ವಿದ್ಯಾರ್ಥಿಗಳನ್ನು ಆಯ್ಕೆಮಾಡುವ ಸ್ವಾತಂತ್ರ್ಯ ಸರ್ಕಾರಕ್ಕಿರುತ್ತದೆ. ಇಂತಹ ವಿದ್ಯಾರ್ಥಿನಿಲಯಗಳು, ಚಾಮರಾಜನಗರ, ಮೈಸೂರು, ಉಡುಪಿ, ಕೊಡಗು, ದ.ಕನ್ನಡ ಜಿಲ್ಲೆಗಳಲ್ಲಿದ್ದು ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ೧೨,

ಪಿರಿಯಾಪಟ್ಟಣದಲ್ಲಿ ೨, ಉಡುಪಿಯಲ್ಲಿ ೨, ಮಂಗಳೂರುನಲ್ಲಿ ೫, ಬೆಳ್ತಂಗಡಿಯಲ್ಲಿ ೨, ತಾಲ್ಲೂಕುಗಳಲ್ಲಿ ಈ ಕೇಂದ್ರಗಳಿವೆ. ಆದರೆ ಈ ಸೌಲಭ್ಯಪಡೆಯ ಬೇಕಾದ್ದಲ್ಲಿ ಮಾತ್ರ ಸಾಹಸ ಮಾಡಬೇಕಿದೆ.

ಉ. ಕಾಲೇಜು ವಿದ್ಯಾರ್ಥಿನಿಲಯಗಳು

ಗ್ರಾಮೀಣ ಪ್ರದೇಶದಿಂದ ಬಂದು ನಗರದ ಕಾಲೇಜುಗಳಲ್ಲಿ ಕಲಿಯುತ್ತಿರುವ ಬುಡಕಟ್ಟು ಜನರ ವಿದ್ಯಾರ್ಥಿಗಳಿಗೆ ನೆರವಾಗುವುದು ಇದರ ಉದ್ದೇಶ. ಈ ಯೋಜನೆ ಭಾರತ ಸರ್ಕಾರದ ನೆರವಿದ್ದು ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ವಿದ್ಯಾರ್ಥಿ ವೇತನ ಹಾಗೂ ಇ.ಬಿ.ಎಲ್ ವೆಚ್ಚಗಳು ಸೇರಿ ತಲಾ ೪೫೦. ರೂ ಭರಿಸಲಾಗುತ್ತದೆ. ಈ ವಿದ್ಯಾರ್ಥಿನಿಲಯಗಳಿಗೆ ಆಯ್ಕೆ ಸಮಿತಿಯು ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತದೆ. ಈ ವಿದ್ಯಾರ್ಥಿನಿಲಯದಲ್ಲಿ ವಾಚನಾಲಯ ಹಾಗೂ ಕ್ರೀಡಾ ಸಾಮಾಗ್ರಿಗಳನ್ನು ಖರೀದಿಸಲು ಸರ್ಕಾರ ಧನಸಹಾಯ ನೀಡುತ್ತಿದೆ.

ಇಂತಹ ವಿದ್ಯಾರ್ಥಿನಿಲಯದ ಜಿಲ್ಲಾ ಸಮಾಜಕಲ್ಯಾಣ ಅಧಿಕಾರಿಗಳು ಮತ್ತು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಾಡಿಗೆ ಕಟ್ಟಡ, ಸಿಬ್ಬಂದಿ ವೆಚ್ಚ, ನೀರು, ವಿದ್ಯುತ್ ವೆಚ್ಚವನ್ನು ವಿದ್ಯಾರ್ಥಿಗಳಿಗೆ ನೀಡಲಾಗುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದಲ್ಲಿ ಭರಿಸಲಾಗುವುದು. ಜೊತೆಗೆ ಹೆಚ್ಚುವರಿ ಭೋಜನ ವೆಚ್ಚ ಪ್ರತಿ ತಿಂಗಳಿಗೆ ೪೦೦ ರೂಗಳಿಗೆ ಮೀರಿದಂತೆ ಮಂಜೂರು ಮಾಡಲಾಗುತ್ತಿದೆ.

ಊ. ತಾಂತ್ರಿಕ ವಿದ್ಯಾರ್ಥಿ ನಿಲಯಗಳು

ದೂರದ ಬೆಟ್ಟ, ಗ್ರಾಮ ಪ್ರದೇಶಗಳ ಬುಡಕಟ್ಟು ಜನರಿಗೆ ಕೌಶಲ್ಯಾಧಾರಿತ ಶಿಕ್ಷಣ ನೀಡುವ ಉದ್ದೇಶದಿಂದ ತಾಂತ್ರಿಕ ಶಿಕ್ಷಣ ಕೋರ್ಸ್‌ಗಳಾದ ವೈದ್ಯಕೀಯ, ಇಂಜನಿಯರಿಂಗ್ ಹಾಗು ಐ.ಟಿ.ಐ. ತರಬೇತಿಯಂತಹ ಶಿಕ್ಷಣ ಮುಂದುವರೆಸಲು ಪ್ರಾರಂಭಿಸಲಾಗಿದೆ. ಈ ವಿದ್ಯಾರ್ಥಿನಿಲಯಗಳಿಗೆ ಪ್ರತಿಯೊಬ್ಬ ವಿದ್ಯಾರ್ಥಿಗಾಗಿ ಪ್ರತಿ ತಿಂಗಳು ಭಾರತ ಸರ್ಕಾರದ ವಿದ್ಯಾರ್ಥಿವೇತನ ರೂ. ೪೫೦ ಬರಿಸಲಾಗುತ್ತಿದೆ. ಸರ್ಕಾರದ ಅಥವಾ ಅಂಗೀಕೃತ ವಿಧ್ಯಾಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಆಯಾ ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಸಮಾಜ ಕಲ್ಯಾಣಾಧಿಕಾರಿಗಳು ಮೇಲುಸ್ತುವಾರಿಯಲ್ಲಿ ನಡೆಯುತ್ತಿವೆ.

ಋ. ವಿದ್ಯಾರ್ಥಿವೇತನಗಳು

ಬುಡಕಟ್ಟು ಜನರ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಮೂಡಿಸಲು ಹಲವಾರು ವಿದ್ಯಾರ್ಥಿವೇತನವನ್ನು ಸರ್ಕಾರ ನೀಡುತ್ತಿದೆ. ಇತರೆ ಸೌಲಭ್ಯಗಳ ಜೊತೆ ಕಲಿಕೆಯಲ್ಲಿ ಮುಂದಿರುವ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿವೇತನದಿಂದ ಸಾಕಷ್ಟು ಆರ್ಥಿಕ

ಚೈತನ್ಯ ದೊರೆಕುತ್ತಿದೆ. ಅಲ್ಲದೇ ಪ್ರಥಮಬಾರಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ ಮೆರಿಟ್ ವಿದ್ಯಾರ್ಥಿವೇತನ ಸಹ ನೀಡಲಾಗುತ್ತಿದೆ.

ಋ. ಎಸ್.ಎಸ್.ಎಲ್.ಸಿ ಮೆಟ್ರಿಕ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ

ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡುವ ವಿದ್ಯಾರ್ಥಿಗೆ ರೂ. ೭೫೦ ಪ್ರೋತ್ಸಾಹ ಬಹುಮಾನ ಹಣವನ್ನು ನೀಡಲಾಗುತ್ತಿದೆ. ಆಯಾ ಜಿಲ್ಲೆಗಳಲ್ಲಿ ಅತೀ ಹೆಚ್ಚು ಅಂಕಗಳಿಸಿದ ಬುಡಕಟ್ಟು ವಿದ್ಯಾರ್ಥಿಗಳಿಗೆ ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಸರ್ಕಾರ ರೂ. ೫೦೦೦ ಬಹುಮಾನದ ಹಣವನ್ನು ವಿತರಣೆ ಮಾಡಲಾಗುತ್ತಿದೆ.

ಎ. ಬುಡಕಟ್ಟು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ

ಬುಡಕಟ್ಟು ಸಮುದಾಯಗಳ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಮೀಸಲಾದ ಶಾಲೆಗಳಿಗೆ ಆಯಾ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟಕ್ಕೆ ಆಧಾರವಾಗಿ ಈ ತರಬೇತಿಯನ್ನು ನೀಡಲಾಗುತ್ತಿದೆ. ಬುಡಕಟ್ಟು ಜನರು ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಅವರಿಗೆ ವಿಶೇಷ ಭೋದನಾ ತರಗತಿ ಹಾಗೂ ವಾರ್ಷಿಕ ಪರೀಕ್ಷಾ ದೃಷ್ಟಿಯಿಂದ ಮೂರು ತಿಂಗಳ ಕಾಲ ವಿಶೇಷ ಭೋದನೆಯನ್ನು ಶಾಲಾವಧಿ ಮುಗಿದ ನಂತರ ನೀಡಲಾಗುತ್ತಿದೆ.

ಏ. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಈ ಯೋಜನೆಯು ಅಲಕ್ಷಿತ ಸಮುದಾಯಗಳಿಗೆ ಕೇಂದ್ರಸರ್ಕಾರ ನೀಡುವ ಯೋಜನೆಯಾಗಿದೆ. ಬುಡಕಟ್ಟು ಜನರು ಮೆಟ್ರಿಕ್ ನಂತರದ ವಿದ್ಯಾಬ್ಯಾಸ ಮುಂದುವರೆಸಲು ಅನುಕೂಲ ಕಲ್ಪಿಸಿ ಮತ್ತು ಮದ್ಯದಲ್ಲಿ ಶಾಲೆ ಬಿಡುವುದನ್ನು ತಪ್ಪಿಸಲು ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ. ಶೇ. ೧೦೦ ರಷ್ಟು ಪಾಲು ಕೇಂದ್ರ ಪುರಸ್ಕೃತ ಅನುದಾನವಾಗಿದ್ದು ಬುಡಕಟ್ಟು ಜನರಿಗಾಗಿ ೨೦೦೨-೦೩ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ರೂ. ೫೧.೫೮ ಕೋಟಿಗಳು ಬಿಡುಗಡೆಯಾಗಿದೆ. ಕೋಷ್ಟಕ ೪.೧ ರಲ್ಲಿ ನೀಡಲಾದಂತೆ ವಿದ್ಯಾರ್ಥಿವೇತನದ ಪರಿಸ್ಕೃತ ದರಗಳು ಕೆಳಗಿನಂತಿದೆ.

ಕೋಷ್ಟಕ : ೪.೨ ಭಾರತ ಸರ್ಕಾರದ ಮೆಟ್ರಿಕ್‌ನಂತರದ ವಿದ್ಯಾರ್ಥಿವೇತನದ ದರ ಪಟ್ಟಿ

ಕ್ರ. ಸ.	ಮಾಸಿಕ ವಿದ್ಯಾರ್ಥಿವೇತನ ದರ ರೂ. ಗಳಲ್ಲಿ		
	ಕೋರ್ಸು	ನಿಲಯವಾಸಿಗಳಿಗೆ	ಇತರರಿಗೆ
೧	ವೈದ್ಯಕೀಯ ,ತಾಂತ್ರಿಕ, ಕೃಷಿ, ಮೀನುಗಾರಿಕೆ, ಪಶುಸಂಗೋಪನೆ, ಸ್ನಾತಕೋತ್ತರ ಪದವಿ	೭೪೦	೩೩೦
೨	ವಿಜ್ಞಾನ ಸ್ನಾತಕೋತ್ತರ ಪದವಿ ಡಿಪ್ಲೋಮ ಶಿಕ್ಷಣ, ಇತರ ಸರ್ಟಿಫಿಕೇಟ್ ಕೋರ್ಸ್‌ಗಳು	೫೧೦	೩೩೦
೩	ಸಾಮಾನ್ಯ ಪದವಿ ಶಿಕ್ಷಣದ ಎರಡು ಮತ್ತು ನಂತರದ ವರ್ಷಗಳು	೩೫೫	೧೮೫
೪	ಪಿಯುಸಿ ಮತ್ತು ಸಾಮಾನ್ಯ ಪದವಿಯ ಮೊದಲವರ್ಷ	೨೩೫	೧೪೦

(ಆಧಾರ : ಸರ್ಕಾರಿ ಆದೇಶ ಸಂಖ್ಯೆ ೧೧೦೧೭/೭/೨೦೦೨ ದಿನಾಂಕ ೦೮.೦೧.೨೦೦೪)

ಐ. ಪುರಸ್ಕಾರ ಬಹುಮಾನ

ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತೀರ್ಣರಾದರೆ ಅಂತಹ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತಿದೆ. ಅವುಗಳೆಂದರೆ, ಬಹುಮಾನದ ವಿವರ

೧. ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ – ರೂ. ೭೫೦.೦೦

೨. ಪದವಿ – ರೂ. ೧೦೦೦.೦೦

೩. ಸಾತ್ನಕ ಪದವಿ – ರೂ. ೧೨೫೦.೦೦

೪. ತಾಂತ್ರಿಕ ಪದವಿ – ರೂ. ೧೫೦೦.೦೦

೫. ವೈದ್ಯಕೀಯ ಪದವಿ – ರೂ. ೧೫೦೦.೦೦

೬. ಕೃಷಿ ಮತ್ತು ಪಶು ವೈದ್ಯ – ರೂ. ೧೫೦೦.೦೦

ಈ ಬಹುಮಾನ ಪಡೆಯಲು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ನೀಡುವ ಅರ್ಜಿಯ ಜೊತೆಗೆ ಜಾತಿ ಪ್ರಮಾಣ ಪತ್ರ, ಪರೀಕ್ಷೆಯಲ್ಲಿ ಪಡೆದ ಅಂಕಪಟ್ಟಿ ಆಯಾ ಕಾಲೇಜು ಪ್ರಾಂಶುಪಾಲರ ಅನುಮೋದನೆ ಮಾಡಿ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿದಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ಮಂಜೂರು ಮಾಡುವರು.

ಒ. ಹೆಣ್ಣು ಮಕ್ಕಳಿಗೆ ಟಿ.ಸಿ.ಎಚ್ ತರಬೇತಿ:

ಶಿಕ್ಷಣ ಇಲಾಖೆಯ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಬುಡಕಟ್ಟು ಸಮುದಾಯಗಳಿಗೆ ಸೇರಿದ ಹೆಣ್ಣು ಮಕ್ಕಳ ಉದ್ಯೋಗದ ಪ್ರಮಾಣ ಕಡಿಮೆ ಇದೆ. ಆದರಿಂದ

ಈ ಹುದ್ದೆಗಳಿಗೆ ಅರ್ಹತೆಗಳಿಸಲು ಅನುಕೂಲವಾಗುವಂತೆ ಬುಡಕಟ್ಟು ಹೆಣ್ಣು ಮಕ್ಕಳಿಗೆ ಟಿ.ಸಿ.ಹೆಚ್ ಸೇರುವ ಸಲುವಾಗಿ ಪ್ರೋತ್ಸಾಹ ನೀಡುವುದಕ್ಕಾಗಿ ಪಠ್ಯ ಪುಸ್ತಕ, ಸೀರೆ ಮತ್ತು ರವಿಕೆ ಲೇಖನ ಸಾಮಾಗ್ರಿಗಳು ಹಾಗೂ ಧನ ಸಹಾಯ ನೀಡಲಾಗುತ್ತಿದೆ. ಈ ಯೋಜನೆಗೆ ಅರ್ಹತೆಯ ಮೇಲೆ ವಿದ್ಯಾರ್ಥಿಗಳನ್ನು ಆಯಾ ಜಿಲ್ಲಾವ್ಯಾಪ್ತಿಯ ಸಮಾಜ ಕಲ್ಯಾಣಾಧಿಕಾರಿಗಳು ಆಯ್ಕೆ ಮಾಡುತ್ತಿದ್ದಾರೆ.

೬. ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು:

ಬುಡಕಟ್ಟು ಸಮುದಾಯಗಳಲ್ಲಿನ ನಿರುದ್ಯೋಗಿ ಯುವಕರ ಪಡೆಗೆ ಪರ್ಯಾಯವಾಗಿ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಿ, ಸ್ವಯಂ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ ಆಯ್ಕೆಯಾದ ಪ್ರತಿ ವಿದ್ಯಾರ್ಥಿಗೆ ನಗರ ಪ್ರದೇಶದಲ್ಲಿ ರೂ. ೧೫೦ ಮತ್ತು ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ರೂ. ೩೦೦ ಶಿಷ್ಯಾವೇತನ ನೀಡಿ ಲಘುವಾಹನ ಮತ್ತು ಭಾರಿವಾಹನ ಚಾಲನೆ, ಆಟೋ ರಿಕ್ಷಾಚಾಲನೆ, ಗಣಕಯಂತ್ರ ತರಬೇತಿಯನ್ನು ನೀಡಲಾಗುತ್ತಿದೆ. ವಾಹನ ತರಬೇತಿಯ ನಂತರ ವಾಹನ ಚಾಲನೆಯ ಪರವಾನಿಗೆ ಮತ್ತು ಸಾಲ ಸೌಲಭ್ಯದ ನೆರವು ನೀಡಲಾಗುತ್ತದೆ.

೭. ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳು.

ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ಬುಡಕಟ್ಟು ಜನರ ವಿದ್ಯಾರ್ಥಿಗಳಿಗೆ ಅವರ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಬೇಕಾಗುವ ತಾಂತ್ರಿಕ ಸಲಕರಣೆಗಳಾದ ಡ್ರಾಯಿಂಗ್ ಬೋರ್ಡ್, ಸೈಂಟಿಫಿಕ್ ಕ್ಯಾಲುಕಲೇಟರ್ ಮತ್ತು ಇತರೆ ತಾಂತ್ರಿಕ ಸಲಕರಣೆಗಳನ್ನು ನೀಡಲಾಗುತ್ತಿದೆ. ಈ ಸೌಲಭ್ಯ ಒದಗಿಸುವ ಮೂಲಕ ಜನರನ್ನು ಪ್ರಗತಿಯತ್ತ ಕರೆತರಲು ಸಾಧ್ಯವೆಂದೆ ಭಾವಿಸಿ ಯೋಜನೆ ರೂಪಿಸಲಾಗಿದೆ.

೮೦. ಪುಸ್ತಕ ಭಂಡಾರ ಸ್ಥಾಪಿಸುವ ಯೋಜನೆ

ಈ ಯೋಜನೆಯಡಿಯಲ್ಲಿ ವೃತ್ತಿಪರ ಕೋರ್ಸ್‌ಗಳಲ್ಲಿ ಓದುತ್ತಿರುವ ಹಾಗೂ ಆ ಕೋರ್ಸ್‌ಗಳಿಗೆ ನಿಗದಿಪಡಿಸಿರುವ ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ವೈದ್ಯಕೀಯ, ತಾಂತ್ರಿಕ, ಕೃಷಿ, ಪಶುವಿಜ್ಞಾನ, ಪಾಲಿಟೆಕ್ನಿಕ್, ಕಾನೂನು, ಎಂ.ಬಿ.ಎ., ಎಂ.ಸಿ.ಎ. ಮುಂತಾದ ವೃತ್ತಿಪರ ವಿಷಯಗಳಿಗೆ ಸೇರಿದ್ದಲ್ಲಿ ಅಂತಹ ಕೋರ್ಸ್‌ಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅಂಗೀಕೃತ ಆಯಾ ಕಾಲೇಜುಗಳಲ್ಲಿ ಪುಸ್ತಕಗಳನ್ನು ವಿದ್ಯಾರ್ಥಿಗಳು ಪಡೆಯಬಹುದು. ಕಾಲೇಜುಗಳಿಗೆ ಸಂಬಂಧಪಟ್ಟ ಇಲಾಖೆಯು ಪುಸ್ತಕಗಳನ್ನು ಪೂರೈಸುತ್ತಿದೆ. ಇಂತಹ ಪುಸ್ತಕಗಳು ೩ ವರ್ಷಗಳ ಕಾಲ ಪ್ರತ್ಯೇಕವಾಗಿ ಬುಡಕಟ್ಟು ಜನರ ವಿದ್ಯಾರ್ಥಿಗಳ ಪರಾಮರ್ಶನಕ್ಕಾಗಿ ಕಾಯ್ದಿರಿಸಲಾಗುವುದು.

ಈ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮನಾಗಿ ಹಣಕಾಸು ವೆಚ್ಚವನ್ನು ಭರಿಸುತ್ತಿವೆ. ಈ ಯೋಜನೆಯು ಪ್ರತಿ ಎರಡು ವಿದ್ಯಾರ್ಥಿಗೆ ಅನುಗುಣವಾಗಿ ಒಂದು ಸೆಟ್‌ನಂತೆ ಪುಸ್ತಕ ಖರೀದಿಸಿ ನೀಡುತ್ತಾರೆ. ಅಲ್ಲದೆ ಈ ಪುಸ್ತಕಗಳನ್ನು ಸುರಕ್ಷಿತವಾಗಿಡಲು ಅಗತ್ಯವಾದ ಕಪಾಟುಗಳನ್ನು ನೀಡಲು ಅವಕಾಶ ಮಾಡಲಾಗಿದೆ. ೨೦೦೨–೦೩ನೇ ಸಾಲಿನಲ್ಲಿ ಈ ಯೋಜನೆಯಡಿ ದೇಶದಲ್ಲಿ ರೂ. ೪.೭೭ ಕೋಟಿ ಖರ್ಚುಮಾಡಲಾಗಿದೆ. ೨೦೦೩–೦೪ನೇ ಸಾಲಿನಲ್ಲಿ ಈ ಯೋಜನೆಯನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ ಯೋಜನೆಯಲ್ಲಿ ವಿಲೀನಗೊಳಿಸಲಾಗಿದೆ.

ಈ ಯೋಜನೆಯಡಿಯಲ್ಲಿ ಕೊಳ್ಳುವ ಪುಸ್ತಕಗಳ ಗರಿಷ್ಟ ಮಿತಿ ಕೆಳಕಂಡಂತಿದೆ.

೧. ವೈದ್ಯಕೀಯ, ಹೋಮಿಯೋಪಥಿ, ಆಲೋಪತಿ, ಆಯುರ್ವೇದಿಕ, ತಾಂತ್ರಿಕ ವಿಷಯಗಳು (ಪ್ರತಿ ಸೆಟ್)	–	ರೂ.೭೫೦೦.೦೦
೨. ಪಶುವಿಜ್ಞಾನ ವಿಷಯ (ಪ್ರತಿ ಸೆಟ್)	–	ರೂ.೭೫೦೦.೦೦
೩. ಕೃಷಿವಿಜ್ಞಾನ ವಿಷಯ (ಪ್ರತಿ ಸೆಟ್)	–	ರೂ.೪೫೦೦.೦೦
೪. ಕಾನೂನು ಮತ್ತು ಎಂ.ಬಿ.ಎ. (ಪ್ರತಿ ಸೆಟ್)	–	ರೂ.೫೦೦೦.೦೦
೫. ವೃತ್ತಿಪರ ವಿಷಯ (ಪ್ರತಿ ಸೆಟ್)	–	ರೂ.೨೪೦೦.೦೦

ಈ ಯೋಜನೆಯ ಉಸ್ತುವಾರಿಯನ್ನು ಆಯಾ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮತ್ತು ಕಾರ್ಯನಿರ್ವಹಣ ಅಧಿಕಾರಿಗಳು ಜಿಲ್ಲಾ ಪಂಚಾಯತಿಯ ಮುಖಾಂತರ ಅನುಷ್ಠಾನ ಗೊಳಿಸುತ್ತಾರೆ. ಜಿಲ್ಲಾ ಪಂಚಾಯತಿಯ ಸಾಮಾಜಿಕ ನ್ಯಾಯದ ಸ್ಥಾಯೀ ಸಮಿತಿಯ ಅನುಮೋದನೆ ಈ ಯೋಜನೆಗೆ ಅಗತ್ಯವಾಗಿದೆ.

ಅಃ : ಶಾಲಾ ಶೈಕ್ಷಣಿಕ ಸಂಕೀರ್ಣ

ಈ ಯೋಜನೆಯನ್ನು ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳ ಶೈಕ್ಷಣಿಕ ಮಟ್ಟವನ್ನು ಸುಧಾರಿಸಲು ಕೇಂದ್ರಸರ್ಕಾರವು ಎಜುಕೇಷನಲ್ ಕಾಂಪ್ಲೆಕ್ಸ್‌ಗಳನ್ನು ಪ್ರಾರಂಭಿಸುವುದಾಗಿ ಜಾರಿಗೆ ತಂದಿವೆ. ಈ ಯೋಜನೆಯಡಿ ದೇಶಾದ್ಯಂತ ೧೮೩ ಎಜುಕೇಷನಲ್ ಕಾಂಪ್ಲೆಕ್ಸ್‌ಗಳನ್ನು ಸ್ಥಾಪಿಸಿದೆ. ಇದರಲ್ಲಿ ಪ್ರತಿವರ್ಷ ೨೦,೦೦೦ ವಿದ್ಯಾರ್ಥಿನಿಯರು ದಾಖಲಾಗುತ್ತಿದ್ದಾರೆ. ರಾಜ್ಯದಲ್ಲಿ ಮೈಸೂರು ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕಾಂಪ್ಲೆಕ್ಸ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಸಮುದಾಯದ ವಿದ್ಯಾರ್ಥಿನಿಯರಿಗೆ ವಸತಿ ಸಹಿತ ಶಿಕ್ಷಣದ ವ್ಯವಸ್ಥೆಯನ್ನು ಮಾಡಲಾಗುವುದು. ಕ್ರೀಡಾ ಪಠ್ಯೇತರ ಚಟುವಟಿಕೆ, ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಪ್ರಾರಂಭದ ಈ ಎಜುಕೇಶನ್ ಕಾಂಪ್ಲೆಕ್ಸ್‌ಗಳಲ್ಲಿ ಒಂದರಿಂದ ಐದನೇ ತರಗತಿವರೆಗೆ ಶಿಕ್ಷಣ ನೀಡುತ್ತಿದ್ದು ಈಗ ಹನ್ನೆರಡನೇ ತರಗತಿವರೆಗೆ ಶಿಕ್ಷಣ ನೀಡಲು ಅವಕಾಶ ಮಾಡಲಾಗಿದೆ. ಪ್ರತಿ ತರಗತಿಯಲ್ಲಿ ೩೦ ವಿದ್ಯಾರ್ಥಿನಿಯರಿಗೆ ಅವಕಾಶವಿರುತ್ತದೆ. ಪ್ರತಿ ವಿದ್ಯಾರ್ಥಿನಿಗೆ ರೂ. ೯೦೦೦ ವರೆಗೆ ಅವರ್ತ ವೆಚ್ಚವನ್ನು ಭರಿಸಲು ಅನುಧಾನವನ್ನು ನೀಡಲಾಗುತ್ತಿದೆ.

ಪ್ರತಿ ವಿದ್ಯಾರ್ಥಿನಿಗೆ ೨ ಜೊತೆ ಸಮವಸ್ತ್ರ, ಪಠ್ಯಪುಸ್ತಕ, ಉಚಿತ ಊಟ ಮತ್ತು ವೈದ್ಯಕೀಯ ಸೌಲಭ್ಯ ಪ್ರತಿ ವಿದ್ಯಾರ್ಥಿನಿಯರ ಪೋಷಕರಿಗೆ ರೂ. ೫೦ ಮಾಹೆಯಾನ ವಿಶೇಷ ಭತ್ಯೆ ಹಾಗೂ ಪ್ರತಿ ವಿದ್ಯಾರ್ಥಿನಿಗೆ ಅಗತ್ಯವಾದ ಹಾಸಿಗೆ, ಮಂಚ, ಪಾತ್ರೆ ಇತ್ಯಾದಿಗಳಾಗಿ ೧೦೦೦ ರೂ.ಗಳ ವರೆಗೆ ವೆಚ್ಚ ಭರಿಸುತ್ತಿದೆ.

ಕ. ಸಾಮಾಜಿಕ ಭದ್ರತೆ ಯೋಜನೆ

ಈ ಯೋಜನೆಯ ಅಡಿಯಲ್ಲಿ ೧೯೯೨-೯೩ ರಿಂದ ೧೮ ರಿಂದ ೬೦ ವರ್ಷದ ಎಲ್ಲಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಅರಣ್ಯ ಕೂಲಿಗಾರರಿಗೆ ಜೀವ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಖ. ಅಸ್ಪೃಶ್ಯತೆ ನಿವಾರಣೆ

ಬುಡಕಟ್ಟು ಜನರು ದೌರ್ಜನ್ಯಕ್ಕೊಳಗಾದವರಿಗೆ ರೂ.೨,೦೦,೦೦೦ ಗಳ ವರೆಗೂ ನಷ್ಟದ ಪ್ರಮಾಣವನ್ನು ಆಧಾರವಾಗಿಟ್ಟುಕೊಂಡು ಪರಿಹಾರವನ್ನು ನೀಡಲಾಗುತ್ತಿದೆ. ಮೊದಲು ದೌರ್ಜನ್ಯ ಪ್ರಕರಣ ನೊಂದ ಸಂತ್ರಸ್ಥರಿಗೆ ಪರಿಹಾರ ಧನ ಶೇ.೨೫ನ್ನು ಪ್ರಕರಣದ ತನಿಖೆ ಮುಗಿದು ದೋಷಾರೋಪಣ ಪಟ್ಟಿಯನ್ನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ನೀಡಲಾಗುತ್ತಿತ್ತು. ಉಳಿದ ಶೇ.೭೫ ರಷ್ಟು ಪರಿಹಾರ ಧನವನ್ನು ಸದರಿ ಪ್ರಕರಣವು ಶಿಕ್ಷೆಯೊಂದಿಗೆ ಮುಕ್ತಾಯವಾದಲ್ಲಿ ಮಾತ್ರ ನೀಡಲಾಗುತ್ತಿತ್ತು. ಆದರೆ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ ಇದ್ದಕಾರಣ ಸಂತ್ರಸ್ಥರಿಗೆ ಪೂರ್ಣ ಪ್ರಮಾಣ ಪರಿಹಾರ ಸಿಗುತ್ತಿಲ್ಲವೆಂದು ಕರ್ನಾಟಕ ಸರ್ಕಾರ ಮನಗಂಡು ಪರಿಹಾರ ಧನ ನೀಡುವ ಹಿಂದಿನ ಸರ್ಕಾರಿ ಆದೇಶಕ್ಕೆ ತಿದ್ದುಪಡಿ ತಂದಿತು. ಶೇ.೧೦೦ ರಷ್ಟು ಪರಿಹಾರವನ್ನು ದೌರ್ಜನ್ಯ ಪ್ರಕರಣದಲ್ಲಿ ದೋಷಾರೋಹಣ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಿದ ಕೂಡಲೆ ವಿತರಣೆ ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ.

ಫ. ಎಂ.ಫಿಲ್ ಮತ್ತು ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ಫೆಲೋಷಿಫ್

ಈ ಯೋಜನೆಯಡಿಯಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ವಿವಿಧ ವಿಷಯಗಳಲ್ಲಿ ಸಂಶೋಧನೆಯಲ್ಲಿ ತೊಡಗಿರುವ ಬುಡಕಟ್ಟು ವಿದ್ಯಾರ್ಥಿಗಳಿಗೆ, ಸಂಶೋಧನೆ, ಮಾಹಿತಿ ಸಂಗ್ರಹಣೆ ಮುಂತಾದವುಗಳಿಗೆ ಅತಿ ಹೆಚ್ಚು ವೆಚ್ಚ ಭರಿಸಬೇಕಾಗಿರುವುದರಿಂದ ಎಂ.ಫಿಲ್ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. ೮೦೦೦ ಹಾಗೂ ಪಿ.ಎಚ್.ಡಿ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. ೧೦,೦೦೦ ನೀಡುವ ಯೋಜನೆಯನ್ನು ೨೦೦೦-೦೧ ನೇ ಸಾಲಿನಿಂದ ಗಿರಿಜನ ಕಲ್ಯಾಣ ಇಲಾಖೆಯಿಂದ ಕಾರ್ಯಗತಗೊಳಿಸಲಾಗುತ್ತಿದೆ.[೧೧]

ಗಿರಿಜನ ಉಪಯೋಜನೆ

೫ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಸಮುದಾಯಗಳ ವೈಶಿಷ್ಟ್ಯವನ್ನು ಮನಗಂಡ ಸರ್ಕಾರ ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಿತು. ೧೯೭೪-೭೫ ರಲ್ಲಿ (Tribal Sub Plan) ಸಮುದಾಯಗಳ ಅಭಿವೃದ್ಧಿಗಾಗಿ ವಿಶೇಷ ಗಮನ ಹರಿಸಿದೆ. ಬುಡಕಟ್ಟು ಸಮುದಾಯಗಳ ಪರಿಸರ ಸಮಸ್ಯೆ ಭಿನ್ನ ಆಗಿರುವಂತೆ ಕಡಿಮೆ ಜನರ ಸಂಪರ್ಕ ಅತಿ ಕೆಳ ಸ್ತರದ, ಹಿಂದುಳಿದ ಆರ್ಥಿಕ ಮತ್ತು ತಾಂತ್ರಿಕತೆಯಲ್ಲಿ ಕೆಲವು ಸಮುದಾಯಗಳನ್ನು ಮುಂದೆ ತರಲು ಹಾಗೂ ಜೀವನ ಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಅತಿಕೆಳಸ್ತರದಲ್ಲಿನ ಸಮುದಾಯಗಳನ್ನು ಬೇರೆಯೇಗಿ ಕಾಣುವ ಬಗೆಯನ್ನು ಯೋಚಿಸಿ ಅಂತಹ ಸಮುದಾಯಗಳನ್ನು ತೀರಾ ಹಿಂದುಳೀದ ಸಮುದಾಯಗಳೆಂದು (Primitive Tribal Groups) ವರ್ಗೀಕರಿಸಲಾಯಿತು.

ಭಾರತದ ಗೃಹ ಇಲಾಖೆಯು ಬುಡಕಟ್ಟು ಸಮುದಾಯಗಳಿಗೆ ವಿಶೇಷವೆಂಬಂತೆ ಗಿರಿಜನ ಉಪಯೋಜನೆ ಎಂಬ ಹೊಸ ಯೋಜನೆಯಡಿಯಲ್ಲಿ ಸಮುದಾಯಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಮುಖ್ಯವೆಂದು ಪರಿಗಣಿಸಿ. ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಇತರರಿಗೆ ಇರುವ ಯೋಜನೆಗಳಲ್ಲದೆ. ಉಪಯೋಜನೆಯ ಲಾಭವೂ ದೊರಕುತ್ತದೆ. ಈ ಯೋಜನೆಯನ್ನು ಕೇಂದ್ರದ ವಿಶೇಷ ಧನ ಸಹಾಯ ಮತ್ತು ರಾಜ್ಯಯೋಜನೆಯು ಇತರೆ ಹಣಕಾಸಿನ ಸಂಸ್ಥೆಗಳ ಮೂಲಕ ಅನುಷ್ಠಾನ ಗೊಳಿಸಲಾಗುತ್ತಿದೆ.

ಬುಡಕಟ್ಟು ಜನರ ಅಭ್ಯುದಯವೇ ಸರ್ಕಾರದ ಧ್ಯೇಯ. ಇದಕ್ಕಾಗಿ ವಿಶೇಷ ಗಮನ ಹರಿಸಲು ಪ್ರತ್ಯೇಕವಾಗಿ ಪರಿಶಿಷ್ಟ ವರ್ಗಗಳ ನಿರ್ದೇಶನಾಲಯವನ್ನು ಪ್ರಾರಂಭಿಸಲಾಗಿದೆ. ಆ ಮೂಲಕ ಅನುದಾನವನ್ನು ನಿರ್ಧಿಷ್ಟ ಪ್ರಮಾಣದಲ್ಲಿ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗುತ್ತಿದೆ.

ಗಿರಿಜನ ಯೋಜನೆಯ ಉದ್ದೇಶಗಳು:

೧. ಬುಡಕಟ್ಟು ಸಮುದಾಯದ ಜೀವನ ಮಟ್ಟವನ್ನು ಸುಧಾರಿಸುವುದು.
೨. ಬುಡಕಟ್ಟು ಮತ್ತು ಬುಡಕಟ್ಟು ಸಮುದಾಯವಲ್ಲದ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಇರುವ ಅಂತರವನ್ನು ಕಡಿಮೆ ಮಾಡುವುದು.
೩. ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಐಕ್ಯತೆಯನ್ನು ಪುನಃಶ್ಚೇತನ ಗೊಳಿಸುವುದು.
೪. ಮೂಲಭೂತ ಸೌಕರ್ಯ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆ ಒದಗಿಸುವುದು.
೫. ಬುಡಕಟ್ಟು ಜನರ ಶೋಷಣೆಯನ್ನು ತಪ್ಪಿಸುವುದು.
೬. ಉದ್ಯೋಗಾವಕಾಶವನ್ನು ಸೃಷ್ಟಿಸುವುದು.[೧]
೭. ವಿವಿಧ ತರಬೇತಿ ಪಡೆದವರಿಗೆ ಸಣ್ಣ ಮತ್ತು ಗ್ರಾಮೀಣ ಕೈಗಾರಿಕೆಗಳನ್ನು ಸ್ಥಾಪಿಸಲು ಸಹಾಯಮಾಡಿ ಅವರ ಆರ್ಥಿಕ ಮಟ್ಟವನ್ನು ಮೇಲೆತ್ತುವುದು ಈ ಗಿರಿಜನ ಯೋಜನೆಯ ಕಾರ್ಯಕ್ರಮವಾಗಿದೆ.

ಗಿರಿಜನ ಉಪಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯದ ೫ ಜಿಲ್ಲೆಗಳಲ್ಲಿ ಸಂಯೋಜಿತ ಗಿರಿಜನ ಅಭಿವೃದ್ಧಿ ಯೋಜನೆಗಳ ಉಸ್ತುವಾರಿಗಾಗಿ ಯೋಜನಾ ಸಮನ್ವಯಾಧಿಕಾರಿಗಳನ್ನು ಮತ್ತು ೫ ಐ.ಟಿ.ಡಿ,ಪಿ ಕೇಂದ್ರಗಳನ್ನು ಚಿಕ್ಕಮಂಗಳೂರು, ಕೊಡಗು,ಮೈಸೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ.

ಗಿರಿಜನ ಉಪಯೋಜನೆಯಿಂದ ದೇಶದ ಶೇ ೬೫% ಬುಡಕಟ್ಟು ಜನರು ಉಪಯೋಗ ಪಡೆದುಕೊಂಡಿದ್ದಾರೆ. ಉಳಿದ ಶೇ ೩೫% ಬುಡಕಟ್ಟು ಜನರು ಬುಡಕಟ್ಟು ಪ್ರದೇಶವಲ್ಲದೆ ಇತರೆ ಪ್ರದೇಶಗಳಲ್ಲಿ ಹಂಚಿ ಹೋಗಿದ್ದಾರೆ. ೬ನೇ ಪಂಚವಾಷಿಕ ಯೋಜನೆಯ ವೇಳೆಗೆ ಅತಿ ಹಿಂದುಳಿದ ಬುಡಕಟ್ಟು ಸಮುದಾಯಗಳನ್ನು ಗುರುತಿಸಿ ಗಿರಿಜನ ಉಪಯೋಜನೆಯು ಇಂತಹ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಮಹತ್ವ ನೀಡಲಾಗಿದೆ. ಗಿರಿಜನ ಉಪಯೋಜನೆ ದೇಶದ ೨/೩ ಭಾಗದ ಬುಡಕಟ್ಟು ಸಮುದಾಯಗಳು ಅಭಿವೃದ್ಧಿ ಹೊದಲು ಸಾಧ್ಯವಾಗಿ ಉಳಿದಂತೆ ಅಭಿವೃದ್ಧಿ ಕಾರ್ಯ ನಿಧಾನ ಗತಿಯಲ್ಲಿ ಸಾಗುತ್ತಾನಡೆದು ಬಂದ ಕಾರಣ ಭಾರತ ಸರ್ಕಾರವೂ ವಿಶೇಷವಾಗಿ ಬುಡಕಟ್ಟು ಅಭಿವೃದ್ಧಿಗೆಂದೇ ಪ್ರತ್ಯೇಕ ಬುಡಕಟ್ಟು ವ್ಯವಹಾರಗಳ ಸಚಿವಾಲಯವೊಂದನ್ನು ೧೯೯೯ನೇ ಅಕ್ಟೋಬರ್ ತಿಂಗಳಲ್ಲಿ ಹೊಸದಾಗಿರಚಿಸಿದೆ. ಈ ಕೇಂದ್ರವು ಸರ್ಕಾರದಲ್ಲಿ ಪ್ರತ್ಯೇಕ ಸಚಿವಾಲಯ ಮತು ನಿರ್ದೇಶನಾಲಯಗಳಿಂದ ಬುಡಕಟ್ಟು ಜನರ ಸಮಸ್ಯೆ ಬಗ್ಗೆಹರಿಸಿ ಅವರ ಪ್ರತ್ಯೇಕ ರಾಷ್ಟ್ರೀಯ ಆಯೋಗ ಸ್ಥಾಪನೆಯಾಗಿರುವುದು ಸ್ವಾಗತಾರ್ಹ ವಿಷಯವಾಗಿದೆ.

ಗಿರಿಜನ ಉಪಯೋಜನೆಯ ಮೂಲಕ ಬುಡಕಟ್ಟು ಜನರಿಗೆ ಉದ್ಯೋಗ ಮತ್ತು ಆದಾಯದ ಮೂಲವಾಗಿ ಸರ್ಕಾರವು ವಿವಿಧ ಇಲಾಖೆಗಳ ಸಮನ್ವಯದಿಂದ ಯೋಜನೆಗಳನ್ನು

ಅನುಷ್ಠಾನ ಗೊಳಿಲಾಗುತ್ತಿದೆ. ಈ ಯೋಜನೆಗಳು ತೀರಾ ಹಿಂದುಳಿದ ಜೇನುಕುರುಬ ಮತ್ತು ಕೊರಗರಿಗೂ ಅನ್ವಯವಾಗುವುದಲ್ಲದೆ. ವಿಶೇಷವಾಗಿ ಆದಿವಾಸಿ ಪಂಗಡಕ್ಕೆ ವಿಶೇಷ ಯೋಜನೆಗಳನ್ನು ಅನುಷ್ಠಾಣ ಗೊಳಿಸಲಾಗಿದೆ.

- ಕೃಷಿ
- ತೋಟಗಾರಿಕೆ
- ನೀರಾವರಿ
- ಮೀನುಗಾರಿಕೆ
- ಭೂ ಮತ್ತು ಜಲಸಂರಕ್ಷಣೆ, ಈ ಎಲ್ಲಾ ಕ್ಷೇತ್ರಗಳು ಸಮುದಾಯಗಳ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ.

ವಿವಿಧ್ಧೋದ್ದೇಶ ಸಹಕಾರ ಸಂಘ / ಲ್ಯಾಂಪ್ಸ್

ಬುಡಕಟ್ಟು ಸಮುದಾಯಗಳ ಪಾರಂಪರಿಕ ಅರಣ್ಯ ಉತ್ಪನ್ನಗಳ ಹಿನ್ನೆಲೆಯಿಂದ ಹಾಗೂ ಉತ್ಪಾಧನೆಗೆ ಅಗತ್ಯವಾದ ಬಂಡವಾಳ ಒದಗಿಸುವುದು ಅಲ್ಲದೆ ಸಹಕಾರ ಸಂಘಗಳಿಂದ ಜನರಿಗೆ ಕಚ್ಚಾವಸ್ತುಗಳನ್ನು ಪೂರೈಸುವುದು, ತಯಾರಾದ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವುದರ ಜೊತೆಗೆ ಸಮುದಾಯಗಳ ಜನರಿಗೆ ಸಾಲಸೌಲಭ್ಯದೊಂದಿಗೆ ಆರ್ಥಿಕ ಸ್ಥಿತಿ ಉತ್ತಮ ಪಡಿಸುವ ನಿಟ್ಟಿನಲ್ಲಿ ಸುಮಾರು ೨೫೦೦ ಬೃಹತ್ ಗಾತ್ರದ ಸಹಕಾರ ಸಂಘಗಳು ಸ್ಥಾಪನೆಯಾಗಿವೆ. ಇವುಗಳು ೩ ಬಗೆಯ ಕಾರ್ಯಗಳನ್ನು ನಿರ್ವಹಿಸುವುದರ ಮೂಲಕ ಜನರಲ್ಲಿ ಆರ್ಥಿಕ ಸ್ವಾವಲಂಬನೆ ಸಹಕಾರಿಯಾಗಿವೆ.

೧. ಉತ್ಪಾಧನೆ ಮತ್ತು ಅನುಭೋಗಕ್ಕೆ ಸಾಲ ಒದಗಿಸುವುದು.
೨. ಬುಡಕಟ್ಟಿನವರು ಸಂಗ್ರಹಿಸಿದ ಅಥವಾ ಉತ್ಪಾಧಿಸಿದ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸುವುದು.
೩. ಬುಡಕಟ್ಟು ಜನರ ನಿತ್ಯ ಜೀವನಕ್ಕೆ ಅವಶ್ಯಕವಾದ ಆಹಾರ ಪದಾರ್ಥಗಳನ್ನು ಹಾಗೂ ಕೃಷಿಗೆ ಬೇಕಾದ ಬೀಜ, ಗೊಬ್ಬರ ಇತರೆ ಪರಿಕರಗಳನ್ನು ಒದಗಿಸುವ ಕಾರ್ಯ ನಿರ್ವಹಿಸುತ್ತಿವೆ.

ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ದೃಷ್ಟಿಯಿಂದ ಸಹಕಾರಿತತ್ವದ ಆಧಾರದ ಮೇಲೆ ಲ್ಯಾಂಪ್ಸ್ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಂಘಗಳು ಸದಸ್ಯರನ್ನು ನೊಂದಾಯಿಸಿಕೊಂಡು ಅವರುಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ. ಸ್ಥಳೀಯ ಲೇವಾದೇವಿದಾರರಿಂದ ತಪ್ಪಿಸುವುದು ಮತ್ತು ಸಮುದಾಯಗಳ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಒದಗಿಸುವಲ್ಲಿ ಕಾರ್ಯನಿರತವಾಗಿವೆ.

ರಾಜ್ಯದಲ್ಲಿ ೨೧ ಲ್ಯಾಂಪ್ಸ್ ಸಹಕಾರ ಸಂಘಗಳಿದ್ದು ಒಟ್ಟು ೬೨,೩೩೪ ಸದಸ್ಯರೊನ್ನಳಗೊಂಡು ಕಾರ್ಯನಿರ್ವಹಿಸುತ್ತಿವೆ. ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ಆರ್ಥಿಕ

ಚೈತನ್ಯ ತುಂಬಲು ಸರ್ಕಾರ ೧೯೮೭ರಲ್ಲಿ ಟ್ರೈಫೆಡ್ ಎಂಬ ಸಂಸ್ಥೆಯನ್ನು (Tribal Co-Operative Marketing Development Federation Of India) ಸ್ಥಾಪಿಸಿದೆ. ಈ ಸಂಸ್ಥೆಯು ರಾಜ್ಯದ ಎಲ್ಲಾ ೨೧ ಸಂಘಗಳಿಗೆ ಸ್ವತ್ತಿನ ನಿಧಿಯನ್ನು ಒದಗಿಸುತ್ತಿದೆ.

ಸಮುದಾಯಗಳ ಅಭಿವೃದ್ಧಿಗಾಗಿ ಇರುವ ಮಾರ್ಗಗಳಲ್ಲಿ ಲ್ಯಾಂಪ್ಸ್ ಸಹ ಒಂದು ಮಾರ್ಗವೆಂದೇ ಪರಿಬಾವಿಸಲಾಗಿದೆ. ಜನರು ಉತ್ಪಾಧಿಸುವ ವಸ್ತುಗಳಿಗೆ ಸ್ಪರ್ಧಾತ್ಮಕ ಬೆಲೆಗಳನ್ನು ನೀಡುವುದು, ಮತ್ತು ಮಾರುಕಟ್ಟೆ ಒದಗಿಸುವುದು ಮುಖ್ಯವಾದರೆ, ಇತರ ಮಧ್ಯವರ್ತಿ ಜನರಿಂದ ಸಮುದಾಯಗಳ ಸುಲಿಗೆ ತಪ್ಪಿಸುವುದು ಮುಖ್ಯವೆಂದು ಬಾವಿಸಿದೆ. ಹೀಗಾಗಿ ಲ್ಯಾಂಪ್ಸ್ ಸಹಕಾರ ಸಂಘಗಳು ಅಸ್ಥಿತ್ವದಲ್ಲಿವೆ. ರಾಜ್ಯದಲ್ಲಿನ ೨೧ ಕೇಂದ್ರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಹಾಗೂ ಲ್ಯಾಂಪ್ಸ್‌ಗಳ ಉಪಯೋಗ ಮೂಲನಿವಾಸಿ ಬುಡಕಟ್ಟು ಸಮುದಾಯದಲ್ಲಿ ಕ್ಷೇತ್ರದಲ್ಲಿ ಮಾಹಿತಿ ಪಡೆಯಲಾದಂತೆ ನೀಡಲಾಗಿದೆ.

ಬುಡಕಟ್ಟು ಅಭಿವೃದ್ಧಿಗಾಗಿ ಮೈಸೂರು, ಚಾಮರಾಜನಗರ, ಉಡುಪಿ ಜಿಲ್ಲೆಗಳಲ್ಲಿ ಸಮಗ್ರ ಗಿರಿಜನ ಅಭಿವೃದ್ಧಿಯೋಜನೆ ಎನ್ನುವ ಇಲಾಖೆಯನ್ನು ತೆರೆಯಲಾಗಿದೆ. ಈ ಇಲಾಖೆಯು ಹಮ್ಮಿಕೊಂಡಿರುವ ಅನೇಕ ಕಾರ್ಯಕ್ರಮಗಳು ಈ ಕೆಳಕಂಡಂತಿವೆ. ಬುಡಕಟ್ಟು ಸಮುದಾಯಗಳನ್ನು ಬಡತನ ರೇಖೆಯಿಂದ ಮೇಲೆ ತರಲು ಸಹಾಯಕವಾಗುವಂತಹ ಈ ಯೋಜನೆಗಳ ಮೂಲಕ ಅಧೀಕ ಸಹಾಯ ನೀಡುವುದು ಸರ್ಕಾರದ ಉದ್ದೇಶವಾಗಿದೆ. ಎಲ್ಲಾ ಬುಡಕಟ್ಟು ಸಮುದಾಯಗಳ ಸಂಸ್ಕೃತಿಯನ್ನು ರಕ್ಷಿಸಲು ಮತ್ತು ಅವರ ಕಲ್ಯಾಣಕ್ಕೆ ಸಹಾಯಕವಾಗುವಂತಹ ಕಾನೂನುಗಳನ್ನು ರೂಪಿಸುವುದು ಮತ್ತು ಸಮುದಾಯಗಳಿಗೆ ವಸತಿ, ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಗಿರಿಜನ ಉಪಯೋಜನೆಯ ಮುಖ್ಯ ಧ್ಯೇಯ. ಸಮುದಾಯಗಳ ಕುಟುಂಬಗಳ ಬೌದ್ಧಿಕ ಮಟ್ಟ, ಆರ್ಥಿಕ ಮಟ್ಟದ ಅಧಾರದ ಮೇಲೆ ಅವರಿಗೆ ಆರ್ಥಿಕ ಸಹಾಯ ಮಾಡುವುದು, ನೀರಾವರಿ ಬಾವಿಗಳ ನಿರ್ಮಾಣಕ್ಕೆ ಸಾಲ, ಕಡಿಮೆ ಅವಧಿಯ ಸಾಲ ಮತ್ತು ಇವುಗಳಿಗೆ ಮೂಲ ಬಂಡವಾಳ ಒದಗಿಸುವುದ್. ಸಮುದಾಯಗಳಲ್ಲಿನ ಮಾನವ ಸಂಪನ್ಮೂಲ ಸದುಪಯೋಗಕ್ಕೆ ತರಬೇತಿ ಪಡೆದವರಿಗೆ ಸಣ್ಣ ಮತ್ತು ಸಣ್ಣ ಕೈಗಾರಿಕೆ, ಉದ್ಯಮ ಸ್ಥಾಪನೆಗೆ ಸಹಾಯ ಮಾಡಿ, ಅವರ ಆರ್ಥಿಕ ಮಟ್ಟವನ್ನು ಮೇಲೆತ್ತುವುದು ಈ ಗಿರಿಜನ ಉಪಯೋಜನೆಯ ಕಾರ್ಯಕ್ರಮವಾಗಿದೆ.

ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿರುವ ೫ ಜಿಲ್ಲೆಗಳಾದ ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ ಮತ್ತು ಚಿಕ್ಕಮಂಗಳೂರುಗಳಲ್ಲಿ ಸಂಯೋಜಿತ ಗಿರಿಜನ ಅಭಿವೃದ್ಧಿ ಯೋಜನೆಗಳ ಉಸ್ತುವಾರಿಗಾಗಿ ಒಂದನೇ ವರ್ಗದ ೫ ಜನ ಯೋಜನಾ ಸಮನ್ವಯಾಧಿಕಾರಿಗಳಿದ್ದು, ಇವರುಗಳು ಜಿಲ್ಲಾ ಪಂಚಾಯತಿಗೆ ಸಹಾಯಕರಾಗಿ ಕೆಲಸಮಾಡುತ್ತಿದ್ದಾರೆ. ಅಲ್ಲದೆ ವಿಶೇಷವಾಗಿ ಹುಣಸೂರು ಮತ್ತು ಚಾಮರಾಜನಗರ ಉಡುಪಿ

ಜಿಲ್ಲೆಗಳಲ್ಲಿ ಒಬ್ಬರೂ ವಿಶೇಷಾಧಿಕಾರಿಯೂ ಕಾರ್ಯಕ್ರಮಗಳ ಉಸ್ತುವಾರಿ ವಹಿಸಿಕೊಂಡಿದ್ದಾರೆ.

ಅ) ಮನೆಗಳು: ಜಿಲ್ಲಾ ಪಂಚಾಯತ್ ಮನೆಗಳ ನಿರ್ಮಾಣಕ್ಕೆ ಆದ್ಯತೆ ನೀಡಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು ೩೦೩೦ ಮನೆಗಳನ್ನು ನಿರ್ಮಿಸಿಕೊಟ್ಟಿದೆ. ಈ ಮನೆಗಳನ್ನು ಭೂಸೇನಾ ನಿಗಮದವರು ಈ ಮನೆಗಳನ್ನು ನಿರ್ಮಿಸಿದ್ದಾರೆ. ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಕುಟುಂಬಗಳಿಗೆ ಆಶ್ರಯ ನಿವೇಶನ ವಿತರಣೆ ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಮನೆಗಳನ್ನು ವಿತರಿಸಲಾಗುತ್ತಿದೆ. ಆಶ್ರಯ ಯೋಜನೆಯಡಿ ನಿರ್ಮಾಣವಾಗುವ ಮನೆಗಳಿಗೆ ಸಹಾಯಧನ ನೀಡುವುದು. ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ ತಲಾ ರೂ. ೯,೦೦೦ ರೂ.ನಲ್ಲಿ ಹುಲ್ಲಿನ ಛಾವಣಿಯನ್ನು ಬದಲಿಸಿ ಆರ್.ಸಿ.ಸಿ. ಛಾವಣಿ ಹಾಕಿಸಿ ಕೊಡಲಾಗುತ್ತಿದೆ.

ಅಲ್ಲದೆ ಅಂಬೇಡ್ಕರ್ ವಸತಿ ಯೋಜನೆಯಲ್ಲಿ ಪ್ರತಿ ಕುಟುಂಬಗಳಿಗೆ ರೂ. ೨೦,೦೦೦ ಗಳಂತೆ ಮನೆಗಳ ನಿರ್ಮಾಣ ಮಾಡಿಕೊಡಲಾಗುತ್ತಿದೆ. ಇದರಲ್ಲಿ ರೂ. ೧೯,೦೦೦ ಗಳನ್ನು ಗಿರಿಜನ ಕಲ್ಯಾಣ ಇಲಾಖೆಯು ಸಹಾಯಧನವನ್ನಾಗಿ ನೀಡುತ್ತಿದೆ. ಉಳಿದ ರೂ. ೧,೦೦೦ ಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯು ನೀಡುತ್ತಿದೆ. ಈ ಎರಡು ಯೋಜನೆಯಡಿಯಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಅನೇಕ ಮನೆಗಳನ್ನು ನಿರ್ಮಿಸಿಕೊಟ್ಟಿದೆ. ೨೦೦೧ ರಿಂದ ೨೦೦೫ನೇ ಸಾಲಿನಲ್ಲಿ ಕರ್ನಾಟಕ ಭೂಸೇನಾ ನಿಗಮದವರು ನಿರ್ಮಿಸಿಕೊಟ್ಟ ೧೯೬ ಮನೆಗಳು ಈ ಮೇಲಿನ ಜಿಲ್ಲೆಗಳಲ್ಲಿವೆ. ಅಲ್ಲದೆ ಹಂತ ಹಂತವಾಗಿ ಮನೆಗಳ ನಿರ್ಮಾಣ ಮಾಡಲಾಗುತ್ತಿರುವ ವಿವರಣೆ ಅಧಿಕಾರಿಗಳಿಂದ ತಿಳಿದು ಬರುತ್ತದೆ.

ಆ) ವಿಶೇಷ ಪೌಷ್ಠಿಕ ಆಹಾರ: ಸಮುದಾಯಗಳ ಕಾಲೋನಿಗಳಲ್ಲಿನ ೬ ವರ್ಷ ವಯಸ್ಸಿನೊಳಗಿರುವ ಮಕ್ಕಳಿಗೆ ಪೌಷ್ಠಿಕ ಆಹಾರ ನೀಡುವ ಸಲುವಾಗಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಯೋಜನೆಯು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ವಿಶೇಷವಾಗಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಕಾಲೋನಿಗಳಲ್ಲಿ ಪಿ.ಟಿ.ಡಿ.ಪಿ. ಪ್ರದೇಶಗಳಲ್ಲಿ ಗಿರಿಜನ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿದೆ. ಪೌಷ್ಠಿಕ ಆಹಾರ ೧೯೮೭-೯೦ ರಿಂದಲೇ ಪ್ರಾರಂಬಿಸಲಾಗಿದ್ದರೂ ಎಲ್ಲಾ ಕಾಲೋನಿಗಳಲ್ಲಿ ಕೇಂದ್ರಗಳಿರದಿರುವುದರಿಂದ ಕೆಲವು ಕಾಲೋನಿಗಳಲ್ಲಿ ಪ್ರತಿವರ್ಷ ಕೇಂದ್ರಗಳ ಸ್ಥಾಪನೆ ನಡೆಯುತ್ತಿದೆ. ಮಕ್ಕಳ ದೈಹಿಕ ಬೆಳವಣಿಗೆಯಲ್ಲಿ ಪೌಷ್ಠಿಕ ಆಹಾರ ನೀಡಿಕೆಯ ಕ್ರಮ ಅಕ್ಷರದ ಅಭ್ಯಾಸದ ಕಡೆಗೆ ಗಮನಹರಿಸುತ್ತಿದೆ.

ಇ) ಆರೋಗ್ಯ : ಅಲ್ಲಲ್ಲಿ ದಟ್ಟ ಅರಣ್ಯ ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆಸಿರುವ ಕುಟುಂಬಗಳಿಗೆ ಈ ಯೋಜನೆಯಡಿ ಆರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಜನರ ಪುನರ್‌ವಸತಿ ನಂತರ ಬದುಕಿನಕ್ರಮ ಬದಲಾದ ಪರಿಣಾಮ ಆರೋಗ್ಯ ಸುಧಾರಣೆಯು ಅಗತ್ಯವಾಗಿ ಕಾಲೋನಿಗಳಿಗೆ ಹತ್ತಿರವೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿ ಉಚಿತ ಆರೋಗ್ಯ ತಪಾಸಣೆ ಚಿಕಿತ್ಸೆ, ರೋಗದ ಬಗ್ಗೆ ತಿಳುವಳಿಕೆ ನೀಡವುದಕ್ಕಾಗಿ ಪ್ರಾರಂಭಿಸಲಾಗಿದೆ. ಈ ಜನರ ಕಾಲೋನಿಗಳ ಹತ್ತಿರವೇ ಸಂಚಾರಿ ಆರೋಗ್ಯ ಘಟಕಗಳನ್ನು ತೆರೆಯಲಾಗಿದೆ. ಸರ್ಕಾರದ ಆರೋಗ್ಯ ಇಲಾಖೆಯು ಸಾಕಷ್ಟು ಮುನ್ನೆಚ್ಚರಿಕೆಯ ಕ್ರಮವಾಗಿ ನಿರಂತರ ಕಾಲೋನಿಗಳಿಗೆ ಆರೋಗ್ಯ ಸೇವೆಯನ್ನು ನೀಡುವ ಉದ್ದೇಶದಿಂದ ಆಯಾ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ.

ಈ) ಶಿಕ್ಷಣ ಮತ್ತು ಸಂಸ್ಕೃತಿ: ಬುಡಕಟ್ಟು ಸಮುದಾಯಗಳ ಮಕ್ಕಳು ನಿದ್ಯಾವಂತರಾಗಲು ಅನೇಕ ಯೋಜನೆಗಳನ್ನು ರೂಪಿಸಲಾಗಿದೆ. ಹೀಗಾಗಿ ಈ ಯೋಜನೆ ಬುಡಕಟ್ಟು ಮತ್ತು ಇತರ ಜನವರ್ಗದವರ ನಡುವಿನ ಶೈಕ್ಷಣಿಕ ತಾರತಮ್ಯಗಳನ್ನು ಹೋಗಲಾಡಿಸಲು ಶಿಶುವಿಹಾರಗಳು, ಆಶ್ರಮಶಾಲೆಗಳು, ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದೆ. ಪಂಚವಾರ್ಷಿಕ ಯೋಜನೆಗಳಿಂದ ರೂಪುಗೊಳ್ಳುತ್ತಿರುವ ಈ ಕಾರ್ಯಕ್ರಮ ಸಾಮಾಜಿಕ ನ್ಯಾಯ, ಪರಿಣಾಮವಾಗಿ ಶೈಕ್ಷಣಿಕ-ಸಾಂಸ್ಕೃತಿಕ ಅವಕಾಶಗಳ ವಿಸ್ತಾರತೆಯನ್ನು ಹೆಚ್ಚುಗೊಳಿಸಲಾಗುತ್ತಿದೆ.

ಉ) ಉದ್ಯೋಗ ಮತ್ತು ತರಬೇತಿ ಇಲಾಖೆ : ಇಲಾಖೆಯ ವತಿಯಿಂದ ಸಮುದಾಯದ ಜನರಿಗೆ ಬಡತನ, ಟೈಲರಿಂಗ್, ಕೈಮಗ್ಗ, ನೆಯ್ಗೆ, ಆಟೋರಿಕ್ಷಾ ಚಾಲನೆ, ರಿಪೇರಿ, ಕಂಪ್ಯೂಟರ್ ಟ್ರೈನಿಂಗ್, ದ್ವಿಚಕ್ರವಾಹನ ರಿಪೇರಿ ಇತ್ಯಾದಿಗಳಲ್ಲಿ ತರಬೇತಿ ನೀಡಲಾಗುವುದು. ತರಬೇತಿಯ ಅವಧಿಯಲ್ಲಿ ಕನಿಷ್ಟ ೧೦೦ ರಿಂದ ೫೦೦ ರೂ.ಗಳವರೆಗೆ ಶಿಷ್ಯಾವೇತನವನ್ನು ಮಾಹೆಯಾನ ನೀಡಲಾಗುತ್ತದೆ. ವಿಶೇಷವಾಗಿ ಮೂಲನಿವಾಸಿ ಬುಡಕಟ್ಟು ಸಮುದಾಯದ ಅಭ್ಯರ್ಥಿಯಾದಲ್ಲಿ ಅವರ ಕುಟುಂಬಕ್ಕೆ ಶಿಷ್ಯಾವೇತರದ ಜೊತೆಗೆ ಪ್ರೊತ್ಸಾಹ ಹಣ ಪ್ರತಿ ತಿಂಗಳು ರೂ. ೧೦೦ ಪ್ರತಿ ವಿದ್ಯಾರ್ಥಿಯ ಪೋಷಕರಿಗೆ ನೀಡಲಾಗುತ್ತದೆ. ಅಲ್ಲದೆ ತರಬೇತಿಯಲ್ಲಿ ಯಶಸ್ವಿಯಾದವರಿಗೆ ಇಲಾಖಾವತಿಯಿಂದ ಅಭ್ಯರ್ಥಿಗಳಿಗೆ ಟೂಲ್‌ಕಿಟ್, ಹೊಲಿಗೆಯಂತ್ರ ಮತ್ತು ಇತರ ಕಚ್ಚಾ ಸಾಮಾಗ್ರಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಊ) ಸ್ವಯಂ ಉದ್ಯೋಗ ಯೋಜನೆ: ಉದ್ಯೋಗವಿಲ್ಲದೆ ನಿರುದ್ಯೋಗಿಯಾಗಿರುವ ಸಮುದಾಯದ ಜನರಿಗೆ ಉದ್ಯೋಗ ಕಲ್ಪಿಸಲು ಆಸಕ್ತಿಯುಳ್ಳ ಜನರಿಗೆ ಸ್ವಯಂ ಉದ್ಯೋಗ ಯೋಜನೆಯಡಿ ಸಾಲ ಹಾಗೂ ಸಹಾಯಧನವನ್ನು ಈ ಯೋಜನೆಯಡಿ ನೀಡಲಾಗುತ್ತದೆ. ಯೋಜನೆಗೆ ಪೂರಕವಾಗಿ ರಾಷ್ಟ್ರೀಕೃತ ಬ್ಯಾಂಕ್ ಮತ್ತು ಗ್ರಾಮೀಣ ಬ್ಯಾಂಕ್‌ಗಳು ಅನುಷ್ಠಾನ ಕಾರ್ಯದಲ್ಲಿ ಸಹಾಯಕವಾಗಿವೆ. ಸಮುದಾಯದ ನಿರುದ್ಯೋಗ ಜನರಿಗೆ ಆಟೋರಿಕ್ಷಾ,

ಹೈನುಗಾರಿಕೆ, ಕೈಗಾಡಿ ವ್ಯಾಪಾರ, ಸೈಕಲ್‌ಷಾಪ್, ರಿಪೇರಿ ಅಂಗಡಿ, ಅಂಗಡಿಗಾಗಿ ಇತರೆ ಉದ್ದೇಶಗಳಿಗೆ ಸಾಲಸೌಲಭ್ಯದ ವ್ಯವಸ್ಥೆಯ ಮೂಲಕ ನಿರುದ್ಯೋಗಿಗಳು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲಾಗುತ್ತಿದೆ. ಪ್ರತಿಯೋಜನಾ ವೆಚ್ಚದ ರೂ. ೫೦,೦೦೦ ಒಳಗೆ ಇರುವ ಘಟಕಗಳಿಗೆ ಮಾತ್ರ ಸೌಲಭ್ಯದ ಅವಕಾಶವಿದೆ. ಯೋಜನಾ ವೆಚ್ಚದ ಶೇ. ೫೦% ಗರಿಷ್ಟ ೧೦,೦೦೦ ರೂ. ಸಹಾಯಧನ ಮಂಜೂರು ಮಾಡಲಾಗುತ್ತದೆ. ಯೋಜನಾ ವೆಚ್ಚ ಕನಿಷ್ಠ ೧೫,೦೦೦ ರೂ.ಗಳಿದ್ದು, ಈ ವೆಚ್ಚ ರೂ. ೧೫,೦೦೦ ಕ್ಕಿಂತ ಕಡಿಮೆ ಇರುವ ಘಟಕಗಳಿಗೆ ಸಹಾಯಧನ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಬೀಜಧನ ಸಾಲದ ಘಟಕದಲ್ಲಿ ಶೇ. ೨೫% ಗರಿಷ್ಟ ಮಿತಿ ರೂ. ೮,೭೫೦ ಶೇ. ೪% ರ ಬಡ್ಡಿ ಧರದಲ್ಲಿ (ಕೃಷಿಯೇತರ ಉದ್ದೇಶಗಳಿಗೂ ರೂ. ೨೫,೦೦೦ ಮೇಲ್ಪಡುವ ಘಟಕಗಳಿಗೆ ಮಾತ್ರ ಬೀಜಧನ ಸಾಲ ನೀಡಲಾಗುತ್ತಿದೆ) ನಿಗಮ ಮತ್ತು ಬ್ಯಾಂಕ್ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದಿಂದ ತರಬೇತಿ ಪಡೆದ ಮಹಿಳೆಯರಿಗೆ ಆದ್ಯತೆಯ ಮೇರೆಗೆ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಋ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ: ತರಬೇತಿ ಪಡೆದ ನಿರುದ್ಯೋಗ ಯುವಕರಿಗೆ ಆಸಕ್ತಿವುಳ್ಳವನ್ನು ಗುರುತಿಸಿ ಪ್ರೋತ್ಸಾಹ ನೀಡಿ ಉದ್ಯಮ ಆರಂಭಿಸಲು ಬ್ಯಾಂಕ್ ಮೂಲಕ ಸಾಲದ ವ್ಯವಸ್ಥೆಯನ್ನು ಮಾಡಲಾಗುವುದು. ಘಟಕದ ಶೇ. ೭೫% ರಷ್ಟು ಮೊತ್ತಕ್ಕೆ ಶೇ. ೬ ರ ಬಡ್ಡಿಧರದಲ್ಲಿಯೂ ಘಟಕದ ಶೇ. ೨೦% ರಷ್ಟಕ್ಕೆ ಶೇ. ೪ರ ಬಡ್ಡಿಧರದಲ್ಲೂ ಬಂಡವಾಳದ ನೆರವು ಒದಗಿಸಲಾಗುತ್ತಿದೆ. ಉಳಿದ ಶೇ. ೫%ರನ್ನು ಫಲಾನುಭವಿಗಳೇ ಭರಿಸಬೇಕಾಗುತ್ತದೆ. ಯೋಜನೆಯ ಆಯಾ ವೆಚ್ಚವನ್ನು ಪರಿಗಣಿಸಿದಂತೆ ನೀಡಲಾಗುತ್ತಿದೆ. ಯೋಜನಾ ವೆಚ್ಚ ರೂ. ೫೦,೦೦೦ ದಿಂದ ೧೦,೦೦೦ ಲಕ್ಷದವರೆಗೆ ಇದೆ. ಪ್ರತಿ ಫಲಾನುಭವಿಯು ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ ರೂ. ೪೦,೦೦೦ ಮತ್ತು ನಗರ ಪ್ರದೇಶದಲ್ಲಿ ರೂ. ೫೫,೦೦೦ ಗಳನ್ನು ಮೀರಬಾರದು.

ೠ) ನೀರಾವರಿ ಯೋಜನೆ: ಈ ಯೋಜನೆಯು ಬುಡಕಟ್ಟು ಸಮುದಾಯಗಳ ಸಣ್ಣ ರೈತರಿಗೆ ಸಾಮೂಹಿಕ ನೀರಾವರಿ ಸೌಲಭ್ಯ ಕಲ್ಪಿಸಿಕೊಡಲು ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯಡಿ ಶೇ. ೭೫% ಭಾಗ ನಿಗಮವು (ಗರಿಷ್ಟ ೩೦ ಸಾವಿರ ರೂ.) ಸಹಾಯಧನವನ್ನಾಗಿ ನೀಡಲಾಗುತ್ತಿದೆ. ಉಳಿದ ಮೊತ್ತವನ್ನು ಬ್ಯಾಂಕುಗಳ ಮೂಲಕ ಸಾಲವನ್ನಾಗಿ ಪಡೆದುಕೊಳ್ಳಬೇಕಿದೆ.

ಇತ್ತೀಚಿನ ಹೊಸ ಆದೇಶದನ್ವಯ ರಾಜ್ಯ ಸರ್ಕಾರ ಈ ಯೋಜನೆಗೆ ಶೇ. ೧೦೦% ಪೂರ್ತಿ ಸಹಾಯ ಧನವನ್ನು ನೀಡಲು ಆದೇಶಿಸಲಾಗಿದೆ. ಈ ಯೋಜನೆಯ ಅನ್ವಯ ೨ ಎಕರೆ ಜಮೀನು ಹೊಂದಿರುವ ಕುಟುಂಬಕ್ಕೆ ನೀರಾವರಿ ಕೊಳವೆ ಬಾವಿ ಕೊರೆಯುವ ಬಿಂದುವಿನಿಂದ

೮೨೫ ಗಡಿಗಳ ಅಂತರದಲ್ಲಿ ಯಾವುದೇ ನೀರಾವರಿ ಬಾವಿ ಇರದಿದ್ದಲ್ಲಿ, ಅರ್ಜಿದಾರ ಸ್ವಂತ ಖಾತೆದಾರರಾಗಿದ್ದಲ್ಲಿ ಯೋಜನೆಯ ಲಾಭ ಪಡೆಯಬಹುದು.

ಎ) **ಪಶುಸಂಗೋಪನೆ:** ಹಾಲು ಕರೆಯುವ ಹಸು, ಎಮ್ಮೆ, ಕುರಿ, ಆಡು ಘಟಕಗಳನ್ನು ಆಸಕ್ತಿ ಹೊಂದಿರುವ ಜನರಿಗೆ ಇಲಾಖಾ ವತಿಯಿಂದ ಶೇ. ೭೫% ರ ಸಹಾಯಧನ ಮತ್ತು ಶೇ. ೨೫% ಸಾಲದ ನೆರವಿನಿಂದ ವಿತರಿಸಲಾಗುತ್ತಿದೆ. ಈ ಯೋಜನೆಯಲ್ಲಿ ಮೂಲನಿವಾಸಿ ಬುಡಕಟ್ಟು ಜನರು ಅಷ್ಟೊಂದು ಆಸಕ್ತಿ ಹೊಂದಿಲ್ಲದವರಾಗಿ ಕಂಡುಬರುತ್ತಾರೆ. ಫಲಾನುಭವಿಗಳು ಸಹ ಹಾಲು ಕರೆಯುವ ಹಸುಗಳನ್ನು ಪಡೆದ ಕೆಲವೇ ಕುಟುಂಬಗಳು ಕಂಡು ಬರುತ್ತವೆ.

ಏ) **ಭೂ ಒಡೆತನ ಯೋಜನೆ:** ಜನರು ಕೃಷಿ ಮಾಡಲು ಅನುಕೂಲವಾಗುವಂತೆ ಅವರಿಗೆ ಉಳುಮೆ ಮಾಡುವ ಜಮೀನಿನ ಹಕ್ಕನ್ನು ನೀಡಿ ಭೂಮಿಯ ಮಾಲೀಕರನ್ನಾಗಿ ಮಾಡುವುದೇ ಈ ಯೋಜನೆಯ ಉದ್ದೇಶ. ಒಡೆತನ ನೀಡುವುದರಲ್ಲಿ ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ. ಈ ಯೋಜನೆಯಡಿಯಲ್ಲಿ ಪ್ರತಿಕುಟುಂಬಕ್ಕೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನನ್ನು ಒದಗಿಸಲಾಗುತ್ತದೆ. ಇದರ ಘಟಕದ ವೆಚ್ಚ ರೂ. ೬೦,೦೦೦ ಗಳು ಇದರಲ್ಲಿಶೇ. ೫೦% ಸಮ ಕಂತುಗಳಲ್ಲಿ ಶೇ. ೬ರ ವಾರ್ಷಿಕ ಬಡ್ಡಿಯ ಜೊತೆಗೆ ಮರುಪಾವತಿ ಮಾಡಬೇಕಾಗುತ್ತದೆ. ಈ ಯೋಜನೆಯನ್ನು ಮೂಲನಿವಾಸಿ ಬುಡಕಟ್ಟು ಸಮುದಾಯಗಳು ನೆಲೆನಿಂತಿರುವ ತಾಲ್ಲೂಕು ಅಥವಾ ಜಿಲ್ಲಾ ಕೇಂದ್ರಗಳಲ್ಲಿ ಸಮರ್ಪಕ ಹಂಚಿಕೆಗೆ ಅವಕಾಶವಿದೆ. (ಅಧ್ಯಾಯ ೨ರಲ್ಲಿ ಭೂಮಿ ವಿವರದಲ್ಲಿ ನೀಡಲಾದಂತೆ) ಕೂಲಿಕಾರ್ಮಿಕರಾದ ಇವರುಗಳನ್ನು ಒಂದೆಡೆ ನೆಲೆನಿಂತು ಪರ್ಯಾಯ ಉದ್ಯೋಗವನ್ನಾಗಿ ರೂಪಿಸಿಕೊಳ್ಳುವಲ್ಲಿ ಸಹಾಯಕವಾಗುತ್ತದೆ.

ಭೂ ಹಂಚಿಕೆಯ ಕಾರ್ಯದಲ್ಲಿ ಆಯಾ ಜಿಲ್ಲಾ ಕೇಂದ್ರದ ಜಿಲ್ಲಾ ಅಧಿಕಾರಿಗಳು ಈ ಯೋಜನೆಯ ಅಧ್ಯಕ್ಷರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಯೋಜನೆಯ ದುರುಪಯೋಗಪಡಿಸಿಕೊಳ್ಳುತ್ತಿರುವ ಕಾರಣ ಮಹಿಳಾ ಫಲಾನುಭವಿಗಳಿಗೆ ಹೆಚ್ಚಿನ ಪ್ರಾಶಸ್ತ್ಯನೀಡಲಾಗುತ್ತಿದೆ.

ಐ) **ತೋಟಗಾರಿಕೆ :** ಬುಡಕಟ್ಟು ಜನರ ಆದಾಯವನ್ನು ಹೆಚ್ಚಿಸುವ ಮತ್ತು ಭೂಮಿಯನ್ನು ವ್ಯಾಪಕವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಈ ಯೋಜನೆಯನ್ನು ರೂಪಿಸಲಾಗಿದೆ. ಕುಟುಂಬದ ಆದಾಯವನ್ನು ಹೆಚ್ಚಿಸುವಂತಹ ತೆಂಗಿನತೋಟ, ಹಣ್ಣಿನತೋಟ ಮತ್ತು ವಾಣಿಜ್ಯ ಬೆಳೆಗಳನ್ನು ಅವಕಾಶಮಾಡಿಕೊಡುತ್ತದೆ. ಪ್ರತಿವರ್ಷಕ್ಕೆ ರೂ. ೨೧೬೫ ರಿಂದ ೨೭೦೦ ರವರೆಗೆ ವೆಚ್ಚ ಮಾಡಲಾಗುತ್ತಿದೆ. ಅಲ್ಲದೆ ಪುನರ್‌ವಸತಿಯ ನಂತರ ತೋಟಗಾರಿಕೆಯ ಇಲಾಖೆಯು ೨

ವರ್ಷಗಳ್ ಪಾಲನೆ ಮಾಡಬೇಕಿದೆ. ಮೊದಲ ವರ್ಷದಲ್ಲಿ ರೂ. ೬೫೦.೦೦ ಮತ್ತು ಎರಡನೆ ವರ್ಷದಲ್ಲಿ ರೂ. ೩೫೦.೦೦ ಗಳನ್ನು ನೀಡಲಾಗುತ್ತಿದೆ.

ತೋಟಗಾರಿಕಾ ಇಲಾಖೆಯು ಸಂಬಂಧ ಪಟ್ಟ ಜಿಲ್ಲೆಗಳಲ್ಲಿ ತರಬೇತಿಯನ್ನು ಸಹ ನೀಡುತ್ತಿದೆ. ಒಬ್ಬ ಸದಸ್ಯನಿಗೆ ೨೫೦ ರೂ.ನಂತೆ ಶಿಷ್ಯಾವೇತನವನ್ನು ನೀಡಲಾಗುತ್ತದೆ. ಪ್ರತಿ ಕುಟುಂಬಕ್ಕೆ ಎರಡು ತೆಂಗಿನ ಗಿಡಗಳು ಉಚಿತವಾಗಿ ನೀಡಲಾಗುತ್ತಿದೆ.

ಒ) ರಾಷ್ಟ್ರೀಯ ಪರಿಶಿಷ್ಟ ವರ್ಗದ ಹಣಕಾಸು ನಿಗಮ: ಭಾರತ ಸರ್ಕಾರವು ೨೦೦೦ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ಬೇರ್ಪಡಿಸಿ ಈ ನಿಗಮವನ್ನು ಸ್ಥಾಪಿಸಿದೆ. ೨೦೦೨-೦೩ನೇ ಸಾಲಿನಲ್ಲಿ ಬುಡಕಟ್ಟು ಮಹಿಳೆಯರ ಅಭಿವೃದ್ಧಿಗಾಗಿ ಆದಿವಾಸಿ ಮಹಿಳಾ ಸ್ವಶಕ್ತೀಕರಣ ಯೋಜನೆಯನ್ನು ಜಾರಿಗೊಳಿಸಿದೆ. ಈ ಯೋಜನೆಯಡಿಯಲ್ಲಿ ಬಡತನ ರೇಖೆಗಿಂತ ಕೆಳಹಂತದಲ್ಲಿರುವ ಮಹಿಳೆಯರ ಆರ್ಥಿಕ ಚಟುವಟಿಕೆಗಳಿಗೆ ರೂ. ೫೦೦೦.೦೦ ಸಾಲವನ್ನು ವಾರ್ಷಿಕ ಶೇ. ೪% ಬಡ್ಡಿಧರದಲ್ಲಿ ನೀಡುತ್ತಿದೆ.

ಓ) ಪರಿಶಿಷ್ಟ ವರ್ಗಗಳ ಸಮಾಜಕಲ್ಯಾಣ ಇಲಾಖೆ: ಪ್ರತ್ಯೇಕ ಇಲಾಖೆಯಾದ ನಂತರ ಬುಡಕಟ್ಟು ಜನರ ಅಭಿವೃದ್ಧಿಯಲ್ಲಿ ಕಲ್ಯಾಣ ಇಲಾಖೆ ನೇರಪಾತ್ರ ವಹಿಸಿರುತ್ತದೆ. ಇಲಾಖೆಯು ಅರ್ಹ ಫಲಾನುಭವಿಗಳನ್ನು ಗುರುತಿಸಿ ನಿರಂತರ ಆದಾಯ ತರುವಂತಹ ವೃತ್ತಿಗಳಾದ ವ್ಯಾಪಾರ-ಸ್ವಯಂ ಉದ್ಯೋಗ, ಅಂಗಡಿ, ಹೋಟೆಲ್, ಸೈಕಲ್‌ಷಾಪ್, ಎಸ್.ಟಿ.ಡಿ. ಬೂತ್, ಹೊಲಿಗೆಯಂತ್ರ ಇತ್ಯಾದಿಗಳನ್ನು ಸಹಾಯಧನ ಮತ್ತು ಸಾಲದ ಮೂಲಗಳಿಂದ ಅಭ್ಯರ್ಥಿಗಳಿಗೆ ನೀಡಲಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಈ ಯೋಜನೆಗಳ ಸೌಲಭ್ಯ ಪಡೆಯುವಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಬಹಳ ಹಿಂದುಳಿದಿವೆ.[೧೨]

ಮೂಲನಿವಾಸಿ ಬುಡಕಟ್ಟು ಗುಂಪುಗಳ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳು:

ಕರ್ನಾಟಕದಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳಾದ ಜೇನುಕುರುಬ ಮತ್ತು ಕೊರಗರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ವಿಶೇಷವಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನ ಮಾಡುತ್ತಿವೆ. ಅವುಗಳೆಂದರೆ,

ಶೈಕ್ಷಣಿಕ ಕಾರ್ಯಕ್ರಮಗಳು:

೧. ೧ ರಿಂದ ೪ನೇ ತರಗತಿ, ೫ ರಿಂದ ೭ನೇ ತರಗತಿ, ೮ ರಿಂದ ೧೦ನೇ ತರಗತಿ ಮತ್ತು ಕಾಲೇಜು ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ವಾರ್ಷಿಕ ರೂ. ೧೦೦-೦೦, ರೂ. ೧೫೦-೦೦, ರೂ. ೨೦೦-೦೦, ರೂ. ೨೫೦-೦೦ ಗಳ ವಿಶೇಷ ಪ್ರೋತ್ಸಾಹಧನದ ಮಂಜೂರಾತಿ.

೨. ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳ ಪೋಷಕರಿಗೆ ವಾರ್ಷಿಕ ರೂ. ೨೦೦-೦೦ ಗಳ ವಿಶೇಷ ಪ್ರೋತ್ಸಾಹ ಧನ ಮಂಜೂರಾತಿ.

೩. ೧ ರಿಂದ ೧೧ನೇ ತರಗತಿಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಮತ್ತು ಲೇಖನ ಸಾಮಾಗ್ರಿ ಮಂಜೂರಾತಿ.

೪. ೧ ರಿಂದ ೭ನೇ ತರಗತಿವರೆಗೆ ಆಶ್ರಮ ಶಾಲೆಗಳನ್ನು ನಡೆಸುವುದು.

೫. ೫ ರಿಂದ ೧೦ನೇ ತರಗತಿವರೆಗೆ ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ನೀಡಿ ಉಚಿತ ವಸತಿ, ಊಟ ಸಮವಸ್ತ್ರ ಪಠ್ಯಪುಸ್ತಕ ಮತ್ತು ಇತರೆ ವೆಚ್ಚಗಳನ್ನು ನೀಡುವುದು.

೬. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ವಸತಿ, ಊಟದವ್ಯವಸ್ಥೆ ನೀಡುವುದು.

೭. ೭ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮಬಾರಿ ಉತ್ತೀರ್ಣವಾಗುವ ಆದಿವಾಸಿ ಪಂಗಡದ ವಿದ್ಯಾರ್ಥಿಗಳಿಗೆ ತಲಾ ರೂ. ೨೫೦೦-೦೦ ಉತ್ತೇಜನ ಧನಸಹಾಯ.

೮. ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮಬಾರಿ ಉತ್ತೀರ್ಣವಾಗುವ ಆದಿವಾಸಿ ಪಂಗಡದ ವಿದ್ಯಾರ್ಥಿಗಳಿಗೆ ತಲಾ ೫೦೦೦-೦೦ ಉತ್ತೇಜನಾಧನಸಹಾಯ.

ವಸತಿ

೧) ವಸತಿ ರಹಿತ ಜೇನುಕುರುಬ ಮತ್ತು ಕೊರಗ ಜನಾಂಗದವರಿಗೆ ಅಂಬೇಡ್ಕರ್ ಆಶ್ರಮ ಯೋಜನೆಗಳಡಿ ೨೦೦೦೦-೦೦ ರೂ.ಗಳ ವೆಚ್ಚದಲ್ಲಿ ಉಚಿತ ಮನೆಗಳ ನಿರ್ಮಾಣ.

೨) ಜೇನುಕುರುಬ ಮತ್ತು ಕೊರಗ ಜನರು ವಾಸಿಸುವ ಹಳೆಯ ಮನೆಗಳ ದುರಸ್ತಿಗೆ ರೂ. ೧೦೦೦೦-೦೦ ಗಳ ಧನ ಸಹಾಯ.

ಮೂಲಭೂತ ಸೌಲಭ್ಯ

ಜೇನುಕುರುಬ ಮತ್ತು ಕೊರಗ ಕಾಲೋನಿಗಳಲ್ಲಿ ಸಂಪರ್ಕರಸ್ತೆ ನಿರ್ಮಾಣ.

೧) ಜೇನುಕುರುಬ ಮತ್ತು ಕೊರಗ ಕಾಲೋನಿಗಳಲ್ಲಿ ಕಿರು ನೀರು ಸರಬರಾಜು ಯೋಜನೆ / ಹ್ಯಾಂಡ್ ಪಂಪ್ ಕೊಳವೆ ಬಾವಿ ಮೂಲಕ ಕುಡಿಯುವ ನೀರಿನ ವ್ಯವಸ್ಥೆ.

೨) ಜೇನುಕುರುಬ ಮತ್ತು ಕೊರ್ರಗ ಕಾಲೋನಿಗಳಲ್ಲಿ ಚರಂಡಿ ನಿರ್ಮಾಣ.

೩) ಜೇನುಕುರುಬ ಮತ್ತು ಕೊರಗ ಮನೆಗಳಿಗೆ ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್‌ದೀಪ ಸೌಲಭ್ಯ.

೪) ಆರೋಗ್ಯ ತಪಾಸಣೆಗೆ ಸಂಚಾರಿ ಆರೋಗ್ಯ ಘಟಕ ಸ್ಥಾಪನೆ.

ಆರ್ಥಿಕ ಕಾರ್ಯಕ್ರಮಗಳು

೧. ಕೃಷಿ ಅಭಿವೃದ್ಧಿಗೆ ವ್ಯವಸಾಯ ಉಪಕರಣಗಳು ಮತ್ತು ಬೀಜಗೊಬ್ಬರ ವಿತರಣೆ ನಬಾರ್ಡ್ ದರದಲ್ಲಿ ಉಳುಮೆ ಎತ್ತುಗಳು ಮತ್ತು ಗಾಡಿ ಸರಬರಾಜಿಗೆ ಸಹಾಯಧನ, ಜಲಾನಯನ ಕಾರ್ಯಕ್ರಮಗಳ ಅನುಷ್ಠಾನ.

೨. ತೋಟಗಾರಿಕೆ ಕಾರ್ಯಕ್ರಮದಡಿ ಉಚಿತ ಹಣ್ಣು, ತೆಂಗು, ಹೂವಿನ ತೋಟ, ರಬ್ಬರ್ ತೋಟ ಇತ್ಯಾಧಿಗಳ ಸ್ಥಾಪನೆ ಮತ್ತು ೨ ವರ್ಷಗಳ ನಿರ್ವಹಣೆ.

೩. ಹೈನುಗಾರಿಕೆ ಕಾರ್ಯಕ್ರಮದಡಿ ನಬಾರ್ಡ್ ದರದಲ್ಲಿ ಎಮ್ಮೆ, ಸೀಮೆ ಹಸು, ಹಂದಿ ಘಟಕಗಳ ಸ್ಥಾಪನೆಗೆ ಶೇ. ೭೫% ಸಹಾಯಧನ.

೪. ಅರಣ್ಯ ಇಲಾಖೆಯಿಂದ ಬೆತ್ತ ಬಿದಿರು ವಿತರಣೆ.

೫. ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆಗಳ ವತಿಯಿಂದ ವಸತಿ ಕಾರ್ಯಗಾರ ಮತ್ತು ಸಾಮೂಹಿಕ ಕಾರ್ಯಗಾರ ನಿರ್ಮಾಣ ಹಾಗೂ ತರಬೇತಿ ಅನುಷ್ಠಾನ.

೬. ತರಬೇತಿ ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ಬೆತ್ತ ಮತ್ತು ಬಿದಿರು ಮರಗೆಲಸ, ಲಘುವಾಹನ ಚಾಲನೆ, ಹೊಲಿಗೆ ಸಿಮೆಂಟ್ ಹ್ಯಾಲೋಬ್ರಿಕ್ ತಯಾರಿಕೆಯಲ್ಲಿ ತರಬೇತಿಗಳನ್ನು ಉಚಿತವಾಗಿ ನೀಡುವುದು, ತರಬೇತಿ ಅವಧಿಯಲ್ಲಿ ಮಾಸಿಕ ರೂ. ೫೦೦-೦೦ ಶಿಷ್ಯವೇತನ ನೀಡಲಾಗುತ್ತಿದೆ.

೭. ಲ್ಯಾಂಪ್ ಸಹಕಾರ ಸಂಘಗಳಿಗೆ ಸದಸ್ಯರನ್ನಾಗಿ ಮಾಡುವುದು, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಮತ್ತು ಮಾರಾಟಕ್ಕೆ ಲ್ಯಾಂಪ್ಸ್ ಸಂಘಗಳ ಮುಖಾಂತರ ಸಹಕಾರ.

ಈ ಮೇಲಿನ ಎಲ್ಲಾ ವಿವರಗಳು ಸಂವಿಧಾನ ಅನುಸಾರವಾಗಿ ದೊರಕಬಹುದಾದ ಪ್ರಮುಖವಾದವುಗಳು. ಇವೆಲ್ಲವು ತೀರಾ ಹಿಂದುಳಿದ ಅರಣ್ಯಾಧಾರಿತವಾದ ಜೇನುಕುರುಬ ಮತ್ತು ಕೊರಗರಿಗೆ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಅನುಧಾನದಂತೆ ನೀಡಲಾಗುತ್ತದೆ.

ಅಷ್ಟೇ ಅಲ್ಲದೆ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಿರುವ ಮಾರ್ಗಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ಕಡೆಗಣಿಸುವಂತಿಲ್ಲ. ಈ ಸಂಸ್ಥೆಗಳು ಈ ವರ್ಗದ ಜನರ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಹಲವಾರು ಸಂಸ್ಥೆಗಳು ಕೇಂದ್ರಸರ್ಕಾರದ ಯೋಜನೆಯಡಿಯಲ್ಲಿ ಸಹಾಯಧನ ಪಡೆದು ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಸರ್ಕಾರದ ಸಹಾಯಧನ ಪಡೆಯಲು ಕಲ್ಪಿಸಲಾದ ಕಾರ್ಯಕ್ರಮಗಳು ಈ ರೀತಿ ಇವೆ.

ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳು

೧. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು.

೨. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಸತಿ ರಹಿತ ಶಾಲೆಗಳು

೩. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ರಾತ್ರಿ ಶಾಲೆಗಳು.

೪. ಲೈಬ್ರರಿ ಸೇವೆ.

೫. ಸಂಚಾರಿ ಲೈಬ್ರರಿ ಮತ್ತು ಆಡಿಯೋ ವಿಶುಯಲ್ ಘಟಕ.

೬. ೧೦ ಹಾಸಿಗೆಗಳ ಆಸ್ಪತ್ರೆ / ಡಿಸ್ಪೆನ್ಸರಿ.

೭. ಸಂಚಾರಿ ಆರೋಗ್ಯ ಘಟಕ.

೮. ಕಂಪ್ಯೂಟರ್ ತರಬೇತಿ ಕೇಂದ್ರ.

೯. ಬೆರಳಚ್ಚು ಮತ್ತು ಶೀಘ್ರ ಲಿಪಿ ತರಬೇತಿ ಕೇಂದ್ರ.

೧೦. ಮರಗೆಲಸ ತರಬೇತಿ.

೧೧.ಟಿ.ವಿ. ಟೇಪ್‌ರೆಕಾರ್ಡರ್ ವಿ.ಸಿ.ಆರ್, ರೇಡಿಯೋ ತರಬೇತಿ ಕೇಂದ್ರ.

೧೨.ಬೆತ್ತ ನಾರಿನ ತರಬೇತಿ ಮತ್ತು ಅಗರ್‌ಬತ್ತಿ ತಯರಿಕಾ ಕೇಂದ್ರ.

೧೩.ತೆಂಗು ನಾರಿನ ತರಬೇತಿ ಕೇಂದ್ರ.

೧೪.ಮುದ್ರಣ ಮತ್ತು ಬುಕ್ ಬೈಂಡಿಂಗ್ ತರಬೇತಿ.

೧೫.ಫಿಟ್ಟರ್ ಮತ್ತು ವೆಲ್ಡಿಂಗ್ ಹಾಗೂ ಹ್ಯಾಂಡ್ ಲ್ಯೂಮ್ಸ್ ತರಬೇತಿ.

೧೬.ನಿಟ್ಟಿಂಗ್, ವಿವಿಂಗ್, ಮತ್ತು ಹ್ಯಾಂಡ್ ಲ್ಯೂಮ್ಸ್ ತರಬೇತಿ.

೧೭.ಸ್ಕೂಟರ್ ಮತ್ತು ಮೋಟಾರ್ ಸೈಕಲ್ ರಿಪೇರಿ ತರಬೇತಿ

೧೮.ಪರಿಶಿಷ್ಟ ವರ್ಗದವರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವುದು.

೧೯.ಬಾಲವಾಡಿ / ಶಿಶುವಿಹಾರ ಕೇಂದ್ರಗಳ ಸ್ಥಾಪನೆ.

೨೦. ವಿದ್ಯಾರ್ಥಿ ನಿಲಯಗಳ ಸ್ಥಾಪನೆ.[೧೩]

ಇವುಗಳಲ್ಲಿನ ಯಾವುದೇ ಯೋಜನೆಯನ್ನು ಮೂಲನಿವಾಸಿ ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹಮ್ಮಿಕೊಳ್ಳ ಬಯಸುವಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಜಿಲ್ಲಾಧಿಕಾರಿಗಳ ತಪಸಣಾ ವರದಿಯೊಂದಿಗೆ ಸಲ್ಲಿಸುವ ಪ್ರಸ್ತಾವನೆಗೆ ನಿರ್ದೇಶನಾಲಯ ಕೇಂದ್ರ ಸರ್ಕಾರಕ್ಕೆ ಅನುದಾನ ಬಿಡುಗಡೆ ಕೋರಿ ಶಿಪಾರಸ್ಸು ಕಳಿಸಲಾಗುವುದು.

ಈ ಎಲ್ಲಾ ಯೋಜನೆಗಳು ಅಭಿವೃದ್ಧಿ ದೃಷ್ಟಿಯಿಂದ ತುಂಬಾ ಸೂಕ್ತವಾಗಿವೆ. ಆದರೆ ಇವುಗಳಲ್ಲಿ ಅನೇಕ ಯೋಜನೆಗಳು ತೀರಾ ಹಿಂದುಳಿದ ಗ್ರಾಮ ಮತ್ತು ಅರಣ್ಯಾದಿ ಪ್ರದೇಶಗಳಲ್ಲಿ ಇರುವವರಿಗೆ ಉಪಯುಕ್ತವೆಂದೇ ಹೇಳಬಹುದು. ವ್ಯವಹಾರಿಕೆಯಲ್ಲಿ ಸರ್ಕಾರ ರೂಪಿಸಿದ ಎಲ್ಲಾ ಕಾರ್ಯಕ್ರಮಗಳ ಪ್ರಯೋಜನ ಪಡೆದು ಕೊಳ್ಳುವುದು ಸ್ವಲ್ಪ ತೊಂದರೆಯೇ. ಆದರಲ್ಲೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸ್ಥಿತಿಗತಿಗಳಲ್ಲಿ ತೀರಾ ಹಿಂದುಳಿದ ಅರಣ್ಯಾಧಾರಿತ ಸಮುದಾಯಗಳು ಈ ಪ್ರಯೋಜನ ಪಡೆದುಕೊಳ್ಳುವುದು ಇನ್ನೂ ಕಷ್ಟ. ನೆಹರೂರವರು ತಮ್ಮ ಪಂಚಶೀಲಾತತ್ವದಲ್ಲಿ ಹೇಳಲಾದ ಸೂಕ್ತ ಮಾತು ಇಲ್ಲಿ ನೆನೆಯಬಹುದು. "We should judge results not by statistics or the amount of money spent, but by the quality of human character that is evolved" ಅಭಿಪ್ರಾಯದಂತೆ ಖರ್ಚಾದ ಹಣಕಾಸಿನ ಲೆಕ್ಕ ಮಾಡದೇ, ಯೋಜನೆಯ ಫಲ ಫಲತೆಯು ಸಮುದಾಯಗಳಲ್ಲಿ ಮೂಡಿಸಿರುವ ಆಶಾತನ, ಅಥವಾ ಕಲ್ಯಾಣದ ಪ್ರಮಾಣ ತಿಳಿಯಬೇಕಾಗಿದೆ.

ಇಲ್ಲಿ ಅಭಿಪ್ರಾಯಗಳು ಏನೇ ಆಗಿದ್ದರೂ ಸರಿಯೇ ಆದರೆ ಹಣವಿಲ್ಲದಿದ್ದರೆ, ಯಾವ ಯೋಜನೆಗಳು ಕಾರ್ಯಗತವಾಗುವುದು ಅಸಾಧ್ಯವಾದ ಮಾತು. ಕೇವಲ ಹಣದಿಂದಲೇ ಎಲ್ಲವು ಸಾಧ್ಯ ಎನ್ನಲಾಗುವುದಿಲ್ಲ. ಯೋಜನೆಗಳಿಂದ ಯೋಜನೆಗಳಿಗೆ ಹಣಕಾಸಿನ ಹರಿವು ಹೆಚ್ಚುತ್ತಲೇ ಇದೆ. ಇದರಿಂದ ಹಣದ ಹರಿವಿನ ಗಾತ್ರ ತುಂಬಾ ಹೆಚ್ಚಾಗಿದೆ. ಅದರಂತೆ ಅನೇಕ

ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನ ಮಾಡಲಾಗುತ್ತಿದೆ. ಅನುಷ್ಠಾನ ಆಗಿರುವ ಪರಿಣಾಮದ ಬಗ್ಗೆ ವಿಶ್ಲೇಷಣೆಯಾಗುವುದರಿಂದ ಮಹತ್ವದ ಯೋಜನೆಗಳ ಸಾಫಲ್ಯ ಮತ್ತು ವೈಫಲ್ಯಗಳ ಬಗ್ಗೆ ತಿಳಿಯಬಹುದು. ಇದಕ್ಕಾಗಿ ಮುಂದಿನ ಭಾಗ ಎರಡರಲ್ಲಿ ಈ ಬಗ್ಗೆ ಎರಡು ಸಮುದಾಯಗಳ ೧೫ ತಾಲ್ಲೂಕು ವ್ಯಾಪ್ತಿಯಲ್ಲಿರುವ ಕಾಲೋನಿಗಳಲ್ಲಿ ಕಂಡುಬಂದ ಅಂಶಗಳ ವಿಶ್ಲೇಷಣೆಯನ್ನು ಕ್ರೋಢಿಕರಿಸಲಾಗಿದೆ.

೨. ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ

ಸರ್ಕಾರವು ಕಲ್ಯಾಣ ಕಾರ್ಯಕ್ರಮಗಳನ್ನು ಹಲವು ವರ್ಷಗಳಿಂದ ಕೊರಗ ಮತ್ತು ಜೇನುಕುರುಬ ಕಾಲೋನಿಗಳಲ್ಲಿ ಅನುಷ್ಠಾನಗೊಳಿಸುತ್ತಿದೆ. ನನ್ನ ಅಧ್ಯಯನ ಉದ್ದೇಶದ ಅನುಸಾರವಾಗಿ ೨೦೦೧ ರಿಂದ ೨೦೦೫ ರವರೆಗೆ ದೊರೆತಿರುವ ಸೌಲಭ್ಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅದಕ್ಕೂ ಹಿಂದೆ ಕಾಲೋನಿ ಆರಂಭದಿಂದ ಕೂಡ ಅನೇಕ ಸೌಲಭ್ಯಗಳು ಸಿಕ್ಕಿದ್ದು ಅವನ್ನು ಸಹ ಒಟ್ಟು ಮಾಹಿತಿಯಲ್ಲಿ ಅಂತರ್ಗತ ಮಾಡಲಾಗಿ ಕೊಡಲಾಗಿದೆ. ಈ ಅಧ್ಯಯನದ ದೃಷ್ಟಿಯಿಂದ ಸಂಗ್ರಹಿಸಿದ ಮಾಹಿತಿಯನ್ನು ಪಟ್ಟಿಗಳ ರೂಪದಲ್ಲಿ ವಿಶ್ಲೇಷಿಸಲಾಗಿದೆ. ಕಲ್ಯಾಣಕಾರ್ಯಗಳು ಎರಡು ಸಮುದಾಯಕ್ಕೆ ಒಂದೇ ಆಗಿರುವುದರಿಂದ ಒಂದೇ ಪಟ್ಟಿಯಲ್ಲಿ ಮಾಹಿತಿಯನ್ನು ಸಮುದಾಯಗಳ ಸೂಚಿಯೊಂದಿಗೆ ಸಂಖ್ಯೆಗನುಗುಣವಾಗಿ ನೀಡಲಾಗಿದೆ. ಮಾಹಿತಿಯು ಕ್ಷೇತ್ರವನ್ನು ಆಧರಿಸಿದ್ದು ಸಮೀಕ್ಷೆಯಿಂದ ಗುರುತಿಸಲಾಗಿದೆ.

ಶೈಕ್ಷಣಿಕ ಪ್ರಗತಿ

"ಶಿಕ್ಷಣವೇ ಶಕ್ತಿ" ಇದು ಈ ಶತಮಾನದ ಮಹಾಚೇತನ ಡಾ|| ಬಿ.ಆರ್. ಅಂಬೇಡ್ಕರ್‌ರವರ ದೃಷ್ಟಿಯಾಗಿತ್ತು. ಸಮಾನತೆ ಸಾಮಾಜಿಕ ನ್ಯಾಯಕ್ಕಾಗಿ ಮೂಲಭೂತವಾಗಿ ಶಿಕ್ಷಣವೇ ಆಯುಧ, ಶಕ್ತಿ ಎಂದವರು ನಿರೂಪಿಸಿದ್ದಾರೆ. ಶೈಕ್ಷಣಿಕ ಪ್ರಗತಿಯೇ ಮುಖ್ಯವಾದರಿಂದ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಅವುಗಳ ಅನುಷ್ಠಾನದಲ್ಲಿ ಸಾಕಷ್ಟು ಆಸ್ಥೆ ವಹಿಸಿದೆ. ಅಧ್ಯಾಯ ೩ರ ಭಾಗದಲ್ಲಿ ಕ್ಷೇತ್ರ ಶಿಕ್ಷಣ ಮಾಹಿತಿಯ ಪಟ್ಟಿಯನ್ನು ನೀಡಲಾಗಿದೆ. ಶೈಕ್ಷಣಿಕ ಮಾಹಿತಿಯನ್ನು ೩ನೇ ಅಧ್ಯಾಯದಲ್ಲಿ ನೀಡಿರುವುದರಿಂದ ಕಲ್ಯಾಣಕಾರ್ಯಕ್ರಮವನ್ನು ಮಾತ್ರ ವಿಶ್ಲೇಷಿಸಲಾಗಿದೆ.

ಶೈಕ್ಷಣಿಕ ಪ್ರಗತಿಗಾಗಿ ಮೀಸಲಾದ ಪ್ರಾಥಮಿಕ ಹಂತ ಮಕ್ಕಳ, ಕಲ್ಯಾಣಕೇಂದ್ರಗಳ ಬಗ್ಗೆ ತಿಳಿಯಬಹುದು. ಪ್ರತಿಯೊಂದು ಕಾಲೋನಿಯಲ್ಲಿ ಶಿಶುವಿಹಾರ, ಅಂಗನವಾಡಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಸಮೀಕ್ಷೆ ಮಾಡಲಾದ ೪೮ ಕಾಲೋನಿಗಳಲ್ಲಿ ೩೫ ಶಿಶುವಿಹಾರದ ಕೇಂದ್ರಗಳು ಕಂಡುಬರುತ್ತವೆ. ಚಿಕ್ಕ ಮಕ್ಕಳ ಶಿಶುವಿಹಾರಗಳು ಜೇನುಕುರುಬರಲ್ಲಿ ೧೬ ಕಾಲೋನಿಗಳಲ್ಲಿ ಕಂಡುಬಂದರೆ, ಕೊರಗರಲ್ಲಿ ೧೯ ಕಾಲೋನಿಗಳಲ್ಲಿ ಕಂಡುಬರುತ್ತವೆ. ಸಾಕಷ್ಟು ಕೊರಗರು ನಗರ ಪ್ರದೇಶದಲ್ಲಿರುವುದರಿಂದ ಅಂಕಿ ಅಂಶಗಳ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ವಸತಿ ಮತ್ತು ಆಶ್ರಮಶಾಲೆಯ ಬಗ್ಗೆ ಸರ್ಕಾರ ಹೆಚ್ಚಿನ ಮಹತ್ವ ನೀಡುತ್ತಿರುವುದು ಕಲ್ಯಾಣಕಾರ್ಯಕ್ರಮದಿಂದ ತಿಳಿಯಬಹುದು. ಶೈಕ್ಷಣಿಕ ಉನ್ನತಿಗಾಗಿ ಪ್ರಾಥಮಿಕ ಹಂತದಲ್ಲಿ ವಸತಿ, ಊಟ, ಬಟ್ಟೆ ಮುಂತಾದ ಸೌಲಭ್ಯಗಳಿಂದ ಕೂಡಿದ ಆಶ್ರಮಶಾಲೆಯು ಪ್ರಥಮ ಆದ್ಯತೆಯಾಗಿದೆ. ಶೈಕ್ಷಣಿಕವಾಗಿ ಹಿಂದುಳಿದ ಕೊರಗರಿಗೆ ಮತ್ತು ಜೇನುಕುರುಬ ಸಮುದಾಯಗಳಲ್ಲಿ ಆರಿಸಿದ ಎಲ್ಲಾ ತಾಲ್ಲೂಕುಗಳಲ್ಲಿ ಪಿರಿಯಾಪಟ್ಟಣ, ಸೋಮವಾರ ಪೇಟೆ ಮತ್ತು ಕಾರ್ಕಳ, ಸೂಳ್ಯ ತಾಲ್ಲೂಕುಗಳನ್ನು ಬಿಟ್ಟು ಉಳಿದ ಎಲ್ಲಾ ತಾಲ್ಲೂಕು ವ್ಯಾಪ್ತಿಯಲ್ಲಿ ಇಂತಹ ಆಶ್ರಮ ಶಾಲೆಗಳಿದ್ದು ಉಪಯುಕ್ತವಾಗಿವೆ.

ಕೋಷ್ಟಕ ೪.೩ : ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪ್ರಗತಿಗಾಗಿ ಯೋಜಿಸಿದ ಕಲ್ಯಾಣ ಕಾರ್ಯಗಳು ಮತ್ತು ಅನುಷ್ಠಾನ:

ಕ್ರ. ಸ.		ಜೇನುಕುರುಬರು							ಕೊರಗರು							
		ಹೆಚ್.ಡಿ. ಕೋಟೆ	ಪಿರಿಯಾ ಪಟ್ಟಣ	ಹುಣಸೂರು	ಗುಂಡ್ಲು ಪೇಟೆ	ಸೋಮವಾರ ಪೇಟೆ	ವಿರಾಜ ಪೇಟೆ	ನಂಜನಗೂಡು	ಕುಂದಾಪುರ	ಉಡುಪಿ	ಕಾರ್ಕಳ	ಮಂಗ ಳೂರು	ಬೆಳ್ತಂಗಡಿ	ಬಂಟ್ವಾಳ	ಸುಳ್ಯ	ಪುತ್ತೂರು
೧	ಶಿಶು ವಿಹಾರ ಅಂಗನವಾಡಿ	೫	೨	೨	೩	೧	೧	೨	೪	೨	೨	೫	೨	೧	೧	೨
೨	ವಸತಿ ಮತ್ತು ಆಶ್ರಮಶಾಲೆ	೨	-	೨	೨	-	೧	೧	೨	೨	-	೩	೧	೧	-	೧
೩	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ	೧	-	೨	೧	-	-	-	೨	೨	-	೪	೧	-	-	೧
೪	ರಾತ್ರಿ ಶಾಲೆ ಸೌಲಭ್ಯ	೧	-	-	-	-	-	-	೧	-	-	೧	-	-	-	-
೫	ಶೈಕ್ಷಣಿಕ ಪ್ರವಾಸ ಸೌಲಭ್ಯ	-	-	-	-	-		-	-	-	-	೩	-	-	-	-
೬	ಪುಸ್ತಕ ದನಸಹಾಯ	(೫) ೨	-	-	-	-	--	-	(೨) ೧	(೧) ೨	-	(೪) ೨	-	-	-	-
೭	ನೈರ್ಮಲ್ಯ ಉದ್ಯೋಗಿಗಳ ಮಕ್ಕಳಿಗೆ ವಿದ್ಯಾರ್ಥಿವೇತನ	-	-	-	-	-	-	-	೫	೮	-	೫	-	-	-	-
೮	ಮಹಿಳಾ ಶ್ರೀಯೋಭಿವೃದ್ಧಿ ಕೇಂದ್ರ	೨	-	೧	-	-	-	-	೧	೧	-	೨	೧	೧	೧	೨
೯	ವಿಶೇಷ ಪೌಷ್ಠಿಕ ಆಹಾರ ಕೇಂದ್ರ	-	-	೧	-	-	-	-	-	-	-	-	-	-	-	-
೧೦	SSLC ತೇರ್ಗಡೆಯಾದವರಿಗೆ ನಗದು ಬಹುಮಾನ	೨	-	-	-	-	-	-	೩	೩	-	೪ -	-	-	-	-
೧೧	ತಾಂತ್ರಿಕ ಶಿಕ್ಷಣ ನೀಡಿಕೆ	-	-	-	-	-	-	-	೨	-	-	೭	-	-	-	೨
	ಒಟ್ಟು	೧೫	೨	೮	೬	೧	೨	೩	೨೧	೨೧	೨	೩೭.	೫	೩	೨	೮

ಟಿಪ್ಪಣಿ: ೧) ಮಾಹಿತಿಯನ್ನು ಸಂಖ್ಯೆಗಳಿಗುಣವಾಗಿ ನೀಡಲಾಗಿದೆ.

೨) ಸಂಖ್ಯೆಯು ಸದಸ್ಯರನ್ನು ಪ್ರತಿನಿಧಿಸುವ ಸಂಖ್ಯೆಯಾಗಿರುತ್ತದೆ

೩) ಮಾಹಿತಿಯು ಕ್ಷೇತ್ರಕಾರ್ಯ ಆಧಾರಿತವಾದದ್ದು.

೪) ( ) ಕಂಸದಲ್ಲಿರುವುದು ವಿಧ್ಯಾರ್ಥಿಗಳ ಸಂಖ್ಯೆ.

ಕೋಷ್ಠಕ ೪.೧ ರಲ್ಲಿ ತೋರಿಸಿದಂತೆ ಮಂಗಳೂರಿನಲ್ಲಿ ೩ ಶಾಲೆಗಳಿದ್ದು ಇನ್ನುಳಿದಂತೆ ಜನಸಂಖ್ಯೆಗೆ ಅನುಗುಣವಾಗಿ ಸ್ಥಾಪಿಸಲಾಗಿರುವುದು ಕಂಡುಬರುತ್ತದೆ. ಪ್ರಾಥಮಿಕ ಶಾಲೆಯ ಶೈಕ್ಷಣಿಕ ಪ್ರಗತಿಗೆ ಆಶ್ರಮಶಾಲೆ ಸಹಕಾರಿಯಾಗಬಲ್ಲದು. ಆಶ್ರಮಶಾಲೆ ಎಂಬುದು ಗಮನಾರ್ಹವಾದ ಅಂಶವೆಂಬುದು ಸ್ಪಷ್ಟ. ಜೇನುಕುರುಬರ ೮ ಸ್ಥಳದಲ್ಲಿ ಸಣ್ಣ ಪ್ರಮಾಣದ ಆಶ್ರಮಶಾಲೆಗಳು ಕಂಡುಬರುತ್ತವೆ. ಕೊರಗರಲ್ಲಿ ೧೦ ಸ್ಥಳದಲ್ಲಿರುವುದು ಕಂಡುಬರುತ್ತದೆ. ಇಂತಹ ಆಶ್ರಮಶಾಲೆಗಳಲ್ಲಿ ಇತರೆಲ್ಲಾ ಬುಡಕಟ್ಟು ಸಮುದಾಯಗಳೊಂದಿಗೆ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಜೊತೆಗೂಡಿವೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಮತ್ತು ಸೌಲಭ್ಯಗಳು ಜೇನುಕುರುಬರ ೪ ಕಾಲೋನಿಗಳಿರುವಲ್ಲಿ ಕೊರಗರ ೧೦ ಕಾಲೋನಿಗಳ ಕೇಂದ್ರಗಳಲ್ಲಿ ಸೌಲಭ್ಯ ಕಂಡು ಬರುತ್ತದೆ. ಈ ವಿಷಯದಲ್ಲಿ ಮಂಗಳೂರು ತಾಲ್ಲೂಕು ವ್ಯಾಪ್ತಿಯ ಬುಡಕಟ್ಟು ಕಾಲೋನಿಗಳದೂ ಪ್ರಶಂಸನೀಯ ಪಾತ್ರ. ಮಂಗಳೂರಿನ ವ್ಯಾಪ್ತಿಯಲ್ಲಿ ಕಾಲೋನಿಗಳು ನಗರ ಜೀವನಕ್ಕೆ ತೀರಾ ಹತ್ತಿರವಾಗಿರುವುದು. ಜೊತೆಗೆ ಸಮಾಜ ಸೇವಾ ಸುಧಾರಕರ ಪಾತ್ರ, ಬಸ್ಸುಗಳ ಓಡಾಟ, ದಾನಿಗಳ ಸೌಲಭ್ಯ ವಿದ್ಯಾರ್ಥಿಗಳಿಗೆ ಬಂದು ಹೋಗುವ ಸೌಕರ್ಯ ಉತ್ತಮವಾಗಿದೆ. ಇಲ್ಲಿನ ಕೊರಗರು ಇತರರೊಂದಿಗೆ ಒಡನಾಟದಿಂದ ಸ್ವಲ್ಪ ಮಟ್ಟಿನ ಶಿಕ್ಷಣದ ಮಹತ್ವ ತಿಳಿದಿರುವವರೆಂದು ತೋರುವುದು. ಜೇನುಕುರುಬರ ೪ ಮೆಟ್ರಿಕ್ ವಿದ್ಯಾರ್ಥಿನಿಲಯಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯೂ ಕಡಿಮೆ. ಒಟ್ಟಾರೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಶಿಕ್ಷಣ ದೊರೆಕಿಸುವ ಪ್ರಕ್ರಿಯೆಯಲ್ಲಿ ಮುಂದಾಗಿರುವುದು ಕಂಡು ಬರುತ್ತದೆ.

ಸರ್ಕಾರದ ವಿವಿಧ ಇಲಾಖೆಗಳ ಸಂಯೋಜನೆಯಿಂದ ರಾತ್ರಿ ಶಾಲೆಯ ಸೌಲಭ್ಯವನ್ನು ಒದಗಿಸಿರುವುದು ಕಂಡುಬರುತ್ತದೆ. ಹೆಚ್.ಡಿ.ಕೋಟೆ, ಕುಂದಾಪುರ, ಮಂಗಳೂರು ತಾಲ್ಲೂಕಿನಲ್ಲಿ ಪ್ರಸ್ತುತವೂ ರಾತ್ರಿಶಾಲೆ ಕಾರ್ಯಪ್ರವೃತ್ತವಾಗಿವೆ. ಶಾಲೆ ಮತ್ತು ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸದ ಸೌಲಭ್ಯವನ್ನು ಇಲಾಖೆ ಒದಗಿಸಲಾಗುತ್ತಿದೆ. ಆದರೆ 'ಆದರ ಸೌಲಭ್ಯವನ್ನು ಮಂಗಳೂರಿನ ೩ ಕಾಲೋನಿಗಳಲ್ಲಿನ ವಿದ್ಯಾರ್ಥಿಗಳು ಪ್ರವಾಸದ ಸೌಲಭ್ಯ ಪಡೆದ ಫಲಾನುಭವಿಗಳು. ಉಳಿದಂತೆ ಯಾವುದೇ ಕಾಲೋನಿಯಲ್ಲಿ ಸೌಲಭ್ಯಪಡೆದ ಬಗ್ಗೆ ಮಾಹಿತಿ ಇಲ್ಲವಾಗಿದೆ.

ಧನಸಹಾಯ ಒಂದು ಮಹತ್ವದ ಬಹುಮಾನ, ಶೈಕ್ಷಣಿಕ ಪ್ರಗತಿಗಾಗಿ ಉತ್ತಮ ಸಾಧನೆ ತೋರುವ ವಿದ್ಯಾರ್ಥಿಗಳ ಪುಸ್ತಕಕ್ಕೆ ಜಿಲ್ಲಾಪಂಚಾಯಿತ್ ಮೂಲಕ -ಧನ ಸಹಾಯವನ್ನು ಒದಗಿಸಲಾಗುತ್ತಿದೆ. ಹೆಚ್.ಡಿ.ಕೋಟೆಯಲ್ಲಿನ ಜೇನುಕುರುಬರಿಗೆ ಸ್ವಯಂ ಸೇವಾ ಸಂಸ್ಥೆಯ ಹೋರಾಟದ ಫಲವಾಗಿ ಈ ಸೌಲಭ್ಯ ೨ ಕಾಲೋನಿಗಳ ೫ ವಿದ್ಯಾರ್ಥಿಗಳಿಗೆ ದೊರೆತಿದೆ. ಇನ್ನುಳಿದಂತೆ ಕುಂದಾಪುರ, ಉಡುಪಿ ಮತ್ತು ಮಂಗಳೂರು ತಾಲ್ಲೂಕಿನ ಕಾಲೋನಿಗಳಲ್ಲಿ ೭ ಮಂದಿ ಮಾತ್ರ ಈ ಸೌಲಭ್ಯ ಪಡೆದಿದ್ದಾರೆ. ಆದರೂ ಪುಸ್ತಕ ಧನಸಹಾಯ ಸ್ಥಳೀಯ ಶಾಸಕರು

ಅಥವಾ ನಗರ, ಗ್ರಾಮ, ಪ್ರದೇಶಗಳ ಚುನಾಯಿತ ಸದಸ್ಯರು ಫಲಾನುಭವಿಗಳನ್ನು ಗುರುತಿಸಿ ಪ್ರೋತ್ಸಾಹ ನೀಡಬೇಕಾದ ಕ್ರಮವಿರುವುದರಿಂದ ಈ ಸೌಲಭ್ಯವನ್ನು ಹೆಚ್ಚು ಪ್ರಚಾರಗೊಳಿಸಲಾಗಿಲ್ಲ. ಚುನಾಯಿತ ಸದಸ್ಯರು ಜನರಿಗೆ ತಪ್ಪು ಗ್ರಹಿಕೆ ನೀಡುತ್ತಿರುವುದು ಕಂಡುಬರುತ್ತದೆ. ನೈರ್ಮಲ್ಯದ ಉದ್ಯೋಗಗಳಲ್ಲಿ ತೊಡಗಿರುವ ಕುಟುಂಬಗಳಲ್ಲಿನ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ. ಈ ವಿದ್ಯಾರ್ಥಿವೇತನವನ್ನೂ ಕೇವಲ ಕೊರಗರು ಮಾತ್ರ ಪಡೆಯುತ್ತಿದ್ದಾರೆ. ಎರಡು ಸಮುದಾಯಗಳಿಗೆ ಒದಗಿಸಿದ ಈ ಸೌಲಭ್ಯಗಳ ಮಾಹಿತಿಯನ್ನು ನೋಡಿದಾಗ ಕೋಷ್ಟಕ ೪.೧ ರಲ್ಲಿ ಕೊಟ್ಟಂತೆ ಕೊರಗರನ್ನು ಹೊರತು ಪಡಿಸಿದರೆ ಜೇನುಕುರುಬರಲ್ಲಿ ಯಾರೂ ಫಲಾನುಭವಿಗಳಿಲ್ಲವೆಂದು ತಿಳಿದು ಬರುತ್ತದೆ.

ಜೇನುಕುರುಬರು ತೀರಾ ಹಿಂದುಳಿದ ಅರಣ್ಯಾಧಾರಿತ ಪ್ರದೇಶದಲ್ಲಿಯೇ ವಾಸವಾಗಿರುವ ಕಾರಣ ಇಂತಹ ಸೌಲಭ್ಯ ಪಡೆಯಲಾಗಲಿಲ್ಲ. ಈ ಸೌಲಭ್ಯ ನಗರ ಪ್ರದೇಶದಲ್ಲಿರುವ ಜನರಿಗೆ ಅನ್ವಯವಾಗುತ್ತದೆ. ಗ್ರಾಮಪ್ರದೇಶದಲ್ಲಿರುವ ಜೇನುಕುರಬರಿಗೆ ಅನ್ವಯವಾಗುತ್ತಿಲ್ಲ. ಹೀಗಾಗಿ ಫಲಾನುಭವಿಗಳಿಲ್ಲ ಎನ್ನಬಹುದಾಗಿದೆ.

ಸರ್ಕಾರದ ವಿಶೇಷ ಯೋಜನೆಗಳು ಹಾಗೂ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಮಹಿಳಾ ಶ್ರೇಯೋಭಿವೃದ್ಧಿ ಸಂಘದ ಸ್ಥಾಪನೆಗೆ ಮಹತ್ವ ನೀಡಲಾಗಿದೆ. ಕಲ್ಯಾಣ ಕಾರ್ಯಕ್ರಮದ ಅನ್ವಯ ಪ್ರತಿಕಾಲೋನಿಯು ಕಾರ್ಯಕ್ರಮದ ಪ್ರಯೋಜನವನ್ನು ಪಡೆಯಬೇಕು. ಆದರೆ ಶಿಕ್ಷಣದಿಂದ ವಂಚಿತರಾದ ಇವರುಗಳು ಇಂತಹ ಕೇಂದ್ರಗಳನ್ನು ತಮ್ಮ ಕಾಲೋನಿಗಳಲ್ಲಿ ಸ್ಥಾಪಿಸುವಲ್ಲಿಯೂ ಹಿಂದೆ ಬಿದ್ದಿದ್ದಾರೆ. ಒಟ್ಟು ೧೨ ಕಾಲೋನಿಗಳಲ್ಲಿ ಈ ಕೇಂದ್ರಗಳನ್ನು ಕಾಣಬಹುದು. ಈ ಕೇಂದ್ರಗಳ ಸ್ಥಾಪನೆಯಲ್ಲಿಯೂ ಜೇನುಕುರುಬರು ಬಹಳ ಹಿಂದೂಳಿದಿದ್ದಾರೆ. ಜೇನುಕುರುಬರ ೩ ಕಾಲೋನಿಗಳಲ್ಲಿ ಕೊರಗ ೯ ಕಾಲೋನಿಗಳಲ್ಲಿ ಈ ಕೇಂದ್ರಗಳು ಸ್ಥಾಪನೆಯಾಗಿವೆ. ಇಂತಹ ಕೇಂದ್ರಗಳ ಸ್ಥಾಪನೆಗೆ ಸ್ವಯಂ ಸೇವಾ ಸಂಸ್ಥೆಗಳು ಉತ್ತೇಜನ ನೀಡುತ್ತಿರುವುದು ೩ ಕಾಲೋನಿಗಳಲ್ಲಿನ ಕಾರ್ಯವೈಖರಿಯಿಂದ ತಿಳಿದು ಬರುತ್ತದೆ.

ಅಭಿವೃದ್ಧಿ ಯೋಜನೆಯಡಿ ವಿಶೇಷ ಪೌಷ್ಟಿಕ ಆಹಾರ ಕೇಂದ್ರದ ಸೌಲಭ್ಯಗಳನ್ನು ದೊರೆಕಿಸುವಲ್ಲಿ ಯೋಜನೆ ರೂಪಿಸಲಾಗಿದೆ. ಆದರೆ ರಾಜ್ಯ ಸರ್ಕಾರದ ಬಿಸಿ ಊಟದ ಕಾರ್ಯಕ್ರಮವು ನಡೆಯುತ್ತಿರುವುದರಿಂದ ಇಂತಹ ಸೌಕರ್ಯದ ಲಾಭ ಪಡೆಯುತ್ತಿರುವುದನ್ನು ಗುರುತಿಸುವುದು ಕಷ್ಟದ ಕೆಲಸವಾಗಿದೆ. ಆದರೂ ಕೋಷ್ಟಕ ೪.೧ ರಲ್ಲಿ ಕೊಟ್ಟಂತೆ ಹುಣಸೂರು ಕಾಲೋನಿಯಲ್ಲಿ ಪೌಷ್ಟಿಕ ಆಹಾರ ವಿಶೇಷವಾಗಿ ನೀಡುತ್ತಿರುವ ಬಗ್ಗೆ ತಿಳಿದುಬರುತ್ತದೆ. ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಆರೋಗ್ಯ ಸುಧಾರಣೆಗೆ ಒತ್ತು ನೀಡಿ

ರೂಪಿಸಲಾದ ಈ ಯೋಜನೆ, ಸಮರ್ಪಕವಾದ ರೀತಿಯಲ್ಲಿ ಜಾರಿಯಾದ ಬಗ್ಗೆ ಮಾತ್ರ ಮಾಹಿತಿಯೇ ಇಲ್ಲವೆನ್ನಬಹುದು.

Integrated Tribal Development Programme (IRDP) ಮತ್ತು ICDC ಇನ್ನೂ ಕೆಲವು ಯೋಜನೆಗಳಲ್ಲಿ ಸಮುದಾಯಗಳಲ್ಲಿನ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಸಲುವಾಗಿ ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಅಂತಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ತರಭೇತಿಗೆ ವಿಶೇಷವಾದ ಸೌಲಭ್ಯ ಒದಗಿಸಲಾಗುತ್ತಿದೆ. ಈ ಸೌಲಭ್ಯಗಳಲ್ಲಿ ವಿದ್ಯಾರ್ಥಿಗಳನ್ನು ಗುರುತಿಸಲಾಗಿದೆ. ಒಟ್ಟಾರೆ ನಗದು ಬಹುಮಾನ ಪಡೆದ ಜೇನುಕುರುಬರ ಇಬ್ಬರು ವಿದ್ಯಾರ್ಥಿಗಳು ಮತ್ತು ಕೊರಗರಲ್ಲಿ ೧೦ ವಿದ್ಯಾರ್ಥಿಗಳು ನಗದು ಬಹುಮಾನ ಪಡೆದಿರುವುದು ಕಂಡುಬರುತ್ತದೆ. ಅದರಂತೆ ತಾಂತ್ರಿಕ ಶಿಕ್ಷಣವನ್ನು ಪಡೆಯುವಲ್ಲಿ ಕೊರಗರಲ್ಲಿ ೧೧ ವಿದ್ಯಾರ್ಥಿಗಳು ಕಾಣಸಿಗುತ್ತಾರೆ. ತಾಂತ್ರಿಕ ಶಿಕ್ಷಣದಲ್ಲಿ ಕಂಪ್ಯೂಟರ್ ಮತ್ತು ಐ.ಟಿ.ಐ. ತರಭೇತಿ ನೀಡಲಾಗುತ್ತಿದೆ. ಮಂಗಳೂರು ಮಹಾನಗರ ಸಾರಿಗೆ ಇಲಾಖೆಯಲ್ಲಿ ಡಿಸೆಲ್ ಮೆಕ್ಯಾನಿಕ್ ಮತ್ತು ಎಲೆಕ್ಟ್ರಿಕಲ್ ವೈರಿಂಗ್ ತರಭೇತಿಯನ್ನು ೪ ವಿದ್ಯಾರ್ಥಿಗಳು ಪಡೆಯುತ್ತಿರುವುದು ಇದೆ. ಇದನ್ನು ಹೊರತು ಪಡಿಸಿದಲ್ಲಿ ಕಲ್ಯಾಣ ಕಾರ್ಯಕ್ರಮಗಳು ಕಂಡುಬರುವುದಿಲ್ಲ.

ಕೋಷ್ಠಕ ೪.೧ ರಲ್ಲಿ ಕಲ್ಯಾಣಕಾರ್ಯಗಳಿಗಾಗಿ ಶೈಕ್ಷಣಿಕ ಪ್ರಗತಿಯಡಿ ಒದಗಿಸಲಾದ ಅಂಕಿ, ಅಂಶಗಳನ್ನು ಎರಡು ಸಮುದಾಯಗಳ ಕ್ಷೇತ್ರದಲ್ಲಿ ಪಡೆದ ಮಾಹಿತಿಗೆ ಅನುಗುಣವಾಗಿ ನೀಡಲಾಗಿದೆ. ಅನುಕ್ರಮವಾಗಿ ಒದಗಿಸಲಾದ ಈ ಸೌಲಭ್ಯವನ್ನು ತಮ್ಮ ಅನುಕೂಲಕ್ಕಾಗಿ ಕೊರಗರು ಸ್ವಲ್ಪ ಪ್ರಮಾಣದಲ್ಲಿ ದೊರಕಿಸಿಕೊಂಡಿದ್ದರೆ, ಜೇನುಕುರುಬರು ಬಹುಶಃ ಇನ್ನೂ ಈ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲದಿರುವುದು ಕಂಡುಬರುತ್ತದೆ. ಪಟ್ಟಿಯಲ್ಲಿನ ಕಾರ್ಯಕ್ರಮಗಳು ಕೆಲವೇ ಕೆಲವು ಹಾಗೂ ಅವುಗಳ ಬಗ್ಗೆ ಮಾಹಿತಿಯೂ ಅತ್ಯಲ್ಪವಾಗಿದೆ. ಈ ಬಗ್ಗೆ ವಿದ್ಯಾರ್ಥಿಗಳು ಹಾಗೂ ಮಹಿಳೆಯರು ಮುಂದೆ ಬರಲು ಬೇಕಾದ ಅನುಕೂಲತೆಗಳನ್ನು ಇಲಾಖೆಗಳು ಒದಗಿಸುವುದು ಅಗತ್ಯವೆನಿಸುತ್ತದೆ. ಜೊತೆಗೆ ಆಯಾ ಸಮುದಾಯದ ಸಾಮಾಜಿಕ ಹಿನ್ನೆಲೆಯ ಪರಿಸರಕ್ಕೆ ಅನುಗುಣವಾಗಿಯೇ ಯೋಜನೆಗಳನ್ನು ರೂಪಿಸಬೇಕಾದ ಅಗತ್ಯತೆ ಕಡ್ಡಾಯವಾದದ್ದು ಎನ್ನಲಡ್ಡಿಯಿಲ್ಲ.

೩. ಆರ್ಥಿಕ ಚೈತನ್ಯದ ಕಾರ್ಯಕ್ರಮಗಳು

ವಿಶೇಷವೆಂಬಂತೆ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಆರ್ಥಿಕ ಚೈತನ್ಯದ ಬಗ್ಗೆ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿರುವುದು ಕಂಡುಬರುತ್ತದೆ. ಈ ಕಾರ್ಯಕ್ರಮಗಳು ಎರಡು ಸಮುದಾಯಗಳಿಗೆ ಅನ್ವಯವಾಗುವಂತೆ ರೂಪಿಸಲಾಗಿದೆ. ಆಯಾ ಕಾಲೋನಿಗಳಲ್ಲಿ ಗುರಿತಸಲಾದ ಫಲಾನುಭವಿಗಳನ್ನು ಕ್ರೋಢಿಕರಿಸಿ ತಾಲ್ಲೂಕುವಾರು ಪ್ಟಟ್ಟಿಯಲ್ಲಿ ನೀಡಲಾಗಿದೆ. ಈ ಯೋಜನೆಗಳನ್ನು ಸುಮಾರು ವರ್ಷಗಳಿಂದ ಕಾರ್ಯಗತ

ಮಾಡಲಾಗಿದೆ ಎನ್ನುತ್ತಾರೆ. ಆದರಿಂದ ಅಧ್ಯಯನದ ದೃಷ್ಟಿ ೨೦೦೧ ರಿಂಡ ೨೦೦೫ ರ ವರೆಗೆ ರೂಪುಗೊಂಡ ಬಗ್ಗೆ ಮಾಹಿತಿ ಸಂಗ್ರಹ ಮಾಡಿ ಪಟ್ಟಿಯ ಮುಖಾಂತರ ವಿಶ್ಲೇಷಿಸಿ ಕೊಡಲಾಗಿದೆ. ಇದೊಂದು ರೀತಿಯಲ್ಲಿ ಪರೀಕ್ಷಣಾ ಕ್ರಮ ಎಂದರೆ ಅತಿಶಯೋಕ್ತಿಯಾಗಲಾರದು. ಆರ್ಥಿಕ ಚೈತನ್ಯ ಕಾರ್ಯಕ್ರಮದ ಉದ್ದೇಶ ಸಮುದಾಯದ ಜನರಿಗೆ ತರಭೇತಿ ಮೂಲಕ ಸೌಲಭ್ಯಗಳನ್ನು ಒದಗಿಸುವುದಾಗಿದೆ. ಎರಡು ಸಮುದಾಯಗಳಿಗೆ ಸೇರಿದ ೧೫ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ನೆಲೆನಿಂತ ಕಾಲೋನಿಗಳಲ್ಲಿನ ಸರ್ಕಾರದ ಆರ್ಥಿಕ ಚೈತನ್ಯದ ಕಾರ್ಯಕ್ರಮಗಳ ಲಾಭ ಪಡೆದ ಫಲಾನುಭವಿಗಳನ್ನು ಕೋಷ್ಟಕ ೪.೨ರಲ್ಲಿ ತೋರಿಸಲಾಗಿದೆ. ಸಮುದಾಯಗಳಿಗಾಗಿ ಬುಡಕಟ್ಟು ಇಲಾಖೆಯು ೧೦ ಕಾರ್ಯಕ್ರಮಗಳನ್ನು ರೂಪಿಸಿರುವುದಾಗಿ ಕಲ್ಯಾಣ ಇಲಾಖೆಯ ನಿರ್ದೇಶಕರು ತಿಳಿಸಿರುವಂತೆ ಗುರುತಿಸಲಾಗಿದೆ. ಎಲ್ಲಾ ಕಾರ್ಯಕ್ರಮಗಳನ್ನು ಪಟ್ಟಿಯಲ್ಲಿ ಪಥಕ್ಕರಿಸಲಾಗಿದೆ.

ಹೊಲಿಗೆ ತರಬೇತಿಯನ್ನು ತಾಲ್ಲೂಕು ಕೇಂದ್ರಗಳಲ್ಲಿ ವಿಶೇಷವಾಗಿ ನೀಡಲಾಗುತ್ತಿದೆ. ಹೆಚ್.ಡಿ.ಕೋಟೆ, ಕುಂದಾಪುರ, ಉಡುಪಿ ಮತ್ತು ಮಂಗಳೂರು ತಾಲ್ಲೂಕಿನ ವಿವಿಧ ಕಾಲೋನಿಯ ಕೇಂದ್ರಗಳಲ್ಲಿ ಕ್ರಮವಾಗಿ ೭, ೨೦, ೧೧, ೩೮ ಸದಸ್ಯರು ಪಡೆದಿದ್ದಾರೆ. ಇದು ತುಂಬಾ ಕಡಿಮೆ. ಹೊಲಿಗೆ ಯಂತ್ರ ಪಡೆದವರಲ್ಲಿ ಕೊರಗರ ಸಂಖ್ಯೆ ೩೮ ಆಗಿದೆ. ಜೇನುಕುರುಬರು ೧೦ ಜನರು ಮಾತ್ರ ಪಡೆದಿದ್ದಾರೆ. ಉಳಿದಂತೆ ಹೊಲಿಗೆ ಯಂತ್ರದ ತರಬೇತಿ ಮತ್ತು ಹೊಲಿಗೆಯಂತ್ರ ಪಡೆಯುವಲ್ಲಿ ಹೆಚ್ಚಿನ ಲಾಭವನ್ನು ಸಮುದಾಯಗಳಲ್ಲಿ ಯಾರು ತೆಗೆದುಕೊಂಡಂತೆ ಕಂಡುಬರುವುದಿಲ್ಲ. ಆದರೆ ಮಂಗಳೂರು ತಾಲ್ಲೂಕಿನ ವ್ಯಾಪ್ತಿಯ ಕಾಲೋನಿಗಳಲ್ಲಿ ೩೮ ಸದಸ್ಯರು, ಕುಂದಾಪುರದಲ್ಲಿ ೨೦ ಹಾಗೂ ಉಡುಪಿ ತಾಲ್ಲೂಕಿನಲ್ಲಿ ೧೧ ಸದಸ್ಯರು, ಹೆಚ್.ಡಿ.ಕೋಟೆಯ ವ್ಯಾಪ್ತಿಯಲ್ಲಿ ೭ ಸದಸ್ಯರು ಈ ತರಬೇತಿಯ ಸೌಲಭ್ಯ ಪಡೆದಿದ್ದಾರೆ. ತರಬೇತಿ ಪಡೆದ ಅಷ್ಟೇ ಪ್ರಮಾಣದ ಸದಸ್ಯರಿಗೆ ಹೊಲಿಗೆ ಯಂತ್ರ ನೀಡಲಾಗಿಲ್ಲ. ಹೊಲಿಗೆ ತರಬೇತಿಗೆ ಫಲಾನುಭವಿಗಳು ಜೇನುಕುರುಬರಲ್ಲಿ ಹೆಚ್ಚಿನವರಿಲ್ಲ. ಹೀಗಾಗಿ ಈ ಯೋಜನೆ ಕೊರಗರಲ್ಲಿ ಸ್ವಲ್ಪ ಮಟ್ಟಿನ ಪ್ರಗತಿಯಲ್ಲಿರುವಂತೆ ಕಂಡುಬರುತ್ತದೆ.

ಇನ್ನು ಜೇನು ಸಂಗ್ರಹಣೆ ತರಬೇತಿಯ ಬಗ್ಗೆ ಹೇಳಬೇಕಾದಲ್ಲಿ ಈ ತರಬೇತಿಯು ಜೇನುಕುರುಬರಲ್ಲಿ ಮಾತ್ರ ಕಂಡುಬರುತ್ತದೆ. ಕೊರಗ ಸಮುದಾಯದಲ್ಲಿ ಸೌಲಭ್ಯ ಪಡೆದವರು ಯಾರೂ ಇಲ್ಲ. ಜೇನು ಸಂಗ್ರಹಣೆಯ ತರಬೇತಿಯನ್ನು ೧೮ ಸದಸ್ಯರು ಪಡೆದಿದ್ದಾರೆ. ಪಟ್ಟಿಯಲ್ಲಿ ತೋರಿಸಿದಂತೆ ಅನುಕ್ರಮವಾಗಿ ಹೆಚ್.ಡಿ. ಕೋಟೆಯ ತಾಲ್ಲೂಕಿನ ವ್ಯಾಪ್ತಿಯ ಕಾಲೋನಿಯಲ್ಲಿ ೩ ಜನರು, ಪಿರಿಯಾಪಟ್ಟಣದಲ್ಲಿ ೮ ಜನರು ಮತ್ತು ಹುಣಸೂರು ೫ ಜನ, ನಂಜನಗೂಡಿನಲ್ಲಿ ೨ ಜನ ತರಬೇತಿ ಹೊಂದಿರುವರು. ಜೇನುಕುರುಬ ಸಮುದಾಯದ ಸದಸ್ಯರು ಮಾತ್ರವೇ ಈ ತರಬೇತಿ ಪಡೆದವರು. ಜೇನುಕುರುಬರಲ್ಲಿಯೂ ಈ ಸೌಲಭ್ಯ ಪಡೆದವರು ಕಡಿಮೆ ಸಂಖ್ಯೆಯಲ್ಲಿರುವರು. ಗುಂಡ್ಲುಪೇಟೆ, ಸೋಮವಾರಪೇಟೆ,

ವಿರಾಜಪೇಟೆಯಲ್ಲಿ ಜೇನುಕುರುಬರ ಕುಟುಂಬಗಳಿದ್ದರೂ ತರಬೇತಿ ಪಡೆದವರು ಯಾರು ಇಲ್ಲ. ಉಳಿದಂತೆ ಎಲ್ಲಾ ತಾಲ್ಲೂಕುಗಳ ಕಾಲೋನಿಗಳಲ್ಲಿ ಜೇನುಕುರುಬರಿದ್ದರೂ ಯೋಜನೆಯ ಸೌಲಭ್ಯಪಡೆದವರು ತೀರಾ ವಿರಳ ಸಂಖ್ಯೆಯವರು ಮಾತ್ರ. ಕೊರಗರು ಯೋಜನೆಯ ಸದುಪಯೋಗಕ್ಕೆ ಸಾಹಸ ಮಾಡಿದಂತಿಲ್ಲ.

ಮೀನು ಸಾಕಾಣಿಕೆಯಲ್ಲಿ ಈ ಸಮುದಾಯಗಳು ಅಷ್ಟೇನು ಆಸಕ್ತಿ ವಹಿಸಿಲ್ಲವೆಂದು ಪಟ್ಟಿಯಿಂದ ತಿಳಿಯಬಹುದು. ಪಿರಿಯಾಪಟ್ಟಣದಲ್ಲಿ ಇಬ್ಬರೂ ಸದಸ್ಯರು ಮೀನುಸಾಕಾಣಿಕೆಯ ಬಗ್ಗೆ ಮೈಸೂರಿನ ಕೇಂದ್ರದಲ್ಲಿ ತರಬೇತಿ ಪಡೆದಿರುತ್ತಾರೆ. ಉಳಿದಂತೆ ಕೊರಗ ಸಮುದಾಯದಲ್ಲಿ ೧೪ ಜನರು ಮಂಗಳೂರು ಮತ್ತು ಕುಂದಾಪುರದ ಕೇಂದ್ರದಲ್ಲಿ ಮೀನು ಸಾಕಾಣಿಕೆಯ ತರಭೇತಿ ಪಡೆದವರಾಗಿದ್ದಾರೆ. ಈ ಎರಡು ಸಮುದಾಯಗಳಲ್ಲಿನ ಜನರು ಈ ತರಬೇತಿಯನ್ನು ಹೊಂದಲು ಇಚ್ಚೆ ತೋರಿಸಿಲ್ಲ. ಇನ್ನೂ ಕೈಚೀಲ ಎಣೆಯುವ ತರಬೇತಿಯಲ್ಲಿಯೂ ಹೆಚ್ಚಿನ ಆಸಕ್ತಿತೋರಿದಂತೆ ಕಾಣುತ್ತಿಲ್ಲವೆಂದು ತೋರುತ್ತದೆ. ಜೇನುಕುರುಬರು ಈ ತರಬೇತಿಯಲ್ಲಿ ಯಾರು ಭಾಗಿಯಾಗಿಲ್ಲ. ಕೊರಗರಲ್ಲಿ ಅನುಕ್ರಮವಾಗಿ ೨, ೫, ೪, ೩ ಮತ್ತು ೧ ಸದಸ್ಯರು ತರಬೇತಿ ಪಡೆದಿರುತ್ತಾರೆ. ಈ ತರಬೇತಿಯನ್ನು ಪಡೆದವರಲ್ಲಿ ಎಲ್ಲರೂ ಮಹಿಳಾ ಸದಸ್ಯರಾಗಿರುವುದು ವಿಶೇಷವಾಗಿದೆ.

ಬುಟ್ಟಿ ಹೆಣೆಯುವ ತರಬೇತಿಯಲ್ಲಿ ಒಟ್ಟು ೭೭ ಸದಸ್ಯರು ತರಬೇತಿ ಪಡೆದಿರುತ್ತಾರೆ. ಜೇನುಕುರುಬರಲ್ಲಿ ೩೦ ಜನರು ಮತ್ತು ಕೊರಗರಲ್ಲಿ ೪೭ ಜನರು ಬುಟ್ಟಿ ಹೆಣೆಯುವ ತರಬೇತಿ ಪಡೆದಿದ್ದಾರೆ. ಈ ತರಬೇತಿಯಲ್ಲಿ ವಿಶೇಷವಾಗಿ ಸದಸ್ಯರಿಗೆ ಆಹಾರ ಹಾಗೂ ನಿಗದಿ ಪಡಿಸಲಾದ ಕೂಲಿಯನ್ನು ಸಹ ಕೊಡಲಾಗುತ್ತದೆ. ಆದರೂ ಯೋಜನೆಯ ಸದುಪಯೋಗ ಪಡಿಸಿಕೊಂಡವರ ಸಂಖ್ಯೆ ತೀರಾ ಕಡಿಮೆ. ಬುಟ್ಟಿ ಹೆಣೆಯಲು ಸರ್ಕಾರ ಬಿದಿರು ಪೂರೈಸುತ್ತದೆ. ಆ ಬಿದಿರಿನ ಬುಟ್ಟಿಯು ಲ್ಯಾಂಪ್ಸ್ ಸೊಸೈಟಿ, ಸಹಕಾರ ಸಂಘ ಹಾಗೂ ವಿವಿಧ ಮಾರಾಟ ಮಳಿಗೆಗಳಲ್ಲಿ ಮಾರಾಟಮಾಡುವ ವ್ಯವಸ್ಥೆ ಇದೆ. ಆದರೂ ಸಹ ತೋಡಗಿಸಿಕೊಂಡವರ ಸಂಖ್ಯೆ ಕಡಿಮೆ ಸಮುದಾಯದ ಸದಸ್ಯರೇ ಉತ್ತರಿಸುವಂತೆ ಇದರಿಂದ ಬರುವ ಹಣರೂಪಿ ಆದಾಯ ಬಹಳ ಕಡಿಮೆ ಅದಕ್ಕಾಗಿ ಒಲವು ತೋರಲಾಗುತ್ತಿಲ್ಲ ಎನ್ನುತ್ತಾರೆ. ಸ್ವಯಂ ಉದ್ಯೋಗ ತರಬೇತಿಯಲ್ಲಿ ಇತ್ತೀಚಿನ ಉಪಯುಕ್ತ ತರಬೇತಿ ಲಘುವಾಹನ ತರಬೇತಿ ಮತ್ತು ಹಾಲೋಬ್ರಿಕ್ ತಯಾರಿಕಾ ತರಬೇತಿ. ಈ ತರಬೇತಿಯಲ್ಲಿಯೂ ಸಹ ಉತ್ತಮವಾದ ಫಲಿತ ಕಂಡುಬರುವುದಿಲ್ಲ. ಜೇನುಕುರುಬರು ಹಳ್ಳಿಗಾಡು, ಅರಣ್ಯದ ಸಮೀಪ ನೆಲೆನಿಂತಿರುವವರು. ಕೊರಗರು ನಗರ ಜೀವನಕ್ಕೆ ಮುಖಮಾಡಿರುವವರು. ಹೀಗಾಗಿ ಲಘುವಾಹನ ತರಬೇತಿಯಲ್ಲಿ ಜೇನುಕುರುಬರ ೨೭ ಸದಸ್ಯರು ಹಾಗೂ ಕೊರಗರ ೫೧ ಜನ ಸದಸ್ಯರು ತರಬೇತಿ ಪಡೆದಿರುತ್ತಾರೆ. ಎರಡು ಸಮುದಾಯಗಳು ಲಘುವಾಹನ ತರಬೇತಿಯ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿವೆ.

ತರಬೇತಿಯಿಂದ ಸ್ವಯಂ ಉದ್ಯೋಗ ಸಾಧ್ಯವಾಗುತ್ತಿದೆ. ತರಬೇತಿಯಲ್ಲಿ ಹೆಚ್ಚಿನ ಜನರು ಆಯ್ಕೆಯಾಗಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ. ಒಂದು ವರ್ಷದಲ್ಲಿ ತರಬೇತಿಯನ್ನು ಸಮುದಾಯದ ೨ ರಿಂದ ೪ ಜನರಿಗೆ ಮಾತ್ರ ಎಂದು ನಿರ್ಧಿಷ್ಟವಾಗಿ ಅಧಿಕಾರಿಗಳು ಹೇಳುತ್ತಾರೆ. ಹೀಗಾಗಿ ಸೌಲಭ್ಯ ಪಡೆದವರು ಕಡಿಮೆ. ಹಾಲೋಬ್ರಿಕ್ಸ್‌ಗಳ ತಯಾರಿಕಾ ತರಬೇತಿಯಲ್ಲಿ ಬಹಳಷ್ಟು ಜನರು ತೊಡಗಿಸಿಕೊಂಡಿದ್ದಾರೆ. ೩ ತಿಂಗಳ ಈ ತರಬೇತಿಯ ನಂತರ ನೇರವಾಗಿ ದಿನಕೂಲಿಯು ದೊರೆಯುವ ಅವಕಾಶ ಹೆಚ್ಚು ಎಂದು ಅನೇಕರು ತರಬೇತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಜೇನುಕುರುಬರಲ್ಲಿ ೪೫ ಸದಸ್ಯರು ಮತ್ತು ಕೊರಗರಲ್ಲಿ ೫೪ ಸದಸ್ಯರು ಒಟ್ಟು ೯೯ ಜನರು ತರಬೇತಿ ಪಡೆದಿದ್ದಾರೆ. ಸಾಮಾನ್ಯವಾಗಿ ಕೆಲಸವಿಲ್ಲದ ಬಹುತೇಕ ಸಮುದಾಯಗಳ ಜನರಿಗೆ ಹಾಲೋಬ್ರಿಕ್ ತರಬೇತಿ ಸಹಾಯಕವಾಗಿದೆ. ತಮ್ಮ ಮನೆಯ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ದೈಹಿಕಶಕ್ತಿಯನ್ನು ಸ್ವಲ್ಪ ಮಟ್ಟಿಗೆ ವ್ಯಹಿಸಿದರೆ ಜೀವನೋಪಾಯಕ್ಕೆ ಸಹಾಯವಾಗುತ್ತದೆ. ಇದರಿಂದ ನಮಗೆ ಕೂಲಿಕೆಲಸ ದೊರಕುವುದು ಎನ್ನುತ್ತಾರೆ. ತರಬೇತಿಗೆ ಪುರುಷ ಮಹಿಳೆಯರೆನ್ನದೆ ಜನರು ಹತ್ತಿರವಾಗುತ್ತಿರುವುದು ಕಾಣಬರುತ್ತದೆ.

ತೋಟಗಾರಿಕಾ ಇಲಾಖೆಯ ನೆರವು ಎರಡು ಸಮುದಾಯಗಳಲ್ಲಿ ಭಿನ್ನವಾಗಿ ಕಂಡು ಬರುತ್ತದೆ. ಕಾರಣ ಈ ಸಮುದಾಯಗಳವರು ಬೆಳೆಗಾರರೂ ಅಲ್ಲ. ಅಲ್ಲದೆ ಜೇನುಕುರುಬರು ನೆಲೆನಿಂತ ಕಾಲೋನಿಗಳು ಅರಣ್ಯದ ಪ್ರದೇಶ ಇಲ್ಲವೇ ಅದರ ಹತ್ತಿರದ ಜಮೀನುಗಳಾದ್ದರಿಂದ ಕೃಷಿಗಾಗಿ ಅಂಥ ಆಸ್ಥೆ ವಹಿಸಿದಂತೆ ತೋರುತ್ತಿಲ್ಲ. ತೋಟಗಾರಿಕಾ ಇಲಾಖೆಗಳು ಮುಖ್ಯವಾಗಿ ತೆಂಗು ಮತ್ತು ಮಾವು, ಹುಣಸೆ, ಸಸಿಗಳನ್ನು ಬೆಳೆಸಲು ಪ್ರೋತ್ಸಾಹಿಸಲಾಗುತ್ತಿದೆ. ಈ ಇಲಾಖೆಯಿಂದ ಸಿಕ್ಕಿರುವ ಸೌಲಭ್ಯ ಕ್ಷೇತ್ರದಲ್ಲಿ ತಿಳಿದು ಬರುವುದಿಲ್ಲ. ಆದರೆ, ಕಾಲೋನಿಯ ಪ್ರಾರಂಭದಲ್ಲಿ ಇಲಾಖೆಯು ಸಸಿಗಳನ್ನು ಕೆಲವು ಕಾಲೋನಿಗಳಿಗೆ ಒದಗಿಸಿದರು. ಆಗ ಪಕ್ಕದ ಗ್ರಾಮದ ಜನರು ರಾತ್ರೋ ರಾತ್ರಿ ಸಸಿಗಳನ್ನು ಕಿತ್ತು ಹಾಕುತ್ತಿದ್ದ ದಿನಗಳನ್ನು ನೆನೆಯುತ್ತಾರೆ. ಪ್ರಸ್ತುತ ಪಟ್ಟಿಯಲ್ಲಿ ಈ ಸೌಲಭ್ಯ ಪಡೆದು ತಮ್ಮ ಭೂಮಿಯಲ್ಲಿ ಒಂದು ಅಥವಾ ಎರಡು ಸಸಿಗಳು ಕಾಣಸಿಗುವಂತಹ ಕುಟುಂಬಗಳನ್ನೇ ಪಟ್ಟಿಯಲ್ಲಿ ತೋರಿಸಲಾಗಿದೆ. ಒಟ್ಟಾರೆ ಈ ಸೌಲಭ್ಯವಂತೂ ಹಲವರಿಗೆ ದೊರಕಿದೆ ಎನ್ನಬಹುದು. ಕೊರಗರಲ್ಲಿ ತೋಟಗಾರಿಕೆ ಇಲಾಖೆಯ ಯಾವುದೇ ಮಾಹಿತಿ ತಿಳಿದು ಬರುವುದಿಲ್ಲ. ಬೆಳ್ತಂಗಡಿ ತಾಲ್ಲೂಕಿನ ೫, ಪುತ್ತೂರಿನ ೨ ಸದಸ್ಯ ಕುಟುಂಬಕ್ಕೆ ಈ ಸೌಲಭ್ಯ ಸ್ವಯಂ ಸಂಸ್ಥೆಯಿಂದ ಲಭಿಸಿದೆ.

ಲ್ಯಾಂಪ್ಸ್ ಸಹಕಾರ ಸಂಘದ ಸದಸ್ಯತ್ವ ಎರಡು ಸಮುದಾಯಗಳಲ್ಲಿ ಭಿನ್ನವಾಗಿದೆ. ಜೇನುಕುರುಬ ಮತ್ತು ಕೊರಗ ಸಮುದಾಯದ ಎಲ್ಲಾ ಕುಟುಂಬಗಳು ಈ ಸಂಘದಲ್ಲಿ ಸದಸ್ಯತ್ವ ಪಡೆದಿಲ್ಲ. ಸದಸ್ಯತ್ವ ಪಡೆದ ಕುಟುಂಬಗಳ ಸಂಖ್ಯೆಯನ್ನು ಪಟ್ಟಿಯಲ್ಲಿ ನೀಡಲಾಗಿದೆ. ಜೇನುಕುರುಬ ಸಮುದಾಯದ ಜನರು ತಮ್ಮ ಕಾಲೋನಿಗಳಲ್ಲಿ ದೊರಕುವ ಅರಣ್ಯ ಉತ್ಪನ್ನಗಳನ್ನು ಸಹಕಾರ ಸಂಘಕ್ಕೆ ಮಾರಾಟ ಮಾಡುತ್ತಾರೆ. ೭೪ ಕುಟುಂಬಗಳು ಈ ನಿಟ್ಟಿನಲ್ಲಿ ಸಹಕಾರ ಸಂಘದಲ್ಲಿ ಸದಸ್ಯತ್ವ ಪಡೆದಿರುವುದು ಕಾಣಬರುತ್ತದೆ. ಕೊರಗರಲ್ಲಿ ಯಾವುದೇ

ವಸ್ತುಗಳು ದೊರೆಯದ ಕಾರಣ ಹಾಗೂ ನಗರ ಪ್ರದೇಶದಲ್ಲಿ ನೆಲೆಸಿರುವುದರಿಂದ ಲ್ಯಾಂಪ್ಸ್ ಸಹಕಾರ ಸಂಘದ ಸದಸ್ಯರು ಹಣಕಾಸಿನ ಸಾಲ ಪಡೆಯುತ್ತಿರುವುದು ಕಂಡು ಬರುತ್ತದೆ. ೭೮ ಕುಟುಂಬಗಳು ಲ್ಯಾಂಪ್ಸ್ ಸಂಘದ ಸದಸ್ಯರಾಗಿರುವುದು ಕಂಡು ಬರುತ್ತದೆ. ಬಹುತೇಕ ಕೊರಗರಲ್ಲಿ ಈ ಬಗ್ಗೆ ಹೆಚ್ಚಿನ ಗೊಂದಲ ಕಂಡುಬರುತ್ತದೆ. ಹಣಕಾಸಿನ ಸಾಲ ಸೌಲಭ್ಯ ಕೆಲವೇ ಜನರಿಗೆ ಅಂದರೆ ಸರ್ಕಾರಿ ಸೇವೆಯಲ್ಲಿರುವವರಿಗೆ ಮಾತ್ರ ಲಭಿಸಿರುವುದು ಈ ಗೊಂದಲಕ್ಕೆ ಕಾರಣವಾಗಿದೆ. ಆದ್ದರಿಂದ ಇದೊಂದು ನಿರ್ದಿಷ್ಟವಾಗಿ ಮತ್ತು ಸಹಕಾರಿಯಾಗಬೇಕಿದೆ.

ಕೋಷ್ಟಕ ೪.೪ ಕಲ್ಯಾಣ ಕಾರ್ಯಕ್ರಮಗಳ ಫಲಾನುಭವಿಗಳು.

ಕ್ರ. ಸಂ	ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳು	ಜೇನುಕುರುಬ ಮತ್ತು ಕೊರಗರ ಕುಟುಂಬಗಳು ಪಡೆದ ಸೌಲಭ್ಯಗಳು ಅಂಕಿ ಅಂಶಗಳು ಕ್ರೋಡಿಕರಿಸಿ ತಾಲ್ಲೂಕುವಾರು ನೀಡಲಾಗಿದೆ														
		ಜೇನುಕುರುಬ							ಕೊರಗ							
		ಹೆಚ್.ಡಿ.ಕೋಟೆ	ಪಿರಿಯಾಪಟ್ಟಣ	ಹುಣಸೂರು	ಗುಂಡ್ಲುಪೇಟೆ	ಸೋಮವಾರ ಪೇಟೆ	ವಿರಾಜಪೇಟೆ	ನಂಜನಗೂಡು	ಕುಂದಾಪುರ	ಉಡುಪಿ	ಕಾರ್ಕಳ	ಮಂಗಳೂರು	ಬೆಳ್ತಂಗಡಿ	ಬಂಟ್ವಾಳ	ಸುಳ್ಯ	ಪುತ್ತೂರು
೧	ಹೊಲಿಗೆ ಯಂತ್ರ ನೀಡಿಕೆ	೫	೫	-	-	-	-	-	೧೨	೫	-	೧೮	-	-	-	೩
೨	ಹೊಲಿಗೆ ತರಬೇತಿ	೭	-	-	-	-	-	-	೨೦	೧೧	-	೩೮	-	-	-	-
೩	ಜೇನುಸಂಗ್ರಹಣೆ ತರಬೇತಿ	೩	೮	೫	-	-	-	೨	-	-	-	-	-	-	-	-
೪	ಮೀನುಸಾಕಾಣಿಕೆ	-	೨	-	-	-	-	-	೨	-	-	೮	-	೨	-	೨
೫	ಬುಟ್ಟಿ ಹೆಣೆಯುವುದು	೧೭	೭	೧	೫	-	-	-	೫	೩	೧೪	೪	೩	೭	-	೧೧
೬	ಕೈಚೀಲ ಹೆಣೆಯವುದು	-	-	-	-	-	-	-	೨	೫	೪	೩	೧	-	-	-
	ಸ್ವಯಂ ಉದ್ಯೋಗ ಅ) ಲಘುವಾಹನ ತರಬೇತಿ	೧೧	೧	೪	೪	೫	೨	-	೧೫	೬	-	೩೧	೧	೩	-	೫
	ಆ) ಹಾಲೋಬ್ರಿಕ್ ತಯಾರಿಕೆ	೨೩	-	೭	೫	೩	೩	೪	೨೯	೫	೧	೧೩	೧	-	-	೫
೮	ಲ್ಯಾಂಪ್ ಸಹಕಾರ ಸಂಘದ ಸದಸ್ಯತ್ವ	೨೧*	-	೪೪*	೭*	೨*	-	-	-	೩೨*	೨೭*	೯*	-	-	-	-
೯	ತೋಟಗಾರಿಕೆ / ಇಲಾಖೆಯ ನೆರವು	೧೧*	-	೧೮*	೩*	-	-	-	-	-	-	-	೫	-	*	೨
೧೦	ಆಟೋರಿಕ್ಷಾ ನೀಡಿಕೆ	೧	೨	೧	-	-	-	೧	೫	೫	-	೧೪	-	-	-	೧
	ಒಟ್ಟು	೯೯	೨೫	೮೦	೨೪	೧೦	೫	೭	೭೮	೭೨	೪೬	೧೨೮	೧೧	೧೨	-	೨೯

ಟಿಪ್ಪಣಿ: ೧. ಮಾಹಿತಿ ಸೌಲಭ್ಯವನ್ನು ಪಡೆದ ಕುಟುಂಬದ ಸದಸ್ಯರಿಗೆ ಅನುಗುಣವಾಗಿ ಗುರುತಿಸಲಾಗಿದೆ.
೨. ಮಾಹಿತಿಯ ಕ್ಷೇತ್ರಕಾರ್ಯ ಆಧಾರಿತವಾದದ್ದು.
೩. (*) ಉಳಿದಂತೆ ಅಂಕಿ –ಸಂಖ್ಯೆಯು ಪ್ರತಿ ಸದಸ್ಯನನ್ನು ಪ್ರತಿನಿಧಿಸುತ್ತದೆ.

ಕೊರಗರಲ್ಲಿ ಅರಣ್ಯಪ್ರದೇಶವಿಲ್ಲದಿರುವುದರಿಂದ ಮಾರಾಟ ಮಾಡುವ ಅಥವಾ ಕೊಳ್ಳುವ ಕೆಲಸ ಲ್ಯಾಂಪ್ಸ್ ಸಹಕಾರ ಸಂಘ ಮಾಡುವುದಿಲ್ಲ. ಕೇವಲ ಸದಸ್ಯರಿಗೆ ಸಾಲ ವಿತರಿಸುವ ಕ್ರಮವಿದೆ ಎನ್ನುತ್ತಾರೆ. ಅರಣ್ಯ ಪ್ರದೇಶದ ಪ್ರವೇಶವೇ ಇಲ್ಲದಿರುವಾಗ ಅರಣ್ಯ ಉತ್ಪನ್ನ ಸಂಗ್ರಹಿಸುವುದಾದರು ಹೇಗೆ ಎಂಬುದೆ ಪ್ರಶ್ನೆಯಾಗಿದೆ.

ಸ್ವಯಂ ಉದ್ಯೋಗಕ್ಕೆ ಆಟೋರಿಕ್ಷಾ ಪಡೆದ ಕೆಲವೇ ಕುಟುಂಬಗಳು ಇಲ್ಲಿ ಕಾಣಬಹುದು. ಜೇನುಕುರುಬರಲ್ಲಿ ೫ ಮತ್ತು ಕೊರಗರಲ್ಲಿ ೨೫ ಕುಟುಂಬಗಳು ಈ ಯೋಜನೆಯ ಲಾಭ ಪಡೆದಿವೆ. ತಾಲ್ಲೂಕು ಕೇಂದ್ರದಿಂದ ಹತ್ತಿರದ ಕಾಲೋನಿಗಳಿಗೆ ಜನ ಸಂಚಾರಕ್ಕೆ ಮತ್ತು ವಸ್ತುಗಳ ಸಾಗಾಣಿಕೆಯಲ್ಲಿ ಬಳಸಿಕೊಂಡು ಅಲ್ಪ ಆದಾಯ ಗಳಿಸುತ್ತಿದ್ದಾರೆ. ಕೊರಗರು ನಗರದಲ್ಲಿ ದುಡಿಮೆಗಾಗಿ ನಂಬಿದ್ದಾರೆ. ಆಟೋರಿಕ್ಷಾ ಕೊರಗರಿಗೆ ಪರ್ಯಾಯ ಉದ್ಯೋಗದ ಭರವಸೆಯ ಆಸರೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನವರು ಆಟೋರಿಕ್ಷಾ ಬಾಡಿಗೆ ಪಡೆದು ದುಡಿಯುವರಾಗಿದ್ದಾರೆ. ಆದರೆ ಜೇನುಕುರುಬರಿಗೆ ಈ ಸೌಲಭ್ಯ ಹೆಚ್ಚು ಅನುಕೂಲವಾಗಿಲ್ಲ ಎನ್ನಬಹುದು. ಜೊತೆಗೆ ಜನರು ಸಹ ಹೆಚ್ಚಿನ ಒಲವು ತೋರದಿರುವುದು ಕಂಡುಬರುತ್ತದೆ.

೩. ಆರ್ಥಿಕ ಚೈತನ್ಯದ ಉಪಯೋಜನೆ ಮತ್ತು ವಿಶೇಷ ಕಾರ್ಯಕ್ರಮಗಳ ಸವಲತ್ತುಗಳು

ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಜೀವನ ಕ್ರಮವನ್ನು ತಿಳಿದು ಭಾರತ ಸರ್ಕಾರವೂ ಉಪಯೋಜನೆಗಳ ಕಾರ್ಯಕ್ರಮಗಳ ಮೂಲಕ ಕಲ್ಯಾಣಕಾರ್ಯದಲ್ಲಿ ನಿರಂತರವಾಗಿದೆ. ಇಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಅನೇಕವಾಗಿವೆ. ಎರಡು ಸಮುದಾಯಗಳ ಕ್ಷೇತ್ರಾಧ್ಯಯನದಲ್ಲಿ ಮುಖ್ಯ ಕಾರ್ಯಕ್ರಮವಾಗಿ ಸಮುದಾಯಗಳಿಗೆ ನೀಡುತ್ತಿರುವ ಕಾರ್ಯಕ್ರಮಗಳನ್ನು ಇಲ್ಲಿ ಅನುಲಕ್ಷಿಸಲಾಗಿದೆ. ವಿಶೇಷ ಯೋಜನೆಯ ಕಲ್ಯಾಣಾಧಿಕಾರಿಗಳಿಂದ ಪಡೆದ ಮಾಹಿತಿಗೆ ಅನುಕ್ರಮವಾಗಿ ಕಾರ್ಯಕ್ರಮದ ಪಟ್ಟಿ ನೀಡಲಾಗಿದೆ. ಕೋಷ್ಟಕ ೪.೩ ರಲ್ಲಿ ಗುರುತಿಸಲಾದ ೧೭ ಕಾರ್ಯಕ್ರಮಗಳು ಜೇನುಕುರುಬ ಮತ್ತು ಕೊರಗ ಸಮುದಾಯಗಳ ಆರ್ಥಿಕ ಚೈತನ್ಯದ ವಿಶೇಷ ಕಾರ್ಯಕ್ರಮಗಳಾಗಿವೆ.

ಕೋಷ್ಟಕ ೪.೩ ರಲ್ಲಿ ತೋರಿಸಲಾದಂತೆ ಮನೆಗಳ ಹಂಚಿಕೆ ಮತ್ತು ಕೃಷಿಗೆ ನೆರವು ಮುಖ್ಯವಾದವುಗಳು. ಮನೆಗಳನ್ನು ಕಾಲೋನಿಯ ಆರಂಭದಲ್ಲಿ ಅಂದರೆ ೧೯೭೦ ರಿಂದಲೇ ಕೊಡಲ್ಪಟ್ಟಿವೆ. ಪಟ್ಟಿಯಲ್ಲಿರುವ ಅಂಕಿ ಅಂಶಗಳು ಇತ್ತೀಚಿನ ೧೯೯೫ರ ನಂತರ ನೀಡಲಾದ ಮನೆಯಾಗಿರುವುದು. ಮನೆಗಳ ನೀಡಿಕೆಯಲ್ಲಿ ಆಯಾ ಜನಸಂಖ್ಯೆಗೆ ಅನುಗುಣವಾಗಿ ಎಲ್ಲಾ ತಾಲ್ಲೂಕುಗಳಲ್ಲಿ ನೀಡಿರುವುದು ಕಂಡು ಬರುತ್ತದೆ. ಭೂ ಸೇನಾ ಇಲಾಖೆಯವರು ಮನೆಗಳ

ನಿರ್ಮಾಣ ಮಾಡಿದ್ದಾರೆ. ಒಟ್ಟು ೧೯೬ ಮನೆಗಳನ್ನು ಮೂಲನಿವಾಸಿ ಸಮುದಾಯಗಳಿಗೆ ನಿರ್ಮಿಸಿಕೊಟ್ಟಿದ್ದಾರೆ. ಜೇನುಕುರುಬರಲ್ಲಿ ಮನೆಗಳನ್ನು ಕ್ರಮವಾಗಿ ಹೆಚ್.ಡಿ.ಕೋಟೆ ೩೧, ಪಿರಿಯಾಪಟ್ಟಣ ೨೩, ಹುಣಸೂರು ೧೧, ಗುಂಡ್ಲುಪೇಟೆ ೫, ಸೋಮವಾರಪೇಟೆ ೩,ನಂಜನಗೂಡಿನಲ್ಲಿ ೧೩ ವಿರಾಜಪೇಟೆನಲ್ಲಿ ೫ ಹೊಸದಾಗಿ ನಿರ್ಮಿಸಿಕೊಟ್ಟಿರುವುದು ತಿಳಿದು ಬರುತ್ತದೆ. ಕೊರಗರಲ್ಲಿ ಆನುಕ್ರಮವಾಗಿ ಕುಂದಾಪುರ ೧೫, ಉಡುಪಿ ೨೭, ಕಾರ್ಕಳ ೧೩ ಮಂಗಳೂರು ೨೮, ಬೆಳ್ತಂಗಡಿ ೬, ಬಂಟ್ವಾಳ ೫, ಸೂಳ್ಯ ೪, ಪುತ್ತೂರು ೭ ಕುಟುಂಬಗಳಿಗೆ ಮನೆಗಳ ನಿರ್ಮಾಣ ಮಾಡಿದ್ದಾರೆ. ಈ ಸರ್ಕಾರಿ ಮನೆಗಳಲ್ಲಿ ಜೇನುಕುರುಬರು ಮತ್ತು ಕೊರಗರು ವಾಸವಾಗಿದ್ದಾರೆ. ಈ ಬಗ್ಗೆ ಫಲಾನುಭವಿಗಳಿಂದಲೇ ಮನೆಗಳನ್ನು ಗುರುತಿಸಲು ಸಾಧ್ಯವಾಗಿದೆ. ಬಹುತೇಕ ಜೇನುಕುರುಬ ಕುಟುಂಬಗಳಿಗೆ ಮನೆಯ ಸೌಲಭ್ಯ ದೊರೆತಿದೆ. ಆದರೆ ಕೊರಗರಲ್ಲಿ ಎಲ್ಲರಿಗೂ ಮನೆ ದೊರೆತಿಲ್ಲ. ಕೆಲವು ಕುಟುಂಬಗಳು ಬೇರೆಯವರ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಈ ದೃಷ್ಟಿಯಿಂದ ಮನೆ ನೀಡಿಕೆಯ ಸೌಲಭ್ಯ ಸ್ವಲ್ಪ ಮಟ್ಟಿಗೆ ಎಲ್ಲಾ ಫಲಾನುಭವಿಗಳಿಗೆ ಪ್ರಾಪ್ತವಾಗಿದೆ.

ಕೃಷಿಗಾಗಿ ಕೆಲವು ಸೌಲಭ್ಯಗಳು ಈ ಸಮುದಾಯಗಳಿಗೆ ಕಾಲೋನಿಯ ಆರಂಭದಲ್ಲಿಯೇ ದೊರೆತಿದೆ. ಸಮುದಾಯದ ಜನರಿಗೆ ಕೃಷಿಯ ನೆರವಿಗಾಗಿ, ಗೊಬ್ಬರ, ನೇಗಿಲು, ಬಿತ್ತನೆ ಬೀಜ, ಬೇಸಾಯದ ಉಪಕರಣಗಳು ನೆರವಿನಲ್ಲಿ ಬರುತ್ತವೆ. ಈ ಎಲ್ಲಾ ಸೌಲಭ್ಯಗಳನ್ನು ಪಟ್ಟಿ ಮಾಡುವುದು ದೊಡ್ಡ ಸಮಸ್ಯೆ. ಹೀಗಾಗಿ ಈ ಸೌಲಭ್ಯ ಪಡೆದ ಕುಟುಂಬಗಳನ್ನು ಮಾತ್ರ ನೀಡಲಾಗಿದೆ. ಒಟ್ಟು ೨೪ ಜೇನುಕುರುಬ ಮತ್ತು ೩ ಕೊರಗ ಕುಟುಂಬಗಳು ಸೌಲಭ್ಯ ಪಡೆದಿವೆ. ವ್ಯವಸಾಯದ ಅನುಭವ ಅಥವಾ ಭೂಮಿ ಇಲ್ಲದಿರುವುದರಿಂದ ಕೊರಗರಲ್ಲಿ ಈ ಯೋಜನೆಯ ಫಲ ಕಡಿಮೆ. ಸ್ವಲ್ಪ ಮಟ್ಟಿಗೆ ಜೇನುಕುರುಬರು ಉತ್ತಮವೆನ್ನಬಹುದು. ಈ ಸೌಲಭ್ಯದ ಬಗ್ಗೆ ಹೇಳುವಾಗ ನೆರವಿನ ಪಾತ್ರ ಕಾಲೋನಿಯಿಂದ ಕಾಲೋನಿಗೆ ಬೇರೆ ಬೇರೆಯಾಗಿರುವ ಮಾಹಿತಿ ತಿಳಿದು ಬರುತ್ತದೆ.

ಕಾಡಿನಲ್ಲಿ ದೊರೆಯುತ್ತಿದ್ದ ಬಿದಿರಿನಿಂದ ಬುಟ್ಟಿ, ಚಾಪೆ, ಬೆತ್ತದನೇಯ್ಗೆ, ಕುಕ್ಕೆ ತಯಾರಿಸುವ ಕಲೆ ಎರಡು ಸಮುದಾಯಗಳಲ್ಲಿವೆ. ಆದರೆ ಬೆತ್ತದ ಕುಶಲ ಕಲೆಯಲ್ಲಿ ಎರಡು ಸಮುದಾಯಗಳು ತೊಡಗಿಸಿಕೊಂಡ ಪ್ರಮಾಣವೂ ಕಡಿಮೆ. ಜೇನುಕುರುಬರಲ್ಲಿ ೫ ಮತ್ತು ಕೊರಗರಲ್ಲಿ ೯ ಕುಟುಂಬಗಳು ಈ ಸೌಲಭ್ಯವನ್ನು ಪಡೆದಿದ್ದಾರೆ. ತೋಟಗಾರಿಕೆ ಇಲಾಖೆಯವರು ಮುಖ್ಯವಾಗಿ ತೆಂಗು, ಮಾವಿನ ಸಸಿಗಳನ್ನು ವಿತರಿಸಿ, ತಮ್ಮ ತಮ್ಮ ಮನೆಗಳಲ್ಲದೇ ಜಮೀನಿನಲ್ಲಿ ಬೆಳೆಸಲು ಪ್ರೋತ್ಸಾಹಿಸುತ್ತಿದ್ದಾರೆ. ಈ ಸೌಲಭ್ಯವನ್ನು ಯಾರು ಕೊಟ್ಟಿದ್ದಾರೆ ಎಂಬುದು ನಮಗೆ ಗೊತ್ತಿಲ್ಲ. ಆದರೆ ಸಸಿಗಳನ್ನು ನೆಟ್ಟಿದ್ದೇವೆ ಎನ್ನುತ್ತಾರೆ. ಜೇನುಕುರುಬರ ೩೨ ಕುಟುಂಬಗಳು ಮತ್ತು ಕೊರಗರ ೧೩ ಕುಟುಂಬಗಳು ಸೌಲಭ್ಯ ಪಡೆದಿವೆ. ಕೊರಗರಲ್ಲಿ ಮಾತ್ರ ವಿರಳವಾಗಿದೆ. ಒಟ್ಟಾರೆ ಸೌಲಭ್ಯವಂತೂ ದೊರೆತಿದೆ.

ಆರೋಗ್ಯಕ್ಕಾಗಿ ಸರ್ಕಾರ ನಿರ್ಮಿಸಿರುವ ಸೌಲಭ್ಯದ ಕಾರ್ಯಕ್ರಮಗಳು ಉತ್ತಮವಾದದ್ದೆ. ಆರೋಗ್ಯ ಸೇವೆಯಿಂದ ಪ್ರತಿಯೊಂದು ಕಾಲೋನಿಯ ಜನರು ತಮ್ಮ ಕಾಯಿಲೆಗಳಿಗೆ ಹತ್ತಿರದ ಆರೋಗ್ಯ ಕೇಂದ್ರ ಮತ್ತು ಆರೋಗ್ಯ ಘಟಕಗಳಿಗೆ ಹೋಗುತ್ತಾರೆ. ಈ ನಿಟ್ಟಿನಲ್ಲಿ ಎಲ್ಲರೂ ಸೌಲಭ್ಯ ಪಡೆಯುತ್ತಿರುವುದು ಗುರುತಿಸುವುದು ಕಷ್ಟದ ಕೆಲಸ. ಜೇನುಕುರುಬರ ಕಾಲೋನಿಗಳ ಸಮೀಪದಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಕಂಡು ಬಂದರೆ, ವೈದ್ಯರು ಮಾತ್ರ ಕಾಣಬರುವುದಿಲ್ಲ. ಈ ಎಲ್ಲಾ ಘಟಕಗಳು ಸಂಪೂರ್ಣ ಗ್ರಾಮ ಹಾಗೂ ದೂರ ಪ್ರದೇಶದಲ್ಲಿವೆ. ಕೊರಗರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಂಡುಬರುತ್ತದೆ. ಅರೋಗ್ಯ ಕೇಂದ್ರಗಳು ನಗರ ಅಥವಾ ಪುರ ಪ್ರದೇಶದ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಇಲ್ಲೂ ಸೌಲಭ್ಯ ಪಡೆಯುತ್ತಿರುವ ಸಂಖ್ಯೆಯೂ ಕಡಿಮೆ. ಜೇನುಕುರುಬರಲ್ಲಿ ೪೦ ಕುಟುಂಬಗಳು, ಕೊರಗರಲ್ಲಿ ೫೭ ಕುಟುಂಬಗಳು ಈ ಸೌಲಭ್ಯ ಪಡೆದಿದ್ದಾರೆ. ಕಾಲೋನಿಗಳ ಸಮೀಪದ ಆರೋಗ್ಯ ಘಟಕಗಳಿಗೆ ತಿಂಗಳಿಗೊಮ್ಮೆ, ವಾರಕೊಮ್ಮೆ ವೈದ್ಯರು ದರ್ಶನಕೊಟ್ಟು ಹೋಗುತ್ತಾರೆ. ವೈದ್ಯರಿಗಿಂತ ದಾದಿಯರ (ಎ.ಎನ್.ಎಮ್) ಸೇವೆ ಮಾತ್ರ ಇಲ್ಲಿ ಲಭಿಸುತ್ತದೆ ಎಂದು ಜನರು ವೈದ್ಯಕೀಯ ಸೇವಾ ಸೌಲಭ್ಯ ಹೆಚ್ಚಿನ ಪ್ರಮಾಣದಲ್ಲಿ ಕಾಲೋನಿಗಳ ಸಮೀಪ ಅನುಷ್ಠಾನವಾಗಬೇಕಿದೆ.

ನಬಾರ್ಡ್‌ನ ಸೇವಾ ಸೌಲಭ್ಯ ಆರ್ಥಿಕ ಚೈತನ್ಯ ಕಾರ್ಯಕ್ರಮಲ್ಲಿದೆ. ಆದರ ಪ್ರಭಾವ ಮಾತ್ರ ಎಲ್ಲೂ ಕಂಡು ಬರುವುದಿಲ್ಲ. ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ೪ ಕುಟುಂಬಗಳು ಬ್ಯಾಂಕಿನೊದ ಸಾಲದ ಸೌಲಭ್ಯ ಮಾತ್ರ ಪಡೆದಿವೆ. ಇನ್ನುಳಿದಂತೆ ಯಾವುದೇ ಕಾಲೋನಿಯಲ್ಲಿ ನಬಾರ್ಡ್‌ನ ನೆರವು ಪ್ರಾಪ್ತವಾದ ರೀತಿ ಕಾಣಬರುವುದಿಲ್ಲ. ಸುಮಾರು ವರ್ಷಗಳ ಹಿಂದೆ ನಿರ್ಮಾಣಗೊಂಡ ಮನೆಗಳು ಹಲವು ಹಂತದಲ್ಲಿ ಮುರಿದು ಬೀಳುವಂತಹುಗಳಾಗಿವೆ ಮತ್ತೆ ಕೆಲವು ಮನೆಗಳ ಗೋಡೆಗಳು ಬಿದ್ದು ಹೋಗಿವೆ. ಕೆಲವು ಮನೆಗಳಿಗೆ ಕಟ್ಟಡ ಕಟ್ಟುವಲ್ಲಿನ ಪರಿಕರಗಳ ಗುಣಮಟ್ಟವೂ ಸರಿಇಲ್ಲದ ಕಾರಣ ಕುಸಿದು ಬಿದ್ದಂತಹ ಮನೆಗಳ ದುರಸ್ತಿಗೆ ನೆರವು ನೀಡಲಾಗುತ್ತಿದೆ. ಈ ·ಸೌಲಭ್ಯವನ್ನು ಸಾಕಷ್ಟು ಕುಟುಂಬಗಳು ಪಡೆದಿವೆ. ಒಟ್ಟು ೬೮ ಕುಟುಂಬಗಳಲ್ಲಿ ಜೇನುಕುರುಬರಿಗೆ ೩೨ ಕುಟುಂಬಗಳು, ಕೊರಗರಲ್ಲಿ ೩೬ ಕುಟುಂಬಗಳಿಗೆ ಈ ಸೌಲಭ್ಯ ಪ್ರಾಪ್ತವಾಗಿದೆ. ಮುರಿದು ಬೀಳುವಂತಹ ಮನೆಗಳನ್ನು ಛಾಯ ಚಿತ್ರಗಳಲ್ಲಿ ನೀಡಲಾಗಿದೆ. ಸಮುದಾಯಗಳಲ್ಲಿ ವಿವಿಧ ಕಾರ್ಯಕ್ರಮಗಳಿಗೆ ವಿಶೇಷ ಸೌಲಭ್ಯದ ಕ್ರಮದಲ್ಲಿ ಧನಸಹಾಯ ದೊರೆಕುತ್ತಿದೆ. ಜೇನುಕುರುಬರಲ್ಲಿ ೯ ಕುಟುಂಬಗಳು, ಕೊರಗರಲ್ಲಿ ೪೦ ಕುಟುಂಬಗಳು ಧನಸಹಾಯದಿಂದ ಉತ್ತೇಜನ ಪಡೆದಿದ್ದಾರೆ.

ಕೋಷ್ಟಕ ೪.೫ ಉಪಯೋಜನೆಯ ವಿಶೇಷ ಕಾರ್ಯಕ್ರಮಗಳು.

ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪ್ರಗತಿಗಾಗಿ ಯೋಜಿಸಿದ ಕಲ್ಯಾಣ ಕಾರ್ಯಗಳು ಮತ್ತು ಅನುಷ್ಠಾನ: ತಾಲ್ಲೂಕುವಾರು ಕ್ರೋಢೀಕರಿಸಲಾಗಿದೆ

ಕ್ರ. ಸ.	ವಿಶೇಷ ಕಾರ್ಯಕ್ರಮಗಳಿಗೆ ಸಿಗುವ ಸೌಲತ್ತುಗಳು ಮತ್ತು ಉಪಯೋಜನೆಯ ಕಾರ್ಯಕ್ರಮಗಳು	ಜೇನುಕುರುಬರು							ಕೊರಗರು							
		ಹೆಚ್.ಡಿ. ಕೋಟೆ	ಪಿರಿಯಾ ಪಟ್ಟಣ	ಹುಣಸೂರು	ಗುಂಡ್ಲು ಪೇಟೆ	ಸೋಮವಾರ ಪೇಟೆ	ವಿರಾಜ ಪೇಟೆ	ನಂಜನಗೂಡು	ಕುಂದಾಪುರ	ಉಡುಪಿ	ಕಾರ್ಕಳ	ಮಂಗಳೂರು	ಬೆಳ್ತಂಗಡಿ	ಬಂಟ್ವಾಳ	ಸುಳ್ಯ	ಪುತ್ತೂರು
೧	ಮನೆಗಳ ಹಂಚಿಕೆ ೧೯೯೫ರ ನಂತರ	೩೧	೨೩	೧೧	೫	೩	೫	೧೩	೧೫	೨೭	೧೩	೨೮	೬	೫	೪	೭
೨	ಕೃಷಿಗೆ ನೆರವು	೩	೫	೪	೨	-	-	೧೦	-	-	೧	-	೨	-	-	-
೩	ಕೈಗಾರಿಕಾ ಅರಣ್ಯ (ಬೆತ್ತ ನೀಡಿಕೆ)	೨		-	೧	-	-	೨	-	-	೭	-	-	-	-	೨
೪	ತೋಟಗಾರಿಕೆ (ಸಸಿ ನೀಡಿಕೆ)	೬	೫	೧೧	೫	-	-	೫	-	-	೪	೨	-	೩	೩	೧
೫	ಆರೋಗ್ಯವೈದ್ಯಕೀಯ ಸೌಲಭ್ಯ	೧೬	೩	೨೧	-	-	-	-	೧೧	೧೪	೧	೧೯	೧೩	-	-	-
೬	ನಬಾರ್ಡ್‌ನ ಕಾರ್ಯಕ್ರಮದ ಇತರೆ ಕೊಡುಗೆ	೪	-	-	-	-	-	-	-	-	೧	-	-	-	-	-
೭	ಹಳೆಯ ಮನೆಯ ದುರಸ್ತಿಗೆ ನೆರವು	೭	೨೦	೫	-	-	೩	-	೬	-	೨	೧೪	೫	೨	-	೧
೮	ಧನ ಸಹಾಯ ಉತ್ತೇಜನ	೪	೫	-	-	-	-	-	೭	೯	-	೨೩	-	-	೧	-
೯	ಹಸಿರು ಕಾರ್ಡ್ ನೀಡಿಕೆ	೪೭	೩೨	೫೪	೨೪	೧೧	೧೬	೫	೩೪	೧೨	೩೦	೪೧	೨೧	೫	೩	೧೧
೧೦	ಪಶು ಸಂಗೋಪನೆ	೨	೬	೨	೧	-	-	-	-	೧	•೩	-	೪	-	-	-
೧೧	ಹಾಲುಕರೆಯುವ ಹಸು ನೀಡಿಕೆ	೨	೫	೨	೧	-	೧		-	-	-	೧	೧	-	೧	-
೧೨	ಕುರಿ ಸಾಕಾಣಿಕೆ ಘಟಕ	೧	೧	೩	-	-	೧	-	-	-	-		-	-	-	-
೧೩	ಆಡು ಸಾಕಾಣಿಕೆ ಘಟಕ	೧	-	-	೧	-	-	-	-	-	-	-	-	-	-	-
೧೪	ಕೋಳಿ ಸಾಕಾಣಿಕೆ ಘಟಕ		-	-	-	-	-	-	-	-	-	-	-	-	-	-
೧೫	ಉಳುಮೆ ಎತ್ತುಗಳ ಸೌಲಭ್ಯ	೩	೩	೧	೧	-	-	೧	-	-	-	-	-	-	-	-
೧೬	ಭಾಗ್ಯಜ್ಯೋತಿ ಸವಲತ್ತು	೯	೨೦	೧೧	೧೬	-	-	೩	೩೦	೨೪	೧೧	೬೬	೨೦	-	೨	೩
೧೭	ಪಿಂಚಣಿ ಸವಲತ್ತು ವೃದ್ಧರಿಗೆ	೩	೫	೧	-	-	-	೨	೪	೨	-	೧೧	-	೨	-	೨
	ವಿದವೆಯರಿಗೆ	೧	೧	-	-	-	-	-	-	-	-	-	-	-	-	-
	ಅಂಗವಿಕಲರಿಗೆ															

ಪಡಿತರ ಪದ್ಧತಿಯಲ್ಲಿ ಕೊಡುವ ಹಸಿರು ಕಾರ್ಡ್‌ನಲ್ಲಿ ಕಾಲಕ್ಕೆ ತಕ್ಕಂತೆ ಅನೇಕ ಮಾರ್ಪಾಡುಗಳು ಕಾಣುತ್ತಿವೆ. ಕಾರ್ಡ್‌ಗಳ ಫಲಾನುಭವಿಗಳಲ್ಲಿ ಈ ಬಗ್ಗೆ ಇರುವ ಮಾಹಿತಿಯಿಂದ ತಿಳಿದು ಬರುವುದೆಂದರೆ, ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಇತ್ತೀಚಿಗೆ ಬಿ.ಪಿ.ಎಲ್.ಕಾರ್ಡ್ ನೀಡಲಾಗಿದೆ ಜೊತೆಗೆ ಹಳೆಯ ಹಸಿರು ಕಾರ್ಡ್ ಸಹ ಒಂದು ವರದಾನವೇ ಸರಿ. ರಿಯಾಯಿತಿ ಧರದಲ್ಲಿ ಅಕ್ಕಿ, ಸಕ್ಕರೆ, ಗೋಧಿ ಇತ್ಯಾದಿ ಆಹಾರ ಸಾಮಗ್ರಿಗಳನ್ನು ಈ ಕಾರ್ಡ್ ಇದ್ದವರಿಗೆ ಕೊಡಲಾಗುತ್ತದೆ. ಕೋಷ್ಟಕ ೪.೩ ರಲ್ಲಿ ತೋರಿಸಲಾದಂತೆ ಎಲ್ಲಾ ಕಾಲೋನಿಗಳಲ್ಲಿ ಕಾರ್ಡ್‌ಗಳ ವಿತರಣೆ ಮಾಡಲಾಗಿದೆ. ಪ್ರತಿಯೊಂದು ಕುಟುಂಬಕ್ಕೂ ಕಾರ್ಡ್ ಲಭ್ಯ ಆದರೆ ಇಲ್ಲಿ ೧೯೯೫ರ ನಂತರ ೨೦೦೫ ರ ನಡುವೆ ಹೊಸದಾಗಿ ಕಾರ್ಡ್ ಪಡೆದ ಕುಟುಂಬಗಳನ್ನು ಮಾತ್ರ ಗುರುತಿಸಲಾಗಿದೆ. ಒಟ್ಟು ಕಾರ್ಡ್ ಪಡೆದ ಕುಟುಂಬಗಳ ಸಂಖ್ಯೆ ೩೪೫. ಎಲ್ಲಾ ಕಾಲೋನಿಯ ಕುಟುಂಬಗಳಿಗೆ ಶೇ. ೯೦ ಕ್ಕಿಂತ ಹೆಚ್ಚಾಗಿ ಕಾರ್ಡ್ ಹಂಚಿಕೆಮಾಡಲಾಗಿದೆ. ಇದೊಂದು ಉತ್ತಮವಾದ ಕಾರ್ಯವೇ ಸರಿ.

ಪಡಿತರ ವಿತರಣೆಯ ಬಗ್ಗೆ ಮಾತ್ರ ಸಮುದಾಯಗಳ ಜನರಲ್ಲಿ ದ್ವಂದ್ವ ನಿಲವು ಕಂಡುಬರುತ್ತದೆ. ಕಾಲೋನಿಗಳಲ್ಲಿ ವಿದ್ಯಾವಂತ ಜನರಿದ್ದರೂ, ಪಡಿತರ ವಿತರಣಾಕೇಂದ್ರ ದೂರದ ಗ್ರಾಮಗಳಲ್ಲಿನ ಪ್ರಭಾವಿ ಶ್ರೀಮಂತರಲ್ಲಿಯೇ ಕೇಂದ್ರೀಕೃತಗೊಂಡಿವೆ. ಎಲ್ಲೂ ಸಮುದಾಯಗಳ ಕಾಲೋನಿ ಅಥವಾ ಜನರಲ್ಲಿ ವಿತರಣೆಯ ಕೇಂದ್ರ ಇರುವುದಿಲ್ಲ. ಎಲ್ಲಾ ಕೇಂದ್ರಗಳಲ್ಲಿ ಆಹಾರ ಸಾಮಾಗ್ರಿ ಬಂದ ಕೆಲವೇ ದಿನಗಳಲ್ಲಿ ದಿನಸಿ ವಸ್ತುಗಳು ಮುಗಿದಿರುತ್ತವೆ. ಸಮುದಾಯಗಳ ಜನರ ಹಣ ಸಂಗ್ರಹಣೆಯ ಕಾಲಕ್ಕೆ ಆಹಾರ ಸಾಮಗ್ರಿ ಮುಗಿದಿರುವುದು ಕಾಳ ಸಂತೆಯ ದಂಧೆಯೆ ಕಾರಣವೆನ್ನುತ್ತಾರೆ. ಸರಿಯಾದ ಕ್ರಮದಲ್ಲಿ ಪಡಿತರ ಪದಾರ್ಥಗಳು ದೊರಕದ ಕಾರಣ, ಈ ಸೌಲಭ್ಯ ಪಡೆಯಲು ಜನರು ಉದಾಸೀನ ತೋರುವವರಾಗಿದ್ದಾರೆ. ಸರ್ಕಾರದ ಈ ಸೌಲಭ್ಯ ನೇರವಾಗಿ ಪಡೆಯಬೇಕಾದರೆ, ಕಾಲೋನಿಗಳಲ್ಲಿಯೇ ವಿತರಣೆ ನಡೆಯಬೇಕು. ಈ ಕ್ರಮಕ್ಕೆ ಹೆಚ್ಚಿನ ತರಬೇತಿ ಹಾಗೂ ಸಹಕಾರ ಸಂಘ ಸಂಘಟನೆಯ ಜವಬ್ದಾರಿಯನ್ನು ಹೊರಬೇಕಿದೆ. ನ್ಯಾಯಯುತ ಹಂಚಿಕೆ ಸಮುದಾಯಗಳಿಗೆ ದೊರೆಕಬೇಕಾದಲ್ಲಿ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಸಹಕಾರ ಸಂಘದ ತರಬೇತಿಯಿಂದ ಆಹಾರ ದಿನಸಿಗಳು ವಿತರಿಸುವ ಪದ್ಧತಿಯ ಕ್ರಮವನ್ನು ರೂಢಿಸಿಕೊಟ್ಟು ವಿತರಣ ವ್ಯವಸ್ಥೆಯ ಜವಾಬ್ದಾರಿ ವಹಿಸಬೇಕಿದೆ. ನಂತರ ಇಲಾಖೆಯ ಮೇಲ್ವಿಚಾರಕರು ವ್ಯವಸ್ಥಿತವಾದ ವಿತರಣೆಯ ಬಗ್ಗೆ ಪರಿಶೀಲಿಸಬೇಕಾದ ಅಗತ್ಯವಿದೆ.

ಪಶುಸಂಗೋಪನೆ ಸೌಲಭ್ಯದಲ್ಲಿ ಎಮ್ಮೆಯನ್ನು ಕೆಲ ಕುಟುಂಬಗಳಿಗೆ ಕೊಡಲಾಗಿದೆ. ಕೊರಗರಲ್ಲಿ ೮ ಕುಟುಂಬಗಳು ಸುಮಾರು ವರ್ಷಗಳ ಹಿಂದೆ ನೀಡಿದ್ದ ಸೌಲಭ್ಯವನ್ನು ನೆನೆಯುತ್ತಾರೆ. ಬಹುತೇಕ ಎರಡು ಸಮುದಾಯಗಳಲ್ಲಿ ಹೈನು ಮಾಡಿ ಎಮ್ಮೆಗಳನ್ನು ಉಳಿಸಿ ಬೆಳೆಸುವುದೂ ಅವರ ಸಂಸ್ಕೃತಿಗೆ ದೂರವಾದದ್ದು. ಮುಖ್ಯವಾಗಿ ಈ ಸೌಲಭ್ಯದ ಫಲಾನುಭವಿಗಳು ಕಡಿಮೆ. ಹಾಲು ಕರೆಯುವ ಹಸುಗಳ ಸೌಲಭ್ಯವು ಎರಡು ಸಮುದಾಯಗಳಲ್ಲಿ ಕಡಿಮೆ ಜೇನುಕುರುಬರಲ್ಲಿ ೧೧ ಕುಟುಂಬ ಕೊರಗರಲ್ಲಿ ೩ ಕುಟುಂಬಗಳಿಗೆ ಸೌಲಭ್ಯ ಪ್ರಾಪ್ತವಾಗಿದೆ. ಕುರಿಸಾಕಾಣೆಯಲ್ಲಿಯೂ ಸಹ ಜೇನುಕುರುಬರ ೬ ಕುಟುಂಬಗಳು ಹಾಗೆಯೇ ಕೊರಗರು ಯಾವುದೇ ಸೌಲಭ್ಯ ಪಡೆದಿಲ್ಲ. ಇನ್ನು ಆಡು ಸಾಕಾಣಿಕೆ ಘಟಕದ ಸೌಲಭ್ಯದಲ್ಲಿ ಜೇನುಕುರುಬರು ೨ ಕುಟುಂಬಗಳು ಮಾತ್ರ ಪಡೆದಿವೆ ಇಲ್ಲೂ ಕೊರಗರ ಕುಟುಂಬ ಸೌಲಭ್ಯ ಪಡೆದಿಲ್ಲ.

ಬೇರೆ, ಬೇರೆ ಕಲಮುಗಳಲ್ಲಿ ನೀಡಲಾದ ಸೌಕರ್ಯಗಳಾದ, ಪಶುಸಂಗೋಪನಾ, ಹಸು, ಕುರಿ, ಆಡು, ಕೋಳಿ ಮುಂತಾದ ಸೌಲಭ್ಯಗಳನ್ನು ಪಟ್ಟಿಯಲ್ಲಿ ಪ್ರತ್ಯೇಕವಾಗಿ ಕೊಡಲಾಗಿದೆ. ವಿಶೇಷ ಸೌಲಭ್ಯದ ಕೆಲವು ಘಟಕಗಳೆಂದು ಕರೆಯುವ ಯೋಜನೆಗಳನ್ನು ರೂಪಿಸಲಾಗಿದೆ. ಆದರೆ ಕೊರಗರು ಈ ಸೌಲಭ್ಯ ಪಡೆದಿಲ್ಲವೆನ್ನಬಹುದು. ಉಳಿದಂತೆ ಜೇನುಕುರುಬರಲ್ಲಿ ತಕ್ಕಮಟ್ಟಿನ ಸ್ವಲ್ಪ ಜನರಿಗೆ ಸೌಲಭ್ಯ ದೊರೆತ ಬಗ್ಗೆ ಕಂಡುಬರುತ್ತದೆ.

ಬಹುತೇಕ ಎರಡು ಸಮುದಾಯಗಳಲ್ಲಿ ಈ ಬಗ್ಗೆ ನಿರುತ್ಸಾಹ. ಈ ಕೆಲಸ ಕಷ್ಟಕರವಾದದ್ದು ಮತ್ತು ಯಾವುದೇ ಭೂಮಿ ಇಲ್ಲದ ನಮಗೆ ಈ ಕೆಲಸ ಇನ್ನೂ ಕಷ್ಟ ಎನ್ನುತ್ತಾರೆ ಕೊರಗರು. ಈ ಕಾರ್ಯದಲ್ಲಿ ತೊಡಗಿಸಿಕೊಂಡ ಜೇನುಕುರುಬರ ಅನುಭವ ಹಾಗೂ ಅಭಿಪ್ರಾಯ ಬೇರೆಯಾಗಿದೆ. ಅರಣ್ಯ ಪ್ರದೇಶಕ್ಕೆ ಅಂಟಿಕೊಂಡ ಅನೇಕ ಕಡೆಗಳಲ್ಲಿ ರಕ್ಷಿತ ಅರಣ್ಯ ಪ್ರದೇಶದಲ್ಲಿ, ಹುಲ್ಲುಗಾವಲಲ್ಲಿ ಧನ ಮೇಯಿಸುವುದು ನಿಷಿದ್ಧ. ಇಲ್ಲಿ ಬೇರೆ ಹುಲಿ ರಕ್ಷಣೆ ಯೋಜನೆ ಇದೆ. ಈ ಎಲ್ಲಾ ಕಾರಣಗಳನ್ನು ನೀಡುತ್ತಾರೆ. ಹೀಗಾಗಿ ಎರಡು ಸಮುದಾಯಗಳಲ್ಲಿ ನಿಶ್ಚಿತವಾಗಿ ಹೆಚ್ಚಿನ ಪ್ರಮಾಣದಲ್ಲಿ ಈ ಸೌಲಭ್ಯ ಪರಿಣಾಮಕಾರಿಯಾದ ಬಗ್ಗೆ ಮಾಹಿತಿ ದೊರಕುವುದಿಲ್ಲ.

ಕೋಳಿ ಸಾಕಣಿಕೆಯ ಘಟಕಗಳ ಪ್ರಾರಂಭ ಎರಡು ಸಮುದಾಯಗಳ ಯಾವ ಕಾಲೋನಿಯಲ್ಲೂ ಕಂಡುಬರುವುದಿಲ್ಲ. ಜನರು ಕೋಳಿಗಳನ್ನು ಸಾಕಿದ್ದರೆ, ಒಂದೋ, ಎರಡು ಅದು ಮನೆಯಂಗಳದಲ್ಲಿ ಮಾತ್ರ ಕಾಣಬಹುದು. ಹೀಗಾಗಿ ಈ ಯೋಜನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎನ್ನುತ್ತಾರೆ ವಕ್ತೃಗಳು. ವ್ಯವಸಾಯಕ್ಕೆ ನಿರತವಾದ ಕೆಲವೇ ಕುಟುಂಬಗಳಿಗೆ ೨೦೦೧ ರಲ್ಲಿ ವ್ಯವಸಾಯಕ್ಕೆ ಎತ್ತುಗಳ ಸೌಲಭ್ಯ ನೀಡಲಾಗಿದೆ. ೯ ಜೇನುಕುರುಬ ಕುಟುಂಬಗಳು ಮಾತ್ರವೇ ಈ ಸೌಲಭ್ಯ ಪಡೆದಿದ್ದಾರೆ. ಉಳಿದ ಕುಟುಂಬಗಳಿಗೆ ಇದರ ಲಾಭ ದಕ್ಕಿಲ್ಲ. ಕೊರಗರ ಕುಟುಂಬಗಳಿಗೆ ಈ ಸೌಲಭ್ಯದ ಮಹತ್ವವೇ ತಿಳಿದಿಲ್ಲ. ಉಳುಮೆ ಎತ್ತುಗಳನ್ನು ಸಾಮಾನ್ಯವಾಗಿ ಜಮೀನು ಹೊಂದಿದವರಿಗೆ ಕೃಷಿಗಾಗಿ ಕೊಡಲಾಗಿದೆ. ಫಲಾನುಭವಿಗಳನ್ನು ಇದಕ್ಕಾಗಿ ಕೊರಗರ ಕಾಲೋನಿಗಳು ಸಮೀಕ್ಷೆ ಮಾಡಿದಾಗ ಜಮೀನು ಕೊಟ್ಟಿಲ್ಲದಿರುವುದರಿಂದ ಎತ್ತು, ಹಸುಗಳನ್ನು ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಭಾಗ್ಯಜ್ಯೋತಿ ಯೋಜನೆಯನ್ನು ಎಂದರೆ ಮನೆ, ಮನೆಗೆ ಕನಿಷ್ಠ ಒಂದು ಬಲ್ಬನ್ನು ಕೊಟ್ಟು ಉಚಿತವಾಗಿ ಮನೆಗೆ ವಿದ್ಯುತ್ ದೀಪ ಒದಗಿಸುವ ಸೌಕರ್ಯ. ಈ ಸೌಕರ್ಯವನ್ನು ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಒದಗಿಸುವ ಯೋಜನೆ ಸರ್ಕಾರದ್ದು. ಅನೇಕ ವರ್ಷಗಳಿಂದ ಹಲವೆಡೆ ಕಾರ್ಯಗತವಾಗಿದೆ. ಕೋಷ್ಟಕ ೪.೩ ರಲ್ಲಿ ತೋರಿಸಲಾದ ಅಂಕಿ, ಅಂಶಗಳು ಇತ್ತೀಚಿನ ಬೆಳವಣಿಗೆಯ ಅಂಕಿ, ಅಂಶಗಳು ಕ್ರೋಢಿಕರಿಸಲಾಗಿದೆ. ಜೇನುಕುರುಬರ ಕಾಲೋನಿಗಳನ್ನು ಸ್ಥಳಾಂತರಿಸಿದ ಕಾರಣ ಅನೇಕ ಕುಟುಂಬಗಳಿಗೆ ವಿದ್ಯುತ್ ಕಂಬದ ವ್ಯವಸ್ಥೆಯೂ ಸರಿಯಾದ ಕ್ರಮದಲಿಲ್ಲ. ಜೇನುಕುರುಬರ ಕಾಲೋನಿಗಳಲ್ಲಿ ವಿದ್ಯುತ್ ಸೌಲಭ್ಯವೇ ಇಲ್ಲದ ಕಾಲೋನಿಗಳಿಗೆ ಅಂತಹ ಕಾಲೋನಿಗಳಲ್ಲಿ ಸೋಲಾರ್ ದೀಪದ ಎರಡು ಕಂಬಗಳು ಇತ್ತೀಚೆಗೆ ಹಾಕಲಾಗಿದೆ. ಅಲ್ಲದೇ ಜೇನುಕುರುಬರ ಅರ್ಧದಷ್ಟು ಕುಟುಂಬಗಳಿಗೂ ಭಾಗ್ಯಜ್ಯೋತಿ ಸೌಲಭ್ಯ ಲಭ್ಯವಿಲ್ಲ. ೫೯ ಕುಟುಂಬಗಳಿಗೆ ಮಾತ್ರ ಭಾಗ್ಯಜ್ಯೋತಿ ದೊರೆತಿದೆ. ಕೊರಗರವಾಸ ನಗರಪ್ರದೇಶವಾದ ಕಾರಣದಿಂದಲೇ ಹಲವಾರು ಕುಟುಂಬಗಳು ಭಾಗ್ಯಜ್ಯೋತಿಯ ಸೌಲಭ್ಯ ಪಡೆದಿದ್ದಾರೆ. ಸುಮಾರು ೧೫೬ ಕುಟುಂಬಗಳು ಭಾಗ್ಯಜ್ಯೋತಿಯ

ಸವಲತ್ತು ಪಡೆದಿದ್ದಾರೆ. ಆದರೆ ಸರ್ಕಾರ ಈ ಬಗ್ಗೆ ಸತತ ಸಹಾಯ ಮಾಡಲೂ ತಯಾರಿರುವುದಾಗಿ ಹೇಳುತ್ತಾ ಮೂಲಸೌಕರ್ಯದ ಸೌಲಭ್ಯ ಒದಗಿಸಿಕೊಡುವುದು ನಮ್ಮ ಮೊದಲ ಆದ್ಯತೆ ಎನ್ನುತ್ತಾರೆ.

ಸಮುದಾಯದ ಜನರ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಅನೇಕ ಸೌಲಭ್ಯಗಳನ್ನು ರೂಪಿಸಲಾಗಿದೆ. ಅನೇಕ ಸೌಲಭ್ಯದ ನಡುವೆಯೂ ಸಮುದಾಯಗಳ ಹಿರಿಯರಿಗೆ, ವೃದ್ಧರಿಗೆ, ವಿಧವೆಯರಿಗೆ, ಅಂಗವಿಕಲರಿಗೆ ಸರ್ಕಾರ ಪಿಂಚಣಿ (Old Age Pension OAP) ವೇತನವನ್ನು ಕೊಡುತ್ತಿದೆ. ಪಟ್ಟಿಯಲ್ಲಿ ಒಟ್ಟಾರೆ ಎಲ್ಲಾ ಕಾಲೋನಿಗಳ ಸೌಲಭ್ಯ ಪಡೆಯುತ್ತಿರುವವರು ೩೨ ಜನರು. ವಿಧವೆಯರು ೨, ಮತ್ತು ಅಂಗವಿಕಲರು ೧೬ ಜನರು ಮಾತ್ರ. ವಿಶೇಷ ಸೌಲಭ್ಯ ಒದಗಿಸುತ್ತಿರುವ ಕಾರ್ಯಕ್ರಮವಾದರೂ ಈ ಕಾರ್ಯಕ್ರಮದ ಬಗ್ಗೆ ಸರ್ಕಾರ ವಿಶೇಷ ಕಾಳಜಿ ವಹಿಸಿಕೊಂಡಿದೆ. ಆದರೆ ಮೂಲನಿವಾಸಿ ಬುಡಕಟ್ಟು ಸಮುದಾಯಗಳಾದ ಇವರುಗಳಿಗೆ ದೊರೆತ ಸೌಲಭ್ಯ ತೀರಾ ಕಡಿಮೆ. ಅಂಕಿ ಅಂಶ ಪ್ರಕಾರ ಸೌಲಭ್ಯ ಪಡೆದವರ ಸಂಖ್ಯೆ ಮಾತ್ರ ಕಡಿಮೆ. ಸರ್ಕಾರದ ಈ ಯೋಜನೆಯ ಬಗ್ಗೆ ಸಮುದಾಯಗಳಲ್ಲಿ ಮಾಹಿತಿ ಲಭ್ಯವಿದ್ದರೂ ಲಭ್ಯವಾದ ಬಗ್ಗೆ ಈ ಜನರಲ್ಲಿನ ನಿಲುವು ಬೇರೆಯಾಗಿ ಕಂಡುಬರುತ್ತದೆ. ಸರ್ಕಾರದ ನಿರ್ದೇಶನದಂತೆ ಈ ಸವಲತ್ತು ಪಡೆಯಲು ಅಷ್ಟಾಗಿ ಕಷ್ಟ ಪಡಬೇಕಾಗಿಲ್ಲ. ಕಲ್ಯಾಣಾಧಿಕಾರಿಗಳು ಸಂಬಂಧಪಟ್ಟ ವ್ಯಾಪ್ತಿಯ ಗ್ರಾಮದ ಜನರಿಗೆ ಈ ಯೋಜನೆಯ ಬಗ್ಗೆ ತಿಳಿಸಿ ಕೊಟ್ಟರೂ, ಸೌಲಭ್ಯದ ಸದುಪಯೋಗಕ್ಕೆ ಚುನಾಯಿತ ಸದಸ್ಯರ ಅಪ್ಪಣೆ, ಅಥವಾ ಅನುಮೋದನೆ ಬೇಕು ಎನ್ನುತ್ತಾರೆ. ಪ್ರತಿಯೊಂದು ತಾಲ್ಲೂಕಿನ ಚುನಾಯಿತ ಶಾಸಕ, ಗ್ರಾಮ, ಜಿಲ್ಲಾ ಪಂಚಾಯ್ತಿಯ ಸದಸ್ಯರು ಅಧಿಕಾರಿಗಳಿಗೆ ಈ ಬಗ್ಗೆ ನಿರ್ದೇಶನ ನೀಡಿದರೆ ಸರಿಸುಮಾರು ಬಡಕುಟುಂಬಗಳಿಗೆ ಈ ಸೌಲಭ್ಯ ದೊರಕುವುದರಲ್ಲಿ ಎರಡು ಮಾತಿಲ್ಲ. ಈ ಮಾತನ್ನು ಆಡಳಿತದಲ್ಲಿರುವ ಅಧಿಕಾರಿ ವರ್ಗದವರೇ ಹೌದು ಎನ್ನುತ್ತಾರೆ. ಆದರೆ ವಾಸ್ತವದಲ್ಲಿ ಎಲ್ಲವೂ ರಾಜಕೀಯವಾಗಿರುವ ಆಯೊಮಯದಲ್ಲಿ ಈ ಸೌಲಭ್ಯ ಕುಂಟುತ್ತಾ ಸಾಗಿದೆ. 'ತನ್ನ ಪಕ್ಷ, ಹಿಂಬಾಲಕ, ಮತ್ತು ತಮ್ಮಲ್ಲಿ ನಿಷ್ಠೆ ಹೊಂದಿರುವ ಕೇಲವೇ ಕೆಲವು ಮಂದಿಗೆ ಈ ಸೌಲಭ್ಯ ದೊರೆಕಿಸಿ ಕೊಡುತ್ತಿರುವುದರಿಂದ ಬಹಳಷ್ಟು ಜನರು ಸೌಲಭ್ಯವಂಚಿತರಾಗಿ ಕಾಲೋನಿಗಳಲ್ಲಿ ಕಂಡುಬರುತ್ತಾರೆ. ಇದೊಂದು ವಿಪರ್ಯಾಸವೇ ಸರಿ. ನಮ್ಮ ಚುನಾಯಿತ ಸದಸ್ಯರಿಗೆ ನಿಜವಾದ ಕಳಕಳಿಯ ಮುಖ ಅರ್ಥವಾಗುವುದಾದರೂ ಹೇಗೆ ಎಂಬುದೇ ಪ್ರಶ್ನೆಯಾಗಿದೆ. ಈ ನಿಟ್ಟಿನಲ್ಲಿ ಸ್ಥಳೀಯ ಅಧಿಕಾರಿ ವರ್ಗದವರೇ ನೇರವಾಗಿ ಕಾಲೋನಿ ಸಂದರ್ಶಿಸಿ ಅರ್ಹರಿಗೆ ಯೋಜನೆಯ ಸೌಲಭ್ಯ ಒದಗಿಸಿಕೊಡುವುದು ಮುಖ್ಯ.

೫. ಅಭಿವೃದ್ಧಿ ನಿಗಮದ ವಿಶೇಷ ಸೌಲಭ್ಯಗಳು

ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಹಾಗೂ ಇತರ ಬುಡಕಟ್ಟು ಸಮುದಾಯಗಳ ಹಿತರಕ್ಷಣೆಗಾಗಿ ಸರ್ಕಾರ ವಿಶೇಷವಾಗಿ ಪ್ರತ್ಯೇಕವಾದ ಅಭಿವೃದ್ಧಿ

ನಿಗಮವನ್ನು ಸ್ಥಾಪಿಸಿದೆ. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ನಿಗಮವೂ ತನ್ನ ಕಾರ್ಯಕಲಾಪ ನಡೆಸುತ್ತಿದ್ದರೂ ಮೈಸೂರು, ಚಾಮರಾಜನಗರ, ಕೊಡಗು, ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳು; ಯೋಜನಾ ಸಮನ್ವಯಾಧಿಕಾರಿಗಳಿಂದ ಕಾರ್ಯರೂಪಕ್ಕೆ ಬಂದಿವೆ. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳೇ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದಾರೆ. ೨೦೦೨-೦೩ನೇ ಸಾಲಿನಲ್ಲಿ ಇಲಾಖೆಯು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಾ ಬರುತ್ತಿದೆ. ಅಭಿವೃದ್ಧಿ ನಿಗಮದಿಂದ ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ದೊರೆತ್ತಿರುವ ಸೌಲಭ್ಯಗಳ ಪಟ್ಟಿಯನ್ನು ಇಲಾಖೆಯಿಂದಲೇ ಪಡೆದು ಸಮೀಕ್ಷೆ ಮಾಡಿ ಅಂಕಿ-ಅಂಶಗಳನ್ನು ಪ್ರಥಕ್ಕರಿಸಿ ಇಲ್ಲಿ ಕೊಡಲಾಗಿದೆ. ವಿಶೇಷ ಅಭಿವೃದ್ಧಿ ನಿಗಮದ ಕಲ್ಯಾಣಕಾರ್ಯಕ್ರಮಗಳು ಸಮುದಾಯಗಳ ಜನರಿಗೆ ಉದ್ಯೋಗ ಮತ್ತು ಆರ್ಥಿಕ ಸ್ಥಿತಿ ಸರಿದೂಗಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿದೆ ಎಂದು ನಿಗಮದ ನಿರ್ದೇಶಕರು ತಿಳಿಸುತ್ತಾರೆ. ಸಮುದಾಯಗಳ ಮಾನವ ಸಂಪನ್ಮೂಲದ ಸದುಪಯೋಗದಿಂದ ಅಭಿವೃದ್ಧಿ ಸಾಧ್ಯ ಅದಕ್ಕೆಂದೇ ಹೆಚ್ಚು ಒತ್ತು ನೀಡಲಾಗಿದೆ.

ಸ್ವಯಂ ಉದ್ಯೋಗದ ಭರವಸೆಯ ಕಾರ್ಯಕ್ರಮದಲ್ಲಿ ಜೇನುಕುರುಬರು ೧೩ ಜನರು ಹಾಗೂ ಕೊರಗರು ೫೬ ಜನರು ಸೌಲಭ್ಯ ಪಡೆದ್ದಿದಾರೆ. ಜೇನುಕುರುಬರು ಅರಣ್ಯ ಇಲಾಖೆಯಿಂದ ಬೆತ್ತ ಮತ್ತು ಬಿದಿರು ಪಡೆದು ವಸ್ತುಗಳನ್ನು ತಯಾರಿಸುವುದು ಮತ್ತು ಸಹಕಾರ ಸಂಘಕ್ಕೆ ಮಾರಾಟಮಾಡುವವರಾಗಿದ್ದಾರೆ. ಕೊರಗರಲ್ಲಿ ೫೬ ಮಂದಿ ಈ ಸೌಲಭ್ಯ ಪಡೆದಿದ್ದಾರೆ ಆದರೆ ಇತ್ತೀಚಿನ ದಿನಗಳಲ್ಲಿ ಬಿದರಿನ ಪೂರೈಕೆ ಸರ್ಕಾರದಿಂದ ಸಾಧ್ಯವಾಗದಿರುವುದರಿಂದ ಬೆತ್ತ ಮತ್ತು ಬಿದರಿನ ಕೆಲಸದಲ್ಲಿ ಆಸಕ್ತಿ ಹೆಚ್ಚು ತೋರುತ್ತಿಲ್ಲ. ಇನ್ನೊದೆಡೆ ಇದರಿಂದ ಗಳಿಸುತ್ತಿರುವ ಹಣರೂಪಿ ಆದಾಯ ಕಡಿಮೆ ಆಗಿದೆ. ೪ ಚಕ್ರದ ತಳ್ಳುವ ಗಾಡಿಯಿಂದ ರಸ್ತೆ ಬದಿಗಳಲ್ಲಿ ವ್ಯಾಪಾರ ಮತ್ತು ಬೀಡಿ ಸುತ್ತುವ ಸೌಲಭ್ಯವನ್ನು ಪಡೆದಿದ್ದಾರೆ. ನೀರಾವರಿಗಾಗಿ ಕೊಳವೆ ಬಾವಿ ಯೋಜನೆಯನ್ನು ಕಾಲೋನಿಗಳಲ್ಲಿ ವ್ಯವಸಾಯ ಮಾಡುವ ಸೌಲಭ್ಯಕ್ಕಾಗಿ ನಿಗಮ ಸಹಾಯ ಮಾಡಿದೆ. ಜೇನುಕುರುಬರ ೭ ಕಾಲೋನಿಗಳಲ್ಲಿ ನೀರಾವರಿಗಾಗಿ ಕೊಳವೆ ಬಾವಿಯನ್ನು ಕೊರೆಯಲಾಗಿದೆ. ಕೊರಗರ ೪ ಕಾಲೋನಿಗಳಲ್ಲಿ ಈ ಸೌಲಭ್ಯ ಲಭ್ಯವಿದೆ. ಬಹುತೇಕ ಕೊರಗರ ಕಾಲೋನಿಗಳಿಗೆ ಈ ಯೋಜನೆಯಿಂದ ಪ್ರಯೋಜನವಾಗಿಲ್ಲ. ಉಳಿದಂತೆ ಜೇನುಕುರುಬರಲ್ಲಿ ಹೆಚ್ಚಿನ ಲಾಭ ತಂದಿಲ್ಲ. ಪ್ರತಿಯೊಂದು ಜೇನುಕುರುಬ ಕಾಲೋನಿಯ ಜನರು ತಮ್ಮ ವ್ಯವಸಾಯ ಜೀವನಕ್ಕೆ ಆಧಾರವೆಂಬಂತೆ ಕೊಳವೆಬಾವಿಯನ್ನು ಕೇಳುವವರೇ ಹೆಚ್ಚು. ಇದು ಈ ಯೋಜನೆಯ ಮಹತ್ವವಾಗಿದೆ. ಸಾಮಾನ್ಯವಾಗಿ ಎಲ್ಲಿ ಭೂಮಿಯನ್ನು ನೀಡಿಲ್ಲವೋ ಅಲ್ಲಿ ಕೊಳವೆ ಬಾವಿಯ ಅವಶ್ಯಕತೆ ಇಲ್ಲ. ಭೂಮಿ ಎಲ್ಲಿ ಕೊಡಲು ಸಾಧ್ಯವೋ ಅಲ್ಲಿ ಈ ಸೌಲಭ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸಬೇಕಿದೆ. ಹೀಗಾಗಿ ಕೊಳವೆ ಬಾವಿಯನ್ನು ಬಳಸುತ್ತಿರುವ ಸನ್ನಿವೇಶವೇ ಸಮುದಯಗಳಲ್ಲಿ ಹೆಚ್ಚಿನ ಮಟ್ಟಿಗೆ ಕಾಣಬರುವುದಿಲ್ಲ.

ವಿವಿಧ ತರಬೇತಿ ಕಾರ್ಯಕ್ರಮಗಳಿಂದ ಜನರು ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಹಾಗೂ ಅವರುಗಳ ಜೀವನೋಪಾಯದ ಪರ್ಯಾಯ ವ್ಯವಸ್ಥೆಗೆ ಯೋಜನೆಗಳನ್ನು ರೂಪಿಸಿದ ಕರ್ತರು, ಆರ್ಥಿಕ ಭದ್ರತೆಗೆ ವಿವಿಧ ಮೂಲಗಳಿಂದ ಸಾಲವನ್ನು ಒದಗಿಸುತ್ತಿದ್ದಾರೆ. ಜೇನುಕುರುಬರಲ್ಲಿ ಸಾಲ ಪಡೆದ ೧೦ ಕುಟುಂಬಗಳು ಸಾಲವನ್ನು ವ್ಯವಸಾಯ ಮಾಡುವುದಕ್ಕೆ ಉಪಯೋಗಿಸಿದ್ದಾರೆ. ಕೊರಗರ ೪೩ ಕುಟುಂಬಗಳು ಸಾಲಪಡೆದವರಾಗಿದ್ದಾರೆ. ಅವರುಗಳಲ್ಲಿ ಮಹಿಳೆಯರ ಪಾಲು ಅರ್ಧದಷ್ಟು. ಮಹಿಳೆಯರು ವ್ಯಾಪಾರ, ಬುಟ್ಟಿ ಹೆಣೆಯುವಿಕೆ, ಹೊಲಿಗೆ ಕೆಲಸ ಮಾಡುವವರಾಗಿದ್ದಾರೆ. ಪುರುಷರು ವಾಹನ, ವ್ಯಾಪಾರದಂತಹ ಕಾರ್ಯದಲ್ಲಿ ತೊಡಗಿಸಿಕೊಂಡಂತಹ ಕೆಲವರು ಕಾಣಬರುತ್ತಾರೆ. ಆಟೋರಿಕ್ಷಾ ಸಾಲದ ಯೋಜನೆಯಲ್ಲಿ ಜೇನುಕುರುಬರಲ್ಲಿ ೪ ಜನ ಕೊರಗರಲ್ಲಿ ೨೩ ಜನ ಸೌಲಭ್ಯವನ್ನು ಪಡೆದಿದ್ದಾರೆ. ಆಟೋರಿಕ್ಷಾ ಸಾಲ ಸೌಲಭ್ಯವನ್ನು ಕೊರಗರೆ ಹೆಚ್ಚು ಪಡೆದವರಾಗಿದ್ದಾರೆ. ನಗರದಲ್ಲಿ ಆಟೋರಿಕ್ಷಾ ನಡೆಸುವುದು ಸ್ವಯಂ ಉದ್ಯೋಗವಾಗಿ ಬೆಳೆದು ಬಂದಿದೆ. ಜೇನುಕುರುಬರಲ್ಲಿ ಆಟೋರಿಕ್ಷಾ ತರಬೇತಿ ಮತ್ತು ಆಟೋರಿಕ್ಷಾ ವಾಹನ ಸೌಲಭ್ಯ ಹೆಚ್ಚಿನ ಪ್ರಭಾವ ಜನರಲ್ಲಿ ಬೀರಿಲ್ಲ.

ಭೂ ಒಡೆತನದ ವಿಶೇಷ ಕಾರ್ಯಕ್ರಮದಡಿಯಲ್ಲಿ ಸರ್ಕಾರ ಲಭ್ಯವಿರುವ ಸ್ಥಳದಲ್ಲಿ ಕಾಲೋನಿಯ ಕುಟುಂಬಗಳಿಗೆ ಭೂಮಿಯನ್ನು ಹಂಚಿದೆ ಆದರೆ ಹಂಚಿಕೆಯ ಕುಟುಂಬಗಳು ಮಾತ್ರ ಬೆರಳೆಣಿಕೆಯಷ್ಟು. ಅಧ್ಯಾಯ ೨ರಲ್ಲಿ ಪರಿಸರದ ಹಿನ್ನೆಲೆಯಲ್ಲಿ ತಿಳಿಸಲಾದಂತೆ ಸಮುದಾಯಗಳು ನೆಲೆನಿಂತ ಪರಿಸರದಲ್ಲಿ ಸರ್ಕಾರದ ಸಾಮ್ಯದಲ್ಲಿ ಭೂಮಿ ಕಂಡುಬರುತ್ತದೆ. ಭೂಮಿಯನ್ನು ಬಳಸದಿರುವ ಅಂಕಿ ಅಂಶಗಳು ನೀಡಲಾಗಿದೆ. ಆದರೆ ಸರ್ಕಾರದ ಯೋಜನೆಯಲ್ಲಿ ಆ ಭೂಮಿಯನ್ನು ವ್ಯವಸಾಯಯೋಗ್ಯವಾಗಿ ಸಮುದಾಯಗಳಿಗೆ ಹಂಚಿಕೆ ಮಾಡಬಹುದಾಗಿದೆ. ಇದು ನಿಜವಾಗಿಯೂ ಸರ್ಕಾರಕ್ಕೆ ಸಮುದಾಯಗಳ ಅಭಿವೃದ್ಧಿಯ ನಿಜವಾದ ಕಾಳಜಿ ಇದ್ದಲ್ಲಿ ಮಾತ್ರ ಸಾಧ್ಯ. ಹೀಗಾಗಿ ಈ ಯೋಜನೆಯಲ್ಲಿ ಜೇನುಕುರುಬರ ೨೯ ಕುಟುಂಬಗಳು ಹಾಗೂ ಕೊರಗರ ೧೯ ಕುಟುಂಬಗಳು ಸೌಲಭ್ಯ ಪಡೆದಿವೆ. ಭೂಮಿ ಪಡೆಯುವಲ್ಲಿ ಕೊರಗರು ತೀರಾ ಹಿಂದುಳಿದವರಾಗಿದ್ದಾರೆ. ನಗರ ಪ್ರದೇಶದಲ್ಲಿ ವಾಸವಾಗಿರುವವರಿಗೆ ಭೂಮಿ ಒದಗಿಸುವುದು ಸುಲಭದ ಮಾತಲ್ಲ. ಅದೇ ತೆರನಾಗಿ ಸಂಪೂರ್ಣ ಗ್ರಾಮ. ಅರಣ್ಯವಾಸಿಗಳಾದ ಜೇನುಕುರುಬರಿಗೂ ಈ ಸೌಲಭ್ಯ ಹೆಚ್ಚಿನ ಭರವಸೆ ಮೂಡಿಸದಿರುವುದು ಕಂಡುಬರುತ್ತದೆ. ಗುಂಪು ವಿಮೆ ಒಂದು ಯಶಸ್ವಿ ಕಾರ್ಯಕ್ರಮವಾಗಿದೆ. ಇತರೆಲ್ಲ ಸಮುದಾಯಗಳಲ್ಲಿ ಸ್ವಲ್ಪ ಮಟ್ಟಿಗೆ ಬುಡಕಟ್ಟು ಜನರಲ್ಲಿ ಈ ಯೋಜನೆಯು ಯಶಸ್ಸುಕಂಡಿರುವಾಗ, ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಗುಂಪು ವಿಮೆ ಪಾತ್ರ ಅಷ್ಟಾಗಿ ಕಂಡು ಬರುವುದಿಲ್ಲ. ಯೋಜನೆಯ ಮಹತ್ವ ಅಷ್ಟಾಗಿ ಜನರು ಅರಿತಿಲ್ಲದವರಾಗಿದ್ದಾರೆ. ಕೆಲವು ಸ್ಥಳಗಳ ಒಂದು ಅಥವಾ ಎರಡು ಕಾಲೋನಿಗಳಲ್ಲಿ ಮಾತ್ರ ಗುಂಪು ವಿಮೆಯ ಬಗ್ಗೆ ತಿಳುವಳಿಕೆ ಹೊಂದಿದವರುಗಳಾಗಿದ್ದಾರೆ. ಜೇನುಕುರುಬರ ೧

ಕಾಲೋನಿಯಲ್ಲಿ ಕೊರಗರ ೫ ಕಾಲೋನಿಗಳಲ್ಲಿನ ಸಂಘಟನೆಯು ಗುಂಪು ವಿಮೆಮಾಡಿರುವುದು ಕಂಡುಬರುತ್ತದೆ.

ಕೋಷ್ಟಕ ೪.೬ : ವಿಶೇಷ ಅಭಿವೃದ್ಧಿ ನಿಗಮದ ಸೌಲಭ್ಯಗಳು

ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ಲಭ್ಯತೆ ಮತ್ತು ಅನುಷ್ಠಾನದ ಕಾರ್ಯಕ್ರಮಗಳು ವಿಶೇಷ ಅಭಿವೃದ್ಧಿ ನಿಗಮದ ಅಡಿಯಲ್ಲಿನ ಸೌಲಭ್ಯಗಳು																
		ಜೇನುಕುರುಬರು							ಕೊರಗರು							
		ಹೆಚ್.ಡಿ. ಕೋಟೆ	ಪಿರಿಯಾ ಪಟ್ಟಣ	ಹುಣಸೂರು	ಗುಂಡ್ಲುಪೇಟೆ	ಸೋಮವಾರ ಪೇಟೆ	ವಿರಾಜಪೇಟೆ	ನಂಜನಗೂಡು	ಕುಂದಾಪುರ	ಉಡುಪಿ	ಕಾರ್ಕಳ	ಮಂಗಳೂರು	ಬೆಳ್ತಂಗಡಿ	ಬಂಟ್ವಾಳ	ಸುಳ್ಯ	ಪುತ್ತೂರು
೧	ಅಭಿವೃದ್ಧಿ ನಿಗಮದಿಂದ ಆಗಿರುವ ಸೌಲಭ್ಯಗಳು															
	ಅ) ಸ್ವಯಂ ಉದ್ಯೋಗ	೫	೫	೨	೧	-	-	-	೧೪	೧೧	-	೩೦	೨	-	-	-
	ಆ) ನೀರಾವರಿ ಕೊಳವೆ ಬಾವಿ	೨	೨	೧	೧	-	-	೧	-	-	೧	೨	-	-	-	೧
	ಇ) ಸಾಲ ಮತ್ತು ಸಹಾಯಧನ	೩	೯	೧	೧	೧	೧	೪	೧೦	೧೨	-	೧೪	೨	೩	-	೨
	ಈ) ಆಟೋರಿಕ್ಷಾ	೧	೨	೧	-	-	-	-	೫	೫	-	೧೩	-	-	-	-
	ಉ) ಭೂ ಹಂಚಿಕೆ	೧೧	೬	೫	೨	-	-	೫	-	-	೮	-	೬	೩	೨	-
	ಊ) ನಿರುದ್ಯೋಗ ತರಬೇತಿ	೩	೧	೨	೧	-	-	೪	೧೬	-	-	೨೧	೩	೫	೫	-
೨	ಗುಂಪು ವಿಮ	೧	-	-	-	-	-	-	-	-	-	೨	೩	-	-	-
೩	ಗ್ರಾಮೀಣ ಉದ್ಯೋಗ	೧೧	೫	೫	-	-	-	-	-	-	-	-	೨	-	-	-
೪	ಭೂಸಾರ ಸಂರಕ್ಷಣೆ	-	-	-	-	-	-	-	-	-	-	-	೧	-	-	೧
೫	ಕುಡಿಯುವ ನೀರಿನ ಪೂರೈಕೆ	*	*	*	*	*	*	-	*	*	*	*	*	-	-	-
೬	ಕೊಳವೆ ಬಾವಿಗಳು	೧	೧	-	೧	-	-	೧	-	-	೧	-	೧	-	-	೧

ಗ್ರಾಮೀಣ ಉದ್ಯೋಗವನ್ನು ಸರ್ಕಾರದ ವಿವಿಧ ಯೋಜನೆಗಳಲ್ಲಿ ಸಮುದಾಯಗಳ ಜನರಿಗೆ ಕಲ್ಪಿಸಲಾಗುತ್ತಿದೆ. ರಸ್ತೆ ನಿರ್ಮಾಣ, ಸೇತುವೆ ಕಾಮಗಾರಿ, ಗೃಹ ನಿರ್ಮಾಣದಂತಹ ಉದ್ಯೋಗದಿಂದ ತಾತ್ಕಾಲಿಕ ಉದ್ಯೋಗದ ಆಸರೆ ಒದಗಿಸಲಾಗುತ್ತಿದೆ. ಆದರೆ ವಸ್ತುಶಃ ಅದರ ಪ್ರಮಾಣ ಅಂಕಿ ಅಂಶಗಳಿಂದ ನಿರ್ಧರಿಸುವುದು ಕಷ್ಟ ಸಾಧ್ಯ. ಅದರಿಂದ ಉದ್ಯೋಗದಲ್ಲಿ ತೊಡಗಿಸಿಕೊಂಡ ಕುಟುಂಬಗಳನ್ನು ಮಾತ್ರ ನೀಡಲಾಗಿದೆ. ಜೇನುಕುರುಬ ಸಮುದಾಯದಲ್ಲಿ ೨೧ ಕುಟುಂಬಗಳು ಮತ್ತು ಕೊರಗರ ೨ ಕುಟುಂಬಗಳು ಮಾತ್ರ ಸೌಲಭ್ಯವನ್ನು ಸ್ವಯಂ ಸಂಸ್ಥೆಯ ಮೂಲಕ ಪಡೆಯುತ್ತಿದ್ದಾರೆ. ಭೂಸಾರ ಸಂರಕ್ಷಣೆ ಕೊರಗರ ೧ ಕುಟುಂಬದ ಹೊರತಾಗಿ ಮತ್ಯಾರಿಗೂ ದೊರೆತಿಲ್ಲ. ಭೂ ಸಾರ ಸಂರಕ್ಷಣೆ ಜಮೀನು / ಭೂ ಹಿಡುವಳಿ ಹೊಂದಿರುವ ಕುಟುಂಬಗಳಿಗೆ ಮಾತ್ರವೇ ಅನ್ವಯವಾಗುವುದು. ಭೂಮಿ ಹೊಂದಿರುವವರ ಭೂಮಿಯಲ್ಲಿ ಸಾರ ಅಭಿವೃದ್ಧಿ ಪಡಿಸುವಲ್ಲಿ ಬಂಡುಗಳನ್ನು ಹಾಕುವ, ಮಣ್ಣಿನ ಗುಣಮಟ್ಟ ವೃದ್ಧಿಸುವ ಕಾರ್ಯಕ್ರಮ ಹಾಕಿದ್ದರೂ, ಈ ಕಾರ್ಯಕ್ರಮದ ಯಶಸ್ಸು

ಕಾಣಬರುವುದಿಲ್ಲ. ಬಹುತೇಕ ಕುಟುಂಬಗಳಿಗೆ ಯೋಜನೆ ಅನ್ವಯವಾಗುವುದೇ ಇಲ್ಲ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನೆರವಿನ ೧ ಕುಟುಂಬ ನೆರವು ಪಡೆದ ಬಗ್ಗೆ ಮಾತ್ರ ತಿಳಿದುಬರುತ್ತದೆ.

ಕುಡಿಯುವ ನೀರು ಪೂರೈಕೆ ಮೂಲಭೂತ ಅವಶ್ಯಕ ಎನ್ನುವುದು ಸರ್ವಸಮ್ಮತವಾದದ್ದು. ಸಕಾಲಕ್ಕೆ ನೀರು ಜನರಿಗೆ ಪೂರೈಕೆ ಮಾಡಲು ಕಾಲೋನಿಗಳಲ್ಲಿ ಕೆಲವು ಕೊಳವೆಭಾವಿಗಳನ್ನ ನಿರ್ಮಿಸಲಾಗಿದೆ. ಈ ಬಗ್ಗೆ ಅಧ್ಯಾಯ ೨ ರಲ್ಲಿ ಹೆಚ್ಚಿನಮಾಹಿತಿ ನೀಡಲಾಗಿದೆ. ವಿಶೇಷ ಅಭಿವೃದ್ಧಿ ನಿಗಮದ ಕಾರ್ಯಕ್ರಮದಿಂದ ಸೌಲಭ್ಯ ಪಡೆದಿರುವುದು ತೀರಾ ಕಡಿಮೆ. ಜೇನುಕುರುಬರ ಕಾಲೋನಿಗಳಲ್ಲಿ ಜಿಲ್ಲಾ ಪಂಚಾಯತ್ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದರೆ, ಕೊರಗರಲ್ಲಿ ಮಹಾನಗರ ಪಾಲಿಕೆ, ಪುರಸಭೆ ಮತ್ತು ನಗರಸಭೆ ಮುಂಚೂಣಿಯಲ್ಲಿದೆ. ಹೀಗಾಗಿ ಈ ಯೋಜನೆ ಅಷ್ಟಾಗಿ ಎರಡು ಸಮುದಾಯಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸಿಲ್ಲವೆನ್ನಬಹುದು.

ಅಡಿ ಟಿಪ್ಪಣಿಗಳು

೧) ವಿ. ಷಣ್ಮುಂಗ : ಬಡತನ ಮತ್ತು ಪರಿಹಾರ : ಜಸ್ಟಿಸ್ ಪಬ್ಲಿಕೇಶನ್ ೨೦೦೫ ಮೈಸೂರು – ಪುಟ ೧೪೭

೨) ವಿ. ಷಣ್ಮುಂಗ : ಬಡತನ ಮತ್ತು ಪರಿಹಾರ : ಜಸ್ಟಿಸ್ ಪಬ್ಲಿಕೇಶನ್ ೨೦೦೫ ಮೈಸೂರು – ಪುಟ ೧೧

೩) ಭಾರತ ಸರ್ಕಾರದ ಪ್ರಕಟಣೆ : ಜನಗಣತಿ ವರದಿ ೨೦೦೧ ಪುಟ ೦೭

೪) ಟಿ.ಆರ್. ಚಂದ್ರಶೇಖರ್ : ಅಭಿವೃದ್ಧಿ ಮಿಮಾಂಸೆ : ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ – ಪುಟ ೬

೫) ಟಿ.ಆರ್. ಚಂದ್ರಶೇಖರ್ : ಅಮಾತ್ಯ ಸೇನ್‌ರ ಅಭಿವೃದ್ಧಿ ಕಥನಗಳು ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ – ಪುಟ ೧೦

೬) ಪ್ರಜಾವಾಣಿ ದಿನಪತ್ರಿಕೆ ವರದಿ ದಿನಾಂಕ ೦೭.೧೧.೨೦೦೪

೭) ಕರ್ನಾಟಕ ರಾಜ್ಯ ಪರಿಶಿಷ್ಟ ವರ್ಗದ ಜನಗಣತಿ ವರದಿ : ಕರ್ನಾಟಕ ಸರ್ಕಾರ – ಪುಟ ೧೩

೮) ಯೋಜನಾ ಇಲಾಖೆಯ ಮಾರ್ಗಸೂಚಿ : ಕರ್ನಾಟಕ ಸರ್ಕಾರ – ಪುಟ ೬೧

೯) Tribal culture of India – page 449

೧೦) ಪರಿಶಿಷ್ಟ ವರ್ಗಗಳ ಕಲ್ಯಾಣನಿರ್ದೇಶನಾಲಯ, ಕರ್ನಾಟಕ ಸರ್ಕಾರ ಯೋಜನೆಗಳ ಮಾರ್ಗಸೂಚಿ – ೧

೧೧) ಪರಿಶಿಷ್ಟ ವರ್ಗಗಳ ಕಲ್ಯಾಣನಿರ್ದೇಶನಾಲಯ, ಕರ್ನಾಟಕ ಸರ್ಕಾರ ಯೋಜನೆಗಳ ಮಾರ್ಗಸೂಚಿ – ೨

೧೨) ಸಮಾಜಕಲ್ಯಾಣ ಮಾರ್ಗಸೂಚಿ ಮತ್ತು ಯೋಜನಾ ಪುಸ್ತಕದ ಮಾರ್ಗದರ್ಶಿ

೧೩) ಸಮಾಜಕಲ್ಯಾಣ ಮಾರ್ಗಸೂಚಿ ಮತ್ತು ಯೋಜನಾ ಪುಸ್ತಕದ ಮಾರ್ಗದರ್ಶಿ – ೪

ಅಧ್ಯಾಯ: ೫

ಪ್ರಸ್ತುತ ಸಮುದಾಯಗಳ ಜೀವನಾವಸ್ಥೆ: ಒಂದು ಅವಲೋಕನ

೧. ಸಮುದಾಯಗಳ ಸಾಮಾಜಿಕ ವ್ಯವಸ್ಥೆಯ ಕಿರುನೋಟ

೨. ಸಮುದಾಯಗಳಲ್ಲಿನ ಸಾಮಾಜಿಕ ನ್ಯಾಯದ ಸಮೀಕ್ಷೆ

೩. ಸಮುದಾಯಗಳಲ್ಲಿನ ಆರ್ಥಿಕ ಕ್ಷೇತ್ರದ ಅವಲೋಕನ

೪. ಸಮುದಾಯಗಳಲ್ಲಿನ ರಾಜ್ಯಾಧಿಕಾರದ ಪಾತ್ರ.

ಪ್ರಕೃತಿಯ ಕೂಸಾದ ಮೂಲನಿವಾಸಿ ಬುಡಕಟ್ಟುಗಳು ತಮಗೆ ಅರಿ ವಿಲ್ಲದೆ ಕ್ರಿಯಾತ್ಮಕ ಮತ್ತು ಪ್ರಗತಿದಾಯಕವಾಗಿ ಪ್ರಕೃತಿಯ ಜೊತೆಯಲ್ಲಿಯೇ ಬದಲಾವಣೆಗೆ ಒಳಗಾಗುತ್ತಿರುವುದು ಸಾಮಾನ್ಯವಾದುದಾಗಿದೆ. ಈ ಬದಲಾವಣೆಯನ್ನು ಸಮಸ್ಯೆಗಳಿಗೆ ಪರಿಹಾರಕವೆಂದೂ ಕರೆಯಬಹುದು. "ಸಾವಿರಾರು ವರ್ಷಗಳ ಹಿಂದೆ ಗ್ರೀಕ್ ತತ್ವಜ್ಞಾನಿಗಳು ಬದಲಾವಣೆಯ ಮುಂದೆ ಯಾವುದು ಶಾಶ್ವತವಲ್ಲ" ಎಂದು ಹೇಳಿರುವುದನ್ನು ತಿಳಿದಾಗ ಬದಲಾವಣೆಯು ಕಾಲ ಮತ್ತು ವ್ಯಕ್ತಿಯನ್ನು ಅವಲಂಬಿಸಿರುತ್ತದೆ ಎಂಬುದು ಅರ್ಥಗರ್ಭಿತವಾಗುತ್ತದೆ. ಬದಲಾವಣೆಗೆ ಪ್ರಕೃತಿಯು ಪಾತ್ರಧಾರವಾಗಿ; ಹೊಸ ಕ್ರಿಯೆಗಳು– ಊಹೆಗಳೊಂದಿಗಿನ ಆಲೋಚನಾಕ್ರಮ, ಆಕಾಂಕ್ಷೆಗಳು, ಭಾವನೆಗಳು ಅನಂತವಾದವುಗಳಾಗಿ ಪರಿಗಣಿಸಬಹುದು.

ಸಾಮಾಜಿಕ ವ್ಯವಸ್ಥೆಯಲ್ಲಿನ ಪ್ರಾಕೃತಿಕ ಪರಿಸರದಲ್ಲಿ ಬದಲಾವಣೆಯು ಸಹಜವಾದದ್ದು. ಪ್ರಕೃತಿಯ ಮಡಿಲಲ್ಲಿರುವ ಜೀವಜಾಲವು ಇದರಿಂದ ಮುಕ್ತವಲ್ಲ. ಪ್ರಕೃತಿಯಲ್ಲಿ ಇಂದು ಏನಿದೆಯೋ ಅದು ನಾಳೆಗೆ ಬದಲಾವಣೆಗೆ ಒಳಗಾಗಬಹುದು. ಮನುಷ್ಯರಲ್ಲಿರುವಂತೆ ದೇಹ, ಗಾತ್ರ, ಆಕಾರ ಮತ್ತು ಬಣ್ಣದಲ್ಲಿ ವಿಭಿನ್ನ ರೀತಿಯ ಬದಲಾವಣೆಗಳು, ಹುಟ್ಟಿನಿಂದ ಸಾವಿನವರೆಗೂ ಆಗುತ್ತಲಿರುತ್ತದೆ. ಸಾಮಾನ್ಯವಾಗಿ ಬದಲಾವಣೆಯ ಕುರಿತು ಚಾಲ್ತಿಯಲ್ಲಿರುವಂತೆ ಸಮಾಜದ ವ್ಯವಸ್ಥೆಯಲ್ಲಿ ಒಂದು ಸಮುದಾಯದ ಪ್ರಗತಿಯ ಬದಲಾವಣೆಗೆ ಸಾಮಾಜಿಕ ಬದಲಾವಣೆ ಎನ್ನಬಹುದು. "ಅಂಗಿಕೃತವಾದ ಜೀವನಕ್ರಮದಲ್ಲಿ ಭೌಗೋಳಿಕ ಪರಿಸ್ಥಿತಿಗಳಿಂದ ಸಾಂಸ್ಕೃತಿಕ ಉಪಕರಣಗಳಿಂದ, ಜನಸಂಖ್ಯೆಯ ರಚನೆಯಿಂದ ಇಲ್ಲವೇ ಆದರ್ಶಗಳಿಂದ ಮತ್ತು ಮಾನವ ಸಮೂಹದಲ್ಲಿ ಆದ ಪ್ರಸರಣವೇ ಸಾಮಾಜಿಕ ಬದಲಾವಣೆ ಎನ್ನಬಹುದು".[1] ಇಂತಹಕ್ರಮ ಸರ್ವ ಸಮ್ಮತವಾದದ್ದು. ನಾವುಗಳು ಜೀವಿಸುವ ಪರಿಸರ, ಪ್ರಕೃತಿ ಪರಿವರ್ತನೆಯ ಒಡಲು ಯಾವುದು ಸ್ಥಿರವಲ್ಲ, ಜಡವಲ್ಲ. ಪ್ರಕೃತಿಯ ಪರಿಸರದಲ್ಲಿರುವ ಎಲ್ಲಾ ಅಂಶಗಳಲ್ಲಿ ಕೋಟ್ಯಾಂತರ ಬದಲಾವಣೆಗಳ ಹಗೇವು ಕಾಣಬಹುದು.

ಬದಲಾವಣೆ ಈ ತನಕ ಜಗತ್ತಿನಲ್ಲಿ ಅದೆಷ್ಟೋ ವಿಚಾರವಾಗಿ ಕಂಪಿಸಿದ ವಿಚಾರಗಳು ಸ್ಥಿತ್ಯಂತರವಾಗಿವೆ. ಬದಲಾವಣೆಗೆ ತಕ್ಕನಾಗಿ ಜೀವಿಸಲು ಕಲಿಯದ ಜೀವಿಗಳು ಅವಸಾನಗೊಂಡಿರುವ ಸಂಗತಿ ಯಾರಿಗೆ ಗೊತ್ತಿಲ್ಲ. ಬದಲಾವಣೆಯನ್ನು ಅನೇಕ ರೀತಿಯಲ್ಲಿ ಗುರುತಿಸಬಹುದು. ಸಾಮಾಜಿಕ, ಆರ್ಥಿಕ, ಭೌದ್ಧಿಕ, ಅಧ್ಯಾತ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗು ಸಂವೇದಾನಾತ್ಮಕ ಮುಂತಾದವುಗಳಲ್ಲಿ ಕಾಲ ಬದಲಾದಂತೆ ಕಾಣಬಹುದು.

ಅರಣ್ಯ ಸಂಸ್ಕೃತಿಯ ಮೂಲ ಪರಿಸರದಲ್ಲಿದ್ದ ಮೂಲನಿವಾಸಿ ಬುಡಕಟ್ಟುಗಳಲ್ಲಿ ಇಂತಹ ಬದಲಾವಣೆ ಕ್ರಮವು ಹೊರತೆನಲ್ಲ ಎನ್ನಬಹುದು. ಸಮುದಾಯಗಳು ಮೂಲನೆಲೆಯನ್ನು ಬಿಟ್ಟು, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಆರ್ಥಿಕವಾಗಿ ಬದಲಾಗುತ್ತಿವೆ. ಇದು ಅಗತ್ಯವೂ ಹೌದು. ಆದರೆ ಹೆಚ್ಚು ಪ್ರಗತಿಯ ಪಥದಲ್ಲಿದ್ದಾರೆ ಎನ್ನುವುದು ತುಸು ಕಷ್ಟಸಾಧ್ಯ. ಸಾವಿರಾರು ವರ್ಷಗಳ ಇತಿಹಾಸವುಳ್ಳ ಮಾನವ ಸಮುದಾಯಗಳ ಇತಿಹಾಸದಲ್ಲಿ ತನ್ನ ಪಳವಳಿಕೆಗಳನ್ನು ನಾಡಿನ ಸಾಮಾಜಿಕ ವ್ಯವಸ್ಥೆಯ ಅವಿನಾಭಾವವಾಗಿ ಉಳಿಸಿಕೊಂಡು ಬಂದ ಸಮುದಾಯವೆಂತಲೇ ಗುರುತಿಸಬಹುದು. ಚರಿತ್ರೆಯ ವಿವಿಧ ಪರ್ವಗಳಾದ ಪ್ರಾಚೀನ, ಆಧುನಿಕ, ಎಲ್ಲಾ ಕಾಲ ಘಟ್ಟಗಳಲ್ಲಿ, ಬದಲಾವಣೆ ಬೇರೆ ಬೇರೆ ಆಕೃತಿ ಪಡೆದಿದೆ. ಅತ್ಯಂತ ಹಿಂದುಳಿದ ಪರಿಸರಕ್ರಮದಲ್ಲಿಯೂ ವೈಭೋಗದ ಜೀವನಾವ್ಯಸ್ಥೆ ರೂಢಿಸಿಕೊಂಡಿದ್ದ ಮುಲನಿವಾಸಿ ಬುಡಕಟ್ಟುಗಳು ನಾಗರೀಕತೆ ಬೆಳೆದು, ಕಾಯಿದೆ ಕಾನೂನುಗಳು ರೂಪುಗೊಂಡು ಆದ ಬದಲಾವಣೆ ಆಧುನಿಕತೆಯ ಪರಿಸರಕ್ಕೆ ವರ್ಗಾವಣೆಗೊಂಡಿದ್ದು ಒಂದು ಬದಲಾವಣೆ. ನಂತರದ ಬದಲಾವಣೆ ಸುತ್ತಮುತ್ತಲಿನ ಕಾಡು, ಜನರ ಕಣ್ಣೆದುರೇ ನಾಶವಾಗುತ್ತ ಬೆಳೆದು ಬರುತ್ತಿದಂತೆ, ಗ್ರಾಮೀಣರ ನಡೆ, ನುಡಿ, ಆಚಾರ, ವಿಚಾರಗಳು ತಮಗಿಂತ ಸುಧಾರಿಸಿವೆ ಎಂಬಂತೆ ಕಂಡು ಬಂದ ಕಲ್ಪನೆಯಲ್ಲಿ ಆ ಪ್ರಭಾವಕ್ಕೆ ಒಳಗಾದರು. ಈ ಬಗೆಯ ಬದಲಾವಣೆಯ ಸಂಘರ್ಷದಲ್ಲಾದ ಕೆಲವು ನಂಭಿಕೆ, ವಿಚಾರ, ನಡುವಳಿಕೆಗಳನ್ನು ರಕ್ಷಿಸಿ, ಅಂಟಿಕೊಂಡು ಬರುತ್ತಿರುವ ಒಂದು ಸಮುದಾಯವಾದರೇ, ಮತ್ತೊಂದು ಸಮುದಾಯ ಅಸ್ಪೃಶ್ಯತೆಯ ಕರಿನೆರಳಿನ ಜಾತಿ ಶ್ರೇಣಿಕರಣದ ಆಸು ಪಾಸು ನೆಲೆ ನಿಲ್ಲುವಂತೆ ಬದಲಾವಣೆಯಾಗಿದೆ. ಆದರೂ ಅವರ ಮೂಲ ಜೀವನಾರ್ಥ ಆಚರಣೆಗಳಲ್ಲಿ ಅಷ್ಟೇನೂ ಬದಲಾವಣೆಗಳು ಗುರುತಿಸುವುದು ಕಷ್ಟಸಾಧ್ಯ. ಅದೆಷ್ಟೋ ವಿಚಾರಗಳು, ಅರ್ಥಹೀನ ಕೊಡುಗೆಗಳು, ವಿರುದ್ಧಾತ್ಮಕ ವಿಚಾರದ ನಡುವೆ, ಗದ್ದಲದಲ್ಲಿ ಸಿಲುಕಿಸಿದರೂ, ಅಲ್ಪಜನರಾದ ಮೂಲನಿವಾಸಿ ಬುಡಕಟ್ಟುಗಳಲ್ಲಿ ಸಮಗ್ರತೆ ಬದಲಿಗೆ, ಅಸಮಗ್ರತೆ ಸೃಷ್ಟಿಸಿ ನಾನಾ ತರ್ಲೆಗಳ ಆದ್ವಾನ ಸೃಷ್ಟಿಸಿರುವ ಚಿತ್ರಣದ ಬದಲಾವಣೆ ಕಂಡು ಬರುತ್ತದೆ.

ಸಮುದಾಯಗಳು ೨೧ನೇ ಶತಮಾನದ ಸಂದಿಗ್ಧ ಪರಿಸ್ಥಿತಿಯಲ್ಲಿದ್ದು ಕಣ್ಮರೆಯಾಗುವ ಕಾಲ ಬಂದಿದೆ ಎಂಬ ಅಭಿಪ್ರಾಯ ಅರ್ಥಶಾಸ್ತ್ರಜ್ಞರು ಸಮಾಜಶಾಸ್ತ್ರಜ್ಞರು ಮತ್ತು ಮಾನವಶಾಸ್ತ್ರಜ್ಞರ ಮನಸ್ಸಿಗೆ ಬರುತ್ತಿದೆ. ಪೂರಕವೆಂಬಂತೆ ಎರಡು ಕಾರಣಗಳನ್ನು ನೀಡಬಹುದಾಗಿದೆ. ಮೊದಲನೆಯದಾಗಿ ಸಮುದಾಯಗಳು ನಾಗರೀಕರ ಪ್ರಭಾವದಿಂದ ನಮ್ಮ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಉಳಿಸಿಕೊಳ್ಳಲಾರರು. ಎರಡನೆಯದಾಗಿ ನಾಗರೀಕ ಜಗತ್ತಿನ ಸಂಪರ್ಕದಿಂದ ಅವರು ತಮ್ಮ ಪದ್ಧತಿ, ಆಚಾರ, ವಿಚಾರ ನಂಬಿಕೆಗಳನ್ನು ಬಿಟ್ಟು ನಾಗರೀಕರನ್ನು ಅನುಸರಿಸತೊಡಗಿದ್ದಾರೆ. ಈ ಎರಡು ಕಾರಣಗಳಿಂದ ಸಮುದಾಯಗಳ ಮೂಲ ಸಂಸ್ಕೃತಿ ಬದಲಾಗುವ ಸಂಭವಗಳನ್ನು ತಳ್ಳಿ ಹಾಕುವಂತಿಲ್ಲ. ನಿದರ್ಶನವೆಂಬಂತೆ ಕಾಲೋನಿಗಳಲ್ಲಿ ಎಲ್ಲವೂ ರಾಜಕೀಯ ಮಯವಾಗಿರುವ ವಾತಾವರಣದ ನಡುವೆ ಜಗತ್ತು

ಪೂರ್ಣ ಕೆಟ್ಟು ಹೋಗಿದೆ ಎಂದು ಹಿರಿಯರು ಗೊಣಗಾಡುತ್ತಿದ್ದಾರೆ, ಆದಕ್ಕೆ ವಿರುದ್ಧವೆಂಬಂತೆ ಬುಡಕಟ್ಟು ಯುವ ಜನರೇ ಈ ಜಗತ್ತು ಇರಬೇಕಾದುದ್ದು ಹೀಗೆಯೇ ಎಂದು ಪ್ರತಿಪಾದಿಸುವರಾಗಿದ್ದಾರೆ.

೧. ಸಮುದಾಯಗಳ ಸಾಮಾಜಿಕ ವ್ಯವಸ್ಥೆಯ ಕಿರುನೋಟ

ಸರ್ವರಂಗದ ಅಭಿವೃದ್ಧಿಗೆ ಜನತೆಯಲ್ಲಿರಬೇಕಾದ ಮುಕ್ತ ಅವಕಾಶಗಳ ಸಾಮಾಜಿಕ ವ್ಯವಸ್ಥೆಯನ್ನು ಡಾ॥ ಬಿ.ಆರ್. ಅಂಬೇಡ್ಕರ್ ರವರು ಪ್ರತಿಪಾದಿಸಿದ್ದರು. " ಸಮಾಜದಲ್ಲಿ ವ್ಯಕ್ತಿಯ ಬೆಳವಣಿಗೆ ಮುಖ್ಯವಾಗಿದ್ದು, ಸಾಮಾಜಿಕ ಗುರಿ ಮತ್ತು ಉದ್ದೇಶ, ಅಭಿವೃದ್ಧಿ, ವ್ಯಕ್ತಿಗಿಂತ ಮೇಲಾಗಿರುವುದಿಲ್ಲ. ಸಮಾಜದ ಸದಸ್ಯರ ನಡುವೆ ಸಂಘಟಿತ ಜೀವನವು ಸ್ವತಂತ್ರ ಸಮಾನತೆಯ ಕಾರಾರಿನ ಮೇಲೆ ನಡೆಯುತ್ತಿರುತ್ತದೆ ಎನ್ನುತ್ತಾರೆ."[೨] ಸಮಾಜವು ನಿಂತ ನೀರಲ್ಲ ಸಮಾಜದಲ್ಲಿ ಮನುಷ್ಯ ಜನಿಸಿ ಹಂತ, ಹಂತದ ವಿಕಾಸವನ್ನ ಭೌತಿಕ, ಬೌದ್ಧಿಕ ಕ್ರಮವಾಗಿ ಬದಲಾವಣೆಗೆ ಒಳಗಾಗಿರುತ್ತಾನೆ. ಸಮಾಜ ಮತ್ತು ಮನುಷ್ಯ ಒಬ್ಬರನ್ನೂ ಬಿಟ್ಟು ಮತ್ತೊಬ್ಬರಿಲ್ಲ. ಸಮುದಾಯಗಳು ಹಿಡಿತ ಸಾದಿಸಿದ್ಧ ಪರಿಸರಕ್ರಮದ ಮೇಲೆ ಅವ್ವ ಸಂಸ್ಕೃತಿಯ ಅರ್ಹತೆ, ಯೋಗ್ಯತೆ, ಗೌರವ, ನ್ಯಾಯ ಸಮುದಾಯಗಳಲ್ಲಿ ಹುಟ್ಟುತ್ತಿದ್ದಂತೆ ಪ್ರಾಪ್ತಿಯಾಗುತ್ತಿದ್ದವು. ಇವುಗಳು ಪ್ರಸ್ತುತ ಜಾತಿ ಶ್ರೇಣಿಕರಣದೊಂದಿಗೆ ಬೆಳೆದು ಬಂದಿರುವ ಬಡವ-ಶ್ರೀಮಂತ, ಕಾರ್ಮಿಕ-ಮಾಲೀಕ, ಪ್ರಜೆ-ಪ್ರಭು, ಅಸ್ಪೃಶ್ಯ- ಸ್ಪೃಶ್ಯ, ಎಂಬ ಚಿತ್ರಿಕರಣದಲ್ಲಿನ ಬದಲಾವಣೆಗಳು ಸಮುದಾಯಗಳಲ್ಲಿವೆ.

ಮೇರು ಪರ್ವತದಂತೆ ಬಾಸವಾಗುತ್ತಿದ್ದ ಸಾಮಾಜಿಕ ವ್ಯವಸ್ಥೆಯ ಸಾಂಸ್ಕೃತಿಕ ಪರಿಸರ ಬದಲಾಗಿದೆ. ಮೂಲನಿವಾಸಿ ಸಮುದಾಯಗಳಲ್ಲಿದ್ದ ಸಮಾಜದ ಸಮಸ್ತರು ವ್ಯವಸ್ಥೆಯಲ್ಲಿ ಸಮಾನ ವಾರಸುದಾರರಾಗಿದ್ದರು. ಸಕಲ ಸಂಪತ್ತು ಸೌಕರ್ಯಗಳು ಎಲ್ಲರದಾಗಿದ್ದವು. ಪ್ರೀತಿ, ವಾತ್ಸಲ್ಯ, ಅನುಕಂಪ, ಗೆಳೆತನ ಹುಲುಸಾಗಿ ಬೆಳೆದಿದ್ದವು. ಉತ್ಪಾದನೆಯು ಸಮವಿತರಣೆಯ ಉಪಭೋಗದಿಂದ ತನ್ನ ಸಾಮಾಜಿಕ ವ್ಯವಸ್ಥೆ ಸಮತೂಕದಲ್ಲಿದ್ದ ಪರಿಸರದಲ್ಲಿ ಜನಿಸಿ ಪರಿಸರದೊಳಗೆ ತರುವಾಯ ಲೀನವಾಗುತ್ತಿದ್ದವರು. ನಿಸ್ವಾರ್ಥತೆಯ ಸಮಾನ ಪಾತಳಿಯ ಸಾಮಾಜಿಕ ವ್ಯವಸ್ಥೆ ಪಾರಂಪರಿಕ ಶಿಸ್ತಿನಿಂದ ಒಡಮೂಡಿತ್ತು. ಹೀಗೆ ರೂಪುಗೊಂಡಿದ ಸಾಮಾಜಿಕ ವ್ಯವಸ್ಥೆ ಆಧುನಿಕತೆಯ ಜೀವನ ಶೈಲಿಯ ಪ್ರತೀಕವಾಗಿ ಹಲವಾರು ಬದಲಾವಣೆಗಳೊಂದಿಗೆ ಮುಖಾ ಮುಖಿ ಮಾಡಿರುವುದು ಕಂಡುಬರುತ್ತದೆ. ಪೂರಕವೆಂಬಂತೆ ಕಂಡುಬರುವ ಸ್ವತಂತ್ರ ಭಾರತದ ಸಾಮಾಜಿಕ ಬದಲಾವಣೆಯ ಕ್ರಿಯೆ ತೀವ್ರವಾಗಿ ನಡೆಯುತ್ತಿರುವುದು ಹೆಸರಿಸಬಹುದು.

ಸಾಮಾಜಿಕ ವ್ಯವಸ್ಥೆ ಒಂದು ದೊಡ್ಡದಾದ ವಿಷಯವಾಗಿದೆ, ಇಲ್ಲಿನ ಎಲ್ಲಾ ಬದಲಾವಣೆಗಳು ಗುರುತಿಸುವುದು ಕಷ್ಟ. ಅಧ್ಯಯನದ ಅಗತ್ಯಕ್ಕೆ ಅನುಸರಿಸಿ

ಪರಿವರ್ತನೆಯನ್ನು ಅವಲೋಕಿಸಿದಾಗ ಬದಲಾವಣೆ ವಿಷಯವಸ್ತು ಅನೇಕವುಗಳು. ಅವುಗಳಲ್ಲಿನ ಕೆಲವೊಂದು ವಿಷಯಗಳಲ್ಲಿ ಮಾತ್ರ ಬದಲಾವಣೆಯ ಕ್ರೋಢಿಕೃತವಾದ ಸಂಕ್ಷಿಪ್ತ ವಿಶ್ಲೇಷಣೆಯನ್ನು ೫ ಅಂಶಗಳಲ್ಲಿ ವಿಶದಿಕರಿಸಲಾಗಿದೆ.

ಆಧುನಿಕರಣದ ಬದಲಾದ ಪ್ರಕ್ರಿಯೇ ಅಥವಾ ಅರ್ಥವಿಜ್ಞಾನಿಗಳು ಹೆಸರಿಸುವ ಜಾಗತೀಕರಣದ ಸಂದರ್ಭದಲ್ಲಿ ಹಿಂದೂ ಸಾಮಾಜಿಕ ವ್ಯವಸ್ಥೆ ಅಸ್ತಿತ್ವದಲ್ಲಿರುವುದು. ಈ ವ್ಯವಸ್ಥೆಯಲ್ಲಿ ಹಕ್ಕು, ಅಧಿಕಾರ, ಗೌರವ ಘನತೆ ಎಲ್ಲವೂ ವ್ಯಕ್ತಿಯೂ ಜನ್ಮತಳೆದಿರುವ ಜಾತಿಯನ್ನು ಅವಲಂಬಿಸಿದೆ. ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಣಬರುವ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಆಸಡ್ಡೆ, ನಿರ್ಲಕ್ಷ್ಯ ಮತ್ತು ದೌರ್ಬಲ್ಯಗಳ ಧ್ಯೋತ್ಯಕವೆಂಬಂತೆ ಕಾಣಬರುತ್ತಾರೆ. ಇಲ್ಲಿನ ಜಾತೀಯತೆಯ ಸಾಮ್ರಾಜ್ಯದಲ್ಲಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ಜಾತಿಯೂ ಮತ್ತೊಂದು ಜಾತಿಗೆ ಸಮವಲ್ಲ. ಅಂದರೆ, ಒಂದರ ಪಕ್ಕ ಮತ್ತೊಂದು ಜಾತಿ ಇಲ್ಲ. ಬದಲಿಗೆ ಲಂಭಾಕೃತಿಯಲ್ಲಿದೆ. ಸಹಜವಾಗಿ ಈ ಸಮಾಜದತ್ತ ಮುಖ ಮಾಡಿದ ಸಮುದಾಯಗಳು ವೈಧಿಕ ಸಂಸ್ಕೃತಿಯ ತಲೆ ತಲಾಂತರದ ಆಡಳಿತದ ಸಂವಿಧಾನದಲ್ಲಿ ಸಿಲುಕುವಂತಾಗಿದೆ. ಸ್ವತಂತ್ರ ನಂತರದ ಸಾಮಾಜೋಭಿವೃದ್ಧಿಯಲ್ಲಿ ಎಲ್ಲವೂ ಉಲ್ಟಾ ಪಲ್ಟಾ ಮಾಡಿದೆ. ಇಲ್ಲಿನ ಬದಲಾವಣೆ ಅಧಮತೆಯ ಜಾತಿ ವರ್ಗ ವರ್ಣದ ಸೌಕರ್ಯ ಹೊಂದುವಂತೆ ಮಾಡಿದೆ. ಸಾಮಾಜಿಕ ಸಮಾನತೆ ಎಲ್ಲೂ ಕಂಡು ಬರುವುದಿಲ್ಲ ಎನ್ನಬಹುದು. ಜೊತೆಗೆ ಅಭಿವೃದ್ಧಿಯ ಕಾರ್ಯವು ಸಹ ನಿರಂತರವಾಗಿ ಇದೇ ಕ್ರಮವನ್ನು ಮುಂದುವರಿಸಿಕೊಂಡು ಬರಲಾಗುತ್ತಿರುವುದು ಕಾಣಬಹುದಾಗಿದೆ. ನೂರಾರು ವರ್ಷಗಳ ಬದುಕಿನ ಕ್ರಮಕ್ಕೆ ಪೆಟ್ಟು ಬಿದ್ದಿದೆ. ಇದರಿಂದ ಬಡತನವೆಂಬ ವಿಷ ವರ್ತುಲದಲ್ಲಿ ಸಿಲುಕಿ ಜೀವಿಸುವಂತಾಗಿದೆ.

ನಮ್ಮ ದೇಶದಲ್ಲಿ ನೈಸರ್ಗಿಕ ಸಂಪನ್ಮೂಲಗಳು ಮತ್ತು ಮಾನವ ಸಂಪನ್ಮೂಲಗಳಿಗೆ ಇಂದಿಗೂ ಕೊರತೆ ಕಂಡು ಬರುವುದಿಲ್ಲ. ಸಮೃದ್ಧವಾಗಿರುವ ಭಾರತ ದೇಶದಲ್ಲಿ ಏಕರೂಪದ ಸಾಮಾಜಿಕ ವ್ಯವಸ್ಥೆ ಇಲ್ಲದ ಕಾರಣ ಸರ್ವಾಂಗೀಣ ಅಭಿವೃದ್ಧಿಯು ಅಸಾಧ್ಯವಾಗಿದೆ. ಅಭಿವೃದ್ಧಿಯ ನೆಪದಲ್ಲಿ ಮೂಲನಿವಾಸಿ ಬುಡಕಟ್ಟುಗಳು ನಗರೀಕರಣದತ್ತ ಮುಖ ಮಾಡಿದ ಈ ಸಂದರ್ಭದಲ್ಲಿ ನಾಗರೀಕರ ಪ್ರಭಾವದಿಂದ ತಮ್ಮ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಉಳಿಸಿಕೊಳ್ಳದೇ, ನಾಗರೀಕ ಸಂಪರ್ಕದಿಂದ ತಮ್ಮ ಪದ್ಧತಿ ಅಚಾರ, ವಿಚಾರ ಹಾಗೂ ನಂಬಿಕೆಗಳನ್ನು ಬಿಟ್ಟು ನಾಗರೀಕರನ್ನು ಅನುಸರಿಸುತ್ತಿರುವ ಕಾರಣ ಮೂಲಸಂಸ್ಕೃತಿಯನ್ನು ನಾಶಪಡಿಸುವ ಸಂಭವಗಳನ್ನು ತಳ್ಳಿ ಹಾಕುವಂತಿಲ್ಲ. ಒಂದು ಸಮುದಾಯದ ಜೀವನಶೈಲಿ ಆ ಸಮುದಾಯದ ಸಂಸ್ಕೃತಿ ಮತ್ತು ಪರಂಪರೆಯಲ್ಲಿನ ಮೌಲ್ಯಗಳನ್ನು ಆಧರಿಸಿ ರೂಪುಗೊಂಡಿರುತ್ತವೆ. ಸಂಸ್ಕೃತಿ ಆಂತರಿಕ ಮತ್ತು ಬಾಹ್ಯ ಒತ್ತಡಗಳಿಂದಾಗಿ ಬದಲಾಗುವ ಸಾವಯುವ ಸಾರಭೂತವಾದ್ದರಿಂದ ಆಯಾ ಬದಲಾವಣೆಗಳಿಗೆ ತಕ್ಕಂತೆ ಜೀವನವಿಧಾನವೂ

ಆಗಾಗ ಮಾರ್ಪಾಡಿಗೆ ಒಳಗಾಗುತ್ತದೆ. ಈ ಹೇಳಿಕೆಯಂತೆ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಕೆಲವೊಂದು ಮೌಲ್ಯಗಳನ್ನು ಸೀಮಿತವಾಗಿ ಉಳಿಸಿಕೊಳ್ಳುವುದರ ಜೊತೆಗೆ ಕಾಲ ಪರಿಸರ ಸನ್ನಿವೇಶಕ್ಕನುಗುಣವಾಗಿ ಬದಲಾವಣೆಗೆ ಪಕ್ವವಾಗಿದ್ದಾರೆ. ಈ ನಿಟ್ಟಿನ ಪ್ರಥಮಥ ಬದಲಾವಣೆಯೇ ವಾಸಸ್ಥಾನಗಳು.

ವಾಸಸ್ಥಾನಗಳು: ಮೂಲನಿವಾಸಿ ಬುಡಕಟ್ಟುಗಳು ಅರಣ್ಯವಾಸಿಗಳು, ದಟ್ಟ ಅರಣ್ಯವೇ ಅವರುಗಳ ಮೂಲನೆಲೆ. ಬೇಟೆಯ ಹಂತದಿಂದ ಅರಣ್ಯಜೀವನವನ್ನ ಸವಿದವರು. ಅರಣ್ಯಕಾಯಿದೆಗಳ ನಂತರ ಇವರುಗಳ ಪುನರ್‌ವಸತಿ ಪ್ರಾರಂಭಗೊಂಡಿತ್ತು. ಪುನರ್‌ವಸತಿಯು ಕಾಲೋನಿಗಳ ರೂಪದಲ್ಲಿ ಆರಂಭಮಾಡಿ ವಾಸಕ್ಕೆಂದು ಜನತಾಮನೆಗಳು, ಆಶ್ರಯಮನೆಗಳು ಮತ್ತು ವಿಶ್ವ ಇತರ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಹಲವಾರು ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಈ ಎಲ್ಲಾ ವಾಸದ ನೆಲೆಗಳು ಊರುಗಳಿಂದ ದೂರವಿದ್ದು ಕಾಡಿನ ಆಜೂಬಾಜು ಪರಿಸರದಲ್ಲಿ ನಿರ್ಮಿಸಲಾಗಿದೆ. ಈ ಎರಡು ಮೂಲನಿವಾಸಿ ಬುಡಕಟ್ಟುಗಳಾದ ಜೇನುಕುರುಬರು ಮತ್ತು ಕೊರಗರು ವಿಭಿನ್ನವಾಸಸ್ಥಾನದ ನೆಲೆಗಳನ್ನೇ ಆಶ್ರಯಿಸಿದ್ದಾರೆ.

ಜೇನುಕುರುಬರು ಅರಣ್ಯದ ಅಜೂಬಾಜು ಪ್ರದೇಶಗಳಲ್ಲಿ ಅಥವಾ ಅರಣ್ಯಕ್ಕೆ ಹೊಂದಿಕೊಂಡಂತ ಪರಿಸರವಾಗಿದೆ. ಇಲ್ಲಿನ ಸನ್ನಿವೇಶ ಗ್ರಾಮಸಂಸ್ಕೃತಿಯನ್ನು ಪ್ರತಿನಿಧಿಸುವಂತಾಗಿದೆ. ಸಮುದಾಯದ ಜನರ ನಡೆ, ನುಡಿ, ಆಚಾರ, ಪದ್ಧತಿಗಳಲ್ಲಿ ಸುತ್ತಲಿನ ಗ್ರಾಮಸಮಾಜದ ಸಾಮಾಜಿಕ ವ್ಯವಸ್ಥೆ ಕಂಡುಬರುತ್ತದೆ. ಬಹುತೇಕ ಜೇನುಕುರುಬರು ವಾಸಿಸುವ ಸ್ಥಳಗಳು ಜಿಲ್ಲಾಕೇಂದ್ರ ಮತ್ತು ತಾಲ್ಲೂಕು ಕೇಂದ್ರಗಳಿಂದ ದೂರವೇ ಉಳಿದಿವೆ. ೪೦ ವರ್ಷಗಳ ಹಿಂದೆ ರೂಪುಗೊಂಡ ಕಾಲೋನಿಗಳು ಪ್ರಸ್ತುತವೂ ಒಂದು ಗ್ರಾಮವಾಗಿ ರೂಪುಗೊಳ್ಳದಿರುವುದು ಕಂಡುಬರುತ್ತದೆ.

ಕೊರಗರು ಮುಖ್ಯವಾಗಿ 'ನಗರ ಪ್ರದೇಶದತ್ತ ಮುಖಮಾಡಿದ್ದಾರೆ. ಆದರೂ ಹಳ್ಳಿಗಾಡಿನ ಘಟ್ಟಪ್ರದೇಶಗಳಲ್ಲಿ ಬೆರಳೆಣಿಕೆಯಷ್ಟೇ ಕುಟುಂಬಗಳು ತೀರಾ ಹಿಂದುಳಿದವರಂತೆ ಕಂಡುಬರುತ್ತವೆ. ಗ್ರಾಮದ ಪ್ರತ್ಯೇಕ ವಾಸಸ್ಥಾನಗಳಾದ ಘಟ್ಟಪ್ರದೇಶಗಳಲ್ಲಿನ ಕುಟುಂಬಗಳಲ್ಲಿ ತೀವ್ರತರವಾದ ಬಡತನ, ಅಸ್ಪೃಶ್ಯತೆಯ ಶೋಚನೀಯ ಸ್ಥಿತಿ ಪ್ರಸ್ತುತವೂ ಕಂಡುಬರುತ್ತದೆ. ಇವರುಗಳು ಅಜಲಿನ ಪದ್ಧತಿಯ ಪ್ರತೀಕ ಡೊಳ್ಳು ನುಡಿಸುವುದು. ಕೊಳಲು ನುಡಿಸುವುದು. ಬೇಡಿ ತಿನ್ನುವ ಪದ್ಧತಿಯಲ್ಲಿ ಇರುವವರಾಗಿದ್ದಾರೆ. ನಗರ ಮುಖಿಗಳಾಗುತ್ತಿರುವರಲ್ಲಿ ಅಕ್ಷರಜ್ಞಾನದ ಪ್ರಭಾವ ಕಾಣಬಹುದು. ನಗರಗಳಲ್ಲಿ ಪ್ರತ್ಯೇಕ ಕಾಲೋನಿಗಳು, ಕೊಳಚೆ ಪ್ರದೇಶಗಳು ಮತ್ತು ನಗರಪಾಲಿಕೆಯ ವಸತಿಗೃಹಗಳೇ ಆಶ್ರಯ ತಾಣಗಳಾಗಿವೆ. ನಗರವಾಸಿಗಳಾದವರು ಸರ್ಕಾರಿ ಕಟ್ಟಡಗಳಲ್ಲಿರುವವರು ಮತ್ತು ಕೊಳಚೆ ಪ್ರದೇಶದಲ್ಲಿ ತೆಂಗಿನಗರಿಗಳ ತಡಿಕೆಗಳಿಂದ ನಿರ್ಮಿಸಿಕೊಂಡ ಕಾಲೋನಿಗಳೇ ವಾಸಸ್ಥಾನಗಳಾಗಿವೆ. ಈ

ಎರಡು ಸಮುದಾಯಗಳು ಆರಣ್ಯದಲ್ಲಿದ್ದು ನಾಗರೀಕ ಸಮಾಜದಿಂದ ಪ್ರತ್ಯೇಕವಾದ ಪ್ರದೇಶಗಳಲ್ಲಿ ವಾಸಿಸುತ್ತಿದವರು. ಹೀಗಾಗಿ ನಾಗರೀಕತೆ ಎಷ್ಟೇ ಬೆಳೆದರೂ ಅವರುಗಳಲ್ಲಿ ಮೂಲಸ್ಥಾನದ ಬಗ್ಗೆ ಬಹಳ ಹೆಮ್ಮೆ. ಇಲ್ಲಿಯೂ ಪ್ರತ್ಯೇಕವಾದ ಕಾಲೋನಿಯನ್ನು ಬಯಸುತ್ತಿರುವುದು ಕಾಣಬಹುದು.

ಭೌತಿಕ ಬದಲಾವಣೆಗಳು: ಮೂಲನಿವಾಸಿ ಬುಡಕಟ್ಟುಗಳು ಪ್ರಕೃತಿವಾದದ ಪ್ರತಿಪಾದಕರು. ಸರಳವಾದ ಗುಡಿಸಲು ಕಟ್ಟಿಕೊಂಡು ಜೀವಿಸುತ್ತಿದ್ದವರು. ಹಾಡಿಗಳ ರೂಪ ಕಾಲೋನಿಯಾಗಿ ಪರಿವರ್ತನೆಯಾಗಿದೆ. ಇಂದು ಕೆಲವರು ಹೆಂಚಿನ ಮನೆಗಳು, ಮಾಳಿಗೆ, ಗುಡಿಸಲುಗಳಲ್ಲಿ ವಾಸಿಸುವ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಿದ್ದಾರೆ. ಸಮುದಾಯದಲ್ಲಿದ್ದ ಸಂಪ್ರದಾಯಿಕ ಮನೆ ನಿರ್ಮಾಣ ಮಾಯವಾಗಿದೆ. ಮನೆಯಲ್ಲಿದ್ದ ಮಣ್ಣಿನಪರಿಕರಗಳ ಸ್ಥಳದಲ್ಲಿ ಹಿತ್ತಾಳೆ, ಪ್ಲಾಸ್ಟಿಕ್ ಅಲ್ಯೂಮಿನಿಯಂ, ಸ್ಟೀಲ್ ಪಾತ್ರೆಗಳು ಆಕ್ರಮಿಸುತ್ತಿವೆ. ಸರ್ಕಾರದ ಭಾಗ್ಯಜ್ಯೋತಿ, ಕೆಲವು ಕುಟುಂಬಗಳಲ್ಲಿ ವಿಧ್ಯುತ್ ಸೌಕರ್ಯದಿಂದ ದ್ವೀಪ ಬೆಳಗುತ್ತಿದ್ದರೆ, ಇನ್ನೂ ಕೆಲವು ಮನೆ/ಕುಟುಂಬಗಳು ಸೀಮೆಎಣ್ಣೆ ದೀಪಗಳಿಂದ ಬೆಳಕು ಪಡೆಯುತ್ತಿದ್ದಾರೆ.

ಪ್ರಮುಖವಾಗಿ ಎರಡು ಸಮುದಾಯಗಳಲ್ಲಿ ಮೂಲ ಉಡುಪುಗಳ ಲಕ್ಷಣಗಳು ಮಾಯವಾಗಿವೆ. ಎಲ್ಲರೂ ಒಂದೇ ರೀತಿಯ ಬಟ್ಟೆಧರಿಸಲಾಗುತ್ತಿದೆ ಎನ್ನಲಾಗುವುದಿಲ್ಲ. ಮೈತುಂಬಾ ಬಟ್ಟೆ ಇಲ್ಲದಿದ್ದರೂ, ನಗರ ಗ್ರಾಮೀಣರ ಪರಿಸರಕ್ಕೆ ಅನುಗುಣವಾಗಿ ತೊಡುವವರಾಗಿದ್ದಾರೆ. ಪುರುಷರು, ಅಂಗಿ ಚಡ್ಡಿ, ಪಂಚೆ ಲುಂಗಿ ಪ್ಯಾಂಟ್, ಟೀಷರ್ಟ್, ಜೀನ್ಸ್, ಟೆರಿಕಾಟ್, ಟೆರಿಲಿನ್ ಇತ್ಯಾದಿ ಬಟ್ಟೆಗಳನ್ನು ಧರಿಸುತ್ತಿದ್ದರೆ, ಮಹಿಳೆಯರು ಅತಿಹೆಚ್ಚಾಗಿ ನೈಟಿಗಳನ್ನು ಬಳಸುವುದರ ಜೊತೆಜೊತೆಗೆ ರವಿಕೆ, ಲಂಗ, ಸೀರೆ, ಚೂಡಿದಾರ್ ಇತ್ಯಾಧಿಗಳನ್ನು ಬಳಸುತ್ತಿದ್ದಾರೆ. ಬೆರಳೆಣಿಕೆಯ ಪುರುಷರು ಷೂ ಧರಿಸುವುದರ ಜೊತೆಗೆ ಆಧುನಿಕ ಉಡುಗೆ ತೊಡುಗೆಗಳ ಬಳಕೆಯನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಎಲ್ಲರಮನೆಗಳಲ್ಲಿ ಸ್ನೋ ·ಪೌಡರ್, ಕಾಡಿಗೆ ಇತ್ಯಾಧಿ ಅಲಂಕಾರಿಕ ವಸ್ತುಗಳು ಬಳಸುತ್ತಿರುವುದು ಕಂಡುಬರುತ್ತದೆ. ಹುಡುಗರು ಕ್ರಾಫ್‌ಕಟ್, ಧೋನಿಕಟ್ ಮಾಡಿಸಿಕೊಳ್ಳುತ್ತಿದ್ದಾರೆ. ಇವರುಗಳಲ್ಲಿನ ಮತ್ತೊಂದು ವಿಶೇಷವೆಂದರೆ, ಕಾಡಿನ ಮಧ್ಯದಲ್ಲಿ ಪುನರ್‌ವಸತಿ ರೂಪಿಸಲಾದ ಮತ್ತು ಘಟ್ಟಪ್ರದೇಶಗಳಲ್ಲಿನ ಒಂದೊಂದೆ ಕುಟುಂಬಗಳು ನೆಲೆಸಿರುವಲ್ಲಿ ಮೂಲಸ್ಥಿತಿಯ ಲಕ್ಷಣಗಳು ಇರುವುದನ್ನು ಕಾಣಬಹುದಾಗಿದೆ.

ಕಾಡು ಕಡಿದು ಕುಮ್ರಿ ಬೇಸಾಯ ಮತ್ತು ಕೆತ್ಲು ಬೇಸಾಯ ಮಾಡಿದ್ದ ಇವರುಗಳಲ್ಲಿ ಬಹುತೇಕ ಕುಟುಂಬಗಳಿಗೆ ಭೂಮಿಯೇ ಇಲ್ಲ. ಅಷ್ಟಿಷ್ಟು ವ್ಯವಸಾಯ ಮಾಡುವ ಕೆಲವರು ನೇಗಿಲು, ನೊಗ, ಎತ್ತುಗಳು ಹಸುಗಳನ್ನು ಬಳಸಿ ಉಳುಮೆ ಮಾಡುವವರಾಗಿದ್ದಾರೆ. ನೀರಾವರಿ ಸೌಲಭ್ಯವಿರುವ ಕೆಲವು ಕಡೆಗಳಲ್ಲಿ ಹೈಬ್ರಿಡ್ ಬಿತ್ತನೆಬೀಜಗಳ ಬಳಕೆ, ರಸಗೊಬ್ಬರಗಳ ಬಳಕೆ ಇತ್ಯಾದಿಗಳನ್ನು ಮಾಡುತ್ತಿದ್ದಾರೆ. ಕೆಲವರು ಜಮೀನುದಾರರಿಗೆ ಭೂಮಿ ದೇಣಿಗೆಗೆ ನೀಡಿ

ಆಹಾರ ಉತ್ಪನ್ನಗಳು ಮತ್ತು ಸಕಾಲದಲ್ಲಿ ಹಣಕಾಸಿನ ನೆರವು ಪಡೆಯುತ್ತಿದ್ದಾರೆ. ಒಂದಿಷ್ಟು ಹೆಚ್ಚಿನ ಪ್ರಮಾಣದ ಬದಲಾವಣೆಗಳನ್ನು ಜೇನುಕುರುಬರ ಹೆಗ್ಗಡೆದೇವನವಕೋಟೆ ತಾಲ್ಲೂಕಿನವರಾಗಿದ್ದಾರೆ. ಕೊರಗರು ಭೂಮಿ ಇಲ್ಲದಿದ್ದರೂ, ನಗರ ಪ್ರದೇಶದವರು ಬದಲಾವಣೆ ಬಯಸಿದವರಲ್ಲಿ ಪ್ರಮುಖರೆನ್ನಬಹುದು.

ಸಾಮಾಜಿಕ ಬದಲಾವಣೆಗಳು: ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಬದಲಾದ ಸಾಮಾಜಿಕ ಸಂದರ್ಭದಲ್ಲಿ ಪರಿವರ್ತನೆಯ ಹಾದಿಯಲ್ಲಿದ್ದಾರೆ. ಶಿಕ್ಷಣದ ಅರಿವು ಸ್ವತಂತ್ರ, ಸಂಘಟನೆ, ಹೋರಾಟ, ಮತದಾನದ ಹಕ್ಕುಗಳು ಅವರನ್ನು ಬದಲಾವಣೆಯತ್ತ ಕೊಂಡೊಯ್ಯುತ್ತಿದೆ. ಬಹುತೇಕ ಆಚರಣೆಗಳು ಸತ್ವ ಕಳೆದುಕೊಳ್ಳುತ್ತಿವೆ. ಶಿಷ್ಠ ಸಂಸ್ಕೃತಿಯ ಪ್ರಭಾವ ಗಾಢವಾಗುತ್ತಿದ್ದು, ಆಚರಣೆಗಳಲ್ಲಿನ ಆದಿಮ ಸಂಸ್ಕೃತಿಯ ನಡವಳಿಕೆಗಳು ಕಳೆಗುಂದುತ್ತಿವೆ. ಜೇನುಕುರುಬರು ಮದುವೆ ಸಂಪ್ರದಾಯದಲ್ಲಿ "ಧಾರೆ ಎರೆಸಿಕೊಳ್ಳುವುದು" ಸುತ್ತಲಿನ ಸಮಾಜದ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ. ಸಮುದಾಯದಲ್ಲಿದ್ದ ಬರುಡೆ ಕರೆಯುವುದು ಜನರಿಂದ ಮಾಯವಾಗುತ್ತಿದೆ. ಕೊರಗರಲ್ಲಿ ಡೊಳ್ಳು ನುಡಿಸುವುದು. ಅಜಲುಪದ್ಧತಿಯ ಘೋರ ಕೃತ್ಯವನ್ನು ತಿರಸ್ಕರಿಸಿರುವುದು ಒಂದು ಉತ್ತಮ ಬದಲಾವಣೆಯ ಕ್ರಮವಾಗಿದೆ. ಸಮುದಾಯಗಳಲ್ಲಿ ಹಿರಿಯರ ಮೇಲಿದ್ದ ನಂಬಿಕೆ, ಭಯ ನೆಲೆ ಕಳೆದುಕೊಳ್ಳುತ್ತಿವೆ. ಅವರ ಸಾಮಾಜಿಕ ವ್ಯವಸ್ಥೆಯಲ್ಲಿನ ಭದ್ರತೆ ಕೂಡ ಅಭದ್ರವಾಗುತ್ತಿದೆ. ಗ್ರಾಮೀಣ ಮತ್ತು ನಗರ ಜೀವನದ ಪ್ರಭಾವದಿಂದ ಕುಲಪಂಚಾಯಿತಿಯ ಕಟ್ಟಳೆಗಳು ನಶಿಸುತ್ತಿವೆ. ಕಾಲೋನಿಗಳಲ್ಲಿ ಮದುವೆ , ಹಬ್ಬ, ಆಚರಣೆಗಳಲ್ಲಿ ಧ್ವನಿವರ್ಧಕಗಳು, ಸಾಲು ಸಾಲು ದೀಪಾಲಂಕಾರ, ಮೈಕು, ಡೋಲು, ನಾಗಸ್ವರಗಳು ಅಕ್ರಮಿಸುತ್ತಿವೆ. ಇತ್ತೀಚೆಗೆ ಜೇನುಕುರುಬರಲ್ಲಿ ವರದಕ್ಷಿಣೆಯ ಪಾತ್ರ ಸಮುದಾಯವನ್ನು ಆವರಿಸುತ್ತಿದೆ. ಕೊರಗರಲ್ಲಿ ಅಂತರ್ಜಾತಿ ಮತ್ತು ಧರ್ಮದ ವಿವಾಹಗಳು ಸಾಮಾನ್ಯವಾಗುತ್ತಿವೆ.

ಎಷ್ಟೇ ಸಾಮಾಜಿಕ ಬದಲಾವಣೆಗಳಾಗುತ್ತಿದ್ದರೂ ಮೂಲನಿವಾಸಿ ಬುಡಕಟ್ಟುಗಳು ತೀರಾ ಹಿಂದುಳಿದವರಂತೆ ಕಂಡುಬರುತ್ತಾರೆ. ಸ್ವಯಂ ಆಡಳಿತದ ನಿಯಮ ಕಾಲೋನಿಗಳಲ್ಲಿ ಇಲ್ಲವಾಗಿದೆ. ಪ್ರತಿ ಕಾಲೋನಿಯಲ್ಲಿ ಯಜಮಾನರ ಅಪ್ಪಣೆ ಇಲ್ಲದೆ ಹೊರಗಿನವರ ಪ್ರವೇಶ ನಿಷೇಧಿಸುತ್ತಿದ್ದ ಕ್ರಮವೂ ಬದಲಾಗಿದೆ. ಕಾಲೋನಿಗಳಲ್ಲಿ ಹಿರಿಯರ ಸ್ಥಾನಮಾನಗಳೇ ಕಾಣೆಯಾಗಿವೆ. ಆದರೂ ಅವರ ಕಾಲೋನಿಗಳ ಪರಿಸರ ಮಾತ್ರ ಹಿಂದುಳಿದ ಸೌಲಭ್ಯಗಳಿಂದ ವಂಚಿತವಾದವುಗಳಂತೆ ಕಾಣಬರುತ್ತವೆ.

ಶ್ರೇಣಿಕೃತ ಅಸಮಾನತೆಯ ತತ್ವ: ಸಮಾಜದಲ್ಲಿರುವ ಸದಸ್ಯರನ್ನು ಶ್ರೇಷ್ಟ-ಕನಿಷ್ಟ ಅಥವಾ ಉಚ್ಚ-ನೀಚ ಎಂಬುದಾಗಿ ವರ್ಗೀಕರಣ ಮಾಡುವಂತಹ ಒಂದು ಸಾಮಾಜಿಕ ವ್ಯವಸ್ಥೆಯನ್ನು ಶ್ರೇಣಿಕೃತ ಅಸಮಾನತೆ ಎಂದು ಕರೆಯಲಾಗುತ್ತದೆ. ಶ್ರೇಣಿಕೃತ ವ್ಯವಸ್ಥೆವೆಂಬುದು

ಅಸಮಾನತೆ ಆಧಾರಿತ ಸಾಮಾಜಿಕ ವ್ಯವಸ್ಥೆ. ಇದು ಸಾರ್ವತ್ರಿಕವಾದದ್ದು. ಎಲ್ಲ ಕಾಲದಲ್ಲೂ, ಎಲ್ಲ ಪರಿಸ್ಥಿತಿಗಳಲ್ಲೂ, ಎಲ್ಲಾ ಸಮಾಜಗಳಲ್ಲೂ ಯಾವುದಾದರೊಂದು ರೀತಿಯಲ್ಲಿ ಅಸಮಾನತೆ ಆಧಾರಿತ ಸಾಮಾಜಿಕ ವರ್ಗೀಕರಣ ವ್ಯವಸ್ಥೆ ಅಸ್ತಿತ್ವದಲ್ಲಿತ್ತು. (ಪ್ರಾಚೀನ ಕಾಲದಲ್ಲಿ ದೈಹಿಕ ಶಕ್ತಿ. ಮಂತ್ರವಾದ ಮುಂತಾದವು ಪ್ರಾಮುಖ್ಯತೆ ಪಡೆದಿದ್ದವು.) ಪ್ರಸ್ತುತ ಸಮಾಜಗಳಲ್ಲಿ ಆರ್ಥಿಕ, ಸಾಮಾಜಿಕ, ಸಾಂಪ್ರದಾಯಿಕ ಅಸಮಾನತೆಗಳನ್ನು ಕಾಣುತ್ತವೆ. ಉದಾಹರಣೆಗೆ ಜಾತಿ, ವರ್ಗ, ಗುಲಾಮಗಿರಿ, ಎಸ್ಟೇಟ್ ಪದ್ಧತಿ ಮುಂತಾದವು. ಶ್ರೇಣಿಕೃತ ಅಸಮಾನತೆ ಸಾಮಾಜಿಕವಾಗಿ ನಿರ್ಧರಿತವಾಗುವಂತಹುದು. ಒಬ್ಬ ವ್ಯಕ್ತಿ ಅಥವಾ ಸಮೂಹವನ್ನು ಸಾಮಾಜಿಕವಾಗಿ ಮೇಲು-ಕೀಳು ಎಂದು ಅಳೆದಾಗ ಅದು ಸಾಮಾಜಿಕ ಶ್ರೇಣಿಕೃತ ಅಸಮಾನತೆಯ ತತ್ವ ಎನಿಸಿಕೊಳ್ಳುತ್ತದೆ.

ನಮ್ಮ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿ ಜಾತೀಯತೆಯ ಪ್ರತ್ಯೇಕತೆಯನ್ನು ಗುರುತಿಸಬಹುದು. ಸಾಮಾಜಿಕ ಸಮಾನತೆ ಒಂದು ಹಂತದಲ್ಲಿ ಸ್ವಿಕರಿಸಿದ್ದ ಮೂಲನಿವಾಸಿಗಳು, ಪ್ರಸ್ತುತ ಏಣಿ-ಶ್ರೇಣಿ ವ್ಯವಸ್ಥೆಯಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಭಿನ್ನವಾಗಿ ಕಂಡು ಬರುವವರಾಗಿದ್ದಾರೆ. ಇವರ ಬದಲಾದ ಸಾಮಾಜಿಕ ವ್ಯವಸ್ಥೆ ಸಾವಿರಾರು ಜಾತಿಗಳ ನಡುವಿನ ಅಸಮಾನತೆಯುಕ್ತ ತತ್ವದ ಕಡೆಗೆ ಕರೆತಂದಿದೆ. ಇಂತಹ ಜಾತಿ ವ್ಯವಸ್ಥೆಯಲ್ಲಿ ಸಮುದಾಯಗಳ ಸ್ಥಾನಮಾನಗಳು ಬದಲಾವಣೆಗೊಂಡಿವೆ. ಜಾತಿ ವ್ಯವಸ್ಥೆಯ ತತ್ವದಲ್ಲಿ ಸಮುದಾಯಗಳು ಮೇಲಕ್ಕೇರಿದಂತೆ ಸಮಾಜದಲ್ಲಿ ಘನತೆ ಗೌರವ ಕಡಿಮೆಯಾಗುತ್ತಾ ಹೋಗುತ್ತದೆ.

ಇಂತಹ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳ ಹಂತದಲ್ಲಿರುವವರಿಗೆ ಕನಿಷ್ಠ ಸಾಮಾಜಿಕ ಸ್ಥಾನಮಾನಗಳು ದೊರಕುವುದು ಕಷ್ಟ ಸಾಧ್ಯ. ಈ ಏಣಿ-ಶ್ರೇಣಿ ಜಾತಿ ವ್ಯವಸ್ಥೆಯ ಸಮಾಜದತ್ತ ಬದಲಾದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಲವೊಂದು ಗುಣಲಕ್ಷಣಗಳು ಬದಲಾದಂತೆ ಕಂಡುಬರುತ್ತವೆ.

೧. ಗೌರವ, ಅವಕಾಶಗಳು, ಸಂಪನ್ಮೂಲಗಳು ಮತ್ತು ಪ್ರತಿಫಲಗಳ ಅಸಮಾನ ಹಂಚಿಕೆ.

೨. ಸಾಮಾಜಿಕ ಸ್ಥಾನಮಾನಗಳು ಮತ್ತು ಸಮೂಹಗಳು ರೂಪುಗೊಳ್ಳುವುದು.

೩. ಮೇಲು-ಕೀಳು ಎಂಬ ಸ್ಥಾನಗಳು.

೪. ಸಾಮಾಜಿಕ ಅಸಮಾನತೆ, ಏಣಿ-ಶ್ರೇಣಿ ವ್ಯವಸ್ಥೆ.

ಮೇಲಿನ ೪ ಅಂಶಗಳು ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಬದಲಾವಣೆಯಾಗಿದೆ. ಈ ಅಂಶಗಳ ಬೆಳವಣಿಗೆಯಿಂದ ಸಮುದಾಯಗಳೇ ಮತ್ತೊಂದು ಬುಡಕಟ್ಟು ಸಮುದಾಯವನ್ನು ವಿಂಗಡಿಸಿ ಒಂದರ ನಡುವೆ ಮತ್ತೊಂದಕ್ಕೆ ಸಂಬಂಧಗಳೇ ಇಲ್ಲದಂತೆ ಜೀವಿಸುತ್ತಿರುವುದು ಕಾಣಬಹುದು.

ವಾಸ್ತವದಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಅನೇಕ ಬುಡಕಟ್ಟು ಸಮುದಾಯಗಳ ಮತ್ತು ಇತರೆ ಜನವರ್ಗದ ಸಮುದಾಯಗಳ ಜೊತೆಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ವಾಸಿಸುವರಾಗಿದ್ದಾರೆ. ಬದಲಾದ ಸಾಮಾಜಿಕ ವ್ಯವಸ್ಥೆ ಮೂಲನಿವಾಸಿ ಬುಡಕಟ್ಟುಗಳಲ್ಲೇ ಅನೇಕ ಬದಲಾವಣೆಗಳನ್ನು ರೂಢಿಸಿದೆ. ಜೇನುಕುರುಬರು ಅಭಿವೃದ್ಧಿ ಯೋಜನೆಗಳ ಅವಕಾಶಗಳನ್ನು ಕಡಿಮೆ ಪಡೆದರೂ, ಸಂಪನ್ಮೂಲಗಳು ಹೆಚ್ಚು ಪಡೆದಿದ್ದಾರೆ. ಗೌರವದ ಸ್ಥಾನಗಳಲ್ಲಿ ಜೇನುಕುರುಬರಿದ್ದರೆ ಹೀನ, ಅಸ್ಪೃಶ್ಯನೆಂಬುದಕ್ಕೆ ಕೊರಗರು ಪಾತ್ರರಾಗಿದ್ದಾರೆ. ಪ್ರತಿಫಲಗಳು ಸಹ ವಾಸ್ತವ ಆಯಾ ಸಮುದಾಯದ ಪರಿಸರ, ಸಮಾಜದ ಜನವರ್ಗವನ್ನು ಅವಲಂಬಿಸಿದೆ. ಸಾಮಾಜಿಕ ಸ್ಥಾನಮಾನಗಳಲ್ಲಿ ಜೇನುಕುರುಬರು ಏರುಮುಖದಲ್ಲಿದ್ದಾರೆ, ಕೊರಗರು ಇಳಿಮುಖದಲ್ಲಿದಾರೆ. ಸಮಾಜದಲ್ಲಿ ಅತಿ ಕಟ್ಟಕಡೆಯ ಅಸ್ಪೃಶ್ಯತೆಯ ರೂಪದ ಸ್ಥಾನ ಕೊರಗರದು. ಜೇನುಕುರುಬರು ಅಸ್ಪೃಶ್ಯನ ಮೇಲಿರುವ ಸ್ಥಾನವಾಗಿದೆ. ಅಸ್ಪೃಶ್ಯ ಎಂಬ ಘೋರ ಕಾರಣಕ್ಕೆ ಕೊರಗರಲ್ಲಿ ಮತಾಂತರ ನಡೆಯುತ್ತಲಿದೆ. ಜೇನುಕುರುಬರಲ್ಲಿ ಹಿಂದೂ ಸಾಮಾಜಿಕ ವ್ಯವಸ್ಥೆಯ ಜಾತಿ ಶ್ರೇಣಿಕರಣಕ್ಕೆ ಒಳಗಾಗುತ್ತಿದ್ದಾರೆ. ಕೊರಗರು ಬೇಡುವವ, ಎಂಜಲು ತಿನ್ನುವ ಊರಿನ ರಸ್ತೆ, ಚರಂಡಿಗಳನ್ನು ನೈರ್ಮಲ್ಯಗೊಳಿಸುವಂತ ಹೀನ ಕೆಲಸಗಳಲ್ಲಿ ದುಡಿಯುವರಾಗಿದ್ದಾರೆ. ಜೇನುಕುರುಬರು ವರ್ಣಾಶ್ರಮ ವ್ಯವಸ್ಥೆಯ ಮೇಲ್ತುದಿಗೆ ಏರುವ ಅವಕಾಶ, ಸಮಾಜದ ಉಳ್ಳವರ ಜೊತೆಗೆ ನಂಟು ವ್ಯವಹಾರ, ಆಹಾರ ಪದ್ಧತಿಯಲ್ಲಿ ಸಹ ಭೋಜನದ ಅವಕಾಶವಿದೆ. ಇದರಿಂದ ಜಾತಿ ಶ್ರೇಣಿಕರಣದ ಏರು ಮುಖದಲ್ಲಿದ್ದಾರೆ. ಕೊರಗರು ನೈರ್ಮಲ್ಯ ಕೆಲಸದಲ್ಲಿಯೂ ಇನ್ನೂ ಹಿಂದಕ್ಕೆ ತಳ್ಳಲ್ಪಡುತ್ತಿದ್ದಾರೆ. ನೈರ್ಮಲ್ಯ ಕೆಲಸದಲ್ಲಿ ಸೇರ್ಪಡೆಗೊಂಡ ಇತರ ಪಂಚಮರು ರಸ್ತೆ, ಗುಡಿಸಲು ಪ್ರತಿಭಟಿಸಿ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಕೊರಗರು ಮಾತ್ರ ಉಳ್ಳವರ ಮನೆಯ ಜೀತ, ವರ್ಣಾಶ್ರಮದ ಬಿಟ್ಟಿ ಚಾಕರಿಯ ನೌಕರಿಯಿಂದ ಹಿಂದೆ ಸರಿಯಲ್ಪಡುತ್ತಿದ್ದಾರೆ.

ಉಚ್ಚ- ನೀಚ ಎಂಬ ಮಂತ್ರ ಮೂಲನಿವಾಸಿ ಬುಡಕಟ್ಟುಗಳಲ್ಲಿ ಕಂಡು ಬರುತ್ತದೆ. ಜೇನುಕುರುಬರು ಹೇಳುವಂತೆ "ನಾವು ಗೌಡರಂತೆ ಬಾಳುತ್ತೆವೆ ನಮಗೂ ವ್ಯವಸಾಯ ಮುಖ್ಯವಾಗಿದೆ, ನಾವೂ ಗೌಡರ ಮನೆಯಲ್ಲಿ ಊಟ, ಹಬ್ಬ, ಆಚರಣೆಗಳಲ್ಲಿ ಪಾಲ್ಗೋಳ್ಳುತ್ತೀವಿ. ನಮ್ಮ ಅವರುಗಳ ನಡುವೆ ಕೊಡು ತೆಗೆದುಕೊಳ್ಳುವ ಪ್ರಕ್ರಿಯೆ ಇಲ್ಲ (ವಿವಾಹದ ಪ್ರಕ್ರಿಯೆ). ಉಳಿದಂತೆ ನಮ್ಮ ಸಂಬಂಧ ಉತ್ತಮವಾಗಿದೆ ಎನ್ನುತ್ತಾರೆ. ನಾವುಗಳು ಗೌಡರ ಮನೆ ಬಿಟ್ಟು ಬೇರೆಲ್ಲೂ ಆಹಾರ ಸೇವಿಸುವುದಿಲ್ಲ. ಹಕ್ಕಿಪಿಕ್ಕಿಯರು ಸೋಲಿಗರು, ಹೊಲೆಯರು ಮತ್ತು ಇತರ ಪರಿಶಿಷ್ಟರ ಮನೆಯಲ್ಲಿ ಆಹಾರ ಸೇವಿಸುವುದಿಲ್ಲ. ಕೆಲಸಕ್ಕೆಂದು ಹೋಗುವುದು ಉಂಟು. ಅವರುಗಳು ನಮಗಿಂತ ಕೀಳು ಎಂದು ನಮ್ಮ ಕುಲಾಚಾರದಲ್ಲಿ ತೀರ್ಮಾನ ಮಾಡಿದ್ದಾರೆ ಎನ್ನುತ್ತಾರೆ"[5]. ಕೊರಗರಲ್ಲಿ ಈ ರೀತಿಯ ಭಾವನೆಗಳು ಕುಲಾಚಾರ

ವಿಲ್ಲದಿದ್ದರೂ, ಮೇಲು-ಕೀಳು ಎಂದು ಲೆಕ್ಕಾಚಾರ ಮಾಡದೆ, ಬದುಕುವುದು ಅನಿವಾರ್ಯ. ಅದಕ್ಕಾಗಿ ಉದ್ಯೋಗ ಸಹ ಅನಿವಾರ್ಯವಾಗಿದೆ. ಹೀಗಾಗಿ ಚರ್ಮದ ಉತ್ಪನ್ನ, ಕಸಗೂಡಿಸುವುದು, ಕಕ್ಕಸು ತೊಳೆಯುವುದು ಎಂಬ ಕೆಲಸದಿಂದ ಅಸ್ಪ್ರಶ್ಯರಲ್ಲಿ ಅಸ್ಪ್ರಶ್ಯ ಭಾವನೆ ತೊರೆದು ಹಾಕಲು ಸಾಧ್ಯವಾಗಿಲ್ಲ .

ಕೊರಗರು ಇತ್ತೀಚಿನ ದಿನಗಳಲ್ಲಿ ತಮ್ಮ ಸಾಮಾಜಿಕ- ಆರ್ಥಿಕ ಸ್ಥಾನಮಾನಗಳನ್ನು ಉನ್ನತ್ತೀಕರಿಸಿಕೊಳ್ಳುವತ್ತ ನಡೆಯುತ್ತಿದ್ದಾರೆ. ಸಂಘಟಿತ ರೂಪದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡುತ್ತಿದ್ದಾರೆ. ಶಿಕ್ಷಣದ ಪ್ರಸರಣದಲ್ಲಿ ಕ್ರೈಸ್ತ ಧರ್ಮದ ಪ್ರಭಾವ ಹೆಚ್ಚು. ಇದರಿಂದ ಮತಾಂತರ ಸಾಮಾನ್ಯವಾಗಿದೆ. ಜೇನುಕುರುಬರಲ್ಲಿ ಶಿಕ್ಷಣ ಪಾತ್ರ ಪ್ರಭಾವವಿಲ್ಲದೆ ಅಂಧಾನುಕರಣೆಗೆ ಮುಂದಾಗಿದ್ದಾರೆ. ಆದರೂ ಜಾತಿ ಶ್ರೇಣಿಕರಣದ ವ್ಯವಸ್ಥೆಯಲ್ಲಿ ಜೀವನ ಕ್ರಮ ಬದಲಾಯಿಸಿ ಕೊಳ್ಳಬೇಕಾದಲ್ಲಿ ಶಿಕ್ಷಣ ಮತ್ತು ಭೂಮಿಯ ಹಂಚಿಕೆ ಪ್ರಮುಖ ಪಾತ್ರ ವಹಿಸುತ್ತದೆ. ಸಮುದಾಯಗಳು ಇಲ್ಲಿ ತದ್ವಿವಿರುದ್ಧವಾಗಿವೆ. ಜೇನುಕುರುಬರು ಭೂಮಿ ಹೊಂದುತ್ತಿದ್ದಾರೆ. ಕೊರಗರು ಶಿಕ್ಷಣ ಪಡೆಯುತ್ತಿದ್ದಾರೆ. ಹೀಗಾಗಿ ಸಮುದಾಯಗಳು ಬದಲಾವಣೆಗಳೇನೊ ಮೈಗೂಡಿಸಿಕೊಂಡಿವೆ. ಆದರೆ ಅದು ಶ್ರೇಣಿಕೃತ ತತ್ವದ ವರ್ಣಾಶ್ರಮಕ್ಕೆ ಹತ್ತಿರವಿರುವ ಬದುಕಾಗಿದೆ. ಈ ಕ್ರಮದ ಬದುಕು ಕೇವಲ ಸಾಮಾಜಿಕ ರಚನೆಯಾಗಿರದೆ ಒಂದು ಅರ್ಥವ್ಯವಸ್ಥೆಯಾಗಿ ಉನ್ನತ ಬದುಕು ರೂಪಿಸ ಬಲ್ಲ ಶಕ್ತಿಯೂ ಇದಕ್ಕಿದೆ.

ಜಾತಿ ಆಧಾರಿತ ಉದ್ಯೋಗ ವ್ಯವಸ್ಥೆ: ಭಾರತೀಯ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ಧರ್ಮ ಮತ್ತು ಕಾನೂನು ರೂಪಿಸುತ್ತಿರುವುದನ್ನು ಕಾಣಬಹುದಾದ ಚಿತ್ರಣವಿದೆ. ಇಂದಿನ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಜನಜೀವನವನ್ನು ಕೂಡ ಅವುಗಳೇ ನಿಯಂತ್ರಿಸುತ್ತಿವೆಯೆಂದರೆ, ಯಾರು ಆಶ್ಚರ್ಯ ಪಡಬೇಕಾಗಿಲ್ಲ. " ಕಾನೂನು ಮತ್ತು ಧರ್ಮ ಇವೆರಡು ಶಕ್ತಿಗಳು ಮನುಷ್ಯರ ಜೀವನ-ನಡವಳಿಕೆಯನ್ನು ರೂಪಿಸಿ ನಿಯಂತ್ರಿಸುತ್ತಿವೆ".[೪] ಧರ್ಮವೂ ಕಾನೂನಾಗಿ ಪರಿಣಮಿಸಿದ ಕಾರಣದಿಂದಾಗಿ ಅಂತಹ ಕಾನೂನಿಂದ ಕೆಲವರಿಗೆ ಅನುಕೂಲವಾದರಿಂದಾಗಿ ಜನ ಇಂದಿಗೂ ಅದನ್ನೇ ಪಾಲಿಸುವಂತೆ ಮಾಡಲಾಗಿದೆ. ಯಾರ ತೆಕ್ಕೆಗೂ ಒಳಪಡದಿದ್ದ ಮೂಲನಿವಾಸಿಗಳನ್ನು ಕಾನೂನು ಎಂಬ ಹೆಸರಿನಲ್ಲಿ ಭಾರತದ ಸಾಮಾಜಿಕ ವ್ಯವಸ್ಥೆಯತ್ತ ಕರೆದುತಂದು ನಿಲ್ಲಿಸಿದೆ. ಇಲ್ಲಿನ ಸಾಮಾಜಿಕ ವ್ಯವಸ್ಥೆಯೂ ಮನುಧರ್ಮಶಾಸ್ತ್ರದ ಸವಿಸ್ತಾರವಾದ ವರ್ಣಾಶ್ರಮದೊಂದಿಗೆ ಜೀವನಾರ್ಥಕ ಕುಲ ಕಸುಬು ಎಂಬುದನ್ನು ಪ್ರತಿನಿಧಿಸುವಂತಾಗಿದೆ. ಈ ವ್ಯವಸ್ಥೆಯಲ್ಲಿ ಉದ್ಯೋಗಗಳು ನಿರ್ವಹಿಸಿಕೊಂಡು ಬರಬೇಕು ಎನ್ನುವ ವಾದದಲ್ಲಿ ಘನತೆ ತಂದು ಕೊಡುವುದೆಯಿಲ್ಲ ಎನ್ನಬಹುದು. ಸಾಮಾಜಿಕ ವ್ಯವಸ್ಥೆಗೆ ತಕ್ಕಂತೆ, ಜಾತಿಗೆ ಅನುಗುಣವಾಗಿ ಹಕ್ಕು-ಬಾಧ್ಯತೆಗಳು, ಸೌಕರ್ಯಗಳು, ಅನರ್ಹತೆಗಳು, ದೌರ್ಬಲ್ಯಗಳು ಮತ್ತು ವೃತ್ತಿಗಳು ಹಂಚಿಕೆಯಾಗಿವೆ.ಜೇನುಕುರುಬರಿಗೆ

ವ್ಯವಸಾಯ ಯೋಗ್ಯ ಹಕ್ಕು-ಬಾಧ್ಯತೆಯ ಸೌಕರ್ಯಗಳಿದ್ದರೆ, ಕೊರಗರಿಗೆ ಯಾವುದೇ ಸೌಕರ್ಯಗಳಿಲ್ಲದೆ ಕಷ್ಟದ ಕೀಳು, ಅಗೌರವದ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಒಂದೆಡೆ ವ್ಯವಸಾಯ ಮತ್ತು ಕೂಲಿ ಕಾರ್ಮಿಕರಾದರೆ, ಮತ್ತೊಂದೆಡೆ ನೈರ್ಮಲೀಕರಣ ಮತ್ತು ಕೂಲಿಕಾರ್ಮಿಕರಾಗಿ ದುಡಿಯುವಲ್ಲಿ ಉದ್ಯೋಗ, ಭೂಮಿಯ ಪಾತ್ರದೊಂದಿಗೆ ಜಾತಿ ವ್ಯವಸ್ಥೆಗೆ ತಕ್ಕಂತೆ ಹಂಚಿಕೆಯಾಗಿದೆ.

೨. ಸಮುದಾಯಗಳಲ್ಲಿನ ಸಾಮಾಜಿಕ ನ್ಯಾಯದ ಸಮೀಕ್ಷೆ

ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಸಾಮಾಜಿಕ ನ್ಯಾಯದ ಕುರಿತು ಕಳೆದ ಅರ್ಧ ದಶಕದ ಅವಧಿಯಲ್ಲಿ ಆಗಿರುವ ಅಭಿವೃದ್ಧಿ ಅಥವಾ ಪ್ರಗತಿಯ ಬಗ್ಗೆ ಭಿನ್ನ ಅಭಿಪ್ರಾಯಗಳು ಕಂಡುಬರುತ್ತದೆ. ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಆಗದಿದ್ದರೂ ಪ್ರಗತಿಯೇ ಆಗಿಲ್ಲವೆಂದು ಹೇಳಲಾಗದು, ಹಾಗೇ ಸಮುದಾಯಗಳಲ್ಲಿ ಸಾಮಾಜಿಕ ನ್ಯಾಯ ನೀಡಿಕೆಯಲ್ಲಿ ದೌರ್ಜನ್ಯದ ಪ್ರಕರಣಗಳು ಅಲ್ಲಗಳೆಯುವಂತಿಲ್ಲ. ಸಾಮಾಜಿಕ-ಆರ್ಥಿಕ ನ್ಯಾಯದ ದೃಷ್ಟಿಕೋನದಲ್ಲಿ ಸಂಘರ್ಷಗಳು ನಡೆಯುತ್ತಲೆ ಇವೆ. ಇಂತಹ ಸಂಘರ್ಷಗಳು ಸಮುದಾಯಗಳಲ್ಲಿ ವ್ಯತಿರಿಕ್ತ ಪ್ರಭಾವವು ಬೀರಿರುತ್ತದೆ. ತೀರಾ ಹಿಂದುಳಿದ ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಅತಿ ಮುಖ್ಯವಾಗಿ ಸಾಮಾಜಿಕ ನ್ಯಾಯ ಒದಗಿಸ ಬೇಕಾಗಿರುವುದು. ಸರ್ಕಾರದ ಆದ್ಯ ಕರ್ತವ್ಯ. ಅಗತ್ಯವೆನಿಸಿರುವ ವಿಷಯ ಮತ್ತು ಸನ್ನಿವೇಶಗಳಲ್ಲಿ ಸಾಮಾಜಿಕ ನ್ಯಾಯ ತೀರ ಅವಶ್ಯಕ.

ಸುಧಾರಣೆ ಬಯಸಿರುವ ಸಮಾಜದಲ್ಲಿ ಅಸಮಾನತೆಯನ್ನು ತಿಳಿದ ಸರ್ಕಾರವೂ ಸಹ ಕೆಲವು ಯೋಜನೆಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತ ಮಾಡಿರುವ ಸಂಗತಿಯು ತಿಳಿದು ಬರುತ್ತದೆ. ಇಂತಹ ಕಲ್ಯಾಣ ಕಾರ್ಯಕ್ರಮಗಳು ಸಮುದಾಯಗಳ ಕ್ಷೇಮಾಭಿವೃದ್ಧಿ ದೃಷ್ಟಿಯಿಂದ ಹಿತವೆನಿಸಿರಲೂಬಹುದು. ಹೀಗೆ ಸಾಮಾಜಿಕ-ಆರ್ಥಿಕ ನ್ಯಾಯದ ದೃಷ್ಟಿಯಿಂದ ತೀರಾ ಅಗತ್ಯವಾಗಿರುವ ಅಂಶಗಳ ಆಧಾರದ ಮೇಲೆ ಸಮುದಾಯಗಳಲ್ಲಿ ಆದ ಕ್ಷೇಮಾಭಿವೃದ್ಧಿಯಲ್ಲಿನ ಪ್ರಗತಿಯ ಒಂದು ಚಿತ್ರಣ ಇಲ್ಲಿ ಕೊಡಲಾಗಿದೆ.

ಮೂಲನಿವಾಸಿ ಬುಡಕಟ್ಟುಗಳಾದ ಜೇನುಕುರುಬ ಮತ್ತು ಕೊರಗರ ಎರಡು ಸಮುದಾಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಯೋಜನೆಗಳನ್ನು ಇಲ್ಲಿ ಗುರುತಿಸಲಾಗಿದೆ. ಅಂತಹ ಯೋಜನೆಗಳಲ್ಲಿ ಸರ್ಕಾರವೇ ಗುರುತಿಸಿರುವ ೬ ಯೋಜನೆಗಳು ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾಗಿದೆ. ಅವುಗಳೆಂದರೆ,

೧. ಅಸ್ಪೃಶ್ಯತಾ ನಿವಾರಣೆ

೨. ದೌರ್ಜನ್ಯಕ್ಕೆ ಒಳಗಾದವರಿಗೆ ಪರಿಹಾರ

೩. ಹಿತರಕ್ಷಣಾ ಸಮಿತಿಗಳ ಸದಸ್ಯರಾಗುವುದು.

೪. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ.

೫. ಕಾಲೋನಿಗಳಿಗೆ ದೂರದರ್ಶನ ಸೆಟ್ಟುಗಳ ವಿತರಣೆ

೬. ವಿವಿಧ ಪರೀಕ್ಷೆ ತರಬೇತಿಕಾರ್ಯಕ್ರಮಗಳು

ಈ ಮೇಲಿನ ೬ ವಿಷಯಗಳು ನಗರ ಮತ್ತು ಗ್ರಾಮ ಎಂಬ ವಿಭಜನೆ ಇಲ್ಲದಂತೆ ಎಲ್ಲಾ ಪ್ರದೇಶಗಳಿಗೆ ಅನ್ವಯಿಸುವುದು. ಅರಣ್ಯ ಪ್ರದೇಶದಲ್ಲಿನ ಮತ್ತು ಗ್ರಾಮಗಳಲ್ಲಿನ ಅಶಿಕ್ಷಿತ ಅಥವಾ ಹೆಚ್ಚು ಓದದ ಜನರಿಗೆ ಇವುಗಳ ಬಗ್ಗೆ ಅರಿವು ಕಡಿಮೆ. ಅಸ್ಪೃಶ್ಯತೆ ಸಮಾಜದಲ್ಲಿ ಒಂದು ದೊಡ್ಡ ಪಿಡುಗು. ಇದನ್ನು ಅರಿತ ಸರ್ಕಾರವೇ ದೌರ್ಜನ್ಯಕ್ಕೆ ಒಳಗಾದ ಸಮುದಾಯಗಳ ಜನರಿಗೆ ೨,೦೦,೦೦೦ ಲಕ್ಷ ರೂ.ಗಳ ವರೆಗೂ ಪರಿಹಾರ ನೀಡುವ ಯೋಜನೆಯನ್ನು ಇಲಾಖೆ ರೂಪಿಸಿದೆ. ಪರಿಶಿಷ್ಟ ವರ್ಗಗಳ ಇಲಾಖೆಯ ಮಾಹಿತಿಯಂತೆ ದೌರ್ಜನ್ಯದಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರಧನ ಹಂತಹಂತವಾಗಿ ವಿತರಿಸುತ್ತಿದ್ದರು. ಆದರೆ ವಿತರಣೆಯ ಕ್ರಮ ನ್ಯಾಯ ತೀರ್ಮಾನದಲ್ಲಿ ವಿಳಂಬ ದೋರಣೆಯು ಕಂಡು ಬಂದ ಕಾರಣ ನಿಜಕ್ಕೂ ಸಂತ್ರಸ್ಥರಿಗೆ ಪರಿಹಾರ ಪೂರ್ಣವಾಗಿ ದೊರಕುತ್ತಿದ್ದ ಬಗ್ಗೆ ಉತ್ತಮ ಫಲಿತ ಕಂಡು ಬರದ ಕಾರಣ ಸರ್ಕಾರವು ಪರಿಹಾರ ಧನ ನೀಡುವ ಹಿಂದಿನ ಸರ್ಕಾರಿ ಆದೇಶಕ್ಕೆ ತಿದ್ದುಪಡಿ ತಂದಿತು. ದೌರ್ಜನ್ಯ ಪ್ರಕರಣದಲ್ಲಿ ದೋಷಾರೋಪಣ ಪಟ್ಟಿ ನ್ಯಾಯಲಯಕ್ಕೆ ಸಲ್ಲಿಸಿದ ಕೂಡಲೇ ಶೇ. ೧೦೦ ರಷ್ಟು ಪರಿಹಾರವನ್ನ ವಿತರಿಸುವಂತೆ ವ್ಯವಸ್ಥೆ ಮಾಡಲಾಗಿದೆ."

ಸಾಮಾಜಿಕನ್ಯಾಯದ ಕಲ್ಯಾಣಕಾರ್ಯಗಳು ಮತ್ತು ಸೌಲಭ್ಯಗಳನ್ನು ಪಡೆದ ಬಗ್ಗೆ ಕುಟುಂಬಗಳು ನೀಡಿದ ಕಾರಣಗಳನ್ನು ಅನುಲಕ್ಷಿಸಲಾಗಿದೆ. ಈ ಬಗ್ಗೆ ಮೇಲಿನ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸುವಾಗ ಸಮುದಾಯಗಳು ಮಾಹಿತಿಯನ್ನು ತಮ್ಮದೇ ಆದ ಶೈಲಿಯಲ್ಲಿ ಉತ್ತರಿಸಿ ವಾಸ್ತವಿಕತೆಯ ಅರಿವು ಮಾಡಿಕೊಟ್ಟರು.

ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಸಮುದಾಯವು ಭಿನ್ನ ಹೇಳಿಕೆಗಳು ನೀಡುವುದನ್ನು ಗಮನಿಸಬಹುದು. ಜೇನುಕುರುಬರಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ ಶೇ. ೧೦೦% ಇಲ್ಲ. ಇದು ನಮಗೆ ಅನ್ವಯಿಸುವುದಿಲ್ಲವೆಂತಲೂ, ನಾವು ಗೌಡರಂತೆ ಮಾತ್ರ ಬದುಕುವವರು. ಇದು ಹರಿಜನ, ಹಕ್ಕಿಪಿಕ್ಕಿ, ಸೋಲಿಗರುಗಳಿಗೆ ಮಾತ್ರ ಅನ್ವಯಿಸುತ್ತದೆ. ನಾವು ಅಂತಹ ಜಾತಿಗಳ ಮನೆಯಲ್ಲಿ ನೀರು ಸಹ ಕುಡಿಯುವುದಿಲ್ಲ ಎನ್ನುತ್ತಾರೆ. ಕೊರಗರಲ್ಲಿ ಈ ಬಗ್ಗೆ ನಮ್ಮನ್ನು ಈ ಸಮಾಜ ನೋಡುವುದೇ ಅಸ್ಪೃಶ್ಯರಂತೆ. ನಮ್ಮಲ್ಲಿ ಈ ಬಗ್ಗೆ ಪ್ರಕರಣಗಳು ದಾಖಲಾಗಿವೆ. ಮಹಾನಗರ ಪಾಲಿಕೆಯಲ್ಲಿ ಉದ್ಯೋಗದಲ್ಲಿರುವ ನಾವುಗಳು, ರಸ್ತೆಗಳು ಗುಡಿಸುವುದು ನಿತ್ಯದ ಕೆಲಸ. ನಮ್ಮ ಜೊತೆ ಹರಿಜನ, ಹೊಲೆಯರು, ಡಿ ದರ್ಜೆ ಕೆಲಸ ಮಾಡುತ್ತಾರೆ. ಆದರೆ ಅವರುಗಳು ಎಂದೂ ರಸ್ತೆ ಗುಡಿಸಲು ಬರುವುದಿಲ್ಲ. ನಾವು ಪ್ರತಿಭಟಿಸಿದ್ದಕ್ಕೆ ನಮ್ಮ ಮೇಲೆ ನಿಷೇಧ ಹಾಕುತ್ತಾರೆ. ಅವರುಗಳು ಕಛೇರಿಯಲ್ಲಿಯೇ ಕೆಲಸಮಾಡುತ್ತಾರೆ. ನಾವು ಅವರಿಗಿಂತ

ಕೀಳಾಗಿ ಅಸ್ಪೃಶ್ಯರಂತೆ ಬದುಕಬೇಕಾಗಿದೆ. ಈ ಬಗ್ಗೆ ೬ ಪ್ರಕರಣಗಳು ದಾಖಲಾದರೂ ಪರಿಹಾರವಿಲ್ಲ.

ಕುಂದಾಪುರ ತಾಲ್ಲೂಕಿನ ಕೋಟೇಶ್ವರದಲ್ಲಿ ಈ ಬಗ್ಗೆ ಸವರ್ಣೀಯರು ಮತ್ತು ನಮ್ಮ ನಡುವೆ ಜಗಳ ನಡೆದಿದೆ. ನಾವು ಬಸ್‌ನಿಲ್ದಾಣದಲ್ಲಿ ಹೂವಿನಅಂಗಡಿ ಮಾಡಿ ವ್ಯಾಪಾರ ಮಾಡುತ್ತಿದ್ದರಿಂದ ಮೇಲ್ವರ್ಗದವರು ಪುರಸಭೆಯಲ್ಲಿನ ಅಧಿಕಾರಿಗಳಿಗೆ ಹೇಳಿ ತೊಂದರೆ ಕೊಡುತ್ತಿದ್ದಾರೆ. ಇದರಿಂದ ನಾವು ಹೂವಿನ ವ್ಯಾಪಾರ ಮಾಡಬಾರದು ಎಂದು ತಾಕೀತು ಮಾಡಿದ್ದಾರೆ. ಈ ಬಗ್ಗೆ ಎ.ಸಿ. ರವರಲ್ಲಿ ದೂರು ನೀಡಲಾಗಿದೆ. ಯಾವುದೇ ಪ್ರಯೋಜನವಾಗಿಲ್ಲ. ಈ ಬಗ್ಗೆ ಅಧಿಕಾರಿಗಳು ಯಾವ ಕ್ರಮವನ್ನು ತೆಗೆದು ಕೊಂಡಿಲ್ಲ. ಆದರಿಂದ ನಾವು ಅಂಬೇಡ್ಕರ್ ಸಂಘದ ವತಿಯಿಂದ ಕೊರಗರ ಸಂಘಟನೆಯನ್ನು ಕುಂದಾಪುರ ವ್ಯಾಪ್ತಿಯಲ್ಲಿ ಪ್ರಾರಂಭಮಾಡಿ ಹೋರಾಟ ಮಾಡುತ್ತಿದ್ದೇವೆ ಎನ್ನುತ್ತಾರೆ.

ದೌರ್ಜನ್ಯ ಮತ್ತು ಪರಿಹಾರಕ್ಕೆ ಸಂಬಂಧಿಸಿದಂತೆ ಅನೇಕರು ಎಲ್ಲರೊಡನೆ ಕೂಡಿಕೊಂಡು ಸ್ನೇಹಪರತೆಯಿಂದ ಇರುವುದಾಗಿ ಸಾಮಾನ್ಯವಾಗಿ ತಿಳಿದುಬರುತ್ತದೆ. ಆದರೆ ಒಂದೊಂದು ಕಡೆ ಇಂತಹ ಪ್ರಸಂಗ ಕಂಡುಬರುವುದು ತಿಳಿದುಬರುತ್ತದೆ. ಜೇನುಕುರುಬರ ಕಾಲೋನಿಯಲ್ಲಿ ಈ ಬಗ್ಗೆ ೨ ಪ್ರಕರಣಗಳು ತಿಳಿಸಿದ್ದಾರೆ. ಕೊರಗರಲ್ಲಿ ೪ ಕುಟುಂಬದವರು ದೌರ್ಜನ್ಯದ ಪ್ರಕರಣಗಳಿವೆ ಎಂದು ತಿಳಿಸಿದ್ದಾರೆ. ಸಾಮಾನ್ಯವಾಗಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಮೇಲೆ ದೌರ್ಜನ್ಯದ ಪ್ರಕರಣಗಳು ತುಂಬಾ ಕಡಿಮೆ. ಆದರಲ್ಲಿ ಕರ್ನಾಟಕದ ಮಟ್ಟಿಗೆ ಅಪರೂಪವೆನ್ನಬಹುದು. ಅರಣ್ಯ ಇಲಾಖೆಯನ್ನು ಹೊರತುಪಡಿಸಿದಲ್ಲಿ. ಆದರೆ ಸಾಮಾಜಿಕ ಬದಲಾವಣೆ ಹೊಂದುವಾಗ ಇತರ ಜನವರ್ಗದೊಂದಿಗೆ ಸಂಪರ್ಕಬಂದಾಗ ಬಡಜನರ ದೌರ್ಜನ್ಯ ಪ್ರಕರಣಗಳು ನಡೆಯುವುವು. ಇಂಥದೊಂದು ಪ್ರಕರಣಗಳು ನಮ್ಮ ಅಧ್ಯಯನದಲ್ಲಿ ಕಂಡುಬಂತು ಅದರವಿವರ ಈ ರೀತಿ ಇದೆ.

ಜೇನುಕುರುಬರ ಬಲ್ಲೇನಹಳ್ಳಿ ಕಾಲೋನಿಯಲ್ಲಿರುವ ಎರಡು ಕುಟುಂಬಗಳ ಜನರನ್ನು ಇತರ ಸಮುದಾಯದವರು ದೊಣ್ಣೆಯಿಂದ ಹಲ್ಲೆ ನಡೆಸಿ ತೀವ್ರ ಗಾಯಗೊಳಿಸಿದರೆಂದು ಹೇಳಲಾಯಿತು. ಹಲ್ಲೆಗೆ ಕಾರಣ ಕೂಲಿಗಾಗಿ ಕೊಡುವ ಹಣ. ಶ್ರೀಮಂತ ಭೂಮಾಲೀಕರು ನೀಡುವ ದಿನಕೂಲಿ ೧೫ ರಿಂದ ೨೫ ರೂ.ಗಳು. ಆದರೆ ಪಕ್ಕದ ಎರಡು ಮೂರು ಕಿ.ಮೀ. ದೂರ ಸಾಗಿದಲ್ಲಿ ಬೌದ್ಧ ಲಾಮಗಳು ದಿನಕ್ಕೆ ೪೦ ರಿಂದ ೫೦ ರೂ. ನೀಡಿ ಸಂಜೆ ೪ ಗಂಟೆಗೆ ಮನೆಗೆ ಕಳುಹಿಸಿಕೊಡುತ್ತಿದ್ದರಿಂದ ಕೂಲಿಗಾಗಿ ಅವರಲ್ಲಿ ಕೆಲಸಕ್ಕೆ ಹೋಗುವಾಗ ಶ್ರೀಮಂತ ಭೂಮಾಲೀಕರಲ್ಲಿ ಕೂಲಿ ಕೆಲಸದ ಜನರ ಅಭಾವ ಉಂಟಾದರಿಂದ, ಅಲ್ಲದೇ ಅವರಲ್ಲಿ ನಾವು ಕೂಲಿ ಕೆಲಸಕ್ಕೆ ಹೋಗದಿದ್ದಕ್ಕೆ ಬೆದರಿಕೆ ಬಹಿಷ್ಕಾರ ಹಾಕಿದರು. ಈ ಬಗ್ಗೆ ಪೋಲಿಸರಿಗೂ ದೂರು ಸಲ್ಲಿಸಲಾಯಿತು. ಹಲ್ಲೆ ನಡೆಸಿದವರನ್ನು ಬಂದಿಸಬೇಕೆಂದು ಪೋಲಿಸರಿಗೆ ದೂರು ಕೊಟ್ಟರೂ, ಯಾವುದೇ ಕ್ರಮ ತೆಗೆದುಕೊಳ್ಳದೇ ಪೋಲಿಸರು

ಸಹಕರಿಸಲಿಲ್ಲವೆಂಬುದಾಗಿ ತಿಳಿಸುತ್ತಾರೆ. ಈ ಬಗ್ಗೆ ಶ್ರೀಮಂತ ಭೂಮಾಲೀಕರು ಬಲ್ಲೇನಹಳ್ಳಿ ಕಾಲೋನಿಯ ಜನರನ್ನು ತಮ್ಮ ಗ್ರಾಮಕ್ಕೆ ಕೆಲಸಕ್ಕೆ ಕರೆಯದಂತೆ ಮತ್ತು ಕಾಲೋನಿಯ ಜನರನ್ನು ಯಾರು ಇತರೆ ಕೂಲಿ ಕೆಲಸಕ್ಕೆ ಕರೆಯದಂತೆ, ಆಯಾ ಗ್ರಾಮಗಳಲ್ಲಿ ಕಟ್ಟಳೆ ಮಾಡಿಕೊಂಡಿದ್ದಾರೆ. ಈ ಪ್ರಕರಣವನ್ನು ಇತರರು ಮಧ್ಯಸ್ಥಿಕೆಯಿಂದ ಬಗೆಹರಿಸಿದ್ದಾಗಿ ಹೇಳುತ್ತಾರೆ. ಆದರೆ ನೊಂದ ಸಮುದಾಯದ ಕುಟುಂಬಕ್ಕೆ ಯಾವುದೇ ಪರಿಹಾರ ನೀಡಲಾಗಿಲ್ಲ. ಈ ಬಗ್ಗೆ ಹೆಚ್ಚಿನ ಜನರು ಕೂಲಿಗಾಗಿ ಅವರಲ್ಲಿ ಹೋಗುವುದು ಕಡಿಮೆ. ಇದರಿಂದ ನೊಂದು ಕೊಡಗು ಜಿಲ್ಲೆಗೆ ಉದ್ಯೋಗ ನಿಮಿತ್ತ ವಲಸೆ ಹೋಗಿರುವ ಕುಟುಂಬಗಳನ್ನು ತೋರಿಸುತ್ತಾರೆ. ಅಂತಹ ಕುಟುಂಬಗಳು ಮನೆಗೆ ಹಾಕಿದ ಬೀಗ, ಮುರಿದು ಬೀಳುತ್ತಿರುವ ಹೆಂಚುಗಳು ವಾಸ್ತವನ್ನು ತಿಳಿಸುತ್ತದೆ.

ಕೊರಗರಲ್ಲಿ ದೌರ್ಜನ್ಯದ ಪ್ರಕರಣ ಇಡೀ ಕಾಲೋನಿಯ ಎಲ್ಲಾ ಕುಟುಂಬಗಳಿಗೆ ಅನ್ವಯವಾಗುವಂತೆ ಹಾಕಲಾಗಿದೆ. ಕೊರಗರಲ್ಲಿ ಅಧಿಕಾರಿವೃಂದದವರೇ ಬಹಿಷ್ಕಾರ ಹಾಕಿರುವುದು ತಿಳಿದು ಬರುತ್ತದೆ. ಕಾಲೋನಿಯಲ್ಲಿ ವಿದ್ಯುತ್ ಕಲ್ಪಿಸಲಾದ ಕುಟುಂಬಕ್ಕೆ ೧೦೦೦ರೂ. ದಂಡ ಹಾಕಲಾಗಿದೆ. ಅಧಿಕಾರಿ ವರ್ಗದಲ್ಲಿ ಕೇಳಿದಲ್ಲಿ ನೀವುಗಳು ಪಟ್ಟಣಕ್ಕೆ ಹೋಗಿ ದುಡಿಯುತ್ತಿದ್ದಿರಾ. ಆದರಿಂದ ನೀವು ವಿದ್ಯುತ್ ಬಿಲ್ ಕಟ್ಟಿ ಎಂದು ಧಮಕಿಹಾಕುತ್ತಾರೆ. ಈ ಬಗ್ಗೆ ತಾಲ್ಲೂಕಿನ ಐ.ಟಿ.ಡಿ.ಪಿ.ಯ ಕಾರ್ಯನಿರ್ವಾಹಣಾ ಅಧಿಕಾರಿಯವರಲ್ಲಿ ಈ ಸಂಶೋಧಕ ಹೋಗಿ ವಿಚಾರಿಸಿದಲ್ಲಿ, "ಅಯ್ಯೋ ನೀವು ಅಧ್ಯಯನ ಮಾಡಿಕೊಂಡು ಹೋಗಿ ಈ ವಿಷಯಕ್ಕೆ ತಲೆಹಾಕಬೇಡಿ. ಅವರಿಗೆ ಬುದ್ಧಿ ಕಲಿಸಲಿಕ್ಕೆ ಇದೆ ಎನ್ನುತ್ತಾರೆ. ಇದು ತಾಲ್ಲೂಕಿನ ಪತ್ರಿಕೆಯಲ್ಲಿ ಶ್ರೀ ಗಣೇಶ್‌ರವರು ವರದಿ ಮಾಡಿರುತ್ತಾರೆ. ದಿನಾಂಕ ೦೫/೦೩/೨೦೦೮ರಲ್ಲಿ. ಮತ್ತೊಂದು ಹೂವಿನ ವ್ಯಾಪಾರದ ಸಲುವಾಗಿ ನಡೆಯುತ್ತಿರುವ ಪ್ರಕರಣ.

ಇದೊಂದು ಅಪರೂಪದ ಪ್ರಕರಣ. ಪ್ರಸ್ತುತ ಅಸ್ಥಿತ್ವದಲ್ಲಿರುವ ಬುಡಕಟ್ಟು ಅಭಿವೃದ್ಧಿ ಸಂಸ್ಥೆ ಐ.ಟಿ.ಡಿ.ಎ. ಮತ್ತು ಐ.ಟಿ.ಡಿ.ಸಿ. ಯೋಜನೆಗಳ ಅಧಿಕಾರಿಗಳೇ ಉತ್ತಮ ಕಾರ್ಯಯೋಜನೆ ರೂಪಿಸಿ, ಸಾಧನೆ ಮಾಡುತ್ತಿಲ್ಲ. ಇಲ್ಲಿನ ಅಧಿಕಾರಿಗಳಿಗೆ ಕೆಲಸ ಮಾಡುವ ನೈಪುಣ್ಯತೆಯು ಇಲ್ಲವೆಂದು, ಸಮುದಾಯದ ಬಗ್ಗೆ ಯಾವುದೇ ಜ್ಞಾನವಿಲ್ಲದ ಅಧಿಕಾರಿಯೆಂದು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವವರೇ ತಿಳಿಸುತ್ತಾರೆ. ಈ ಬಗ್ಗೆ ಸರ್ಕಾರ ನೀಡುತ್ತಿರುವ ದೌರ್ಜನ್ಯ ಪ್ರಕರಣದ ಪರಿಹಾರ ಧನ ಸಹಾಯ ನೀಡುವ ಆದೇಶ ನಮ್ಮಲ್ಲಿಲ್ಲ ಎಂದು ಪಟ್ಟಿ ತೋರಿಸುತ್ತಾರೆ. ದ್ವಿತೀಯ ದರ್ಜೆ ಗುಮಾಸ್ತರು, "ಪಟ್ಟಿಯಲ್ಲಿರುವಂತೆ ದೌರ್ಜನ್ಯಕ್ಕೆ ಒಳಗಾದವರಿಗೆ ೧೦೦೦ ರೂ. ದಿಂದ ೨,೦೦,೦೦೦ ರೂ. ವರೆಗೆ ಧನ ಸಹಾಯ ಮಂಜೂರು ಮಾಡುವ ಅಧಿಕಾರ ಜಿಲ್ಲಾಧಿಕಾರಿಗೆ ಇದೆ. ಇದಕ್ಕೆ ನಮ್ಮ ಇಲಾಖೆಯು ವರದಿಯ ಸತ್ಯಾಂಶವನ್ನು ಕಳುಹಿಸಿ ಕೊಡಬೇಕು. ಒಬ್ಬವ್ಯಕ್ತಿ ದೌರ್ಜನ್ಯಕ್ಕೆ ಒಳಗಾಗಿ ಮರಣ ಹೊಂದಿದರೆ

೧,೦೦,೦೦೦ ರೂ. ಮತ್ತು ಕುಟುಂಬದಲ್ಲಿ ದುಡಿಯುವ ಸದಸ್ಯನಾಗಿದ್ದಲ್ಲಿ ೨,೦೦,೦೦೦ ರೂ.ಗಳು ದೌರ್ಜನ್ಯಕ್ಕೆ ಒಳಗಾದ ೩ ತಿಂಗಳಲ್ಲಿ ವಿತರಿಸಬೇಕಾಗಿದೆ.

೫.೧ ದೌರ್ಜನ್ಯ ಪ್ರಕರಣ ನೊಂದ ಸಂತ್ರಸ್ಥರಿಗೆ ನೀಡುತ್ತಿರುವ ಪರಿಹಾರ ವಿವರಗಳು

೧	ಖಾದವಲ್ಲದ ಅಥವಾ ಅಸಹ್ಯಕರವಾದ ಯಾವುದೇ ಯಾವುದೇ ಪದಾರ್ಥವನ್ನು ತಿನ್ನುವುದಕ್ಕೆ ಅಥವಾ ಕುಡಿಯುವುದಕ್ಕೆ ಬಲತ್ಕರಿಸುವುದು (ಪ್ರಕರಣ ೩ (೧)(೧))	ಗಾಯ, ಕಿರುಕುಳ, ಅಪಮಾನ ಸ್ವರೂಪ ಮತ್ತು ತೀವ್ರತೆಯನ್ನಾಧರಿಸಿ ೨೫,೦೦೦ ರೂ.ಗಳು ಅಥವಾ ಅವಕ್ಕೂ ಮೀರಿದ ಮೊಬಗಲನ್ನು ಪರಿಹಾರವಾಗಿ ಕೆಳಕಂಡಂತೆ ನೀಡಲಾಗುವುದು. ೧. ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದಾಗ, ಸಂಪೂರ್ಣ ಪರಿಹಾರವನ್ನು ನೀಡಲಾಗುವುದು.
೨	ಗಾಯ, ಅವಮಾನ,ಕಿರುಕುಳ ನೀಡುವುದು (ಪ್ರಕರಣ ೩(i) (ii))	
೩	ಅಪಮಾನಿಸುವ ಕೃತ್ಯಗಳು(ಪ್ರಕರಣ ೩(i) (iii))	
೪	ಜಮೀನು ಇತ್ಯಾದಿಗಳ ಅಕ್ರಮ ಸ್ವಾಧೀನ ಮತ್ತು ಸಾಗುವಳಿ (ಪ್ರಕರಣ ೩(i)(iv))	ಮೇಲೆ ನಮೂದಿಸಿದ, ನಿಬಂಧನೆಯಂತೆ ರೂ.೨೫,೦೦೦ ಪರಿಹಾರವನ್ನು ಅಪರಾಧದ ಸ್ವರೂಪ ಮತ್ತು ತೀವ್ರತೆಯನ್ನು ಅನುಸರಿಸಿ, ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಸಂಪೂರ್ಣ ಪರಿಹಾರದ ಮೊತ್ತವನ್ನು ನೀಡಲಾಗುವುದು . ಸರ್ಕಾರಿ ವೆಚ್ಚದಲ್ಲಿ ಅವಶ್ಯಕವಾದಲ್ಲಿ ಸ್ವಾಧೀನತೆಯನ್ನು ಪೂರ್ವಸ್ಥಿತಿಗೆ ತರುವುದು.
೫	ಜಮೀನು, ನಿವೇಶನ, ನೀರು ಮುಂತಾದವುಗಳನ್ನು ಆಕ್ರಮಿಸಿಕೊಳ್ಳುವುದು (ಪ್ರಕರಣ ೩(ಅ)(i)(v))	
೬	ಜೀತದ ಕೆಲಸಕ್ಕೆ ಒತ್ತಾಯಿಸುವುದು (ಪ್ರಕರಣ ೩(i)(vi))	ಪ್ರಥಮ ವರ್ತಮಾನ ವರದಿ ಸಲ್ಲಿಸುವಾಗ ಶೇ. ೨೫ ಭಾಗ ಪರಿಹಾರ ಹಾಗು ನ್ಯಾಯಲಯದಲ್ಲಿ ದೋಷರೋಪಣಾ ಪಟ್ಟಿ ಸಲ್ಸಿದ ನಂತರ ಶೇ. ೭೫ರ ಸಂದಾಯ ಹೀಗೆ ಒಟ್ಟಾರೆ ಪ್ರತಿಯೊಬ್ಬರಿಗೆ ರೂ. ೨೫,೦೦೦ ಕ್ಕೆ ಮೀರದಂತೆ.
೭	ಮತಾಧಿಕಾರಕ್ಕೆ ಸಂಬಧ ಪಟ್ಟಂತೆ (ಪ್ರಕರಣ ೩(i)(vii))	ಅಪರಾಧದ ಸ್ವರೂಪ ಮತ್ತು ತೀವ್ರತೆಯನ್ನಾಧರಿಸಿ ದೌರ್ಜನ್ಯಕ್ಕೆ ಒಳಪಟ್ಟ ಪ್ರತಿವ್ಯಕ್ತಿಗೆ ರೂ. ೨೦,೦೦೦ ದವರೆಗೆ ಪರಿಹಾರ ನೀಡಲಾಗುವುದು.
೮	ಸುಳ್ಳಿನ,ಕೃತಿಮ ಅಥವಾ ವಂಚನೆಯ ಕಾನೂನು ವ್ಯವಹಾರ (ಪ್ರಕರಣ ೩(i)(viii))	ವಿಚಾರಣೆ ಪೂರ್ಣಗೊಂಡ ನಂತರ ರೂ. ೨೫,೦೦೦ ಅಥವಾ ವಾಸ್ತವಿಕವಾಗಿ ಮಾಡಿದ ಕಾನೂನು ವೆಚ್ಚ ಅಥವಾ ಹಾನಿ, ಇದರಲ್ಲಿ ಯಾವುದು ಕಡಿಮೆಯೋ ಅದು.
೯	ಸುಳ್ಳು ಅಥವಾ ತಿರುಳಿಲ್ಲದ ಮಾಹಿತಿ ಸೃಷ್ಟಿ (ಪ್ರಕರಣ ೩(1)(ix))	
೧೦	ಅವಮಾನ ಬೆದರಿಕೆ ಮತ್ತು ಅಪಮಾನ (ಪ್ರಕರಣ ೩(1)(x))	ಅಪಮಾನದ ತೀವ್ರತೆ ಮತ್ತು ಸ್ವರೂಪವನ್ನು ಅನುಸರಿಸಿದವರಿಗೆ ದೌರ್ಜನ್ಯಕ್ಕೊಳಪಟ್ಟವರಿಗೆ ರೂ. ೨೫,೦೦೦ ದವರೆಗೆ ಪರಿಹಾರವಾನ್ನು ನ್ಯಾಯಲಯದಲ್ಲಿ ದೋಷರೋಪ ಪಟ್ಟಿಯನ್ನು ಸಲ್ಲಿಸಿದ ನಂತರ ನೀಡಲಾಗುವುದು.
೧೧	ಸಭ್ಯ ಮಹಿಳೆ ಮಾನಭಂಗ (ಪ್ರಕರಣ ೩(1)(x1))	ದೌರ್ಜನ್ಯಕೊಳಪಟ್ಟ ಮಹಿಳೆಯರಿಗೆ ರೂ. ೫೦,೦೦೦ ಪರಿಹಾರ ಈ ಪೈಕಿ, ವೈದ್ಯಕೀಯ ತಪಾಸಣೆಯಲ್ಲಿ

		ದೃಡಪಟ್ಟಾಗ ಶೇ. ೫೦ ಭಾಗ ಶೇ. ೫೦ ಭಾಗ ದೋಷಾರೋಪಣಾ ಪಟ್ಟಿಯನ್ನು ನ್ಯಾಯಲಯದಲ್ಲಿ ಸಲ್ಲಿಸಿದ ನಂತರ ನೀಡಲಾಗುವುದು.
೧೨	ಮಹಿಳೆಯನ್ನು ಲೈಂಗಿಕ ಶೋಷಣೆಗೆ ಒಳಪಡಿಸುವುದು, ಪ್ರಕರಣ ೩(1)(x1))	ದೌರ್ಜನ್ಯ ಕೊಳ್ಳಪಟ್ಟ ಮಹಿಳೆಯರಿಗೆ ರೂ. ೫೦,೦೦೦ ಪರಿಹಾರ ಈ ಪೈಕಿ, ವೈದ್ಯಕೀಯ ತಪಾಸಣೆಯಲ್ಲಿ ದೃಡಪಟ್ಟಾಗ ಶೇ. ೫೦ ಭಾಗ ಹಾಗು ಬಾಕಿ ಶೇ. ೫೦ ಭಾಗ ದೋಷರೋಪಣ ಪಟ್ಟಿಯನ್ನು ನ್ಯಾಯಲಯದಲ್ಲಿ ಸಲ್ಲಿಸಿದ ನಂತರ ನೀಡಲಾಗುವುದು.
೧೩	ನೀರನ್ನು ಮಲಿನಗೊಳಿಸುವುದು (ಪ್ರಕರಣ ೩(1)(xiii))	ರೂ. ೧,೦೦,೦೦೦ ಗಳ ಪರಿಹಾರ ಅಥವಾ ಪೂರ್ಣ ನೀರನ್ನು ಶುದ್ಧೀಕರಣಕ್ಕಾಗಿ ಹಾಗು ಮೊದಲಿನ ಸ್ಥಿತಿಗೆ ತರಲು ಪುನಃ ನಿರ್ಮಾಣಕ್ಕಾಗಿ ತಗಲುವ ಖರ್ಚು, ಹಣ ಸಂದಾಯವನ್ನು ಜಿಲ್ಲಾಡಳಿತವು ಸೂಕ್ತವೆಂದು ಭಾವಿಸುವ ಮಾದರಿಯಲ್ಲಿ ಮಾಡಲಾಗುವುದು.
೧೪	ಸಾಂಪ್ರದಾಯಿಕವಾಗಿ ಇರುವ ದಾರಿಯ ಹಕ್ಕಿನ ನಿರಾಕರಣೆ (ಪ್ರಕರಣ೩(1)(xiv))	ರೂ. ೧,೦೦,೦೦೦ ಗಳ ವರೆಗೆ ಅಥವಾ ಮಾರ್ಗ ಕ್ರಮಿಸುವ ಹಕ್ಕನ್ನು ಪುನರ್ ವ್ಯವಸ್ಥೆ ಮಾಡಲು ಹಾಗು ನಷ್ಟವನ್ನು ತುಂಬಲು ಅವಶ್ಯಕವಾದಷ್ಟು ಸಂಪೂರ್ಣ ಪರಿಹಾರದ ಮೊತ್ತವನ್ನು ನ್ಯಾಯಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭರಿಸಲಾಗುವುದು.
೧೫	ವಾಸಸ್ಥಳವನ್ನು ನಾಶಪಡಿಸುವುದು (ಪ್ರಕರಣ ೩ (1)(xv))	ನಿವೇಶನ, ವಾಸಿಸುವ ವ್ಯವಸ್ಥೆಯನ್ನು ಪುನಃ ಕಲ್ಪಿಸುವುದು ಮತ್ತು ದೌರ್ಜನ್ಯಕ್ಕೆ ಒಳಪಟ್ಟಿದ್ದರೆ ಒಬ್ಬರಿಗೆ ೨೫,೦೦೦ ರೂ ಪರಿಹಾರ ಮತ್ತು ಮನೆಯನ್ನು ನಾಶಪಡಿಸಿದ್ದರೆ, ಸರ್ಕಾರಿ ವೆಚ್ಚದಲ್ಲಿ ಪುನಃ ಮನೆ ನಿರ್ಮಿಸಿಕೊಡುವುದು ಕೆಳಗಿನ ನ್ಯಾಯಲಕ್ಕೆ ಆರೋಪ ಪಟ್ಟಿ ಸಲ್ಲಿಸಿದ ನಂತರ ಪೂರ್ಣ ಹಣ ನೀಡುವುದು.
೧೬	ಭಾರತೀಯ ದಂಡ ಸಂಹಿತೆಯ ಮೇರೆಗೆ ೧೦ ವರ್ಷ ಅಥವಾ ಅದಕ್ಕೂ ಹೆಚ್ಚು ಕಾರಾಗೃಹ ವಾಸಿ ಶಿಕ್ಷೆಗೆ ಒಳಪಟ್ಟ ಘಟನೆ (ಪ್ರಕರಣ ೩ (ii)(v))	ದೌರ್ಜನ್ಯಕ್ಕೆ ಗುರಿಯಾದ ಪ್ರತಿಯೊಬ್ಬ ವ್ಯಕ್ತಿ ಅಥವಾ ಅವಲಂಬಿ ಅಪರಾಧದ ಸ್ವರೂಪ ಮತ್ತು ತೀವ್ರತೆಯನ್ನು ಅನುಸರಿಸಿ ಕನಿಷ್ಠ ರೂ. ೫೦,೦೦೦ ಪಾವತಿ ಅನುಸೂಚಿಯಲ್ಲಿ ನಿರ್ದಿಷ್ಟವಾಗಿ ವ್ಯತ್ಯಾಸದ ಮೊಬಲಗು ತಿಳಿಸಿದ್ದಲ್ಲಿ ಪರಿಹಾರ ಮೊತ್ತವು ವ್ಯತ್ಯಾಸಗೊಳ್ಳುವುದು.
೧೭	ಸರ್ಕಾರಿ ಸೇವಕನಿಂದ ಕಿರುಕುಳ (ಪ್ರಕರಣ ೩ (2)(7))	ಸಂಭವಿಸಿದ ಹಾನಿ ಮತ್ತು ನಷ್ಟಕ್ಕೆ ಪೂರ್ಣ ಪರಿಹಾರ ಮೊತ್ತವನ್ನು ದೋಷಾರೋಪಣ ಪಟ್ಟಿಯನ್ನು ನ್ಯಾಯಲಯಕ್ಕೆ ಸಲ್ಲಿಸಿದ ನಂತರ, ನೀಡಲಾಗುವುದು.
೧೮	ಅಸಮರ್ಥತೆ ದೈಹಿಕ ಮತ್ತು ಮಾನಸಿಕ ಅಸಮರ್ಥತೆಯ ಪರಿಭಾಷೆಯನ್ನು ಭಾರತ ಸರ್ಕಾರದ ಕಲ್ಯಾಣ ಮಂತ್ರಾಲಯ ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆಯಂತೆ ಎ.ಶೇ. ೧೦೦ ರಷ್ಟು ಅಸಮರ್ಥತೆ	ಅಸಮರ್ಥತೆಗೆ ತುತ್ತಾದ ಪ್ರತಿಯೊಬ್ಬನಿಗೆ ಕನಿಷ್ಟ ೧,೦೦,೦೦೦ ರೂ.ಗಳು, ಇದರಲ್ಲಿ ಶೇ. ೫೦ ಭಾಗ ಪ್ರಥಮ ವರ್ತಮಾನ ವರದಿ ಸಲ್ಲಿಸಿದ ನಂತರ, ಬಾಕಿ ರೂ. ೫೦ ಭಾಗ ದೋಷರೋಪಣಾ ಪಟ್ಟಿಯನ್ನು ನ್ಯಾಯಲಯಕ್ಕೆ ಸಲ್ಲಿಸಿದ ನಂತರ ನೀಡಲಾಗುವುದು. ಅಸಮರ್ಥತೆಗೆ ತುತ್ತಾದ ಸಂತ್ರಸ್ತರಲ್ಲಿ ಪ್ರತಿಯೊಬ್ಬರಿಗೂ ಕನಿಷ್ಠ ೨,೦೦,೦೦೦ ರೂ. ಇದರಲ್ಲಿ ಪ್ರಥಮ ವರ್ತಮಾನ ಅಥವಾ ವೈದ್ಯಕೀಯ
ಅ	೧ ದುಡಿಯದೇ ಇರುವ ಸಸ್ಯ ಆಗಿದ್ದಲ್ಲಿ	

ಆ	೨ ಕುಟುಂಬದಲ್ಲಿ ದುಡಿಯುವ ಸದಸ್ಯ ಆಗಿದ್ದಲ್ಲಿ	ಪ್ರಥಮ ವರ್ತಮಾನ ಅಥವಾ ವೈದ್ಯಕೀಯ ಪರೀಕ್ಷೆಯ ನಂತರ ಶೇ. ೫೦ ನ್ಯಾಯಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರದ ಶೇ. ೫೦
ಬಿ	ಅಸಮರ್ಥತೆಯ ಶೇ. ೧೦೦ ಕ್ಕಿಂತ ಕಡಿಮೆಯಾಗಿರುವಾಗ	ದುಡಿಯದೇ ಇರುವ ಸದಸ್ಯನಿಗೆ ರೂ. ೧೫,೦೦೦ ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ದುಡಿಯುವ ಸದಸ್ಯರಿಗೆ ರೂ. ೨೦.೦೦ ಕ್ಕಿಂತ ಕಡಿಮೆ ಇಲ್ಲದಂತೆ ಮೇಲೆ ಎ (೧) ಮತ್ತು ಎ(೨) ರಲ್ಲಿ ತಿಳಿಸಿರುವ ನಿಬಂಧನೆಯಂತೆ ಪರಿಹಾರ ಧನವನ್ನು ಹಂತಗಳಲ್ಲಿ ಪಾವತಿಸುವುದು.
೨೦ ಎ	ಕೊಲೆ / ಸಾವು ದುಡಿಯದೇ ಇರುವ ಕುಟುಂಬದ ಸದಸ್ಯನಾಗಿದ್ದಲ್ಲಿ	ಪ್ರತಿಯೊಂದು ಪ್ರಕರಣದಲ್ಲಿ ಕನಿಷ್ಠ ೧,೦೦,೦೦೦ ರೂ.ಗಳ ಪರಿಹಾರ, ಇದರಲ್ಲಿ ಮರಣೋತ್ತರ ಪರೀಕ್ಷೆಯ ನಂತರ ಶೇ. ೭೫ರಷ್ಟು ಮತ್ತು ದೋಷಾರೋಪಣ ಪಟ್ಟಿ ನ್ಯಾಯಲಯದಲ್ಲಿ ಸಿದ್ಧವಾದ ನಂತರ ಶೇ. ೨೫ರಷ್ಟು ಪ್ರತಿಯೊಂದು ಪ್ರಕರಣದಲ್ಲಿ ಕನಿಷ್ಠ ರೂ. ೨,೦೦,೦೦೦ ಚಗಳ ಪರಿಹಾರ, ಇದರಲ್ಲಿ ಮರಣೋತ್ತರ ಪರೀಕ್ಷೆಯ ನಂತರ ಶೇ. ೭೫ ರಷ್ಟು ಮತ್ತು ನ್ಯಾಯಲಯದಲ್ಲಿ ದೋಷರೋಪಣ ಪಟ್ಟಿ ಸಲ್ಲಿಸಿದ ನಂತರ ಶೇ. ೨೫ರಷ್ಟು.
ಬಿ	ದುಡಿಯುವ ಕುಟುಂಬದ ಸದಸ್ಯನಾಗಿದ್ದಲ್ಲಿ	
೨೧	ಮರಣ, ಕೊಲೆ, ಕೆಗ್ಗೊಲೆ, ಅತ್ಯಾಚಾರ ಸಾಮೂಹಿಕ ಆತ್ಯಾಚಾರ, ಗುಂಪಿನ ಅತ್ಯಾಚಾರ, ಅಸಮರ್ಥತೆ ಮತ್ತು ದರೋಡೆಗೆ ಸಂತ್ರಸ್ತರಿಗೆ	ಮೇಲ್ಕಾಣಿಸಿದ ಬಾಬುಗಳಲ್ಲಿ ಸೂಚಿಸಿದಂತಹ ಪರಿಹಾರ ಮೊತ್ತವನ್ನು ಪಾವತಿಸುವುದರ ಮೂಲಕ ದೌರ್ಜನ್ಯ ನಡೆದ ದಿನದಿಂದ ೩ ತಿಂಗಳ ಒಳಗಾಗಿ ಪರಿಹಾರವನ್ನು ಈ ಕೆಳಗಿನಂತೆ ನೀಡುವುದು. ೧. ಪ.ಜಾತಿ / ಬುಡಕಟ್ಟುಗಳ ಮೃತನ ವಿಧವೆಗೆ ಮತ್ತು ಇತರೆ ಅವಲಂಬಿತರಿಗೆ ಪ್ರತಿ ತಿಂಗಳು ರೂ. ೧೦೦೦.೦೦ ಪಿಂಚಣಿ ಅಥವಾ ಮೃತನ ಕುಟುಂಬದ ಒಟ್ಟು ಸದಸ್ಯನಿಗೆ ಉದ್ಯೋಗ ಅಥವಾ ಕೃಷಿ ಜಮೀನು, ಒಂದು ಮನೆ ಹಂಚಿಕೆ ಅವಶ್ಯವಾದಲ್ಲಿ ಖರೀದಿಮಾಡಿ ನೀಡುವುದು. ೨. ದೌರ್ಜನ್ಯಕ್ಕೆ ಒಳಗಾದವರ ಮಕ್ಕಳಿಗೆ ಶಿಕ್ಷಣ ಮತ್ತು ಅವರ ಪೋಷಣೆಯ ಪೂರ್ಣ ವೆಚ್ಚ ಮಕ್ಕಳನ್ನು ಆಶ್ರಮ ಶಾಲೆಗೆ ಅಥವಾ ವಸತಿ ಶಾಲೆಗಳಿಗೆ ಸೇರಿಸಬಹುದು. ೩. ೨ ತಿಂಗಳ ಅವಧಿಗೆ ಪಾತ್ರೆ, ಅಕ್ಕಿ, ಬೇಳೆ, ಗೋಧಿ,
೨೨	ಮನೆಗಳ ಸಂಪೂರ್ಣ ನಾಶ/ ಸುಟ್ಟ ಮನೆಗಳು.	ಧಾನ್ಯ ಇತ್ಯಾದಿಗಳ ಪೂರೈಕೆ. ಸರ್ಕಾರಿ ವೆಚ್ಚದಲ್ಲಿ ಇಟ್ಟಿಗೆ ಕಲ್ಲು ಕಟ್ಟಡದಿಂದ ಮನೆ ನಿರ್ಮಿಸಿಕೊಡುವುದು ಅಥವಾ ಒದಗಿಸುವುದು.[೬]

(ಆಧಾರ : ಜಿಲ್ಲಾ ಸಮಾಜಕಲ್ಯಾಣ ಇಲಾಖೆ ಮಾರ್ಗಸೂಚಿ) .

ಈ ಬಗ್ಗೆ ಪರಿಹಾರ ಪಡೆದ ನಿದರ್ಶನಗಳು ಒಂದು ತಿಳಿದು ಬರುವುದಿಲ್ಲ. ಹೆಚ್ಚಿನವರು ನಮಗೆ ಕೆಲಸ/ಕೂಲಿ ದೊರೆಯುವುದಿಲ್ಲ. ಆದನ್ನೇ ನಂಬಿದ್ದೇವೆ ಈಗ ನಾವುಗಳು ಹೇಳಿಕೆಯನ್ನು ನೀಡಿದ್ದೆ ಆದರೆ, ನಾವು ಉಪವಾಸದಿಂದ ಕೂಡಬೇಕು. ಅಂತದ್ದೇನು ಇಲ್ಲ ಬಿಡಿ

ಸಾರ್ ಎಂದು ನೊಂದು ನುಡಿಯುತ್ತಾರೆ. ಇಲ್ಲಿನ ಪುನರ್‌ವಸತಿ ಆದಾಯ ಮತ್ತು ಉದ್ಯೋಗ ಸೃಷ್ಟಿ ಮಾಡದೇ, ಶೋಷಣೆಯಲ್ಲಿ ಸಿಲುಕಿಸಿರುವುದು ಇದರಿಂದ ತಿಳಿಯಬಹುದು.

ಅಂತರ್ಜಾತಿವಿವಾಹದ ಬಗ್ಗೆ ಎರಡು ಸಮುದಾಯಗಳಲ್ಲಿ ವಿಚಾರಿಸಿದಾಗ ಸಾಮಾನ್ಯವಾಗಿ ತಾವು ನಮ್ಮ ಜನಗಳಲ್ಲಿಯೇ ವಿವಾಹವಾಗುವುದು ರೂಡಿ. ಇದನ್ನೇ ಅನುಸರಿಸುತ್ತೇವೆ. ಇದು ನಮ್ಮ ಸಾಂಪ್ರದಾಯಿಕ ಕಟ್ಟುಪಾಡು ಇದನ್ನು ಬಿಡಲಾಗುವುದಿಲ್ಲ. ಆದರೆ ವಿದ್ಯಾವಂತರು ಸರ್ಕಾರಿ ನೌಕರರು ಬೇರೆ ಬೇರೆ ಜಾತಿ ಧರ್ಮದವರ ಜೊತೆಗೆ ವಿವಾಹವಾಗಿರುವವರು ನಮ್ಮಲ್ಲಿ ನೆಲೆಸಿರುವವರು. ಈ ಬಗ್ಗೆ ಜೇನುಕುರುಬರಲ್ಲಿ ೩ ಪ್ರಕರಣಗಳು ಮತ್ತು ಕೊರಗರಲ್ಲಿ ೭ ಪ್ರಕರಣಗಳು ಕಂಡುಬರುತ್ತವೆ. ಜೇನುಕುರುಬರ ಒಂದು ಪ್ರಕರಣ ತಮ್ಮ ಕಾಲೋನಿಯಲ್ಲಿಯೇ ಇರುವ ಬೆಟ್ಟಕುರುಬರ ಹುಡುಗಿಯನ್ನು ವಿವಾಹವಾದದ್ದು. ಇದು ಒಂದು ರೀತಿಯ ಅಂತರ್‌ಬುಡಕಟ್ಟು ವಿವಾಹ. ಇಲ್ಲಿ ಯಾವುದೇ ಪರಿಹಾರಧನ ನೀಡುವುದು ಕಾಯಿದೆಯಲಿಲ್ಲ.

ನಾಗಾಪುರ ಘಟಕ ೫ ರಲ್ಲಿ ಜೇನುಕುರುಬ ಯುವಕನೊಬ್ಬ ಅರಣ್ಯ ಇಲಾಖೆಯ ವಾಚರ್ ಉದ್ಯೋಗಲ್ಲಿರುವನು. ಒಬ್ಬ ವಕ್ಕಲಿಗರ ಯುವತಿಯನ್ನು ಪ್ರೀತಿಸಿವಿವಾಹವಾದ. ಇನೊಬ್ಬ ಜೇನುಕುರುಬರ ಯುವಕ ಪರಿಶಿಷ್ಟ ಜಾತಿಯ ಮಹಿಳೆಯನ್ನು ಪ್ರೀತಿಸಿ ಮದುವೆಯಾದ. ಈ ಪ್ರಕರಣದಿಂದ ಗ್ರಾಮದಲ್ಲಿ ಸಂಘರ್ಷ ಉಂಟಾಗಿ ಇಬ್ಬರು ಮೈಸೂರಿನ ಒಡನಾಡಿ ಸಂಸ್ಥೆಯ ಆಶ್ರಯ ಪಡೆದು ನಗರದಲ್ಲಿ ವಾಸಿಸುತ್ತಿದ್ದಾರೆ. ಈ ಬಗ್ಗೆ ಸಂಸ್ಥೆ ಹೋರಾಟ ಮಾಡಿ. ಅಸ್ಪ್ರುಶ್ಯತಾ ನಿವಾರಣೆ ಯೋಜನೆಯಂತೆ ದಂಪತಿಗಳಿಗೆ ಪರಿಹಾರಧನ ೨೫,೦೦೦ ರೂ. (೧೨,೫೦೦ ರೂ . ನಗದು – ಉಳಿದ ೧೨,೫೦೦ ರೂ. ರಾಷ್ಟ್ರೀಯ ಉಳಿತಾಯ ಪತ್ರ) ದೊರಕಿಸಿ ಕೊಡಲಾದ ಒಂದೇ ಒಂದು ಪ್ರಕರಣವಾಗಿದೆ.

ಕೊರಗರಲ್ಲಿ ಈ ಬಗ್ಗೆ ೪ ಪ್ರಕರಣಗಳಿವೆ. ಕ್ರೈಸ್ತಧರ್ಮಿಯರನ್ನು ೩ ಪ್ರಕರಣಗಳಲ್ಲಿ ತಮ್ಮದೇ ಧರ್ಮದಲ್ಲಿ ಅಂತರ್‌ಜಾತಿವಿವಾಹವಾಗಿರುವುದು ಕಾಣಬಹುದು. ಮಂಗಳೂರು ನಗರದ ಕೋಡಿಕಲ್‌ನ ಇಬ್ಬರು ವಿಧ್ಯಾರ್ಥಿಗಳು ಪ್ರೀತಿಸಿ ವಿವಾಹವಾದ ಬಗ್ಗೆ ಅವರ ಕುಟುಂಬದವರೇ ಮಾಹಿತಿ ನೀಡುತ್ತಾರೆ. ಉಳಿದಂತೆ ಉಡುಪಿ ತಾಲ್ಲೂಕಿನಲ್ಲಿ ಒಂದು ಪ್ರಕರಣದಲ್ಲಿ ಮೇಲ್ವರ್ಗದ ಯುವತಿಯನ್ನು ಮಧುವೆಯಾದ ಬಗ್ಗೆ ತಿಳಿದುಬರುತ್ತದೆ. ನಾಯಕರ ಯುವತಿಯನ್ನು ಕೊರಗರ ಯುವಕ ರೈಲ್ವೆ ಇಲಾಖೆಯಲ್ಲಿ ಕೆಲಸದಲ್ಲಿರುವ ವಿವಾಹವಾಗಿರುವುದು ತಿಳಿದು ಬರುತ್ತದೆ. ಇನ್ನುಳಿದಂತೆ ೪ ಪ್ರಕರಣಗಳು ಕ್ರೈಸ್ತ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ಯುವಕರು ಮತಾಂತರ ದೀಕ್ಷೆ ಪಡೆದು ಕ್ರೈಸ್ತಧರ್ಮದಂತೆ ವಿವಾಹವಾಗಿರುವರುಗಳಾಗಿದ್ದಾರೆ. ಇವರುಗಳಲ್ಲಿ ೩ ಜನರು ಸಂಪೂರ್ಣ ಕ್ರೈಸ್ತ ಧರ್ಮೀಯರಾಗಿ ಗುರುತಿಸಿಕೊಳ್ಳುತ್ತಿದ್ದರೆ, ಒಬ್ಬ ಯುವಕ ಕಾಲೋನಿಯಲ್ಲಿನ ತನ್ನ ಕುಟುಂಬದ ಸದಸ್ಯರ ಜೊತೆಗೆ ವಾಸಿಸುತ್ತಿದ್ದಾನೆ. ಇವರ ಕುಟುಂಬದಲ್ಲಿ ಕ್ರೈಸ್ತಧರ್ಮ ಮತ್ತು ಹಿಂದೂ

ದೇವರುಗಳ ಪೂಜೆ ಮಾಡುತ್ತಿರುವುದು ಒಂದು ವಿಶೇಷ. ಕೊರಗರ ಸಮಾಜ ಸಾಮಾನ್ಯವಾಗಿ ಇಂತಹ ಪ್ರಕರಣಗಳನ್ನು ಉತ್ತೇಜಿಸುವುದಿಲ್ಲ ಎನ್ನುತ್ತಾರೆ ಕಾಲೋನಿಯ ಮುಖ್ಯಸ್ಥ. ಇದೊಂದು ಅಪರೂಪವೆಂದರೂ, ಅಂತರಜಾತಿ ಧರ್ಮಾಂತರದ ವಿವಾಹದ ಪ್ರಕರಣಗಳು ಕೊರಗರಲ್ಲಿ ಸಾಮಾನ್ಯ ಎನ್ನುತ್ತಾರೆ.

ಹಿತರಕ್ಷಣಾ ಸಮಿತಿ ಸದಸ್ಯತ್ವ: ಎರಡು ಸಮುದಾಯಗಳಲ್ಲಿ ಹಿತರಕ್ಷಣೆಯ ವಿಷಯವಾಗಿ ಜನರಿಗೆ ಅಷ್ಟೊಂದು ಮಾಹಿತಿ ತಿಳಿದಿಲ್ಲ. ಸಾಮಾನ್ಯವಾಗಿ ಈ ಜನರು ಈ ಬಗ್ಗೆ ಹೇಳುವಾಗ ತಮಗೆ ಗೊತ್ತಿಲ್ಲವೆಂದೇ ಅಭಿಪ್ರಾಯ ನೀಡುತ್ತಾರೆ. ಆದರೆ ತಮ್ಮಲ್ಲಿರುವ ಕೆಲವು ಸಮಿತಿ ಸದಸ್ಯರ ಬಗ್ಗೆ ತಿಳಿಸಿದ್ದಾರೆ. ಬಹುತೇಕರು ಗಿರಿಜನ ಸೊಸೈಟಿಯ ಸದಸ್ಯತ್ವ ಪಡೆಯದಿರುವುದು ತಿಳಿದುಬರುತ್ತದೆ. ಒಂದು ಕಾಲೋನಿಯಲ್ಲಿ ಎರಡು ಅಥವಾ ಮೂರು ಕುಟುಂಬಗಳು ಸದಸ್ಯರಾಗಿದ್ದಾರೆ. ಈ ಬಗ್ಗೆ ಒಟ್ಟಾರೆ ೨೩ ಜೇನುಕುರುಬರ ಕುಟುಂಬಗಳು ಗಿರಿಜನ ಸೊಸೈಟಿಯ ಸದಸ್ಯರುಗಳಾಗಿದ್ದಾರೆ. ಜೇನುಕುರುಬರಲ್ಲಿ ಹಿತರಕ್ಷಣ ಸಮಿತಿ ಇಲ್ಲಿ ಕಾರ್ಯರೂಪದಲ್ಲಿಲ್ಲವೆನ್ನಬಹುದು. ಅನೇಕ ವಿದ್ಯಾವಂತರು ಇತರೆ ಸಂಘಗಳನ್ನು ಸ್ಥಾಪಿಸಿಕೊಂಡು, ಇಲ್ಲವೇ ಸ್ವಯಂ ಸೇವಾ ಸಂಘಟನೆಯಲ್ಲಿ ಕೆಲಸಮಾಡುವವರಾಗಿದ್ದಾರೆ. ಜೇನುಕುರುಬರ ಸಂಘಟಿತ ಹೋರಾಟವನ್ನು ಮುಂದಿನ ಅಧ್ಯಾಯವಾದ ಅಭಿವೃದ್ಧಿಯ ದಿಕ್ಕಿನಲ್ಲಿ ವಿಶ್ಲೇಷಿಸಲಾಗಿದೆ.

ಕೊರಗರಲ್ಲಿ ಈ ಬಗ್ಗೆ ಹಿತರಕ್ಷಣಾ ಸಮಿತಿ ಯಾವುದು ಇಲ್ಲ. ನಮ್ಮಲ್ಲಿ ಸಂಘಟನೆಗಳಿಗೆ ಸಂಘವಿದೆ. ಅವುಗಳ ಮೂಲಕ ವಿದ್ಯಾವಂತ ಯುವಕರು ಹೋರಾಟ ಮಾಡುತ್ತಾರೆ. ಅವರ ಜೊತೆಯಲ್ಲಿ ನಾವು ಕೆಲಸಮಾಡುವುದಾಗಿ ಹೇಳುತ್ತಾರೆ.

ದೂರದರ್ಶನ ಸೆಟ್ಟುಗಳ ವಿತರಣೆ: ಈ ಬಗ್ಗೆ ಜೇನುಕುರುಬರಲ್ಲಿ ವಿಚಾರಮಾಡಿದಲ್ಲಿ ಈ ಸೌಲಭ್ಯವನ್ನು ಸರ್ಕಾರ ಕೊಟ್ಟಿಲ್ಲ. ಎಷ್ಟೋ ಜನರು ನಮಗೆ ಗೊತ್ತಿಲ್ಲ ಎಂದು ತಿಳಿಸಿದರು. ಜನರನ್ನು ಸುಶಿಕ್ಷಿತರಾಗಿ ಮಾಡುವಲ್ಲಿ ದೂರದರ್ಶನ ಸೆಟ್ಟುಗಳ ನೀಡಿಕೆ ಜನರಲ್ಲಿ ಹೆಚ್ಚಿನ ಅರಿವು, ಜ್ಞಾನ ಮೂಡಿಸುತ್ತದೆ ಎನ್ನಬಹುದು. ಪರಿಶಿಷ್ಟಪಂಗಡದ ನಿಗಮದಲ್ಲಿ ಈ ಬಗ್ಗೆ ವಿಚಾರಿಸಿದಲ್ಲಿ ಟಿ.ವಿ. ಸೆಟ್ಟುಗಳ ಜೊತೆಗೆ, ಮೇಜು, ಕುರ್ಚಿಗಳು, ಬೀರು (ಕಬ್ಬಿಣದ) ಅಲ್‌ಮೇರಾ) ನೀಡುತ್ತವೆ ಎಲ್ಲಿ ಸಮುದಾಯಭವನವಿದೆ ಅಲ್ಲಿ ಎನ್ನುತ್ತಾರೆ.

ಸಾಮಾನ್ಯವಾಗಿ ಜೇನುಕುರುಬರ ಕಾಲೋನಿ, ಗ್ರಾಮಗಳು, ದೂರ, ದೂರ ಇರುವುವು. ಅಂತಹ ಸ್ಥಳಗಳಲ್ಲಿ ಸಮುದಾಯ ಭವನದ ಹೆಸರು ಕೇಳಲು ಸಾಧ್ಯವಿಲ್ಲ. ಕೆಲವೊಂದು ಕಾಲೋನಿಗಳಲ್ಲಿ ವಿದ್ಯಾವಂತ ಪದವೀದರರೇ ಹೋರಾಟ ಮಾಡಿ ಆಶ್ರಮಶಾಲೆಯಲ್ಲಿಯೇ ದೂರದರ್ಶನ ಸೆಟ್ಟನ್ನು ನೋಡುವ ಸೌಭಾಗ್ಯಪಡೆದಿದ್ದಾರೆ. ೫ ಕಾಲೋನಿಗಳಿಗೆ ನೀಡಲಾದ ದೂರದರ್ಶನ ಸೆಟ್ಟು ಒಂದು ಕಾಲೋನಿಯಲ್ಲಿ ನೋಡಲು ಸಾಧ್ಯವಿದೆ. ಇಲ್ಲಿನ ಸೌಲಭ್ಯಗಳಿಗೆ ಸಂಘಟನೆ ಮತ್ತು ಜಿಲ್ಲಾ ಪಂಚಾಯಿತಿಯ ಸದಸ್ಯರು ಅತ್ಯಂತ ಉಪಯುಕ್ತವಾದ ನೆರವು

ನೀಡಿದ ಫಲವಾಗಿದೆ. ಈ ಜನರು ದೂರದರ್ಶನ ಸೆಟ್ಟನ್ನು ನೋಡಲು ಇಚ್ಛಿಸುತ್ತಾರೆ. ಅಲ್ಲದೆ ಅದು ಸದಾಕಾಲವೂ ಒಳ್ಳೆಯ ಸ್ಥಿತಿಯಲ್ಲಿದ್ದರೆ ನೋಡುಗರಿಗೆ ಆಸಕ್ತಿ ಹುಟ್ಟುತ್ತದೆ. ದೂರದರ್ಶನ ಸೆಟ್ಟಿನ ಬಗ್ಗೆ ಇಲ್ಲಿನ ಎಲ್ಲಾ ಕಾಲೋನಿಗಳು ಇಷ್ಟ ವ್ಯಕ್ತಪಡಿಸುತ್ತಾರೆ. ಎರಡು ಕಾಲೋನಿಗಳಲಿದ್ದ ದೂರದರ್ಶನ ಸೆಟ್ಟುಗಳು ಪಂಚಾಯಿತಿ ಸದಸ್ಯರ ಮನೆ ಸೇರಿವೆ. ಕಾರಣ ಕೇಳಿದರೆ ರಿಪೇರಿಯಾಗಿದೆ ಎಂದು ತಿಳಿಸುತ್ತಾರೆ. ಸುಮಾರು ವರ್ಷಗಳೇ ಕಳೆದರೂ ದೂರದರ್ಶನ ಸೆಟ್ಟುಗಳು ಮನೆಯಿಂದ ಹೊರಬರಲಿಲ್ಲ ಎನ್ನುತ್ತಾರೆ.

ಕೊರಗರ ೪ ಕಾಲೋನಿಗಳಲ್ಲಿ ಈ ಸೌಲಭ್ಯವನ್ನು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಬರುತ್ತಿರುವುದು ಕಂಡುಬರುತ್ತದೆ. ನಗರದಲ್ಲಿರುವ ಕೋಡಿಕಲ್ ಅಂಬೇಡ್ಕರ್ ಸಂಘ, ಊರ್ವ ಸರ್ಕಲ್ ಕೊರಗ ಅಭಿವೃದ್ಧಿ ಸಂಘ, ಮತ್ತು ಉಡುಪಿ ಜಿಲ್ಲೆಯ ಅಂಬೇಡ್ಕರ್ ಯುವಕ ಸಂಘ ಹಾಗೂ ಕ್ರೀಡಾ ಹ್ಯಾಭಿ ಕ್ಲಬ್, ಕುಂದಾಪುರ ತಾಲ್ಲೂಕಿನ ಅಂಬೇಡ್ಕರ್ ಕೊರಗ ಕ್ಷೇಮಾಭಿವೃದ್ಧಿ ಸಂಘಗಳಲ್ಲಿ ಸುಮಾರು ೬ ವರ್ಷಗಳಿಂದ ದೂರದರ್ಶನ ಸೆಟ್ಟುಗಳ ನಿರ್ವಹಣೆ ಮಾಡಿಕೊಂಡು ಬರಲಾಗುತ್ತಿದೆ. ಈ ಬಗ್ಗೆ ೩ ಕೇಂದ್ರಗಳಲ್ಲಿ ಸಮುದಾಯಭವನ ನಿರ್ಮಾಣಮಾಡಲಾಗಿದೆ. ಸಮುದಾಯ ಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ಸಂಘಟನೆ, ವಾಚನಾಲಯವನ್ನು ನಿರ್ಮಿಸಲಾಗಿದೆ. ಆದರೂ ಎಲ್ಲಾ ಕಾಲೋನಿಗಳು ಈ ಸೌಲಭ್ಯ ಪಡೆದಿಲ್ಲವೆನ್ನಬಹುದು. ಆದರೆ ಇಂಥ ಸೌಲಭ್ಯಕ್ಕೆ ಸಮುದಾಯಭವನ ವಿದ್ಯುತ್ ಸೌಕರ್ಯ ಕಾಲೋನಿಯಲ್ಲಿರಬೇಕು. ಸೆಟ್ಟನ್ನು ಸರ್ಕಾರವು ಒದಗಿಸಿರಬೇಕು. ಅದಲ್ಲದೆ ಅದನ್ನೂ ರಕ್ಷಿಸಲು ಪಂಚಾಯಿತಿ ಅಥವಾ ಯಾವುದಾದರೂ ಸಂಸ್ಥೆ ಸಹಕಾರ ನೀಡಬೇಕು.

ದುರಸ್ತಿಯನ್ನು ಮಾಡಿಸಲು ಸರ್ಕಾರದ ಕಲ್ಯಾಣ ಕಾರ್ಯದಲ್ಲಿ ಹಣದ ಸೌಕರ್ಯ ಅಳವಡಿಸಲಾಗಿದೆ. ಜೇನುಕುರುಬರ ವಾರಂಚಿ ಮತ್ತು ದೊಡ್ಡಿಯಲ್ಲಿ ದೂರದರ್ಶನ ಸೆಟ್ಟು ಕೆಟ್ಟುಹೋಗಿದೆ ಎಂದು ಸುಮಾರು ವರ್ಷಗಳಿಂದ ಟಿ.ವಿ. ಸೆಟ್ಟುಗಳು ಪಂಚಾಯತ್ ಸದಸ್ಯರ ಮನೆಗೆ ಮೇಜಿನ ಸಮೇತ ಹೋಗಿದ್ದು ಮತ್ತೆ ಬರಲೇಇಲ್ಲವೆಂದು ಈ ಬಗ್ಗೆ ಕೇಳಿದಲ್ಲಿ ಯಾರು ಗಮನ ಹರಿಸುವುದಿಲ್ಲ, ಎಂಬ ವಿಷಯ ಜನರಲ್ಲಿ ಕೇಳಿಬರುತ್ತದೆ . ಎಲ್ಲಿ ಕೇಳಿದರೆ ಕೆಲಸ ಸಿಗುವುದಿಲ್ಲ, ಬಹಿಷ್ಕಾರ ಹಾಕುತ್ತಾರೆ ಎಂಬ ಭಯದಿಂದ ಜನಸಮುದಾಯ ನೆಲೆನಿಂತಿದೆ. ಸಂಬಂಧಪಟ್ಟ ಕ್ಷೇತ್ರ ಇಲಾಖೆಯವರು ಚುನಾಯಿತ ಪ್ರತಿನಿಧಿ, ಮತ್ತು ಅಧಿಕಾರಿಗಳು ಹೆಚ್ಚಿನ ಆಸಕ್ತಿವಹಿಸಿ ನ್ಯಾಯ ದೊರಕಿಸಿ ಕೊಟ್ಟರೆ ,ಸಮುದಾಯಗಳಿಗೆ ತುಂಬಾ ಉಪಯುಕ್ತಯೋಜನೆ ಎಂದು ಹೇಳಿದರೆ ತಪ್ಪಾಗಲಾರದು.

ಕಾನೂನು ಪದವೀಧರರಿಗೆ ಆಡಳಿತದಲ್ಲಿ ತರಬೇತಿ: ಕಾನೂನು ಪದವಿ ಪಡೆದ ಸಮುದಾಯದ ಯುವಕ ಯುವತಿಯರಿಗೆ ನ್ಯಾಯಾಂಗ ಆಡಳಿತದಲ್ಲಿ ಹೆಚ್ಚಿನ ಅನುಭವ ಹಾನು ಜ್ಞಾನ ಪಡೆಯಲು ಅನುಕೂಲವಾಗುವಂತೆ ಇಲಾಖೆಯು ತರಬೇತಿ ಕಾರ್ಯಕ್ರಮ ರೂಪಿಸಿದೆ. ಈ ತರಬೇತಿಯ ಅವಧಿ ೪ ವರ್ಷ. ತರಬೇತಿಯ ಅವಧಿಯಲ್ಲಿ ಪ್ರತಿವರ್ಷ ಪ್ರತಿ ಅಭ್ಯರ್ಥಿಗೆ

ಮಾಸಿಕ ೧೦೦೦-೦೦ ರೂ.ಗಳ ಶಿಷ್ಯವೇತನ ನೀಡಲಾಗುತ್ತದೆ. ಅಲ್ಲದೆ ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಕೈಗೊಳ್ಳಲು ಹಾಗು ಬಾರ್ ಕೌನ್ಸಿಲ್‌ನಲ್ಲಿ ತಮ್ಮ ಹೆಸರು ನೊಂದಾಯಿಸಿಕೊಳ್ಳಲು ಧನಸಹಾಯವಾಗಿ ೫೦೦೦-೦೦ ರೂ.ಗಳನ್ನು ನೀಡಲಾಗುತ್ತದೆ. ಈ ಯೋಜನೆಗೆ ಆಯ್ಕೆ ಹೊಂದಲು ಇರುವ ಮಾನದಂಡಗಳನ್ನು ಪರಿಗಣಿಸಿದಲ್ಲಿ ಬಹುಶಃ ಯೋಜನೆಯು ಹೆಸರಿಗೆ ಮಾತ್ರ ರೂಪಿಸಿರುವುದಾಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಅತಿ ಕಡಿಮೆ ಪ್ರಮಾಣದ ಶಿಕ್ಷಣದ ಪ್ರಸರಣವುಳ್ಳ ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಕಾನೂನು ತರಬೇತಿ ಪಡೆದ ಫಲಾನುಭವಿಗಳು ಇಲ್ಲವೇ ಇಲ್ಲ ಎನ್ನಬಹುದು. ಸಮೀಕ್ಷೆ ಮಾಡಲಾದ ಒಟ್ಟು ೧೦೮೦ ಕುಟುಂಬಗಳಲ್ಲಿ ಕಾನೂನು ಪದವಿ ಪಡೆದ ಒಬ್ಬ ಸದಸ್ಯ ಕಂಡುಬರಲಿಲ್ಲ. ಹೀಗಾಗಿ ಈ ಯೋಜನೆಯೂ ವೈಫಲ್ಯವಾಗಿದೆ. ತರಬೇತಿಪಡೆಯಲು ಫಲಾನುಭವಿಗಳೇ ಇಲ್ಲದ ಹೊರತು, ಯೋಜನೆಯ ಸದುಪಯೋಗಪಡಿಸಿಕೊಳ್ಳುವವರು ಯಾರು?. ಇಂತಹ ಅಸಮರ್ಪಕಯೋಜನೆಯ ಬದಲಿಗೆ ವೃತ್ತಿ ತರಬೇತಿಯಂತ ಯೋಜನೆಗಳಿಗೆ ಹಣಕಾಸು ವರ್ಗಾಂತರ ಮಾಡಿದರೆ ಉತ್ತಮಎನ್ನಬಹುದು. ಇಲಾಖೆಯು ಯೋಜನೆಯನ್ನು ಅರಿತುಕೊಂಡ ಮೇಲೂ ಸುಮ್ಮನೆ ಯೋಜನೆಗೆ ಅನುದಾನದ ಹಣವನ್ನು ವ್ಯಯಿಸುತ್ತಿರುವುದು ಯೋಜನಾಕರ್ತೃಗಳ ಪರಮಾಧಿಕಾರವೇ ಎನ್ನಬಹುದು. ಈ ಯೋಜನೆಯ ಅನುದಾನವನ್ನು ಸಮುದಾಯಗಳಲ್ಲಿನ ಪಿ.ಯು.ಸಿ. ಕಲಿತ ವಿಧ್ಯಾರ್ಥಿ-ವಿಧ್ಯಾರ್ಥಿನಿಯರಿಗೆ ಶಿಕ್ಷಣತರಬೇತಿ ಸಂಸ್ಥೆಯಲ್ಲಿ (D.Ed) ತರಬೇತಿಗೆ ಒದಗಿಸಿದಲ್ಲಿ ಉತ್ತಮವಾದ ಪ್ರತಿಫಲ ಪಡೆಯಬಹುದು. ಶಿಕ್ಷಣತರಬೇತಿ ಪಡೆದ ಶಿಕ್ಷಕರನ್ನು ಸಮುದಾಯದ ಕಾಲೋನಿಗಳಲ್ಲೇ ಶಿಕ್ಷಕರಾಗಿ ನೇಮಿಸಿದಲ್ಲಿ ಒಂದು ಯಶಸ್ವಿ ಯೋಜನೆಯಾಗುವುದರಲ್ಲಿ ಸಂದೇಹವಿಲ್ಲ.

ಈ ೬ ಯೋಜನೆಗಳು ಈ ಮೊದಲೇ ತಿಳಿಸಿದಂತೆ ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿರುವ ಸಮುದಾಯಗಳಿಗೆ ಅಲ್ಲದೆ ಇತರೆ ಸಾಮಾನ್ಯ ಬುಡಕಟ್ಟು ಸಮುದಾಯಗಳಿಗೂ ಅನ್ವಯಿಸುವ ಕಾರಣಕ್ಕೆ ಸರ್ಕಾರ ಸಮುದಾಯಗಳನ್ನು ಅನುಲಕ್ಷಿಸಿ ಕಲ್ಯಾಣಕಾರ್ಯ ರೂಪಿಸಿದೆ ಏಂದು ಐ.ಟಿ.ಡಿ.ಪಿ ಕೇಂದ್ರದ ನಿರ್ದೇಶಕರು ತಿಳಿಸುತ್ತಾರೆ.

೩. ಸಮುದಾಯಗಳಲ್ಲಿನ ಆರ್ಥಿಕ ಕ್ಷೇತ್ರದ ಅವಲೋಕನ

ಒಂದು ಜನಸಮುದಾಯ ಯಾವುದೇ ಇರಲಿ, ಗೌರವಯುತವಾಗಿ ಬದುಕನ್ನು ಸವೆಸಲು ಕನಿಷ್ಠ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕಾಗುತ್ತದೆ. ಅವುಗಳೆಂದರೆ, ಆಹಾರ, ಬಟ್ಟೆ, ವಸತಿ, ವಿದ್ಯೆ, ಮತ್ತು ಆರೋಗ್ಯ ಸೌಲಭ್ಯ, ಮೂಲಭೂತವಾದವುಗಳು. ಇವುಗಳನ್ನು ಪೂರೈಸಿಕೊಳ್ಳುವಷ್ಟು ಸರಕು ಮತ್ತು ಸೇವೆಗಳನ್ನು ಅವಲಂಬಿತ ಸಮುದಾಯ ತನ್ನ ಸಾಮಾಜಿಕ ವ್ಯವಸ್ಥೆಯ ಪರಿಸರದಲ್ಲಿನ ಕೃಷಿ, ಕೈಗಾರಿಕೆ ಸೇವಾವಲಯಗಳನ್ನೇ ಆಶ್ರಯಿಸುವುದು ಸಾಮಾನ್ಯವಾಗಿದೆ. ಸಾಮಾಜಿಕ ವ್ಯವಸ್ಥೆಯ ಪರಿಸರದಲ್ಲಿ ಪ್ರತಿಯೊಂದು ಸಮುದಾಯ ತನ್ನದೇ ಆದ ಸೀಮಿತತೆಯ ಒಂದು ಅರ್ಥವ್ಯವಸ್ಥೆಯನ್ನು ಹೊಂದಿರುವುದು. ಈ ಅರ್ಥವ್ಯವಸ್ಥೆಯು

ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಯ ಭಾಗವಾಗಿ ಪರಿಗಣಿಸಲಾಗುತ್ತದೆ. ಹೀಗಾಗಿ ಸಾಮಾಜಿಕ ಬದಲಾವಣೆಯೊಂದಿಗೆ ಆರ್ಥಿಕ ಸ್ಥಿತಿಗತಿಯೂ ಬದಲಾಗುತ್ತಿರುತ್ತದೆ. ಇಂತಹ ಬದಲಾವಣೆಯ ಕ್ರಮವನ್ನು ಸ್ವತಂತ್ರನಂತರದ ದಿನಗಳಲ್ಲಿ ಅನೇಕ ರೀತಿ ನೀತಿಗಳಲ್ಲಿ ಹೆಸರಿಸಲಾಗುತ್ತಿದೆ. ಬದಲಾವಣೆಯನ್ನು ಅಭಿವೃದ್ಧಿಯೆಂದೇ ಗಣನೆಮಾಡುತ್ತಿರುವುದು ಗೋಚರಿಸುತ್ತದೆ. ಇದು ಬಾಯಿ ಮಾತಿನ ಹೇಳಿಕೆಗಳು ಮಾತ್ರವಲ್ಲದೇ ಅಂಕಿ ಅಂಶಗಳನ್ನು ಹೊತ್ತ ಸಂಶೋಧನಾ ದಾಖಲಾತಿಗಳ ವಿವರಗಳು. ಈ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಸಮುದಾಯಗಳ ಅರ್ಥಿಕಾಭಿವೃದ್ಧಿಯ ಸಾಧನೆ ಏನು? ಸಮುದಾಯಗಳು ಯಾವ ಕ್ಷೇತ್ರಗಳಲ್ಲಿ ನಿಜಕ್ಕೂ ಅಭಿವೃದ್ಧಿಯಾಗಿವೆ. ಕೃಷಿ ಕೈಗಾರಿಕೆ ಸೇವಾವಲಯದ ಕ್ಷೇತ್ರಗಳಲ್ಲಿ ಸಮುದಾಯಗಳು ಭಾಗವಹಿಸಿವೆಯಾ ?. ಆರ್ಥಿಕ ನೀತಿ, ಅಭಿವೃದ್ಧಿ ಕ್ರಮಗಳು ಉತ್ಪಾಧನಾ ಸಂಬಂಧಗಳಲ್ಲಿ ಬದಲಾವಣೆ ತಂದಿದೆಯಾ ?. ನಿಜಕ್ಕೂ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಇದರ ಫಲ ಅನುಭವಿಸುತ್ತಿವೆಯಾ. ಹಾಗಾದರೆ, ಆ ಪಲಾನುಭವಿಗಳು ಶೇಕಡವಾರು ಗುರುತಿಸಬಹುದೇ, ಇಂಥ ಪ್ರಶ್ನೆಗಳು ಆರ್ಥಿಕ ಕ್ಷೇತ್ರಗಳಲ್ಲಿ ಮುಖ್ಯವಾಗಿ ಗಮನಿಸಬಹುದಾದವುಗಳೇ. ಆದರೆ ಇದು ಆಳದ ಹಾಗೂ ವಿಸ್ತೃತ ಬರಹಕಾರ್ಯವಾಗುತ್ತದೆ. ಪ್ರಸ್ತುತದ ಅಧ್ಯಯನಕ್ಕೆ ಬಾರವೆನಿಸುತ್ತದೆ. ಈ ಕಾರಣ ಸಮುದಾಯಗಳ ಆರ್ಥಿಕ ಸ್ಥಿತಿಗತಿ ಮತ್ತು ಅವಲಂಬಿತ ಕ್ಷೇತ್ರಗಳ ನಡುವಿನ ಹಿನ್ನಲೆ ಮುನ್ನಲೆಯನ್ನು ಅರಿಯುವ ಸೀಮಿತತಕ್ಕೆ ಈ ಬರಹ ಮಿತಿಗೊಳಿಸಲಾಗಿದೆ.

ವೇದವಾಕ್ಯವೆಂದರೆ, ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಇದುವರೆಗಿನ ಎಂಥದೋ ಸಾಧನೆಗೆ ಮೀಸಲಾಗಿ ಸಿಂಹಪಾಲು ಪಾತ್ರವಹಿಸಿರುವುದು ಅಲ್ಲಗಳೆಯುವಂತಿಲ್ಲ. ಸಮುದಾಯಗಳ ಆರ್ಥಿಕ ಸಬಲೀಕರಣದ ದೃಷ್ಟಿಯಿಂದ ತೀರಾ ಅಗತ್ಯವಾದ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಸಮಾನವಾಗಿ ನೀತಿಗಳು ಪೂರಕವೆಂಬಂತೆ ರೂಪಿತವಾಗಬೇಕು. ಏಕೆಂದರೆ ಸಾಮಾಜಿಕ ಅಸಮಾನತೆಗೆ ತೆರೆ ಬೀಳಬೇಕಾದರೆ, ಸಮರ್ಪಕ ಮುಂದಾಳತ್ವಬೇಕಾಗುತ್ತದೆ. ' ಅಂತಹ ಮುಂದಾಳತ್ವದ ಪಾತ್ರವನ್ನು ಮೀಸಲಾತಿ ವಹಿಸಿಕೊಂಡಿದೆ ಎಂದರೆ ತಪ್ಪಾಗಲಾರದು. ಸಮುದಾಯಗಳು ಪೂರ್ವದಿಂದ ರೂಢಿಸಿಕೊಂಡು ಬಂದಿದ್ದ ಸ್ಥಳಾಂತರ ಬೇಸಾಯ, ಪಶುಸಂಗೋಪನೆ, ಅರಣ್ಯ ಉತ್ಪನ್ನಗಳ ಸಂಗ್ರಹಣೆಯ ಚಟುವಟಿಕೆಗಳು ಇವರುಗಳ ಆಸ್ತಿ ಉದ್ಯೋಗ ಮತ್ತು ಆದಾಯದ ಮೂಲ. ಆದರೆ ಅಭಿವೃದ್ಧಿಯ ಮಂತ್ರ ಪಟಿಸುತ್ತಿರುವ ಸರ್ಕಾರದ ಧೋರಣೆ ಈ ಕೃಷಿ ಕ್ಷೇತ್ರದ ಅಭಿವೃದ್ಧಿ ಫಲ ಯಾರಿಗೆ ದೊರೆಯಬೇಕು ಎನ್ನುವುದು ಮರೆತಂತಿದೆ.

ಮುಖ್ಯವಾಗಿ ಭೂ ಹಂಚಿಕೆಯ ಬಗ್ಗೆ ಅಧ್ಯಾಯ ೩ ರಲ್ಲಿ ಪಟ್ಟಿ ೭ ರಲ್ಲಿ ನೀಡಲಾದ ಮಾಹಿತಿಯನ್ನು ಗಮನಿಸಿದಲ್ಲಿ, ಭೂ ಹಂಚಿಕೆಯ ಪಾತ್ರ ತಿಳಿಯಬಹುದು. ಆ ಮಟ್ಟಗಿನ ಭೂಮಿ ಪಡೆಯುವಲ್ಲಿ ಭೂ ಸುಧಾರಣಾ ಕ್ರಮ, ವಿವಿಧ ದಲಿತ ಸಂಘಟನೆಗಳ ಹೋರಾಟ,

ಮತ್ತು ಸಮುದಾಯಗಳಲ್ಲಿನ ಸಂಘಟಿತ ಹೋರಾಟದ ಫಲವೆನ್ನಬಹುದು. ಸಮುದಾಯಗಳು ಪಡೆದ ಭೂಮಿ ತೀರಾ ಕಡಿಮೆ. ಸಾಕಷ್ಟು ಕುಟುಂಬಗಳು ಸಣ್ಣ ಭೂ ಹಿಡುವಳಿದಾರರಾಗಿದ್ದಾರೆ. ಈ ಭೂಮಿಯಿಂದಲೇ ಹೊಟ್ಟೆ ತುಂಬುವುದು ಕಷ್ಟ. ಕೊರತೆ ತುಂಬಿಸಿಕೊಳ್ಳವುದಕ್ಕಾಗಿ ಕೃಷಿ ಕಾರ್ಮಿಕರಾಗಿ ದುಡಿಯುವುದು ಅನಿವಾರ್ಯವಾಗಿದೆ. ಬಹುತೇಕ ಕುಟುಂಬಗಳು ಭೂಮಿ ಹೊಂದಿಲ್ಲದವುಗಳಾಗಿವೆ. ಭೂಮಿ ಹೊಂದಿರುವ ಕೆಲವೇ ಕುಟುಂಬಗಳ ಉತ್ಪಾಧನೆಯು ಇವರುಗಳ ಗುಡಿಸಲುಗಳು ಸೇರುವುದು ಶೇ. ೧೦% ಫಲಮಾತ್ರ. ದುರ್ಬಲರಾದ ಇವರುಗಳು ಒಂದೆಡೆ ಜೀತಗಾರನಿಗಿಂತ ನಿಕೃಷ್ಟವಾಗಿ ಬದುಕುವವರಾಗಿದ್ದಾರೆ. ಭೂ ಹಂಚಿಕೆಯ ಬಗ್ಗೆ ಗ್ರಾಮೀಣ ಅಭಿವೃದ್ಧಿ ಸಚಿವಾಲಯವೂ ಒಟ್ಟಾರೆ ಪರಿಶಿಷ್ಟ ಪಂಗಡದ (ಎಸ್.ಟಿ) ಪ್ರತಿ ಕುಟುಂಬವನ್ನು ಸರಾಸರಿ ಅನುಪಾತದಲ್ಲಿ ಗುರುತಿಸಲಾಗಿದೆ. ವಿನಹಃ ಮೂಲನಿವಾಸಿ ಬುಡಕಟ್ಟುಗಳನ್ನು ಹೊರತು ಪಡಿಸಿಲ್ಲ. ಹಾಗೇ ಅವರುಗಳಿಗೆ ಪುನರ್‌ವಸತಿ ಕಾರ್ಯದಲ್ಲಿ ವಿಶೇಷ ನೆರವು ನೀಡುತ್ತಿರುವುದು ಹೌದು ಎನ್ನುತ್ತಾರೆ. ಪ್ರತಿಕುಟುಂಬದ ಸರಾಸರಿ ಭೂ ಒಡೆತನದ ಪ್ರಮಾಣ ೪.೩ ಎಕರೆಯ ವಿಸ್ತೀರ್ಣ ದಾಖಾಲಾತಿಯಲ್ಲಿ ದಾಖಲಾದರೆ, ಅಲ್ಪಜನರಾದ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಬಹುತೇಕ ಭೂ ಒಡೆತನವಿಲ್ಲದವರಾಗಿದ್ದಾರೆ. ಕಾಲೋನಿಗಳಲ್ಲಿನ ಭೂ ಸುದಾರಣೆ ವ್ಯವಸಾಯಕ್ರಮದಲ್ಲಿ ಮಧ್ಯವರ್ತಿಗಳು ಕಂಡುಬರುತ್ತಾರೆ. ವ್ಯವಸಾಯ ಮಾಡುತ್ತಿರುವ ಶ್ರೀಮಂತ ಭೂಮಾಲೀಕರಲ್ಲಿ ವಿಚಾರಿಸಿದಲ್ಲಿ ನಿಮಗೆ ಯಾಕೆ ಅವರು ಭೂಮಿಯನ್ನು ಏನ್ನನ್ನಾದರೂ ಮಾಡಲಿ ಎನ್ನುವ ಪ್ರಶ್ನೆ ಸಂಶೋಧಕರಿಗೆ ಗ್ರಾಮಸ್ಥರಿಂದ ಮತ್ತೆ ತಿರುಗಿ ಬರುತ್ತದೆ.

ಭೂ ಹಂಚಿಕೆಯನ್ನು ವ್ಯವಸ್ಥಿತವಾಗಿ ಆಮೂಲಾಗ್ರವಾಗಿ ಪರಿವರ್ತನೆ ಮಾಡದ ಹೊರತು ಈ ಸಮುದಾಯಗಳ ಅಭಿವೃದ್ಧಿ ಮರೀಚಿಕೆಯದು. ಅಭಿವೃದ್ಧಿ ಭೂ ಸಂಬಂಧಗಳ ಬದಲಾವಣೆಯ ಮೇಲೆ ಅವಲಂಬಿತವಾಗಿದೆ. ಸಮುದಾಯ ಅಭಿವೃದ್ಧಿಯಾಗಬೇಕಾದರೆ ಸಹಜವಾಗಿ ಭೂ ಸಂಬಂಧಗಳಲ್ಲಿ ವ್ಯವಸ್ಥಿತ ಕ್ರಮಬದ್ಧ ಪರಿವರ್ತನೆ ತರದೆ ಇವರುಗಳ ಪರವಾಗಿ ರೂಪಿಸುವ ಆರ್ಥಿಕ , ಸಾಮಾಜಿಕ, ನೀತಿ, ಸವಲತ್ತುಗಳು ನಿಜವಾದ ಅರ್ಥದಲ್ಲಿ ಅಭಿವೃದ್ಧಿ ತರುವುದಿಲ್ಲ. ಸಮುದಾಯದ ಕಾಲೋನಿಗಳ ಕುಟುಂಬಗಳನ್ನು ಸಮೀಕ್ಷೆ ಮತ್ತು ಅವಲೋಕನ ಮಾಡಿದಾಗ ಕಂಡು ಬಂದ ಪ್ರಮುಖ ಅಂಶಗಳೆಂದರೆ,

- ಬಹುತೇಕ ಎರಡು ಸಮುದಾಯಗಳು ಭೂಹೀನ ಕುಟುಂಬಗಳು.
- ಬಹುತೇಕರು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.
- ಪರ್ಯಾಯ ಉತ್ಪಾದನಾ ಪರಿಕರಗಳಿಲ್ಲದವರಾಗಿ ಕಾಣಬರುತ್ತಾರೆ.
- ಸದಸ್ಯರ ಅಪೇಕ್ಷಿತ ಉದ್ಯೋಗಗಳಿಗೆ ಅವಕಾಶಗಳೇ ಇಲ್ಲವಾಗಿದೆ.

- ನಿರುದ್ಯೋಗದ ಪ್ರಮಾಣ ಅಧಿಕವಾಗುತ್ತಿದೆ.
- ಶೋಷಣೆಯು ನಿರಂತರವಾಗಿ ಮುಂದುವರೆಯುತ್ತಿದೆ.
- ಬಹುತೇಕ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿಲ್ಲ.
- ಗ್ರಾಮೀಣ ಅಭಿವೃದ್ಧಿ ಯೋಜನೆಗಳಲ್ಲೇ ತಾರತಮ್ಯವಿರುವುದು ಕಂಡುಬರುತ್ತದೆ.
- ಸಮುದಾಯಗಳ ಜನರಲ್ಲಿ ಕುಗ್ಗುತ್ತಿರುವ ಸಹಕಾರ, ಮತ್ತು ಪರಸ್ಪರಾವಲಂಬನೆ.
- ಸಮುದಾಯಗಳ ಮನೋಧೋರಣೆಯಲ್ಲಿ ಬದಲಾವಣೆ.
- ಕುಸಿಯುತ್ತಿರುವ ಸಮಗ್ರತೆ ಮತ್ತು ಶಿಥಿಲಗೊಳ್ಳುತ್ತಿರುವ ಏಕತಾಭಾವನೆ.
- ಹೆಚ್ಚಾಗುತ್ತಿರುವ ಜನರ ಆಶೋತ್ತರಗಳು ಮತ್ತು ಅಸಮಾಧಾನಗಳು.

ಈ ಎಲ್ಲಾ ಅಂಶಗಳು ಪ್ರಧಾನವಾಗಿ ಸಮುದಾಯಗಳ ಜೀವನಕ್ರಮದಲ್ಲಿ ಕಾಣಬರುತ್ತವೆ. ಸ್ವತಂತ್ರ ಆರ್ಥಿಕ ನೆಲೆಗೆ ಪೂರಕವಾಗಿ ರೂಪಿಸಿದ ಶಿಫಾರಸ್ಸುಗಳು, ಕಾರ್ಯಕ್ರಮಗಳು ಹೆಚ್ಚಿನ ಫಲವನ್ನೇನು ನೀಡಿಲ್ಲವೆನ್ನಬಹುದು. ಆರ್ಥಿಕ ಸ್ಥಿತಿಗತಿ ಉತ್ತಮ ಪಡಿಸುವ ಕ್ರಮವಾಗಿ ಯೋಜನೆಗಳು ಒಂದು ವಿಫಲತೆಯನ್ನು ಮುಚ್ಚಲು ಮತ್ತೊಂದು ಯೋಜನೆಗೆ ಊರಳಾಗಿಸಲಾಗಿ ಮತ್ತಷ್ಟು ಸವಲತ್ತುಗಳಿಗೆ ಶಿಫಾರಸ್ಸು ಮಾಡಲಾಗುತ್ತಿದೆ. ಆದರೆ ಸಮುದಾಯಗಳಲ್ಲಿ ವಸ್ತುಸ್ಥಿತಿ ಭೂಮಿ ಹಂಚಿಕೆ ಮತ್ತು ಕೃಷಿಯು ಮೂಲಭೂತ ಹಕ್ಕು ಆಗಬೇಕೆಂದು ಯಾವ ಯೋಜನೆಯ ನಿರೂಪಕರು, ಅಧಿಕಾರಿಗಳು ಬಾಯಿಬಿಟ್ಟಿಲ್ಲ. ಇದರಿಂದ ಉದ್ಯೋಗ ಹರಸಿ, ಕೂಲಿ, ಗಂಜಿಗಾಗಿ ಹರಸುತ್ತಾ ನಗರ, ಪಟ್ಟಣಗಳಿಗೆ ವಲಸೆ ಹೋಗುತ್ತಿರುವುದು ಸಾಮಾನ್ಯವಾಗಿದೆ.

"ಶೇ. ೯೫% ಅರಣ್ಯ ಪ್ರದೇಶ ರಾಜ್ಯಸರ್ಕಾರಗಳ ಒಡೆತನದಲ್ಲಿದೆ[೭]. ಈ ಅರಣ್ಯಗಳಲ್ಲಿ ಸಂಪನ್ಮೂಲ ಸಂಗ್ರಹಿಸಿ ಆರ್ಥಿಕ ಚಟುವಟಿಕೆಗಳಿಗೆ ಬಳಸಲು ಸರ್ಕಾರ ಖಾಸಗಿ ವ್ಯಕ್ತಿಗಳಿಗೆ ಗುತ್ತಿಗೆ ನೀಡಲಾಗುವ ಕ್ರಮದಿಂದ ಅರಣ್ಯವಾಸಿ ಸಮುದಾಯಗಳಿಗೆ ನಿರ್ಬಂಧವಿಧಿಸಿದೆ. ಬಲವಂತ ಕ್ರಮವಾಗಿ ಅರಣ್ಯದಿಂದ ಹೊರಹಾಕುವುದು ಸರ್ಕಾರದ ದ್ವಂದ್ವ ಅಭಿವೃದ್ಧಿ ಕ್ರಮವಾಗಿದೆ. ಸಮುದಾಯಗಳಿಗೆ ಮುಕ್ತವಾಗಿದ್ದ ಅರಣ್ಯದ ಅವಲಂಬನೆಯ ಮೇಲೆ ಯಾವುದೇ ಒಡೆತನದ ಹೊಂದದಂತೆ ಮಾಡಿದೆ. ಅತ್ಯಗತ್ಯವಾಗಿ ಅರಣ್ಯಾಧಾರಿತ ಜೀವನಕ್ರಮವನ್ನು ಅನುಲಕ್ಷಿಸಿ ಸಮುದಾಯಗಳನ್ನು ಅಭಿವೃದ್ಧಿ ಪಥದತ್ತ ಕರೆದೊಯ್ಯಬೇಕಾದ ಕಾರ್ಯ ನಡೆಯಬೇಕಿತ್ತು. ಸುಮಾರು ೧ ವರ್ಷದ ಹಿಂದೆ ಲೋಕಸಭೆ ಹೊಸ ಅರಣ್ಯಕಾಯಿದೆಯನ್ನು ಜಾರಿಗೆ ತರುವ ಕುರಿತಂತೆ ಅಧಿನಿಯಮವೊಂದನ್ನು ಅಂಗೀಕರಿಸಿತಾದರೂ, ಅಧಿಸೂಚನೆಹೊರಬರಲು ವಿಳಂಬನೀತಿ ಅನುಸರಿಸಲಾಗುತ್ತಿದೆ. ಪ್ರಸ್ತುತ ಜಾರಿಯಲ್ಲಿರುವ ಅರಣ್ಯಕಾಯಿದೆಯು ಹಲವು ತಲೆಮಾರುಗಳಿಂದ ಕಾಡುಪ್ರದೇಶಗಳಲ್ಲಿ

ವಾಸಿಸುತ್ತಿರುವ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಹಕ್ಕುಗಳನ್ನು ದಾಖಲಿಸಿಕೊಂಡು ಅವರು ಅವುಗಳನ್ನು ಅನುಭವಿಸುವುದನ್ನು ಮುಂದುವರೆಸುವಂತೆ ಅರಣ್ಯ ಇಲಾಖೆಯು ನೋಡಿಕೊಳ್ಳಬೇಕೆಂದು ಬಯಸುತ್ತದೆ.


ಒಂದು ರೀತಿಯಲ್ಲಿ ಸರ್ಕಾರವು ದ್ವಂದ್ವ ಕ್ರಮಗಳ ಯೋಜನೆಗಳನ್ನು ರೂಪಿಸುತ್ತಿದ್ದರೂ ಕೇಳುವವರಿಲ್ಲದಂತಾಗಿದೆ. ಅರಣ್ಯ ಇಲಾಖೆಯು ಇಲ್ಲಿ ಸಮುದಾಯಗಳನ್ನು ಒತ್ತುವರಿದಾರರೆಂದು ಪರಿಗಣಿಸುತ್ತಿದೆ. ಗಣಿಗಾರಿಕೆ, ಜಲವಿದ್ಯುತ್‌ಸ್ಥಾವರ, ಹೆದ್ದಾರಿಗಳು, ವನ್ಯಧಾಮ ಹಾಗು ಉದ್ಯಮಗಳ ಸ್ಥಾಪನೆಗೆ ಕಾಡುಗಳನ್ನು ನೆಲಸಮಮಾಡಲು ಅರಣ್ಯ ಇಲಾಖೆ ಸಮ್ಮತಿ ನೀಡುತ್ತಿದೆ. ಆದರೆ ಕೃಷಿಗಾಗಿ ಮರಕಡಿಯುವ ಅರಣ್ಯದಲ್ಲಿಯೇ ವಾಸವಿರುವ ಹೆಚ್ಚಿನ ಜನರನ್ನು ಜಾಗ ಖಾಲಿಮಾಡುವವರೆಗೆ ಬಿಡುತ್ತಿಲ್ಲ. ಅದೇ ಅರಣ್ಯ ಇಲಾಖೆಯು ಅನಂತರ ಕೃಷಿಭೂಮಿಯಲ್ಲಿ ಸಮುದಾಯ ಜನರನ್ನು ಕೂಲಿಗಾಗಿ ನೇಮಿಸಿಕೊಳ್ಳುತ್ತಾರೆ. ರಾಜ್ಯ ಸರ್ಕಾರವೂ ಅರಣ್ಯ ಇಲಾಖೆಯನ್ನು ಕಂದಾಯದ ಮೂಲವಾಗಿ ಪರಿಗಣಿಸಿದೆ ಅದು ಸಲ್ಲದು. ಹೀಗಾಗಿ ಅರಣ್ಯನೀತಿ ಬದಲಾದ್ದರಿಂದ ಸಮಸ್ಯೆಗಳು ಉದ್ಭವಗೊಂಡಿವೆ.

ಸಂವಿಧಾನ ಬದ್ಧವಾಗಿ ಶೇಕಡವಾರು ಭಾಗದಷ್ಟು ಉದ್ಯೋಗದ ಭರವಸೆ ಕೊಟ್ಟಿದೆಯಾದರೂ, ಈ ನಿಯಮವನ್ನು ಕಡ್ಡಾಯವಾಗಿ ಎಲ್ಲೂ ಪಾಲಿಸಲಾಗಿಲ್ಲ. ಆಶ್ಚರ್ಯದ ಸಂಗತಿಯೆಂದರೆ, ಸಂವಿಧಾನ ಕಾನೂನು ಮಾಡಿದ್ದಾಗೂ ನಾಲ್ಕನೇ ದರ್ಜೆಯ ಉದ್ಯೋಗ ಬಿಟ್ಟರೆ ಇನ್ಯಾವ ದರ್ಜೆಯ ಉದ್ಯೋಗದಲ್ಲಿಯೂ ಸಮುದಾಯಗಳು ನ್ಯಾಯಯುತವಾಗಿ ದೊರಕಬೇಕಾದ ಪಾಲನ್ನು ಪಡದೇ ಇಲ್ಲವೆನ್ನಬಹುದು. ಇವತ್ತಿಗೂ ಸಮುದಾಯಗಳಿಗೆ ಉದ್ಯೋಗ ಒದಗಿಸುವ ಮೂಲಸ್ಥಾನವು ಸರ್ಕಾರವೇ ಆಗಿದೆ. ಖಾಸಗಿ ಸಂಸ್ಥೆ, ಕಾರ್ಖಾನೆಗಳು, ವಿದ್ಯಾಸಂಸ್ಥೆಗಳು, ವಾಣಿಜ್ಯಸಂಸ್ಥೆ, ವ್ಯಾಪಾರಿಸಂಸ್ಥೆ, ಬ್ಯಾಂಕುಗಳು ಇದ್ದಾಗೂ ಎಲ್ಲೋ ಅಪರೂಪಕ್ಕೆ ಒಮ್ಮೆ ಸಂವಿಧಾನದ ನಿಯಮ ಒಮ್ಮೆ ಪಾಲಿಸುವುದು ಕಾಣಬರುತ್ತದೆ. ಒಂದೆಡೆ ಜನಸಮುದಾಯಕ್ಕೆ ಸಂವಿಧಾನ ಬದ್ಧ ಸ್ಥಾನಿಕ ಸಂಸ್ಥೆಯಲ್ಲಿ ತಮ್ಮದೇ ಜನರಿಲ್ಲ. ಹೇಗಾದರೂ ಮಾಡಿ ಉದ್ಯೋಗ ಕೊಡುವುದನ್ನು ತಪ್ಪಿಸಬೇಕು ಎಂದು ಯಾಚಿಸುತ್ತಿರುವುದು ಈ ಜನರ ಬಡತನದ ಸಮಸ್ಯೆ ಹೆಚ್ಚುವಂತೆ ಮಾಡಿದೆ.

ರಾಜ್ಯಾದ್ಯಂತ ಇರುವ ಮೂಲನಿವಾಸಿ ಬುಡಕಟ್ಟು ಸಮುದಾಯದ ಕುಟುಂಬಗಳ ಸಂಖ್ಯೆ ೧೦,೬೭೭. ನಿರ್ದಿಷ್ಟವಾಗಿ ಜೇನುಕುರುಬರು ೭,೩೬೯ ಮತ್ತು ಕೊರಗರು ೩,೩೦೮ ಕುಟುಂಬಗಳು ಕಂಡುಬರುತ್ತಿವೆ. ವಿಶೇಷಯೋಜನೆ, ಅನುಧಾನ, ಕಾರ್ಯಕ್ರಮಗಳನ್ನು ಇವರುಗಳ ಅಭಿವೃದ್ಧಿಗೆ ರೂಪಿಸಲಾಗಿದೆ. ಆದರೆ ಕೆಲವು ಕುಟುಂಬಗಳು ಯುಕ್ತಜೀವನಕ್ಕೆ ಅತ್ಯವಶ್ಯಕವಾದ ಸೌಲಭ್ಯಗಳನ್ನು ಕೊಂಡುಕೊಳ್ಳುವಷ್ಟು ಆದಾಯವಿಲ್ಲದ ಪರಿಸ್ಥಿತಿಯಲ್ಲಿರುವ ಕುಟುಂಬಗಳು ಸಹ ಇಲ್ಲಿವೆ. ೧೯೯೯-೨೦೦೦ನೇ ಸಾಲಿನಲ್ಲಿ ಭಾರತದ ಮಾನವಾಭಿವೃದ್ಧಿ


ವರದಿಯ ಪ್ರಕಾರ ಪರಿಶಿಷ್ಟ ಪಂಗಡದ ಬಡವರ ಸಂಖ್ಯೆ ಸರಾಸರಿ ಶೇ. ೫೧%. ಹಾಗೆಯೇ ಆದಾಯವನ್ನು ೧೬೨೯ ರೂ. ಎಂದು ಗುರುತಿಸಲಾಗಿದೆ[೮]. ಆದರೂ ಅಲ್ಪ ಜನ ಸಮುದಾಯವಾದ ಜನರು ಬಡತನದಲ್ಲೇ ಜೀವಿಸುತ್ತಿದ್ದಾರೆ. ಇವರುಗಳ ಸನ್ನಿಹದಲ್ಲಿಯೇ ನೆಲೆಸಿರುವ ಇತರ ಜನ ವರ್ಗದವರಲ್ಲೂ ಏಕೆ ಬಡತನವಿಲ್ಲ ಎಂಬ ಪ್ರಶ್ನೆಗಳು ಸಾಮಾನ್ಯವಾಗಿ ಕೇಳಿ ಬರುತ್ತಿವೆ. ಸತ್ಯದ ಸಂಗತಿ ಯೆಂದರೆ ಅರ್ಥವ್ಯವಸ್ಥೆಯಲ್ಲಿ ಈ ಜನರನ್ನು ನಿರಂತರವಾಗಿ ಅಭಿವೃದ್ಧಿ ಪಡಿಸುತ್ತಲೇ ಇದ್ದೇವೆ ಎನ್ನುವ ಅಂಶ ಆಳುವ ಸರ್ಕಾರ ಹಾಗೂ ಜನಪ್ರತಿನಿಧಿಗಳಿಗೆ ಅಗತ್ಯವಾಗಿ ಬೇಕಾದದ್ದು. ವೈಜ್ಞಾನಿಕ ನೆಲೆಗಟ್ಟಿನ ಕಾರಣ-ಪರಿಣಾಮ ಸಿದ್ಧಾಂತದಲ್ಲಿ ಎಂದೂ ಇಲ್ಲಿ ಚರ್ಚಿಸಲಾರರು. ಕಾರಣ-ಪರಿಣಾಮದ ಚರ್ಚೆ ನಡೆದಲ್ಲಿ ಸಮಸ್ಯೆಗೆ ಸರಿಯಾದ ಪರಿಹಾರ ನೀಡಲು ಸಾಧ್ಯವಾಗುತ್ತದೆ ಎನ್ನುವುದು, ಎಲ್ಲಾ ಅಧಿಕಾರಿ ಮತ್ತು ಸರ್ಕಾರದ ಆಡಳಿತಗಾರರಿಗೆ ತಿಳಿದ ವಿಷಯವಾಗಿದೆ.

"ಸರ್ಕಾರದ ಬುಡಕಟ್ಟು ಅಭಿವೃದ್ಧಿ ನಿಗಮದಲ್ಲಿನ ಮಾಹಿತಿಯಂತೆ ೨೦೦೧ ನೇ ಸಾಲಿನಲ್ಲಿ ಶೇ. ೫೦.೮೩% ಮೂಲನಿವಾಸಿ ಬುಡಕಟ್ಟುಗಳು ಪ್ರಾಥಮಿಕ ವಲಯದಲ್ಲಿನ ಅವಲಂಬಿತ ಕ್ಷೇತ್ರಗಳ ಮೇಲೆ ಅಧಾರವಾಗಿದ್ದಾರೆ. ಶೇ. ೪೬.೧೭ ಕೃಷಿಕಾರ್ಮಿಕರಾಗಿರುವರಾದರೆ ಶೇ. ೦.೨೬% ವಿವಿಧ ರೀತಿಯ ಕರಕುಶಲ ತಯಾರಿಕೆ ಹಾಗೂ ಗೃಹ ಕೈಗಾರಿಕೆಗಳಾಧಾರಿತವಾದವರು ಶೇ. ೦.೧೫% ಬೀದಿ ಬದಿಯಲ್ಲಿ ಮೂರುಕಾಸಿನ ವ್ಯಾಪಾರ ಮಾಡುವವರಾಗಿದ್ದಾರೆ. ಶೇ. ೦.೨೫% ಸಾರಿಗೆ ಮತ್ತು ಸಂಪರ್ಕದ ಸ್ವಯಂ ಉದ್ಯೋಗ ರೂಪಿಸಿಕೊಂಡವರೆಂದು ಗುರುತಿಸಲಾಗಿದೆ. ಇನ್ನುಳಿದಂತೆ ಸರ್ಕಾರಿ ಕೆಲಸದಲ್ಲಿರುವವರೆಂದು ಗುರುತಿಸಲಾಗಿದೆ,"[೯] ಈ ಅಂಶಗಳನ್ನು ಗಮನಿಸಿದಲ್ಲಿ ಸಮುದಾಯಗಳಲ್ಲಿ ಬಹಳಷ್ಟು ಅಡತಡೆಗಳು ಕಾಣಬಹುದು. ಸಮುದಾಯದ ಜನರೇ ಹೇಳುವಂತೆ "ಸ್ಥಳಾಂತರ ಕಾರ್ಯದ ನಂತರ ನಾವು ಇಲ್ಲಿ ನೆಲೆಸಿದ್ದರೂ, ನಾವು ನಮ್ಮ ಬಗ್ಗೆ ಎಂದೂ ಯೋಚಿಸಿಲ್ಲ. ನಮ್ಮಲ್ಲಿ ಹೊತ್ತು ಹೊತ್ತಿಗೆ ಊಟ ಸಿಕ್ಕರೆ ಸಾಕು ಯಾವುದು ಬೇಡ. ಇಲ್ಲಿಗೆ ಬಂದು ಬಹಳಷ್ಟು ವರ್ಷಗಳು ಕಳೆದರೂ ಯಾರೊಬ್ಬರೂ ನಮ್ಮನ್ನ ನೋಡುವರೇ ಇಲ್ಲ. ಅವರಿಗೆ ಬೇಕಾದಾಗೇ ಬರುತ್ತಾರೆ, ಇದು ತೆಗೊಳ್ಳಿ ಎಂದು ಹೇಳಿ ಎರಡೋ ಮೂರೋ ಮನೆಗಳವರನ್ನ ಕರೆಸಿ ಏನೋ ಹೇಳಿ ಹೋಗುತ್ತಾರೆ. ಓಟು ಹಾಕಿ ಅಂತ ಆ ಆಫೀಸರ್ ಬಂದು ಹೇಳಿ ಹೊರಟು ಹೋಗುತ್ತಾನೆ. ನಾವೇನು ಮಾಡೋದು. ಕೆಲಸ ಕೊಡೋರಿಲ್ಲ. ನಾವೆಲ್ಲ ಹಿಂಗೆ ಕೆಲಸ ಇಲ್ಲದೆ ಬಡವರಾಗಿದ್ದೀವಿ. ಎನ್ನುತ್ತಾರೆ".*[೧೦] ಚುನಾವಣೆ ಸಂದರ್ಭಗಳಲ್ಲಿ ಜನಪ್ರತಿನಿಧಿಗಳ ಪರವಾಗಿ ಅಧಿಕಾರಿಗಳು ಕಾರ್ಯನಿರ್ವಹಿಸುವ ವೈಖರಿ ಈ ಮೇಲಿನ ಹೇಳಿಕೆಯಿಂದ ತಿಳಿದು ಬರುತ್ತದೆ.



ಕಾಡಿನಿಂದ ನಾಡಿಗೆ ಬಂದ ಮೇಲೆ ನಮ್ಮಲ್ಲಿ ಸೋಮಾರಿತನ ಬಂದು, ಕುಡಿಯುವ ಚಟ ಮತ್ತೆ ಹೊಗೆಸೊಪ್ಪು ಎಲೆ ಅಡಿಕೆ ಹಾಕೋದು ಕಲಿತ್ತಿದ್ದೀವಿ. ನಮ್ಮ ಮನೆ ಸಂಸಾರದ ಕಷ್ಟಗಳು ನಮ್ಮನ್ನ ಕೂಲಿಗಾಗಿ ಸುಮಾರು ದೂರ ಹೋಗುವಂತೆ ಮಾಡಿದೆ. ಕಾಯಿಲೆಗಳು ನಮ್ಮ ಹಾಡಿಯನ್ನು ತುಂಬಿಕೊಂಡಿವೆ. ನಮ್ಮಕ್ಕಳನ್ನ ಶಾಲೆಗೆ ಕಳುಹಿಸೋದು ನಿಲ್ಲಿಸಿ ಬಿಟ್ಟಿದ್ದೀವೆ. ಅವರು ಕೂಲಿಗೆ ಬಂದರೆ ಸಾಕು ಯಾರು ತಾನೇ ಓದಿ ಡಾಕ್ಟರು, ಇಂಜನಿಯರ್, ಮೇಷ್ಟ್ರು, ಆಗಿದ್ದಾರೆ. ಎಲ್ಲೊ ಗಾರ್ಡ್, ಕಸ ಗುಡಿಸೋನು, ಲೆಕ್ಕ ಕೋಡೋನು ಮಾತ್ರ ನಮ್ಮಲ್ಲಿರೋದು, ಕೆಲಸಬೇಕು ಸಾರ್, ಇಲ್ಲಿ ನಮ್ಮನ್ನ ತಂದು ಹಾಕಿ ಕಷ್ಟ ಕೊಡುತ್ತಾವರೆ"ಎನ್ನುತ್ತಾರೆ [*೧೧.]

೫.೧ ಮೂಲನಿವಾಸಿ ಬುಡಕಟ್ಟುಗಳ ಜೀವನಚಕ್ರ ಕೃತಿ



ಎರಡು ಸಮುದಾಯಗಳ ಜನರೇ ನೀಡುವ ಉತ್ತರದಂತೆ ಅವರುಗಳಲ್ಲಿನ ಜೀವನ ಚಕ್ರ ಬಡತನದಲ್ಲೇ ಮುಂದುವರೆಯುತ್ತಿದೆ. ಇದಕ್ಕೆ ಹಲವಾರು ಕಾರಣಗಳು ಸಹ ಮುಂದಿಡುತ್ತಾರೆ.

ಸಮುದಾಯಗಳಲ್ಲಿ ಅತಿಮುಖ್ಯವಾಗಿ ಕಂಡುಬರುವ ಚಕ್ರಾಕೃತಿಯಲ್ಲಿನ ಎಲ್ಲಾ ಅಂಶಗಳೂ ಅವರುಗಳ ಬಡತನಕ್ಕೆ ಕಾರಣವಾಗಿ ಸುತ್ತುವರೆದಿವೆ. ಸ್ವಯಂ ಜನರ ಅಭಿಪ್ರಾಯ ಆಧರಿಸಿ ಮೌಲ್ಯಯುತ ಸಾಂಪ್ರದಾಯಿಕ ಬದುಕು ಸವೆಸಿದ ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಪುನರ್‌ವಸತಿಯ ನಂತರದ ಬದಲಾವಣೆಯಿಂದ ಸಮಾಜದಲ್ಲಿ ಶ್ರೇಣೀಕೃತ ಬೀಜವನ್ನು ಸಮುದಾಯಗಳಲ್ಲಿ ಬಿತ್ತಿದಂತೆ ಕಾಣಬರುತ್ತದೆ. ಈ ಅಂಶವು ಸಮುದಾಯಗಳು ನೆಲೆನಿಂತ ಭೌಗೋಳಿಕ ಪರಿಸರದ ಜೀವನಕ್ರಮದಲ್ಲಿ ಕಾಣಬಹುದು. ಬದಲಾವಣೆ ಬಯಸಿರುವ ಸ್ಥಿತಿಯಲ್ಲಿ ಸಮುದಾಯಗಳಲ್ಲೇ ಅನೇಕ ಅಂಶಗಳು ಪ್ರಧಾನವಾಗಿ ಗೋಚರಿಸುತ್ತವೆ.

ಪ್ರಸ್ತುತ ನೆಲೆಸಿರುವ ಪ್ರದೇಶಗಳಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಒಂದು ತೆರನಾದ ಅಂತರ ಕಾಣಬರುತ್ತದೆ. ಒಂದು ಸ್ವಲ್ಪ ಕುಟುಂಬಗಳು ಉನ್ನತ ಅಧಿಕಾರ, ಸ್ಥಿತಿವಂತರಂತೆ ಕಂಡು ಬಂದರೆ, ಉಳಿದವರು ಬಡತನ ಮಟ್ಟಕ್ಕಿಂತ ಕೆಳಹಂತದಲ್ಲಿ ಜೀವಿಸುವಂತೆ ಕಾಣಬರುತ್ತಾರೆ. ಅವರುಗಳ ಜನಸಮೂಹದಲ್ಲಿಯೇ ಸಂಘರ್ಷವನ್ನು ಅಲ್ಲಗೆಳೆಯುವಂತಿಲ್ಲ. ಶಿಕ್ಷಣ ಪಡೆದು ಜಾಗೃತಿಯನ್ನು ಮೂಡಿಸಿಕೊಂಡಿರುವ ಕೆಲವಾರು ಕುಟುಂಬಗಳ ಸದಸ್ಯರು ತಮ್ಮ ಸಾಮಾಜಿಕ ಆರ್ಥಿಕ ಸ್ಥಿತಿಯನ್ನು ಉನ್ನತೀಕರಿಸಿಕೊಂಡು ತಮ್ಮದೇ ಸಮುದಾಯದ ಜನವರ್ಗದವರ ಮೇಲೆ ತಮ್ಮ ಪ್ರಭಾವತೋರಿಸುತ್ತಿದ್ದಾರೆ. ಇಲ್ಲಿನ ಬದಲಾವಣೆಯಲ್ಲಿ ಸಮುದಾಯಗಳಲ್ಲೇ ಉಳ್ಳವರು-ಇಲ್ಲದವರು, ಶ್ರೀಮಂತರು–ಬಡವರು ಎನ್ನುವ ತಾರಕಮಂತ್ರ ಪ್ರತಿಧ್ವನಿಸುತ್ತಿದೆ. ಕೆಲವೇ ಕುಟುಂಬಗಳು ಆರ್ಥಿಕತೆಯನ್ನು ಉತ್ತಮಪಡಿಸಿಕೊಂಡು, ರಾಜಕೀಯ ಪ್ರಜ್ಞೆ ಪ್ರದರ್ಶಿಸುತ್ತಿದ್ದಾರೆ. ಅವರುಗಳ ರಾಜಕೀಯ ಪ್ರಜ್ಞೆಯ ಹೆರಿಕೆಮಾತ್ರ ತಮ್ಮದೇ ಸದಸ್ಯ ಕುಟುಂಬಗಳ ಮೇಲೆ. ಚುನಾಯಿತ ಪಕ್ಷಗಳ ಹಿಂಬಾಲಕರಾಗಿ ದುಡಿಯುವ ಸೌಲಭ್ಯ ಪಡೆಯುವರಾಗಿ ಮೀಸಲಾತಿಯಿಂದ ದಕ್ಕುವ ಕೆಲವೇ ಕೆಲವು ಕಲ್ಯಾಣಕಾರ್ಯಕ್ರಮಗಳ ಫಲ ಮೊದಲಿಗೆ ಇಂತಹ ಕುಟುಂಬಗಳಿಗೆ ದೊರೆಯಬೇಕು ಎನ್ನುವ ಕಟ್ಟಾಜ್ಞೆ (ರಾಜಕೀಯ) ಚುನಾಯಿತ ನಾಯಕರದು. ತನ್ನ ಹಿಂಬಾಲಕ, ಶಿಷ್ಯವರ್ಗದವರಿಗೆ ಸಹಕಾರ ಸಂಘದವತಿಯಿಂದ ನೆರವು. ಆಶ್ರಯ ಯೋಜನೆ, ಹಣಕಾಸು, ಸಾಲಸೌಲಭ್ಯ, ತರಬೇತಿ ಇತ್ಯಾದಿಗಳ ಮೇಲೆ ಪ್ರಭಾವ ಬೀರುವಂತ ಪಾತ್ರವಹಿಸಿ ಇತರರನ್ನು ಕಡೆಗಣಿಸುತ್ತಿರುವ ದೃಶ್ಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಣಬಹುದಾಗಿದೆ.

ಗ್ರಾಮ ಸಮಾಜದ ಪ್ರವೃತ್ತಿಯನ್ನು ಮತ್ತು ವೃತ್ತಿಯನ್ನು ಮೈಗೂಡಿಸಿಕೊಂಡಿರುವ ಕುಟುಂಬಗಳು ಮೇಲ್ವರ್ಗದವರಂತೆ ಉಳಿದ ಕುಟುಂಬಗಳು ಕೆಳವರ್ಗದ ಜನರಂತೆ

ಜೀವಿಸುತ್ತಿರುವ ಲಕ್ಷಣಗಳು ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಕಾಲೋನಿಗಳಲ್ಲಿ ಕಾಣಬರುತ್ತದೆ. ಇದೊಂದು ದ್ವಂದ್ವವಾದ ಸನ್ನಿವೇಶವೆನ್ನಬಹುದು . ಸಮುದಾಯಗಳಲ್ಲಿ ಮೌಲ್ಯಗಳು ಮತ್ತು ಪೂರ್ವದ ಅನುಭವ ಜನರಲ್ಲಿ ಮಾಯವಾಗಿ ಬಹುತೇಕ ಬದಲಾವಣೆಗೊಂಡಿವೆ. ಹಂಚಿ ತಿನ್ನುತ್ತಿದ್ದವರು, ವಂಚಿಸಿ ತಿನ್ನುವ ಸ್ಥಿತಿ ತಲುಪಿದ್ದಾರೆ. ಈ ಸ್ಥಿತಿಯನ್ನೇ ಸರ್ಕಾರವು ಸಹ ರಾಷ್ಟ್ರೀಯ ಮುಖ್ಯವಾಹಿನಿಗೆ ಸಮುದಾಯಗಳು ಬಂದಿವೆ ಎನ್ನಲಾಗುತ್ತಿರುವುದು.

ಸಮುದಾಯಗಳ ಅಧ್ಯಯನದ ಕ್ಷೇತ್ರದಲ್ಲಿ ಎಲ್ಲವೂ ಬದಲಾವಣೆಗೆ ಒಳಪಟ್ಟಿವೆ. ಸಾಂಪ್ರದಾಯಿಕ ಜೀವನಪದ್ಧತಿಯಿಂದ ಅಸಂಪ್ರದಾಯಿಕ ಜೀವನಪದ್ಧತಿಯವರೆಗೆ. ಹೀಗಾಗಿ ಇಲ್ಲಿನ ಎಲ್ಲಾ ಕುಟುಂಬಗಳಲ್ಲಿ ಬಡತನ ವಿಶಾಲವಾಗಿ ಹರಡಿನಿಂತಿದೆ. ಉದ್ಯೋಗಗಳಿಲ್ಲದೆ, ಕುಟುಂಬಧಾರಿತ ಗೃಹಕೈಗಾರಿಕೆಗೆ ಪೂರಕ ಉದ್ಯೋಗವಿಲ್ಲದೇ ಬಡತನವೇ ಪ್ರಧಾನವಾಗಿದೆ. ಸರ್ಕಾರದ ಅಧಿಕೃತ ಮಾಹಿತಿಯಲ್ಲಿಯೂ ಬಡತನ ರೇಖೆಗಿಂತ ಕೆಳಗಿನವರೇ ಹೆಚ್ಚು. ಪ್ರತಿಯೊಂದು ಕುಟುಂಬದ ಸರಾಸರಿ ಆದಾಯ ೧೬೭೯ ರೂ. ಗಳೆಂದು ಗುರುತಿಸಲಾಗಿದೆ. ಪ್ರತಿ ಕುಟುಂಬದ ತಿಂಗಳಿನ ವೆಚ್ಚದ ಅನುಪಾತವನ್ನು ಕಲ್ಪನೆ ಮಾಡಿದಲ್ಲಿ ಪ್ರತಿ ಕುಟುಂಬದ ಸದಸ್ಯರ ಅನುಪಾತ ಪರಿಗಣಿಸಬೇಕು ಮತ್ತು ಸದಸ್ಯರ ದಿನದ ಆದಾಯ ಗಣನೆಗೆ ಮುಖ್ಯವಾಗುತ್ತದೆ.

ಇವರುಗಳ ಆದಾಯದ ಮೂಲ ಕೂಲಿ. ಕೆಲವೇ ಕುಟುಂಬಗಳು ಹೊಂದಿರುವ ಸಣ್ಣ ಭೂಮಿ (ತುಂಡುಭೂಮಿ)ಯಲ್ಲಿ ಆರ್ಥಿಕತೆಯನ್ನು ಉತ್ತಮ ಪಡಿಸುವ ಇಳುವರಿಯನ್ನೇನು ಪಡೆಯಲಾಗುತ್ತಿಲ್ಲ. ಜೊತೆಗೆ ಭೂಮಿಯಲ್ಲಿನ ಫಲವತ್ತತೆ, ನೀರಾವರಿ ಸೌಲಭ್ಯ, ರಸಗೊಬ್ಬರ, ಬಿತ್ತನೆಬೀಜ ಇನ್ನಿತರ ಪರಿಕರಗಳಲ್ಲಿ ಗುಣಾತ್ಮಕತೆ ಇಲ್ಲದೆ, ಕುಟುಂಬಗಳು ವಸ್ತುವಿನಿಮಯ ಪದ್ಧತಿಗೆ ಮಾರುಹೋಗಿದ್ದಾರೆ. ವ್ಯವಸಾಯದಲ್ಲಿ ನಿರತ ಕುಟುಂಬಗಳು ಪರ್ಯಾಯವಾಗಿ ಕೂಲಿಯಲ್ಲಿ ದುಡಿಯುವ ಪರಿಸ್ಥಿತಿಯಿಂದ ಜನರ ಅನುಭೋಗದ ಪ್ರವೃತ್ತಿಯಲ್ಲಿ ಏರಿಕೆ ಕಂಡು ಬರುತ್ತಿದೆ. ಹಾಗೆ ದುಡಿಮೆಯಲ್ಲಿ ಏರಿಕೆ ಇಲ್ಲದೆ ಉಳಿತಾಯವೂ ಇಲ್ಲದೆ ಸಾಲಗಾರರಾಗಿ ಸಾಲ ಪಾವತಿಸಲು ಮತ್ತೆ ಸಾಲದ ಕೂಲಿಗಾರರಾಗಿ ಸಾಲದಾತರ ಆಶ್ರಯಪಡೆಯುತ್ತಿರುವ ದಿನನಿತ್ಯದ ಜೀವನ ಚಿತ್ರಣವಾಗಿದೆ.

ಇದು ಆಧುನೀಕರಣದ ಗ್ರಾಮ ಸಮಾಜ ಮತ್ತು ನಗರ ಸಮಾಜದ ಅನುಕರಣೆಯೇನೋ ಸರಿ. ಆದರೆ ಅನುಕರಣೆಗೆ ತಕ್ಕಂತೆ ಉದ್ಯೋಗ, ಆದಾಯಗಳ ಗಳಿಕೆಯಲ್ಲಿ ಯಾವುದೇ ಬದಲಾವಣೆಗಳಿಲ್ಲದಿರುವುದು ವಾಸ್ತವ. ಇದರಿಂದ ಜನರಲ್ಲಿ ಕೊಳ್ಳುವ ಬಯಕೆಗಳು, ಅನುಭೋಗ ಪ್ರವೃತ್ತಿ ಹೆಚ್ಚಿ ಸಾಲದ ಸುಳಿಯಲ್ಲಿ ಮತ್ತೆ ಸಾಲಗಾರರಾಗಿ ಸಿಲುಕುವರಾಗಿದ್ದಾರೆ. ಖಾಸಗಿ ಲೇವಾದೇವಿದಾರರಲ್ಲಿ ಭೂಮಿ ಮತ್ತು ಉತ್ಪಾಧನೆ ಪರಭಾರೆ ಮಾಡುವಂತ ಪರಿಸ್ಥಿತಿಗೆ ಸಿಲುಕುತ್ತಿದ್ದಾರೆ. ಉದ್ಯೋಗ ಸೃಷ್ಟಿಸಲಾಗದಿರುವ ಪರಿಣಾಮ ಬಡತನ ನಿವಾರಿಸಲು ಸಾಧ್ಯವಾಗಲಿಲ್ಲವೆನ್ನಬಹುದು.

ಇದರಿಂದಾಗಿ ಆರ್ಥಿಕತೆಯಲ್ಲಿ ವಿಷಮತೆಗಳು ಹಲವು ರೂಪದಲ್ಲಿ ಕಂಡುಬರುತ್ತವೆ. ವಿತರಣೆಯ ಪ್ರಕ್ರಿಯೆ, ವ್ಯವಸ್ಥಿತ ಕ್ರಮದಲ್ಲಿದ್ದ ಭೂಸುಧಾರಣೆಗಳು , ಉದ್ಯೋಗಾವಕಾಶಗಳ ಸೃಷ್ಟಿ ಅಥವಾ ನಿರ್ಮಾಣ, ಕನಿಷ್ಠ ಕೂಲಿ ಪದ್ಧತಿ, ಸರಿಯಾಗಿ ಜಾರಿಗೆ ಆಗದ ಹೊರತು ಬಡತನ ಹೋಗಲಾಡಿಸಲು ಸಾಧ್ಯವಿಲ್ಲ.

ವ್ಯವಹಾರಿಕವಾಗಿ ನೋಡಿದಲ್ಲಿ, ಆರ್ಥಿಕತೆಯಲ್ಲಿ ಆದಾಯದ ಹೂಡಿಕೆ ಮತ್ತು ಅನುಭೋಗವು ಉದ್ಯೋಗ ಮತ್ತು ಆದಾಯಗಳಿಕೆಯನ್ನು ಅವಲಂಬಿಸಿರುತ್ತದೆ. ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿಕೊಳ್ಳುವವರಾಗಿ ಅನುಭೋಗ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಸಾಮಾನ್ಯವಾದದ್ದು. ಸಮುದಾಯದ ಕುಟುಂಬಗಳಲ್ಲಿ ಕಡಿಮೆ ಆದಾಯದಿಂದ ಹೆಚ್ಚಿನ ಅವಲಂಬನೆ ಕಂಡುಬರುತ್ತದೆ. ಇದೊಂದು ರೀತಿಯ ಕೆಳಹಂತದ ಬೆಳವಣಿಗೆ. ಇವರುಗಳನ್ನು ಉಳಿತಾಯದ ಕಡೆಗೂ ಕರೆದೊಯ್ಯುವಂತದಲ್ಲ. ಶಿಕ್ಷಣ ಪಡೆದ ಕೆಲವೇ ಮಂದಿ ಉಳಿತಾಯ ಮತ್ತು ಹೂಡಿಕೆ ಪ್ರವೃತ್ತಿ ಬೆಳೆಸಿಕೊಳ್ಳುತ್ತಿರುವ ಲಕ್ಷಣಗಳ ಸಮೀಪವಾಗಿ ತಿಳುವಳಿಕೆಯು ನೀಡುತ್ತಿಲ್ಲ.

ಆದಾಯದ ಮೂಲವಾದ ದಿನನಿತ್ಯದ ಕೂಲಿಯನ್ನು ಪರಿಗಣಿಸಿದರೆ, ನಿತ್ಯಜೀವನದ ಮೇಲೆ ಬಡತನ ಆವರಿಸಿರುವ ಪಾತ್ರ ತಿಳಿಯಬಹುದಾಗಿದೆ. ಪ್ರತಿ ಕುಟುಂಬದ ಸದಸ್ಯರ ದಿನದ ಕೂಲಿ ಜೇನುಕುರುಬ ಮತ್ತು ಕೊರಗರಲ್ಲಿ ವಿಭಿನ್ನವಾಗಿ ಕಂಡುಬರುತ್ತದೆ. ಜೇನುಕುರುಬರ ಪುರುಷರಿಗೆ ೪೦ ರೂ. ಗಳಿದ್ದರೆ ಮಹಿಳೆಯರಿಗೆ ೨೫ ರೂ. ಜೊತೆಗೆ ಮಧ್ಯಾಹ್ನದ ಊಟ ಸಹ ನೀಡಲಾಗುತ್ತದೆ. ಕೊರಗರ ಪುರುಷರಿಗೆ ೫೦ ರೂ. ಮಹಿಳೆಯರಿಗೆ ೪೦ ರೂ. ನೀಡಲಾಗುತ್ತಿದೆ. ಕೂಲಿಯೂ ಸಹ ವರ್ಷಪೂರ್ತಿ ದೊರೆಯದೇ ಕೆಲವೇ ತಿಂಗಳು ಮಾತ್ರ. ಉಳಿದಂತೆ ನಿರುದ್ಯೋಗದಿಂದ ಬಳಲುವ ಪರಿಸ್ಥಿತಿ ಇದೆ. ಪ್ರಸ್ತುತ ಗಮನಾರ್ಹವಾದ ಸಾಂಸ್ಕೃತಿಕ ವೈರುಧ್ಯಗಳೊಂದಿಗಿನ ಆರ್ಥಿಕತೆಯ ಅಭಿವೃದ್ಧಿಯಲ್ಲಿ ಬಹು ಆಯಾಮಗಳ ಮೌಲ್ಯಗಳನ್ನೊಳಗೊಂಡ ಯೋಜನೆ ರೂಪಿಸಿ, ಅನುಷ್ಠಾನ ಗೊಳಿಸದಿದ್ದಲ್ಲಿ, ನಗರಪ್ರದೇಶದಲ್ಲಿ ಕೊಳಚೆ ನಿವಾಸಿಗಳಾಗಿ ಮತ್ತು ಗ್ರಾಮಗಳಲ್ಲಿ ಅಸ್ಪೃಶ್ಯರಂತೆ ಬದುಕುವ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆಗಳಿವೆ. ರಾಷ್ಟ್ರೀಯ ನೀತಿಯಲ್ಲಿ ಬುಡಕಟ್ಟುಗಳ ಕಲೆ, ಸಾಂಸ್ಕೃತಿಕ, ಜನಪದ ವೈವಿಧ್ಯತೆಯನ್ನು ನಿರಂತರವಾಗಿ ಉಳಿಸಿ ಬೆಳೆಸಿ ಅಭಿವೃದ್ಧಿ ಪಡಿಸಬೇಕೆಂಬ ಕಟು ಸತ್ಯ ಕಾಣದೇ ಹೋಗಬಹುದು.


ಸಮುದಾಯಗಳಿಗೆ ಅವಶ್ಯಕವಾಗಿರುವ ಅಂಶವೆಂದರೆ, ಉತ್ತಮಗುಣಮಟ್ಟದ ಜೀವನಕ್ಕೆ ಬೇಕಾದ ಸಮುದಾಯಗಳೊಳಗೊಂಡಂತಹ ಮೌಲ್ಯಯುತ ಜೀವನ ವಿಧಾನ ರೂಪಿಸುವಿಕೆಯಾಗಿದೆ. ಮನುಷ್ಯನ ಅಗತ್ಯಕ್ಕೆ ಅನುಗುಣವಾಗಿ ಉತ್ಪಾಧನೆ ಮತ್ತು ಹಂಚಿಕೆಯ ಜೊತೆಜೊತೆ ಪೂರಕವಾಗಿ ನಡೆಯುವ ಯೋಜನೆಯೊಂದಿಗಿನ ನಿಜವಾದ ಮಾನವಾಭಿವೃದ್ಧಿ ಕ್ರಮ ಮತ್ತು ಕೃಷಿಯಲ್ಲಿನ ನೇರಭಾಗಿತ್ವದ ಅವಲಂಬನೆಯ ಕಾರ್ಯಕ್ರಮಗಳು, ಶಿಕ್ಷಣದಿಂದ

ತಮ್ಮ ಹಕ್ಕಿನ ಅರಿವು, ಆರೋಗ್ಯ ಸುಧಾರಣೆ ರೂಪುಗೊಳಿಸುವ ಕ್ರೋಢೀಕೃತವಾದ ಅಭಿವೃದ್ಧಿ ಮಾದರಿಯಲ್ಲಿ ಜನರನ್ನು ಸೇರಿಸಿಕೊಂಡು ಕಾರ್ಯಕ್ರಮ ರೂಪಿಸಬೇಕಿದೆ.

ಕೃಷಿ ಚಟುವಟಿಕೆಗಳನ್ನು ಹೊರತು ಪಡಿಸಿದಲ್ಲಿ, ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಗಮನಾರ್ಹವಾದದ್ದು ಕೂಲಿ. ವ್ಯವಸಾಯ ಕೂಲಿ, ದಿನಕೂಲಿ, ಇತರೆ ಕೂಲಿಕೆಲಸಗಳಲ್ಲಿ ತೊಡಗಿಸಿಕೊಂಡಿರುವುದು ತಳ್ಳಿಹಾಕಲು ಸಾಧ್ಯವಿಲ್ಲ. ೨೦೦೪ನೇ ಜುಲೈಗೆ ಅನುಲಕ್ಷಿಸಿದಂತೆ, ವ್ಯವಸಾಯ ಕೂಲಿಧರ ೪೦ ರಿಂದ ೫೦ ರೂ ಪ್ರತಿದಿನಕ್ಕೆ ಗುರುತಿಸಬಹುದು. ಒಂದು ಕುಟುಂಬದಲ್ಲಿ ದುಡಿಯುವವರ ಸಂಖ್ಯೆ ೩ ರಿಂದ ೪ ಎಂದು ಕೊಂಡರೆ, ೪ ಜನರು ಒಂದೇ ವೃತ್ತಿಯಲ್ಲಿ ತೊಡಗಿ ಕೊಳ್ಳುವುದಿಲ್ಲ. ಪ್ರತಿ ಕುಟುಂಬದ ಸದಸ್ಯರಾದ ಗಂಡ, ಹೆಂಡತಿ, ಮತ್ತು ಮಕ್ಕಳು ಸೇರಿ ದುಡಿಯುವ ಅಥವಾ ಗಳಿಸುವ ಹಣರೂಪಿ ಆದಾಯ ಅತ್ಯಲ್ಪ. ಇದು ಇವರುಗಳನ್ನು ಆರ್ಥಿಕವಾಗಿ ಹಿಂದುಳಿದ ಸ್ಥಿತಿಗೆ ಮರಳಿಸುತ್ತದೆ. ಸರ್ಕಾರವೂ ಸಹ ಪ್ರತಿ ತಿಂಗಳ ಒಂದು ಕುಟುಂಬದ ಸರಾಸರಿ ಆದಾಯ ೧೬೮೯ ರೂ.ಗಳೆಂದು ನಿರ್ಧರಿಸಿದೆ.[೨] ಆದರೆ ಬಹುತೇಕ ಮೂಲನಿವಾಸಿ ಬುಡಕಟ್ಟುಗಳು ಕೂಲಿಯ ಮೇಲೆ ಅವಲಂಬಿತರಾಗಿದ್ದಾರೆ ಕೂಲಿಯು ಅನಿಶ್ಚಿತವಾದುದ್ದಾಗಿ ಕಾಣಬರುತ್ತದೆ.

ಸಮುದಾಯಗಳು ಅವಲಂಬಿಸಿರುವ ವಿವಿಧ ವೃತ್ತಿಗಳಲ್ಲಿ ದೊರೆಯುವ ಹಣರೂಪಿ ಆದಾಯವನ್ನು ಪರಿಗಣಿಸಿ ಒಂದು ಪೂರ್ವಕಲ್ಪನೆಯ ಚಿತ್ರಣವನ್ನು ನೀಡಬಹುದು. ಗಳಿಸುವ ಹಣರೂಪಿ ಆದಾಯ, ವೆಚ್ಚದ ಮೂಲಗಳೊಂದಿಗೆ ಸಮುದಾಯವು ಅವಲಂಬಿಸಿರುವ ಸ್ಥಿತಿಗತಿ ತಿಳಿಯಬಹುದಾಗಿದೆ. ಸಮುದಾಯಗಳಿಗೆ ಅನುಗುಣವಾಗಿ ಪೂರ್ವಕಲ್ಪನೆ ಅಥವಾ ಊಹೆ ಮಾಡಿದಲ್ಲಿ ಪ್ರತಿಕುಟುಂಬದ ಪ್ರತಿಸದಸ್ಯ ದಿನವೊಂದಕ್ಕೆ ೧೪ ರೂ.ಗಳು ಖರ್ಚು ಮಾಡುತ್ತಾನೆ ಎಂದು ಬಾವಿಸಿದಲ್ಲಿ ಈ ೧೪ ರೂ. ಸದಸ್ಯನೊಬ್ಬನ ಆಹಾರ, ಆರೋಗ್ಯಕ್ಕಾಗಿ ಮಾತ್ರ ಪರಿಗಣಿಸಬಹುದು. ಹೀಗೆ ೪ ಜನ ಸದಸ್ಯರ ಅನುಪಾತ (೧೪X೪=೫೬) ೫೬ ರೂ. ದಿನವೊಂದಕ್ಕೆ ಖರ್ಚು ಮಾಡುವ ಕುಟುಂಬವನ್ನು ಬಡತನ ರೇಖೆಗಿಂತ ಕೆಳಗಿನ ಕುಟುಂಬವೆಂದು ಪರಿಗಣಿಸಬಹುದಾಗಿದೆ. ಪ್ರತಿಯೊಂದು ತಿಂಗಳು ಹಾಗೂ ವಾರ್ಷಿಕ ವೆಚ್ಚವನ್ನು ಪ್ರತಿ ಸದಸ್ಯನಂತೆ ಪರಿಗಣಿಸಿದಲ್ಲಿ ಹಾಗೂ ಕುಟುಂಬ ಮತ್ತು ಕುಟುಂಬದ ಎಲ್ಲಾ ಸದಸ್ಯರ ಪ್ರತಿದಿನ, ಪ್ರತಿತಿಂಗಳು ಹಾಗೂ ವಾರ್ಷಿಕ ವೆಚ್ಚದ ಅನುಪಾತ ಈ ರೀತಿಯಿಂದ ಕಲ್ಪನೆ ಮಾಡಬಹುದಾಗಿದೆ.

೫.೨ ಆದಾಯ ಮತ್ತು ವೆಚ್ಚದ ಅನುಪಾತ



ಚಿತ್ರದಲ್ಲಿ ತೋರಿಸಲಾದಂತೆ ಪ್ರತಿಯೊಬ್ಬ ಸದಸ್ಯನ ಅನುಪಾತ ದಿನವೊಂದಕ್ಕೆ ೧೪ರೂ. ಪ್ರತಿತಿಂಗಳು ೪೩೪ ರೂ. ಹಾಗೂ ವಾರ್ಷಿಕ ೫,೨೦೮ ರೂ. ವೆಚ್ಚದ ಅನುಪಾತವಾಗಿದೆ. ಅದೇ ರೀತಿ ಪ್ರತಿಕುಟುಂಬದ ೪ ಜನ ದುಡಿಯುವ ಸದಸ್ಯರಂತೆ ಗುರುತಿಸಿದರೆ, ಪ್ರತಿಕುಟುಂಬದ ದಿನವೊಂದಕ್ಕೆ ೫೬ ರೂ. ಪ್ರತಿ ತಿಂಗಳು ೧,೭೩೬ ರೂ. ಹಾಗೂ ವಾರ್ಷಿಕ ೨೦,೮೩೨ ರೂ.ಗಳು ವೆಚ್ಚದ ಬಾಬ್ತಿನಲ್ಲಿ ಗುರುತಿಸಬಹುದು. ಇಲ್ಲಿ ಕುಟುಂಬದ ಸದಸ್ಯರನ್ನು ಸರಾಸರಿ ಅನುಪಾತದಲ್ಲಿ ಕಂಡ ೪ ಜನ ಸದಸ್ಯರ ಆದಾರದ ಮೇಲೆ ರೂಪಿಸಲಾಗಿದೆ.

ಅಂಕಿ ಅಂಶಗಳನ್ನು ವೆಚ್ಚದ ಅನುಗುಣವಾಗಿ ಊಹೆ ಮಾಡಿದ್ದಲ್ಲಿ ಕಂಡು ಬರುವ ಪ್ರಮುಖವಾದ ಮಾಹಿತಿಯಿಂದ ಕ್ರೋಢೀಕರಿಸಲಾದಂತೆ, ಈ ರೀತಿ ಗುರುತಿಸಲಾಗಿದೆ.

ಪ್ರತಿದಿನದ ಕುಟುಂಬವೊಂದಕ್ಕೆ ಅಗತ್ಯ ಹಾಗೂ ಅನಿವಾರ್ಯವಾದ ಖರ್ಚಿನ ಬಾಬ್ತುಗಳು ಕ್ರೋಢಿಕರಿಸಿದರೆ,

೧) ಮುಖ್ಯ ಆಹಾರ ಸಾಮಗ್ರಿಗಳು = ರೂ. ೩೧.೫೦

೨) ಇತರೆ ಆಹಾರ ಸಾಮಗ್ರಿಗಳು = ರೂ. ೧೧.೫೦

೩) ಉಪಭೋಗದ ಇತರೆ ಸಾಮಗ್ರಿ = ರೂ. ೦೮.೦೦

೪) ಕುಟುಂಬದಲ್ಲಿನ ಆರೋಗ್ಯಕ್ಕಾಗಿ ಔಷಧಿ ಮತ್ತು ಇತರೆ = ರೂ. ೦೫.೦೦

ಒಟ್ಟು ಪ್ರತಿದಿನದ ವೆಚ್ಚ ರೂ. ೫೬.೦೦. ಆದರಿಂದಲೇ ಪ್ರತಿ ಕುಟುಂಬದ ಒಂದು ತಿಂಗಳಲ್ಲಿನ ಗೃಹಬಳಕೆಗೆ ಬರಿಸುವ ವೆಚ್ಚ ೧,೭೩೬ ರೂ. ಪ್ರತಿ ವಾರ್ಷಿಕವಾಗಿ ಗೃಹ ಬಳಕೆಗೆ ಬರಿಸುತ್ತಿರುವ ವೆಚ್ಚ ೨೦,೮೩೨ ರೂ.ಗಳಂತೆ ತಿಳಿಯಬಹುದು.

ವೆಚ್ಚದ ಮೂಲಗಳನ್ನು ಗಮನಿಸಿದಂತೆ ಸಮುದಾಯಕ್ಕೆ ಆದಾಯವು ಅನಿವಾರ್ಯವಾಗಬೇಕಿದೆ. ಆದಾಯವನ್ನು ಗಳಿಸುವ ಮೂಲಗಳು ಆಧ್ಯಾಯ ೪ ರಲ್ಲಿನ ಪಟ್ಟಿ

೧೯ರಲ್ಲಿ ತೋರಿಸಲಾದ (ವೃತ್ತಿಗಳು) ಉದ್ಯೋಗಗಳಿಂದಲೇ ಗಳಿಸುವುದಾಗಿದೆ. ಸರ್ಕಾರಿ ನೌಕರರನ್ನು ಹೊರತು ಪಡಿಸಿದಂತೆ ಎರಡು ಸಮುದಾಯಗಳು ಹೆಚ್ಚು ಕಡಿಮೆ ಕೂಲಿ, ವ್ಯವಸಾಯಕೂಲಿ ಮತ್ತು ಇತರೆ ವೃತ್ತಿಗಳಲ್ಲೇ ತೊಡಗಿಸಿ ಕೊಂಡಿದ್ದಾರೆ. ಹೀಗಾಗಿ ಎರಡು ಸಮುದಾಯದಲ್ಲಿ ಸಾಮಾನ್ಯವಾಗಿ ಕಂಡು ಬರುವ ವ್ಯವಸಾಯದ ಕೂಲಿಯನ್ನು ಆದಾಯದ ಮೂಲವಾಗಿ ಪರಿಗಣಿಸಿದಲ್ಲಿ ಕೂಲಿಯ ದರ ಆಯಾ ಪರಿಸರಕ್ಕೆ ಅನುಗುಣವಾಗಿ ನೀಡಲಾಗುತ್ತಿದೆ. ಜೇನುಕುರುಬರಲ್ಲಿ ದಿನವೊಂದಕ್ಕೆ ೪೦ ರೂ. ಮತ್ತು ಕೊರಗರಲ್ಲಿ ೫೦ ರೂ.ಗಳು. ಅದೇ ರೀತಿ ಭಾರತದಲ್ಲಿ ವ್ಯವಸಾಯವೂ ಮಳೆಯ ಅನಿಶ್ಚಿತತೆಯಿಂದಲೇ ಕೂಡಿರುವುದು. ಅದಾಗೂ ವಾರ್ಷಿಕ ೨೧೦ ದಿನಗಳ ಸರ್ಕಾರಿ ಕೂಲಿಯ ದಿನಗಳ ಲೆಕ್ಕಾಚಾರ ಮಾಡಿದ್ದಲ್ಲಿ ತಿಳಿದು ಬರುವ ವಿಷಯವೆಂದರೆ,

ಪ್ರತಿಸದಸ್ಯನ ಆದಾಯಗಳಿಕೆ ರೂ = ೪೦ ದಿನದ ಕೂಲಿ X ೨೧೦ ಕೆಲಸದ ದಿನಗಳು = ರೂ. ೮,೬೧೦ ವಾರ್ಷಿಕ ಆಗಿದೆ.

ಇನ್ನಿತರ ದಿನಗಳಲ್ಲಿ ಗಳಿಕೆಯ ಆದಾಯರೂ= ೨೫ ರೂ ಪ್ರತಿದಿನ X ೧೫೫ ಪ್ರತಿತಿಂಗಳು = ರೂ. ೩,೮೭೫ ವಾರ್ಷಿಕವಾಗಿ

ಒಟ್ಟು ಆದಾಯ ವಾರ್ಷಿಕವಾಗಿ ಸದಸ್ಯನೊಬ್ಬನಂತೆ = ೧೨,೪೮೫ ರೂ.

ವಾರ್ಷಿಕವಾಗಿ ಆದಾಯ ಮತ್ತು ವೆಚ್ಚವನ್ನು ಪರಿಗಣಿಸಿದಲ್ಲಿ = ರೂ. ೧೨,೪೮೫ – ೨೦,೮೩೨ = ೮.೩೪೭ ಕೊರತೆ ಹಣ ಕಂಡುಬರುತ್ತದೆ. ಇಂತಹ ಕುಟುಂಬವನ್ನು ಬಡತನರೇಖೆಯ ಕೆಳಗಿನ ಕುಟುಂಬವೆನ್ನಬಹುದು.

ಹಾಗೆಯೇ ಕುಟುಂಬದ ಸದಸ್ಯರು ಇಬ್ಬರು ಎಂದಾದಲ್ಲಿ,

೨ ಜನ ಸದಸ್ಯರ ಆದಾಯಗಳಿಕೆ ರೂ = ೪೦ X ೪೨೦ = ರೂ. ೧೬,೮೦೦

೨ ಜನ ಸದಸ್ಯರ ಇತರ ಆದಾಯಗಳಿಕೆ ರೂ = ೨೫ X ೩೧೦ = ರೂ. ೭,೭೫೦

ಒಟ್ಟು ವಾರ್ಷಿಕ ಇಬ್ಬರ ಆದಾಯ ರೂ. = ೨೪,೫೫೦

ಉಳಿತಾಯ ಮತ್ತು ಆದಾಯ ವೆಚ್ಚವನ್ನು ಪರಿಗಣಿಸಿದಲ್ಲಿ ೨೪,೫೫೦ – ೨೦,೮೩೨ = ೩,೭೧೮ ಉಳಿತಾಯ ಕಂಡುಬರುತ್ತದೆ.

ಆದರೆ ಇಂತಹ ಕುಟುಂಬಗಳನ್ನು ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು ಎನ್ನಲು ಸಾಧ್ಯವಿಲ್ಲ ಎನ್ನುತ್ತದೆ ಅಂಕಿ ಅಂಶಗಳು. ಮೇಲಿನ ಊಹೆಯಂತೆ ವಾರ್ಷಿಕವಾಗಿ ನಿಗದಿಗೊಳಿಸಲಾದಂತಹ ಉದ್ಯೋಗ ಭರವಸೆಯ ದಿನಗಳು ಊಹೆ ಮಾಡಲಾಗಿದೆ. ನಿಜವಾಗಿಯೂ ೨೧೦ ದಿನಗಳ ಕೂಲಿ ಮತ್ತು ೧೫೫ ದಿನಗಳ ಇತರೆ ಕೆಲಸಗಳು ದೊರೆಯುವುದು ಅಸಾಧ್ಯದ ಮಾತಾಗಿದೆ. ಕಲ್ಪನೆಯಲ್ಲಿನ ೨೧೦ ದಿನಗಳು ಹಾಗೂ ೧೫೫ ದಿನಗಳ ಆದಾಯ ಗಳಿಕೆಯ ದಿನಗಳು ಕೆಲವೊಂದು ಸಂದರ್ಭದಲ್ಲಿ ಕಂಡು ಬರುತ್ತವೆ.

ಅಂತಹ ಕುಟುಂಬಗಳಲ್ಲಿ ಮಿಗುತಾಯ ಅಥವಾ ಮೌಲ್ಯದ ಆದಾಯ ಕಂಡುಬರುತ್ತದೆ. ಇಂತಹ ಕುಟುಂಬಗಳ ಜನರು ಆದಾಯವನ್ನು ಅನುಭೋಗಿ ವಸ್ತುಗಳಿಗಾಗಿ ಖರ್ಚುಮಾಡುತ್ತಿದ್ದಾರೆ. ಈ ಮಾದರಿಯ ಕೆಲವೇ ಕುಟುಂಬಗಳ ಹಂತವನ್ನು ಗಮನಿಸಿದಾಗ ಶೈಕ್ಷಣಿಕ ಲಾಭ ಪಡೆದ ಕುಟುಂಬಗಳೇ ಆದರೂ ಪ್ರಮಾಣ ಮಾತ್ರ ಕಡಿಮೆ. ಮಿಗುತಾಯ ಮೌಲ್ಯವನ್ನು ಹೊಂದಿರುವ ಕುಟುಂಬಗಳ ಒಲವು ಅವಲೋಕಿಸಿದಲ್ಲಿ

ಆದಾಯ ಹೆಚ್ಚಾದಂತೆ **ಉದ್ದೇಶಿತ ಒಲವು** → ಅನುಭೋಗದ ಪ್ರಮಾಣ ಹೆಚ್ಚು.

ಆದಾಯ ಹೆಚ್ಚಾದಂತೆ → ಉಳಿತಾಯ ಪ್ರಮಾಣದಲ್ಲಿ ಹೆಚ್ಚಳ

ಆದ್ದರಿಂದಲೇ ಉಳಿತಾಯ = ಆದಾಯ – ಅನುಭೋಗ

(Savings = Income – Consumption)

∴ ಆದಾಯ ಹೆಚ್ಚಾದಂತೆ ಜನರಲ್ಲಿ ಅನುಭೋಗದ ಪ್ರವೃತ್ತಿ ಹೆಚ್ಚಾಗಬಹುದು ಅಥವಾ ಉಳಿತಾಯದ ಪ್ರವೃತ್ತಿ ಮೂಡಬಹುದಾಗಿದೆ.

ಅನುಭೋಗ ಪ್ರವೃತ್ತಿ = ಆದಾಯ – ಉಳಿತಾಯ

ಹೂಡಿಕೆಯ ಪ್ರಮಾಣದಲ್ಲಿ ಹೆಚ್ಚಳ **ಉದ್ದೇಶಿತ ಒಲವು** → ಕಡಿಮೆ ಅನುಭೋಗ

ಅನುಭೋಗದಲ್ಲಿಯ ಹೆಚ್ಚಳದ ಪ್ರಮಾಣವಾದಂತೆ **ಉದ್ದೇಶಿತ ಒಲವು** → ಕಡಿಮೆ ಹೂಡಿಕೆಯ ನಿದರ್ಶನ ಕಂಡುಬರುತ್ತದೆ.

ಮೇಲಿನ ಎರಡು ಕ್ರಮದಲ್ಲಿನ ಉದ್ದೇಶಿತ ಒಲವು ಸಮುದಾಯಗಳಲ್ಲಿ ಯಾವುದಾದರೂ ಆಗಿರಬಹುದು. ಅವಲೋಕನದಲ್ಲಿ ಸಮುದಾಯಗಳ ಜನರು ಇತರೆ ಜನವರ್ಗ (ಸಾಮಾನ್ಯ) ದವರ ಸಂಪರ್ಕ ಹಾಗೂ ನಗರ, ತಾಲ್ಲೂಕು ಕೇಂದ್ರಗಳ ವ್ಯಾಪ್ತಿಯಲ್ಲಿ ಇಂತಹ ಸನ್ನಿವೇಶ ಅಲ್ಲಗೆಳೆಯಲು ಸಾಧ್ಯವಿಲ್ಲ. ಇಲ್ಲಿ ನೆಲೆಸಿರುವ ಸಮುದಾಯಗಳಲ್ಲಿ ಸಣ್ಣ ಪ್ರಮಾಣದ ಆರ್ಥಿಕತೆಯ ಸ್ಥಿತಿಗತಿಗಳ ಬದಲಾವಣೆ ಗುರುತಿಸಬಹುದು. ಆದರಿಂದಲೇ ಸಮುದಾಯಗಳ ಆರ್ಥಿಕತೆಯ ಬದಲಾವಣೆಯಲ್ಲಿ ಉದ್ಯೋಗಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಪರ್ಯಾಯ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಸಮುದಾಯದ ಆರ್ಥಿಕತೆ ಅಡಗಿದೆ ಎನ್ನುವುದು ಗಮನಾರ್ಹವಾದದ್ದು.

ಪುನರ್‌ವಸತಿ ಪ್ರದೇಶ ಅಥವಾ ಪರಿಸರದಲ್ಲಿ ಪರ್ಯಾಯ ಉದ್ಯೋಗಗಳು ದೊರೆಯದೇ ಇದ್ದಲ್ಲಿ ಮತ್ತು ಸರ್ಕಾರ ವ್ಯವಸ್ಥಿತಕ್ರಮದಲ್ಲಿ ಉದ್ಯೋಗ ವ್ಯವಸ್ಥೆಯ ಕ್ರಮ ಜಾರಿಗೊಳಿಸದಿದ್ದಲ್ಲಿ ಸಮುದಾಯಗಳು ಬಡತನದಲ್ಲಿ ಮುಂದುವರೆದು, ನಿಕೃಷ್ಟ ಜೀವನಕ್ಕೆ ಸಾಕ್ಷಿಯಾಗುತ್ತವೆ. ಸ್ಥಿರಜೀವನ ಕ್ರಮದಲ್ಲಿ ಭೂಹಂಚಿಕೆ, ಉದ್ಯೋಗ ಎರಡು ಅಂತರಾವಲಂಬನೆ ಹೊಂದಿರುವುದಾಗಿ ತಿಳಿದುಬರುತ್ತದೆ. ಆದ್ದರಿಂದ ಉದ್ಯೋಗ ನಿರ್ಮಾಣ ಮತ್ತು ವ್ಯವಸ್ಥಿತ ಭೂ ಹಂಚಿಕೆ ಅನಿವಾರ್ಯವಾಗಿದೆ ಎನ್ನಬಹುದು.

೪. ಸಮುದಾಯಗಳಲ್ಲಿನ ರಾಜ್ಯಾಧಿಕಾರದ ಪಾತ್ರ

ಜನರ ಜೀವನವನ್ನು ರೂಪಿಸುವ ಸಾರ್ವಭೌಮ ತೀರ್ಮಾನಗಳನ್ನು ಕೈಗೊಳ್ಳುವ ಅಧಿಕಾರ ರಾಜ್ಯಾಧಿಕಾರಕ್ಕಿದೆ. ಇಂತಹ ರಾಜ್ಯಾಧಿಕಾರದ ಮೂಲ ಭಾರತದ ಜನರು ರಚಿಸಿ ಅಂಗೀಕರಿಸಿ, ಅರ್ಪಿಸಿಕೊಂಡಿರುವ ಸಂವಿಧಾನವಾಗಿದೆ. ಇದು ಸರ್ವೋನ್ನತ ಕಾನೂನಾಗಿದೆ. ಈ ಸಂವಿಧಾನದ ವಿಧಿ-ವಿಧಾನಗಳ ಪ್ರಕಾರ ಸಮಸ್ತ ಭಾರತದ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಸಂವಿಧಾನದ ಆಶಯಗಳಂತೆ ರೂಪುಗೊಂಡ ಸೌಲಭ್ಯಗಳು ಮೂಲತಃವಾಗಿ ಜನರ ಬಡತನವನ್ನು ನಿರ್ಮೂಲನೆ ಮಾಡುವುದು ಅಗತ್ಯವೆಂದೂ ಸ್ವಾತಂತ್ರ್ಯದ ೫೯ನೇ ವರ್ಷದ ಬಳಿಕವೂ ಚರ್ಚಿಸಲಾಗುತ್ತಿದೆ. ಬಡತನದ ನಿವಾರಣೆಗೆ ಸಾವಿರ-ಲಕ್ಷ ಕೋಟಿಗಳ ರೂಪಾಯಿ ವೆಚ್ಚಮಾಡಿರುವುದಾಗಿ ಆರ್ಥಿಕ ಇಲಾಖೆಯಲ್ಲಿ ದಾಖಾಲಾದ ಅಂಕಿ-ಅಂಶಗಳು ತಿಳಿದುಬರುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಸಮುದಾಯಗಳಲ್ಲಿದ್ದ ಸಣ್ಣ ಗಣರಾಜ್ಯಗಳ ಕಲ್ಪನೆಯ ಸ್ವಯಂ ಆಡಳಿತ ವ್ಯವಸ್ಥೆಯಲ್ಲಿ ರೂಢಿಸಿಕೊಂಡಿದ್ದ ಗ್ರಾಮ ರಾಜ್ಯಗಳು ನಂತರದ ಸಂವಿಧಾನಾತ್ಮಕ ಬೆಳವಣಿಗೆಗಳು ಅನೇಕ ಮಾರ್ಪಾಟುಗಳನ್ನು ರೂಪಿಸಿವೆ. ಸ್ವಾತಂತ್ರ್ಯದ ಕೊಡುಗೆಯಾಗಿ ರೂಪುಗೊಂಡ ಪುನರ್‌ವಸತಿಯು ಸಮುದಾಯಗಳಲ್ಲಿ ಉಳಿದು ಬಂದಿದ್ದ ಆಸ್ತಿಯ ಕಲ್ಪನೆಗೆ ವಿರುದ್ಧವಾಗಿ ಅಸಮಾನತೆಯ ಹಂಚಿಕೆಯನ್ನು ಸೃಷ್ಟಿಸಿ ತಾರತಮ್ಯಗಳೊಂದಿಗೆ ಸಮಾಜಮುಖಿಯಾಗಿಸಿದೆ. ಆದರೂ ಸಂವಿಧಾನ ವಿಶೇಷ ಆಸಕ್ತಿ ವಹಿಸಿದ್ದರೂ ಪ್ರಸ್ತುತದವರೆಗೂ ಅನುಚ್ಛೇಧ ೩೮ ಮತ್ತು ೩೯ನ್ನು ಪರಿಣಾಮಕಾರಿಯಾಗಿ ಜಾರಿಮಾಡದಿರುವುದು ಸಮುದಾಯಗಳ ಬಡತನ ಮುಂದುವರೆಯಲು ರಾಜಕೀಯ ಕಾರಣವೆನ್ನಬಹುದು. “ಸಂವಿಧಾನದ ಅನುಚ್ಛೇದ ೩೮ ಮತ್ತು ೩೯ ಆರ್ಥಿಕ ಶಕ್ತಿಯ ಕೇಂದ್ರೀಕರಣವನ್ನು ತಡೆಗಟ್ಟಿ ಆಸ್ತಿ ಮತ್ತು ಆದಾಯ ಸಮನಾಗಿ ಹಂಚಿಕೆಯಾಗಬೇಕು ಹಾಗೂ ಜೀವನಕ್ಕೆ ಸಾಕಾಗುವಷ್ಟು ಸಾಧನ ಸಂಪನ್ಮೂಲಗಳು ಎಲ್ಲರಿಗೂ ಅಂದರೆ ಪುರುಷ ಮತ್ತು ಮಹಿಳೆಯರೆಲ್ಲರಿಗೂ ಸಮಾನವಾಗಿ ದೊರಕುವಂತೆ ಮಾಡಬೇಕು ಎಂದು ಸೂಚಿಸುತ್ತದೆ.”[*೧೩] ಸಂವಿಧಾನದ ಆಶಯಗಳನ್ನು ಜಾರಿ ಮಾಡುವ ಕೆಲಸ ಚುನಾಯಿತ ಪ್ರತಿನಿಧಿಗಳ ಶಾಸಕಾಂಗದ ನಿಯಂತ್ರಣದಲ್ಲಿರುತ್ತದೆ. ಇಂತಹ ಕ್ರಮದಲ್ಲಿ ಸಂವಿಧಾನಾತ್ಮಕ ಸೌಲಭ್ಯಗಳನ್ನು ಒದಗಿಸುವಲ್ಲಿ ರಾಜ್ಯಾಧಿಕಾರವನ್ನು ಹೊಂದಿರುವ ರಾಜಕೀಯ ಕಾರ್ಯಾಂಗ ಮತ್ತು ಶಾಸಕಾಂಗದ ಜವಬ್ದಾರಿ ಪ್ರಮುಖವಾಗಿದೆ. ಅತ್ಯಂತ ಕಡು ಬಡವರಿಗೂ ಸಹ ರಾಜ್ಯಾಧಿಕಾರದಲ್ಲಿ ಪಾಲು ನೀಡಲಾಗಿದೆ. ಸಂವಿಧಾನದ ಅತ್ಯುನ್ನತ ಅಧಿಕಾರ ಹೊಂದಿರುವ ಲೋಕಸಭೆ ಮತ್ತು ರಾಜ್ಯಸಭೆಯಿಂದ ಕೆಳಹಂತದ ಕ್ರಮವಾಗಿ ಗ್ರಾಮಪಂಚಾಯಿತಿಯ ಮಟ್ಟದವರೆಗೂ, ಆಯಾ ಜನಸಂಖ್ಯೆಗೆ ಅನುಗುಣವಾಗಿ ಅಯಾಯ ರಾಜ್ಯಗಳಲ್ಲಿ ಅವಕಾಶ ಮಾಡಿಕೊಡಲಾಗಿದೆ. ಇದರ ಅನ್ವಯ “ಕರ್ನಾಟಕ ರಾಜ್ಯದಲ್ಲಿ ಸುಮಾರು ೫೦ ಬುಡಕಟ್ಟು ಸಮುದಾಯಗಳು ಅಧಿಕೃತವಾಗಿ


೩,೪೬೩,೯೮೬ ಜನರನ್ನು ಹೊಂದಿದ್ದರು”.[೧೪] ಸಮುದಾಯಗಳಲ್ಲಿ ರಾಜ್ಯಾಧಿಕಾರದ ಸ್ಥಾನಮಾನದ ಕೊರತೆ ಎದ್ದುಕಾಣುತ್ತದೆ.

ಸಂವಿಧಾನ ಬದ್ಧವಾಗಿ ಎಸ್.ಸಿ./ಎಸ್.ಟಿ/ಒ.ಬಿ.ಸಿ. ಗಳು ರಾಜ್ಯಾಧಿಕಾರ ಪಡೆದಿರಬಹುದು. ಆದರೆ ಬುಡಕಟ್ಟುಗಳಾಗಲಿ, ಮೂಲನಿವಾಸಿ ಬುಡಕಟ್ಟುಗಳಾಗಲೀ ಇಂತಹ ಅವಕಾಶ ಪಡೆದಿರುವುದು ಕಂಡುಬರುವುದಿಲ್ಲ. ಮೀಸಲು ಕ್ಷೇತ್ರಗಳೇನೋ ಕಂಡುಬರುತ್ತವೆ. ಆದರೆ ಬುಡಕಟ್ಟು ಸಮುದಾಯಗಳ ಮೀಸಲು ಕ್ಷೇತ್ರಮಾತ್ರ ಇಲ್ಲದಿರುವುದು ರಾಜ್ಯಾಧಿಕಾರದ ಕೊರತೆಗೆ ಕಾರಣವೆನ್ನಬಹುದು. ಆಯಾ ರಾಜ್ಯಗಳ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯವಿಧಾನ ಸಭೆಗಳಿಗೆ ಎಮ್.ಎಲ್.ಎ. ಗಳನ್ನು ಆಯ್ಕೆ ಮಾಡಿ ಕಳುಹಿಸಲು ಮೀಸಲು ಕ್ಷೇತ್ರಗಳಿವೆ. ಮೀಸಲು ಕ್ಷೇತ್ರಗಳಲ್ಲಿ ಬುಡಕಟ್ಟು ಸಮುದಾಯಗಳನ್ನು ಹೆಚ್ಚಾಗಿ ಹೊಂದಿರುವ ಹಳೆಯ ಮೈಸೂರು, ಪಶ್ಚಿಮ ಘಟ್ಟ ಪ್ರದೇಶದ ಅರಣ್ಯಪ್ರದೇಶಗಳಲ್ಲಿ ತೀರಾ ಹಿಂದುಳಿದ ಅತಿಕಡಿಮೆ ಜನಸಂಪರ್ಕವಿರುವ, ಅರಣ್ಯದಿಂದಲೇ ಜೀವನ ನಿರ್ವಹಿಸುವ ಕೆಲವು ಬುಡಕಟ್ಟುಗಳು ಇದ್ದರೂ ರಾಜ್ಯಾಧಿಕಾರದಿಂದ ವಂಚನೆಗೊಂಡಿವೆ. ಬುಡಕಟ್ಟು ಸಮುದಾಯಗಳು ತಮ್ಮ ಜನರ ಆರ್ಥಿಕಾಭಿವೃದ್ಧಿ ಮತ್ತು ಇತರೇ ಹಿತಾಸಕ್ತಿಗಳನ್ನು ಶಾಸನಸಭೆಗಳಲ್ಲಿ ಕಾಪಾಡಲು ರಾಜ್ಯಾಧಿಕಾರವಿಲ್ಲದೆ ವಿಫಲರಾಗಿದ್ದಾರೆ. ಹೀಗಾಗಿ ಸ್ವತಂತ್ರ್ಯ ಬಂದು ೬೯ ವರ್ಷಗಳು ಕಳೆದರೂ ಸಂವಿಧಾನ ಜಾರಿಯಾಗದೇ, ಮೂಲನಿವಾಸಿ ಬುಡಕಟ್ಟು ಬಹುಜನರು ಬಡವರಾಗಿಯೇ ಜೀವನ ನಡೆಸುತ್ತಿದ್ದಾರೆ. “ರಾಜ್ಯಾದ್ಯಾಂತ ಸುಮಾರು ೩,೪೬೩,೯೮೬ ಜನಸಂಖ್ಯೆಯನ್ನು ಹೊಂದಿದ್ದರೂ”[೧೫] ಬುಡಕಟ್ಟು ಸಮುದಾಯಗಳ ಪ್ರತಿನಿಧಿಯಾಗಿ ಶಾಸನ ಸಭೆಯಲ್ಲಿ ಪಾಲ್ಗೊಳ್ಳುವವರು ಇಲ್ಲವಾಗಿರುವುದು ಕಂಡು ಬರುತ್ತದೆ.

ಶಾಸನ ಸಭೆಗಳಲ್ಲಿ ಎಸ್.ಸಿ./ಎಸ್.ಟಿ./ಒ.ಬಿ.ಸಿ. ಮತ್ತು ಮುಸ್ಲಿಂ ಸಮುದಾಯಗಳ ಶಾಸಕರಿದ್ದರೂ ಅವರು ಬುಡಕಟ್ಟು ಮೀಸಲಾತಿಯ ಅನ್ವಯ ಬುಡಕಟ್ಟು ಸಮುದಾಯಗಳಿಗೆ ಪ್ರಾತಿನಿಧ್ಯ ದೊರೆಕಿಸಿಕೊಡುವಲ್ಲಿಯೂ ವಿಫಲರಾಗಿರುವುದು ಕಂಡು ಬರುತ್ತದೆ. ಚುನಾಯಿತ ಪ್ರಾತಿನಿಧ್ಯತೆಯನ್ನು ಗ್ರಾಮ ಮಟ್ಟದಿಂದ ಗ್ರಾಮ ಪಂಚಾಯಿತಿ, ತಾಲ್ಲೂಕು ಮಟ್ಟದಿಂದ ತಾಲ್ಲೂಕು ಪಂಚಾಯಿತಿ, ಜಿಲ್ಲಾಮಟ್ಟದಿಂದ ಜಿಲ್ಲಾ ಪಂಚಾಯಿತಿ ಮತ್ತು ರಾಜ್ಯದ ಚುನಾಯಿತ ಶಾಸಕಾಂಗದಲ್ಲಿ ಎಳ್ಳಷ್ಟೂ ಪಾಲು ದೊರೆತ್ತಿಲ್ಲದಿರುವುದು ರಾಜ್ಯಾಧಿಕಾರದ ಹೀನತೆ ಎನ್ನಬಹುದು. ರಾಜ್ಯಾಧಿಕಾರದ ಹೀನತೆಯೇ ಬಡತನವಾಗಿದೆ ಎನ್ನಲುಅಡ್ಡಿಯಿಲ್ಲ. ರಾಜ್ಯಾಧಿಕಾರವನ್ನು ಹೊಂದಿರುವ ಜನವರ್ಗದವರು ತಮಗೆ ಅನುಕೂಲವಾಗುವಂತೆ ಆಸ್ತಿ ಮತ್ತು ಆದಾಯದ ಕ್ರೋಢೀಕರಣದಲ್ಲಿ ನಿರತರಾಗಿದ್ದರೆ, ಬುಡಕಟ್ಟು ಸಮುದಾಯಗಳು ರಾಜ್ಯಾಧಿಕಾರವನ್ನು ಅವರಿಗೆ ನೀಡಿ (ಓಟು ಮಾರಿಕೊಳ್ಳುವ ಮೂಲಕ) ಆಳಿಸಿಕೊಳ್ಳುತ್ತಿರುವ ದಾಸ್ಯ ವರ್ಗವಾಗಿ ಆಸ್ತಿ ಮತ್ತು ಆದಾಯದ ಹೀನತೆಯಿಂದ ಬಡವರಾಗಿದ್ದಾರೆ. ಹೀಗಾಗಿ ರಾಜ್ಯಾಧಿಕಾರ ಮತ್ತು ಬಡತನದ ನಡುವೆ ವಿರುದ್ಧ ಸಂಬಂಧವಿದೆ ಎನ್ನಬಹುದು. ಅಂದರೆ

ಯಾವುದೇ ಜನ ಸಮುದಾಯಕ್ಕೆ ರಾಜ್ಯಾಧಿಕಾರ ಒಡೆತನದ ಪ್ರಮಾಣ ಹೆಚ್ಚಾದಂತೆ ಬಡತನದ ಪ್ರಮಾಣ ಕಡಿಮೆಯಾಗುತ್ತದೆ. ಹಾಗೂ ರಾಜ್ಯಾಧಿಕಾರ ಒಡೆತನದ ಪ್ರಮಾಣ ಕಡಿಮೆಯಾದಂತೆ ಬಡತನದ ಪ್ರಮಾಣ ಹೆಚ್ಚಾಗುತ್ತದೆ. ಈ ಸಂಬಂಧವನ್ನು ಒಂದು ರೇಖಾಚಿತ್ರದ ಸಹಾಯದಿಂದ ತಿಳಿಯಬಹುದು.

ರೇಖಾಚಿತ್ರ ೫.೩ ರಾಜ್ಯಾದಿಕಾರ ಬಡತನ ರೇಖೆ



ರೇಖಾಚಿತ್ರದಲ್ಲಿ ತೋರಿಸಿರುವಂತೆ OX ಅಕ್ಷವೂ ಬಡತನವನ್ನು OY ಅಕ್ಷವೂ ರಾಜ್ಯಾಧಿಕಾರವನ್ನು ಪ್ರತಿನಿಧಿಸುತ್ತವೆ. ಬುಡಕಟ್ಟು ಸಮುದಾಯಕ್ಕೆ OR ಪ್ರಮಾಣದಷ್ಟು ರಾಜ್ಯಾಧಿಕಾರ ವಿದ್ದಾಗ OL ಪ್ರಮಾಣದಷ್ಟು ಬಡತನವಿರುತ್ತದೆ. ಅದೇ ರೀತಿ OP ಪ್ರಮಾಣದಷ್ಟು ರಾಜ್ಯಾಧಿಕಾರವಿದ್ದಾಗ ON ಪ್ರಮಾಣದಷ್ಟು ಬಡತನವನ್ನು ಹೊಂದಿರುತ್ತದೆ. ಅಂದರೆ ರಾಜ್ಯಾಧಿಕಾರ ಒಡೆತನದ ಪ್ರಮಾಣ ಹೆಚ್ಚಾದಂತೆ ಬಡತನದ ಪ್ರಮಾಣ ಕಡಿಮೆಯಗುತ್ತದೆ. ಹಾಗೂ ರಾಜ್ಯಾಧಿಕಾರ ಒಡೆತನದ ಪ್ರಮಾಣದ ಕಡಿಮೆಯಾದಂತೆ ಬಡತನದ ಪ್ರಮಾಣ ಹೆಚ್ಚಾಗುತ್ತದೆ.

AE ರಾಜ್ಯಾಧಿಕಾರ ಬಡತನ ರೇಖೆಯು ಎಡದಿಂದ ಬಲಕ್ಕೆ ಇಳಿಜಾರನ್ನು ಹೊಂದಿದ್ದು, ಇವೆರಡರ ಮಧ್ಯೆ ವಿರುದ್ಧ ಸಂಬಂಧವನ್ನು ಸೂಚಿಸುತ್ತದೆ. ಅಧಿಕಾರದ ಒಡೆತನ ಹೊಂದಿರುವವರಲ್ಲಿ ಬಡತನದ ಕರಿನೆರಳು ಸ್ವಲ್ಪವಾದರೂ ನಿರ್ಮೂಲವಾಗಿರುತ್ತದೆ ಎನ್ನುವುದಕ್ಕೆ ಹನಗೋಡು ಜಿಲ್ಲಾ ಪಂಚಾಯಿತಿ ಕ್ಷೇತ್ರ ಸಾಕ್ಷಿಯಾಗಿದೆ. ರಾಜ್ಯದ ಮೊದಲ

ಮೂಲನಿವಾಸಿ ಬುಡಕಟ್ಟು ಸಮುದಾಯದ ಚುನಾಯಿತ ಏಕೈಕ ಮಹಿಳೆ ಜಾಜಿ ತಿಮ್ಮಯ್ಯ ರಾಜ್ಯಾಧಿಕಾರದಿಂದ ಬಡತನ ನಿರ್ಮೂಲನೆ ಮಾಡುವ ಸಾಧ್ಯತೆಯನ್ನು ತೋರಿಸಿಕೊಟ್ಟಿದ್ದಾಳೆ.

ಸಮುದಾಯಗಳು ಸ್ವಯಂ ಆಡಳಿತ ವ್ಯವಸ್ಥೆ ರೂಪಿಸಿ ಕೊಂಡಿದ್ದದು ಸ್ವಾತಂತ್ರ್ಯ ಪೂರ್ವದಲ್ಲಿನ ಬೆಳವಣಿಗೆಗಳಲ್ಲಿ ಮುಖ್ಯವಾದ ಕ್ರಮವಾಗಿತ್ತು. ಸ್ವಾತಂತ್ರ್ಯದ ನಂತರ ಸಂವಿಧಾನದತ್ತವಾದಲ್ಲಿ ಸಿಲುಕಿದ ನಂತರದ ಬೆಳವಣಿಗೆಗಳು ಸ್ವಯಂ ಆಡಳಿತಕ್ಕೆ ಅನೇಕ ತೊಡರುಗಳು ಹಾಕಲಾಗಿದೆ. ಈ ನಿಟ್ಟಿನಲ್ಲಿ ಸಂವಿಧಾನಾತ್ಮಕ ಕಾಯ್ದೆ ಕಾನೂನುಗಳು ರೂಪಿಸಿರುವುದು ಕಂಡು ಬರುತ್ತದೆ. ಇಂತಹ ಸಂವಿಧಾನಾತ್ಮಕ ತಿದ್ದುಪಡಿ ಕಾಯ್ದೆಯಲ್ಲಿ ೧೯೯೬ ರ ಭೂರಿಯಾರವರ ನೇತೃತ್ವದ ಸಮಿತಿಯನ್ನು ಮುಖ್ಯವಾಗಿ ನೆನೆಯಬಹುದಾಗಿದೆ. "ಸಮುದಾಯಗಳ ಸ್ವಾವಲಂಬನಾ ಮತ್ತು ಸಾಂಪ್ರದಾಯಿಕ ಪರಿಸರ ನಿರ್ವಹಣಾ ಕ್ರಮಗಳಿಗೆ ಸಹಭಾಗಿತ್ವದ ಹಿನ್ನೆಲೆಯಲ್ಲಿ, ಜನರೆ ಪಂಚಾಯಿತಿಗೆ ಅಧ್ಯಕ್ಷರಾಗಲು ಅನುಕೂಲ ಕಲ್ಪಿಸಲಾಗಿದೆ ಶೇ.೫೦% ಬುಡಕಟ್ಟು ಮೀಸಲಾತಿಯನ್ನು ಪಂಚಾಯತಿಗಳಲ್ಲಿ ಸ್ಥಾನ ಕಾಯ್ದಿರಿಸುವ ಮೂಲಕ, ಜನವಸತಿಯಿರುವ ಬುಡಕಟ್ಟುಗಳ ಹಾಡಿಗಳಲ್ಲಿ ಗ್ರಾಮಸಭೆಯನ್ನು ಮಾನ್ಯ ಮಾಡಲಾಗಿದೆ."[೧೬] ಅಲ್ಲದೆ ಸಮುದಾಯಗಳ ಸಂಪ್ರದಾಯ ಮತ್ತು ಪದ್ಧತಿಗಳನ್ನೊಳಗೊಂಡ ಸಾಂಪ್ರದಾಯಿಕ ನಿರ್ವಹಣಾ ಕ್ರಮಗಳಿಗೆ ಪೂರಕವಾದ ಪ್ರಜಾಸತ್ತಾತ್ಮಕ ಸಹಭಾಗಿತ್ವದ ಆಡಳಿತ ಘಟಕಕ್ಕೆ ಅವಕಾಶ ಮಾಡಿ ಕೊಡಲಾಗಿದೆ. ಅಲ್ಲದೆ ೧೯೬೧ ರಿಂದ ಪ್ರಾರಂಭಗೊಂಡ "ದೇಬರ್ ಆಯೋಗ"ದಿಂದ ಮೊದಲುಗೊಂಡು, ೧೯೯೬ರ ಡಿಸೆಂಬರ್ ೨೪ ರ ಭೂರಿಯಾ ಆಯೋಗದವರೆಗೂ ಅನೇಕ ಶಿಫಾರಸ್ಸುಗಳು ಮಾಡಲಾಗಿದೆ. ಅವುಗಳನ್ನು ಸಂವಿಧಾನವು ಕಾಯ್ದೆ ರೂಪದಲ್ಲಿ ಮಾನ್ಯ ಮಾಡಿದೆ. ಇಷ್ಟೆಲ್ಲಾ ಆದರೂ ಕರ್ನಾಟಕ ರಾಜ್ಯದಲ್ಲಿನ ಸಮುದಾಯಗಳಲ್ಲಿ ರಾಜ್ಯಾಧಿಕಾರವೂ ಬಲಗೊಂಡ ಲಕ್ಷಣಗಳೇ ಕಂಡು ಬರುವುದಿಲ್ಲ. ಇಡೀ ರಾಜ್ಯಕ್ಕೆ ಎಂದಿನಂತೆ ಕಾಣಬರುವ ಜಾಜಿ ತಿಮ್ಮಯ್ಯ ಜಿಲ್ಲಾ ಪಂಚಾಯ್ತಿಯ ಉಪಾಧ್ಯಕ್ಷ ಸ್ಥಾನವನ್ನು ಏರಿದ ರಾಜ್ಯದ ಮೊಟ್ಟಮೊದಲ ಮೂಲನಿವಾಸಿ ಬುಡಕಟ್ಟು ಸಮುದಾಯದ ಮಹಿಳೆ. ಇದುವರೆಗೂ ಸಂವಿಧಾನದತ್ತ ಸೌಲಭ್ಯಗಳಲ್ಲಿ ಈ ಮಟ್ಟಕ್ಕೆ ಯಾರೂ ಏರಿರಲ್ಲಿಲ್ಲ ಎನ್ನುವುದು ಒಂದು ಹೆಗ್ಗಳಿಕೆ. ಈ ನಿಟ್ಟಿನಲ್ಲಿ ಹೆಚ್ಚು ಜನರು ಸಂವಿಧಾನದತ್ತ ಮೀಸಲಾತಿಯ ಸೌಲಭ್ಯವನ್ನು ಪಡೆಯುವಲ್ಲಿ ಹೋರಾಟ ಮಾಡುವ ಕ್ರಮ ಜನರಲ್ಲಿ ಮೂಡಬೇಕಿದೆ.

ಮೈಸೂರು ಜಿಲ್ಲಾ ಪಂಚಾಯ್ತಿಯ ೨೦೦೦ ನೇ ಸಾಲಿನಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಹುಣಸೂರು ತಾಲ್ಲೂಕಿನ ಹನಗೂಡು ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಜಾಜಿ ಆಯ್ಕೆಯಾಗಿದ್ದಾಳೆ. "ಜಾಜಿ ತಿಮ್ಮಯ್ಯ" ಹೇಳುವಂತೆ "ನಾವು ಕಾಡಿನೊಳಕ್ಕೆ ಇದ್ದಾಗ ಯಾರನ್ನೂ ಯಾವುದಕ್ಕೂ ಬೇಡುತ್ತಿರಲಿಲ್ಲ. ಆಕಾಶ ಮಳೆ ಕೊಡುತ್ತಿತ್ತು. ಭೂಮಿ ಅನ್ನ ಕೊಡುತ್ತಿತ್ತು. ಅಲ್ಲಿ ನಾ ಮೇಲೆ ಎನ್ನುವಂತಿರಲಿಲ್ಲ.

ಅರಣ್ಯತಾಯಿ ಕೊಟ್ಟಿದ್ದು ಉಂಡು ಸುಖವಾಗಿದ್ದೆವು. ಎನ್ನುವಾಗ ಅವರ ಕಂಗಳಲ್ಲಿ ಹಳೆಯ ನೆನಪು ಮೂಡಿ ಕಷ್ಟಗಳು ಆರಂಭವಾಗಿದ್ದೇ ತವರು ಮನೆ ಅರಣ್ಯ ಬಿಟ್ಟು ನಾಡಿಗೆ ಬಂದ ಮೇಲೆ ಸಾರ್. ಕಾಡಿನಲ್ಲಿರುವಾಗ ಯಾರ ಮುಂದೆಯೂ ನಾವು ಕೈಯೊಡ್ಡಿ ನಿಲ್ಲುವ ಸನ್ನಿವೇಶವೆ ಇರಲಿಲ್ಲ. ಈಗಲೇ ನಾವು ಅತಂತ್ರರಾಗಿದ್ದೇವೆ. ಎಲ್ಲದಕ್ಕೂ ಬೇಡುವಂತಾಗಿದೆ ಎನ್ನುತ್ತಾರೆ.''[೧೭] ಹುಣಸೂರಿನ ಶೆಟ್ಟಿಹಳ್ಳಿಯಲ್ಲಿರುವ ಸುಮಾರು ೫೫ ವರ್ಷದ ಈ ಮಹಿಳೆ ಸಮುದಾಯದ ಮಹತ್ವಾಕಾಂಕ್ಷಿ ಮಹಿಳೆಯೆನ್ನಬಹುದು. ತಮ್ಮ ೧೨ನೇ ವಯಸ್ಸಿಗೆ ವಿವಾಹವಾದ ಜಾಜಿ ೮ನೇ ತರಗತಿಯ ವರೆಗಿನ ವಿದ್ಯಾಭ್ಯಾಸನ್ನು ಸ್ವಯಂ ಸಂಸ್ಥೆಯಿಂದ ಪೂರೈಸಿದ್ದಾರೆ. ಪತಿ ತಿಮ್ಮಯ್ಯ ಸರ್ಕಾರ ನೀಡಿದ ಎರಡು ಎಕರೆ ಜಮೀನಿನಲ್ಲಿ ವರ್ಷಕ್ಕಾಗುವಷ್ಟು ರಾಗಿ, ಜೋಳವನ್ನು ಬೆಳೆಯುತ್ತಾರೆ. ೧೯೭೨ರಲ್ಲಿ ಜಾರಿಗೆ ಬಂದ ವನ್ಯಜೀವಿ ಸುರಕ್ಷತಾ ಕಾಯ್ದೆಯ ಪ್ರಕಾರ ಕಾಡಿನಿಂದ ಒಕ್ಕಲೆಬ್ಬಿಸಲಾಗಿ, ಅಲ್ಲಿಂದ ಸುಮಾರು ೨೫ ವರ್ಷಗಳ ಕಾಲ ದುಡಿಯಲು ಭೂಮಿ ಇಲ್ಲದೆ ಇನ್ನೊಬ್ಬರ ಮನೆಯಲ್ಲಿ ಜೀತಕ್ಕೆ ಇದ್ದ ದಿನಗಳು ನೆನೆಯುತ್ತಾರೆ.

"ಜಾಜಿ ತಿಮ್ಮಯ್ಯ ಹೇಳುವಂತೆ ಸುಮಾರು ೭೦೦ ಕುಟುಂಬಗಳು ಮೈಸೂರು ಜಿಲ್ಲೆಯಲ್ಲಿ ಈಗಲೂ ಭೂಮಿ ಇಲ್ಲದವುಗಳಿವೆ. ಅವುಗಳ ಭೂಮಿಗಾಗಿ ನಿರಂತರ ಹೋರಾಟ ಪ್ರಾರಂಭಿಸಿದ್ದೇನೆ. ಜಿಲ್ಲಾ ಪಂಚಾಯ್ತಿಯ ಸ್ಥಾಯಿ ಸಮಿತಿಯಲ್ಲಿ ಆರೋಗ್ಯ, ಶಿಕ್ಷಣದ ಕೆಲಸ ಮಾಡಿರುವುದರಿಂದ, ನಮ್ಮ ಹಕ್ಕುಗಳು, ಸಮಸ್ಯೆಗಳನ್ನು ಅರಿತು ಅವುಗಳ ನಿವಾರಣೆಗೆ ಸಂಘಟಿತವಾದ ಹೋರಾಟವನ್ನು ಮಾಡಿದ್ದೇನೆ. ನಾವು ಕೂಡ ಈ ದೇಶದ ಪ್ರಜೆಗಳು. ಎಲ್ಲರಿಗೂ ಸಿಗುವ ಸೌಲಭ್ಯಗಳು ನಮಗೂ ಸಿಗಬೇಕು. ಅದರಲ್ಲಿ ರಾಜಿಯ ಪ್ರಶ್ನೆಯೇ ಇಲ್ಲ. ನಮ್ಮ ಹಕ್ಕಿಗಾಗಿ ನಮ್ಮ ಹೋರಾಟ ನಿರಂತರ ಎಂದು ಅವರು ದೃಢವಾಗಿ ಹೇಳುತ್ತಾರೆ."[೧೮] ಹೀಗಾಗಿ ಮೂಲನಿವಾಸಿ ಬುಡಕಟ್ಟುಗಳ ಬಡತನ ನಿವಾರಣೆಯಲ್ಲಿ ವ್ಯವಸ್ಥಿತ ಕ್ರಮವಾಗಿ ಸಂವಿಧಾನ ಜಾರಿಯಾಗದಿರುವುದು ಒಂದು ಕಾರಣವೆನ್ನಬಹುದು.

ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಸ್ವಯಂ ಆಡಳಿತ ಗ್ರಾಮಗಳ ಗ್ರಾಮಸ್ವರಾಜ್ಯದ ಕಲ್ಪನೆ ಸಿದ್ಧಗೊಳಿಸಿದ್ದರೂ ಅನುಷ್ಠಾನಗೊಂಡ ಬಗ್ಗೆ ಮಾಹಿತಿಯೇ ಕಂಡುಬರುವುದಿಲ್ಲ. ಅಭಿವೃದ್ಧಿಯ ಪಥವೇ ಸಂವಿಧಾನಾತ್ಮಕ ಸೌಲಭ್ಯಗಳನ್ನು ಒದಗಿಸಿಕೊಡುವುದಾಗಿದೆ. ಇಂಥಾ ಕಾರ್ಯಸಾಧ್ಯತೆಯನ್ನು ಜನರು ತಳ್ಳಿಹಾಕುತ್ತಾರೆ. ಒಂದು ರೀತಿಯಲ್ಲಿ ಮೂಲನಿವಾಸಿಗಳನ್ನು ಸುಲಿಗೆ ಮಾಡುತ್ತಿರುವಂತಹ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಅಲ್ಲದೆ ಈ ಜನರಿಗೆ ಅಧಿಕಾರ ಕೊಡುವ ಕಾರ್ಯತಂತ್ರಗಳ ಬಗ್ಗೆ ದೇಶದ ವ್ಯವಸ್ಥೆ ಮೀನಾಮೇಷ ಮಾಡುತ್ತಾ ಸಮಯ ವ್ಯರ್ಥ ಮಾಡುತ್ತಿದೆ. ಸಂವಿಧಾನವು ರಾಜ್ಯಾಧಿಕಾರದ ಗುರಿಯೊಂದಿಗೆ ದೇಶದ ಅಭಿವೃದ್ದಿಯಲ್ಲಿ ಎಲ್ಲಾ ಜನರ ಭಾಗವಹಿಸುವಿಕೆಯನ್ನು ಬಯಸುತ್ತದೆ. ಅಂತಹ ಭಾಗವಹಿಸುವಿಕೆಯ ಅಭಿವೃದ್ದಿ ನಿಜವಾಗಿಯೂ ಸ್ಥಳೀಯ ಸ್ವಯಂ ಆಡಳಿತದ ಗ್ರಾಮಗಳನ್ನು

ಅವಲಂಬಿಸಿದೆ. ಪೂರ್ವದಲ್ಲಿ ಸಮುದಾಯಗಳ ಪ್ರತೀ ಕುಟುಂಬವೂ ಸಹ ತಮ್ಮ ಸಮುದಾಯವೇ ಒಂದು ಸಂಘಟಿತವಾದ ಕುಟುಂಬ ಎಂದು ಭಾವಿಸಿದ್ದವು, ಸ್ವರಾಜ್ಯದ ಕಲ್ಪನೆಯ ಸಿದ್ಧಾಂತ ನಂಬಿ ಬೆಳೆದು ಬಂದ ರೀತಿನೀತಿಗಳು ಪ್ರಸ್ತುತದ ಗ್ರಾಮ ಸ್ವರಾಜ್ಯಕ್ಕೆ ಮಾದರಿಯಾಗಿದ್ದವು ಎನ್ನಬಹುದು. ಆದರೆ ಈಗಿನ ಸಮಾಜದಲ್ಲಿ ಪಂಚಾಯಿತಿಗಳು ವಿಪರೀತ ಭ್ರಷ್ಟಗೊಂಡಿವೆ. ಜಾಜಿತಿಮ್ಮಯ್ಯ ಎಂಬ ಮಹಿಳೆಯನ್ನು ಹೊರತುಪಡಿಸಿದಲ್ಲಿ ಜೇನುಕುರುಬರಲ್ಲಾಗಲೀ ಅಥವಾ ಕೊರಗರಲ್ಲಾಗಲಿ ರಾಜ್ಯಾಧಿಕಾರ ಪಡೆಯಲಾಗಲಿಲ್ಲ. ಎಲ್ಲಾ ಗ್ರಾಮ ಅಥವಾ ಕಾಲೋನಿಗಳಲ್ಲಿ ವಿವಿಧ ಪಕ್ಷಗಳ ಹಿಂಬಾಲಕರಂತೆ ತಮ್ಮದೇ ಮೀಸಲಾತಿಯನ್ನು ಬೇರೆಯವರೆಗೆ ಬಿಟ್ಟು ಕೊಟ್ಟು ಅವರ ಅನುಯಾಯಿಗಳಾಗಿರುವರು ಮತ್ತು ಕೆಲವು ಕುಟುಂಬಗಳು ತಮ್ಮ ಪಾಡಿಗೆ ತಾವಾಗಿ ದುಡಿದು ತಿನ್ನಬೇಕು ಸಾರ್ ಎನ್ನುವರು. ಇಲ್ಲಿನ ಎಲ್ಲಾ ಕಾಲೋನಿಗಳಲ್ಲಿ ಮತ್ತು ಗ್ರಾಮ ಸಮುದಾಯಗಳ ಬಹುಜನ ಮತದಾರರು ಚುನಾವಣೆಯ ಸಮಯದಲ್ಲಿ ಮತ ಚಲಾಯಿಸುವಾಗ, ಮೇಲ್ಜಾತಿ ಶ್ರೀಮಂತರು, ಭೂಮಾಲೀಕರು ಮತ್ತು ವಿವಿಧ ರಾಜಕೀಯ ಪಕ್ಷಗಳ ನಾಯಕರು ನೀಡುವ ಹಣ, ಹೆಂಡ, ಸಾರಾಯಿ, ಊಟ, ತಿಂಡಿ, ಬಟ್ಟೆ ಮುಂತಾದ ವಸ್ತುಗಳಿಗೆ ಮತ ಮಾರಾಟ ಮಾಡಿಕೊಂಡಿರುತ್ತಾರೆ. ಮಾರಾಟದ ಕ್ರಮದಲ್ಲಿ ಅಲ್ಪ ಸ್ವಲ್ಪ ಶಿಕ್ಷಣ ಪಡೆದ ಸಮುದಾಯದ ಜನರೇ ನೇರ ಮಧ್ಯವರ್ತಿಯಾಗಿ ವರ್ತಿಸುವುದುಂಟು. ಹೀಗಾಗಿ ಇವರಿಂದ ಆಯ್ಕೆ ಗೊಂಡವರು ಶಾಸನ ಸಭೆ ಅಥವಾ ಗ್ರಾಮ ಪಂಚಾಯತಿಗಳಲ್ಲಿ ಸಮುದಾಯದ ಜನರ ಬಡತನದ ಬಗ್ಗೆ ಚಕಾರವೆತ್ತುವುದಿಲ್ಲ. ಇದರಿಂದಾಗಿ ಸಂವಿಧಾನದ ಜಾರಿಯಾಗದೇ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಜನರು ಬಡತನದಲ್ಲೇ ಜೀವಿಸುತ್ತಿರುವುದು ಎನ್ನಬಹುದು. ಹೀಗಾಗಿಯೇ ಅರ್ಥಶಾಸ್ತ್ರಜ್ಞರುಗಳು ಸಹ ಬಡತನವನ್ನು ಸಾಮಾಜಿಕ – ಆರ್ಥಿಕ ಸಮಸ್ಯೆ ಎಂದು ಹೇಳುತಾರೆ. ಆದರೆ ಮೇಲಿನ ವಿಶ್ಲೇಷಣೆಯು ಬಡತನವು ಕೇವಲ ಸಾಮಾಜಿಕ – ಆರ್ಥಿಕ ಸಮಸ್ಯೆ ಮಾತ್ರವಲ್ಲ, ಅದು ರಾಜಕೀಯ ಸಮಸ್ಯೆಯೂ ಆಗಿದೆ ಎಂಬುದನ್ನು ನಿರೂಪಿಸುತ್ತದೆ.

****

ಅಡಿ ಟಿಪ್ಪಣಿಗಳು

1. ದೊಡ್ಡಮುನಿ ಲೋಕರಾಜು: ಕರ್ನಾಟಕ ಸಿಂಧೊಳ್ಳ ಸಮುದಾಯದ ಸಮಾಜ ಶಾಸ್ತ್ರೀಯ ಅಧ್ಯಯನ, ಅಪ್ರಕಟಿತ ಮಹಾಪ್ರಬಂಧ, ಹಂ.ಪಿ.ವಿ.ವಿ (ಪುಟ ೧೯೫).
2. ವಿ. ಷಣ್ಮುಗಂ. (ಲೇ) ಬಡತನ ಮತ್ತು ಪರಿಹಾರ. ಆಸ್ಪೀಸ್ ಪಬ್ಲಿಕೇಶನ್ ಮೈಸೂರು. ಪು ೪.
3. ವಕ್ತೃ: ಕಾಳಮ್ಮ w/o ಬಸವಯ್ಯ : ಬಲ್ಲೇನಹಳ್ಳಿ ಹುಣಸೂರು ತಾ. ಸಂದರ್ಶನ. ೨೦.೬.೦೪
4. ವಕ್ತೃ: ಅವರೇ
5. ಕರ್ನಾಟಕ ಸರ್ಕಾರ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಮಾರ್ಗ ಸೂಚಿ ೨೦೦೦ ಪುಟ ೩೪.

6. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ನಿರ್ದೇಶನಾಲಯ ಕೈಪಿಡಿ. ಕರ್ನಾಟಕ ಸರ್ಕಾರ.
7. ವಿ. ಷಣ್ಮುಗಂ (ಲೇ) ಬಡತನ ಮತ್ತು ಪರಿಹಾರ.
8. ಕರ್ನಾಟಕ ಸರ್ಕಾರ. ಮಾನವ ಸಂಪನ್ಮೂಲ ಇಲಾಖಾ ವರದಿ. ಪುಟ ೯೫.
9. ಪರಿಶಿಷ್ಟ ವರ್ಗಗಳ ನಿರ್ದೇಶನಾಲಯ. ಬೆಂಗಳೂರು, ವಾರ್ಷಿಕ ವರದಿ ಕರ್ನಾಟಕ ಸರ್ಕಾರ.
10. ವಕ್ತೃ: ರವಿ ನಾಗಪುರ ಘಟಕ ೪. ಹುಣಸೂರು ತಾ ಸಂದರ್ಶನ ೨೦.೬.೦೪
11. ವಕ್ತೃ: ಮಾದೇವಮ್ಮ w/o ಸಿದ್ಧಯ್ಯ: ಕಾಳೆನಹಳ್ಳಿ ಹುಣಸೂರು(ತಾ) ಸಂದರ್ಶನ. ೨೧.೬.೦೪.
12. ವಿ. ಷಣ್ಮುಗಂ (ಲೇ) ಬಡತನ ಮತ್ತು ಪರಿಹಾರ, ಜಸ್ಟೀಸ್ ಪಬ್ಲಿಕೇಶನ್ ಮೈಸೂರು.
13. ವಿ. ಷಣ್ಮುಗಂ (ಲೇ) ಬಡತನ ಮತ್ತು ಪರಿಹಾರ, ಜಸ್ಟೀಸ್ ಪಬ್ಲಿಕೇಶನ್ ಮೈಸೂರು ಪುಟ.
14. ಪರಿಶಿಷ್ಟ ವರ್ಗಗಳ ಕೈಪಿಡಿ: ಕರ್ನಾಟಕ ಸರ್ಕಾರ.
15. ಕರ್ನಾಟಕ ಸರ್ಕಾರದ ಜನಗಣತಿವರದಿ ಪುಟ: ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.
16. ಬುಡಕಟ್ಟು ಅಧ್ಯಯನ ಸಂಚಿಕೆ, ೪: ಪ್ರರಂಗ ಹಂಪಿ, ಕ.ವಿ.ವಿ. ಪುಟ.
17. ವಕ್ತೃ: ಜಾಜಿ ತಿಮ್ಮಯ್ಯ ಮೊದಲ ಜೇನುಕುರುಬ ಸಮುದಾಯದ ಚುನಾಯಿತ ಮಹಿಳೆ: ಹನಗೂಡು ಸಂದರ್ಶನ: ೨೧.೦೬.೨೦೦೪
18. ವಕ್ತೃ: ಅವರೇ.

ಅಧ್ಯಾಯ: ೬

ಸಮುದಾಯಗಳ ಅಭಿವೃದ್ಧಿ ಮತ್ತು ಪ್ರಗತಿಯ ದಿಕ್ಕು ದಿಸೆ

೧. ಅಭಿವೃದ್ಧಿಯ ಸ್ವರೂಪ

೨. ಸಮುದಾಯಗಳಲ್ಲಿನ ಹೋರಾಟದ ಮುಖ

೩. ಅಭಿವೃದ್ಧಿಯಲ್ಲಿ ಸ್ವಯಂ ಸಂಸ್ಥೆಗಳ ಪಾತ್ರ

೪. ಸಮುದಾಯಗಳ ಅಭಿವೃದ್ಧಿ ಮಾದರಿ

ಸಮುದಾಯಗಳ ಅಭಿವೃದ್ಧಿ ಮತ್ತು ಪ್ರಗತಿಯ ದಿಕ್ಕು – ದಿಸೆ

ಭಾರತದ ಬುಡಕಟ್ಟು ಜನಸಂಖ್ಯೆಯ ವೈಶಿಷ್ಟತೆ ಅವರ ಬದುಕನ್ನು ತಿಳಿದಾಗ, ರಾಷ್ಟ್ರೀಯ ಜೀವನದ ಮುಖ್ಯವಾಹಿನಿಯಿಂದ ದೂರವಾಗಿರಿಸಿರುವುದು ಕಂಡುಬರುತ್ತದೆ. ಆದರಂತೆ ಅರ್ಥವ್ಯವಸ್ಥೆಯೂ ಕೂಡ ಅವರಂತೆಯೇ ವೈಶಿಷ್ಟ್ಯಪೂರ್ಣವಾಗಿದೆ. ಅರ್ಥವ್ಯವಸ್ಥೆಯನ್ನು ಸರಿಗಟ್ಟುವಲ್ಲಿ ಪ್ರಾಚೀನ ಕಾಲದ ತಂತ್ರಜ್ಞಾನ ಕಾರಣ ಎನ್ನಲಾಗುತ್ತಿದೆ. ಅರ್ಥವ್ಯವಸ್ಥೆ ಸಂಕುಚಿತ ಹಾಗೂ ವಿಭಿನ್ನತೆಯನ್ನು ತೋರದಿರುವುದೇ ಇದಕ್ಕೆ ಕಾರಣ. ಬುಡಕಟ್ಟು ಜನರ ಆರ್ಥಿಕತೆಯು ಸ್ವಾತಂತ್ರ ನಂತರ ವಿವಿಧ ದಿಕ್ಕುಗಳಲ್ಲಿ ಪರಿವರ್ತನೆ ಹೊಂದಲು ಆರಂಭವಾಯಿತು. ಬುಡಕಟ್ಟು ಸಮಾಜವನ್ನು ದೇಶದ ಮುಖ್ಯವಾಹಿನಿಗೆ ಅವರ ಸಾಮಾಜಿಕ, ಸಾಂಸ್ಕೃತಿಕ ಚೌಕಟ್ಟಿನ ನೆಲೆಯೊಳಗೆ ತರುವುದು ಸರ್ಕಾರದ ಕಾರ್ಯ ನೀತಿಯ ಪ್ರಮುಖ ಧ್ಯೇಯವಾಯಿತು. ಇಂತಹ ವಿಶಾಲ ಕಾರ್ಯನೀತಿಯ ಚೌಕಟ್ಟನ್ನು ಬೆನ್ನಟ್ಟುವ ನಿಟ್ಟಿನಲ್ಲಿ ಸಮುದಾಯಗಳ ಅಭಿವೃದ್ಧಿಗಾಗಿ ವಿಭಿನ್ನ ಯುದ್ಧ ಕೌಶಲ್ಯಗಳನ್ನು, ವಿಭಿನ್ನ ಯೋಜನೆಗಳ ಅವಧಿಯಲ್ಲಿ ಭಾರತ ಸರ್ಕಾರ ಹೊರತಂದಿತು. ಆದರೆ ನಮ್ಮ ಅಭಿವೃದ್ಧಿ ಪರಿಕಲ್ಪನೆ ಇದಲ್ಲ. ಇದು ಸಂಘರ್ಷದ ಗುಲಾಮರಾಗಿಸುವ ಉನ್ನಾರದ ಅಭಿವೃದ್ಧಿ. ಇದು ಪಶ್ಚಿಮದಿಂದ ಸ್ವೀಕರಿಸಿದ್ದು ಮತ್ತು ಅದು ಇಡಿಯಾಗಿ ಆರ್ಥಿಕ ನೆಲೆಯನ್ನು ಆಧರಿಸಿರುವಂತಹುದು. ಇಂತಹ ಅಭಿವೃದ್ಧಿ ಯೋಜನೆಗಳಿಗೆ ನಮ್ಮ ಸಾಂಸ್ಕೃತಿಕ ಬಹುರೂಪತೆಗಳ ಕಡೆಗೆ ನೋಟ ಇಲ್ಲ. ಹೀಗಾಗಿ ಇಂದು ಪ್ರಗತಿಯ ನೆಪದಲ್ಲಿ ನಮ್ಮ ಬುಡಕಟ್ಟುಗಳಿಗಿದ್ದ ನೈಸರ್ಗಿಕ ಸಂಪನ್ಮೂಲಗಳನ್ನು ಅವರ ಶಕ್ತಿ ಮೂಲಗಳನ್ನು ನಾಶಮಾಡಿದೆ. ನಮ್ಮ ಅಭಿವೃದ್ಧಿಯ ಮುಂದಿರುವುದು ಯಂತ್ರ ಹೊರತು ಮಾನವನ ಮನಸ್ಸಲ್ಲ. ಮಾನವ ಸಮುದಾಯದ ಬದುಕಿನೊಂದಿಗೆ ಒಂದಾಗಿದ್ದ ಕಸುಬು ಬದುಕಿನಿಂದ ದೂರವಾಯಿತು ಎಂಬುದು ಹಲವರ ವಾದ ಸರಣಿಯಾಗಿ ಕಂಡುಬರುತ್ತದೆ. ಇದರ ಹೊರತಾಗಿಯೂ ಭಾರತ ಸಂವಿಧಾನ ಬುಡಕಟ್ಟು ಜನರ ಸರ್ವಾಂಗೀಣ ಬೆಳವಣಿಗೆಗೆ ಬದ್ಧವಾಗಿರುವಂತೆ ಮಾಡಿತು. ಈ ಪದ್ಧತಿಯನ್ನು ಪಂಚವಾರ್ಷಿಕ ಯೋಜನೆಗಳ ಮೂಲಕ ಆರಂಭಿಸಿದ ಅನೇಕ ಕಾರ್ಯನೀತಿ ಹಾಗೂ ಆಡಳಿತಾತ್ಮಕ ಮಾರ್ಗೋಪಾಯಗಳಲ್ಲಿ ಕಾಣಬಹುದು.

ನಮ್ಮ ಅಭಿವೃದ್ಧಿಯ ನಿರ್ವಚನ ಆರ್ಥಿಕ ಅಭಿವೃದ್ಧಿಯನ್ನಷ್ಟೇ ಪರಿಗಣಿಸುತ್ತದೆ. ನಮಗಿರುವುದು ಪಶ್ಚಿಮಕ್ಕಿರುವ ಬರಿಯ ಆರ್ಥಿಕ ಆಯಾಮವಷ್ಟೇ ಅಲ್ಲ, ಆರ್ಥಿಕತೆಯ ಆಚೆಗೆ ಮಾನವನ ಬದುಕನ್ನ ಸಂಪನ್ನಗೊಳಿಸುವ ಸಾಂಸ್ಕೃತಿಕ ಆಯಾಮವಿದೆ ಎಂಬುದು ಇನ್ನೊಂದು ವಾದ ಸರಣಿಯಾಗಿ ಕಂಡು ಬರುತ್ತದೆ. ಇಂತಹ ವಿಧ್ವಾಂಸರ ನಿಲುವು ಪಶ್ಚಿಮದ ಅಭಿವೃದ್ಧಿ ಎಂದರೆ ಆರ್ಥಿಕ ಚೈತನ್ಯ ಎನ್ನುವ ಪರಿಕಲ್ಪನೆ ತಮ್ಮ ಸಂಬಂಧಕ್ಕೆ ಒಗ್ಗುವುದಿಲ್ಲ. ಆದರಿಂದ ನಮ್ಮ ಅಭಿವೃದ್ಧಿಯಲ್ಲಿ ಆರ್ಥಿಕ ಚಲಕಗಳ ಜೊತೆಗೆ ನಾವು ಸಾಂಸ್ಕೃತಿಕ, ಸಾಮಾಜಿಕ

ಅಂಶಗಳನ್ನು ಇಟ್ಟುಕೊಂಡೇ ನೋಡಬೇಕು. ಒಂದು ಸಮುದಾಯದ ಅಭಿವೃದ್ಧಿಯಲ್ಲಿ ಆರ್ಥಿಕತೆ ಒಂದು ಅಂಶವಾಗಬೇಕೆ ಹೊರತು ಆರ್ಥಿಕತೆಯೇ ಅಭಿವೃದ್ಧಿಯಾಗಬಾರದು ಆಗಲಾರದು. ಆರ್ಥಿಕೇತರ ಅಂಶಗಳಾದ "ಬದುಕಿನ ಬಗೆಗಿನ ಧೋರಣೆ ದುಡಿಮೆ. ಅಧಿಕಾರ, ನೌಕರಶಾಹಿ, ಆಡಳಿತವ್ಯವಸ್ಥೆ ಕುಲಸಂಬಂಧಿ ಅಂಶಗಳು, ಸಾಮಾಜಿಕ ವ್ಯವಸ್ಥೆ, ನ್ಯಾಯವ್ಯವಸ್ಥೆ, ಭೂಮಾಲೀಕತ್ವ ಹಾಗೂ ಕ್ರಿಯಾಶೀಲಾ ಪ್ರಜ್ಞೆ ಮುಂತಾದ ನೂರಾರು ಸಾಮಾಜಿಕ ಸಾಂಸ್ಕೃತಿಕ ಅಂಶಗಳೂ ಅಭಿವೃದ್ಧಿಯನ್ನು ನಿರ್ಧರಿಸುವ ಚಲಕಗಳಾಗಿವೆ"[7]. ಹೀಗಾಗಿ ಬುಡಕಟ್ಟುಗಳ ಅಭಿವೃದ್ಧಿ, ಕ್ರಿಯಾಯೋಜನೆ ಅವರ ಸಂಸ್ಕೃತಿಯ ಒಳಗಡೆಯೇ ಅವರ ಬದುಕಿನ ವಿನ್ಯಾಸದ ನೆಲೆಯಲ್ಲಿಯೇ ಹುಟ್ಟಬೇಕು ಎಂಬುದು ಇನ್ನೊಂದು ವಾದ ಸರಣಿಯಾಗಿ ಕಂಡುಬರುತ್ತದೆ.

ಅಭಿವೃದ್ಧಿಯ ಪರಿಕಲ್ಪನೆಯ ಬಗೆಗೆ ಹೀಗೆ ಅನೇಕರು ವಿವಿಧ ವಾದ ಸರಣಿಗಳನ್ನು ಮುಂದಿಡುತ್ತಾರೆ. ಆದರೆ ವಾಸ್ತವದ ಸಂದರ್ಭದಲ್ಲಿ ಜಾಗತೀಕರಣದ ಆರ್ಥಿಕ ಸುಧಾರಣೆಯ ಪ್ರಕ್ರಿಯೆಯಲ್ಲಿ ತನ್ನದೇ ಬದುಕು ಕಟ್ಟಿಕೊಳ್ಳುವುದು ಅರ್ಥಪೂರ್ಣವಾದದ್ದು. ಜಾಗತೀಕರಣ ತಡೆಯುವಿಕೆಗೆ ಪ್ರತಿಭಟಿಸುವುದು ಅರ್ಥಹೀನ. ಕಾರಣ ಈಗಾಗಲೇ ಅದು ಸಮಸ್ತ ಮಾನವನ ಬದುಕಿನ ಭಾಗವಾಗಿದೆ. ವಸ್ತುಶಃ ಅದರ ಆಂತರಿಕ ಒತ್ತಡಗಳೂ ಹೆಚ್ಚುತ್ತಿವೆ. ಇಂಥಾ ಸಂದರ್ಭದಲ್ಲಿ ಸಮುದಾಯಗಳು ತನ್ನ ಸಾಮಾಜಿಕ-ಸಾಂಸ್ಕೃತಿಕ ಅನನ್ಯತೆಯಲ್ಲಿಯೇ ಬಹುತ್ವಗಳೊಂದಿಗೆ ಉಳಿದು ಬೆಳೆದು ಬರಬೇಕು ಎಂದಾದಲ್ಲಿ; ಅವರ ಸಂಗೀತ, ಕುಣಿತ, ವಾದ್ಯ, ಭಾಷೆ, ಜ್ಞಾನ, ಕೌಶಲ್ಯ, ಬೇಟೆ, ರಂಗಸಾಮರ್ಥ್ಯ, ಸಾಹಿತ್ಯ, ಜಾನಪದ, ಮೂಲವೃತ್ತಿ, ಗುಲಾಮಗಿರಿ, ಭಿಕ್ಷಾಟನೆ, ವಸ್ತುವಿನಿಮಯ ಪದ್ಧತಿಯಲ್ಲೇ ಮುಂದುವರೆದೂ ಅಭಿವೃದ್ಧಿಯಾಗಬೇಕು ಎಂದಾದಲ್ಲಿ, ಸಮುದಾಯಗಳು ಪ್ರಸ್ತುತ ಸಂದರ್ಭದಲ್ಲಿ ಉತ್ಸವ, ಹಬ್ಬ, ಜಾತ್ರೆಗಳಲ್ಲಿ ಅವರನ್ನು ಪ್ರದರ್ಶನದ ರಂಗಿನ ವಸ್ತುವಾಗಿಸುವ ಅಥವಾ ವಿಧ್ವಾಂಸರ ಅಧ್ಯಯನದ ಸರಕಾಗಿಸುವ ಅಥವಾ ರಾಜಕಾರಣಿಗಳ ಪ್ರತಿಷ್ಠೆ ಪ್ರಚಾರಕ್ಕೆ ಗೊಂಬೆ ಪ್ರಯೋಗ ಪಶುವಾಗಿಸುವ ಪ್ರಕ್ರಿಯೆಯಲ್ಲಿ ನಿಲ್ಲುವಂತೆ ಮಾಡಿದಂತಾಗುತ್ತದೆ. ಇದನ್ನ ಹೊರತು ಪಡಿಸಿ ಬದುಕಿಗೆ ಜೀವಶಕ್ತಿ ತುಂಬುವ, ಆತ್ಮ-ವಿಶ್ವಾಸವನ್ನು ಕಟ್ಟಿಕೊಡುವ ಹೊಸ ವಿಚಾರಗಳಿಗೆ ಹೊಸ ಜಾಡುಗಳಿಗೆ ಮೈಮನಗಳನ್ನು ತೆರೆದಿಡುವಂತೆ ಮಾಡುವುದು ಜಾಗತಿಕ ಸತ್ಯ. ನಿಸರ್ಗ ನಿಯಮದ ಪರಿವರ್ತನೆಯ ವೈಚಾರಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದದ್ದು ಪ್ರಮುಖವಾದದ್ದು ಎನ್ನಬಹುದು.

ಹೀಗೆ ಬುಡಕಟ್ಟುಗಳ ಅಭಿವೃದ್ಧಿಯ ಬಗ್ಗೆ ದ್ವಂದ್ವ ನಿಲುವು, ಸಿದ್ಧಾಂತಗಳು ಕಂಡು ಬರುವುದು ಒಂದೆಡೆ ಆದರೆ, ವಾಸ್ತವದಲ್ಲಿನ ಜಾಗತೀಕರಣದ ಜೊತೆಗೆ ಸಮುದಾಯಗಳು ಬದುಕುತ್ತಿರುವುದು ಅಲ್ಲಗೆಳೆಯುವಂತಿಲ್ಲ. ಆದರಿಂದಲೇ ಈ ಅಧ್ಯಯನ ಕ್ರಮದಲ್ಲಿ ಯಾವುದೇ ಸಿದ್ಧಾಂತಕ್ಕೆ ಜೋತು ಬೀಳದೇ ಅಥವಾ ಸಿದ್ಧಾಂತವನ್ನು ರೂಪಿಸುವುದಿಲ್ಲ. ವಾಸ್ತವ ಬದುಕಿನೊಂದಿಗೆ ಸಮುದಾಯಗಳು ಕಟ್ಟಿಕೊಂಡಿರುವ ಜೀವನಕ್ರಮದಲ್ಲಿನ

ಅಭಿವೃದ್ಧಿಯ ಮತ್ತು ಪ್ರಗತಿ ದಿಕ್ಕು-ದಿಸೆ ಗುರುತಿಸುವುದಾಗಿದೆ. ದಿಕ್ಕು-ದಿಸೆ ಎಂಬ ಜಂಟಿ ಶಬ್ಧವನ್ನು ವಿಶಾಲಾರ್ಥವಾಗಿ ಉಪಯೋಗಿಸಲಾಗಿದೆ. ದಿಕ್ಕು – ಎಂದರೆ ಮಾರ್ಗ ಎಂಬ ಅರ್ಥ. ದಿಸೆ- ಎಂದರೆ ಸಂಸ್ಕೃತದ "ದಿಶ್" ಎಂಬುದರಿಂದ ಬಂದುದು. ಕನ್ನಡದ ದೆಸೆ ಎಂಬುದು ಸಂಸ್ಕೃತದ ದಿಶ್ ಎಂಬುದರ ತದ್ಭವ. ದಿಕ್ಕು ಮತ್ತು ದಿಸೆ ಎಂಬುವುಗಳು ಒಂದೇ ಅರ್ಥ ಕೊಡುತ್ತಿದ್ದರೂ ಜನಸಾಮಾನ್ಯರಲ್ಲಿ ಈ ಎರಡು ಪದಗಳು ಕೂಡಿಸಿ ಹೇಳುವುದು ರೂಢಿಯಲ್ಲಿದೆ. ಈ ಅಧ್ಯಯನದಲ್ಲಿ ಇದೇ ಅರ್ಥದಲ್ಲಿ ದಿಕ್ಕು-ದಿಸೆ ಎಂಬ ಪದ-ದ್ವಯವನ್ನು ಇಂಗ್ಲೀಷ್‌ನ Trends ಎಂಬ ಪದಕ್ಕೆ ಸಂವಾಧಿಯಾಗಿ ಹಾಗೂ ವ್ಯಾಪಕವಾಗಿ ಬಳಸಿ ಕೊಳ್ಳಲಾಗಿದೆ. ಇದರಿಂದ ಈ ವಿಷಯದ ಮೇಲೆ ಸಾಕಷ್ಟು ಬೆಳಕು ಚೆಲ್ಲಬಹುದು.

೧. ಅಭಿವೃದ್ಧಿಯ ಸ್ವರೂಪ

ಸಮುದಾಯಗಳ ಅಭಿವೃದ್ಧಿಗೆ ಯೋಜನೆಗಳನ್ನು ಮತ್ತು ಕಲ್ಯಾಣಕಾರ್ಯಕ್ರಮಗಳನ್ನು ರೂಪಿಸಿದರಷ್ಟೇ ಸಾಲದು. ಅದರ ಜೊತೆಗೆ ಅವುಗಳ ದಿಕ್ಕು-ದಿಸೆಗಳನ್ನು ಚಿಂತಿಸುವುದು ಒಂದು ಸೂಕ್ತ ಕ್ರಮವೆಂದರೆ ಅಪ್ರಸ್ತುತವಾಗಲಾರದು. ತೀರಾ ಹಿಂದುಳಿದ ಇತರೆ ಸಾಂಸ್ಕೃತಿಕ ಜನವರ್ಗಗಳಿಂದ ಕಡಿಮೆ ಸಂಪರ್ಕ ಹೊಂದಿರುವ ಸಂದರ್ಭದಲ್ಲಿ ಕಲ್ಯಾಣಕಾರ್ಯಗಳು ಜನರು ಏನೂ ಬಯಸುವರೋ ಅದನ್ನು ನೀಡುವುದು ಸಾಮಾಜಿಕ ನ್ಯಾಯ ನೀತಿಯುತವಾದದ್ದು. ಭಾರತ ಸರ್ಕಾರವು ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಹಾಗೂ ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಅವರುಗಳಿಗೆ ರಕ್ಷಣೆ ನೀಡಿ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ತೆರೆದುಕೊಳ್ಳಲು ಸಂವಿಧಾನದ ಅನುಚ್ಛೇದ ೩೪೧, ೩೪೨ ರಲ್ಲಿ ಅವಕಾಶ ನೀಡಿದೆ.[೨] ಕಲ್ಯಾಣಕಾರ್ಯಕ್ರಮಗಳನ್ನು ೧೯೫೧-೫೬ ರ ಅವಧಿಯ ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ಪ್ರಾರಂಭಗೊಳಿಸಲಾಗಿದೆ. ಪ್ರಾರಂಭದ ಈ ಯೋಜನೆಯಲ್ಲಿನ ಮೊತ್ತ ೩೦ ಕೋಟಿ ರೂ.ಗಳು ಅಭಿವೃದ್ಧಿಗಾಗಿ ಮೀಸಲಾಗಿಡಲಾಯಿತು. ವಿಶೇಷವಾಗಿ ಆಯಾ ರಾಜ್ಯಗಳಲ್ಲಿ ಸಮುದಾಯಗಳ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ೪ ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

೧. ಶಿಕ್ಷಣ ಮತ್ತು ಸಂಸ್ಕೃತಿ.
೨. ಬುಡಕಟ್ಟುಗಳ ಆರ್ಥಿಕತೆಯ ಅಭಿವೃದ್ಧಿ.
೩. ಸಾರಿಗೆ ಸಂಪರ್ಕ ಮತ್ತು ಸಂವಹನ.
೪. ಸಮಾಜ ಕಲ್ಯಾಣ[೩]

ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ ಇಲಾಖಾವಾರು ವೆಚ್ಚಮಾಡಲಾದ ಅನುದಾನದ ಪಟ್ಟಿಯಲ್ಲಿ ನೀಡಲಾಗಿದೆ.

ಕೋಷ್ಟಕ ೬.೧ : ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿನ ಇಲಾಖಾವಾರು ಅನುದಾನದ ವೆಚ್ಚದ ವಿವರ

ಕ್ರ.ಸ.	ಯೋಜನಾವಾರು ಇಲಾಖೆ	ಖರ್ಚುಮಾಡಿದ ಅನುದಾನ
೧	ಶಿಕ್ಷಣ	೫,೧೦,೩೩,೫೧೮
೨	ಕೃಷಿ	೨,೬೫,೯೮,೮೫೨
೩	ಗೃಹ ಕೈಗಾರಿಕೆ	೪೭,೭೩,೧೮೩
೪	ಆರೋಗ್ಯ ಮತ್ತು ವೈದ್ಯಕೀಯ ಸೇವೆ	೧,೫೩,೫೨,೬೦೧
೫	ವಸತಿ	೪೮,೯೧,೦೨೪
೬	ಸಂಪರ್ಕ	೪,೦೭,೯೯,೫೫೧
೭	ಸಹಕಾರ	೪೯,೭೫,೫೬೪
೮	ಪುನರ್‌ವಸತಿ	೪,೫೭,೦೨೧
೯	ಅರಣ್ಯ	೫೭,೮೯,೪೩೨
೧೦	ಪಶುಸಂಗೋಪನೆ	೧೧,೫೩,೪೫೧
೧೧	ಪ್ರಚಾರ	೬,೬೨,೧೫೭
೧೨	ಸಮುದಾಯಕೇಂದ್ರಗಳು	೭,೧೭,೭೪೮
೧೩	ಸ್ವಯಂ ಸೇವಾ ಸಂಘಗಳಿಗೆ ಸಹಾಯಧನ	೧೮,೬೨,೧೧೮
೧೪	ಆಡಳಿತ	೫೪,೫೭,೬೭೬
೧೫	ಇತರೆ	೯೧,೭೦,೬೮೮
	ಒಟ್ಟು ಮೊತ್ತ	೧೭,೩೬,೬೪,೫೮೪

(ಆಧಾರ : ಯೋಜನೆ ಮತ್ತು ಹಣಕಾಸು ವಿಭಾಗ, ಭಾರತ ಸರ್ಕಾರ)

ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಪ್ರಥಮವಾಗಿ ಸಮುದಾಯ ಅಭಿವೃದ್ಧಿಬ್ಲಾಕ್‌ಗಳನ್ನು ದೇಶದಲ್ಲಿನ ಬುಡಕಟ್ಟು ಪರಿಸರದ ಕ್ಷೇತ್ರದಲ್ಲಿ ರಚಿಸಲಾಯಿತು. ಇದರ ಉದ್ದೇಶ ಬುಡಕಟ್ಟಿನವರ ಸರ್ವಾಂಗೀಣ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಕೃಷಿ, ಆರೋಗ್ಯ, ಶಿಕ್ಷಣ, ದೂರಸಂಪರ್ಕ ಹಾಗೂ ವ್ಯಾಪಕ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದಾಗಿತ್ತು. ಇಂತಹ ಕಾರ್ಯಕ್ರಮಗಳ ಯೋಜನೆಗಳಡಿಯಲ್ಲಿ ಅನೇಕ ಅಂಶಗಳು ಬರುತ್ತವೆ. ಪ್ರತಿಯೊಂದು ಯೋಜನೆಯಿಂದ ಯೋಜನೆಗೆ ಬಹು ಉದ್ದೇಶಿತ ಹಾಗೂ ತೀವ್ರಗತಿಯ ಅಭಿವೃದ್ಧಿಗಾಗಿ ವಿಸ್ತೃತ ಮಾರ್ಗಗಳು ಅಳವಡಿಸಿಕೊಳ್ಳಲಾಗಿದೆ.[೪] ಅಲ್ಲದೆ ಪಂಚವಾರ್ಷಿಕಯೋಜನೆಗಳಲ್ಲಿ ಅನೇಕ ಕಾರ್ಯನೀತಿಗಳು ಅಳವಡಿಸಿಕೊಂಡಿರುವುದು ಕೋಷ್ಟಕದಿಂದ ತಿಳಿಯಬಹುದು. ಇವೆಲ್ಲವುಗಳ ಗುರಿ ಬುಡಕಟ್ಟು ಅರ್ಥವ್ಯವಸ್ಥೆಯ ಮೇಲೆ ಅಪಾಯಕಾರಿ ಪರಿಣಾಮಬೀರುವ ಅಂಶಗಳನ್ನು ನಿರ್ಮೂಲ ಮಾಡುವುದಾಗಿದೆ. ನಿಜಾಂಶವೆಂದರೆ ಈ ಜನರ ಶೋಷಣೆ ನಡೆಯುತ್ತಲೇ ಇರುವುದು. ಎಲ್ಲಿ ಶೋಷಣೆ ಇರುತ್ತದೆಯೋ ಅಲ್ಲಿ ಸರ್ಕಾರದ ಅಭಿವೃದ್ಧಿ ಪರಿಶ್ರಮಗಳು ಅಸಮರ್ಥವಾಗುತ್ತದೆ. ಹಾಗೂ ಅವರ ಸ್ಥಿತಿಗತಿಗಳಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು ತರುವುದು ಸಾಧ್ಯವಾಗುವುದಿಲ್ಲ. ಹೀಗಾಗಿ ಅಭಿವೃದ್ಧಿ ಸಾಧಿಸುವ ಕೆಲಸ ತುಸು ಕಷ್ಟದಿಂದಲೇ

ಕೂಡಿರುವುದು. ಹಣಕಾಸಿನ ಏರಿಕೆ ಮಾತ್ರ ಯೋಜನೆಯಿಂದಯೋಜನೆಗೆ ಏರುಮುಖವಾಗಿ ನಡೆಯುತ್ತಲೇ ಇದೆ. ಹಾಗೆಯೇ ಅನುಷ್ಠಾನಗೊಳಿಸಿರುವ ಅಂಶಗಳನ್ನು ಹೆಚ್ಚು ಸಮರ್ಥನೆಮಾಡುವುದು ಕಷ್ಟಸಾಧ್ಯ. ಸಮುದಾಯಗಳು ಅನಿಶ್ಚಿತ ಕಸುಬು/ಉದ್ಯೋಗಗಳಿಂದ ಅತ್ಯಂತ ಕಡಿಮೆ ಆದಾಯ ಗಳಿಸುತ್ತಿರುವ ಸಂದರ್ಭ ಹಾಗೂ ಸಾಮಾನ್ಯ ಸೌಲಭ್ಯಗಳು ಮತ್ತು ಮೂಲಭೂತಸೌಲಭ್ಯಗಳ ಕೊರತೆ, ಇತರೆ ಭೌಗೋಳಿಕ ಪ್ರದೇಶಗಳಿಂದ ಪ್ರತ್ಯೇಕವಾಗಿ ಬದುಕುತ್ತಿರುವುದು ಅವರ ವಿಶಿಷ್ಟ್ಯತೆಯ ಜೀವನಕ್ರಮದಿಂದ ತಿಳಿಯಬಹುದು.

ಸಮುದಾಯಗಳ ಅಭಿವೃದ್ಧಿಗಾಗಿ ಒಂದನೇ ಪಂಚವಾರ್ಷಿಕ ಯೋಜನೆಯಿಂದ ಪ್ರಸ್ತುತ ೧೧ನೇ ಯೋಜನೆಯ ವರೆಗೂ ಹಣಕಾಸಿನ ಅನುದಾನ ಏರುಮುಖದಲ್ಲಿದೆ. ಆದರೆ ಬುಡಕಟ್ಟು ಸಮುದಾಯಯಗಳ ಅಭಿವೃದ್ಧಿ ಮತ್ತು ಪುನರ್‌ವಸತಿ ಬಲಗೊಂಡಿದೆಯೇ ಎಂದಾದಲ್ಲಿ ಸರ್ಕಾರ ನೀಡುವ ಕೋಟ್ಯಾನು ರೂ.ಗಳ ವೆಚ್ಚದ ವಿವರ ದೊರಕುತ್ತದೆ. ಆದರೆ ಅಧ್ಯಾಯನದ ಕ್ರಮದಲ್ಲಿ ಸರ್ಕಾರಿ ಇಲಾಖೆಗಳ ಪ್ರಕಟಿತ ವಿವರಗಳನ್ನು ಪ್ರಸ್ತುತ ಪಡಿಸುವ ಕ್ರಮಕ್ಕೆ ಈ ಅಧ್ಯಯನ ಸೀಮಿತವಲ್ಲ.

ಸಮುದಾಯಗಳ ನಡುವಿನ ಸಾಮಾಜಿಕ, ಆರ್ಥಿಕ ಜೀವನದ ಅಭಿವೃದ್ಧಿಯನ್ನು ಸ್ವಯಂ ಪರಿವೀಕ್ಷಿಸುವ ಕ್ರಮವಾಗಿದೆ. ವಿಶೇಷವಾಗಿ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಮೂಲನಿವಾಸಿ ಬುಡಕಟ್ಟುಗಳ ಅಭಿವೃದ್ದಿಗಾಗಿ ರಾಜ್ಯದಲ್ಲಿ ೫ ಐ.ಟಿ.ಡಿ.ಸಿ. ಕೇಂದ್ರಗಳನ್ನು ಸ್ಥಾಪಿಸಲಾಯಿತು. ಅಲ್ಲದೇ ಆಯಾ ರಾಜ್ಯಗಳಲ್ಲಿ ಬುಡಕಟ್ಟು ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಲಾಗಿರುವ ಕೇಂದ್ರವು ಸಮುದಾಯಗಳ ಅಭಿವೃದ್ಧಿಗೆ ಬೇಕಿರುವ ಯೋಜನೆಗಳನ್ನು ಸರ್ಕಾರಕ್ಕೆ ಒದಗಿಸುತ್ತಿದೆ. ಉತ್ತಮ ಭವಿಷ್ಯ ನಿರ್ಮಾಣದಲ್ಲಿ ವಿವಿಧ ಇಲಾಖೆಗಳ ಸಮನ್ವಯತೆಯೊಂದಿಗೆ ಶೈಕ್ಷಣಿಕ ಶಾಲೆಗಳು, ಪರಿಸರದ ನಿರ್ಮಾಣದೊಂದಿಗೆ ಶಿಕ್ಷಿತರನ್ನಾಗಿಸುವ ನಿಟ್ಟನಲ್ಲಿ ಸಂಘಟಿಸಬೇಕಿದೆ. ಶಿಕ್ಷಣವೊಂದೇ ಬದಲಾವಣೆಯ ಪ್ರತೀಕ ಮತ್ತು ಅಭಿವೃದ್ಧಿಮಾರ್ಗ ಎಂಬುದು ಸಮುದಾಯಗಳಲ್ಲೇ ಗೋಚರಿಸುತ್ತಿದೆ. ಆದರಿಂದಲೇ ಸಮುದಾಯಗಳಿಗಾಗಿರುವ ಕಲ್ಯಾಣಕಾರ್ಯಕ್ರಮಗಳನ್ನು ಆಗಾಗ ಸಮಾಲೋಚನೆಯಿಂದ ಪರೀಕ್ಷಿಸಿ ಅವುಗಳ ಸ್ವರೂಪ ಮತ್ತು ಬದಲಾವಣೆಗಳ ಬಗ್ಗೆ ವಿವೇಚಿಸುವುದು ಅಗತ್ಯವಾಗಿದೆ. ಈ ಬಗ್ಗೆ ಕೆಲವು ವಿಚಾರಗಳು ಅಭಿವೃದ್ಧಿ ಕ್ರಮದಲ್ಲಿ ಮುಖ್ಯವಾಗಿ ಗಮನಿಸುತ್ತಾ ಬರಬೇಕಾದ ಅಂಶಗಳನ್ನು ಸಮಾಜವಿಜ್ಞಾನಿಗಳು ಹೇಳುತ್ತಾ ಬಂದಿರುತ್ತಾರೆ. ಅವುಗಳೆಂದರೆ ಮುಖ್ಯವಾಗಿ,

೧) ಯೋಜನೆಗಳನ್ನು ರೂಪಿಸುವಾಗ ಇವುಗಳನ್ನು ತಯಾರಿಸುವ ಹೊಣೆ ಹೊತ್ತ ಅಧಿಕಾರಿಗಳಿಗೆ ಹಾಗೂ ಸಂಸ್ಥೆಗಳಿಗೆ ಆಯಾಯ ಬುಡಕಟ್ಟು ಸಮುದಾಯಗಳ ಪರಿಸರ ಇತಿಹಾಸ ಮತ್ತು ಪರಂಪರೆ ಇತ್ಯಾದಿಗಳ ಬಗ್ಗೆ ಮಾಹಿತಿ ಯಾವುದೇ ಪೂರ್ವಬಾವಿ ಆಗ್ರಹವಿಲ್ಲದೆ ಇರುವುದು ಅವಶ್ಯಕ.

೨) ಸಮುದಾಯಗಳ ಸಾಂಸ್ಕೃತಿಕ ಲಕ್ಷಣ, ಅವರ ಮಾನಸಿಕ ಧೃಡತೆ ಹಾಗೂ ಅವರು ಅಭಿವೃದ್ಧಿಗೊಳ್ಳುತ್ತಿರುವ ಹೊರಗಿನ ಜನರ ಮತ್ತು ವಿಕಾಸದ ಬಗ್ಗೆ ಹೇಗೆ ಸ್ಪಂದಿಸುತ್ತಾರೆ ಎಂಬ ಬಗ್ಗೆ ಯೋಜನೆಗಳನ್ನು ರೂಪಿಸುವವರಿಗೆ ಅರಿವಿರಬೇಕು.

೩) ಸರ್ಕಾರದಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳು, ಜನರ ಅಭಿವೃದ್ಧಿಯೋಜನೆಗಳನ್ನು ಕಾರ್ಯರೂಪದಲ್ಲಿ ತರುವಾಗ ಬರುವ ಸಮಸ್ಯೆ ಅಥವಾ ವಿಷಯಗಳನ್ನು ಎದುರಿಸುವಲ್ಲಿ ಸಮರ್ಥರಾಗಿರಬೇಕು.

೪) ಯಾವುದೇ ಯೋಜಿಸಿದ ಕಾರ್ಯಕ್ರಮ ಒಂದು ಸಮುದಾಯಕ್ಕೆ ಅನ್ವಯವಾಗದೇ ಇದ್ದಲ್ಲಿ ಅಥವಾ ಸಾಕಷ್ಟು ವೈಪಲ್ಯ ಹೊಂದಿರುವುದಾಗಿ ಕಂಡುಬಂದಲ್ಲಿ ಅಂಥವನ್ನು ಕೈಬಿಡುವ ಇಲ್ಲವೇ ಬದಲಾವಣೆ ಮಾಡುವ ಕ್ಷಮತೆ ಹೊಂದಿರಬೇಕು.

೫) ನಿಯಮಿತ ಕಾರ್ಯಕ್ರಮಗಳ ಅನುಷ್ಠಾನದ ವೈಖರಿಯನ್ನು ಪರೀಕ್ಷಣಾ ದೃಷ್ಠಿಯಿಂದ, ಇಂತಹ ವಿಷಯಗಳಲ್ಲಿ ಪರಿಣಿತಿ ಹೊಂದಿದ ತಜ್ಞರ ಸಹಾಯದಿಂದ ಪರಿಶಿಷ್ಕರಿಸುವುದು ಮತ್ತು ಈ ಬಗ್ಗೆ ಸೂಕ್ತ ಸಲಹೆಗಳನ್ನು ನೀಡುವುದು ಇತ್ಯಾದಿಗೆ ಕೂಡ ವ್ಯವಧಾನ ಇರುವುದು ಕೂಡಾ ಅಗತ್ಯವೆ.

೬) ಗತಾನುಗತಿಕವಾಗಿ ಅವರ ಬದುಕಿನೊಂದಿಗೆ ಅಂಟಿಕೊಂಡು ಬಂದಿರುವ ಅವೈಚಾರಿಕ ನಂಬಿಕೆಗಳನ್ನು ಅವರಿಂದ ಕದಲಿಸುವ ಚಾಣಕ್ಷತೆ ಮತ್ತು ಅವರ ಬದುಕಿನ ಜೊತೆಗೆ ನಮೀಕರಿಸುವ ಮೌಲ್ಯಗಳ ಅರಿವು, ಜ್ಞಾನ ಅವಶ್ಯಕ."

ಈ ಮೇಲಿನ ಅಂಶಗಳನ್ನೆಲ್ಲಾ ತಿಳಿದುಕೊಂಡು ಸಂಬಂಧ ಪಟ್ಟ ಸರ್ಕಾರಿ, ಆಡಳಿತಾಧಿಕಾರಿಗಳು, ಸ್ವಯಂಸೇವಾಕಾರ್ಯಕರ್ತರು, ರಾಜಕೀಯ ನೇತಾರರು, ಸಂಘಟನೆಗಳು ಮತ್ತು ಸಂಬಂಧಿಸಿದ ಸಮುದಾಯದ ಜನರು ಒಗ್ಗೂಡಿ, ಯೋಜನೆಗಳನ್ನು ಸಫಲತೆಯ ದಿಕ್ಕಿನಡೆ ಸಾಗಿಸಬೇಕು. ಇಂತಹಕ್ರಮ ಅಭಿವೃದ್ಧಿ ಸ್ವರೂಪವಾಗಿ ಪರಿಣಮಿಸುತ್ತದೆ. ಇಲ್ಲಿ ಫಲಾನುಭವಿಗಳು ಅತ್ಯಂತ ಪ್ರಮುಖವಾದವರಾಗಿರುತ್ತಾರೆ. ಅಲ್ಲದೆ ಆಗಾಗ್ಗೆ ಪರೀಕ್ಷಣಾ ಕ್ರಮ ಅದೂ ಮೌಲಿಕವಾಗಿ ಆಗಬೇಕಾದದ್ದು ಅನಿವಾರ್ಯ. ಏಕೆಂದರೆ ಸಮುದಾಯಗಳಲ್ಲಿ ಸಮಸ್ಯೆಗಳ ರಾಶಿಯೇ ಕಂಡು ಬಂದರೂ ಪರೀಕ್ಷಣೆ ನಡೆಯದೇ ಇರುವುದು ಕಾಲೋನಿಗಳನ್ನು ಅವಲೋಕಿಸಿದಾಗ ತಿಳಿದುಬರುತ್ತದೆ. ಅನೇಕ ಕಾರ್ಯಕ್ರಮಗಳ ಅನುಷ್ಠಾನಗಳಲ್ಲಿ ಹೊರಗಿರುವ ಸ್ವತಾಸಕ್ತಿಯುಳ್ಳ ಜನರ ಶೋಷಣೆಯಿಂದ ಧಕ್ಕೆ ಉಂಟಾಗಿ ಸಮುದಾಯಗಳು ಅಡೆತಡೆಗಳು ಎದುರಿಸುತ್ತಿವೆ. ಎಷ್ಟೋ ಕುಟುಂಬಗಳು, ಹೇಳಿಕೊಳ್ಳಲು ಹೆದರಿಕೊಳ್ಳುತ್ತಿರುವ ಸನ್ನಿವೇಶ ಕಂಡುಬರುತ್ತದೆ. ಕೆಲವು ಕುಟುಂಬಗಳು ಮೌನವಾಗಿಯೇ ಪರಿಸ್ಥಿತಿಯನ್ನು ಎದುರಿಸುವರಾಗಿದ್ದಾರೆ. ಇಂತಹ ಸಂದರ್ಭಗಳಲ್ಲಿ ಪರೀಕ್ಷಣಾ ಕ್ರಮ ಉಪಯೋಗವಾಗಬಲ್ಲದು.

ಯೋಜನೆಗಳು ನಿಂತ ನೀರಾಗಿ ಹೋಗದೆ ಪರಿಸ್ಥಿತಿ ಮತ್ತು ಪರಿಸರಕ್ಕೆ ಬದಲಾವಣೆ ಹೊಂದುವಂತಿರಬೇಕು. (ಉದಾ: ಸಮುದಾಯಗಳಲ್ಲಿರುವ ಸ್ವಯಂ ಉದ್ಯೋಗ ತರಭೇತಿಗಳು ಹೆಸರಿಸಬಹುದು ಜೇನುಕುರುಬರಲ್ಲಿ ತರಬೇತಿ ಇಲ್ಲದಿರುವುದು. ಕೊರಗರಲ್ಲಿ ಸ್ವಯಂ ಆಟೋರಿಕ್ಷಾ ತರಬೇತಿ, ಬಾರಿ ವಾಹನ ತರಬೇತಿ ಕಾರ್ಯಕ್ರಮಗಳಂತೆ) ಆಂದಾಗ ಮಾತ್ರ ಕಾರ್ಯಕ್ರಮಗಳಲ್ಲಿ ಸಾಫಲ್ಯತೆ ಸಿಗುವುದು ಮತ್ತು ಜನರ ಪ್ರಗತಿಗೆ ಪೂರಕವಾಗಬಲ್ಲದು. ಯೋಜನೆಗಳ ಅನುಷ್ಠಾನದಲ್ಲಿ ಒಂದೊಂದು ಸಮುದಾಯದ ಸಾಮಾಜಿಕ ಪರಿಸರ, ಸಾಂಸ್ಕೃತಿಕ ಹಿನ್ನಲೆ ತಿಳಿದುಕೊಂಡಲ್ಲಿ, ಆಡಳಿತಾಧಿಕಾರಿಗಳಿಗೆ ಅನುಕೂಲ. ಯಾಕೆಂದರೆ ಕ್ಷೇತ್ರಕಾರ್ಯದ ಎಲ್ಲಾ ಹಂತಗಳಲ್ಲಿ ಸಂಶೋಧಕನಿಗೆ ಪ್ರತಿಯೊಂದು ಮಾಹಿತಿ ಪಡೆಯುವ ಸನ್ನಿವೇಶದಲ್ಲಿ ಜಾರಿಕೆಯ ಮನೋಸ್ಥಿತಿ ಅಥವಾ ಹಾರಿಕೆಯ ಉತ್ತರ ನೀಡುವವರನ್ನೇ ಕಂಡು ಬೇಸರಪಡುವಂತಾಗಿತ್ತು. ಆದೆಷ್ಟೋ ಅಧಿಕಾರಿಗಳು ಕೀಳು ಬಾವನೆಯಿಂದ ಒಂದು ರೀತಿಯ ಅಸಡ್ಡೆಯನ್ನು ತೋರಿಸುತ್ತಿದ್ದದು ಮೇಲು-ಕೀಳು ಎಂದು ಭಾವಿಸುವ ಇವರುಗಳ ಆಡಳಿತದಲ್ಲಿ ಆದೆಷ್ಟೂ ಅಭಿವೃದ್ಧಿ ಕಾಣುತ್ತವೆ ಈ ಸಮುದಾಯಗಳು ಅನ್ನುವುದೇ ಪ್ರಶ್ನೆಯಾಗಿದೆ.

ಇಲ್ಲಿ ಯಾರು ಮೇಲಲ್ಲ-ಕೀಳಲ್ಲ, ಯಾವ ಸಂಸ್ಕೃತಿ ಮೇಲಲ್ಲ ಅಥವಾ ಕೀಳಲ್ಲ ಎನ್ನುವ ಮನೋಸ್ಥಿತಿಯ ಅಧಿಕಾರಿಗಳು ಅಗತ್ಯವಾಗುತ್ತಾರೆ. ಇದಕ್ಕಾಗಿಯೇ ಸಮಾಜ ವಿಜ್ಞಾನಿಗಳ ನೆರವು ಸಮಾಜಕಾರ್ಯದ ತರಬೇತಿ. ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಬೇಕು. ನಿಜವಾಗಿಯೂ ಬುಡಕಟ್ಟುಗಳ ಅಭಿವೃದ್ಧಿ ಬಯಸಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರ್ಯಕರ್ತರಿಗೆ ವಿಶ್ವವಿದ್ಯಾಲಯದಲ್ಲಿ ಸಮುದಾಯಗಳ ಬಗೆಗಿನ ಸಾಮಾಜಿಕ-ಸಾಂಸ್ಕೃತಿಕ ಜೀವನಕ್ರಮ ಪರಿಚಯದ ಮುಖಾಂತರ ತರಭೇತಿ ನೀಡುವುದು ಆರೋಗ್ಯಕರ ಕ್ರಮವಾಗುತ್ತದೆ. ಭಾರತದ ರಾಜ್ಯ ಘಟನೆಯಲ್ಲಿ ಬುಡಕಟ್ಟುಗಳ ಅಭಿವೃದ್ಧಿಯು ಪ್ರಮುಖವಾಗಿದೆ. ಆದಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯಸರ್ಕಾರಗಳು ಭೂಹಂಚಿಕೆ ಹಾಗೂ ಸಾಂಸ್ಥಿಕ ಹಣಕಾಸು ಸಹಾಯ ಸೇರಿಕೊಂಡು ವಿವಿಧ ಮೂಲಗಳಿಂದ ಬುಡಕಟ್ಟು ಅಭಿವೃದ್ಧಿಗಾಗಿ ಧನ ಸಹಾಯದಲ್ಲಿ ಏರಿಕೆ ಉಂಟುಮಾಡಿದೆ. ಇಂತಹ ಹಣದ ಪ್ರಾವದಾನ ಹಾಗೂ ನೀಡಿಕೆ ಈ ದಿಶೆಯಲ್ಲಿ ಬಹಳಷ್ಟು ಪ್ರಗತಿ ಪಥದಲ್ಲಿ ಸಾಗಲು ಸಹಕಾರಿಯಾಗುತ್ತದೆ.

೨. ಸಮುದಾಯಗಳಲ್ಲಿನ ಹೋರಾಟದ ಮುಖ

ಅರಣ್ಯವಾಸಿಗಳಾದ ಮೂಲನಿವಾಸಿ ಬುಡಕಟ್ಟುಗಳು ಇಂದು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ಅರಣ್ಯನೀತಿಗಳದಾಗಿದೆ. ಅರಣ್ಯನೀತಿಗಳು ಅವರ ಅಭಿವೃದ್ಧಿ ಮತ್ತು ಪ್ರಗತಿಗೆ ಅಡ್ಡಿ ಮಾಡುತ್ತವೆ ಎಂಬುದನ್ನ ಹಿಂದೆ ಪೂರ್ವ ಪ್ರಧಾನಿಯಾದ ನೆಹರೂರವರು ತಿಳಿಸಿದ್ದರು. ಅವರು ೧೯೫೦ರಲ್ಲಿ ಸಮುದಾಯಗಳಿಗೆ ಅನುಕೂಲವಾಗಲೆಂಬ ಉದ್ದೇಶದಿಂದಲೇ ಜನರ ರಕ್ಷಣೆಗಾಗಿ 'ಪಂಚಶೀಲತತ್ವ' ಎಂಬ ಸೂತ್ರವನ್ನು ಮಂಡಿಸಿ

ವಿವಿಧತೆಯಲ್ಲಿ ಏಕತೆ ತರಲು ಸಾಧ್ಯವೆಂದು ತಿಳಿಸಿದ್ದರು. ಹಾಗೆಯೇ ಭಾರತ ಸರ್ಕಾರವೂ ಅನೇಕ ರೀತಿಯಲ್ಲಿ ಸಮುದಾಯಗಳ ಬಗ್ಗೆ ಶ್ರಮಿಸುವ ಭರವಸೆಯನ್ನು ನೀಡಿತ್ತು. ಆದರೆ ಸಮುದಾಯಗಳೇ ಹೋರಾಟದ ನೈತೃತ್ವ ವಹಿಸಿದ್ದುದು ಆಯಾ ಪರಿಸರದಲ್ಲಿ ಸಾಮಾನ್ಯವಾಗಿತ್ತು. ಹೋರಾಟದ ವಿಷಯವಾಗಿ ಸಂಸತ್ತಿನಲ್ಲಿ ಆಗಾಗ್ಗೆ ಚರ್ಚೆ ಆಗುತ್ತಲಿತ್ತು. ಒಂದು ಹಂತದಲ್ಲಿ ನೆಹರೂರವರು ತಿಳಿಸಿರುವಂತೆ "ಕಾರ್ಯಕ್ರಮಗಳ ಪರಿಣಾಮಗಳನ್ನು ವೆಚ್ಚದ ಹಣ, ಅಂಕಿ, ಅಂಶಗಳಿದ ಗುರುತಿಸದೇ ಮಾನವನ ಚರಿತ್ರೆಯ ಮೌಲಿಕತೆ ಆಳತೆಗೋಲಿನಿಂದ ನಡೆಯಬೇಕಿದೆ ಎಂದಿದ್ದರು".[೬]

ಈ ಸಂಶೋಧಕನಿಗೆ ತಿಳಿದ ಮಟ್ಟಿಗೆ ಇತ್ತೀಚಿನವರೆಗೂ ಮೂಲನಿವಾಸಿ ಬುಡಕಟ್ಟುಗಳಲ್ಲದೇ ಇತರೆ ಸಾಮಾನ್ಯ ಬುಡಕಟ್ಟುಗಳ ಬಗ್ಗೆ ಈಗಲೂ ಚರ್ಚೆಯಾಗುತ್ತಿದೆ. ಕರ್ನಾಟಕ ರಾಜ್ಯಮಟ್ಟದ ಬಗ್ಗೆ ಹೇಳುವುದಾದರೆ ಇವರುಗಳ ಬಗೆಗಿನ ಧ್ವನಿ ಕಡಿಮೆ ಎನ್ನಬಹುದು. ಇಲ್ಲಿನ ಬಹುತೇಕ ಸಮುದಾಯಗಳು ಸಂಘಟಿತವಾಗಿ ಬಹುದೊಡ್ಡ ಹೋರಾಟ ನೀಡಿದ ಪ್ರಮೇಯವೇ ಇಲ್ಲ ಎಲ್ಲೋ ಅಲ್ಲೊಂದು ಜಿಲ್ಲೆ, ಇಲ್ಲೊಂದು ಜಿಲ್ಲೆ ಎಂದು ಮಾತ್ರ ಕಂಡುಬರುತ್ತದೆ. ಮೀಸಲಾತಿ ತನ್ನ ಹಕ್ಕು ನಾವು ಈ ನಾಡಿನ ಪ್ರತಿನಿಧಿಗಳು ಎಂದು ಗುರುತಿಸಿಕೊಳ್ಳಬೇಕಾದಲ್ಲಿ ಶಿಕ್ಷಣದ ಮೋರೆ ಹೋಗಬೇಕಾದ ಅನಿವಾರ್ಯತೆ ಇದೆ. ಶಿಕ್ಷಿತ ಕೆಲವೇ ಜನರು ಕೂಡ ಅರಣ್ಯವಾಸಿಗಳಾಗಿ ಸಂಘಟನೆಗೊಂಡು "ಬುಡಕಟ್ಟು ಕೃಷಿಕರ ಸಂಘ" ಮೈಸೂರು, ಚಾಮರಾಜನಗರ, ಕೊಡಗು, ಜಿಲ್ಲೆಯಲ್ಲಿರುವವರು. ಅರಣ್ಯದ ಹಿತ ಮತ್ತು ಸಂರಕ್ಷಣೆಗಾಗಿ ಅಲ್ಲದೇ ಅವರುಗಳ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ತಮ್ಮ ಬೇಡಿಕೆಯನ್ನು ೧೯೯೫ರಲ್ಲೇ ಅಂದಿನ ಪ್ರಧಾನಮಂತ್ರಿ ಪಿ.ವಿ. ನರಸಿಂಹರಾವ್‌ರವರಿಗೆ ಪತ್ರ ಬರೆದುದಾಗಿ ತಿಳಿಸುತ್ತಾರೆ. ಅರಣ್ಯನೀತಿಯ ಕಾನೂನಡಿಯಲ್ಲಿ ತಿದ್ದುಪದಿ ತಂದರೆ ಸಾಲದು. ನಿಯಮಾನುಸಾರವಾಗಿ ನಿಗದಿತ ಬುಡಕಟ್ಟು ಪ್ರದೇಶಮಾಡಿ ರಾಜ್ಯ ಘಟನೆಯನುಸಾರವಾಗಿ ಸೂಕ್ತ ಹಕ್ಕುಗಳನ್ನು ನೀಡಲು ಪ್ರಾರ್ಥಿಸಿದ್ದಾರೆ. ಬಹುಶಃ ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆ ಗಂಭೀರವಾಗಿ ಚಿಂತಿಸಬೇಕಾದದ್ದು ಅನಿವಾರ್ಯವಾಗಿತ್ತು. ಯಾಕೆಂದರೆ ಇದು ಸಮುದಾಯಗಳನ್ನು ಪ್ರಗತಿ ಪಥದಲ್ಲಿ ಮುನ್ನೆಡೆಸಲು ಅನುಕೂಲವಾಗುತ್ತಿತ್ತು. ಮತ್ತೊಂದು ಕಡೆ ಕಾನೂನಿನ್ವಯ ಅರಣ್ಯ ಇಲಾಖೆಯಿಂದ ಕಾರ್ಯರೂಪದ ನ್ಯಾಯ ಸಮುದಾಯಗಳಿಗೆ ನೀಡಲು ಅನುಕೂಲವಾಗುತ್ತಿತ್ತು. ಇದರಿಂದ ಅರಣ್ಯ ಮತ್ತು ಭೂಹಕ್ಕುಗಳನ್ನು ಸೂಕ್ತವಾಗಿ ಗೌರವಿಸಿದಂತಾಗುತ್ತಿತ್ತು. ಹೊರಗಿನ ಒತ್ತಡವಿಲ್ಲದೆ ಅವರದೇ ಜನವರ್ಗದಲ್ಲಿ ಆಡಳಿತ ಸುಗಮವಾಗಿ ಸಾಂಸ್ಕೃತಿಕ ಪರಂಪಾರಿಕೆ ಹಿನ್ನೆಲೆಯಲ್ಲಿ ಅವಕಾಶವಿತ್ತಂತಾಗುತ್ತಿತ್ತು.

ರಾಜ್ಯದಲ್ಲಿ ಅರಣ್ಯ ನಿಯಮ ನೀತಿ, ಏನೇ ಇದ್ದರೂ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಬವಣೆ ತಪ್ಪಿಲ್ಲ. ಒಂದೆಡೆ ಸೀಮೆ ಪ್ರದೇಶ, ಅರಣ್ಯಪ್ರದೇಶ, ನಗರಪ್ರದೇಶದ

ತಾಲ್ಲೂಕುಗಳಲ್ಲಿರುವ ಜೇನುಕುರುಬ ಮತ್ತು ಕೊರಗ ಸಮುದಾಯಗಳು ತಲೆ ತಲಾಂತರದಿಂದ ನೆಲೆಸಿದ್ದರೂ ಹೋರಾಟದ ಸ್ಪಷ್ಟ ದಿಕ್ಕು ವ್ಯವಸ್ಥಿತ ಕ್ರಮದಲ್ಲಿ ಮೂಡಿ ಬಂದಿರುವುದಿಲ್ಲ. ನಾಗರಹೊಳೆಯಲ್ಲಿರುವ ಬೆಟ್ಟ ಕುರುಬ, ಸೋಲಿಗ, ಎರವ, ಜೇನುಕುರುಬ ಸಮುದಾಯಗಳು ದಿಕ್ಕಾಪಾಲಾಗಿವೆ. ಇದಕ್ಕೆ ಸರ್ಕಾರದ ದ್ವಂದ್ವ ನಿಲುವು ನೀತಿಗಳೇ ಕಾರಣವೆನ್ನಬಹುದಾಗಿದೆ. ನಾಗರಹೊಳೆಯ ಅರಣ್ಯವೂ ವನೋದ್ಯಾನ ಅಥವಾ ಅಭಯಾರಣ್ಯ ೧೯೭೫ರಲ್ಲಿ ಪ್ರಾರಂಭವಾದ ನಂತರ ಕಷ್ಟ-ನಷ್ಟಗಳು ಹೊರಗಿನ ಬಲಾಢ್ಯಶಕ್ತಿಗಳ ಮತ್ತು ಸ್ವಹಿತಾಸಕ್ತಿಗಳ ಪ್ರಭಾವದಿಂದ ಹೆಚ್ಚಾಗಿವೆ ಎನ್ನುತ್ತಾರೆ.[೬] ಹಾಗೆಯೇ ಕೊರಗರ ಪ್ರದೇಶದಲ್ಲಿ ಸುಮಾರು ೧೮೩೫ರಿಂದ ಜಾತೀಯತೆಯ ಅಸ್ಪೃಶ್ಯ ಕರಿನೆರಳಿನ ಪ್ರಭಾವದಿಂದ ತುಚ್ಚೀಕರಿಸಲ್ಪಟ್ಟವರಾಗಿ ಅಲ್ಲಲ್ಲಿ ಸಣ್ಣಪುಟ್ಟ ಅರಣ್ಯ ಪದಾರ್ಥಗಳನ್ನು ಸಂಗ್ರಹಿಸಿ ಜೀವನ ನಿರ್ವಹಣೆ ಮಾಡುತ್ತಿದ್ದವರು. ಹೀಗಾಗಿ ಮೂಲನಿವಾಸಿ ಬುಡಕಟ್ಟುಗಳನ್ನು ಒಂದೆಡೆ ವ್ಯವಸ್ಥಿತ ಪುನರ್‌ವಸತಿ ಕಲ್ಪಿಸಿಕೊಡುವ ಮತ್ತು ಮೂಲಭೂತಸೌಲಭ್ಯಗಳನ್ನು ಕಲ್ಪಿಸಿಕೊಡುವ ಭರವಸೆಗಳು ಈಡೇರಲಿಲ್ಲ. ಈ ಅಂಶಗಳನ್ನು ಅರಿತ ಸಮುದಾಯಗಳು ಮೊದಲು ಅಸಹಾಯಕರಾಗಿ ಸಮಸ್ಯೆಗಳ ಜೊತೆಯಲ್ಲಿಸಮಸ್ಯೆಯಾಗಿ ಹೋದರು. ಅಸಮರ್ಥತೆಯನ್ನು ಶ್ರೀಮಂತ ಭೂಮಾಲೀಕರು, ರಾಜಕೀಯನಾಯಕರು, ದಲ್ಲಾಳಿಗಳು, ಸದುಪಯೋಗ ಪಡಿಸಿಕೊಳ್ಳುತ್ತಿದ್ದ ಅಂಶವನ್ನು ಅರಿತ ಸೇವಾಸುಧಾರಕರು ಸಮುದಾಯಗಳನ್ನು ನಾಗರೀಕರಣದ ಹತ್ತಿರ ತಂದು ನಿಲ್ಲುವಂತೆ ಮಾಡಿದರು. ಆ ಮೂಲಕ ಶಿಕ್ಷಣ ಪಡೆದು ಹೋರಾಟಮಾಡುವಂತೆ ಬಹುಕಾಲ ಶ್ರಮಿಸಿದ ಪರಿಣಾಮ ಕಾಲಕಳೆದಂತೆ ತಮ್ಮ ಹಕ್ಕುಗಳನ್ನು ಅರಿತು ದೌರ್ಜನ್ಯಗಳನ್ನು ತಡೆಯಲು ಸ್ವಯಂ ಹೋರಾಟ ನಡೆಸಲು ಪ್ರೇರಿತರಾಗಿ ಕಾರ್ಯಪ್ರವೃತ್ತರಾಗಿದ್ದಾರೆ.

೧೯೭೫ರಿಂದ ನಡೆಯುತ್ತಾ ಬಂದಿರುವ ಸ್ಥಳಾಂತರದ ಕಾರ್ಯಪ್ರಸ್ತುತವೂ ನಡೆಯುತ್ತಲೇ ಇರುವುದು ಒಂದು ಸೂಕ್ಷ್ಮ ವಿಚಾರವೇ ಸರಿ. ಇಷ್ಟು ಸುಧೀರ್ಘ ಸಮಯದ ನಂತರವೂ ವ್ಯವಸ್ಥಿತ ಕ್ರಮದಲ್ಲಿ ಅಭಿವೃದ್ಧಿ ಕಾರ್ಯ ನಡೆಯದೇ ಇರುವುದರಿಂದ ಹೋರಾಟದ ದಾರಿ ಕಂಡುಕೊಂಡಿದ್ದಾರೆ. ಜನರು ಸಹ ವೈಭೋಗದ ಜೀವನ ಕೇಳುತ್ತಿಲ್ಲ. ನಾವು ಈ ರಾಜ್ಯದ ಪ್ರಜೆಗಳು. ನಮಗೂ ಇತರರಂತೆ ಬದುಕಿ, ಬಾಳುವ ಆಸೆಯಿದೆ. ನಮ್ಮ ಹಕ್ಕು ಅರಣ್ಯದಲ್ಲಿ ನೆಲೆಸುವುದು. ಮೊದಲು ಸ್ಥಳಾಂತರ ಮಾಡಬೇಕಾದರೆ, ವ್ಯವಸ್ಥಿತ ಮನೆ ಹಾಗೂ ಭೂಮಿ ನೀಡಲಿ ಎನ್ನುತ್ತಾರೆ. ಹಂತಹಂತದ ಬೆಳವಣಿಗೆ ಕಂಡುಬರುತ್ತಿರುವ ಮೂಲನಿವಾಸಿ ಬುಡಕಟ್ಟುಗಳಲ್ಲಿ ಹೋರಾಟದ ಜಂಟಿ ಕ್ರಿಯಾಸಮಿತಿಯನ್ನೇ ರಚಿಸಿಕೊಂಡಿದ್ದಾರೆ. ಇದೊಂದು ಉತ್ತಮ ಬೆಳವಣಿಗೆಯಾದರೂ ಸಮರ್ಪಕ ಮೀಸಲಾತಿಯ ಸದುಪಯೋಗ ಪಡೆಯಲಾಗಲಿಲ್ಲ. ಈ ಮೀಸಲಾತಿಯೂ ಸಹ ಮನುಷ್ಯರು ವಾಸಿಸುವ ಸ್ಥಳಗಳಲ್ಲಿ ಜನರನ್ನು ಸಂಘಟಿಸಿಲ್ಲ ವೆನ್ನಬಹುದು. ಜಾತೀಯ ಹೊಲಸಲ್ಲಿ ಮಲಗಿರುವ ಗ್ರಾಮಗಳಲ್ಲಿ ದಿವ್ಯ ನಿರ್ಲಕ್ಷಕ್ಕೆ ಒಳಗಾದಂತೆ ಮೂಲನಿವಾಸಿ ಬುಡಕಟ್ಟುಗಳ ವಾಸಸ್ಥಾನಗಳು

ಗೋಚರಿಸುತ್ತವೆ. ಇದರಿಂದಾಗಿ ಸಮುದಾಯದ ಜನರು ಸಹ ಯಾರು ಬಂದರೇನು ಯಾರು ಆಳಿದರೇನು ನಾವು ಕಷ್ಟಪಡುವುದು ತಪ್ಪಿಲ್ಲ ಎನ್ನುವ ನಿಟ್ಟನಲ್ಲಿರುವರು. ಸಮುದಾಯಗಳ ಹಿರಿಯರು ಆಮೂಲಾಗ್ರ ಬದಲಾವಣೆ ಬಗ್ಗೆ ತಲೆಕೆಡಿಸಿಕೊಂಡಿರುವುದು ವಿರಳ. ಇನ್ನೊಂದೆಡೆ ಆಧುನಿಕತೆಯ ಶಿಕ್ಷಣ ಪಡೆದ ಸಮುದಾಯದ ಕೆಲವೇ ಜನರು ಸಂಘಟಿತವಾಗಿ ಆಧುನಿಕ ಸಾಮಾಜಿಕ ಚಿಂತನೆಯ ಮೊರೆ ಹೋಗಿದ್ದಾರೆ. ಈ ಚಿಂತನೆಯನ್ನು ಆಧರಿಸಿ ಸಮುದಾಯದ ಗ್ರಾಮಗಳನ್ನು ಪುನರ್ ಸಂಘಟಿಸುವುದು ಆಧ್ಯತೆಯ ಕಾಯಕ. ಇದು ನಮಗೆ ಸಂವಿಧಾನ ದಯಪಾಲಿಸಿದೆ ಎನ್ನುತ್ತಾ ಸಮುದಾಯದಲ್ಲಿನ ಸಂಘರ್ಷವನ್ನು ತಿಳಿಯಪಡಿಸುತ್ತಾರೆ.

ಕೊರಗ ಅಭಿವೃದ್ಧಿ ಸಂಘಗಳ ಒಕ್ಕೂಟದ ನಾಯಕ ಶ್ರೀಯುತ ಗಣೇಶ್, ಮರವಂತೆ ರವರು ಹೇಳುವಂತೆ ಸಂವಿಧಾನದ ಪರಿಚ್ಛೇಧ ೧೪ ಮತ್ತು ೧೫ ರ ಎರಡರಲ್ಲೂ ಸಮಾನತೆಯನ್ನು ಸಾರಿರುವ ಅಂಶಗಳಿವೆ. ಕಾನೂನು ಮತ್ತು ನ್ಯಾಯ ಎಲ್ಲರಿಗೂ ಸಮಾನ ಮಾನವ ಹಕ್ಕುಗಳು ಸಮನಾದವುಗಳು ಇಲ್ಲಿ ಜಾತಿ, ಧರ್ಮ, ಲಿಂಗ ಎನ್ನದೇ ಯಾರನ್ನೂ ಕೀಳಾಗಿ ನೋಡಬಾರದು ಎನ್ನುತ್ತಾರೆ. ಆದರೆ ನಮ್ಮನ್ನು ಸಾರ್ವಜನಿಕ ಸ್ಥಳಗಳಿಂದ ತೆರವುಗೊಳಿಸಿದರೂ ಹೋಟಲ್, ಅಂಗಡಿ, ದೇವಸ್ಥಾನದಿಂದ ಕಡ್ಡಾಯವಾಗಿ ದೂರವಿಟ್ಟರು ಎಲ್ಲಿ ಸರ್ವರಿಗೂ ಸಮಾನ ಮಾನವೀಯ ಹಕ್ಕುಗಳು ವಿತರಣೆಯಾಗಿದೆ. ನಾವು ನಮ್ಮ ಹಕ್ಕುಗಳಿಗೆ ಹೋರಾಟ ಮಾಡಬೇಕಾದ ಪರಿಸ್ಥಿತಿ ಇದೆ ಎನ್ನುತ್ತಾರೆ".[೮] ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ನೆಲೆಗಳಲ್ಲಿ ಸಂಘರ್ಷ ನಡೆದೇ ಇದೆ. ಕೊರಗ ಸಮುದಾಯದಲ್ಲಿ ಸುಮಾರು ೨೦ ವರ್ಷಗಳಿಂದ, ಜೇನುಕುರುಬರಲ್ಲಿ ೧೪ ವರ್ಷಗಳಿಂದ ಆಯಾ ಜಿಲ್ಲಾ ಪರಿಸರದಲ್ಲಿ ಹೋರಾಟವೂ ಸಾಗುತ್ತಲಿದೆ. ಕೆಲವು ಸ್ಥಳಗಳಲ್ಲಿ ಜನರು ಈಗ ಎಚ್ಚೆತ್ತಿದ್ದೂ ತಮ್ಮ ಹಕ್ಕುಗಳನ್ನು ಒತ್ತಾಯಿಸುವಲ್ಲಿ ನಿರತರಾಗಿದ್ದಾರೆ.

ಇತ್ತೀಚಿಗಿನ ೨೦ ರಿಂದ ೨೫ ವರ್ಷಗಳ ಅಂತರದಲ್ಲಿ ಹಲವಾರು ವಿಧದಲ್ಲಿ ಸಮುದಾಯಗಳಲ್ಲಿ ಬೆಳವಣಿಗೆಗಳು ಕಂಡು ಬರಲಾರಂಭಿಸಿದೆ. ಕೇಂದ್ರ ಸರ್ಕಾರದಲ್ಲಿ ಸಮುದಾಯಗಳ ಹಕ್ಕುಗಳ ರಕ್ಷಣೆಗೆ ನಿಂತ "ಭೂರಿಯಾ ಸಮಿತಿ" ಅತ್ಯಂತ ದಿಟ್ಟವಾದ ನಿಲುವುಗಳು ತಳೆದದ್ದು ಸಮುದಾಯಗಳಿಗೆ ಸಂತಸದ ವಿಷಯವಾಗಿ ಪ್ರಜಾಪ್ರಭುತ್ವದ ಕಡೆಗೆ ದಿಟ್ಟಿಸಿ ನೋಡುವಂತೆ ಮಾಡಿದೆ. ಜೊತೆಗೆ ಸಮುದಾಯದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯಲ್ಲಿ ಸಮುದಾಯದ ಜನರಿಗೆ ಬೇಕಾದ ಕಾರ್ಯಕ್ರಮಗಳನ್ನು ಪಡೆಯುವ ಅಧಿಕಾರ ಘೋಷಿಸಿದೆ. ಇಷ್ಟಾದರೂ ಮೂಲನಿವಾಸಿ ಬುಡಕಟ್ಟುಗಳಿಗೆ ಸಂದಬೇಕಾದ ಸವಲತ್ತುಗಳು, ಸೌಲಭ್ಯಗಳು ಹೆಚ್ಚಾಗಿ ಅನುಷ್ಠಾನಗೊಂಡಿಲ್ಲ. ಎಲ್ಲಾರಂಗಗಳಲ್ಲೂ ಕೊರತೆ ಇದೆ. ತಕ್ಕಷ್ಟು ಪ್ರಾತಿನಿಧ್ಯ ಲಬಿಸಿಲ್ಲವೆಂದು ಮೈಸೂರಿನಲ್ಲಿರುವ ರಾಜ್ಯ ಮೂಲನಿವಾಸಿಗಳ ಬುಡಕಟ್ಟು ವೇದಿಕೆಯ ಉಪಾಧ್ಯಕ್ಷೆಯಾದ ಜಾಜಿತಿಮ್ಮಯ್ಯರವರ ಮನದಾಳದ ನೋವು.

ಮೈಸೂರು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ "ವನವಾಸಿ ಮಹಿಳಾ ಸಂಘಟನೆ"ಯು ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ಜಾಗೃತ ಸಂಸ್ಥೆಯಾಗಿದೆ. ಈ ಸಂಸ್ಥೆಯ ಮುಖೇನ ಅನೇಕ ಲೇಖನಗಳು, ಹೋರಾಟದ ಮಾದರಿ, ಪ್ರಗತಿಯ ಬಗ್ಗೆ ನಿರಂತರ ಜನ ಸ್ಪಂದನೆ ಎಂಬಂತೆ ಉಪಯುಕ್ತ ಮಾಹಿತಿಯನ್ನು ಜನರಿಗೆ ದೊರಕಿಸಿಕೊಡುತ್ತಿದ್ದಾರೆ. ಹಾಗೂ ಅಗತ್ಯವಿರುವೆಡೆ ಸೌಲಭ್ಯಗಳನ್ನು ಕಲ್ಪಿಸುವ ಹೊಣೆಯನ್ನು ಜಿಲ್ಲಾಧಿಕಾರಿಗಳ ಬಳಿ ಚರ್ಚಿಸಲಾಗುತ್ತಿದೆ. ಹೋರಾಟದ ಮಾರ್ಗದಲ್ಲಿ ಕಂಡ ಸತ್ಯವನ್ನು ವಕ್ತೃಹೇಳುವಂತೆ "ನಮ್ಮ ಸಾಹಿತ್ಯ-ಕಲೆ-ಸಂಸ್ಕೃತಿ ಎಲ್ಲಾ ಕ್ಷೇತ್ರಗಳಲ್ಲಿ ವಿಶಿಷ್ಟವಾದದ್ದು ಭಾರತದ ಎಲ್ಲಾ ಕಡೆಯೂ ಈ ರೀತಿ ದಾಖಲಾಗುತ್ತಿದೆ. ಈ ಬಗ್ಗೆ ಬರಹಗಳು ಸಾಕಷ್ಟು ಬರುತ್ತಿವೆ. ನಮ್ಮ ಬದುಕಿನ ವಿವಿಧ ಮಜಲುಗಳು ತೆರೆಯುತ್ತಿವೆ. ನಮ್ಮ ಜೀವಿತದ ಗಟ್ಟಿಮುಟ್ಟಿನ ಬದುಕಿನ ಅನುಭವವು ಕತೆಯಾಗಿ, ನಾಟಕವಾಗಿ, ಕಾದಂಬರಿಯಾಗಿ, ಕವನವಾಗಿ, ಜೀವನ ಚರಿತ್ರೆಯಾಗಿ ಹೊರಹೊಮ್ಮುತ್ತಿದೆ. ಇಲ್ಲಿನ ಸಾಹಿತ್ಯ ಲೋಕವು ಇದರಿಂದ ಶ್ರೀಮಂತವಾಗಿದೆ ಎನ್ನುತ್ತಾರೆ. ಆದರೆ ನಮ್ಮ ಬದುಕು ತಲ್ಲಣಗೊಂಡಿದೆ".[5] ಸ್ಥಳಾಂತರದ ನಂತರ ಮೀಸಲಾತಿ ಮತ್ತು ಆಧುನಿಕ ಸೌಲಭ್ಯ ನೀಡುತ್ತಿದ್ದೇವೆ ಎನ್ನುವುದು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಾದ ಮತ್ತು ಸ್ಥಳಾಂತರಗೊಂಡ ನಂತರ ಜನರಿಗೆ ಮನೆ ಮತ್ತು ಜಮೀನು ಸಹ ನೀಡಲಾಗುವುದಲ್ಲದೆ ಶಾಲೆ, ಅಸ್ಪತ್ರೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಈ ಮೂಲಭೂತಸೌಲಭ್ಯಗಳ ಕಲ್ಪಿಸುವಿಕೆಯಲ್ಲಿ ತಾರತಮ್ಯವಿದೆ ಎನ್ನುತ್ತಾರೆ ಹೋರಾಟಗಾರರು.

ಸಮುದಾಯಗಳ ಅಭಿವೃದ್ಧಿ ಹಾಗೂ ಪ್ರಗತಿ ಆಗಬೇಕಾದಲ್ಲಿ ಈ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಷ್ಟೇ ಸಾಲದು. ಕಲ್ಯಾಣಕಾರ್ಯಕ್ರಮ ಅನುಷ್ಠಾನದಲ್ಲಿ ತರಬೇಕು ಎನ್ನುವುದು ಹೋರಾಟದ ನಿಲುವು. ಇಂತಹ ದಿಟ್ಟ ನಿಲುವು ತಳೆಯಲು ಸ್ವಯಂಸೇವಾಸಂಸ್ಥೆಗಳು ಹೆಚ್ಚಿನ ಕೊಡುಗೆ ನೀಡಿರುವುದು ಕಂಡುಬರುತ್ತದೆ. ಮೈಸೂರು ಜಿಲ್ಲೆಯಲ್ಲಿನ ಬಹುತೇಕ ಎಲ್ಲ ಸ್ವಯಂ ಸೇವಾ ಸಂಸ್ಥೆಗಳು ಸಮುದಾಯಗಳ ಹೋರಾಟದ ಬೆಂಬಲಕ್ಕಿವೆ. ರಾಜ್ಯ ಮೂಲನಿವಾಸಿ ಬುಡಕಟ್ಟು ವೇದಿಕೆ ಮೈಸೂರಿನಲ್ಲಿದ್ದರೆ, ಮಂಗಳೂರಿನಲ್ಲಿ ನವಸಾಕ್ಷರಸಂಘ, "ಆದಿವಾಸಿ ಕೊರಗರ ಸಂಘ" ಮತ್ತು "ಕೊರಗ ಅಭಿವೃದ್ಧಿ ಸಂಘ ನಗರ ವಲಯ ಮತ್ತು ಸಮಗ್ರ ಗ್ರಾಮೀಣ ಆಶ್ರಮ ಕಾಪು" ಸಂಘಟನೆಯು ನಡೆಸುತ್ತಾ ಬಂದಿರುವ ಹೋರಾಟದಿಂದ ಅದರ ಪಾತ್ರ ತಿಳಿದು ಬರುತ್ತದೆ. ಸಂಕ್ಷಿಪ್ತವಾಗಿ ಇಂತಹ ಸಂಸ್ಥೆಗಳ ಪಾತ್ರವನ್ನು ಇಲ್ಲಿ ವಿವರಿಸಿದಲ್ಲಿ ಇವರೇ ಪ್ರದೇಶದ ಬುಡಕಟ್ಟು ಸಮುದಾಯಗಳಿಗೆ ಕೂಡ ತಮ್ಮ ಅಭಿವೃದ್ಧಿಗೆ ಪರವಾಗಿ ಹಾಗೂ ಪರೋಕ್ಷವಾಗಿ ತಮ್ಮ ಸಮಸ್ಯೆಗಳಿಗೆ ಉತ್ತರ ಹುಡುಕಲು ಅನುವು ಆಗುವುದು. ಮೌನವಾಗಿ ಸಂಘಟನಾತ್ಮಕವಾಗಿ ಹೋರಾಟದ ದಿಕ್ಕು-ದಿಸೆಯ ಪಥದಲ್ಲಿ ಸಾಗಲು ಪ್ರೇರಕವಾದಂತೆ ಎನ್ನಬಹುದು.

ಅರಣ್ಯದೊಳಕ್ಕೆ ಹೋಗಬಾರದು ಎಂದು ಷರತ್ತುಗಳನ್ನು ವಿಧಿಸಿ ನಾಡಿಗೆ ತಂದು ಬಿಟ್ಟ ಮೂಲನಿವಾಸಿಗಳ ಪರವಾಗಿ ಸಾಕಷ್ಟು ಸ್ವಯಂಸೇವಾ ಸಂಸ್ಥೆಗಳು ಹೋರಾಟ ನಡೆಸಿದ್ದವು. ಕಳೆದ ೨೫-೩೦ ವರ್ಷಗಳಲ್ಲಿ ನಡೆದ ಹೋರಾಟದ ಫಲವಾಗಿಯೇ ಈಗ ಆಡಳಿತಗಾರರಿಗೂ ಜ್ಞಾನೋದಯವಾಗಿರುವುದು. ಮೂಲನಿವಾಸಿ ಬುಡಕಟ್ಟುಗಳು ಇರುವ ಕಡೆ ಮಾತ್ರ ಕಾಡು ಇನ್ನೂ ಉಳಿದುಕೊಂಡಿದೆ ಎಂಬ ಸತ್ಯ ಮನವರಿಕೆಯಾಗಿರುವುದು. ಕಾಡಿನ ಮೂಲೆ ಮೂಲೆಗಳಲ್ಲಿದ್ದ ವಿವಿಧ ಬುಡಕಟ್ಟುಗಳನ್ನು ಸೋಲಿಗ ಯುವಕರೊಂದಿಗೆ ಕೂಡಿ ಜೇನುಕುರುಬರನ್ನು ಸಂಘಟಿಸ ತೊಡಗಿದರು. ಅವರಿಗೆ ಒಬ್ಬ ಹೊರಗಿನ ವ್ಯಕ್ತಿಯಾದ ಶ್ರೀ ಕ್ಷೀರಸಾಗರ ಎಂಬೊಬ್ಬ ಯುವಕ ಕೂಡಿಕೊಂಡು ಹೆಗ್ಗಡದೇವನಕೋಟೆಯಲ್ಲಿ "ವಿಕಾಸ" ಎಂಬ ಸ್ವಯಂಸೇವಾ ಸಂಸ್ಥೆಯನ್ನು ಪ್ರಾರಂಭಿಸಿ ಜೇನುಕುರುಬ ಮತ್ತು ಕಾಡುಕುರುಬರಿಗೆ ನೆರವು ತಲುಪಿಸುವಲ್ಲಿ ಮುಂದಾದರು. ವಿಕಾಸವು ಸಾಧಿಸಿದ್ದು ಅಲ್ಪವೇನಲ್ಲ ಸಮುದಾಯಗಳನ್ನೆಲ್ಲಾ ಸೇರಿಸಿ ಭೂಮಾಲೀಕರು ವಶಪಡಿಸಿಕೊಂಡಿದ್ದ ಜಮೀನು, ಮತ್ತು ಸರ್ಕಾರಿ ದಾಖಲೆಗಳಲ್ಲಿರುವ ಮಾಹಿತಿ ಶೋಧಿಸಿ ಕೋರ್ಟಿಗೂ ಹೋಗಿ ನೂರಾರು ಎಕರೆ ಜಮೀನು ಅನೇಕ ಕುಟುಂಬಗಳಿಗೆ ಕೊಡಿಸಲಾಯಿತು. ಅನೇಕರು ಜೀತದಲ್ಲಿದ್ದರು ಅವರನ್ನು ಬಿಡಿಸಲಾಯಿತು. ಸರ್ಕಾರ ಒದಗಿಸುತ್ತಿದ್ದ ಸವಲತ್ತುಗಳು ಮಧ್ಯವರ್ತಿಗಳ ಪಾಲಾಗುತ್ತಿದ್ದನ್ನು ಹೋಗಲಾಡಿಸಲು ಸಮುದಾಯದ ಜನರನ್ನೇ ನೇರ ಹೋರಾಟಕ್ಕೆ ಕರೆತರಲಾಯಿತು. ಇದರಿಂದ ಅಧಿಕಾರಿಗಳ ಮುಂದೆ ತಮ್ಮ ಸೌಲಭ್ಯಗಳನ್ನು ತಾವೇ ಕೇಳುವಂತೆ ಮಾಡುವಲ್ಲಿ ಯಶಸ್ಸುಗಳಿಸಿತು.

ಹೋರಾಟದ ಮಹತ್ವದ ಹೆಜ್ಜೆ ಎಂದರೆ ಅಯಾ ಸಮುದಾಯಗಳಲ್ಲಿಯೇ ನಾಯಕರು ಸಂಘಟಿತವಾಗಿ ತಾವೇ ಹೋರಾಡುವುದು. ಇದಕ್ಕಾಗಿ ಜೇನುಕುರುಬರಲ್ಲಿ ಬುಡಕಟ್ಟು ಕೃಷಿಕ ಸಂಘ, ಮತ್ತು ಕೊರಗರಲ್ಲಿ ಆದಿವಾಸಿ ಕೊರಗರ ಸಂಘ ಗಳು ಹುಟ್ಟಿಕೊಂಡಿವೆ. ಆಯಾ ಪರಿಸರದಲ್ಲಿದ್ದಂತಹ ಇತರ ಬುಡಕಟ್ಟು ಸಮುದಾಯಗಳು ಸಹ ಅವರೊಂದಿಗೆ ಕೂಡಿಕೊಂಡಿದ್ದಾರೆ. ಅವರ ಮುಖ್ಯ ಸಮಸ್ಯೆಗಳಾದ ಭೂಹಿಡುವಳಿ, ಇತರ ಸ್ವ-ಹಿತಾಸಕ್ತಿ ರೈತರುಗಳಿಂದ ಭೂಮಿಯನ್ನು ರಕ್ಷಿಸುವುದು, ವಸತಿ, ಶಿಕ್ಷಣ, ರಾತ್ರಿಶಾಲೆ ನಡೆಸುವುದು, ಸರ್ಕಾರಿ, ಸ್ವ ಉದ್ಯೋಗ ಯೋಜನೆಯಡಿ ತರಬೇತಿ, ಸಾಲ ಸೌಲಭ್ಯ ಮತ್ತು ಸರ್ಕಾರದ ಕಲ್ಯಾಣ ಯೋಜನೆಗಳು ಸಮುದಾಯಗಳಿಗೆ ತಲುಪಿಸುವುದು ಇತ್ಯಾದಿ ಸಮಸ್ಯೆಗಳನ್ನು ನೈತಿಕ ಬಲದಿಂದ ಹೋರಾಡಲು ಜನರು ಪ್ರಾರಂಭಿಸತೊಡಗಿರುವುದು ಕಂಡುಬರುತ್ತದೆ. ಯಾವುದೇ ಯೋಜನೆಯನ್ನು ರೂಪಿಸಿದರೂ ಅವುಗಳ ಅನುಷ್ಠಾನ ಮಹತ್ವದ ಅಂಶವಾಗಿರುತ್ತದೆ. ಅನುಷ್ಠಾನ ಗೊಳಿಸುವಲ್ಲಿ ಅನೇಕ ಸಾಧಕ-ಭಾದಕಗಳಿರುತ್ತವೆ. ಜನರ ಪ್ರಗತಿಗಾಗಿ ಇರುವ ಕಾರಣ ಎಂಥ ಅಡ್ಡಿ ಆಡಚಣೆಗಳೂ ಬಂದರೂ ಅವುಗಳನ್ನು ನಿವಾರಿಸಿ ಮೂಲಭೂತವಾಗಿ ರೂಪಿಸಿದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿ ಹೋರಾಟ ನಡೆಸುವುದು

ಅನಿವಾರ್ಯ ಹಾಗೂ ಅವಶ್ಯಕ. ಇಂತಹ ಸದುದ್ದೇಶದ ಕಾರ್ಯಗಳಿಗೆ ಆಗಾಗ್ಗೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಪರಿಕ್ಷಣ ಅತ್ಯಂತ ಸಮಯೋಚಿತ ಸಾಧನ. ಇದರಿಂದ ಮೂಲಸ್ವರೂಪದ ಲೋಪ ದೋಷದಲ್ಲಿ ಬರುವ ಅಡ್ಡಿ ಆಂತಕಗಳ ಪರಿಚಯವಾಗಿ ಅವನ್ನು ಸೂಕ್ತವಾಗಿ, ಸುಲಭವಾಗಿ ಎದುರಿಸಿ ಯಶಸ್ಸನ್ನು ಸಂಪಾದಿಸಲು ಮಾರ್ಗ ಅಥವಾ ದಿಕ್ಕು-ದಿಸೆ ಸಿಗುತ್ತದೆ. ಯಾವ ಜನರಿಗೋಸ್ಕರವಾಗಿ ಆ ಧನ ವ್ಯಯಿಸಲ್ಪಡುವುದೋ ಅದಕ್ಕಾಗಿ ಅದರ ಸಾಫಲ್ಯಕ್ಕಾಗಿ ಯಶಸ್ವಿ ಹೋರಾಟವೂ ಒಂದು.

ಹೋರಾಟದ ಭಾಗವಾಗಿ ಬುಡಕಟ್ಟುಗಳು ದೆಹಲಿಯ ಸಂಸತ್ತಿನ ಮುಂದೆ ತಮ್ಮ ಶಕ್ತಿಪ್ರದರ್ಶಿಸಿದ್ದು ಒಂದು ಸಾಧನೆಯಾದರೆ, ದೇಶಾದ್ಯಂತ ನಡೆದ ಆದಿವಾಸಿ ಸಮುದಾಯ ಕರಡು ಮಸೂದೆ ಅಂಗೀಕಾರಕ್ಕೆ ದೇಶದ ೧೮ ರಾಜ್ಯಗಳ ಆದಿವಾಸಿಗಳು ದೆಹಲಿಯಲ್ಲಿ ೨೦ ದಿನಗಳ ಕಾಲ ಧರಣಿ ನಡೆಸಿದ್ದರು. ಆ ಸಂದರ್ಭದಲ್ಲಿ ಕರ್ನಾಟಕದಿಂದ ಕೂಡ ಸುಮಾರು ೨೦೦ ಜನ ದೆಹಲಿಗೆ ತೆರಳಿದ್ದರು. ಈ ರೀತಿಯ ಕಾರ್ಯಕ್ರಮಗಳು ಹೋರಾಟದ ಒಂದು ಭಾಗ. ಸಮುದಾಯಗಳಿಗಾಗಿ ರೂಪಿಸಿದ ಕಲ್ಯಾಣ ಕಾರ್ಯಕ್ರಮಗಳಲ್ಲಿನ ಕ್ಷೇತ್ರದಲ್ಲಿ ಹಾಗೂ ಆಧುನಿಕ ಸಮಾಜದ ಮುಖ್ಯವಾಹಿನಿಯಲ್ಲಿ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವತ್ತಾ ನಡೆಯುತ್ತಿರುವುದು ಒಂದು ಗಮನಾರ್ಹವಾದ ಪ್ರಗತಿ. ಅನೇಕ ರೀತಿನೀತಿಗಳಲ್ಲಿ ಸುಧಾರಣೆ ತಂದು ಅವರ ಜೀವನಕ್ಕೊಂದು ಸ್ಥಿರತೆ ತಂದಲ್ಲಿ ಇತರ ಜನರೊಡನೆ ಹೊಂದಿಕೊಳ್ಳುವಲ್ಲಿ ಹೋರಾಟ ಸಹಕಾರಿಯಾಗುವ ಸಂದೇಹವಿಲ್ಲ. ಕೆಲವೆಡೆ ಸ್ವಯಂ ಸೇವಾಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಬಗ್ಗೆ ಅತ್ಯುತ್ತಮ ಉದಾಹರಣೆ ಕೊಡಬಹುದು. ಜೇನುಕುರುಬರಲ್ಲಿ DEED ನ ಶ್ರೀಕಾಂತ್ ಮತ್ತು ಕೊರಗರಲ್ಲಿ ಜನಶಿಕ್ಷಣ ಟ್ರಸ್ಟ್‌ನ ಶೀನಶೆಟ್ಟರವರು ಪ್ರಧಾನವಾಗಿ ತೀರಾ ಹಿಂದುಳಿದ ಮೂಲನಿವಾಸಿ ಬುಡಕಟ್ಟುಗಳ ಅಭಿವೃದ್ಧಿಗಾಗಿ ಸಾಕಷ್ಟು ಹೋರಾಟ ನಡೆಸುತ್ತಿರುವವರು ಮತ್ತು ಸಾಕಷ್ಟು ಯಶಸ್ಸು ಗಳಿಸಿದವರಾಗಿದ್ದಾರೆ. ಸಮುದಾಯಗಳ ಜನರಲ್ಲಿಯೇ ಅರಿವು ಮೂಡಿಸುವುದರೊಂದಿಗೆ ಅಭಿವೃದ್ಧಿ ಸಂಘಗಳನ್ನು ಸ್ಥಾಪಿಸಿ ಜನರೇ ತಮ್ಮ ಕಲ್ಯಾಣ ಕಾರ್ಯಕ್ರಮಗಳ ಲಾಭ ಪಡೆಯಲು ಪ್ರಯತ್ನಿಸಲು ಈಗ ಸಾಧ್ಯವಾಗುತ್ತಲಿದೆ. ಸಮುದಾಯಗಳ ಹಿತದೃಷ್ಟಿಯಿಂದ ಅವರ ದಿಕ್ಕು-ದಿಸೆಯಲ್ಲಿ ಕಾರ್ಯಪ್ರವೃತ್ತರಾಗಲು ಪ್ರಚೋದಿಸುವ ಇಂತಹ ಮಾನವತೆಯುಳ್ಳ ಜನರು ತೋರಿಸುವ ಆಸ್ಥೆ ಒಂದು ಉತ್ತಮ ನಿದರ್ಶನ. ಸಮಾಜದ ಜನರಾಗಲೀ ಅಥವಾ ಸರ್ಕಾರವಾಗಲೀ ಸಮುದಾಯಗಳಿಗೆ ಕಾರ್ಯಕ್ರಮದ ಮೂಲಕ ದಾರಿತೋರಬಹುದು. ಅದನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಆ ಜನರೇ ಮುನ್ನುಗ್ಗಬೇಕಾಗುತ್ತದೆ. ಅದಕ್ಕಾಗಿ ಉತ್ತಮ ಶಿಕ್ಷಣ ತಳಪಾಯವಾಗಿದೆ ಎನ್ನಬಹುದು. ಒಳ್ಳೆಯ ಶಿಕ್ಷಣದಿಂದ ಆರ್ಥಿಕ ಸ್ವಾತಂತ್ರ್ಯ, ಆರೋಗ್ಯ, ಸ್ವಾಯತ್ತ ಬದುಕು, ಉತ್ತಮ ಸಾಮಾಜಿಕ ವ್ಯವಸ್ಥೆಯ ಭೂಮಿಕೆಯನ್ನು ಸೃಷ್ಟಿಸಿಕೊಳ್ಳಲು

ಸಾಧ್ಯ. ಈ ಮಟ್ಟಿಗೆ ಸಮುದಾಯದ ಸಂಘಟನಾತ್ಮಕ ಹೋರಾಟದ ಕಾರ್ಯಕ್ಷಮತೆಯು ಕೆಲಮಟ್ಟಿಗೆ ಸಫಲತೆಯ ದಿಕ್ಕಿನಲ್ಲಿ ನಡೆಯುತ್ತಿದೆ.

೩. ಅಭಿವೃದ್ಧಿಯಲ್ಲಿ ಸ್ವಯಂಸೇವಾಸಂಸ್ಥೆಗಳ ಪಾತ್ರ

ಬಹುದೊಡ್ಡ ದೇಶದಲ್ಲಿ ಎಲ್ಲಾ ಕಾರ್ಯಕ್ರಮಗಳು ಸರ್ಕಾರದಿಂದಲೇ ನಡೆಯುತ್ತಿರುವುದು ಒಂದು ವಿಶೇಷವೆನಿಸಿದರೂ ಸರ್ಕಾರದ ಕಾರ್ಯ, ಕಲ್ಯಾಣಕ್ಕಾಗಿ ಸ್ವಯಂ ಸಂಘಟಿತ ಸಂಘಟನೆಗಳು ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಸ್ವಯಂ ಸಂಘಟನ ಸಂಸ್ಥೆ ಸೇವಾ ಉದ್ದೇಶದಿಂದ ನಿಸ್ವಾರ್ಥ ಜನರಿಂದ ಆರಂಭಗೊಂಡ ಸಾಮಾಜಿಕ ಸಂಸ್ಥೆ. ಸರ್ಕಾರಗಳು ಜನಸಾಮಾನ್ಯರಿಗೆ, ಹಿಂದುಳಿದ ಬಡವ, ಪರಿಶಿಷ್ಟ ಜಾತಿ, ಜನಾಂಗಕ್ಕೆ (ವರ್ಗಕ್ಕೆ) ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುತ್ತಿದೆ. ಅಂತಹ ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ಸಹಕಾರಿಯಾಗಿ, ತಿಳುವಳಿಕೆ ನೀಡುವ ಸೇವಾ ಕ್ಷೇತ್ರದಂತೆ ಬೆಳೆದು ಬಂದಿರುವುದೇ "ಸ್ವಯಂಸೇವಾಸಂಘ" ಜನರನ್ನು ತಿಳುವಳಿಕಸ್ಥರನ್ನಾಗಿ, ತಮ್ಮ ಹಕ್ಕುಭಾದ್ಯತೆಗಳಿಗೆ ಹೋರಾಟ ಮಾಡುವಂತೆ ಪ್ರೇರೇಪಿಸಲು ಒಂದು ತರಹದ ದಿಕ್ಕು-ದಿಸೆಯನ್ನು ತೋರಿಸುವಲ್ಲಿ ಆಸ್ಥೆವಹಿಸುವಲ್ಲಿ ಸಹಕಾರಿಯಾಗುತ್ತಿವೆ. ಜ್ಞಾನ ಅಥವಾ ಅರಿವು ನೀಡುವುದು ಕೇವಲ ಶಾಲೆ-ಕಾಲೇಜುಗಳಲ್ಲಿ ಅಲ್ಲ. ಬದಲಾಗಿ ಇಡೀ ಪ್ರಜಾಸಮುದಾಯದಲ್ಲಿ ಮುಕ್ತ ರೀತಿಯಲ್ಲಿ ನಡೆಯಬೇಕಾದ ಕಾರ್ಯಕ್ರಮ. ಈ ಸಂಸ್ಥೆಗಳು ಜನರ ಪ್ರಜ್ಞೆಯನ್ನು ಬಡಿದೆಬ್ಬಿಸಿ ಅವರನ್ನು ಕ್ರಿಯಾಶೀಲರನ್ನಾಗಿಸಬೇಕಾದ ಒಂದು ಪ್ರಗತಿಯ ನಿಯೋಗವೆನ್ನಬಹುದು. ಸಂಕ್ಷಿಪ್ತವಾಗಿ ಎನ್.ಜಿ.ಒ. ಗಳೆಂದು ಕರೆಯಲ್ಪಡುವ ಇವುಗಳು ಬೇರೆ ಬೇರೆ ಊರುಗಳಲ್ಲಿರುವ ಕೆಲವು ಸಮಾಜಸೇವಾಸಕ್ತ ಜನರ ಸಂಘಟನೆಗಳು. ಇವು ನೊಂದಣಿಯಾಗಿರುತ್ತವೆ. ಜನರ ಆರೋಗ್ಯ, ಶಿಕ್ಷಣ, ಗ್ರಾಮನೈರ್ಮಲ್ಯ, ಮಾನವನ ಹಕ್ಕು ಇತ್ಯಾಧಿಗಳ ಅಭಿವೃದ್ಧಿಗಾಗಿ ದುಡಿಯುವುದು ಇವುಗಳ ಧ್ಯೇಯವಾಗಿರುತ್ತದೆ. ಇಂಥ ಕೆಲವು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಸಮುದಾಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಉತ್ತಮ ಕೆಲಸ ಮಾಡಿವೆ.

ಸ್ವತಂತ್ರ ಪೂರ್ವದಲ್ಲಿ ಮತ್ತು ಸ್ವತಂತ್ರ್ಯಾನಂತರದಲ್ಲಿ ಸಮಾಜಕಾರ್ಯಮಾಡುತ್ತಲೇ ಅನೇಕ ಸಂಸ್ಥೆಗಳು ಮತ್ತು ಮಹನೀಯರು ಬರುತ್ತಿದ್ದಾರೆ. ವಿಶೇಷವಾಗಿ ಬಿಹಾರ, ಮಧ್ಯಪ್ರದೇಶ, ಒರಿಸ್ಸಾ, ಕರ್ನಾಟಕ, ಪಶ್ಚಿಮಬಂಗಾಳದಲ್ಲಿ ಸೇವೆ ಮಾಡಿದ ಮಹನಿಯರಲ್ಲಿ ವೆರಿಯರ್ ಎಲ್ವಿನ್, ಎ.ಬಿ. ಠಕ್ಕರ್, ಕುದ್ಮುಲ್ ರಂಗರಾವ್, ಡಾ॥ ಸುದರ್ಶನ ಹೀಗೆ ಅನೇಕರ ಪಟ್ಟಿ ನೆನೆಯಬಹುದು. ಕರ್ನಾಟಕದಲ್ಲಿ ತೀರಾ ಹಿಂದುಳಿದ ಬುಡಕಟ್ಟುಗಳು ಪಶ್ಚಿಮಘಟ್ಟ ಪ್ರದೇಶಗಳಲ್ಲಿ ವಾಸಿಸುತ್ತಿವೆ. ಅವು ಹೆಚ್ಚಾಗಿ ಅರಣ್ಯಾಧಾರಿತ ಬುಡಕಟ್ಟುಗಳು. ಅವುಗಳ ಜನಸಂಖ್ಯೆ ಕೂಡ ಉತ್ತರ ಭಾರತದಲ್ಲಿರುವಂತೆ ಹೆಚ್ಚಾಗಿಲ್ಲ. ಹೀಗಾಗಿ ಅಲ್ಲೊಂದು

ಇಲ್ಲೊಂದು ಸ್ವಯಂ ಸೇವಾ ಸಂಸ್ಥೆಗಳು ಇದ್ದಿರಬಹುದು, ವಿಶೇಷವೆಂದರೆ ದಕ್ಷಿಣಕನ್ನಡ ಜಿಲ್ಲೆಯ ಕೊರಗ ಬುಡಕಟ್ಟು ಸಮುದಾಯದ ಅಭಿವೃದ್ಧಿಗಾಗಿ "ಗಿರ್ಲ್ರಲ್ಲೇ ಕುದ್ಮುಲ್ ರಂಗರಾಯರು ಮಂಗಳೂರಿನ ಊರ್ವಚಿಲಿಂಬಿ ಎಂಬಲ್ಲಿ ಪ್ರಥಮ ಹುಲ್ಲುಛಾವಣಿಯ ಶಾಲೆ" ಸಮಾಜಸೇವಾ ಕ್ಷೇತ್ರದತ್ತ ಮೊದಲುಮಾಡಿತು. ಮೈಸೂರಿನ ಕ್ಷೇತ್ರದಲ್ಲಿ ಹಲವಾರು ವಿಚಾರಗಳಲ್ಲಿ ತುಂಬಾ ಕ್ರಾಂತಿಕಾರಿ ಕೆಲಸಗಳನ್ನು ಮಾಡಿದ ಹೂಣಸೂರಿನ ಪರಿವರ್ತನೆ ಸ್ವಯಂಸೇವಾ ಸಂಸ್ಥೆ ಗ್ರಾಮೀಣ ಮಹಿಳೆಯರನ್ನು ಸಂಘಟಿಸಿ ಎತ್ತರಕ್ಕೆ ಬೆಳೆಯುವಂತೆ ಮಾಡಿದ ಇತ್ತೀಚಿನ ದಿನಗಳಲ್ಲಿ ಸರ್ಕಾರೇತರ ಸಂಸ್ಥೆಗಳು ಹೆಚ್ಚಾಗಿ ಕ್ರೀಯಾಶೀಲವಾಗಿರುವುದು ಕಂಡುಬರುತ್ತದೆ. ಮೂಲನಿವಾಸಿ ಬುಡಕಟ್ಟುಗಳ ಅಭಿವೃದ್ಧಿ ಹಕ್ಕೊತ್ತಾಯಕ್ಕಾಗಿ ಹೋರಾಟ ನಡೆಸುತ್ತಿರುವ ಜೇನುಕುರುಬ ಮತ್ತು ಕೊರಗರ ಬೆಂಬಲಕ್ಕಿರುವ ಸಂಸ್ಥೆಗಳ ಸಂಕ್ಷಿಪ್ತ ಸಮೀಕ್ಷೆ ಇಲ್ಲಿ ಮಾಡಲಾಗಿದೆ. ಈ ಸಂಸ್ಥೆಗಳ ಅದೆಷ್ಟೋ ಕಾರ್ಯಕ್ರಮಗಳು ಜಾಗೃತಿ ಮೂಡಿಸಿರಬಹುದು. ಅಂತಹ ಪ್ರಯತ್ನಗಳ ಬಗ್ಗೆ ಸ್ವಲ್ಪ ವಿವರಗಳನ್ನು ಅಭಿವೃದ್ಧಿಗೆ ಪೂರಕವೆಂಬಂತೆ ಕೊಡಲಾಗಿದೆ.

ಡೀಡ್ ಸ್ವಯಂ ಸಂಸ್ಥೆ:

ಮೈಸೂರಿನ ಹುಣಸೂರು ತಾಲ್ಲೂಕಿನಲ್ಲಿದೆ. ಜೇನುಕುರುಬ ಮತ್ತು ಕಾಡುಕುರುಬರ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು ಸ್ಥಾಪಿತವಾದ ಸ್ವಯಂಸೇವಾಸಂಸ್ಥೆ ಶ್ರೀಕಾಂತ್‌ರವರಿಂದ ಪ್ರಾರಂಭಗೊಂಡು ಬಂದಿದೆ. ಕಳೆದ ೨೫ ವರ್ಷಗಳ ಅನುಪಯುಕ್ತ ಸೇವೆಯಲ್ಲಿ ಡೀಡ್ ಸಂಸ್ಥೆ ಪಡೆದಫಲ ರಾಜ್ಯದಲ್ಲಿ ಕೀರ್ತಿಗಳಿಸುವಂತೆ ಮಾಡಿದೆ. ರಾಜ್ಯದ ಪ್ರಥಮ ಆದಿವಾಸಿ ಮಹಿಳೆಯರನ್ನು ರಾಜಕೀಯ ಕ್ಷೇತ್ರದಲ್ಲಿ ಬೆಳಸಿದ ಕೀರ್ತಿ ಡೀಡ್ ಸಂಸ್ಥೆಯದು.

ಡೀಡ್ ಸಂಸ್ಥೆಯು ಗಿರಿಜನರ ಹಾಡಿಗಳಲ್ಲಿ ಶಾಲೆಗಳನ್ನು ಪ್ರಾರಂಬಿಸುವ ಮೂಲಕ, ಶಿಕ್ಷಣ ಹೋರಾಟದ ಮೂಲವೆಂದು ಅತಿ ಹೆಚ್ಚಿನ ಮಹತ್ವ ಶಿಕ್ಷಣಕ್ಕೆ ನೀಡಿದೆ. ಜೇನುಕುರುಬರ ನಡುವಿನ ಭಾಷೆ ಜೇನುನುಡಿಯನ್ನೇ ಪಠ್ಯದಲ್ಲಿ ಸಂವಾದಕ್ಕೆ ಬಳಸಿಕೊಳ್ಳುವ ಮತ್ತು ಆನೇ ತರಗತಿಯವರೆಗೆ ಜೇನುನುಡಿಯಲ್ಲಿರುವ ಪಠ್ಯಪುಸ್ತಕಗಳು ಹೊರತರುವಲ್ಲಿ ಕಾರಣಕರ್ತರು.

ಶಿಕ್ಷಣ: ಈಗ ಚಾಲ್ತಿಯಲ್ಲಿರುವ ಶಿಕ್ಷಣ ಇಲಾಖೆಯ ಪ್ರಾಯೋಜಿತ ವಯಸ್ಕರ ಶಿಕ್ಷಣ ಯೋಜನೆಯಡಿಯಲ್ಲಿ ಜನರು ಪಾಲ್ಗೊಳ್ಳುವಂತೆ ಮಾಡಿದ್ದಾರೆ. ಸ್ವಉದ್ಯೋಗಿ ಸದಸ್ಯರನ್ನು ಸಂಪೂರ್ಣ ಸಾಕ್ಷರತಾ ಅಭಿಯಾನ, ನಿರಂತರ ವಯಸ್ಕರ ಸಾಕ್ಷರತಾ ಕಾರ್ಯಕ್ರಮ ಚಟುವಟಿಕೆಗಳಲ್ಲಿ ತರಬೇತಿ ನೀಡಲಾಗುತ್ತಿರುವುದು. ಸಮುದಾಯಗಳ ಹಾಡಿಯಲ್ಲಿ ಶಿಕ್ಷಿತ ಮಹಿಳೆಯರನ್ನು ಗುರುತಿಸಿ, ಅವರ ಮೂಲಕ ಹಾಡಿಯಲ್ಲಿ ವಯಸ್ಕರ ಶಿಕ್ಷಣದ ಮಹತ್ವವನ್ನು

ಪಸರಿಸುವಲ್ಲಿ ಮತ್ತು ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವಲ್ಲಿ ಅವರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. ರಾಜ್ಯದ ಪ್ರಥಮ ಮೂಲನಿವಾಸಿ ಮಹಿಳಾ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷೆಯಾದ ಜಾಜಿತಿಮ್ಮಯ್ಯ ಹೇಳುವಂತೆ ನಾನು ಮದುವೆಯಾದಾಗ ೧೨ ವರ್ಷ, ಓದಿದ್ದು ಕೇವಲ ೩ನೇ ತರಗತಿ ಮಾತ್ರ, ಆಗ ಎಲ್ಲಾ ಮರೆತು ಹೋಗಿತ್ತು ಒದಿದ್ದು. ಡೀಡ್ ಸಂಸ್ಥೆ ಸಂಪರ್ಕಕ್ಕೆ ಬಂದ ನಂತರ ಓದಿದೆ. ಮದುವೆಯಾದ ನಂತರ ಎರಡು ಮಕ್ಕಳ ನಡುವೆ ೮ನೇ ತರಗತಿ ಪಾಸು ಮಾಡಿದ್ದಾಗಿ ತಿಳಿಸುತ್ತಾರೆ."[೧೦] ಸಮುದಾಯದ ಜನರಿಗೆ ಶಿಕ್ಷಣದ ಮೂಲಕ ಬೆಳಕು ನೀಡುತ್ತಿರುವುದು ಒಂದು ಕಾರ್ಯಕ್ರಮವಾಗಿದೆ.

ಉಳಿತಾಯಕ್ಕೆ ಉತ್ತೇಜನ: ಕುಟುಂಬದ ಸದಸ್ಯರು ಕೂಲಿ ಮತ್ತು ವಿವಿಧ ವೃತ್ತಿಗಳಿಂದ ಗಳಿಸುವ ಆದಾಯವನ್ನು ಉಳಿತಾಯ ಮಾಡುವಂತೆ ಸಂಘಟಿಸುತ್ತಿದ್ದಾರೆ. ಪ್ರತಿಯೊಬ್ಬ ಸದಸ್ಯರು ಡೀಡ್ ಸಂಸ್ಥೆಯ ಉಳಿತಾಯ ಯೋಜನೆಯ ಸದಸ್ಯತ್ವ ಪಡೆದು ಹಣವನ್ನು ಕೂಡಿಸುವ ಮೂಲಕ ಮುಂದಿನ ಕಷ್ಟದ ಸಂದರ್ಭದಲ್ಲಿ ಸಾಲ ಪಡೆಯಲು ಸಹಾಯ ಮಾಡಲಾಗುತ್ತಿದೆ. ಸಣ್ಣ ಹಣವನ್ನು ದೊಡ್ಡ ಮೊತ್ತದ ಹಣವಾಗಿ ಮಾಡಲು ಪ್ರತಿಯೊಂದು ಕಾಲೋನಿಯಲ್ಲಿ ಸಂಘಟಿಸಲಾಗಿದೆ. ಸದಸ್ಯರು ಗುಂಪಿನ ಅವಶ್ಯಕತೆಗೆ ತಕ್ಕಂತೆ ಸಾಲ ಪಡೆಯುವ ಸೌಲಭ್ಯ ಒದಗಿಸಲಾಗಿದೆ. ಈ ಗುಂಪಿನ ಸದಸ್ಯರು ತಮ್ಮ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಪುನರುಜ್ಜೀವನ ಗೊಳಿಸುವಂತ ಹಬ್ಬ, ಜಾತ್ರೆ, ಆಚರಣೆ, ಸಂಪ್ರದಾಯಗಳಿಗೆ ಪೂರಕವೆಂಬಂತೆ ಬಳಸಲು ಸಂಸ್ಥೆ ಆಸಕ್ತಿ ವಹಿಸಿದೆ ಎನ್ನುತ್ತಾರೆ.[೧೧]

ಈ ಜನರು ಬಡತನದ ಕಪಿಮುಷ್ಟಿಯಿಂದ ಹೊರಬರಲು ದುಶ್ಚಟಗಳಿಗೆ ಕಡಿವಾಣ ಹಾಕಲು ಆರ್ಥಿಕ ಚಟುವಟಿಕೆಗೆ ಪೂರಕವಾಗಲು ಉಳಿತಾಯ ಮಾಡಬೇಕೆಂಬ ಮನೋಬಾವನೆಯನ್ನು ಬೆಳೆಸುತ್ತಿದ್ದಾರೆ. ಪ್ರತಿಸದಸ್ಯನು/ಳು ಎಷ್ಟು ಮೊತ್ತವನ್ನು ಉಳಿತಾಯ ಮಾಡಬಹುದು ಎಂಬುದನ್ನು ಕಾಲೋನಿಯ ನಾಯಕನಿಗೆ ವಹಿಸಲಾಗಿದೆ. ಪ್ರತಿಯೊಂದು ಕಾಲೋನಿಯಲ್ಲಿ ಸಂಘಟನೆ ಒಂದೇ ತೆರನಾಗಿ ಕಾರ್ಯನಿರ್ವಹಿಸದಿದ್ದರೂ ಕೆಲವು ಕಾಲೋನಿಗಳಲ್ಲಿ ಹಣಕಾಸಿನ ಸಹಾಯ ಮಾಡುತ್ತಿದ್ದಾರೆ.

ಕೃಷಿ ಮತ್ತು ಇತರೆ ಚಟುವಟಿಕೆಗಳು: ಕೃಷಿ ಚಟುವಟಿಕೆಯ ಕಾರ್ಯಕ್ರಮಗಳು ಕಾಲೋನಿಗಳಲ್ಲಿ ಜನರ ಸಹಕಾರದೊಂದಿಗೆ ಪರಿಣಾಮಕಾರಿಯಾಗಿ ಜಾರಿಗೆ ತರಬಹುದು. ಕೃಷಿ ವಿಸ್ತರಣಾ ಕಾರ್ಯಕ್ರಮವನ್ನು ಸಂಸ್ಥೆಯು ವಹಿಸಿಕೊಂಡಿದೆ. ಭೂಮಿ ಲಭ್ಯವಿರುವ ಕಡೆ ನಿರ್ದಿಷ್ಟ ಮೊತ್ತದ ಠೇವಣಿ ಹಣಪಡೆದು ಭೂಮಿಯನ್ನು ಸಮುದಾಯದ ಕುಟುಂಬಗಳಿಗೆ ಹಂಚಲಾಗಿದೆ. ಈ ಠೇವಣಿಯ ಉದ್ದೇಶ ಜನರು ಸ್ವಯಂ ಭಾಗಿಯಾಗಬೇಕು ಎನ್ನುವುದು, ಅಲ್ಲದೆ ಭೂಮಿಯನ್ನು ಪರಬಾರೆ ಮಾಡದಿರುವ ಮುಂಜಾಗ್ರತಾ ಕ್ರಮ ಎನ್ನುತ್ತಾರೆ. ಭೂಮಿ ಪಡೆದ ಪ್ರತಿ ಕುಟುಂಬವು ಸಹ ಪ್ರತಿ ವರ್ಷ ೧೦೦೦ರೂ. ಸಂಸ್ಥೆಗೆ ನೀಡುತ್ತಾ ಬರಬೇಕು.

ಸಂಸ್ಥೆ ನೀಡಿರುವ ಭೂಮಿಯ ವಿಸ್ತೀರ್ಣ ೧ ಎಕರೆಯಾಗಿದೆ. ಒಂದೊಂದು ಕಾಲೋನಿಗೆ ೫ ರಿಂದ ೧೦ ಕುಟುಂಬಗಳು ಸೌಲಭ್ಯಪಡೆದಿವೆ. ಉಳಿದಂತೆ ಎಲ್ಲಾ ಕಾಲೋನಿಗಳಲ್ಲಿ ಡೀಡ್‌ನ ಸಂಘಟನೆ ಕಂಡುಬರುವುದಿಲ್ಲ.

ಸ್ತ್ರೀ ಶಕ್ತಿ ಯೋಜನೆ: ಈ ಯೋಜನೆಯು ೨೦೦೦-೦೧ನೇ ಸಾಲಿನಲ್ಲಿ ರಾಜ್ಯಸರ್ಕಾರವು ಬಡಕುಟುಂಬಗಳ ಮಹಿಳೆಯರ ಆರ್ಥಿಕ ವಿಕಾಸದ ಸಾಧನೆಗಾಗಿ ಸಮುದಾಯಗಳ ಕಾಲೋನಿಗಳಲ್ಲಿ ಜಾರಿಗೆ ತಂದಿದೆ. ಯೋಜನೆಯ ಉದ್ದೇಶದಿಂದ ಜೇನುಕುರುಬರ ಕಾಲೋನಿಗಳಲ್ಲಿ ಮಹಿಳೆಯರನ್ನು ಸಂಘಟಿಸಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಸಂಘಟನಾತ್ಮಕ ರೂಪನೀಡಲಾಗಿದೆ. ಪ್ರತಿ ಸದಸ್ಯನ ಗುಂಪಿಗೆ ಸಂಸ್ಥೆಯು ೫೦೦೦ ರೂ.ಗಳ ಆವರ್ತ ನೀಡಿ ಆ ಮೂಲಕ ಸ್ತ್ರೀಶಕ್ತಿಯನ್ನು ಬಲಗೊಳಿಸಲಾಗುತ್ತಿದೆ. ಅಲ್ಲದೆ ಮಹಿಳೆಯರನ್ನು ಸಸಿ ನೆಡುವಂತ ಅರಣ್ಯೀಕರಣದಂತಹ ಯೋಜನೆಯ ಕಾರ್ಯನಿರ್ವಹಣೆಯಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಸಾರಾಂಶ: ಡೀಡ್ ಸಂಸ್ಥೆಯು ಎಷ್ಟೇ ಕಾರ್ಯಚಟುವಟಿಕೆಗಳನ್ನು ಜೇನುಕುರುಬರ ಸಲುವಾಗಿ ಹಮ್ಮಿಕೊಂಡಿದ್ದರೂ, ಸಂಪೂರ್ಣ ಎಲ್ಲಾ ಕಾಲೋನಿಗಳಲ್ಲಿ ಕಾರ್ಯಚಟುವಟಿಕೆ ನಿರ್ವಹಿಸುತ್ತಿಲ್ಲ. ಒಂದೊಂದು ಕಾಲೋನಿಯಲ್ಲಿ ಸಂಸ್ಥೆಗೆ ಯಾರು ಹೊಂದಿಕೊಂಡು ಹೋಗುತ್ತಾರೋ ಅವರಿಗೆ ಮಾತ್ರ ಪ್ರಾಮುಖ್ಯತೆ ನೀಡಿದೆ. ಒಂದೇ ಸಮುದಾಯದ ಕಾಲೋನಿಗಳಲ್ಲಿ ಅನೇಕ ಸಂಸ್ಥೆಗಳು ಕಾರ್ಯನಿರತವಾಗಿವೆ. (ಉದಾ: ಪರಿವರ್ತನೆ, ಲಿಫ್ಟ್, ಲ್ಯಾಂಪ್ಸ್, ಮೈರಾಡ, ಮುಂತಾದವುಗಳು) ಯಾರು ಬೇರೆ ಸಂಘಟನೆಯೊಂದಿಗೆ ಗುರುತಿಸಿ ಕೊಳ್ಳುತ್ತಾರೋ ಅಂತವರಿಗೆ ಡೀಡ್ ಯಾವುದೇ ಸಹಾಯ ಮಾಡುತ್ತಿಲ್ಲ. ಒಂದು ರೀತಿಯಲ್ಲಿ ತನ್ನ ಅನುಯಾಯಿಗಳಂತೆ ಬೆಳೆಸುತ್ತಿರುವುದು ಕಂಡು ಬರುತ್ತದೆ. ಒಟ್ಟಾರೆ ಜನಸಮೂಹ, ಸದಸ್ಯರ ಪ್ರಾಮಾಣಿಕ ಧ್ಯೇಯೊದ್ದೇಶಗಳನ್ನು ಹೊಂದಿರಬೇಕಾಗಿರುವುದು ಅವಶ್ಯಕವಾಗಿದೆ.

ದುಡೀ ಸಂಸ್ಥೆ:

ಗ್ರಾಮ ಪುನರ್‌ನಿರ್ಮಾಣಕ್ಕಾಗಿ ದುಡೀ ಎಂಬ ಸಂಸ್ಥೆಯನ್ನು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪ್ರಾರಂಭಿಸಲಾಗಿದೆ. ೧೯೮೫ರಲ್ಲಿ ಬುಡಕಟ್ಟು ಸಮುದಾಯಗಳ ಉಪಗ್ರಾಮ ಗಳಲ್ಲಿ ಅಸ್ತಿತ್ವ ಸ್ಥಾಪಿಸಿಕೊಂಡು ಈ ಕೆಳಕಂಡ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿದ್ದುದು ಅವರ ವರದಿಯಿಂದ ತಿಳಿದುಬರುತ್ತದೆ.

ಶಿಕ್ಷಣ: ಸಮುದಾಯಗಳ ಕಾಲೋನಿಗಳಲ್ಲಿ ಮಕ್ಕಳಿಗಾಗಿ ಶಾಲೆಗಳನ್ನು ಸ್ಥಾಪಿಸಿ ಅವರುಗಳಿಗೆ ಒಳ್ಳೆಯ ಶಿಕ್ಷಣವನ್ನು ನೀಡುವ ಉದ್ದೇಶದೊಂದಿಗೆ ಆರಂಭಗೊಂಡಿದೆ. ಸಮುದಾಯಗಳ ಸಾಂಸ್ಕೃತಿಕ ಮೌಲ್ಯಗಳೊಂದಿಗೆ ಕಾಲೋನಿಗಳಲ್ಲಿ ಚಿಕ್ಕ ಚಿಕ್ಕ ಮಕ್ಕಳಿಗಾಗಿ ಶಿಶುಕೇಂದ್ರಗಳನ್ನು

ತೆರೆಯಲಾಗಿದೆ. ಆದರೆ ಮಕ್ಕಳ ಸಂಖ್ಯೆಮಾತ್ರ ಬೆರಳೆಣಿಕೆಯಷ್ಟು ಮಾತ್ರ. ಸಾಮೂಹಿಕ ಅಕ್ಷರಕ್ರಾಂತೀಯ ಅಂಗವಾಗಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಡಿಯಲ್ಲಿ ಚಿತ್ರ ಪ್ರದರ್ಶನ ಹಾಗೂ ಶಿಕ್ಷಣದ ಬಗೆಗಿರುವ ಪ್ರಕಟಿತ ಸಾಹಿತ್ಯ ಸಾಮಾಗ್ರಿಗಳನ್ನು ಸ್ವಯಂ ಸೇವಕರು ಕಾಲೋನಿಗಳಿಗೆ ಹೋಗಿ ವಿತರಿಸುವ ವ್ಯವಸ್ಥೆ ಮಾಡಲಾಗಿದೆ.

ಭೂಹಿಡುವಳಿ: ಸಂಸ್ಥೆಯವರು ಸುತ್ತಮುತ್ತಲಿನ ಸರಕಾರಿ ಭೂಮಿಯನ್ನು ದಾಖಲೆಗಳಲ್ಲಿ ಪರಿಶೀಲಿಸಿ ಸಂಘಟನಾತ್ಮಕ ಹೋರಾಟದ ಮೂಲಕ ಲಭ್ಯವಿರುವ ಕಡೆಗಳಲ್ಲಿ ಪ್ರತಿಕುಟುಂಬಕ್ಕೆ ೩ ಎಕರೆ ಜಮೀನು ಕೊಡಲು ಹೋರಾಡಿದರೆಂದು ತಿಳಿಸುತ್ತಾರೆ. ೨೫ ಕುಟುಂಬಗಳಿಗಾಗಿ ೭೦ ಎಕರೆ ಭೂಮಿ ಕೊಡಿಸುವ ಹೋರಾಟದಲ್ಲಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ನಡುವೆ ತಿಕ್ಕಾಟ ನಡೆದು ಕೊನೆಗೆ ಡೆಪ್ಯೂಟಿ ಕಮಿಷನರ್‌ರವರು ಗೋಮಾಳದ ಭೂಮಿಯನ್ನು ಕಾಲೋನಿಯ ಕುಟುಂಬಗಳಿಗೆ ವಿತರಿಸಿದ್ದಾರೆ. ಸಂಸ್ಥೆಯು ಚಿಕ್ಕ ಎಲ್‌ಚಟ್ಟಿ, ದೇಶಿಪುರ, ಲಕ್ಷ್ಮೀಪುರ, ಮುಕ್ತಿಕಾಲೋನಿಗಳ ಕುಟುಂಬಗಳಿಗೆ ಸಂಘಟನಾತ್ಮಕವಾಗಿ ಬೋರ್‌ವೆಲ್ ತೆಗೆಯುವಲ್ಲಿ ಸಹಾಯಮಾಡಿದೆ. ವಿಶೇಷ ಅಭಿವೃದ್ಧಿಯಲ್ಲಿ ಲಭ್ಯವಿರುವ ಯೋಜನೆಗಳ ಸದುಪಯೋಗಕ್ಕೆ ಹೋರಾಡುತ್ತಿರುವುದಾಗಿ ಹೇಳುತ್ತಾರೆ. ಸಂಘವು ಇದಲ್ಲದೆ ಇನ್ನೂ ಅನೇಕ ಗ್ರಾಮಗಳಲ್ಲಿ ಸಮುದಾಯಗಳಿಗೆ ಭೂಮಿ ದೊರಕಿಸಿಕೊಡಲು ಹೋರಾಟ ನಡೆಸುತ್ತಲಿದೆ.

ಸಂಘಗಳು : ಒಟ್ಟಾರೆ ೨೫ ಜೇನುಕುರುಬರ ಕಾಲೋನಿಗಳಲ್ಲಿ ೨೧ರಲ್ಲಿ ಸಂಘಗಳ ಘಟಕಗಳನ್ನು ತೆರೆಯಲಾಗಿದೆ. ೮ ಕೇಂದ್ರಗಳಲ್ಲಿ ಮಹಿಳೆಯರು ಕೆಲಸ ನಿರ್ವಹಿಸುತ್ತಿದ್ದಾರೆ. ಜೇನುಕುರುಬರ ಮಹಿಳೆ ಹೇಳುವಂತೆ "ನಾನು ದಿನಾಲೂ ನಮ್ಮ ಕಾಲೋನಿಯ ಮಕ್ಕಳನ್ನು ಅಂಗನವಾಡಿ ಶಾಲೆ ಕರೆದ್ಯೊಯ ಬೇಕು ಸಾರ್, ನಂತರ ಮಧ್ಯಾಹ್ನ ನಮ್ಮ ಸಂಘದವರು ಬಂದು ನಮ್ಮ ಸಮುದಾಯದ ಜನರೊಂದಿಗೆ ವೈಯಕ್ತಿಕ ಸಮಸ್ಯೆಗಳನ್ನು ಬರೆದುಕೊಂಡು ವಾರದಲ್ಲಿ ಒಂದು ದಿನ ಸಮಸ್ಯೆ ಪರಿಹಾರಕ್ಕಾಗಿ ನಾವೆಲ್ಲರೂ ಸೇರಿ ಕೆಲಸ ಮಾಡುತ್ತೇವೆ ಸಾರ್, ನಮ್ಮಲ್ಲಿ ಅಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿ ಯನ್ನು ನೇಮಕ ಮಾಡಿಕೊಂಡಿದ್ದೇವೆ."[೧೨] ಸರ್ಕಾರದ ನೆರವು ಪಡೆಯುವಲ್ಲಿ ನಾವೆಲ್ಲರೂ ಒಗ್ಗೂಡಿ ಹೋರಾಟ ಮಾಡುವಂತಾಗಿದ್ದೇವೆ ಎನ್ನುವವರು.

ಸಮುದಾಯದ ಕೇಂದ್ರ: ಸಮುದಾಯದ ಜನರಲ್ಲಿ ತಮ್ಮ ಅಭಿವೃದ್ದಿಗಾಗಿ ಸಾಮೂಹಿಕ ಸಂಘಟಿತ ವ್ಯವಸ್ಥೆಗಾಗಿ ಜಾಥಾ, ಗುಂಪು ಮೆರವಣಿಗೆ ನಾಯಕತ್ವದ ಕ್ಯಾಂಪ್‌ಗಳು ನಿಯಮಿತ ವೃತ್ತ ಹಾಗೂ ಉಪಗ್ರಾಮದ ಸಭೆಗಳು, ಬೀದಿ ನಾಟಕ, ಗೊಂಬೆಪ್ರದರ್ಶನದ ಕೆಲಸ ಮಾಡುತ್ತಿದೆ. ಅಲ್ಲದೆ ಗಿರಿಜನ ಶ್ರೇಯೋಭಿವೃದ್ಧಿ ಸಂಘ ಎಂದು ಕಾಲೋನಿಗಳಲ್ಲಿ ಪ್ರಾರಂಭಿಸಿ ಆ ಮೂಲಕ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ.

ಆರೋಗ್ಯ ಮತ್ತು ಸಂಚಾರಿ ಆರೋಗ್ಯ ಸೇವೆ: ಆರೋಗ್ಯದ ಬಗ್ಗೆ ತಿಳುವಳಿಕೆ ಪ್ರತಿಯೊಬ್ಬರಿಗೂ ಅಗತ್ಯ. ಅರಣ್ಯದಿಂದ ಹೊರಹಾಕಲಾದ ನಂತರ ಇಂಗ್ಲೀಷ್ ಔಷಧಿಗಳ ಮೊರೆಹೋಗುವುದು ಅನಿವಾರ್ಯ. ಆದಕ್ಕಾಗಿ ಸಂಘವು ೯ ಆರೋಗ್ಯ ಕಾರ್ಯಕರ್ತರ ಪಡೆಯನ್ನು ಹೊಂದಿದೆ. ಸಮುದಾಯಗಳ ಕಾಲೋನಿಗಳಿಗೆ ಕಾರ್ಯಕರ್ತರು ತೆರಳಿ ಜನರಿಗೆ ಸಹಾಯ ಮಾಡುತ್ತಿದ್ದಾರೆ. ಈ ಆರೋಗ್ಯ ಕಾರ್ಯಕರ್ತರಿಗೆ ಆರೋಗ್ಯ ರಕ್ಷಣೆ ಹಾಗೂ ಚಿಕಿತ್ಸೆಯಲ್ಲಿ ತರಬೇತಿ ನೀಡಲಾಗಿದೆ. ಗರ್ಭಿಣಿಯರಿಗೆ ಅನುಕೂಲವಾಗುವಂತೆ ಮತ್ತು ಶಿಶುಗಳ ಆರೋಗ್ಯ ಪಾಲನೆಗಾಗಿ ಸಹಾಯ ಸಿಗಲು ಸಮುದಾಯದ ಜನರಲ್ಲಿಯ ಹಿರಿಯ ಮಹಿಳೆಯರಿಗೆ "ದಾದಿ" ತರಬೇತಿ ಕೊಡುವ ಕಾರ್ಯಕ್ರಮವನ್ನು ಕೂಡ ಅನುವುಗೊಳಿಸಿದೆ.

ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಆರೋಗ್ಯಸುಧಾರಣೆಗಾಗಿ ಜಿಲ್ಲಾ ಪಂಚಾಯಿತಿ ವತಿಯಿಂದ ಸಂಚಾರಿ ಆರೋಗ್ಯ ಸೇವೆಗಾಗಿ ಒಂದು ಅಂಬುಲೆನ್ಸ್ ವಾಹನ, ಔಷಧಿ ಮತ್ತು ಸಲಕರಣೆಗಳೊಡನೆ ಕೊಡಲಾಗಿದ್ದು ಸಮುದಾಯಗಳ ಕಾಲೋನಿಗಳಿಗೆ ಭೇಟಿಕೊಟ್ಟು ರೋಗಿಗಳಿಗೆ ಚಿಕಿತ್ಸೆ ಮಾಡಲಾಗುತ್ತಿದೆ. ಹೆಚ್ಚಿನ ಆರೋಗ್ಯ ತೊಂದರೆ ಕಂಡುಬಂದಲ್ಲಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ನೇರವಾಗಿ ಕರೆತಂದು ಚಿಕಿತ್ಸೆ ಕೂಡ ಕೊಡಲಾಗುತ್ತಿದೆ ಇದೊಂದು ಉಪಯುಕ್ತಕ್ರಮ.

ಸ್ವಉದ್ಯೋಗದ ಯೋಜನೆಯಡಿಯಲ್ಲಿ ಸಮುದಾಯಗಳ ಮಹಿಳೆಯರಿಗಾಗಿ ಅಗರಬತ್ತಿ ಮಾಡುವ ಘಟಕ ಪ್ರಾರಂಭಿಸಲಾಯಿತು. ಅದು ಕೆಲವು ವರ್ಷಗಳ ನಂತರ ಆರ್ಥಿಕ ಮುಗ್ಗಟ್ಟಿನಿಂದ ನಿಂತುಹೋಗಿದೆ. ಬಿದಿರಿನ ಸಲಕರಣೆ ಮಾಡಲು ಅದರಲ್ಲಿ ತರಬೇತಿಯನ್ನು ಕೊಡಲಾಯಿತು ನಂತರ ಬಿದಿರು ಸರಬರಾಜು ಇಲ್ಲದೆ ತರಬೇತಿ ಕಾರ್ಯಕ್ರಮವನ್ನು ನಿಲ್ಲಿಸಲಾಯಿತು. ಸಂಸ್ಥೆಯು ಅರಣ್ಯ ಇಲಾಖೆಯವರಿಗೆ ಈ ಬಗ್ಗೆ ಜೇನುಕುರುಬರ ಜೀವನೋಪಾಯದ ದೃಷ್ಟಿಯಿಂದ ಬೇಕಾಗುವ ಬಿದಿರು ಸರಬರಾಜು ಮಾಡಲು ಕೋರಿ ಕೊಳ್ಳಲಾಗಿದೆ. ಆದರೆ ಯಶಸ್ಸು ಮಾತ್ರ ದೊರೆತಿಲ್ಲ.

ಸಂಸ್ಥೆಯು ಕಾರ್ಯಪ್ರಗತಿ ನಿಶ್ಚಯವಾಗಿಯೂ ಸಮುದಾಯಗಳ ಆರ್ಥಿಕ–ಸಾಮಾಜಿಕ–ಸಾಂಸ್ಕೃತಿಕ ಪ್ರಗತಿಗೆ ಪೂರಕ ಶಕ್ತಿಯಾಗಬಲ್ಲದು ಎಂದರೆ ಅತಿಶಯೋಕ್ತಿಯೇನಲ್ಲ. ಸಂಸ್ಥೆಯಲ್ಲಿ ಬಾರೀ ರಾಜಕೀಯ ಇಚ್ಛಾಶಕ್ತಿಯ ಪ್ರತಿನಿಧಿಗಳಿಲ್ಲ. ಹೀಗಾಗಿ ಸಾಕಷ್ಟು ಕಲ್ಯಾಣಕಾರ್ಯಕ್ರಮಗಳಲ್ಲಿ ಸಮುದಾಯದ ಜನರೇ ಭಾಗಿಯಾಗಬೇಕು. ಒಂದು ರೀತಿಯ ಪ್ರಜಾಪ್ರಭುತ್ವದ ವ್ಯವಸ್ಥೆಯಂತೆ ಸಂಸ್ಥೆ ಕಂಡುಬರುತ್ತದೆ. ಹಿರಿಯರಾದ ಡಾ॥ ಸುದರ್ಶನ್‌ರವರ ಮಾರ್ಗದರ್ಶನದ ಮೂಲಕ ಸ್ವಲ್ಪ ಮಟ್ಟಿನ ಪ್ರಗತಿ ಸಾದಿಸಿದೆ. ಹಲವಾರು ಸಂದರ್ಭಗಳಲ್ಲಿ ಸರ್ಕಾರಿ ಅಧಿಕಾರಿಗಳು, ನೌಕರಶಾಹಿ ಜನರು ಸಂಸ್ಥೆಯ ಪದಾಧಿಕಾರಿಗಳನ್ನು ಕಡೆಗಣಿಸುತ್ತಿದ್ದಾಗಲೂ ಕಾರ್ಯಕರ್ತರಲ್ಲಿ ಹೋರಾಟದ ಉತ್ಸಾಹ ಕಾರ್ಯತತ್ಪರತೆ

ಕಂಡುಬರುತ್ತದೆ. ಇದು ಅಗತ್ಯ, ಅನಿವಾರ್ಯ ಹಾಗೂ ಸಮುದಾಯಗಳ ಅಭಿವೃದ್ಧಿ ಪಥದಲ್ಲಿ ತೋರುವ ದಿಕ್ಕು-ದಿಸೆಗಳ ಮಾರ್ಗಸೂಚಿಯಾಗಿದೆ.

ಸ್ಫೂರ್ತಿ ಮತ್ತು ಕೊರಗ ಸಮಾಜ ಶ್ರೇಯೋಭಿವೃದ್ಧಿ ಸಂಸ್ಥೆ:

ಸುಮಾರು ೧೫ ವರ್ಷಗಳ ಹಿಂದೆ ದ.ಕನ್ನಡ ಜಿಲ್ಲೆಯಾದ್ಯಂತ ಕೊರಗ ಸಮುದಾಯದಲ್ಲಿನ ಯುವಶಕ್ತಿ ಹೋರಾಟದ ನೇತೃತ್ವ ಆಯಾ ತಾಲ್ಲೂಕು ವ್ಯಾಪ್ತಿಯಲ್ಲಿ ಪ್ರಬಲವಾಗುತ್ತಾ ನಡೆಯುತ್ತಿದ್ದಂತೆ; ಈ ಯುವ ಜನರ ಮನದಾಳದಲ್ಲಿ ಸಮುದಾಯದ ಅಭಿವೃದ್ಧಿ ಶಿಕ್ಷಣದಿಂದ ಸಾಧ್ಯಎನ್ನುವುದನ್ನು ಸ್ವತಃ ಡಾ॥ ಬಿ.ಆರ್. ಅಂಬೇಡ್ಕರ್ ಯುವಕರ ಸಂಘದ ಕಾರ್ಯವೈಖರಿಯನ್ನು ಗಮನಿಸಿ, ಕೊರಗ ಯುವಕರು ಸಂಘಟಿತ ಸಂಸ್ಥೆ ಸ್ಥಾಪಿಸಿದರು ಅದುವೇ "ಸ್ಫೂರ್ತಿ".

ಕುಂದಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಹೆಚ್ಚು ಕೊರಗರ ಕುಟುಂಬಗಳು ಅಲ್ಲಲ್ಲಿ ಕೆಲವೇ ಕುಟುಂಬಗಳು ನೆಲೆಗೊಂಡವುಗಳಾಗಿವೆ. ಅಂತಹ ಕುಟುಂಬಗಳಿಗೆ ಸೌಲಭ್ಯಗಳು ದೊರೆಕುವುದು ಕಷ್ಟ. ಇದನ್ನೆಲ್ಲ ಗಮನಿಸಿ ಕೆಲವು ಯುವಕರು ಮೂಲೆ ಮೂಲೆಯಲ್ಲಿದ್ದ ಕೊರಗರನ್ನು ಸಂಘಟಿಸ ತೊಡಗಿದ್ದಾರೆ. ಹೊರಗಿನ ವ್ಯಕ್ತಿಯಾದ ಕೇಶವ ಎಂಬೊಬ್ಬ ಯುವಕ ಕೂಡಿಕೊಂಡು ೭ ಜನರ ಸದಸ್ಯತ್ವದ ಸ್ಫೂರ್ತಿ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ. ಇವರ ಆರ್ಥಿಕ ನೆರವಿಗೆ ಅನೇಕ ಸಂಸ್ಥೆಗಳು ಉದಾರ ಕೊಡುಗೆ ನೀಡಿದ್ದರ ಫಲ ಇಂದು ಸ್ಫೂರ್ತಿ ಒಂದು ಉತ್ತಮ ಸಂಸ್ಥೆಯಾಗಿ ಬೆಳೆದು ಬಂದತ್ತಿದೆ. ಆರಂಭದಲ್ಲಿ ಸಂಸ್ಥೆ ಸಮುದಾಯದ ಕಾಲೋನಿಗಳಲ್ಲಿ ಶಿಕ್ಷಣಕ್ಕೆ ಒತ್ತು ನೀಡಿ ಹಂತ ಹಂತವಾಗಿ ಮಕ್ಕಳು ಶಾಲೆಗೆ ಬರುವಂತೆ ಮಾಡುವಲ್ಲಿ ಅನೇಕ ಏಳು ಬೀಳು ಕಂಡು ಪ್ರಸ್ತುತ ೧೨೫ ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿದ್ದಾರೆ.

"ಸ್ಫೂರ್ತಿ ಕೊರಗ ಬ್ಹಾಲಕ ಮತ್ತು ಬಾಲಕಿಯರ ಅನುದಾನಿತ ವಸತಿ ನಿಲಯ" ಎಂಬ ಶಾಲೆಯು ಸುಮಾರು ೮೪೦ ವಿದ್ಯಾರ್ಥಿಗಳಿಗೆ ಕಲಿಯುವ ಅವಕಾಶ ನೀಡಿದ ಸಂಸ್ಥೆ ಎಂಬ ಅಂಕಿ ಅಂಶಗಳು ಶಾಲೆಯ ದಾಖಲೆಯಲ್ಲಿದೆ. ಸ್ಫೂರ್ತಿ ಸಂಸ್ಥೆಯ ಮುಖ್ಯಸ್ಥ ಕೇಶವರವರು ಹೇಳುವಂತೆ "ಸಂಸ್ಥೆ ಕಾರ್ಯಚರಣೆ ಮಾಡುವ ಸಂದರ್ಭದಲ್ಲಿ ಶೇ. ೫% ಇದ್ದ ಶೈಕ್ಷಣಿಕ ಪ್ರಗತಿ ಇಂದು ಅದು ಶೇ. ೪೫% ರ ಎತ್ತರಕ್ಕೆ ಬೆಳೆದು ನಿಂತಿದೆ ಎನ್ನುತ್ತಾರೆ.

ಸ್ಫೂರ್ತಿ ಸಂಸ್ಥೆಯು ೧೯೯೨ ರಿಂದ ೨೦೦೫ ರವರೆಗೆ ಸಾಧಿಸಿದ್ದು ಅಲ್ಪವೇನಲ್ಲ. ಹಂಚಿಹೋಗಿದ್ದ ಅಲ್ಲಲ್ಲಿ ಬೆಟ್ಟಗುಡ್ಡಗಳಲ್ಲಿದ್ದ ಕೊರಗರನ್ನೆಲ್ಲಾಸೇರಿಸಿ ಡಾ॥ ಪೀರ್‌ರವರ ಭೂ ಹೋರಾಟಕ್ಕೆ ಸಿದ್ಧರಾಗುವಂತೆ ಮಾಡಿದ್ದರ ಪರಿಣಾಮ ಸುಮಾರು ೧ ಕೋಟಿ ರೂಪಾಯಿಯ ಪುನರ್‌ವಸತಿ ಯೋಜನೆಯ ಭಾಗ್ಯ ಕುಂದಾಪುರ ತಾಲೂಕಿಗೆ ಲಭಿಸಿದೆ. ಸರ್ಕಾರಿ ಕಛೇರಿಗಳಲ್ಲಿರುವ ದಾಖಲೆಯಿಂದ ಭೂಮಿ ಶೋಧಿಸಿ, ನೂರಾರು ಎಕರೆ ಜಮೀನು ಅನೇಕ

ಕುಟುಂಬಗಳಿಗೆ ಕೊಡಿಸುವಲ್ಲಿ ಯಶಸ್ವಿಯಾಗಿದೆ. ಆದರೂ ಭೂ ಹಂಚಿಕೆಯ ಕಾರ್ಯ ಮಾತ್ರ ವಿಳಂಬವಾಗಿ ನಡೆಯುತ್ತಲೇ ಇದೆ. ಎನ್ನುತ್ತಾರೆ.

ಇನ್ನೊಂದು ಮಹತ್ವದ ಹೆಜ್ಜೆ ಸ್ಫೂರ್ತಿ ಎಂದರೆ, ಆ ಸಮುದಾಯದಲ್ಲಿಯೇ ನಾಯಕರು ಸಂಘಟಿತರಾಗಿ ತಾವೇ ಹೋರಾಡುವಂತೆ ಮಾಡುವುದು. ಸ್ಫೂರ್ತಿ ಸಂಘಟನೆಯ ಅರ್ಥ . ಶಿಕ್ಷಣದ ಉತ್ತಮ ಕೊಡುಗೆ ಬದುಕನ್ನು ಬದಲಾಯಿಸಬಹುದೆಂದು ಕಾಲೋನಿಗಳಿಗೆ ಸಂಘಟಕರು ತೆರಳಿ ಕೊರಗ ಮಕ್ಕಳಿಗೆ ಕಾಲೋನಿಯಲ್ಲಿಯೇ ಪಾಠ, ಪ್ರವಚನ ನೀಡತೊಡಗಿದ್ದು, ಮಕ್ಕಳ ಆರೋಗ್ಯವನ್ನು ಗಮನಿಸಿ ಕ್ಯಾಂಪ್‌ಗಳನ್ನು ಕಾಲೋನಿಗಳಲ್ಲಿ ನಡೆಸಲಾಗುತ್ತಿದೆ. ಇದರಿಂದ ಪ್ರತಿಕಾಲೋನಿಯ ಮಕ್ಕಳನ್ನು ಸಮೀಕ್ಷೆ ಮಾಡುವಂತಾಗಿದೆ. ಬಹುತೇಕ ಸರ್ಕಾರದ ಅಂಕಿ, ಅಂಶಗಳು ಕೊರಗ ಮಕ್ಕಳಲ್ಲಿ ಶಾಲೆಯಿಂದ ಹೊರ ಉಳಿದವರೂ ಇಲ್ಲವೆಂದು ಅಧಿಕೃತ ದಾಖಲೆ ತಾಲ್ಲೂಕಿನ ಅಧಿಕಾರಿಗಳು ತಿಳಿಯಪಡಿಸಿದರೆ, ಸ್ಫೂರ್ತಿ ಸಂಸ್ಥೆ ಸಂಶೋಧಕರನ್ನು ಕಾಲೋನಿಗೆ ಕರೆದು ಹೋಗಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪರಿಚಯಿಸಲಾಯಿತ್ತು. ಮಕ್ಕಳನ್ನು ಪ್ರಶ್ನಿಸಿದಲ್ಲಿ ತುಳು ಭಾಷೆಯಲ್ಲಿಯೇ ಉತ್ತರಿಸುತ್ತಾರೆ. ಶಾಲೆಯಲ್ಲಿ ಶಿಕ್ಷಕರಿಲ್ಲದಿರುವುದು ಮತ್ತು ಪೌಷ್ಠಿಕ ಆಹಾರ ಶಾಲೆಯಲ್ಲಿ ವಿತರಿಸಲಾಗದಿರುವುದು ದೊಡ್ಡ ಸಮಸ್ಯೆಯಾಗಿ ಮಕ್ಕಳು ನುಡಿಯುತ್ತಾರೆ. ಈ ನಿಟ್ಟಿನಲ್ಲಿ ಶಾಲೆಗಳನ್ನು ಗಮನಿಸಿದಾಗ ಶಾಲೆಗಳಲ್ಲಿ ಶಿಕ್ಷಕರು ಹಾಗೂ ಅಡುಗೆ ಸಹಾಯಕರು ಕಂಡುಬರುವುದಿಲ್ಲ. ಇದೊಂದು ದೊಡ್ಡ ಸಮಸ್ಯೆ ಎನ್ನಬಹುದು. ಪ್ರಾಥಮಿಕ, ಪ್ರೌಢಶಾಲೆಯ ಶಿಕ್ಷಣಕ್ಕೆ ಕೋಟ್ಯಾಂತರ ರೂ.ಗಳನ್ನು ವ್ಯಯ ಮಾಡುತ್ತಿದ್ದರೂ, ನಿಜವಾಗಿಯೂ ಶೋಷಿತ ಸಮುದಾಯಕ್ಕೆ ತಲುಪುತ್ತಿರುವುದು ತೀರಾ ಕಡಿಮೆ ಎಂದರೆ ಅತಿಶಯೋಕ್ತಿಯೇನಲ್ಲ.

ಸ್ಫೂರ್ತಿ ಇದನ್ನ ಅರಿತುಕೊಂಡು ಕಾಲೋನಿಗಳಲ್ಲಿ ಕೊರಗ ಸಮುದಾಯದ ಹಿರಿಯರ ಮನವೊಲಿಸಿ ಮಕ್ಕಳನ್ನು ಆಶ್ರಮಶಾಲೆಗೆ ಕರೆತಂದು ಶಿಕ್ಷಣ ನೀಡಲಾಗುತ್ತಿದೆ. ಶಿಕ್ಷಣಕ್ರಮವು ಸಹ ಮಕ್ಕಳ ಸುಂದರ ಮನಸ್ಸು ಅರಳುವಂತ ಪರಿಸರ, ಶಿಕ್ಷಕರು, ಹಾಗೂ ಬೋಧನಾ ವಿಧಾನ ರೂಢಿಸಿಕೊಂಡಿರುವುದರಿಂದ ಇತರೆಲ್ಲಾ ಸರ್ಕಾರದ ಆಶ್ರಮ ಶಾಲೆಗಳಿಗಿಂತ ಭಿನ್ನವಾಗಿದೆ. ಕೊರಗ ಸಮುದಾಯದ ಮಕ್ಕಳ ಕಲಿಕೆಯ ಸನ್ನಿವೇಶ ಮತ್ತು ಪರಿಸರವನ್ನ ತಂದೆ, ತಾಯಿಗಳು ನೋಡಿದ ಮೇಲೆ ಅವರ ಮಕ್ಕಳ ಬಗೆಗಿನ ಮಾತುಗಳೇ ಬದಲಾವಣೆಗೊಂಡಿವೆ. ಇಂತಹ ಕಾರ್ಯಕ್ರಮಕ್ಕೆ ನೆರವಿನ ಹಸ್ತ ನೀಡಿರುವುದರಲ್ಲಿ ಶ್ರೀಕ್ಷೇತ್ರಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀಯುತ ಡಾ॥ ವೀರೇಂದ್ರಹೆಗ್ಗಡೆಯವರ ಪ್ರೇರಕಮಂತ್ರ ಪ್ರಧಾನವಾಗಿದೆ.

ಕೊರಗ ಸಮುದಾಯದಲ್ಲಿಯೇ ವಿಧ್ಯಾವಂತ ಯುವ ಶಕ್ತಿ ಹೋರಾಟದ ನಾಯಕತ್ವವನ್ನ ಸಹ ವಹಿಸಿಕೊಂಡಿದ್ದಾರೆ. ಹೋರಾಟದ ಅಂಗವಾಗಿ ಕುಂದಾಪುರ ತಾಲ್ಲೂಕು ಕೊರಗ ಸಮಾಜ ಶ್ರೇಯೋಭಿವೃದ್ಧಿ ಸಂಘ ಮತ್ತು ಡಾ॥ ಅಂಬೇಡ್ಕರ್ ಪ್ರಗತಿಪರ ದಲಿತ

ವೇದಿಕೆ ಸಂಘಗಳು ಹುಟ್ಟಿಕೊಂಡಿವೆ. ಇತರ ಬುಡಕಟ್ಟುಗಳು ಹಾಗೂ ಇತರ ವರ್ಗದವರೂ ಅವರೊಂದಿಗೆ ಕೂಡಿಕೊಳ್ಳಲು ಹಿಂಜರಿದಿಲ್ಲ. ತಮ್ಮ ಮುಖ್ಯ ಸಮಸ್ಯೆಗಳಾದ ಭೂ ಹಿಡುವಳಿ, ಇತರ ಸ್ವಹಿತಾಸಕ್ತಿ ರೈತರುಗಳಿಂದ ಭೂಮಿಯನ್ನು ರಕ್ಷಿಸುವುದು. ವಸತಿ, ಶಿಕ್ಷಣ, ರಾತ್ರಿಶಾಲೆ, ಸ್ವಯಂ ಉದ್ಯೋಗ ಮುಂತಾದ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳು ಸಮುದಾಯಗಳಿಗೆ ತಲುಪಿಸುವ ನಿಟ್ಟಿನಲ್ಲಿ ಬರುವ ಸಮಸ್ಯೆಗಳನ್ನು ನೈತಿಕ ಬಲದಿಂದ ಹೋರಾಡಲು ಜನರು ಪ್ರಾರಂಭಿಸತೊಡಗಿರುವುದು ಕಂಡುಬರುತ್ತದೆ.

ಈ ಸಂಘಟನೆಯ ನೇತೃತ್ವವನ್ನ ಕೊರಗ ಸಮುದಾಯದ ಜನರಾದ ಶ್ರೀ ಗಣೇಶ್ ಕೊರಗ, ಶ್ರೀ ಶೇಖರ ಮರವಂತೆ, ಶ್ರೀ ಕಲ್ಯಾಣ ಬೈಂದೂರು ವಹಿಸಿದ್ದು ಇವರುಗಳ ಜೊತೆಯಲ್ಲಿ ಅಂಬೇಡ್ಕರ್ ಸಂಘದ ಅಧ್ಯಕ್ಷರಾದ ಶ್ರೀ ನಾಗರಾಜ ಜಾಡಮೂಲಿ, ವಿ. ಲಕ್ಷ್ಮಣ ಮತ್ತು ಸುಭಾಸ್ ಮಂಡೂರುರವರ ಸಂಘಟನೆಯು ಅಸ್ಥಿವಹಿಸಿ, ಅಭಿವೃದ್ಧಿ ಸಂಘ ಸ್ಥಾಪಿಸಿ ಜನರೇ ತಮ್ಮ ಕಲ್ಯಾಣ ಕಾರ್ಯಕ್ರಮಗಳ ಲಾಭ ಪಡೆಯಲು ಪ್ರಯತ್ನಿಸಲು ಈಗ ಸಾಧ್ಯವಾಗುವಂತೆ ಮಾಡಲಾಗಿದೆ.

ಸಂಘಟನೆಯು ವಿವಿಧ ತರಬೇತಿ, ಕೌಶಲ್ಯಗಳ ಕಲಿಕೆ, ಹಾಗೂ ವೃದ್ಧಾಪ್ಯ ಮತ್ತು ವಿಧವಾ ವೇತನ ಸೌಲಭ್ಯಗಳನ್ನು ಕೊಡಿಸುವಲ್ಲಿ ಮಂಚೂಣಿಯಲ್ಲಿದೆ. ಸಮುದಾಯದ ಕಾಲೋನಿಗಳಲ್ಲಿರುವ ವೃದ್ಧರು, ವಿಧವೆಯರನ್ನು ಗುರುತಿಸಿ, ಸಂಘಟನೆಯಿಂದ ಕಲ್ಯಾಣಾಧಿಕಾರಿಗಳನ್ನು ಭೇಟಿ ಮಾಡಿ ಸೌಲಭ್ಯಗಳ ಅವಕಾಶವಿರುವಲ್ಲಿ ಬಳಸಿಕೊಳ್ಳುವಂತೆ ಅತ್ಯಂತ ಸಮಯೋಚಿತ ಮಾರ್ಗದರ್ಶನವನ್ನು ಮಾಡಲಾಗುತ್ತಿದೆ. ವಿವಿಧ ತರಬೇತಿಗಳಾದ ಆಟೋರಿಕ್ಷಾ ತರಬೇತಿ, ಲಘುವಾಹನ ತರಬೇತಿ, ಭಾರೀವಾಹನ ಚಾಲನೆಯ ತರಬೇತಿ ಸ್ವಯಂ ಉದ್ಯೋಗಕ್ಕೆ ಅನುಕೂಲವಾಗುವಂತೆ ನೀಡಲಾಗುತ್ತಿದೆ.

ಮಹಿಳೆಯರಿಗೆ ಹೊಲಿಗೆ ಯಂತ್ರಗಳ ತರಬೇತಿ ಮತ್ತು ಮಲ್ಲಿಗೆ ಹೂಗಳ ಮಾರಾಟ, ಹೂಗಳ ಕಟ್ಟುವಿಕೆಯ ಕೌಶಲ್ಯದ ತರಬೇತಿಯ ಜೊತೆಗೆ ಅಭಿವೃದ್ಧಿ ನಿಗಮದ ವತಿಯಿಂದ ಸಾಲ ಸೌಲಭ್ಯ ನೆರವು ಒದಗಿಸುವಲ್ಲಿ ಯಶಸ್ವಿ ಹೋರಾಟ ನಡೆಸುತ್ತಿದೆ. ಗಣಕಯಂತ್ರದ ರಿಪೇರಿ ಹಾಗೂ ಕಲಿಕೆಯ ತರಬೇತಿಯು ಸಹ ಸಂಘಟನೆ ಹಮ್ಮಿಕೊಂಡಿದೆ. ಸಂಘಟನೆಯು ಇತ್ತೀಚಿನ ದಿನಗಳಲ್ಲಿ ಸರ್ಕಾರದ ದ್ವಿತೀಯ ದರ್ಜೆಸಹಾಯಕರ ಸ್ಪರ್ಧಾತ್ಮಕ ಪರೀಕ್ಷೆಗೆ ೩ ದಿನಗಳು ಉಚಿತ ತರಬೇತಿಯ ಶಿಬಿರವನ್ನು ಏರ್ಪಡಿಸಿತ್ತು. ಸುಮಾರು ೩೨ ವಿದ್ಯಾರ್ಥಿಗಳು ಭಾಗವಹಿಸಿ ಶಿಬಿರದ ಸದುಪಯೋಗಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ತರಬೇತಿಯ ಅವಧಿಯಲ್ಲಿ ಉಚಿತ ಊಟ, ವಸತಿ ಕಲ್ಪಿಸಲಾಗಿದ್ದು ಪ್ರಥಮವಾಗಿ ಸಂಬಂಧಿಸಿದ ಪ್ರೊಫೆಸರ್‌ಗಳು ಹಾಗೂ ಸರ್ಕಾರದ ಉನ್ನತ ಅಧಿಕಾರಿಗಳಾದ ಎಸ್. ಮುರುಗನ್, ಐ. ಪಿ. ಎಸ್. ಉಡುಪಿ ಜಿಲ್ಲೆ ಪೋಲಿಸ್ ಅಧೀಕ್ಷಕರು. ಕೆ. ಸುಂದರನಾಯ್ಕ ಐ.ಎಫ್.ಎಸ್. ಕುಲಸಚಿವರು ಮಂಗಳೂರು ವಿಶ್ವವಿದ್ಯಾಲಯ ಮತ್ತು ಪ್ರೊ. ವಿಶ್ವನಾಥ ನಿರ್ದೇಶಕರು ಡಾ॥

ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಮಂಗಳೂರುರವರು ಮಾರ್ಗದರ್ಶಕರಾಗಿ ತರಬೇತಿ ಶಿಬಿರವನ್ನು ಅತ್ಯಂತ ಹೆಚ್ಚಿನ ಸಫಲತೆಯ ದಿಕ್ಕಿನಲ್ಲಿ ನಡೆಸುವ ನಿಟ್ಟಿನಲ್ಲಿ ಭಾಗವಹಿಸಿ ಸ್ಫೂರ್ತಿ ನೀಡಿದ್ದಾರೆ . ಇಂತಹ ಸಂಘಟನಾತ್ಮಕ ಕಾರ್ಯಕ್ರಮಗಳು ತಾಲ್ಲೂಕಿನ ಮಟ್ಟಿಗೆ ಹೇಳಬೇಕಾದಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸು ಗಳಿಸಿದೆಯೆನ್ನಬಹುದು. ಇದು ತ್ವರಿತಗತಿಯಲ್ಲಿ ಮುಂದುವರೆಯುತ್ತಲೂ ಇದೆ.

ಜನಶಿಕ್ಷಣ ಟ್ರಸ್ಟ್:

ದಕ್ಷಿಣ ಕನ್ನಡ ಜಿಲ್ಲೆಯ ಕೊರಗರ ಉದ್ಧಾರಕ್ಕೆ ಟೊಂಕಕಟ್ಟಿ ನಿಂತ ಪ್ರಾಂಜಲ ಮನಸ್ಸಿನ ಇಬ್ಬರು ವ್ಯಕ್ತಿಗಳ ಸರಸ್ವತಿ ಸೇವೆ ನಿಜಕ್ಕೂ ಗಮನ ಸೆಳೆಯುವಂತಹುದು. ತೀರಾ ಹಿಂದುಳಿದ ಮಂದಿಯಲ್ಲಿ ಅಕ್ಷರ ಪ್ರೀತಿಯ ಜೊತೆಗೆ ಜೀವನ ಪ್ರೀತಿಯನ್ನು ತುಂಬುತ್ತಿರುವ ಸ್ನೇಹಿತರದ್ವಯರ ನಿಸ್ವಾರ್ಥ ಸೇವೆಯ ಸಂಸ್ಥೆಯೇ "ಜನಶಿಕ್ಷಣ ಟ್ರಸ್ಟ್" ಆಗಿದೆ. ೧೯೮೮ ರಲ್ಲಿ ದ.ಕನ್ನಡದ ಆಗಿನ ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಾಹಣಾಧಿಕಾರಿ ಎ.ಪಿ. ಬಳಿಗಾರ್ ಅವರ ಸಹಕಾರ ಸಿರಿಲ್ ಜೋಸೆಫ್ ಡಿಸಿಲ್ವರು ಉಚಿತ ಮನೆಯನ್ನು ನೀಡಿದ ಪ್ರಯತ್ನ ಜನಶಿಕ್ಷಣ ಟ್ರಸ್ಟ್ ಕಾರ್ಯಾಲಯ ಪ್ರಾರಂಭಗೊಂಡು ಬಂದಿದೆ.

ಬದುಕಿಗೆ ಪೂರಕವಾದ ಎಲ್ಲ ಕಲಿಕೆಯೂ ಶಿಕ್ಷಣವೇ ಅಂತ ಟ್ರಸ್ಟ್ ಭಾವಿಸುತ್ತಿದೆ. ಈ ಹಿನ್ನಲೆಯಲ್ಲಿ ಸಂಸ್ಥೆಯ ಶೈಕ್ಷಣಿಕ ಕಾರ್ಯಗಳು ಪಠ್ಯ ಪುಸ್ತಕಗಳಿಗಿಂತ, ಕೊಠಡಿ ಭೋದನೆಗಿಂತ ನೈಜ ಜೀವನದತ್ತ ಮುಖ ಮಾಡಿದೆ. ಕೊರಗ ಸಮುದಾಯವು ಅಲ್ಲಲ್ಲಿ ನೆಲೆಸಿರುವುದರಿಂದ ಎಲ್ಲಿ ಸಮುದಾಯವಿದೆಯೇ ಅಲ್ಲಲ್ಲಿ ಶಿಬಿರಗಳನ್ನು ನಡೆಸಿ ಸಮುದಾಯದ ಜಾಗೃತಿ, ಆರೋಗ್ಯ ತಿಳುವಳಿಕೆ, ಉಳಿತಾಯದ ತಿಳುವಳಿಕೆ, ಸಮುದಾಯಕ್ಕೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕಾದ ಅಗತ್ಯದ ಕುರಿತು ಮನವರಿಕೆ ಮಾಡುವುದು ಟ್ರಸ್ಟ್ ಕೈಗೆತ್ತಿಕೊಂಡಿರುವ ಕಾರ್ಯಗಳಾಗಿವೆ. ಸರ್ಕಾರಿ ವ್ಯವಸ್ಥೆಯನ್ನು ಸಮುದಾಯದ ಮಕ್ಕಳಿಗೆ ಸಮರ್ಪಕವಾಗಿ ಒದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾದ ಟ್ರಸ್ಟ್, ಆಶ್ರಮ ಶಾಲೆಗಳ ಸಮಸ್ಯೆಗಳನ್ನು ನಿವಾರಿಸುವ ಕೆಲಸ ಮಾಡುತ್ತಿದೆ. ಶಿಕ್ಷಕರಿಲ್ಲದ ಶಾಲೆಗಳಿಗೆ ಗೌರವಧನ ಆಧಾರದಲ್ಲಿ ಶಿಕ್ಷಕರನ್ನು ನಿಯೋಜಿಸುವ ಟ್ರಸ್ಟ್‌ನ ಕೆಲಸಕ್ಕೆ ಪೂರಕವಾಗಿ ಗೌರವಧನವನ್ನು ಜಿಲ್ಲಾ ಪಂಚಾಯತ್ ಕೊಡುತ್ತಿದೆ. ಹಗಲಿಡೀ ಜಿಲ್ಲೆ ಸುತ್ತುವ ಕಾರ್ಯದಲ್ಲಿ ನಿರತರಾದ ಶೀನಶೆಟ್ಟಿ ಮತ್ತು ಕೃಷ್ಣಮೂಲ್ಯ ಆಶ್ರಮ ಶಾಲೆಗಳ ಸಮಸ್ಯೆಗಳನ್ನು ಅಭ್ಯಾಸಮಾಡಿ ಸೂಕ್ತ ತಿಳುವಳಿಕೆಯ ಮೂಲಕ ತಾವೇ ಸರಿಪಡಿಸಬಹುದಾದ ಸಮಸ್ಯೆಗಳನ್ನು ತಾವೇ ಬಗೆ ಹರಿಸುತ್ತಾರೆ. ಅಧಿಕಾರಿಗಳ ಗಮನಕ್ಕೆ ತರಭೇಕಾದ ವಿಷಯವಾದರೆ ಅಧಿಕಾರಿಗಳನ್ನು ಶಾಲೆಗೆ ಮತ್ತು ಸಮುದಾಯಗಳ ಸ್ಥಳಕ್ಕೆ ಕರೆದೊಯ್ಯುವ ಕೆಲಸ ಮಾಡುತ್ತಿದ್ದಾರೆ. ಸಮಾಜದಿಂದ ನಿವಾರಣೆಯಾಗುವ ಸಮಸ್ಯೆಯಾದರೆ ಸಮಾಜವನ್ನು ಸಂಪರ್ಕಿಸುವುದು, ಪತ್ರಿಕೆಗಳಿಂದ ಆಗುವ

ಕಾರ್ಯವಾದರೆ ಪರ್ತಕರ್ತರನ್ನು ಸಂಪರ್ಕಿಸುವುದು ಟ್ರಸ್ಟ್ ಕಾರ್ಯನಿರ್ವಹಿಸುತ್ತಿರುವ ಕ್ರಮವಾಗಿದೆ.

ಕೊರಗ ಮಕ್ಕಳ ಶಿಕ್ಷಣಕ್ಕೆ ತಾಯಿ ತಂದೆಯರ ಕುಡಿತದಂತಹ ದುಶ್ಚಟಗಳು ಪ್ರಮುಖ ಕಾರಣವೆಂಬುದನ್ನು ಗಮನಿಸಿ, ಕುಡಿತ ಬಿಡಿಸುವುದಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಅಲ್ಲಲ್ಲಿ ಶಿಬಿರ ಏರ್ಪಡಿಸಿ, ಮನೆ ಮನೆಗಳಿಗೆ ತೆರಳಿ ಹೆಂಗಸರು–ಮಕ್ಕಳನ್ನು ಒಂದೆಡೆ ಸೇರಿಸಿ ಗಂಡಸರ ಮುಂದೆ ತೊಂದರೆಗಳನ್ನು ಹೇಳಿಕೊಳ್ಳುವಂತೆ ಸೂಚಿಸುತ್ತಾರೆ. ಹಾಗೆ ಹೇಳಿಕೊಂಡಾಗ ವ್ಯಕ್ತವಾದ ಹೆಂಗಸರು–ಮಕ್ಕಳ ಕಣ್ಣೀರು ಗೋಗೆರತ ಅಧ್ಭುತ ಪರಿಣಾಮ ಬೀರಿದೆ. ಹೀಗೆ ಕುಡಿತ ಬಿಟ್ಟವರಲ್ಲಿ ಒಬ್ಬರಾದ ಬಾಬುರವರು "ಹೆಂಡತಿ ಮಕ್ಕಳು ಅತ್ತುಕೊಂಡು ನನ್ನ ಕುಡಿತದಿಂದ ಆಗುವ ತೊಂದರೆಯನ್ನು ಎಲ್ಲರ ಮುಂದೆ ಹೇಳಿದಾಗ ನಾನು ಒಬ್ಬ ಮನುಷ್ಯನೇ? ಎನಿಸಿತು. ಆ ಮೇಲೆ ಕುಡಿಯುವುದನ್ನು ಬಿಟ್ಟೆ ಆವತ್ತು ಅಳುತ್ತಿದ್ದ ಮನೆಯವರು ಇವತ್ತು ನಗುತ್ತಿದ್ದಾರೆ. ನನ್ನೊಬ್ಬ ಮಗ ಐ.ಎ.ಎಸ್. ಮಾಡಬೇಕೆಂದು ಹೊರಟಿದ್ದಾನೆ. ನಾವೀಗ ಸ್ವಸಹಾಯ ಸಂಘಟನೆ ಮಾಡಿಕೊಂಡು ಟ್ರಸ್ಟ್‌ನೊಂದಿಗೆ ಸೇರಿಕೊಂಡಿದ್ದೇನೆ" ಎನ್ನುತ್ತಾರೆ.[೧೪]

ಟ್ರಸ್ಟ್ ಯಾವ ತಿಳುವಳಿಕೆಯನ್ನು ವಿಚಾರದ ರೂಪದಲ್ಲಿ ಹೇಳುವುದಿಲ್ಲ. ಬದಲಿಗೆ ಅಂತರಂಗದ ತುಡಿತವಾಗಿ ಬರುವಂತಹ ವಾತಾವರಣವನ್ನು ಸೃಷ್ಟಿಸುತ್ತಾರೆ. ಆದ್ದರಿಂದಲೇ ಯಶಸ್ಸು ದಾಖಲಿಸಲು ಸಾಧ್ಯವಾಗಿದೆ. ಟ್ರಸ್ಟ್‌ನ ಮುಂದಿನ ಎರಡು ವರ್ಷಗಳಲ್ಲಿ ದ.ಕನ್ನಡದ ಎಲ್ಲಾ ಕೊರಗ ಮಕ್ಕಳೂ ಶಾಲೆಯಲ್ಲಿರುವಂತೆ ಮಾಡುವುದು ಬಹುಮುಖ್ಯ ಉದ್ದೇಶವಾಗಿದೆ. ಸ್ವಸಹಾಯಕ್ಕೆ ಒತ್ತು ಕೊಡುವ ಇವರು "ಬಡಜನರು ತಮಗೆ ತಾವೇ ಸಹಾಯ ಮಾಡಿಕೊಳ್ಳುವಂತಾಗದಿದ್ದರೆ ಪ್ರಪಂಚದ ಸರ್ವಸಂಪತ್ತನ್ನು ತಂದು ಹಳ್ಳಿಗೆ ಸುರಿದರೂ ಅದು ಉದ್ದಾರವಾಗಲಾರದು". ಎನ್ನುವ ಮಾತನ್ನು ನಂಬಿದ್ದಾರೆ. ಆದಕ್ಕೆಂದೇ ಜನರ ಬಳಿ ಹೋಗೋಣ. ಜನರೊಂದಿಗೆ ಬೆರೆಯೋಣ, ಜನರಿಂದ ಕಲಿಯೋಣ, ಜನರೊಂದಿಗೆ ಯೋಚಿಸೋಣ, ಜನರಿಗೆ ಗೊತ್ತಿರುವುದರಿಂದ ಆರಂಭಿಸೋಣ, ಜನರಲ್ಲಿ ಲಭ್ಯವಿರುವುದರಿಂದ ನಿರ್ಮಿಸೋಣ" ಎನ್ನುವ ಬದುಕಿನ ಸ್ಪರ್ಶವಿರುವ ತತ್ವವನ್ನಿಟ್ಟುಕೊಂಡಿದ್ದಾರೆ.

ಶಿಕ್ಷಣವೆಂದರೆ ಸಮಗ್ರ ಬದುಕಿನ ಒಂದು ಭಾಗವೇ ಹೊರತು ಪ್ರತ್ಯೇಕವಲ್ಲ ಎಂಬ ತಮ್ಮದೇ ಧೋರಣೆಯುಳ್ಳ ಸಂಘಟನೆ, ಸರಕಾರಿ ಸಂಸ್ಥೆಗಳೊಂದಿಗೆ ಸಮನ್ವಯತೆ ಸಾಧಿಸುತ್ತಿದ್ದಾರೆ. ಟ್ರಸ್ಟ್‌ನ ಅಭಿಪ್ರಾಯ ಯಾವುದೇ ಸುಧಾರಣೆ ಬದುಕಿನ ಸಮಗ್ರ ನೆಲೆಯಿಂದ, ಅತ್ಯಂತ ತಳಮಟ್ಟದಿಂದ ಆರಂಭವಾಗಬೇಕು ಎನ್ನುವ ಸೂಕ್ತತೆಯಿಂದ ಕೊರಗ ಸಮುದಾಯದ ಅಭಿವೃದ್ಧಿ ಸಾಧ್ಯ ಎನ್ನುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಹೆಚ್ಚಿನ ಆರ್ಥಿಕ

ಮೂಲವಿದ್ದರೂ ಇರುವ ಸಂಪನ್ಮೂಲವನ್ನೇ ವ್ಯವಸ್ಥಿತವಾಗಿ ಬಳಸಿಕೊಂಡು ಶೈಕ್ಷಣಿಕ ಕ್ರಾಂತಿಯ ವಾತಾವರಣ ಹರಡುತ್ತಿದ್ದಾರೆ.


೪. ಸಮುದಾಯಗಳ ಅಭಿವೃದ್ಧಿ ಮಾದರಿ

ಜೇನುಕುರುಬ ಸಮುದಾಯದ ಜನರ ಅಭಿವೃದ್ಧಿ:

ತೀರಾ ಹಿಂದುಳಿದ ಬುಡಕಟ್ಟು ಸಮುದಾಯಗಳಲ್ಲಿ ಜೇನುಕುರುಬರು ಪ್ರಮುಖವಾಗಿಯೇ ಕಂಡುಬರುತ್ತಾರೆ. ಸಂಖ್ಯೆಯಲ್ಲಿ ಕಡಿಮೆ ಇದ್ದು ಶಿಕ್ಷಣದಿಂದ ವಂಚಿತರಾಗಿ ಅರಣ್ಯಾಧಿಪ್ರದೇಶಗಳಲ್ಲಿರುವುದನ್ನು ಥರ್ಸ್‌ಟನ್, ನಂಜುಂಡಯ್ಯ ಹಾಗೂ ಅನಂತ ಕೃಷ್ಣ ಅಯ್ಯರ್‌ರವರು ಬರೆಯುವ ಕಾಲದಿಂದಲ್ಲೇ ಗುರುತಿಸಿದ್ದಾರೆ. ವಿಶೇಷವೆಂಬಂತೆ ಸರ್ಕಾರವೂ ತೀರಾ ಹಿಂದುಳಿದ ಸಮುದಾಯವೆಂದು ವಿಶೇಷ ಸೌಲಭ್ಯಗಳನ್ನು ಒದಗಿಸಿವೆ. ಈ ಬಗ್ಗೆ ಅವರುಗಳ ಜೀವನ ಸ್ಥಿತಿಗತಿ ವಾಸಸ್ಥಾನ ಸೌಲಭ್ಯಗಳ ಬಗ್ಗೆ ಅಧ್ಯಾಯ ೨, ೩ ಮತ್ತು ೪ ರಲ್ಲಿ ಈಗಾಗಲೇ ಕೊಡಲಾಗಿದೆ. ಅವುಗಳ ಆಧಾರದ ಮೇಲೆ ಚರ್ಚೆಮಾಡಿದಾಗ, ಜೇನುಕುರುಬರು ಗ್ರಾಮಸಂಸ್ಕೃತಿಯ ಹತ್ತಿರವಿದ್ದು ಒಂದು ಜಾತಿ ಸಮುದಾಯವಾಗುವ ನಿಟ್ಟಿನಲ್ಲಿ ಹೆಜ್ಜೆಗಳನ್ನಿಡುತ್ತಿದ್ದಾರೆ. ಇದನ್ನ ಒಂದು ರೀತಿಯ ಪರಿವರ್ತನೆ ಎಂತಲೂ ಮತ್ತೊಂದು ಕಡೆ ಅಭಿವೃದ್ಧಿ ಎಂತಲೂ ಗುರುತಿಸಲಾಗುತ್ತಿದೆ. ಬಹುದೊಡ್ಡ ಸಂಖ್ಯೆಯ ಇತರ ಸಮುದಾಯಗಳ ಜನವರ್ಗದವರ ಜೊತೆಗಿನ ಆರ್ಥಿಕತೆಯ ಅವಲಂಬನೆ ಇದನ್ನು ತಿಳಿಯಪಡಿಸುತ್ತದೆ. ಹೀಗಾಗಿ ಅಭಿವೃದ್ಧಿಯ ಪಥವೂ ಸಹ ಭಿನ್ನವಾಗಿದೆ. ಈ ಕ್ರಮವನ್ನು ಸಮುದಾಯ ಅವಲಂಬಿತ ಉದ್ಯೋಗ ಮತ್ತು ಜೀವನ ಪದ್ಧತಿಯ ಕ್ರಮವನ್ನು ಅನುಲಕ್ಷಿಸಿ ಸಮುದಾಯದ ಅಭಿವೃದ್ಧಿ ಮಾದರಿ ಗುರುತಿಸಲಾಗಿದೆ.

ಜೇನುಕುರುಬರ ಅಭಿವೃದ್ಧಿ ಮಾದರಿಯನ್ನು ಅನುಲಕ್ಷಿಸಿದಲ್ಲಿ ೫ ಹಂತಗಳ ಬಹುಮುಖ್ಯ ಬೆಳವಣಿಗೆಗಳಿಂದ ಕೂಡಿರುವುದು ಕಾಣಬಹುದು. ಮೊದಲ ಹಂತವಾಗಿ ಗಮನಿಸಿದಂತೆ, ಭೂ ಹಿಡುವಳಿ ಹೊಂದಿಲ್ಲದ ಕಾರ್ಮಿಕರಾಗಿ ಕಂಡುಬರುತ್ತಾರೆ. ಕಾರ್ಮಿಕರಾಗಿ ದುಡಿಯುವ ಆರಂಭದಲ್ಲಿನ ಜನರು ಅಲ್ಪಸ್ವಲ್ಪ ಭೂ ಹಿಡುವಳಿ ಹೊಂದಿರುವರು ಸೇರ್ಪಡೆಗೊಂಡಿದ್ದಾರೆ. ಅತಿ ಚಿಕ್ಕ ಭೂ ಹಿಡುವಳಿ, ನೀರಾವರಿ ನಿರ್ವಹಣೆ ಸಾಧ್ಯವಾಗದಿರುವ ಪ್ರಯುಕ್ತ ಕೂಲಿಯ ಮೇಲೆ ಅವಲಂಬಿತರಾಗಿದ್ದಾರೆ. ಕೂಲಿಯ ಅನಿಶ್ಚಿತತೆ, ಧರ, ಕೂಲಿಯ ದಿನಗಳು ನಿರ್ಧಿಷ್ಟವಾಗಿ ದೊರೆಯದ ಕಾರಣ ಸಾಮಾಜಿಕ, ಆರ್ಥಿಕಸ್ಥಿತಿಗತಿ ಕೆಳಹಂತದಲ್ಲಿರುವುದು, ಆದಾಯದ ಗಳಿಕೆ ಕಡಿಮೆಯೇ ಅವರುಗಳ ಸಂಕಷ್ಟಗಳಿಗೆ ಕಾರಣವೆನ್ನಬಹುದು. ಸ್ಥಳಾಂತರದ ಕಾರ್ಯ ಉದ್ಯೋಗ ಒದಗಿಸುವಲ್ಲಿ ವಿಫಲವಾಗಿದೆ. ಆದ್ದರಿಂದಲೇ ಉದ್ಯೋಗ ಹರಸುತ್ತಾ ತನ್ನ ಪರಿಸರದ ವ್ಯಾಪ್ತಿಯಲ್ಲಿ ಸಮುದಾಯ ನಡೆದಿದೆ. ೨ನೇ ಹಂತದಲ್ಲಿ ಭೌಗೋಳಿಕ ಪರಿಸರಕ್ಕೆ ತಕ್ಕಂತೆ ಹಣರೂಪಿ ಆದಾಯಗಳಿಸುವ ಉದ್ಯೋಗಗಳ ಮೊರೆ ಹೋಗಿದ್ದಾರೆ. ಇದು ಅನಿವಾರ್ಯವೂ ಹೌದು.

ಈ ಹಂತದಲ್ಲಿ ಕೃಷಿಯಲ್ಲಿನ ಕೂಲಿಕಾರರಾಗಿ, ಮತ್ತೊಂದೆಡೆ ಇತರೆ ಗುತ್ತಿಗೆ ಕೂಲಿಗಾರರು ಕಾರ್ಮಿಕರು, ದಿನಕೂಲಿಕಾರರಾಗಿದ್ದಾರೆ. ಇಂತಹ ಉದ್ಯೋಗಗಳೇ ಬಹುತೇಕ ಜೇನುಕುರುಬರಿಗೆ ಮೂಲಾಧಾರವಾಗಿವೆ. ಸ್ಥಳೀಯ ಪರಿಸರದಲ್ಲಿನ ಉದ್ಯೋಗಗಳನ್ನೇ ಬಹುಪ್ರಮಾಣದಲ್ಲಿ ನೆಚ್ಚಬೇಕಿದೆ. ೩ನೇ ಹಂತದಲ್ಲಿ ಎರಡು ವಿಧಧ ಕೂಲಿಗಳಲ್ಲಿ ದುಡಿಯುವ ಜನರು ನಗರ, ಗ್ರಾಮ ಎಂಬಂತೆ ಉದ್ಯೋಗ ಹರಸುತ್ತಾ ವಲಸೆ ಹೋಗುವುದು ರೂಢಿಗತಮಾಡಿಕೊಂಡಿದ್ದಾರೆ. ಆಯಾ ಪರಿಸರದಲ್ಲಿ ದೊರೆಯುವ ಕಾಲಕ್ಕೆ ತಕ್ಕಂತೆ, ಬಹುಮುಖ್ಯ ಆಯಾಮಗಳನ್ನು ರೂಢಿಸಿಕೊಂಡಿದ್ದಾರೆ. ಕಾಲೋನಿಗಳಲ್ಲಿ ಕಂಡು ಬರುವ ನಿರುದ್ಯೋಗ ಪಡೆಯ ಜನರೇ ಇದಕ್ಕೆ ಸಾಕ್ಷಿಯಾಗುತ್ತಾರೆ. ವಾರದಲ್ಲಿ ಒಂದೋ ಎರಡು ದಿನಗಳಲ್ಲಿ ದೊರೆಯುವ ಮತ್ತು ಕಾಫಿ ತೋಟದ ಕೆಲಸಕ್ಕೆ ಸುಮಾರು ೩ ರಿಂದ ೫ ತಿಂಗಳು ತೆರಳುವುದು ಆಯಾ ಕಾಲದ ಚಲನೆಯಾಗಿ ಕಂಡು ಬರುತ್ತದೆ. ವಿವಿಧ ಸಂದರ್ಭಕ್ಕೆ ತಕ್ಕಂತೆ ಬದಲಾಯಿಸಿ ಕೊಳ್ಳುವ ವೃತ್ತಿ ಅಥವಾ ಉದ್ಯೋಗದಲ್ಲಿ ಅಲ್ಪ ಕಾಲೀನ ವೃತ್ತಿಗಳಾದ ಅರಣ್ಯದಲ್ಲಿ ಗಿಡನೆಡುವುದು, ಮರಕಡಿಯುವುದು, ರಸ್ತೆ ನಿರ್ಮಾಣ, ಹುಲ್ಲು ಕೊಯ್ಯುವುದು, ಮನೆ ಕಟ್ಟುವುದನ್ನು ಇತರ ಜನವರ್ಗಗಳೊಡನೆ ಬೆರೆತು ಮಾಡುವವರಾಗಿದ್ದಾರೆ.



ಆನೇ ಹಂತದಲ್ಲಿ ಸಮುದಾಯದ ಜನರಲ್ಲಿ ಇರುವ ಅಂಟು ಸ್ವಭಾವ ಮತ್ತು ತಮ್ಮದೇ ಸಮುದಾಯಗಳಲ್ಲಿನ ವೈಯಕ್ತಿಕ ಗುಂಪುಗಳಿಂದ ಸೌಲಭ್ಯಗಳ ಹಂಚಿಕೆಯಲ್ಲಿಯೂ ಜಿಗುಟುತನ ಕಂಡುಬರುತ್ತದೆ. ಸಮುದಾಯಗಳೊಳಗೆ ದ್ವೇಷ, ವೈಶಮ್ಯ ತಿಳುವಳಿಕೆಯನ್ನು ನೀಡುವಲ್ಲಿ ಹಿಂದಿದೆ. ಇದರಿಂದಾಗಿ ಶಿಕ್ಷಣದ ಪ್ರಸರಣ ಕಡಿಮೆ. ಶಿಕ್ಷಣದ ಮೂಲಕ ಅಭಿವೃದ್ಧಿ ಸಾಧ್ಯ ಎನ್ನುವುದನ್ನು ಮರೆಮಾಚಲಾಗಿದೆ. ಕೊನೆಯ ಹಂತದಲ್ಲಿ ತಿಳುವಳಿಕೆ ಅಥವಾ ಅರಿವು ಕಡಿಮೆ ಇರುವುದರಿಂದ ಸಂಘಟಿತರಾಗುವಲ್ಲಿ ಅನೇಕ ವೈಫಲ್ಯಗಳು ಕಂಡುಬರುತ್ತಿವೆ. ಸಮುದಾಯದ ಜನರೇ ಒಗ್ಗೂಡುವ ಒಂದಾಗಿ ಹೋರಾಟ ಮಾಡುವ ಮನೋಭಾವಕ್ಕೆ ಧಕ್ಕೆತರಲಾಗಿದೆ. ಕಾಣದ ಕೈಗಳು ಸರ್ಕಾರದ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ನಿರ್ಧರಿತ ಪ್ರಮಾಣದಲ್ಲಿ ಹಂಚುವಲ್ಲಿ ಪಾತ್ರ ಪ್ರಭಾವ ಬೀರುತ್ತಿವೆ. ಇದರಿಂದಾಗಿ ಸೌಲಭ್ಯಗಳ ಹಂಚಿಕೆಯಲ್ಲಿ ವಂಚನೆ, ತಾರತಮ್ಯ ಕಂಡುಬರುತ್ತಿದೆ. ಈ ಎಲ್ಲಾ ಬೆಳವಣಿಗೆಗಳು ಸಮುದಾಯದ ಅಭಿವೃದ್ಧಿ ಮೇಲೆ ಪ್ರಭಾವ ಬೀರುತ್ತಲಿವೆ.

ಇತರೆ ಜನವರ್ಗದೊಂದಿಗಿನ ಅಲ್ಪಕಾಲೀನ ಬೆಳವಣಿಗೆಗಳು ಪ್ರಮುಖ ಅಂಶವಾಗಿ ಸಮುದಾಯಗಳ ಕಾಲೋನಿಗಳಲ್ಲಿ ಗೊಂದಲ ಸೃಷ್ಟಿಗೆ ಅವಕಾಶ ನೀಡಿದಂತಾಗಿದೆ. ಇಂತಹ ಅವಲಂಬನೆ ಶಿಕ್ಷಣ, ಸಾಮಾಜಿಕ ಅಭಿವೃದ್ಧಿ ಮತ್ತು ಭೂ ಹಿಡುವಳಿಗಳ ಮೇಲೆ ಇತರ ಜನವರ್ಗದವರ ನೇರ ಹಿಡಿತ, ಪ್ರಭಾವ ಬೀರಿ ಸಮುದಾಯದ ಸ್ಥಿತಿ ಉತ್ತಮಗೊಳ್ಳುವಲ್ಲಿ ತೊಡರುಗಾಲಾಗಿದೆ. ಸಮುದಾಯದ ಗುಂಪು ಅಥವಾ ಕಾಲೋನಿಗಳಲ್ಲಿ ಸಂಪೂರ್ಣ ಪ್ರಮಾಣದಲ್ಲಿ ಸ್ವಯಂ ಸಂಘಟನೆ ಕಾಣಬರುವುದಿಲ್ಲ. ಹೀಗಾಗಿ ಅಭಿವೃದ್ಧಿಯೂ ಸಹ ಗುರಿತಲುಪುವುದು ಕಷ್ಟಸಾಧ್ಯವೆನ್ನಬಹುದು.

ಸಮುದಾಯದ ಬಹುತೇಕಜನರು ಉದ್ಯೋಗವನ್ನ ಹರಸುತ್ತಿರುವ ಚಲನೆ ಸಮುದಾಯಗಳ ನಡುವಿನ ವೈಷಮ್ಯತೆ, ಅರಿವು, ಶಿಕ್ಷಣದ ಪಾತ್ರ, ಮುಖ್ಯವಾಗಿ ಸರ್ಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ಹಿಂದುಳಿವಂತೆ ಮಾಡಿದೆ. ಆದರಿಂದಲೇ ಸೌಲಭ್ಯಗಳ ವಂಚಿತ ಸಮುದಾಯ ಕಡಿಮೆ ಮಟ್ಟದ ಸಾಮಾಜಿಕ ಆರ್ಥಿಕ ಅಭಿವೃದ್ಧಿಯಲ್ಲಿ ಕಂಡುಬರುವರಾಗಿದ್ದಾರೆ.

ಕೊರಗ ಸಮುದಾಯದ ಜನರ ಅಭಿವೃದ್ಧಿ

ಬುಡಕಟ್ಟು ಸಮುದಾಯಗಳಲ್ಲೇ ಅತ್ಯಂತ ತೀರಾ ಹಿಂದುಳಿದ, ಮನುಕುಲವೇ ನಾಚುವಂತಹ ಹೇಯ ಕೃತ್ಯಗಳನ್ನು ಹೇರಿದದ್ದು ಕೊರಗ ಸಮುದಾಯದ ಮೇಲೆ. ಮನುಷ್ಯರೇ ಅಲ್ಲ ಎನ್ನುವ ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯರಲ್ಲಿ ಅಸ್ಪೃಶ್ಯರು ಎಂದು ಗುರುತಿಸಲಾಗಿದ್ದ ಕೊರಗರು, ಎಲ್ಲರ ನಿರೀಕ್ಷೆಯಂತೆ ಬೆಳೆಯಲಾರಂಭಿಸಿದ್ದಾರೆ. ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವಲ್ಲಿ ಶಿಕ್ಷಣದ ಪಾತ್ರ ಪ್ರಧಾನವೆಂಬುದು ತಿಳಿದ ನಂತರ ಬದುಕು


ಹಂತಹಂತವಾಗಿ ಅಭಿವೃದ್ಧಿಗೊಳ್ಳುತ್ತಿದೆ. ಕೊರಗರು ಆರ್ಥಿಕವಾಗಿ, ಸಾಮಾಜಿಕವಾಗಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲೇ ಅತಿ ಹಿಂದುಳಿದವರು. ಈಗ ಅಭಿವೃದ್ಧಿಯ ದಾರಿ ಕಾಣುತ್ತಿದ್ದಾರೆ. ಅಭಿವೃದ್ಧಿಯ ದಾರಿಯು ಸುಮಾರು ವರ್ಷಗಳ ಬಹಳಷ್ಟು ನಾಯಕರ ಉದಾರ ಸೇವಾಭಾವದ ಧ್ಯೋತಕವಾಗಿದೆ. ಅದೆಲ್ಲ ಇಲ್ಲಿ ಕ್ರೋಢಿಕರಿಸಲು ಸಾಧ್ಯವಾಗದ ಮಾತು. ಆದುದರಿಂದಲೇ ಪ್ರಸ್ತುತ ಅಧ್ಯಾಯ ೨, ೩, ೪ ರಲ್ಲಿ ಗುರುತಿಸಲಾದ ವಸ್ತುಸ್ಥಿತಿಯ ಆಧಾರದ ಮೇಲೆ ಸಮುದಾಯದ ಬೆಳವಣಿಗೆಯ ಮಾದರಿ ಗುರುತಿಸಲಾಗಿದೆ.

ಕೊರಗರ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ೬ ಹಂತಗಳ ವಿಸ್ತಾರತೆಯಲ್ಲಿ ಹಂಚಿಕೆಯಾಗಿರುವುದು ಕಂಡುಬರುತ್ತದೆ. ಪ್ರಸ್ತುತದ ಅಭಿವೃದ್ಧಿ ಕ್ರಮದಲ್ಲಿ ಅನುಲಕ್ಷಿಸಿದಂತೆ, ಮೊದಲನೆ ಹಂತದಲ್ಲಿ ಸರ್ಕಾರಿ ನೌಕರರಾಗಿ ಬಹುವರ್ಗದ ಜನರೊಂದಿಗೆ, ಸಮಾಜದೊಂದಿಗೆ ಬೆರೆತ ಪರಿಸರದ ಸಮಾಜ ವ್ಯವಸ್ಥೆಯಲ್ಲಿ ಜೀವನ ನಡೆಸುತ್ತಿದ್ದಾರೆ. ಇದೊಂದು ರೀತಿಯ ತಳಪಾಯವಾಗಿದೆ. ಅಭಿವೃದ್ಧಿಗೆ ಸ್ವಯಂ ಇತರ ಜನವರ್ಗ ಬುಡಕಟ್ಟುಗಳ ಜೊಗೆಗಿನ ಜೀವನ ಪರಿಸರಕ್ರಮ, ನಗರ, ಮತ್ತು ಗ್ರಾಮ ಸಂಸ್ಕೃತಿಯ ಬೆಳವಣಿಗೆಗಳು ಉತ್ತಮ ಭೂಮಿಕೆಯನ್ನು ಒದಗಿಸಿಕೊಟ್ಟಿದೆ. ಹೀಗೆ ಆರಂಭಗೊಂಡ ಕ್ರಮ ನಂತರದಲ್ಲಿ ಸ್ವಲ್ಪ ಮಟ್ಟಿನ ಭೂ ಹಿಡುವಳಿ ಹೊಂದಿರುವರು ವ್ಯವಸಾಯಗಾರರಾಗಿದ್ದಾರೆ. ಮತ್ತು ಗುತ್ತಿಗೆಕಾರ್ಮಿಕರಾಗಿ ಕಾರ್ಖಾನೆ, ಮಹಾನಗರ ಪಾಲಿಕೆಗಳಲ್ಲಿ ದುಡಿಯುವರಾಗಿದ್ದಾರೆ. ಕೊರಗರ ಮತ್ತೊಂದು ವಿಶೇಷತೆ ಎಂದರೆ, ಸ್ವಯಂ ಉದ್ಯೋಗ ರೂಢಿಸಿಕೊಂಡಿರುವುದು ಒಂದು ಉತ್ತಮ ಬೆಳವಣಿಗೆ ಎನ್ನಬಹುದು. ವ್ಯವಸಾಯಗಾರರಾಗಿ ದುಡಿಯುವ ಮತ್ತು ಗುತ್ತಿಗೆ ಕಾರ್ಮಿಕರಾಗಿರುವರ ನಡುವೆ ಸ್ವಯಂ ಉದ್ಯೋಗದಲ್ಲಿ ತೊಡಗಿರುವುದು ಒಂದು ವಿಶೇಷತೆಯಾಗಿದೆ.

೩ನೇ ಹಂತದಲ್ಲಿ ಕೊರಗರು ಒಂದು ಕಾಲೋನಿಯಿಂದ ಮತ್ತೊಂದು ಕಾಲೋನಿಯ ಜೊತೆಗೆ ಹೊಂದಾಣಿಕೆ ಹೆಚ್ಚಿನ ಪ್ರಭಾವ ಬೀರಿದೆ. ಸಮುದಾಯದಲ್ಲಿನ ಈ ಅಂಟು ಸ್ವಭಾವ ಅಂತರ ಅವಲಂಬನೆ ಬಹುಮುಖ ಬೆಳವಣಿಗೆಗೆ ಪುಷ್ಠಿ ನೀಡುತ್ತಿದೆ. ಇದರಿಂದ ಸಂಘಟನಾತ್ಮಕ ಶಕ್ತಿ ಹೆಚ್ಚುತ್ತಿದೆ. ೪ನೇ ಹಂತದಲ್ಲಿ ಬಹುತೇಕ ಕೊರಗರು ಸಮಾಜದ ವಿವಿಧ ಜನ, ಜಾತಿ, ವರ್ಗ, ಬುಡಕಟ್ಟುಗಳ ಜೊತೆಗಿನ ಜೀವನಕ್ರಮ ರೂಢಿಸಿಕೊಂಡಿರುವವರು. ಜಾತಿ ಮತ್ತು ಬುಡಕಟ್ಟುಗಳ ನಡುವಿನ ಅವಲಂಬನೆ ಸಂಘಟನೆಯಾಗಿ ರೂಪುಗೊಂಡಿದೆ. ೫ನೆ ಹಂತದಲ್ಲಿ ಜನರಲ್ಲಿ ಶಿಕ್ಷಣದ ಅರಿವು, ಅಧುನೀಕರಣದ ಜೀವನ, ಜ್ಞಾನ ಪ್ರಸರಣ ಹೆಚ್ಚಾಗುತ್ತಾ ತಿಳುವಳಿಕೆ ಮೂಡಿಸುತ್ತಿದೆ. ಇದರಿಂದಾಗಿ ಕೊರಗರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಶೈಕ್ಷಣಿಕ ಜ್ಞಾನ ಅವಕಾಶಗಳ ಸಮರ್ಪಕ ಸದುಪಯೋಗಕ್ಕೆ ದಾರಿಮಾಡಿಕೊಡುತ್ತಿದೆ. ಈ ಎಲ್ಲಾ ಬೆಳವಣಿಗೆಗಳಿಂದಾಗಿ ಸರ್ಕಾರದ ಸೌಲಭ್ಯಗಳ ಸದುಪಯೋಗ ಅವಕಾಶಗಳ ವಿಸ್ತಾರದೊಂದಿಗೆ ಅಭಿವೃದ್ಧಿಯತ್ತದಾಪುಗಾಲು ಹಾಕುತ್ತಿದ್ದಾರೆ. ಅರಿವು ಉತ್ತಮ ಫಲಿತಾಂಶ ಕೊಡುತ್ತಿದೆ. ಇದರಿಂದಾಗಿ ಕೊರಗರು ಅಭಿವೃದ್ಧಿಯತ್ತ

ನಡೆಯುತ್ತಿದ್ದಾರೆ. ಮತ್ತು ಈ ಹಂತದಲ್ಲಿ ಶೈಕ್ಷಣಿಕ ಪ್ರಗತಿ ಹೆಚ್ಚುತ್ತಾ ಆದಾಯವು ಹೆಚ್ಚಾಗುತ್ತಿದೆ. ಜೇನುಕುರುಬ ಸಮುದಾಯಕ್ಕೆ ಹೋಲಿಸಿದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಲಿದೆ ಎನ್ನಬಹುದು.

ಜೇನುಕುರುಬ ಮತ್ತು ಕೊರಗ ಸಮುದಾಯಗಳ ಅಭಿವೃದ್ಧಿ ದಿಕ್ಕು-ದಿಸೆಯ ಮಾದರಿಯನ್ನು ಗಮನಿಸಿದಲ್ಲಿ ಸಾಮಾನ್ಯವಾಗಿ ಅಭಿವೃದ್ಧಿಯು ಸಮುದಾಯಗಳಲ್ಲಿ ವ್ಯಕ್ತಗೊಂಡಿರುವುದು ಹಲವಾರು ಅಂಶಗಳನ್ನೊಳಗೊಂಡಂತೆ ಗುರುತಿಸಲಾಗಿದೆ. ಮುಖ್ಯವಾಗಿ ಜೇನುಕುರುಬ ಸಮುದಾಯ ಕೆಳಹಂತದ ಅಭಿವೃದ್ಧಿಯಲ್ಲಿ ಮುನ್ನೆಡೆಯುತ್ತಿರುವುದು ಕಂಡುಬರುತ್ತದೆ. ಏಕೆಂದರೆ ಅವಕಾಶಗಳ ಸದುಪಯೋಗ ವ್ಯವಸ್ಥಿತಕ್ರಮದಲ್ಲಿ ಬಳಸಿಕೊಳ್ಳಲಾಗದಿರುವುದೇ ಕಾರಣವೆನ್ನಬಹುದು.



ಅರ್ಥಶಾಸ್ತ್ರದಲ್ಲಿ ಅವಕಾಶಗಳ ವಿಸ್ತಾರತೆ ಬಹುಮುಖ ಚಲನೆಯನ್ನು ತಂದು ಕೊಡುತ್ತದೆ. ಹೀಗಾಗಿ ಜೇನುಕುರುಬರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ

ಅಂದಾನುಕರಣೆಯನ್ನು ಪ್ರದರ್ಶಿಸುತ್ತಿದೆ ಎನ್ನಬಹುದು. ಅತಿ ಹೆಚ್ಚಿನ ಕುಟುಂಬಗಳಿಗೆ ಭೂಮಿ ದೊರೆಕಿಸಿಕೊಟ್ಟಿದ್ದರೂ ಸಹ ಇವರುಗಳ ಕೊಡು-ಪಡೆಯುವ ಸಂವಹನ ಕ್ರಿಯೆ ಸೀಮಿತವಾಗಿದೆ. ತಮ್ಮ ಪರಿಸರದಲ್ಲಿನ ಭೂಮಾಲಿಕರ, ಶ್ರೀಮಂತ ಜನರ ಜೊತೆಗೆ ಮಾತ್ರ ಗುರುತಿಸಿಕೊಳ್ಳುವ ಅಥವಾ ಅವರುಗಳ ಆದೇಶದಂತೆ ವರ್ತಿಸುವರಾಗಿದ್ದಾರೆ. ಒಂದು ರೀತಿಯಲ್ಲಿ ಜಾತಿ ಸಮಾಜವಾಗುವತ್ತ ಸಮುದಾಯವು ಹೆಜ್ಜೆ ಇಡುವಂತೆ ಆಗಿದೆ. ಉದಾಹರಣೆಗೆ ಸಮುದಾಯದ ಜನರೇ ಹೇಳುವಂತೆ ನಾವು ಗೌಡರಂತೆ ಬಾಳುತ್ತೇವೆ. ನಾವು ಹಕ್ಕಿಪಿಕ್ಕಿ ಸೋಲಿಗರು, ಪರಿಶಿಷ್ಟಜಾತಿಗಳ ಜನರ ಮನೆ ಕೆಲಸದಲ್ಲಿ ಊಟಸೇವನೆ ಮಾಡುವುದಿಲ್ಲ ಎನ್ನುವ ಮಾತಿನಿಂದಲೇ ತಿಳಿದು ಬರುತ್ತದೆ. ಇಂತಹ ನಿಲುವುಗಳು ಕೆಲವೊಮ್ಮೆ ಸಮುದಾಯದ ಅಭಿವೃದ್ಧಿಗೆ ಮಾರಕವಾಗಲೂಬಹುದು. ಮತ್ತೊಂದು ಸಮುದಾಯವಾದ ಕೊರಗರ ಬಹಳಷ್ಟು ಕುಟುಂಬಗಳು ಪ್ರತ್ಯೇಕತೆಯ ವಾಸ ತೊರೆದು ಇತರೆ ಜಾತಿ, ಜನ, ವರ್ಗ, ಬುಡಕಟ್ಟುಗಳೊಂದಿಗೆ ಸಹಮತದ ಜೀವನ ರೂಢಿಸಿಕೊಂಡಿರುವುದು ಆರ್ಥಿಕವಾಗಿ ಜೇನುಕುರುಬರಿಗಿಂತ ಉತ್ತಮವಾಗಲು ಸಾಧ್ಯವಾಗಿದೆ ಎನ್ನಬಹುದು. ಇಲ್ಲಿ ರಾಷ್ಟ್ರ ಅಭಿವೃದ್ಧಿಯತ್ತ ಮುನ್ನೆಡೆಯಬೇಕು; ಎಲ್ಲಾ ಸಮುದಾಯಗಳು ಸಮಾಜದ ಮುಖ್ಯವಾಹಿನಿಯಲ್ಲಿ ನಡೆದಲ್ಲಿ ಅಭಿವೃದ್ಧಿ ಸಾಧ್ಯ ಎನ್ನುವ ನಿಲುವಿಗೆ ಜೇನುಕುರುಬರು ದ್ವಂದ್ವದಲ್ಲಿರುವುದು ಕಂಡುಬರುತ್ತದೆ. ಕೊರಗರು ಪ್ರತಿ ಸ್ಪಂದನೆ ಮಾಡುತ್ತಿದ್ದಾರೆ.

ಕೊರಗರ ಆರ್ಥಿಕ ಪರಿಸ್ಥಿತಿ ಸುಧಾರಣೆಯತ್ತ ನಡೆಯುತ್ತಿರಲು ಅವಕಾಶಗಳ ಸಮರ್ಪಕ ಸದುಪಯೋಗ ಮತ್ತು ಸಂಘಟಿತ ಹೋರಾಟದ ಜೊತೆ ತಿಳುವಳಿಕೆ, ಶಿಕ್ಷಣದ ಪ್ರಸರಣ ಕಾರಣವೆನ್ನಬಹುದು. ತಮ್ಮ ಪರಿಸರದಲ್ಲಿ ಒದಗಿ ಬರುವ ಯಾವುದೇ ಅವಕಾಶವನ್ನು ಎಂದೂ ದೂರಮಾಡದಿರುವುದು ಹಾಗೂ ಸರ್ಕಾರಿ ನೌಕರಿ ಪ್ರಧಾನತೆ ಎಂದು ಹೇಳಬಹುದು. ಹೀಗಾಗಿ ಕೊರಗರು ಜೇನುಕುರುಬರಿಗಿಂತ ಉತ್ತಮ ಎನ್ನಬಹುದು. ಸಂಪೂರ್ಣ ಕೊರಗರಿಗೆ ಭೂಮಿ ದೊರೆತಿಲ್ಲ. ಭೂ ಹಂಚಿಕೆಯ ಕಾರ್ಯ ಕೊರಗರಲ್ಲಿ ಸಂಪೂರ್ಣ ಯಶಸ್ವಿಯಾದಲ್ಲಿ ಮೂಲನಿವಾಸಿ ಬುಡಕಟ್ಟುಗಳಲ್ಲದೇ ಬುಡಕಟ್ಟುಸಮುದಾಯಗಳಲ್ಲೇ ಮೇಲುಗೈ ಸಾಧಿಸಲು ಸಾಧ್ಯ ಎನ್ನಬಹುದು. ಸರ್ಕಾರ ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಒದಗಿಸುತ್ತಿರುವ ಸೌಲಭ್ಯಗಳು ಎರಡು ಸಮುದಾಯಗಳಿಗೆ ಅನುಗುಣವಾಗಿದ್ದರೂ, ಕೊರಗ ಸಮುದಾಯ ತೀರಾ ಹಿಂದುಳಿದ ಲಕ್ಷಣಗಳನ್ನು ತೊರೆದು ಸಮಾಜದಲ್ಲಿ ಅಸ್ಪೃಶ್ಯರ ನಡುವಿನ ಸಂಘರ್ಷದ ಹತ್ತಿರಕ್ಕೆ ಬರುತ್ತಿದ್ದಾರೆ. ಇವರುಗಳ ನಗರ, ಜೀವನದ ಪರಿಸರ ಇತರೆಲ್ಲಾ ಸಮುದಾಯಗಳ ಜೊತೆಗಿನ ಸಹಭಾಗಿತ್ವ ಮೂಲ ವೃತ್ತಿ ಹಾಗೂ ಆರ್ಥಿಕತೆಯ ಮೇಲೆ ಪರಿಣಾಮಕಾರಕವಾಗಿ ಇತರೆಲ್ಲಾ ಅಂಶಗಳ ಮೇಲಿನ ಅಂತರ ಕಡಿಮೆ ಮಾಡುವಂತಾಗಿದೆ. ಆದರಿಂದಲೇ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಉತ್ತಮಗೊಳ್ಳುವ ನಿಟ್ಟಿನಲ್ಲಿ ಸಾಗುತ್ತಿದ್ದಾರೆ ಎನ್ನಬಹುದು.

ಸಮಾಜದಲ್ಲಿನ ಬಹುಮುಖ್ಯ ಅಂಶ ಸಾಮಾಜಿಕ ಬೆಳವಣಿಗೆ. ಬಹು ಹಿಂದೆ ತಿರಸ್ಕೃತರಂತೆ ಗುರುತಿಸಲಾಗಿದ್ದವರೂ, ಸಮಾಜದ ಮುಖ್ಯವ್ಯವಸ್ಥೆಯಲ್ಲಿ ದೊಡ್ಡ ಸಂಖ್ಯೆಯ ಇತರ ಜನವರ್ಗದವರೊಂದಿಗಿನ ಸಹಮತದ ಜೀವನ ಒಂದು ಉತ್ತಮ ಅಭಿವೃದ್ಧಿಯ ದ್ಯೋತಕವೆಂಬಂತೆ ಕಂಡುಬರುತ್ತದೆ. ಸುಮಾರು ೫ ರಿಂದ ೬ ಕಿ.ಮೀ. ದೂರಗಳಲ್ಲಿರುವ ಕಾಲೋನಿಗಳು. ಸರ್ಕಾರದ ವಸತಿ ಮತ್ತು ಭೂಮಿ ನೀಡಿಕೆಯೂ ಸಹ ಜೇನುಕುರುಬರನ್ನು ಬದಲಿಸುವಲ್ಲಿ ಪ್ರಯಾಸವಾಗಿ ಕಂಡುಬರುತ್ತದೆ. ಕೃಷಿಗೆ ನೀಡಿದ ಭೂಮಿಯಲ್ಲಿ ದುಡಿಯುವ ಆಸಕ್ತಿ ಕಡಿಮೆಯಾಗಿರುವುದರಿಂದ ಇಲ್ಲಿನ ಬಹುತೇಕ ಕಾಲೋನಿಗಳ ಕುಟುಂಬಗಳು ಕಳೆದ ೧೦ – ೧೫ ವರ್ಷಗಳಿಂದಲೂ ಕೂಲಿ, ಕೃಷಿಕೂಲಿ ಕೆಲಸವನ್ನೇ ಆಶ್ರಯಿಸಿದ್ದಾರೆ. ಇದೇ ತಾಲ್ಲೂಕು ವ್ಯಾಪ್ತಿಯಲ್ಲಿ ಶಿಕ್ಷಣ, ಉದ್ಯೋಗ ತರಭೇತಿ ಶಾಲೆಗಳಿದ್ದರೂ ವ್ಯವಸ್ಥಿತವಾಗಿ ಮಾನವ ಸಂಪನ್ಮೂಲವನ್ನ ಬಳಸಿಕೊಳ್ಳುವಲ್ಲಿ ವಿಫಲತೆ ಕಂಡುಬರುತ್ತದೆ. ಗಿರಿಜನ ಆಶ್ರಮ ಶಾಲೆಗಳನ್ನು ಹೊಸದಾಗಿ ನಿರ್ಮಿಸಲಾಗಿದೆ. ಅವುಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವುದು ಕಡಿಮೆ. ಬಹುತೇಕ ಮಕ್ಕಳ ಪೋಷಕರು ಬೇರೆ ಬೇರೆ ಕಡೆ ಕೂಲಿಗಾಗಿ ವಲಸೆ ಹೋಗುತ್ತಿದ್ದಾರೆ. ಹೀಗಾಗಿ ಈ ಶಾಲೆಗಳಲ್ಲಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುವವರು ಕಡಿಮೆ. ೫ನೇ ತರಗತಿಯವರೆಗೆ ಅಷ್ಟೋ ಇಷ್ಟೋ ಮಕ್ಕಳು ಕಾಣಸಿಗುತ್ತಾರೆ. ಮುಂದಿನ ಹಂತದಲ್ಲಿ ತೀರಾ ಅಪರೂಪವೆಂಬಂತೆ ಕಾಣಸಿಗುತ್ತಾರೆ.

ಕೊರಗರನ್ನು ಗಮನಿಸಿದಲ್ಲಿ ಸುತ್ತಮುತ್ತಲಿನ ಕಾಲೋನಿಗಳಿಂದ ನಗರ ಪ್ರದೇಶಗಳಿಗೆ ಉದ್ಯೋಗ, ವ್ಯಾಪಾರ ವಹಿವಾಟಿಗಾಗಿ ದಿನನಿತ್ಯ ಓಡಾಡುತ್ತಾರೆ. ಇವರ ಪ್ರಯಾಣಕ್ಕಾಗಿ ಕಾಲೋನಿಗಳಿಗೆ ಆಟೋಗಳ ಅವಲಂಬನೆ ಹೆಚ್ಚು. ಸ್ಥಳೀಯ ಕೊರಗರಿಗೆ ಆಟೋ ಚಾಲಕರಾಗಿ ದುಡಿಯುವ ಒಂದು ಉದ್ಯೋಗ ದೊರೆತಂತಾಗಿದೆ.

ಎರಡು ಸಮುದಾಯಗಳ ಅಭಿವೃದ್ಧಿ ಮಾದರಿಗಳು ಪ್ರಸ್ತುತ ರೂಢಿಸಿಕೊಂಡಿರುವ ವೃತ್ತಿ ಆದಾಯದ ಮೂಲಗಳು ಮತ್ತು ಶೈಕ್ಷಣಿಕ ಪ್ರಗತಿಯ ಅಂಶಗಳನ್ನೆಲ್ಲ ಸೂತ್ರ ರೂಪದಲ್ಲಿ ವ್ಯಕ್ತಗೊಳಿಸಿ ಸಾಮಾನ್ಯೀಕರಿಸಲಾಗಿ ನೀಡಲಾಗಿದೆ. ಆರಂಭದಲ್ಲಿ ಹೇಳಿದಂತೆ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ವಿಶೇಷ ಅಭಿವೃದ್ಧಿ ಸೌಲಭ್ಯಗಳು ಎರಡು ಸಮುದಾಯಗಳಿಗೆ ಪರಿಸರ ಮತ್ತು ವ್ಯಕ್ತಿಗತ ಜನರ ಆಶೋತ್ತರಗಳನ್ನು ಕಡೆಗಣಿಸಲಾಗಿದೆ. ಅವುಗಳಿಗನುಗುಣವಾಗಿ ಯೋಜನೆಗಳನ್ನು ರೂಪಿಸಿದಲ್ಲಿ ಈ ಜನರ ಹಿತರಕ್ಷಣೆ, ಸಾಮಾಜಿಕ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರಿಯಾಗಬಲ್ಲವು. ವಿಶೇಷತ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ತೀರಾ ಹಿಂದುಳಿದ ಪ್ರದೇಶ ಅರಣ್ಯ ಮತ್ತು ಗುಡ್ಡಗಾಡುಗಳಲ್ಲಿರುವವರಿಗೆ ಪರಿಸ್ಥಿತಿಗಳು ಕಷ್ಟಕಾರಿಯಾಗಿರುತ್ತವೆ. ಆದರಿಂದ ಆರ್ಥಿಕತೆಯ ಆಚೆಗಿನ ಮಾನವನ ಬದುಕನ್ನು ಸಂಪನ್ನಗೊಳಿಸುವ ಆಯಾಮದಲ್ಲಿ ಈ ಜನರ ಸ್ಥಿತಿಗತಿಗಳ ಆಶೋತ್ತರಗಳನ್ನು ಮೊದಲು ತಿಳಿದುಕೊಳ್ಳುವುದು ಅಗತ್ಯವಾದದ್ದು.

ಮೂಲನಿವಾಸಿ ಬುಡಕಟ್ಟು ಸಮುದಾಯಗಳಲ್ಲಿ ಜೇನುಕುರುಬರಿಗೆ ಭೂಮಿ ದೊರೆಯುತ್ತಿರುವುದರಿಂದ ಇತರೆಲ್ಲ ಅಂಶಗಳು ಗಣನೆಗೆ ಬರದೇ ಜನರು ಸ್ವವಿಮರ್ಶೆ ಅಥವಾ ಸ್ವಯಂ ಚಿಂತನೆಯಲ್ಲಿ ತೊಡಗದೆ ಶ್ರೀಮಂತ ಭೂ ಮಾಲೀಕರ ಮೋರೆ ಹೋಗುತ್ತಿದ್ದಾರೆ. ಸಮುದಾಯಗಳಿಗೆ ಸರ್ಕಾರದ ಸೌಲಭ್ಯಗಳನ್ನ ಅರಿತ ಭೂಮಾಲೀಕರು ವರ್ಗ, ಜಾತಿ ವ್ಯವಸ್ಥೆಯ ಹಿಡಿತದಲ್ಲಿ ಜೇನುಕುರುಬರನ್ನು ಸಿಲುಕಿಸಿ ಸೌಲಭ್ಯಗಳ ವಂಚನೆಯಲ್ಲಿ ಪಾಲುದಾರಿಕೆ ಮಾಡಿಕೊಂಡಿದ್ದಾರೆ. ಇದು ಬಹಳಷ್ಟು ಅಧಿಕಾರಿ ವರ್ಗಕ್ಕೆ ತಿಳಿದಿದ್ದರೂ ಸಹಕರಿಸುತ್ತಿರುವುದು ಒಂದು ಸಮಸ್ಯೆ. ಇತರ ಜನವರ್ಗದವರು ಜೇನುಕುರುಬರೆಂದು ಪ್ರಮಾಣಪತ್ರ ಪಡೆದು ಸೌಲಭ್ಯ ಪಡೆಯುತ್ತಿರುವ ನಿದರ್ಶನವನ್ನ ಕೇಳುವರು ಸಹ ಇಲ್ಲ. ಹೀಗಾಗಿ ಆತಿ ಹೆಚ್ಚಿನ ಅಭಿವೃದ್ಧಿ ಯೋಜನೆಗಳು, ಹಣಕಾಸು ಜೇನುಕುರುಬರಿಗೆ ಮೀಸಲಾಗಿದ್ದರೂ, ಜನರ ಮನೋಬಾವನೆಯಲ್ಲಿ ಬದಲಾವಣೆಯಾಗದೇ ಅಭಿವೃದ್ಧಿ ಅಸಾಧ್ಯ ಎನ್ನಬಹುದು. ಜೇನುಕುರುಬರಿಗೆ ಆದೆಷ್ಟೋ ಯೋಜನೆಗಳು ಹಣಕಾಸು ವ್ಯಯಿಸಿರುವುದಾಗಿ, ವಿವಿಧ ಇಲಾಖೆಗಳು ಮತ್ತು ಸಹಕಾರ ಸಂಘ ಮಾನವ ಸಂಪನ್ಮೂಲದ ಸದ್ಬಳಕೆಗೆ ಉದ್ಯೋಗ ಸೃಷ್ಟಿ ಮಾಡಲಾಗಿದೆ ಎನ್ನುವ ಅಂಕಿ ಅಂಶಗಳು ನೀಡಿರುತ್ತಾರೆ. ಆದರೆ ಸ್ಪಷ್ಟವಾಗಿ ಅಧ್ಯಯನದಲ್ಲಿ ಜೇನುಕುರುಬರು ಬಳಸಿಕೊಂಡ ಬಗ್ಗೆ ಸಂಶಯ ಬರುವುದು ಸಹಜ. ಇದಕ್ಕೆ ಈ ಜನರ ಸಹಕಾರವಿದೆ ಎನ್ನಬಹುದು. ನೀರ ಮಜ್ಜಿಗೆ ತೋರಿಸಿದರೆ ಸಾಕು ಆ ಎನ್ನುವ ಇವರುಗಳು ಜಾತಿ ಪ್ರಬಾವದಿಂದ ಹೊರಬರದಿದ್ದರೆ ಕಷ್ಟಕರವಾದ ಸಮಸ್ಯೆಗಳು ಎದುರಿಸಬೇಕಾಗುತ್ತದೆ. ಈ ಎಲ್ಲಾ ಕಾರಣಗಳಿಂದಲೇ ಜೇನುಕುರುಬರು ಹಿಂದುಳಿದ ಸ್ಥಿತಿಯಲ್ಲಿರುವುದು ಎನ್ನಬಹುದು. ಹಾಗೆಯೇ ಕೊರಗರು ಸಹ ನಗರ, ಗ್ರಾಮಗಳಲ್ಲಿ ಅಲ್ಲಲ್ಲಿ ಕೆಲವು ಕುಟುಂಬಗಳು ನೆಲೆಸಿದ್ದರೂ, ಅಭಿವೃದ್ಧಿಗೆ ಪೂರಕವೆಂಬಂತೆ ಸ್ಪಂದಿಸುತ್ತಿದ್ದಾರೆ. ಆದರೆ ಸರ್ಕಾರ ರೂಪಿಸಿರುವ ಅನೇಕ ಯೋಜನೆಗಳು ಕೊರಗರ ಪರಿಸರ ಜೀವನಕ್ರಮಕ್ಕೆ ಅನ್ವಯಿಸುವುದಿಲ್ಲವೆನ್ನಬಹುದು. ಭೂಮಿ ಹಂಚಿಕೆಯ ಪ್ರಮಾಣದಲ್ಲಿಯೂ ಕೊರಗರಿಗೆ ವಂಚನೆ ಮಾಡಲಾಗಿದೆ. ಆದರೂ ಈ ಜನರು ತಮ್ಮ ಬದುಕಿನ ಶೈಲಿಯನ್ನೇ ಸ್ವಲ್ಪ ಬದಲಾಯಿಸಿಕೊಂಡಿದ್ದು, ಸಂಪೂರ್ಣ ಬದಲಿಸಿಕೊಳ್ಳಲು ಮಾನಸಿಕವಾಗಿ ಸಿದ್ಧತೆ ನಡೆಸುತ್ತಾ ಶಿಕ್ಷಣಕ್ಕೆ ಮೋರೆಹೋಗಿದ್ದಾರೆ. ಅಷ್ಟೇನು ಅವಕಾಶಗಳು, ವ್ಯವಸಾಯದ ಭೂಮಿ ಇಲ್ಲದಿದ್ದರೂ ಇವರ ಸ್ವಾಭಿಮಾನ ಹಾಗೂ ಸ್ವತಂತ್ರವಾಗಿ ದುಡಿದು ತಿನ್ನುವ ಹಂಬಲದೊಂದಿಗೆ, ಜನರ ನಡುವೆ ಸಮಾಜವಾದಿ ಚಿಂತನೆ, ನಿಸ್ವಾರ್ಥ ನಾಯಕತ್ವ, ನಿಖರ, ವೈಜ್ಞಾನಿಕ, ಸೈದ್ಧಾಂತಿಕ, ಸ್ಪಷ್ಟತೆಯುಳ್ಳ ನಾಯಕರು ಉದಯಿಸುತ್ತಿದ್ದಾರೆ. ಅಲ್ಲದೆ ಇವರುಗಳ ಜಿಲ್ಲೆಗಳಲ್ಲಿನ ಶೈಕ್ಷಣಿಕ ವಿಚಾರವಾದಿಗಳು, ಪ್ರಗತಿಪರ ಸಮಾಜವಾದಿ ಚಿಂತಕರು ಸ್ಪಷ್ಟ ಸೈದ್ಧಾಂತಿಕ ಹೋರಾಟದ ದಾರಿ ತೋರುತ್ತಾ ಅಭಿವೃದ್ಧಿಗಾಗಿ ಸಾಗುವಲ್ಲಿ ಮಾರ್ಗದರ್ಶನ ನೀಡುತ್ತಿರುವುದರಿಂದ ಉತ್ತಮ ಹಂತ ತಲುಪುತ್ತಿದ್ದಾರೆ ಎನ್ನಬಹುದು.

ಅಭಿವೃದ್ಧಿ ಯೋಜನೆಗಳನ್ನು ಸಮುದಾಯಗಳ ಪರಿಸರಕ್ರಮ ತಿಳಿದು ತಳಮಟ್ಟದಿಂದ ರೂಪಿಸಬೇಕು. ಸಮುದಾಯಗಳನ್ನು ಸಂಪರ್ಕಿಸಿ ಅವರ ಅಭಿಪ್ರಾಯ. ಕಷ್ಟ ನಷ್ಟಗಳು ಹಾಗೂ ಅವರ ಅಭಿವೃದ್ಧಿಗಾಗಿ ಬೇಕಾಗುವ ಅವಶ್ಯಕ ಸಹಾಯ, ಸಲಕರಣೆಗಳನ್ನು ಒದಗಿಸಿದಲ್ಲಿ ಮಾತ್ರ ಅವರನ್ನು ಪ್ರಗತಿ ಪಥದಲ್ಲಿ ಮುನ್ನಡೆಸಲು ಅನುಕೂಲವಾಗುತ್ತದೆ.

****

ಅಡಿಟಿಪ್ಪಣಿಗಳು

೧) ಟಿ.ಆರ್. ಚಂದ್ರಶೇಖರ್, ಅಮಾರ್ತ್ಯಸೇನ್‌ರ ಅಭಿವೃದ್ಧಿ ಕಥನ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯

೨) Chaturbuj Salu, Inidan Tribal Life, New Delhi. Surup and sons 2001, P - 25

೩) Tripathy S.N. Tribals in Inida. The changing Secnario N.D. New Delhi Discovery Publication House 1998. P – 26

೪) Renuka Patnaik, Tribal Ecology and Development 2002. P- 47

೫) ಮಧು – ಕರ್ನಾಟಕ ಬುಡಕಟ್ಟು ಜನಾಂಗಗಳ ಅಭಿವೃದ್ಧಿ. ಪುಟ – ೧೮೨

೬) Tripathy S.N. Tribals in Inida. The changing Secnario N.D. New Delhi Discovery Publication House 1998. P – 26

೭) ವಕ್ತೃ – ಜಾಜಿ ತಿಮ್ಮಯ್ಯ ಅರಹಳ್ಳಿ, ಹುಣಸೂರು ತಾಲ್ಲೂಕು ಸಂದರ್ಶನ ೧೩.೦೩.೨೦೦೪

೮) ವಕ್ತೃ – ಗಣೇಶ್ ಕೊರಗ, ಕುಂದಾಪುರ. ಸಂದರ್ಶನ ೨೦.೦೫.೨೦೦೪

೯) ವಕ್ತೃ – ಮಾದೇಶ, ಹೆಚ್.ಡಿ.ಕೋಟೆ ಸಂದರ್ಶನ ೯.೩.೨೦೦೪

೧೦) ವಕ್ತೃ – ಜಾಜಿ ತಿಮ್ಮಯ್ಯ ಅರಹಳ್ಳಿ, ಹುಣಸೂರು ತಾಲ್ಲೂಕು ಸಂದರ್ಶನ ೧೩.೦೩..೨೦೦೪

೧೧)ವಕ್ತೃ – ಶ್ರೀಕಾಂತ್ ಡೀಡ್ ಸಂಸ್ಥೆ ಹುಣಸೂರು ಸಂದರ್ಶನ ೧೩.೩.೨೦೦೪

೧೨)ವಕ್ತೃ – ನಾಗಮಣಿ ಬಲ್ಲೇನಹಳ್ಳಿ, ಹುಣಸೂರು ಸಂದರ್ಶನ ೧೩.೩.೨೦೦೪

೧೩)ವಕ್ತೃ – ಬಾಬು, ಪುತ್ತೂರು ಸಂದರ್ಶನ ೧೭.೫.೨೦೦೪

ಅಧ್ಯಾಯ: ೭

ಸಮಾರೋಪ

೧. ಅಧ್ಯಯನದ ಫಲಿತಗಳು

೨. ಸಲಹೆಗಳು

೩. ಮುಂದಿನ ಅಧ್ಯಯನದ ಸಾಧ್ಯತೆಗಳು

ಸಮಾರೋಪ

ಮೂಲನಿವಾಸಿ ಬುಡಕಟ್ಟು ಸಮುದಾಯಗಳಾದ ಜೇನುಕುರುಬ ಹಾಗೂ ಕೊರಗರ ಪರಿಸರ ಮತ್ತು ಅಭಿವೃದ್ಧಿಯಲ್ಲಿನ ವಿವಿಧ ಅಂಶಗಳನ್ನು ಕುರಿತು ಈ ಮಹಾ ಪ್ರಬಂಧದ ಏಳು ಅಧ್ಯಾಯಗಳಲ್ಲಿ ಅನೇಕ ಹೊಸ ವಿಷಯಗಳನ್ನು ನಿರೂಪಿಸಲಾಗಿದೆ.

ಮೂಲನಿವಾಸಿ ಬುಡಕಟ್ಟು ಸಮುದಾಯಗಳು ತೀರಾ ಹಿಂದುಳಿದಿದ್ದು, ಅರಣ್ಯ ಪ್ರದೇಶ, ಗುಡ್ಡಗಾಡು, ಬಯಲು ಪ್ರದೇಶದಲ್ಲಿ ಅತಿ ಕಡಿಮೆ ಮಟ್ಟದ ಶಿಕ್ಷಣ ಪಡೆದು ಅಲ್ಪ ಜನರಾಗಿ ಕಂಡುಬರುವರು. ಬಹುತೇಕ ಮೂಲನಿವಾಸಿ ಬುಡಕಟ್ಟು ಸಮುದಾಯ ಪರಕೀಯ ಮೇಲ್ಜಾತಿ ಅಲ್ಪ ಜನರ ಅಧೀನದಲ್ಲಿ ನಿಕೃಷ್ಟ ಬದುಕು ನಡೆಸುತ್ತಿರುವುದನ್ನು ಕಾಣಬಹುದು. ಅಂತೆಯೇ ಈ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಜಗತ್ತಿನ ವೈವಿಧ್ಯತೆ ಚರ್ಚಿತ ವಿಷಯವಾಗಿ ಉಳಿದಿದೆ. ಎಲ್ಲಿಯೂ ಜನರ ಬದುಕು ಕಟ್ಟಿಕೊಡುವ ಜೀವನಕ್ರಮದಲ್ಲಿ ಪರಿಸರವನ್ನು ಗುರುತಿಸಿರುವುದು ಸಿಗುವುದಿಲ್ಲ. ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲೇ ವಿಶಿಷ್ಟ ಸ್ಥಾನಗಳಿಸಿರುವ ಎರಡು ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಬಹುತೇಕ ಸಂಸ್ಕೃತೀಕರಣದ ಪ್ರಭಾವಕ್ಕೆ ಒಳಗಾಗಿವೆ. ಕೆಲವೊಂದು ವಿಚಾರಗಳಲ್ಲಿ ತೀರಾ ಹಿಂದುಳಿದ ಮೂಲನಿವಾಸಿ ಬುಡಕಟ್ಟು ಸಮುದಾಯಗಳೆಂದು ಗುರುತಿಸುವುದು ಕಷ್ಟಸಾಧ್ಯ. ಸುಮಾರು ಕುಟುಂಬಗಳು ಇನ್ನೂ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗದೇ ಕಡುಬಡತನದಲ್ಲಿ ಬದುಕುತ್ತಿರುವುದರಿಂದ ಸಮುದಾಯಗಳ ಆರ್ಥಿಕ ಸಮಸ್ಯೆಗಳಿಗೆ ನಿಜವಾದ ಕಾರಣ ಕಂಡುಹಿಡಿಯುವಲ್ಲಿ ಪ್ರಕೃತಿ ನಿಯಮ ಒಂದು ಪರಿಹಾರ ಮಾರ್ಗವೆಂದೇ ಬಾವಿಸಲಾಗಿ ಚರ್ಚಿಸಲಾಗಿದೆ.

ಸಮುದಾಯಗಳ ಆರ್ಥಿಕ ಸಮಸ್ಯೆಗಳನ್ನು ಆಯಾ ಸಮುದಾಯದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯ ಜೊತೆಗೆ ಅಧ್ಯಯನ ಮಾಡಿದಾಗ ಸಮುದಾಯಗಳ ನಡುವೆ ಅಂತರ ಕಾಣಬರುತ್ತದೆ. ಅಸಮಾನತೆ ಮಾನವನ ಪರಿಸರದಲ್ಲಿ ಹೆಚ್ಚು. ಪರಿಸರವೂ ಆರ್ಥಿಕ ವ್ಯವಸ್ಥೆಯ ಭಾಗವೂ ಸಹ ಆಗಿದೆ. ಅಲ್ಲದೇ ಅರ್ಥವ್ಯವಸ್ಥೆ ಮೂಲಭೂತವಾಗಿ ಮಾನವ ಸಮುದಾಯದ ಬದುಕಿನ ಭಾಗವಾಗಿದೆ. ಆದರಿಂದಲೇ ಜಗತ್ತಿನಲ್ಲಿ ಆರ್ಥಿಕ ಸಮಸ್ಯೆಗಳಷ್ಟು ಜನಮನವನ್ನು ಕದಡಿರುವ ಸಮಸ್ಯೆ ಮತ್ತೊಂದಿಲ್ಲ. ಆರ್ಥಿಕ ಸಮಸ್ಯೆಗಳು ಮಾನವನ ಇತಿಹಾಸದಷ್ಟೇ ಪುರಾತನವು. ಇವು ನಿರಂತರ ವಿಕಾಸನಗೊಳ್ಳುತ್ತಿವೆ. ಅರ್ಥವ್ಯವಸ್ಥೆಯು ಮನುಷ್ಯನ ಕುಲದಲ್ಲಿ ಜನಿಸಿ, ಬಹುಮುಖ್ಯ ಪಾತ್ರವಹಿಸುತ್ತಿದೆ. ಮನುಷ್ಯನ ಕುಲವು ಅರ್ಥವ್ಯವಸ್ಥೆಯ ಆಧಾರದ ಮೇಲೆ ಜೀವಿಸಿಕೊಂಡು ಬಂದಿದೆ. ಬಡತನ, ಬರಗಾಲ, ಹಸಿವು, ಅನಾರೋಗ್ಯ ಮತ್ತು ನಿರುದ್ಯೋಗ ಮುಂತಾದವುಗಳು ಮಾನವ ಸಮುದಾಯಗಳ ಚೌಕಟ್ಟಿನ ನೆಲೆಯಲ್ಲಿ ಉದ್ಭವವಾಗುವುದರಿಂದ ಈ ಎಲ್ಲಾ ಸಮಸ್ಯೆಗಳಿಂದ ತಪ್ಪಿಸುವುದು ಅಸಾಧ್ಯ.

ರಾಜ್ಯದ ಎರಡು ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ-ಸಾಮಾಜಿಕ-ಆರ್ಥಿಕತೆಯಲ್ಲಿನ ಮೂಲಗಳಲ್ಲಿಯೂ ವ್ಯತ್ಯಾಸಗಳಿವೆ. ಆಯಾ ಸಾಮಾಜಿಕ ಪರಿಸರ ಕ್ರಮದಂತೆ ರೂಢಿಯಲ್ಲಿರುವ ಏಣಿ-ಶ್ರೇಣಿ ಅಂಶಗಳು ಸಹ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯಲ್ಲಿ ಒಡಗೂಡಿವೆ. ಹೀಗಿದ್ದೂ ಕೂಡ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಅನೇಕ ವೈಶಿಷ್ಟ್ಯಪೂರ್ಣ ಲಕ್ಷಣಗಳಿಂದ ವಿಶೇಷ ಸ್ಥಾನ ಪಡೆದಿದ್ದಾರೆ. ಅವರದೇ ಆದ ವಿಶಿಷ್ಟ ಸಾಮಾಜಿಕ-ಸಾಂಸ್ಕೃತಿಕ ಪದ್ಧತಿಗಳು ಹಾಗೂ ಅನೇಕ ಶತಮಾನಗಳ ಕಾಲ ಅವರ ಜೀವನಶೈಲಿಯಲ್ಲಿ ಕನಿಷ್ಠ ಬದಲಾವಣೆಯನ್ನಿಟ್ಟುಕೊಂಡು ಅವರು ನಡೆಸಿದ ಬದುಕು ಅವರನ್ನು ಈ ಜನಸಂಖ್ಯೆಯ ಒಂದು ವೈಶಿಷ್ಟ ಅಂಗವನ್ನಾಗಿ ಮಾಡಿದೆ. ಜೊತೆಗೆ ರಾಷ್ಟ್ರೀಯ ಜೀವನದ ಮುಖ್ಯವಾಹಿನಿಯಿಂದ ದೂರವಾಗಿಸಿತು. ಅರ್ಥವ್ಯವಸ್ಥೆಯೂ ಕೂಡ ಅವರುಗಳಂತೆಯೇ ವೈಶಿಷ್ಟ ಪೂರ್ಣವಾಗಿದ್ದಿತ್ತು. ಅರ್ಥವ್ಯವಸ್ಥೆಯನ್ನು ಸರಿಗಟ್ಟುವಲ್ಲಿ ಪ್ರಾಚೀನ ಕಾಲದ ತಂತ್ರಜ್ಞಾನ ಇಲ್ಲವೆ ಶ್ರಮಶಕ್ತಿಯ ಬಳಕೆಯೇ ಮೂಲವಾಗಿದೆ. ಹೀಗಾಗಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಜನರು ಹಾಗೂ ಇನ್ನಿತರ ಬುಡಕಟ್ಟು ಜನಸಂಖ್ಯೆಯ ನಡುವೆ ಒಂದು ನಿಖರವಾದ ಅಂತರ ಕಂಡು ಬರುತ್ತದೆ ಎನ್ನಬಹುದಾಗಿದೆ.

ಕರ್ನಾಟಕದ ಮಟ್ಟಿಗೆ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಮೇಲೆ ಕೆಲವು ಅಧ್ಯಯನಗಳು ನಡೆದಿವೆ. ಆದರೆ ಎರಡು ಸಮುದಾಯಗಳನ್ನೊಳಗೊಂಡ ಪರಿಸರ ವ್ಯವಸ್ಥೆಯಲ್ಲಿನ ಅರ್ಥಶಾಸ್ತ್ರೀಯ ದೃಷ್ಟಿಕೋನದ ಅಧ್ಯಯನ ಆಗಿಲ್ಲವೆಂದರೆ ತಪ್ಪಾಗಲಾರದು. ಹೀಗಾಗಿ "ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನ ಮಾಡಲಾಗಿದೆ." ಈ ಪರಿಸರದ ಸಂರಕ್ಷಣೆಯು ಸಮುದಾಯಕ್ಕೆ ಅತ್ಯಾಧಿಕ ನಿರಂತರವಾದ ಅಭಿವೃದ್ಧಿಯನ್ನು ಕೊಡುವುದರ ಜೊತೆಗೆ ಭವಿಷ್ಯತ್ತಿನ ಪೀಳಿಗೆಗೆ ಅಗತ್ಯ ಆಕಾಂಕ್ಷೆಗಳನ್ನು ಪೂರೈಸುವ ಸುಪ್ತ ಸಾಮರ್ಥ್ಯದ ರಕ್ಷಣೆಯನ್ನುಂಟು ಮಾಡುತ್ತದೆ. ಸಮುದಾಯಗಳ ಆರ್ಥಿಕ ಅಭಿವೃದ್ಧಿ ಎಂದಲ್ಲಿ ವಾರ್ಷಿಕ ಪ್ರದೇಶವೊಂದರ ಅಥವಾ ದೇಶದ ನೈಜ ಉತ್ಪನ್ನ ಎಂದರ್ಥ. ಈ ಮಾನದಂಡವನ್ನು ಇಲ್ಲಿ ಬಳಸಲಾಗದು. ಏಕೆಂದರೆ ಇಲ್ಲಿ ಲೆಕ್ಕಚಾರಕ್ಕೆ ಬೇಕಾದ ಅಂಕಿ-ಅಂಶಗಳು ಆರ್ಥಿಕ ನೆಲೆಯಲ್ಲಿ ಸಮುದಾಯಗಳ ಪ್ರಕಾರ ಲಭ್ಯವಿಲ್ಲ. ಆದರಿಂದಲೇ ನಿರ್ದಿಷ್ಟ ಸಮುದಾಯದ ವೃತ್ತಿ ಅಥವಾ ಕಸುಬುಗಳ ಆರ್ಥಿಕ ಕ್ಷೇತ್ರಗಳಲ್ಲಿನ ಪ್ರಾತಿನಿಧ್ಯ ಆಧರಿಸಿ ಸತ್ಯಕ್ಕೆ ಸಮೀಪವಾದ ಸಾರ್ವತ್ರಿಕ ಅಭಿಪ್ರಾಯ ನಿರೂಪಿಸಲಾಗಿದೆ.

ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ ಎಂಬ ಮಹಾ ಪ್ರಬಂಧವು ಹಲವು ಪೂರಕ ಗ್ರಂಥಗಳು, ಸರ್ಕಾರಿ ಇಲಾಖೆಗಳ ಪ್ರಕಟಣೆಗಳು, ಕ್ಷೇತ್ರ ಮಾಹಿತಿಯ ಸಹಾಯದಿಂದ ರೂಪುಗೊಂಡಿದೆ. ಬಹುತೇಕ ಅಧ್ಯಯನವು ಕ್ಷೇತ್ರವನ್ನೇ ಆಧರಿಸಿದ್ದಾಗಿದೆ. ಸರ್ಕಾರಿ ಇಲಾಖೆಗಳು ನೀಡುವ ಹೆಚ್ಚಿನ ಪುರಾವೆಗಳನ್ನು ನಂಬದೆ

ಸಮುದಾಯಗಳ ಕ್ಷೇತ್ರವನ್ನು ಪರಿವೀಕ್ಷಣ ಕ್ರಮದೊಂದಿಗೆ ಮಾಹಿತಿ ಪಡೆಯಲಾಗಿ ವಿಶ್ಲೇಷಿಸಲಾಗಿದೆ. ಹೆಚ್ಚಿನ ಮಾಹಿತಿ ಕ್ಷೇತ್ರವನ್ನೇ ಆಧರಿಸಿದ್ದಾಗಿದೆ.

ಪ್ರಥಮ ಅಧ್ಯಾಯವು ಪ್ರವೇಶ ಎಂಬ ಪ್ರಸ್ತಾವನೆ ಭಾಗದಿಂದ ಪ್ರಾರಂಭಿಸಲಾಗಿದೆ. ಈ ಅಧ್ಯಾಯದಲ್ಲಿ ರಾಜ್ಯದ ಎರಡು ಮೂಲನಿವಾಸಿ ಬುಡಕಟ್ಟು ಸಮುದಾಯಗಳಾದ ಜೇನುಕುರುಬ ಮತ್ತು ಕೊರಗರ ಕುರಿತಾದ ಅಧಿಕೃತ ಪ್ರಕಟಣೆಯಂತೆ ಅಧ್ಯಯನದ ಪ್ರಾಮುಖ್ಯತೆಯನ್ನು ನಿರ್ಧರಿಸುತ್ತದೆ. ಪ್ರಸ್ತುತ ಸಂಶೋಧನೆಯ ಉದ್ದೇಶಗಳು, ಪೂರ್ವಕಲ್ಪನೆಗಳು, ವ್ಯಾಪ್ತಿ, ಅಳವಡಿಸಿಕೊಂಡ ವಿಧಾನಗಳ ಮೇಲೆ ಬೆಳಕು ಚೆಲ್ಲುತ್ತದೆ.

ದ್ವಿತೀಯ ಅಧ್ಯಾಯವು ಸೈದ್ಧಾಂತಿಕ ಮತ್ತು ನಿದರ್ಶನಾತ್ಮಕ ಅಧ್ಯಯನ ಎಂಬ ಶೀರ್ಷಿಕೆ ಹೊಂದಿದೆ. ರಾಜ್ಯದ ೫ ಜಿಲ್ಲೆಗಳ ೧೫ ತಾಲ್ಲೂಕಿನಲ್ಲಿ ನೆಲೆಸಿರುವ ಸಮುದಾಯಗಳ ಪರಿಸರದ ಹಿನ್ನೆಲೆಯಲ್ಲಿನ ಸಂಕ್ಷಿಪ್ತ ವಿವರಗಳನ್ನು ಒದಗಿಸಲಾಗಿದೆ. ಸಮುದಾಯಗಳ ಪರಿಸರ, ಭೌಗೋಳಿಕ ರಚನೆ, ಸಮುದಾಯಗಳ ಹಿನ್ನೆಲೆಯ ಸಂಕ್ಷಿಪ್ತ ಪರಿಚಯ ಚಾರಿತ್ರಿಕವಾದ ಮನ್ನಣೆಯೊಂದಿಗೆ ನೀಡಲಾಗಿದೆ. ಭೌಗೋಳಿಕ ಪರಿಸರದ ಕ್ರಮ, ಸಾಮಾಜಿಕ ಸಂರಚನೆಯ ಜೀವನಕ್ರಮ, ಮೂಲಭೂತ ಸೌಲಭ್ಯಗಳು ಹಾಗೂ ಸಮುದಾಯಗಳ ಹಲ-ಕೆಲವು ಅಧ್ಯಯನದೊಂದಿಗೆ ಪರಿಸರದ ಮಹತ್ವ ಈ ಅಧ್ಯಯನದ ತೋಳ್ತತೆಕ್ಕೆಯಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಅತಿ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಸಮುದಾಯಗಳು ರಾಜ್ಯದ ಕಂದಾಯ ವಿಭಾಗಗಳಲ್ಲಿ ಒಂದಾದ ಮೈಸೂರು ವಿಭಾಗದಲ್ಲಿ ಮಾತ್ರ ನೆಲೆಸಿರುವರು. ಮೈಸೂರು ವಿಭಾಗದ ೮ ಜಿಲ್ಲೆಗಳ ಪೈಕಿ, ೫ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಅವುಗಳೆಂದರೆ ಚಾಮರಾಜನಗರ, ಮೈಸೂರು, ಕೊಡಗು, ದ.ಕನ್ನಡ, ಉಡುಪಿ, ಜಿಲ್ಲೆಗಳಾಗಿವೆ. ಈ ಎಲ್ಲಾ ಜಿಲ್ಲೆಗಳ ೧೫ ತಾಲ್ಲೂಕು ವ್ಯಾಪ್ತಿಯ ಗಡಿಭಾಗದ ಸರಹದ್ದಿನಲ್ಲಿ ಸಮುದಾಯಗಳು ನೆಲೆಸಿರುವುದು ಒಂದು ವಿಶೇಷತೆ ಎನ್ನಬಹುದು. ಆಗಿದ್ದು ಸಮುದಾಯಗಳು, ಗ್ರಾಮ, ನಗರ, ಮಹಾನಗರ ಪಾಲಿಕೆ, ಪುರಸಭೆಯ ಆಡಳಿತದ ವ್ಯಾಪ್ತಿಯಲ್ಲಿನ ಅರಣ್ಯ, ಬೆಟ್ಟಗುಡ್ಡ, ತೀರಪ್ರದೇಶ ಮತ್ತು ಬಯಲುಸೀಮೆ ಪ್ರದೇಶಗಳಿಂದ ಕೂಡಿರುವ ವಿಶಾಲವ್ಯಾಪ್ತಿಯಲ್ಲಿ ನೆಲೆಸಿದ್ದಾರೆ. ೨೦೦೧ನೇ ಸಾಲಿನ ಜನಗಣತಿಯ ಪ್ರಕಾರ ಸುಮಾರು ೧೦,೬೭೭ ಕುಟುಂಬಗಳನ್ನೊಳಗೊಂಡು ೩೭,೯೯೨ ಜನರಿರುವುದಾಗಿ ತಿಳಿದು ಬರುತ್ತದೆ.

ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಅರಣ್ಯವಾಸಿಗಳು, ದ್ರಾವಿಡರೆಂದು ಇತಿಹಾಸದಿಂದ ತಿಳಿದು ಬರುತ್ತದೆ. ಹೀಗಾಗಿ ಪ್ರತಿ ಸಮುದಾಯವನ್ನು ಎರಡು ಭಾಗದಲ್ಲಿ ಚರ್ಚಿಸಲಾಗಿದೆ. ಎರಡು ಸಮುದಾಯಗಳು ನೆಲೆನಿಂತ ಪರಿಸರ ಭಿನ್ನವಾಗಿರುವುದೇ ಕಾರಣಕ್ಕೆ ಮೊದಲ ಭಾಗದಲ್ಲಿ ಭೌಗೋಳಿಕ ಪ್ರದೇಶ. ಜನಸಂಖ್ಯೆ, ನೈಸರ್ಗಿಕ ಸಂಪತ್ತು ಮತ್ತು ಸಮುದಾಯಗಳ ಕಾಲೋನಿಗಳಲ್ಲಿನ ಮೂಲಭೂತ ಸೌಲಭ್ಯ ಹಾಗೂ ಭೌತಿಕ ನೆರವು ಕುರಿತು

ಅಂಕಿ ಅಂಶಗಳ ಸಂಖ್ಯೆ ಸಮೇತ ವಿಶ್ಲೇಷಿಸಲಾಗಿದೆ. ಇದರಿಂದಾಗಿ ಸಮುದಾಯಗಳು ನೆಲೆನಿಂತಿರುವ ತಾಣಗಳಲ್ಲಿ ಅರಣ್ಯಪ್ರದೇಶ ಮತ್ತು ಸರ್ಕಾರದ ಭೂಮಿಯು ಹೆಚ್ಚಾಗಿರುವ ಅಂಶ ತಿಳಿದು ಬರುತ್ತದೆ. ಸಾಮಾಜಿಕ ಜೀವನಕ್ರಮದಲ್ಲಿ ಬದಲಾದ ವಾಸಸ್ಥಾನದೊಂದಿಗೆ ರೂಢಿಸಿಕೊಂಡ ಸಾಂಸ್ಕೃತಿಕ ಪರಿಸರ ವ್ಯವಸ್ಥೆಯಲ್ಲಿನ ಮೂಲಾಂಶಗಳನ್ನು ಅಧ್ಯಯನಕ್ಕೆ ಪೂರಕವೆಂಬಂತೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಮೂರನೆ ಅಧ್ಯಾಯನವು ಸಾಮಾಜಿಕ-ಆರ್ಥಿಕ ಸ್ಥಿತಿಗತಿ ವಿಶ್ಲೇಷಣೆ ಎಂಬ ಶೀರ್ಷಿಕೆಯನ್ನು ಹೊಂದಿದ್ದು, ಎರಡು ಸಮುದಾಯಗಳನ್ನು ಪ್ರತ್ಯೇಕವಾಗಿ ದತ್ತ ಮಾಹಿತಿಯ ಅಂಕಿ-ಅಂಶಗಳ ಸಹಿತ ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ೨ ಭಾಗಗಳಾಗಿ ವಿಂಗಡಿಸಲಾಗಿದ್ದು, ಅಭಿವೃದ್ಧಿಯ ಮಾರ್ಗದಲ್ಲಿ ಬಹು ಮುಖ್ಯ ಮೂಲಾಂಶವೆಂದೇ ಪರಿಗಣಿತವಾಗುವ ಸಾಮಾಜಿಕ-ಆರ್ಥಿಕ-ಶೈಕ್ಷಣಿಕ ಅಂಶಗಳು ಪ್ರಥಕ್ಕರಿಸಿ ನೀಡಲಾಗಿದೆ. ಪ್ರಸ್ತುತ ಜೀವನದ ಸನ್ನಿವೇಶದಲ್ಲಿ ಕುಟುಂಬಗಳ ಗಾತ್ರ. ಲಿಂಗಾನುಪಾತ, ಶಿಕ್ಷಣದ ಪ್ರಸರಣ ಮೇಲುಗೈ ಸಾಧಿಸುತ್ತಿರುವ ಬಗ್ಗೆ ಚಿಂತನೆ ನಡೆಸಲಾಗಿದೆ.

ಸಾಮಾನ್ಯವಾಗಿ ಜನರ ಲೋಕ ದೃಷ್ಟಿಯಲ್ಲಿ ಸಾಮಾಜಿಕ-ಆರ್ಥಿಕತೆ ಜೋಡಿ ಪದಗಳಂತೆ ಉಚ್ಚಾರಗೊಳ್ಳುತ್ತಿರುವುದು ಹೌದು. ಒಂದಕ್ಕೊಂದು ಪೂರಕವೆಂಬಂತೆ ಜೋಡಿಸಲ್ಪಟ್ಟಿವೆ ಎನ್ನಬಹುದು. ಹೀಗಾಗಿ ಸಮುದಾಯಗಳ ಅಭಿವೃದ್ಧಿಯಲ್ಲಿ ಎರಡು ಮುಖ್ಯಚಲಕಗಳೆಂದು ಭಾವಿಸಲಾಗಿದೆ. ಈ ಬಗ್ಗೆ ಆಯ್ಕೆಮಾಡಲಾದ ಕಾಲೋನಿಗಳಲ್ಲಿನ ಜನರ ಜೀವನಕ್ರಮದ ನಿರ್ದಿಷ್ಟ ರೂಪತಿಳಿಯಲಾದಂತೆ ಅನೇಕ ಏರುಪೇರುಗಳು ಕಂಡುಬರುತ್ತವೆ. ಸುಮಾರು ೪೦ ವರ್ಷಗಳಿಂದ ಪುನರ್‌ವಸತಿ, ಸ್ಥಳಾಂತರದ ಕಾರ್ಯಪಡೆಯುತ್ತಿದ್ದರೂ, ಮೂಲಭೂತಸೌಲಭ್ಯಗಳಿಂದ ಸಮುದಾಯಗಳು ವಂಚಿತವಾಗಿರುವುದು ಕಾಣಬರುತ್ತದೆ. ತೀರಾ ಹಿಂದುಳಿದ ಎಂಬ ಹಣೆಪಟ್ಟಿ, ವಿಶೇಷ ಸೌಲಭ್ಯ ಮತ್ತು ಮೀಸಲಾತಿ ನೀಡಿದ್ದರೂ ಈ ಜನರು ಅಸ್ಪೃಶ್ಯರಾಗಿ ಸಾಮಾಜಿಕ-ಆರ್ಥಿಕ-ಧಾರ್ಮಿಕ, ರಾಜಕೀಯವಾಗಿ ಶೋಷಣೆಗೆ ಗುರಿಯಾಗಿರುವ ಅಂಶ ತಿಳಿದು ಬರುತ್ತದೆ.

ಜಾತಿ ಪದ್ಧಿತಿಯು ಕಂಪ್ಯೂಟರ್‌ಯುಗದ ಜಾಗತೀಕರಣದ ಸಂದರ್ಭದಲ್ಲಿಯೂ ತನ್ನ ಕದಂಬ ಬಾಹುಗಳನ್ನು ಚಾಚಿಕೊಂಡು ವಿಸ್ತರಿಸುತ್ತಿರುವುದು ಸಮುದಾಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಸಮುದಾಯಗಳು ವಾಸಿಸುವ ನೆಲೆಗಳನ್ನು ಗುರುತಿಸಲಾಗಿದ್ದು, ದತ್ತ ಮಾಹಿತಿಯನ್ನು ಆಧರಿಸಿ ಪ್ರಾದೇಶಿಕ, ಸಮುದಾಯವಾರು ಅಂಕಿ-ಅಂಶಗಳು ದಾಖಲಿಸಲಾಗಿದೆ. ಕಾಲದ ಅವಶ್ಯಕತೆಗೆ ಅನುಗುಣವಾಗಿ ಕುಟುಂಬಗಳ ಗಾತ್ರದಲ್ಲಿ ಪರಿವರ್ತನೆ ಸಾಮಾನ್ಯವಾಗಿದೆ. ಜೇನುಕುರುಬರ ಕುಟುಂಬದಲ್ಲಿಸರಾಸರಿ ೩ ರಿಂದ ೪ ಜನರು ನೆಲೆಗೊಂಡಿದ್ದರೆ, ಕೊರಗರಲ್ಲಿ ೪ ಜನರ ಪ್ರಮಾಣದಲ್ಲಿದೆ. ಶಿಕ್ಷಣದ ಪ್ರಮಾಣದಲ್ಲಿಯೂ ಸಮುದಾಯಗಳು ಬದಲಾವಣೆಯನ್ನ ಬಯಸಿವೆ. ಆಯಾ ಸಮುದಾಯಗಳಲ್ಲಿನ ಸಂಘಟಿತ

ನಾಯಕತ್ವ ಹೊರಬರುವ ಮೂಲಕ ಶೈಕ್ಷಣಿಕ ಮಹತ್ವಕ್ಕೆ ಹೆಚ್ಚಿನ ಪ್ರಾದಾನ್ಯತೆ ನೀಡುವರಾಗಿದ್ದಾರೆ. ಆದರೂ ಇವರುಗಳಲ್ಲಿ ಹಿಂಬಾಲಕರ ನಡೆ ನುಡಿಯ ಅನುಕರಣೆ ರೂಢಿಯಾಗಿ ತಮ್ಮ ತಮ್ಮಲ್ಲಿಯೇ ಅಸೂಯೆಪಡುವಂತಹ ಮಟ್ಟಕ್ಕೆ ತಲುಪುತ್ತಿರುವುದು ವಿಷಾದನೀಯ. ಇತ್ತೀಚಿನ ದಿನಗಳಲ್ಲಿ ಚುನಾಯಿತ ಪ್ರತಿನಿಧಿಗಳ ಸ್ವಯಂಸೇವಕರಂತೆ ಕಾಲೋನಿಗಳಲ್ಲಿ ನೆಲೆಸಿ, ಕಾಲೋನಿಯ ಹಿರಿಯರನ್ನು ತೆಗಳುವರಾಗಿ ಕಾಣಬರುತ್ತಾರೆ.

ಆರ್ಥಿಕತೆಯು ಆಧುನೀಕತೆಯ ಸೌಲಭ್ಯಗಳಿಂದ ಬದಲಾಗಿದೆ. ಆದರೆ ಬದಲಾದ ಸ್ಥಿತಿಗತಿ ಮತ್ತದೇ ಬಡತನದ ವಿಷಚಕ್ರದಂತಿದೆ. ಆರ್ಥಿಕತೆಯ ಸಬಲೀಕರಣಕ್ಕೆ ಭೂ ಹಿಡುವಳಿ ಮತ್ತು ಉದ್ಯೋಗಗಳು ಮೂಲಾಧಾರ. ಹೀಗಾಗಿ ಬದಲಾದ ಸ್ಥಿತಿ ಮೂಲ ಉದ್ಯೋಗಗಳನ್ನು ಬದಲಾಯಿಸಿರುವುದು ನಿಜ. ಆದರೆ ಬದಲಾದ ಉದ್ಯೋಗ ಮಾತ್ರ ಪಾರಂಪರಿಕವಾಗಿ ಬೆಳೆದು ಬಂದಿದ್ದ ಉದ್ಯೋಗಗಳಿಗಿಂತ ಹೆಚ್ಚಿನ ಮಹತ್ವದವುಗಳು ಅಲ್ಲವೆನ್ನಬಹುದು. ಒಂದೆಡೆ ಸರ್ಕಾರದ ಪುನರ್‌ವಸತಿ ಉದ್ಯೋಗ ದೊರಕಿಸಿಕೊಡುವಲ್ಲಿ ವಿಫಲವಾಗಿದ್ದರಿಂದ ಆಯಾ ಸ್ಥಳೀಯ ಪರಿಸರ ಮತ್ತು ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದೆ. ಪ್ರಸ್ತುತದ ದಿನಗಳಲ್ಲಿ ಸಮುದಾಯಗಳ ಮಾನವ ಸಂಪನ್ಮೂಲ ಸಕ್ರೀಯವಾಗಿ ತೊಡಗಿಸಿಕೊಂಡಿರುವ ಕ್ಷೇತ್ರಗಳೇ ದಿನಕೂಲಿ ಕೃಷಿಕಾರ್ಮಿಕ, ಮೂರುಕಾಸಿನ ವ್ಯಾಪಾರ, ವ್ಯವಸಾಯ ಮತ್ತು ಹಂಗಾಮಿ ಕೆಲಸ ಉಳಿದಂತೆ ಕೆಲವರು ಸರ್ಕಾರಿ ಕೆಲಸದ "ಡಿ" ದರ್ಜೆಯ ನೌಕರರಾಗಿದ್ದಾರೆ. ಈ ಎಲ್ಲಾ ಉದ್ಯೋಗಗಳಿಂದ ಗಳಿಸುತ್ತಿರುವ ಆದಾಯವು ಉತ್ತಮ ಜೀವನಕ್ಕೆ ಸಹಾಯಕವಾಗದ ಪ್ರಮಾಣದಲ್ಲಿದೆ ಎನ್ನಬಹುದು.

ಆರ್ಥಿಕತೆಯಲ್ಲಿ ಮೂಲನಿವಾಸಿ ಬುಡಕಟ್ಟು ಸಮುದಾಯಗಳು ಹಿಂದುಳಿದ ಅಸ್ಪೃಶ್ಯ ಸಮುದಾಯಗಳಾಗಿವೆ. ಭೌತಿಕ ಆಸ್ತಿಯ ರೂಪದಲ್ಲಿ ಭೂಮಿಯೂ ಸಮನಾಗಿ ಹಂಚಿಕೆಯಾಗದಿರುವುದರಿಂದ ಮತ್ತು ಭೌತಿಕ ಆಸ್ತಿಯಾದ ಶಿಕ್ಷಣ, ತರಬೇತಿ, ಕೌಶಲ್ಯ ಉತ್ತಮ ಭೂಮಿಕೆಯನ್ನು ನಿರ್ಮಿಸಿ ಕೊಟ್ಟಿಲ್ಲದಿರು ಕಾಣಬರುತ್ತದೆ. ಪ್ರತಿ ಕುಟುಂಬವು ಬೌತಿಕ ಮತ್ತು ಬೌದ್ಧಿಕ ಆಸ್ತಿಯ ರೂಪದಲ್ಲಿನ ಮೂಲಾಂಶಗಳ ಒಡೆತನ ಹೊಂದಿರಬೇಕಾಗುತ್ತದೆ. ಸಮುದಾಯಗಳನ್ನು ತೌಲನಿಕವಾಗಿ ವಿಶ್ಲೇಷಿಸಿದಾಗ, ಶೈಕ್ಷಣಿಕ ಪ್ರಗತಿಯಲ್ಲಿ ಜೇನುಕುರಬರು ಶೇ ೨೮% ಕೊರಗರು ಶೇ ೫೭% ಅಕ್ಷರ ಲೋಕಕ್ಕೆ ತೆರಳಿದವರಾಗಿದ್ದಾರೆ. ಅಕ್ಷರ ಜ್ಞಾನದ ಕ್ರಾಂತಿಗೆ ಅನೇಕ ಸೇವಾ ಸುಧಾರಕರ ಪಾತ್ರ, ಕೊಡುಗೆ ಅಪಾರವಾದದ್ದು. ಶೈಕ್ಷಣಿಕ ಪ್ರಗತಿಯ ಹೆಚ್ಚಿನ ಮಾಹಿತಿಯನ್ನು ರೇಖಾ ಚಿತ್ರದ ಮೂಲಕ ತೌಲನಿಕವಾಗಿ ವಿಶ್ಲೇಷಿಸಿ ನೀಡಲಾಗಿದೆ.

ಆರ್ಥಿಕತೆಗೆ ಆಧಾರವಾದ ಭೂ ಹಂಚಿಕೆಯ ಪ್ರಮಾಣದಲ್ಲಿಯೂ ಎರಡು ಸಮುದಾಯಗಳ ನಡುವೆ ಅಂತರ ಕಂಡುಬರುವುದು. ಭೂಮಿಯನ್ನು ಪಡೆದ ಕುಟುಂಬಗಳಲ್ಲಿ ಶೇ.೫೯% ಜೇನುಕುರುಬರಾದರೆ, ಶೇ.೩೮% ಕೊರಗರು ಪಡೆದಿದ್ದಾರೆ. ಎಕರೆವಾರು ವಿಸ್ತೀರ್ಣದಲ್ಲಿಯೂ ೧ ಎಕರೆಯಿಂದ ೪ ಎಕರೆವರೆಗೆ ಇಳಿಕೆ ಪ್ರಮಾಣದಲ್ಲಿ ಕೊರಗರಿದ್ದಾರೆ.

ಬಹುತೇಕ ಕೊರಗರು ನಗರದ ಆಸುಪಾಸು ನೆಲೆಸಿದ್ದು ಜೀವನ ನಿರ್ವಹಣೆಗಾಗಿ ಅನಿವಾರ್ಯ ವೃತ್ತಿಗಳನ್ನೆ ಅವಲಂಭಿಸಬೇಕಿದೆ. ತತ್ಪರಿಣಾಮವಾಗಿ ನಗರದ ಕಡೆಗೆ ಮುಖ ಮಾಡಿರುವುದರಿಂದ ವ್ಯವಸಾಯದಲ್ಲಿ ತೊಡಗಿಸಿ ಕೊಳ್ಳಲು ಸಾಧ್ಯಾವಾಗದಿರುವುದು ಕಾಣಬರುತ್ತದೆ. ವಾಸ್ತವದಲ್ಲಿ ಕೊರಗರಿಗೆ ವ್ಯವಸ್ಥಿತ ಪ್ರಮಾಣದಲ್ಲಿ ಭೂ ಹಂಚಿಕೆ ಮಾಡದಿರುವುದೇ ಮುಖ್ಯಕಾರಣವಾಗಿ ಕಂಡುಬರುತ್ತದೆ. ಹಂಚಿಕೆಯಾದ ಭೂಮಿಯ ವಿಸ್ತೀರ್ಣವನ್ನು ಅಂಕಿ-ಅಂಶಗಳ ಸಹಿತ ಚರ್ಚಿಸಲು ಪ್ರಯತ್ನಿಸಲಾಗಿದೆ.

ಎರಡನೇ ಭಾಗದಲ್ಲಿ ಎರಡು ಸಮುದಾಯಗಳಲ್ಲಿನ ಶೈಕ್ಷಣಿಕ, ಭೂಹಿಡುವಳಿ ಮತ್ತು ಆದಾಯವನ್ನು ತೌಲನಿಕವಾಗಿ ವಿಶ್ಲೇಷಿಸಲಾಗಿದೆ. ಆದಾಯದ ವರ್ಗೀಕರಣದಲ್ಲಿ ೪ ಹಂತಗಳನ್ನು ಗುರಿತಿಸಲಾಗಿದೆ. ಈ ಹಂತಗಳಲ್ಲಿ ರೂ.೧ ರಿಂದ ೨೦೦೦, ಹಾಗೂ ೨೦೦೦ ರಿಂದ ೪೦೦೦೦ ವರೆಗಿನ ಹೆಚ್ಚು ಕುಟುಂಬಗಳು ಅವಲಂಬಿತವಾಗಿವೆ. ಇದಕ್ಕೆ ಪರಿಸರದ ಗಳಿಕೆಯ ಮೂಲಗಳೇ ಕಾರಣವೆನ್ನಬಹುದು.

ನಾಲ್ಕನೆಯ ಅಧ್ಯಾಯವು ಸಮುದಾಯಗಳ ಅಭಿವೃದ್ಧಿ, ಕಲ್ಯಾಣಕಾರ್ಯಕ್ರಮಗಳು ಮತ್ತು ಅವುಗಳ ಅನುಷ್ಠಾನ ವಿಷಯದ ಮೇಲೆ ಕೇಂದ್ರೀಕರಿಸಲಾಗಿದೆ. ಮುಖ್ಯವಾಗಿ ಈ ಜನರ ಅಭಿವೃದ್ಧಿಗಾಗಿ ರೂಪಿಸಿರುವ ಕಾರ್ಯಕ್ರಮಗಳು ಹೆಸರಿಸಲಾಗಿದೆ. ಅಂದರೆ ಸಂವಿಧಾನದ ಬದ್ಧ ಬೆಳವಣಿಗೆಗಳು, ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿನ ತಳಿಉತ್ಪನ್ನದ ಬಗೆಗಿನ ಮಾಹಿತಿಯೊಂದಿಗೆ ಅಭಿವೃದ್ಧಿ ಪರಿಗಣನೆಯ ಅಂಶಗಳನ್ನು ವಿಶ್ಲೇಷಣೆಗೆ ಗುರಿ ಮಾಡಲಾಗಿದೆ.

ಅಭಿವೃದ್ಧಿ ಎಂಬುದು ವಿಶಾಲವಾದ ಕಲ್ಪನೆಯಾಗಿದ್ದು ಅದನ್ನು ಸಿದ್ಧಾಂತವಾಗಿ ನಿರೂಪಿಸುವುದು ಸಂಶೋಧನೆಯ ಕಾರ್ಯವಲ್ಲ. ಈ ಸಂಶೋಧನೆಯಲ್ಲಿ ಸಮುದಾಯಗಳ ಅಭಿವೃದ್ಧಿಯೆಂದರೆ ಜನರು ತಮ್ಮ ಬದುಕು ಉತ್ತಮ ಪಡೆಸಿಕೊಳ್ಳುವುದು. ಅಂದರೆ ದೀರ್ಘಕಾಲದ ಬದುಕುವ ಅವಕಾಶಗಳನ್ನು ವರ್ದಿಸಿಕೊಳ್ಳುವುದರ ಅರ್ಥವೇ ವಿನಾ ಅಪಾರ ವರಮಾನಗಳಿಸುವುದು ಎಂದು ಅರ್ಥವಲ್ಲ. ಸಮುದಾಯಗಳ ಜನರು ತಮ್ಮತ್ತ ಹರಿದು ಬರುವ ಅನೇಕ ಅವಕಾಶಗಳಲ್ಲಿ ಮುಖ್ಯವೆನಿಸಿದ್ದನ್ನು ಆಯ್ದುಕೊಳ್ಳುವ ಸ್ವತಂತ್ರ್ಯ ಅಭಿವೃದ್ಧಿ ದೃಷ್ಠಿಕೋನವಾಗಿದೆ.

ಸರ್ಕಾರವೂ ಸಹ ಅನೇಕ ವಿಸ್ತೃತ ಮಾದರಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಜಾರಿಗೆ ತಂದಿದೆ. ಅವುಗಳನ್ನು ಅಭಿವೃದ್ಧಿಗಿರುವ ಮಾರ್ಗಗಳು ಎಂದೇ ಗುರುತಿಸಲು ಪ್ರಯತ್ನ ಮಾಡಲಾಗಿದೆ. ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಒಂದೇ ಕಾರ್ಯವನ್ನು ಎರಡು ಸಮುದಾಯಗಳ ಪರಿಸರದ ನೆಲೆಗಳಿಗೆ ರೂಪಿಸಲಾಗಿದೆ. ಎರಡು ಸಮುದಾಯಗಳು ಕಾರ್ಯಕ್ರಮಗಳನ್ನು ಬಳಸಿಕೊಂಡ ಬಗ್ಗೆ ಸುಮಾರು ೧೦೮೦ ಕುಟುಂಬಗಳನ್ನು ಸಮೀಕ್ಷಿಸಿ ಕಾರ್ಯಕ್ರಮಗಳ ಮಹತ್ವ ಅರಿಯಲು ಪ್ರಯತ್ನಿಸಲಾಗಿದೆ. ಕಲ್ಯಾಣಕಾರ್ಯಕ್ರಮಗಳು ಕ್ಷೇತ್ರದಲ್ಲಿ ಅನುಷ್ಠಾನಗೊಂಡ ಬಗ್ಗೆ ಅಂಕಿ ಅಂಶಗಳ ಸಹಿತ ಕಲೆಹಾಕಲಾಗಿದೆ ಮತ್ತು

ಅನುಷ್ಠಾನಗೊಂಡ ಕಾರ್ಯಕ್ರಮಗಳ ಬಗೆಗಿನ ಜನರ ಧೋರಣೆಗಳನ್ನು ಅರಿಯಲು ಪ್ರಯತ್ನಿಸಲಾಗಿದೆ. ಸರ್ಕಾರದ ಇಲಾಖೆಯು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ ಬಗ್ಗೆ ತನ್ನದೇ ಆದ ಅಂಕಿ ಅಂಶಗಳನ್ನು ಹೊಂದಿದೆ. ಆದರೆ ಈ ಅಧ್ಯಯನದಲ್ಲಿ ಇಲಾಖೆಯು ನೀಡುವ ಅಂಕಿ ಅಂಶಗಳು ಪರಿಗಣಿಸದೇ, ಸ್ವಯಂ ಕಾಲೋನಿಗಳಲ್ಲಿ ಫಲಾನುಭವಿಗಳನ್ನು ಗುರುತಿಸಲಾಗಿದೆ. ಇದೊಂದು ಉತ್ತಮ ಪರಿವೀಕ್ಷಣಕ್ರಮವೆಂತಲ್ಲೂ ಕರೆಯಬಹುದು

ಎರಡು ಸಮುದಾಯಗಳಿಗೆ ಅನುಷ್ಠಾನ ಗೊಳಿಸಲಾದ ಕಲ್ಯಾಣಕಾರ್ಯಕ್ರಮಗಳ ಬಗ್ಗೆ ದೊರೆತ ಮಾಹಿತಿಯಿಂದ ಕಲ್ಯಾಣಕಾರ್ಯಕ್ರಮಗಳು ಸಮುದಾಯಗಳಲ್ಲಿ ಅವಕಾಶಗಳ ವಿಸ್ತಾರತೆಗೆ ದಾರಿ ಮಾಡಿಕೊಟ್ಟಿರುವ ಬಗ್ಗೆ ತಿಳಿಯಬಹುದಾಗಿದೆ. ವಿಶೇಷವಾಗಿ ಆರ್ಥಿಕ ಚೈತನ್ಯದ ಕಾರ್ಯಕ್ರಮಗಳು, ಆರ್ಥಿಕ ಉಪಯೋಜನೆ, ವಿಶೇಷ ಕಾರ್ಯಕ್ರಮಗಳ ಸವಲತ್ತುಗಳು ಮತ್ತು ಅಭಿವೃದ್ಧಿ ನಿಗಮದ ವಿಶೇಷ ಸೌಲಭ್ಯಗಳು ಕ್ರೋಡಿಕರಿಸಲಾಗಿ ಪ್ರತಿ ಕಾರ್ಯಕ್ರಮವನ್ನು ಪಟ್ಟಿಗಳ ಮುಖಾಂತರ ವಿಶ್ಲೇಷಿಸಲಾಗಿದೆ. ಈ ಕಾರ್ಯಕ್ರಮಗಳಲ್ಲಿ ಅನೇಕ ಸೌಲಭ್ಯಗಳು ಯೋಜಿತ ಗೊಂಡಿರುವುದು ಸರಿಯಷ್ಟೇ. ಎರಡು ಸಮುದಾಯಗಳು ಕಾರ್ಯಕ್ರಮಗಳನ್ನು ಪಡೆಯುವಲ್ಲಿ, ಒಂದು ಸಮುದಾಯ ಇನ್ನೊಂದು ಸಮುದಾಯಕ್ಕಿಂತ ಭಿನ್ನವಾಗಿ ನಿಲ್ಲುವುದರ ಮೂಲಕ ವೈಶಿಷ್ಟತೆಯನ್ನು ಪಡೆದಿವೆ ಎಂಬುದನ್ನು ಸೂಕ್ಷ್ಮವಾಗಿ ಅರಿಯಲು ಪ್ರಯತ್ನಿಸಲಾಗಿದೆ.

ಬಹುತೇಕ ಕಲ್ಯಾಣಕಾರ್ಯಕ್ರಮಗಳು ಸಮುದಾಯಗಳ ಚಾರಿತ್ರಿಕ ಹಿನ್ನಲೆ ಹಾಗೂ ಸಾಮಾಜಿಕ ವ್ಯವಸ್ಥೆ ಮತ್ತು ಪರಿಸರದ ಜೀವನಕ್ರಮವನ್ನು ತಿಳಿದು ರೂಪಿಸಿದಲ್ಲಿ ಉತ್ತಮ ಸಾಫಲ್ಯ ಕಂಡುಬರುತ್ತಿತ್ತು. ಹೀಗಾಗಿ ಅನೇಕ ಕಾರ್ಯಕ್ರಮಗಳು ಸಮುದಾಯಗಳಿಗೆ ಅನ್ವಯಿಸದೇ ಬರೀ ಯೋಜನೆಗಳಾಗಿ ಉಳಿದಂತಹ ಅಂಶ ಕಂಡುಬರುತ್ತದೆ.

ಐದನೆಯ ಅಧ್ಯಾಯವು ಪ್ರಸ್ತುತ ಸಮುದಾಯಗಳ ಜೀವನಾವಸ್ಥೆಯ ಮೇಲೆ ಅವಲೋಕನ ಮಾಡಲಾಗಿ ಫಿವರಣೆಯನ್ನು ನೀಡುತ್ತದೆ. ಈ ಅಧ್ಯಾಯದಲ್ಲಿ ಸಾಮಾಜಿಕ ವ್ಯವಸ್ಥೆಯ ಕಿರುನೋಟದೊಂದಿಗೆ ಸಾಮಾಜಿಕ ಪರಿವರ್ತನೆಯಲ್ಲಿನ ಅಂಶಗಳ ಬಗೆಗೆ ವಿಶ್ಲೇಷಿಸಲಾಗಿದೆ. ಜೊತೆಗೆ ಬದಲಾದ ವಾಸಸ್ಥಾನ, ಭೌತಿಕ ಬದಲಾವಣೆಗಳು ಶ್ರೇಣೀಕೃತ ಅಸಮಾನತೆಯ ತತ್ವದ ಕಡೆ ಕರೆದು ತರುತ್ತಿರುವುದರಿಂದ ಸಮುದಾಯಗಳ ಉದ್ಯೋಗಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಪರಿವರ್ತನೆಯು ಸಹ ಜಾತಿ ಆಧಾರಿತ ಉದ್ಯೋಗ ವ್ಯವಸ್ಥೆಯನ್ನು ಪೋಷಿಸುತ್ತಿದೆಯೆಂದು ಗುರುತಿಸಲ್ಪಟ್ಟಿದೆ.

ಸಾಮಾಜಿಕ ನ್ಯಾಯ ಸಂವಿಧಾನಬದ್ಧ ಕೊಡುಗೆಯಾದರೂ, ಸುಧಾರಣೆ ತೀರಾ ಕಡಿಮೆ. ಸರ್ಕಾರವೇ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅಸಮಾನತೆ ತೊಡೆದುಹಾಕುವ ಕಾರ್ಯ ಮುಖ್ಯವೆಂದು ರೂಪಿಸಿದ ಯೋಜನೆಯಲ್ಲಿನ ೬ ಅಂಶಗಳನ್ನು ಅಧ್ಯಯನದಲ್ಲಿ ಸಂಕ್ಷಿಪ್ತವಾಗಿ

ವಿಶ್ಲೇಷಿಸಲಾಗಿದೆ. ಅಸ್ಪೃಶ್ಯತಾ ನಿವಾರಣೆ, ದೌರ್ಜನ್ಯಕ್ಕೆ ಒಳಗಾದವರಿಗೆ ಪರಿಹಾರ, ಹಿತರಕ್ಷಣ ಸಮಿತಿ, ಅಂತರ ಬುಡಕಟ್ಟು ವಿವಾಹ, ಕಾಲೋನಿಗಳಿಗೆ ದೂರದರ್ಶನ ಸೆಟ್ಟುಗಳ ವಿತರಣೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಯನ್ನು ಸಮೀಕ್ಷಿಸಲಾಗಿ ತಿಳಿದುಬಂದ ವಿಷಯವೆಂದರೆ, ಬಹಳಷ್ಟು ಕಾರ್ಯಕ್ರಮಗಳು ಜನರಿಗೆ ತಿಳಿದೇ ಇರಲಿಲ್ಲ ಎಂಬುದು. ಕೂಲಂಕುಶವಾಗಿ ಚರ್ಚಿಸಿದಲ್ಲಿ ಕೊರಗರು ಕೆಲವು ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡಿದ್ದಾರೆ. ಜೇನುಕುರುಬರು ಈ ಬಗ್ಗೆ ತಿಳಿದುಕೊಳ್ಳಲಾಗಿಲ್ಲ. ಈ ಎಲ್ಲಾ ಸಂಗತಿಗಳು ಅಧ್ಯಯನದಲ್ಲಿ ತುಂಬಾ ಕುತೂಹಲಕಾರಿ ಎನಿಸುತ್ತದೆ. ಯೋಜನೆಗಳ ನಿರ್ಮಾತೃಗಳು ಈ ಬಗ್ಗೆ ಕೊಂಚ ವಿವ್ೇಚಿಸುವುದು ಅನಿವಾರ್ಯವಾಗಿದೆ.

ಆರ್ಥಿಕ ಕ್ಷೇತ್ರವನ್ನ ಅವಲೋಕಿಸಿದಲ್ಲಿ ವಿಶೇಷವಾಗಿ ಬುಡಕಟ್ಟು ಅರ್ಥವ್ಯವಸ್ಥೆ ವಿಶಿಷ್ಟತೆಯನ್ನು ಪ್ರದರ್ಶಿಸುತ್ತದೆ. ಇದು ಸಂಕುಚಿತತೆಯಿಂದ ಒಳಗೊಂಡಿದ್ದು ಈ ಜನರು ಅನುಭೋಗಿ ಗ್ರಾಹಕರಾಗಿ ಕಾಣಬರುತ್ತಾರೆ. ಆದಾಯವನ್ನು ಗಳಿಸುವ ಮೂಲಗಳು ಕಡಿಮೆ ಇರುವುದರಿಂದ ಜೀವನ ಚಕ್ರ ಬಡತನದಿಂದಲೇ ಮುಂದುವರೆಯುತ್ತಿದೆ. ವ್ಯವಹಾರಿಕವಾಗಿ ಸಮುದಾಯಗಳನ್ನು ನೋಡಿದಲ್ಲಿ ಅನುಭೋಗ, ಉದ್ಯೋಗ ಮತ್ತು ಆದಾಯ ಗಳಿಕೆಯನ್ನು ಅವಲಂಬಿಸಿದೆ. ದಿನನಿತ್ಯದ ಕೂಲಿ, ಸಮುದಾಯಗಳ ಕುಟುಂಬ ಸದಸ್ಯರನ್ನು ಬಳಸಿಕೊಂಡಂತೆ ಪ್ರತಿದಿನದ ಕೂಲಿಯಧರದ ಮೂಲಕ ಜೀವನಕ್ರಮ ವಿಶ್ಲೇಷಿಸಲಾಗಿದೆ. ಪ್ರತಿಕುಟುಂಬದ ಸರಾಸರಿ ೪ ಸದಸ್ಯರು, ದಿನನಿತ್ಯದ ಕೂಲಿ ೪೦ ರೂ. ಹಾಗೂ ಪ್ರತಿಕುಟುಂಬದ ಒಂದು ದಿನದ ವೆಚ್ಚ ೪೮ ರೂ. ದಂತೆ ವೆಚ್ಚದ ಮತ್ತು ಗಳಿಕೆಯ ಮೂಲಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ. ಹೀಗೆ ಪ್ರತಿಕುಟುಂಬದ ಅಗತ್ಯ ಹಾಗೂ ಅನಿವಾರ್ಯವಾದ ಖರ್ಚು ಅವಲಂಬಿಸಿರುವ ಉದ್ಯೋಗಗಳಿಂದಲೇ ದೊರೆಯುವಂತಹುದು. ಬಹುತೇಕ ಸಮುದಾಯಗಳಲ್ಲಿನ ಉದ್ಯೋಗಗಳು ಸಹ ಅನಿಶ್ಚಿತತೆಯಿಂದಲೇ ಕೂಡಿವೆ.

ರಾಜ್ಯಾಧಿಕಾರವು ಜನರ ಜೀವನವನ್ನು ರೂಪಿಸುವ ಶಕ್ತಿಯುಳ್ಳದ್ದು. ಸಂವಿಧಾನದ ಅನುಚ್ಛೇದ ೩೮ ಮತ್ತು ೩೯ ಆರ್ಥಿಕಶಕ್ತಿಯ ಕೇಂದ್ರೀಕರಣವನ್ನು ತಡೆಗಟ್ಟಿ ಆಸ್ತಿ ಮತ್ತು ಆದಾಯ ಸಮನಾಗಿ ಹಂಚಿಕೆಯಾಗಬೇಕು ಎನ್ನುವ ವಿಧಾನದಲ್ಲಿ ಸಮುದಾಯಗಳ ಬಡತನ ಮತ್ತು ರಾಜ್ಯಾಧಿಕಾರದ ನಡುವಿನ ವಿಶ್ಲೇಷಣೆಯನ್ನು ರೇಖಾಚಿತ್ರದೊಂದಿಗೆ ನಿರೂಪಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಹಿಂದಿನ ಐದು ಅಧ್ಯಾಯಗಳಲ್ಲಿ ಈ ಅಧ್ಯಯನದ ಮುಖ್ಯಗುರಿಯಾದ ಬುಡಕಟ್ಟು ಸಮುದಾಯಗಳ ಪರಿಸರ, ಅಭಿವೃದ್ಧಿ ಯೋಜನೆ, ಅವುಗಳ ರೂಪುರೇಷ ಅನುಷ್ಠಾನ ಮತ್ತು ಪರಿಣಾಮ ಅಲ್ಲದೇ ಈ ಬಗ್ಗೆ ಅವುಗಳ ದಿಕ್ಕು-ದಿಸೆಗಳ ಚಿಂತನೆ ನಡೆಸಲಾಯಿತು. ಈ ಚಿಂತನೆಯನ್ನು ಮತ್ತು ಚರ್ಚೆಯನ್ನು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಸಮೀಕ್ಷಿಸಲಾಗಿದೆ. ಮೂಲನಿವಾಸಿ ಬುಡಕಟ್ಟು ಸಮುದಾಯಗಳು ತೀರಾ ಹಿಂದುಳಿದವುಗಳು. ಇವರಿಗಾಗಿ ಹೆಚ್ಚಿನ ಸವಾಲತ್ತುಗಳು ನೀಡಲಾಗಿದೆ. ಕೇವಲ

ಕಲ್ಯಾಣಕಾರ್ಯಕ್ರಮಗಳನ್ನು ರೂಪಿಸಿದರಷ್ಟೇ ಸಾಲದು ಅದರ ಜೊತೆಗೆ ಅವುಗಳ ದಿಕ್ಕು-ದಿಸೆಗಳನ್ನು ಚಿಂತಿಸುವುದು ಒಂದು ಸೂಕ್ತ ಕ್ರಮವೆಂದು ಪರಿಗಣಿಸಿ ಸಮುದಾಯಗಳು ಹೇಗೆ ಪ್ರತಿಕ್ರಿಯಿಸಿವೆ ಎನ್ನುವುದು ವಿಶ್ಲೇಷಿಸಲಾಗಿದೆ. ಅನೇಕ ಸಮಾಜವಿಜ್ಞಾನಿಗಳು ನಿರೂಪಿಸಿರುವ ಅಭಿವೃದ್ಧಿ ಸ್ವರೂಪದಲ್ಲಿನ ಅಂಶಗಳು ಮತ್ತು ಸಮುದಾಯಗಳಲ್ಲಿನ ಜನರ ನಾಯಕತ್ವ, ಹೋರಾಟದ ಮುಖ ಮತ್ತು ಸ್ವಯಂ ಸಂಸ್ಥೆಗಳು ಈ ದಿಸೆಯಲ್ಲಿ ಎಷ್ಟರಮಟ್ಟಿಗೆ ಸಹಕಾರಿಯಾಗಿವೆ ಎಂಬುದನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ಅಭಿವೃದ್ಧಿಯ ಸ್ವರೂಪದಲ್ಲಿ ಸಮಾಜವಿಜ್ಞಾನಿಗಳ ವಿಚಾರಗಳು ಪರಿಬಾವಿಸಿದಂತೆ ನೀಡಲಾಗಿದೆ. ಪೂರಕವೆಂಬ ಅಭಿವೃದ್ಧಿ ಸ್ವರೂಪ ಸಮುದಾಯಗಳ ಜನರಲ್ಲಿಯೇ ಹೋರಾಟದ ನೇತೃತ್ವವನ್ನ ವಹಿಸಿಕೊಡುವಂತೆ ಮಾಡಿದೆ. ಇದರಿಂದಾಗಿ ಸಮುದಾಯದ ಜನರಲ್ಲಿಯೇ ನಾಯಕತ್ವ ಬೆಳೆದು ಬರುತ್ತಿರುವ ಬಗ್ಗೆ ವಿವರಿಸಲಾಗಿದೆ. ಬಹಳಷ್ಟು ಸ್ವಯಂಸೇವಾಸಂಸ್ಥೆಗಳು ಸಮುದಾಯಗಳ ಅಭಿವೃದ್ಧಿಗೆ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಹೀಗಾಗಿ ಇಲ್ಲಿ ಕೇವಲ ನಾಲ್ಕು ಸಂಸ್ಥೆಗಳನ್ನ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ದಿಸೆಯಲ್ಲಿ ಸ್ವಯಂಸೇವಾ ಸಂಸ್ಥೆಗಳು ಎಷ್ಟರಮಟ್ಟಿಗೆ ಸಮುದಾಯಗಳ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿವೆ ಎಂಬುದನ್ನು ಇಲ್ಲಿ ಗುರುತಿಸಲಾಗಿದೆ. ಸಂಘಟಿತವಾದ ಬದುಕು ಎಷ್ಟು ವಿಸ್ತಾರದ ಬದಲಾವಣೆಗಳನ್ನು ಮಾಡಿದೆ ಎನ್ನುವ ಅಂಶವನ್ನು ಆಧರಿಸಿ ಸಮಗ್ರ ಬದುಕಿನ ವಿಸ್ತಾರತೆಯ ಅವಕಾಶಗಳ ವೃದ್ಧಿಗೆ ದಾರಿಯಾಗಿರುವ ಅಭಿವೃದ್ಧಿಯನ್ನು ಪ್ರತಿ ಸಮುದಾಯದ ಅಭಿವೃದ್ದಿ ಮಾದರಿ ಎಂದು ಹಲವು ಸಾರ್ವತ್ರಿಕ ನಿಲುವಿನಿಂದ ಕ್ರೋಢಿಕರಿಸಿ ನೀಡಲಾಗಿದೆ. ಈ ಮಾದರಿಯು ಅಧ್ಯಯನದ ವಿವಿಧ ಅಧ್ಯಾಯಗಳ ಸಮಗ್ರ ಅಂಶಗಳನ್ನು ಒಳಗೊಂಡಂತೆ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಕೊನೆಯ ಅಧ್ಯಾಯವು ಮಹಾಪ್ರಬಂಧದ ಸಮಾರೋಪ ಎಂಬ ಶೀರ್ಷಿಕೆಯಿಂದ ಕೂಡಿದೆ. ಇದರಲ್ಲಿ ಎಲ್ಲಾ ಅಧ್ಯಾಯಗಳ ಸಾರಾಂಶ ಹಾಗೂ ಅವುಗಳಲ್ಲಿಯ ಸಂಶೋಧಿತ ವಿಷಯವನ್ನು ಕೋಷ್ಠಕಗಳ ಮುಖಾಂತರ ವಿವರಿಸಲಾದ ವಿಷಯಗಳನ್ನು ಒಳಗೊಂಡಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು, ಸಲಹೆಗಳು ಮತ್ತು ಮುಂದಿನ ಅಧ್ಯಯನದ ಸಾಧ್ಯತೆಗಳ ಮಾಹಿತಿಗಳನ್ನು ಒಳಗೊಂಡಿವೆ.

ಅನುಬಂಧದಲ್ಲಿ ಗ್ರಂಥಋಣ, ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಭೌಗೋಳಿಕ ಮತ್ತು ರಚನಾತ್ಮಕ ವೈವಿಧ್ಯತೆಯ ಜಿಲ್ಲೆಗಳ ನಕ್ಷೆಗಳು ಸಮುದಾಯಗಳಿಗೆ ಅನುಗುಣವಾಗಿ ನೀಡಲಾಗಿದೆ. ಸ್ವತ್ತು ನಿರ್ಮಾಣದ ಛಾಯಚಿತ್ರಗಳು ನಿಜಸ್ಥಿತಿಯನ್ನು ದರ್ಶನ ನೀಡುವವಾಗಿರುವುದರಿಂದ ಅಧ್ಯಯನಕ್ಕೆ ಪೂರಕವೆಂಬಂತೆ ಒಳಗೊಂಡಿವೆ.

ಅಧ್ಯಯನದಿಂದ ಕಂಡುಬಂದ ಬಹುಮುಖ್ಯ ತಥ್ಯಗಳು:

- ಸಮುದಾಯಗಳ ಕಾಲೋನಿಗಳು ಸಂಪೂರ್ಣವಾಗಿ ಒಂದು ಗ್ರಾಮವಾಗಿ ರೂಪುಗೊಳ್ಳುವಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ. ಪುನರ್‌ವಸತಿಯು ಕಾಲೋನಿಯ ಪ್ರಾರಂಭದಲ್ಲಿ ಮಾತ್ರ ಕಾಲೋನಿಯನ್ನು ಸಿಂಗರಿಸಿ ನಂತರ ಕಾಲೋನಿಗಳನ್ನು ಧಿಕ್ಕರಿಸಿರುವುದು ಸಾಮಾನ್ಯವಾಗಿದೆ.
- ಬಹುತೇಕ ಕಾಲೋನಿಗಳು ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿವೆ. ೩೦ ವರ್ಷ ಕಳೆದರೂ ವಿದ್ಯಾರ್ಥಿಗಳು ಮತ್ತು ಸಮುದಾಯಗಳ ಜನರು ತಾಲ್ಲೂಕು ಕೇಂದ್ರಕ್ಕೆ ತೆರಳಬೇಕಾದರೆ ಎರಡು ಮೈಲಿ ದೂರದ ಗ್ರಾಮಗಳಿಗೆ ನಡೆದುಕೊಂಡು ಹೋಗಿ ಬಸ್ ಹಿಡಿಯಬೇಕಾಗುವಂತ ಪರಿಸ್ಥಿತಿ ಇದೆ.
- ಕಾಲೋನಿಗಳಲ್ಲಿ ಸೂಕ್ತವಾದ ಬೀದಿ ದೀಪದ ವ್ಯವಸ್ಥೆ ಇಲ್ಲದೇ ಇರುವುದರಿಂದ ರಾತ್ರಿ ವೇಳೆ ಜನರು ಆಚೀಚೆ ಹೋಗುವುದೇ ಕಷ್ಟಕರ ಕೆಲಸ.
- ಇತರರಂತೆ ಈ ಸಮುದಾಯಗಳಲ್ಲಿಯೂ ಪರಸ್ಪರ ಸಹಕಾರ ಸ್ವಲ್ಪ ಕಡಿಮೆಯೆನ್ನಬಹುದು.
- ಸಮುದಾಯಗಳ ಆರ್ಥಿಕ ಜೀವನಕ್ರಮದಲ್ಲಿ ಮೊದಲು ಅರಣ್ಯದಲ್ಲಿ ಲಭ್ಯವಾಗುತ್ತಿದ್ದ ಕೆಲವು ಸಾಮಾನುಗಳ ಸಂಗ್ರಹಣೆಯಿಂದ ಸಹಕಾರ ಸಂಘಕ್ಕೆ ಮಾರಾಟ ಮಾಡುತ್ತಿದ್ದವರು, ಬದಲಾದ ಅರಣ್ಯ ಕಾಯಿದೆಯಿಂದ ಅರಣ್ಯ ಉತ್ಪನ್ನಗಳ ಸಂಗ್ರಹಣೆಯಿಂದ ವಂಚಿತರಾಗಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ವೈಯಕ್ತಿಕ ದ್ವೇಷ ವೆಂಬಂತೆ ಅರಣ್ಯ ಪ್ರವೇಶಿಸಿದರೆ ಕ್ರಮದಂತೆ ಶಿಕ್ಷೆ ನೀಡುತ್ತಿರುವುದು ಜನರನ್ನು ಕೆರಳಿಸಿದೆ.
- ಇತ್ತೀಚಿನ ಸಮುದಾಯಗಳ ಯುವಕರ ಪೀಳಿಗೆ ಅರಣ್ಯದಲ್ಲಿ ನೀಡಲಾಗುವ ತಾತ್ಕಾಲಿಕ ದಿನಕೂಲಿ ಕೆಲಸಕ್ಕೆ ಸಹ ಆಸ್ಥೆ ಇಲ್ಲವೆಂಬದು ಅನೇಕರಲ್ಲಿ ವಿಚಾರಿಸಿದಾಗ ತಿಳಿದು ಬಂದ ಮಾಹಿತಿ. ಅಲ್ಪಸ್ವಲ್ಪ ವಿದ್ಯಾವಂತರೂ ನಮ್ಮದೇ ಜನರನ್ನ ಅರಣ್ಯದಿಂದ ಹೊರಹಾಕುವುದಕ್ಕೆ ನಮ್ಮನ್ನೆ ಬಳಸಿಕೊಳ್ಳುತ್ತಾರೆ ಎಂಬುದು ತಿಳಿದುಬರುತ್ತದೆ.
- ಈ ಸಮುದಾಯಗಳಲ್ಲಿ ಆದಾಯದ ಹೆಚ್ಚಳವಿಲ್ಲ. ಹೆಚ್ಚೂ ಕಡಿಮೆ ಅನೇಕರು ೪೦೦೦ ರೂಪಾಯಿಗಿಂತ ಕಡಿಮೆ ವಾರ್ಷಿಕ ಅದಾಯದ ವರ್ಗೀಕರಣದಲ್ಲಿಯೇ ಬರುವರು.
- ಅನೇಕರು ದಿನಗೂಲಿ, ಕೃಷಿಕೂಲಿ ಕೆಲಸವನ್ನೇ ಅವಲಂಬಿಸಿರುವವರು. ಅದೂ ಕೂಡ ಕೆಲ ಅವಧಿಯಲ್ಲಿ ಮಾತ್ರ. ಇತ್ತೀಚಿನ ದಿನಗಳಲ್ಲಿ ಇತರ ವರ್ಗದವರು ಇವರಿಗೆ ಕೆಲಸ ಕೊಡಲು ಹಿಂಜರಿಯುವುದು ಕಂಡುಬರುತ್ತದೆ.

- ಮೂಲನಿವಾಸಿ ಬುಡಕಟ್ಟುಗಳಾದ ಎರಡು ಸಮುದಾಯಗಳ ಜೀವನಕ್ರಮ ಒಂದೇ ರೀತಿ ಇರದೇ ಭಿನ್ನ ಭಿನ್ನ ರೀತಿಯಲ್ಲಿರುವುದು. ಪರಿಸರ, ಸಂಸ್ಕೃತಿ ಇತ್ಯಾಧಿಗಳ ವೈವಿಧ್ಯತೆ ಇರುವುದರ ಮೂಲಕ ಸಮಸ್ಯೆಗಳಲ್ಲಿಯೂ ಭಿನ್ನತೆ ಕೂಡಾ ಕಾಣಬಹುದಾಗಿದೆ.
- ಅಧ್ಯಯನ ಮಾಡಿದ ಭೌಗೋಳಿಕ ಪರಿಸರದಲ್ಲಿ ಉದ್ಯೋಗಗಳ ಸ್ಥಾಪನೆಗೆ ಕಡಿಮೆ ಅವಕಾಶ. ಇಲ್ಲವೇ ಇಲ್ಲವೆಂದರೂ ನಡೆದಿತು.
- ಕಲ್ಯಾಣಕಾರ್ಯಕ್ರಮಗಳಡಿಯಲ್ಲಿ ಬರುವ ಯೋಜನೆಗಳಲ್ಲಿ ಎಮ್ಮೆ, ಹಸು, ಆಡು, ಕುರಿ ಮತ್ತು ಕೋಳಿಗಳ ಸಾಕಾಣಿಕೆ ಘಟಕಗಳು ಒಂದು ಪ್ರಮುಖ ಅಂಶವಾಗಿದ್ದರೂ, ಸಫಲತೆಯ ದೃಷ್ಟಿಯಿಂದ ಅಕರ್ಷಕ ಪರಿಣಾಮ ಬೀರಿರುವುದು ಕಂಡುಬರುವುದಿಲ್ಲ.
- ಮೀನುಗಾರಿಕೆ ತರಬೇತಿಯಂತಹ ಕಲ್ಯಾಣಕಾರ್ಯಕ್ರಮಗಳು ಸಂಪೂರ್ಣ ವಿಫಲವಾಗಿದೆ ಎನ್ನಬಹುದು.
- ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ ಸಾಲ–ಸೌಲಭ್ಯಗಳ ಅನುಕೂಲತೆ ಇದ್ದರೂ ಸ್ವಯಂ ಉದ್ಯೋಗದ ಯೋಜನೆಯಲ್ಲಿ ಇದರ ಉಪಯೋಗ ಅತಿ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ.
- ಅನೇಕ ಕಾರ್ಯಕ್ರಮಗಳು ಕಾರ್ಯಕ್ರಮಗಳಾಗೇ ಉಳಿದು ಅನುಷ್ಠಾನಕ್ಕೆ ತರುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ನಿಜಕ್ಕೂ ಸಮುದಾಯಗಳ ತೀರಾ ಅಗತ್ಯ ಸಮಸ್ಯೆಗಳ ಹಾಗೂ ಅವರ ಆಸೆ–ಆಕಾಂಕ್ಷೆಗಳಿಗೆ ಸ್ಪಂಧಿಸದಿರುವುದು ಕಾಣಬರುತ್ತದೆ.
- ಸಮುದಾಯಗಳ ಅಭಿವೃದ್ಧಿಗೆ ನಿಗದಿಪಡಿಸಲಾದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮಗಳಾದ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಬೆಳೆಯಲು ಸೌಲಭ್ಯ ಒದಗಿಸಿರುವುದು ತುಂಬಾ ಕಡಿಮೆ. ಅನೇಕರಿಗೆ ಈ ಸೌಲಭ್ಯದ ಬಗ್ಗೆ ಮಾಹಿತಿಯೇ ಲಭ್ಯವಿಲ್ಲದಿರುವುದು ಕಾಣ಼ಬಹುದಾಗಿದೆ.
- ಇವರು ಕೃಷಿ ಭೂಮಿಯಿಂದ ವಂಚಿತರಾಗಿ ಮೇಲ್ಜಾತಿ ಜಮೀನ್ದಾರರ ಭೂಮಿಗಳಲ್ಲಿ ಜೀತಗಾರರಾಗಿ ಕೃಷಿಕಾರ್ಮಿಕರಾಗಿ ಬದುಕುತ್ತಿದ್ದಾರೆ.
- ಬಹುಜನರು ತಮ್ಮ ಕನಿಷ್ಠ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅವರ ಶ್ರಮಕ್ಕೆ ಕನಿಷ್ಠ ವೇತನವೂ ನೀಡದಿರುವುದು ಮತ್ತು ಸದಾ ಶ್ರೀಮಂತರನ್ನು ಅವಲಂಬಿಯಾಗಿ ಬದುಕು ನಡೆಸುವಂತೆ ಮಾಡಿಧೆ.
- ಕೃಷಿ ಭೂಮಿಯ ಒಡೆತನ ಹೊಂದಿರುವವರು ಕಡಿಮೆ. ಸಣ್ಣ ಮತ್ತು ಅತಿ ಸಣ್ಣ ಭೂಮಿಯನ್ನು ಹೊಂದಿದ್ದು, ಭೂಮಿಯು ಸಹ ಮಳೆಯನ್ನೇ ಆಶ್ರಯಿಸಬೇಕಿದೆ.

ವಾರ್ಷಿಕವಾಗಿ ಒಂದು ಬೆಳೆಯನ್ನು ಬೆಳೆಯುವರು. ಅದು ಸಹ ಮೂರು ತಿಂಗಳಿಗೆ ಮಾತ್ರ ಸಾಕಾಗುವುದು. ಇದರಿಂದ ಉದ್ಯೋಗವಿಲ್ಲದೆ ಬಡತನದಲ್ಲಿ ಬದುಕುವರಾಗಿದ್ದಾರೆ.

- ಸಮುದಾಯಗಳಲ್ಲಿ ಪುರುಷರು ಮತ್ತು ಮಹಿಳೆಯರು ಎನ್ನದೇ ಗಳಿಸುವ ಆದಾಯದಲ್ಲಿ ಎಲೆ, ಅಡಿಕೆ, ತಂಬಾಕು, ಹೊಗೆಸೊಪ್ಪು ಮತ್ತು ಕುಡಿತದ ಚಟಗಳಿಗೆ ವ್ಯಯಿಸುತ್ತಿರುವುದು ಕಂಡುಬರುತ್ತದೆ.
- ಕೆಲವು ಯೋಜನೆಗಳಲ್ಲಿ ನೀಡಿರುವ ಸೌಲಭ್ಯಗಳಿಗೆ ಪೂರಕವಾದ ಸೌಲಭ್ಯಗಳಿಲ್ಲದೆ ಯೋಜನೆಗಳು ಯಶಸ್ವಿಯಾಗಿಲ್ಲದಿರುವುದು ಕಾಣಬರುತ್ತದೆ.
- ಯೋಜನೆಯ ಸೌಲಭ್ಯವನ್ನು ಒದಗಿಸುವಲ್ಲಿ ಅಧಿಕಾರಿಗಳ ಮಲತಾಯಿ ಧೋರಣೆ ಒಂದು ಕಾಲೋನಿಯಿಂದ ಮತ್ತೊಂದು ಕಾಲೋನಿಗೆ ತಾರತಮ್ಯ ವೆಸಗಿರುವುದು ಕಂಡುಬರುತ್ತದೆ.
- ಉದ್ಯೋಗಕ್ಕಾಗಿ ಸಮುದಾಯಗಳಲ್ಲಿ ಅಲೆಮಾರಿತನ ಇನ್ನೂ ಇದೆ.
- ಮೀಸಲಾತಿ ಮತ್ತು ರಾಜಕೀಯದ ಸಮರ್ಪಕ ಪ್ರಾತಿನಿಧ್ಯ ದೊರೆತಿರುವುದಿಲ್ಲ.
- ಸಮುದಾಯಗಳಲ್ಲಿ ದುಶ್ಚಟಗಳು, ಅಜ್ಞಾನ ಮತ್ತು ಮೂಢನಂಬಿಕೆ, ಹಬ್ಬ-ಮದುವೆ ಸಮಾರಂಭಗಳು, ಜಾತಿಪದ್ಧತಿಯ ಇತರೇ ಸಾಮಾಜಿಕ ಕಾರಣಗಳು ಸಮಸ್ಯೆಗೆ ಹೆಚ್ಚಿನ ಮೂಲವಾಗಿರುವುದು ಕಂಡುಬರುತ್ತದೆ.
- ಸ್ವಾವಲಂಬನೆಯನ್ನು ಮೂಡಿಸುವಲ್ಲಿ ಸರ್ಕಾರದ ಯೋಜನೆಗಳು ಪರಿಣಾಮಕಾರಿಯಾಗದಿರುವುದು ಕಂಡು ಬರುತ್ತದೆ.
- ಹೊಸ ಕಾರ್ಯಕ್ರಮಗಳ ಅಳವಡಿಕೆಯಲ್ಲಿ ತೀರಾ ಕನಿಷ್ಠ ಬಂಡವಾಳ ಹೂಡಿಕೆಯಿಂದ ಆದ್ಯತಾವಲಯವನ್ನು ಕಡೆಗಣಿಸಲಾಗಿರುವುದು. ಸಮನ್ವಯತೆ ಇಲ್ಲದ ಆರ್ಥಿಕ ಕಾರ್ಯಕ್ರಮಗಳು ಜನರಲ್ಲಿ ವಿಶ್ವಾಸ ಮೂಡಿಸದಿರುವುದು ಕಾಣಬರುತ್ತದೆ.
- ವಿವಿಧ ಸಂಘಟನೆ, ಸಂಸ್ಥೆಗಳು ಹಾಗೂ ಸರ್ಕಾರದ ಇಲಾಖೆಗಳ ನಡುವೆ ಸಹಕಾರದ ಕೊರತೆ ಕಾಣಬರುತ್ತದೆ.
- ಹೆಚ್ಚಿನ ಜನಸಂಖ್ಯೆ ಇರುವ ತಾಲ್ಲೂಕು ವ್ಯಾಪ್ತಿಯಲ್ಲಿ ಸರಿಯಾದ ಶಾಲೆ ಮತ್ತು ಕೈಗಾರಿಕಾ ತರಬೇತಿ ಕೇಂದ್ರಗಳು, ಮತ್ತು ಹೆಣ್ಣು ಮಕ್ಕಳಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳಿಲ್ಲ.
- ಕಾಲೋನಿಗಳಲ್ಲಿ ನೀರಾವರಿ ಯೋಜನೆಗಳಿಲ್ಲ. ಇದರಿಂದ ಜನರು ಆತ್ಮವಿಶ್ವಾಸವಿಲ್ಲದಂತಾಗಿದ್ದಾರೆ.
- ಎರಡು ಸಮುದಾಯಗಳು ತಮ್ಮದೇ ಆದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಪ್ರಗತಿಯಲ್ಲಿ ಬೇರೆ ಬೇರೆ ದಾರಿ ಕಂಡು ಕೊಂಡಿದ್ದಾರೆ.

- ಭೌಗೋಳಿಕ ಪರಿಸರ ಜೀವನ ನಿರ್ವಹಣೆಗೆ ಅನುಕೂಲಕರವಾಗುತ್ತಿದೆ.
- ಜೇನುಕುರುಬ-ಕೊರಗರ ಬದಲಾದ ಪರಿಸರದ ಸನ್ನಿವೇಶದಲ್ಲಿಯೂ ಜೀವನಾವರ್ತದ ಆಚರಣೆ, ಪದ್ಧತಿ, ಆಹಾರಪದ್ಧತಿ, ವಾಸಸ್ಥಾನ ಇತ್ಯಾದಿಗಳಲ್ಲಿ ಭಿನ್ನತೆ ಕಂಡುಬರುತ್ತದೆ.
- ಗ್ರಾಮೀಣ ನಡೆ-ನುಡಿಗಳು, ಆಚಾರ-ವಿಚಾರಗಳು ತಮಗಿಂತ ಸುಧಾರಿಸಿವೆ ಎಂಬ ಕಲ್ಪನೆ ಉಂಟಾಗಿ ಆ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ.
- ಇಲ್ಲಿನ ಪ್ರಾಥಮಿಕ ಶಾಲೆಯಲ್ಲಿ ಒಂದರಿಂದ ಐದನೇ ತರಗತಿಯವರೆಗೆ ಮಕ್ಕಳ ವಿದ್ಯಾಭ್ಯಾಸಕ್ಕೆ ಅವಕಾಶವಿದ್ದರೂ, ಕೇವಲ ಒಬ್ಬ ಶಿಕ್ಷಕ ಮಾತ್ರ ಶಾಲೆಗೆ ಇದ್ದಾನೆ. ಶಿಕ್ಷಕನ ನೇಮಕವಾದರೂ ಸಂಚಾರ ವ್ಯವಸ್ಥೆಯ ತೊಂದರೆಯಿಂದ ಬೇರೆಡೆಗೆ ವರ್ಗಮಾಡಿಸಿಕೊಂಡು ಹೋಗುತ್ತಿದ್ದಾರೆ.
- ಶೈಕ್ಷಣಿಕವಾಗಿ ಜೇನುಕುರುಬರು ತೀರಾ ಹಿಂದುಳಿದವರಾಗಿದ್ದು, ಕೊರಗರು ಶಿಕ್ಷಣದ ಮಹತ್ವತಿಳಿದು ಸಾಕಷ್ಟು ಪ್ರಾಮುಖ್ಯತೆ ನೀಡುವರಾಗಿದ್ದಾರೆ.
- ಭೂ ಹಂಚಿಕೆಯಲ್ಲಿ ವೈರುಧ್ಯಗಳು ಕಂಡು ಬರುತ್ತವೆ. ಸಾಕಷ್ಟು ಸರ್ಕಾರಿ ಭೂಮಿ ಸಮುದಾಯಗಳ ಕಾಲೋನಿಗಳಲ್ಲಿ ಲಭ್ಯವಿದ್ದರೂ ಹಂಚಿಕೆಯ ಕಾರ್ಯ ಮಾತ್ರ ಬೆರಳಿಕೆಯಷ್ಟು ಶೇ. ೬೪.೧% ಜೇನುಕುರುಬ ಕುಟುಂಬಗಳು ಭೂಮಿ ಪಡೆದಿದ್ದರೆ, ಶೇ. ೩೪.೬% ಕೊರಗರ ಕುಟುಂಬಗಳು ಪಡೆದಿದ್ದಾರೆ.
- ಜೇನುಕುರುಬರಿಗೆ ಮೀಸಲಾದ ಸೌಲಭ್ಯವನ್ನು ಇತರ ಜನವರ್ಗದವರು ಅಧಿಕಾರಿಗಳ ಕುಮ್ಮಕ್ಕಿನಿಂದ ಬಳಸಿಕೊಂಡು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.
- ಹೆಚ್.ಡಿ.ಕೋಟೆ ಮತ್ತು ಹುಣಸೂರು ತಾಲ್ಲೂಕು ವ್ಯಾಪ್ತಿಯಲ್ಲಿ ಇತರ ಕುರುಬ ಜನಸಮುದಾಯದವರು ಜೇನುಕುರುಬರ ಮೀಸಲಾತಿ ಪ್ರಮಾಣಪತ್ರ ಪಡೆಯುತ್ತಿರುವುದು ಕಂಡುಬರುತ್ತದೆ.
- ರಾಜ್ಯದ ಪ್ರಥಮ ಚುನಾಯಿತ ಜಿಲ್ಲಾ ಪಂಚಾಯಿತ್ ಉಪಾಧ್ಯಕ್ಷ ಮಹಿಳೆ ಜೇನುಕುರುಬರ ಜಾಜಿತಿಮ್ಮಯ್ಯ, ಹನಗೂಡು ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಆಯ್ಕೆಗೊಂಡಿದ್ದಾಳೆ.
- ಆಶ್ರಮಶಾಲೆಗಳಲ್ಲಿ ಪೂರ್ಣ ಪ್ರಮಾಣದ ಶಿಕ್ಷಕರಿಲ್ಲದ ಕೊರತೆಯಿಂದ ಕೂಡಿವೆಶಾಲೆಗಳು.
- ಆಶ್ರಮ ಶಾಲೆಯಲ್ಲಿನ ಮಕ್ಕಳಿಗೆ ನೀಡಲಾಗುತ್ತಿರುವ ಸಮವಸ್ತ್ರ ಗುಣಮಟ್ಟವಿಲ್ಲದವುಗಳಾಗಿವೆ.
- ಆಶ್ರಮ ಶಾಲೆಯ ಮಕ್ಕಳಿಗೆ ಹಲ್ಲು ಉಜ್ಜಲು ಹಳೆಯ ಹಲ್ಲು ಪುಡಿ ನೀಡಲಾಗುತ್ತಿದೆ.
- ವಿದ್ಯಾರ್ಥಿ ನಿಲಯಗಳಲ್ಲಿ ಗ್ರಂಥಾಲಯ ಹಾಗೂ ಟಿ.ವಿ. ಸೌಕರ್ಯವಿಲ್ಲದಿರುವುದು ಕಂಡುಬರುತ್ತದೆ.

- ಬಹುತೇಕ ಸರ್ಕಾರದ ಇಲಾಖೆಗಳ ಯೋಜನೆಗಳಿಂದ ನೀಡಲಾಗುವ ಸವಲತ್ತುಗಳ ಪ್ರಯೋಜನವಾದ ಬಗ್ಗೆ ಪರಿಶೀಲಿಸದೇ ಕಾಟಚಾರಕ್ಕೆ ಅನುಷ್ಠಾನಗೊಳಿಸುವಂತಿರುವ ಕ್ರಮ ತಿಳಿದು ಬರುತ್ತದೆ.
- ಯೋಜನೆಗಳಲ್ಲಿ ಅರ್ಹ ಫಲಾನುಭವಿಗಳ ಆಯ್ಕೆಯಲ್ಲಿ ಪ್ರಭಾವಿಗಳ ಒತ್ತಡ ಹಾಗೂ ಪಾತ್ರ ಹೆಚ್ಚಾಗಿದೆ.
- ಯೋಜನೆಗಳ ಅನುಷ್ಠಾನ ಅಧಿಕಾರಿಗಳಲ್ಲಿರುವ ಮನೋಭಾವ ಸಮರ್ಪಕವಾಗಿಲ್ಲ.
- ಯೋಜನೆಗಳ ಅನುಷ್ಠಾನಗೊಳಿಸುವ ಅಧಿಕಾರಿ ವರ್ಗದವರಲ್ಲಿ ನೈಪುಣ್ಯದ ಕೊರತೆ.
- ಸುಳ್ಳು ಜಾತಿ ಪ್ರಮಾಣಪತ್ರದ ಪ್ರಕರಣಗಳು ಕಂಡುಬಂದರು ಅಧಿಕಾರಿಗಳು ಕ್ರಮತೆಗೆದುಕೊಳ್ಳದಿರುವುದು ಕಂಡುಬರುತ್ತದೆ.
- ನೀಡಿರುವ ಸ್ವತ್ತುಗಳನ್ನು ಕಾಲಕಾಲಕ್ಕೆ ಮೌಲ್ಯಮಾಪನ ಮಾಡದೇ ಇರುವುದು ಕಾಣಬರುತ್ತದೆ.

ಸಲಹೆಗಳು:

ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ: ಅರ್ಥಶಾಸ್ತ್ರೀಯ ಅಧ್ಯಯನದ ಹಿನ್ನೆಲೆಯಲ್ಲಿ ಈ ಸಮುದಾಯಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಗುರುತಿಸಲಾಗಿದೆ. ಸಮಸ್ಯೆಗಳ ಪರಿಹಾರಕ್ಕಾಗಿ ಈ ಕೆಳಗಿನ ಸೂಕ್ತ ಸಲಹೆಗಳನ್ನು ನೀಡಲಾಗಿದೆ. ಸರ್ಕಾರ, ಸಂಘ, ಸ್ವಯಂಸಂಸ್ಥೆಗಳು ಈ ಕುರಿತು ಗಂಭೀರವಾಗಿ ಚಿಂತಿಸಿ ಸಹಾಯ ಹಸ್ತ ನೀಡಬೇಕಾಗಿದೆ.

- ❖ ಅತ್ಯಂತ ಬಡಜನರಾದ ತೀರಾ ಹಿಂದುಳಿದ ಬುಡಕಟ್ಟು ಸಮುದಾಯಗಳ ಆರ್ಥಿಕ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವರ ಸರ್ವಾಂಗೀಣ ಅಭಿವೃದ್ಧಿ ಮಾಡುವುದೇ ಆದಲ್ಲಿ ಅವರ ಪ್ರಚಲಿತ ಪರಿಸರದ ಸಮಸ್ಯೆಗಳ ಪರಿಹಾರದ ಕ್ರಮಕ್ಕೆ ಸಣ್ಣ ಘಟಕದ ಅಭಿವೃದ್ಧಿ ಕಾರ್ಯಕ್ರಮಗಳ ರೂಪಿಸುವಿಕೆ ಮತ್ತು ಕ್ರಿಯಾಯೋಜನೆಗಳ ತಳಮಟ್ಟದ ಕ್ರಿಯಾಶೀಲತೆಯಿಂದ ಅನುಷ್ಠಾನಗೊಳಿಸಿದಲ್ಲಿ ಸಮಸ್ಯೆಗಳಿಗೆ ಪರಿಹಾರ ಪ್ರಭಾವಕಾರಿಯಾಗಬಲ್ಲದು.
- ❖ ಸಾಂಪ್ರದಾಯಕ ಉದ್ಯೋಗಗಳಲ್ಲಿ ಹೊಸ ತಂತ್ರಜ್ಞಾನವನ್ನು ಪರಿಚಯಿಸುವುದರ ಮೂಲಕ ಉದ್ಯೋಗಗಳಲ್ಲಿ ಹೊಸತನ ಮೂಡಿಸಬೇಕಿದೆ.
- ❖ ಕಾಲೋನಿಗಳಲ್ಲಿ ಕಂಡುಬರುವ ಮದ್ಯವರ್ತಿಗಳನ್ನು ನಿಯಂತ್ರಿಸಬೇಕಿದೆ.
- ❖ ಅತಿ ಅವಶ್ಯಕವಾಗಿ ನಿರುದ್ಯೋಗ ಸಮಸ್ಯೆಗೆ ಪರಿಹಾರವಾಗಿ ಮೀಸಲಾತಿ ಅನ್ವಯ ಜನರನ್ನು ಇಲಾಖೆಯಲ್ಲಿ ನೇಮಕಮಾಡಿಕೊಳ್ಳಬಹುದಾಗಿದೆ.

❖ ಮೂಲನಿವಾಸಿ ಬುಡಕಟ್ಟು ಸಮುದಾಯಗಳಿಗೆ ಕಲ್ಪಿಸಲಾದ ವಿಶೇಷ ಸೌಲಭ್ಯಗಳು ಆಯಾ ಸಮುದಾಯ ನೆಲೆನಿಂತ ಪರಿಸರ, ಸನ್ನಿವೇಶ, ಜೀವನಕ್ರಮಕ್ಕೆ ಅನುಗುಣವಾಗಿ ರೂಪಿಸಬೇಕಾಗಿದೆ. ಇದರಿಂದ ಯೋಜನೆಯಲ್ಲಿ ಜನರು ಸಕ್ರೀಯರಾಗುತ್ತಾರೆ.

❖ ಪುನರ್‌ವಸತಿಯ ಕಾರ್ಯದಿಂದ ಉದ್ಯೋಗದ ಭರಸೆ, ತರಬೇತಿ ನೀಡಿ ಸ್ವಾವಲಂಬಿಯನ್ನಾಗಿ ಮಾಡುವ ನಿಟ್ಟಿನಲ್ಲಿ ನಡೆಯಬೇಕಿದೆ. ಮಾನವಸಂಪನ್ಮೂಲದ ಪರಿಗಣನೆ ಅತ್ಯಗತ್ಯ.
ಕಾಲೋನಿಗಳಲ್ಲಿ ಮೂಲಭೂತಸೌಲಭ್ಯಗಳನ್ನು ಒದಗಿಸಿಕೊಡುವುದರ ಮೂಲಕ ಆರೋಗ್ಯ ಮತ್ತು ನೈರ್ಮಲ್ಯತೆಯನ್ನು ಒದಗಿಸಿಕೊಡುವ ಕಾರ್ಯ ನಡೆಯಬೇಕಿದೆ.

❖ ಕಾಲೋನಿಗಳಲ್ಲಿ ಸಾರಾಯಿ ಅಂಗಡಿ ತೆರವುಗೊಳಿಸಿ ಜನರಿಗೆ ಮನರಂಜನಾ ಸೌಲಭ್ಯಕ್ಕೆ ಸಮುದಾಯ ಭವನ ನಿರ್ಮಾಣ ಹಾಗೂ ಟಿ.ವಿ. ಯನ್ನು ದೊರೆಕಿಸಿಕೊಡುವುದರ ಮೂಲಕ ಜ್ಞಾನಾರ್ಜನೆಗೆ ದಾರಿ ಮಾಡಿಕೊಡಬಹುದು.

❖ ಆಶ್ರಮಶಾಲೆಗೆ ತುರ್ತಾಗಿ ಉಪಾಧ್ಯಾಯರನ್ನು ನೇಮಕ ಮಾಡಿ, ಕಾಲೋನಿಯಲ್ಲಿಯೇ ಉಳಿಯುವಂತಹ ವ್ಯವಸ್ಥೆ ಮಾಡಿದರೆ ಶಿಕ್ಷಣದ ಪ್ರಸರಣ ಹೆಚ್ಚುತ್ತದೆ.

❖ ಭೂ ಸುಧಾರಣೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ತುರ್ತು ಅಗತ್ಯವಿದೆ. ಜಮೀನು ಸಣ್ಣ ಸಣ್ಣ ಹಿಡುವಳಿಗಳಾಗಿರುವುದರಿಂದ ಸಾಗುವಳಿಗೆ ಸೂಕ್ತವಲ್ಲ. ಹೀಗಾಗಿ ಉತ್ಪನ್ನ ಬರುವುದೇ ಕಡಿಮೆ. ಆದರಿಂದ ಈ ದಿಶೆಯಲ್ಲಿ ಭೂಸುಧಾರಣೆ ಅಗತ್ಯ. ಸರ್ಕಾರದ ಕಲ್ಯಾಣ ಕಾರ್ಯದಲ್ಲಿ ಭೂ ಹಂಚಿಕೆ ಫಲಪ್ರದವಾಗಬೇಕಿದೆ.

❖ ಎಲ್ಲರಿಗೂ ಜಮೀನು ಅವಶ್ಯಕ. ಅದು ಎಷ್ಟೇ ಪ್ರಮಾಣದಲ್ಲಿ ಬೆಳೆ ಬರಲಿ, ಬಿಡಲಿ ಹಂಚಿಕೆಯಿಂದ ಕುಟುಂಬಗಳ ಗೌರವ ಮತ್ತು ಆತ್ಮವಿಶ್ವಾಸ ಭೂ ಹಂಚಿಕೆಯಿಂದ ಬೆಳೆಸಬಹುದು.

❖ ಯೋಜನೆಗಳ ರೂಪುರೇಷೆ ಸಾಮಾನ್ಯವಾಗಿ ಎಲ್ಲಾ ರೀತಿಯ ಪ್ರದೇಶಗಳ ಹಾಗೂ ಸಾಂಸ್ಕೃತಿಕ ಸಾಮಾಜಿಕ, ಆರ್ಥಿಕ ಹಿನ್ನೆಲೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡೆ ತರಲು ಪ್ರಾರಂಭಿಸಿದೆ. ಆದರೆ ಈ ದಿಶೆಯಲ್ಲಿ ಪರಿಸರಕ್ಕೆ ತಕ್ಕಂತೆ ಅಲ್ಪಸ್ವಲ್ಪ ಬದಲಾವಣೆ ಮಾಡುವುದು ಅನಿವಾರ್ಯವಾಗಿದೆ.

❖ ಭೂಮಿ ಹಂಚಿಕೆಯಲ್ಲಿ ಸುಧಾರಣೆ ಅಗತ್ಯವಾಗುತ್ತದೆ. ಯಾಕೆಂದರೆ ಒಂದು ಕಡೆ ೧ ಎಕರೆ, ೨ ಎಕರೆ, ಬಯಲು, ಮಳೆಯಾಧಾರಿತ ನೀರೆ ಇರದ ಪ್ರದೇಶ ಕೃಷಿಗೆ ಲಾಭಕರವಲ್ಲ. ಕನಿಷ್ಠ ನಿಗದಿ ಪಡಿಸಲಾದ ೪ ಎಕರೆ ಜೊತೆಗೆ ನೀರಾವರಿಗೆ ಸಕಲ ಸವಲತ್ತು ಅಂದರೆ ವಿದ್ಯುತ್‌ಚಕ್ತಿ, ಕೃಷಿ ಉಪಕರಣ, ಬೀಜ, ಗೊಬ್ಬರ, ಕೃಷಿನಾಶಕ ಮುಂತಾದವುಗಳನ್ನು ಒದಗಿಸಿದಲ್ಲಿ ಮಾತ್ರ ಕಲ್ಯಾಣಕಾರ್ಯಕ್ರಮಗಳ ಸಾಫಲ್ಯ ಕಾಣಬಹುದು.

- ಆರ್ಥಿಕ ಸ್ಥಿತಿ ಸುಧಾರಿಸುವ ಮಾರ್ಗದಲ್ಲಿ ಸಂಬಂಧಪಟ್ಟ ಅಧಿಕಾರಿ ವರ್ಗ, ಪಂಚಾಯಿತಿಗಳ ಮುಖ್ಯಸ್ಥರು, ಶಿಕ್ಷಕರು, ಸಮಯದ ಅಗತ್ಯತೆ ಅರಿತು ಅನುಷ್ಠಾನಗೊಳಿಸುವಲ್ಲಿ ನೇರ ಭಾಗಿಯಾಗಬೇಕು.
- ಸಮುದಾಯಗಳ ವ್ಯಕ್ತಿಗತವಾದ ಜೀವನಾವಸ್ಥೆ ತಿಳಿದು ಅವುಗಳಿಗನುಗುಣವಾಗಿ ಯೋಜನೆಗಳನ್ನು ರೂಪಿಸಿದಲ್ಲಿ ಅವುಗಳು ಈ ಜನರ ಹಿತರಕ್ಷಣೆ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯಲ್ಲಿ ಸಹಾಯಕಾರಿಯಾಗಬಲ್ಲವು.
- ತೀರಾ ಹಿಂದುಳಿದ ಪ್ರದೇಶದಲ್ಲಿರುವ ಮತ್ತು ಅರಣ್ಯದಲ್ಲಿರುವ ೨ ರಿಂದ ೪ ಕುಟುಂಬಗಳು ನೆಲೆಸಿರುವಲ್ಲಿ ವಿಶೇಷತಃ ಪರಿಸ್ಥಿತಿಗಳು ಕಷ್ಟಕಾರಿಯಾಗಿವೆ. ಇಂತಹ ಸ್ಥಿತಿಯಲ್ಲಿನ ಕುಟುಂಬಗಳ ಆಶೋತ್ತರಗಳನ್ನು ಮೊದಲು ತಿಳಿದು ಯೋಜನೆಗಳನ್ನು ರೂಪಿಸಿದಲ್ಲಿ ಕಷ್ಟನಷ್ಟಗಳು ಪರಿಹರಿಸಲು ಸಾಧ್ಯ.
- ಅರ್ಥವ್ಯವಸ್ಥೆಯನ್ನು ಸಶಕ್ತಗೊಳಿಸಲು, ಗ್ರಾಮೀಣ ಸಾಲ, ಗ್ರಾಮೀಣ ಬ್ಯಾಂಕಿಂಗ್, ಗ್ರಾಮೀಣ ವಿಮಾ ಸೌಲಭ್ಯಗಳು ಪ್ರತಿ ಕುಟುಂಬಕ್ಕೂ ತಲುಪಿಸಿದಲ್ಲಿ ಉಳಿತಾಯವನ್ನು ರೂಢಿಸಿಕೊಂಡು ಮುನ್ನೆಡೆಯಲು ಸಾಧ್ಯತೆ ಇದೆ.
- ಮೂಲಭೂತ ಅಗತ್ಯ ವಿಧ್ಯುತ್‌ಶಕ್ತಿ ಜಾಗರೂಕತೆಯಿಂದ ಒದಗಿಸಿಕೊಡಬೇಕಾದ ಕರ್ತವ್ಯ ಸರ್ಕಾರದಾಗಿರಬೇಕು.
- ಕುಟೀರ ಮತ್ತು ಸಣ್ಣ ಪ್ರಮಾಣದ ಗುಡಿಕೈಗಾರಿಕೆಗಳ ಕುಶಲತೆಯಲ್ಲಿನ ಈ ಜನರು ಪದೇ ಪದೇ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಮುಂದಿನ ತಲೆಮಾರಿನವರ ಹಿತದೃಷ್ಟಿಯಿಂದ ನೀತಿ ನಿರೂಪಣಕಾರರು ಈ ಯೋಜನೆಗಳಿಗೆ ಸಾಕಷ್ಟು ಗಮನವೀಯಬೇಕು.
- ಸಮುದಾಯಗಳ ಕಾಲೋನಿಗಳಲ್ಲಿನ ಖಾಸಗಿ ಲೇವಾದೇವಿದಾರರ, ಶ್ರೀಮಂತ ಭೂಮಾಲೀಕರ ಹಿಡಿತದಿಂದ ಹೊರತರುವಲ್ಲಿ ಸಾಂಸ್ಥಿಕಮೂಲದ ಸಾಲದ ವ್ಯವಸ್ಥೆ ಹೆಚ್ಚುವಂತೆಮಾಡಿ ಉಳಿತಾಯದ ಪರಿಕಲ್ಪನೆ ಮೂಡಿಸಬೇಕು.
- ಸರ್ಕಾರದಿಂದ ಬಹುತೇಕ ಕಾಲೋನಿಯ ಜನರಿಗೆ ವೃದ್ಧಾಪ್ಯ ವೇತನ, ವಿಧವಾ ವೇತನಗಳು ಕಲ್ಪಿಸುವುದು ಅವಶ್ಯಕವಾಗಿದೆ.
- ಶೈಕ್ಷಣಿಕ ಪ್ರಗತಿಗಾಗಿ ಸಮುದಾಯಗಳ ಪಿ.ಯು.ಸಿ. ಮತ್ತು ಪದವಿ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ, ಅವರುಗಳನ್ನು ಶಿಕ್ಷಣತರಬೇತಿ ಸಂಸ್ಥೆಗಳಲ್ಲಿ ಉಚಿತವಾಗಿ ತರಬೇತಿಗೊಳಿಸಿ ತಮ್ಮದೇ ಸಮುದಾಯಗಳು ನೆಲೆಸಿರುವಲ್ಲಿ ಸಂವಿಧಾನಬದ್ಧ ಮೀಸಲಾತಿಯಡಿಯಲ್ಲಿ ವಿಶೇಷವಾಗಿ ನೇಮಕಮಾಡಿಕೊಳ್ಳುವುದು.

❖ ಬಡತನ ನಿರ್ಮೂಲನೆಗೆ ಪಂಚಾಯತ್ ರಾಜ್ (ಸ್ಥಳೀಯ ಸ್ವಯಂ ಆಡಳಿತ) ಕೀಲಿಕೈ ಹೊಂದಿದೆ. ಗ್ರಾಮಮಟ್ಟದಲ್ಲಿ ಪಂಚಾಯತ್‌ರಾಜ್ ಪದ್ಧತಿ ಬಲಗೊಳಿಸಿ, ಗುರಿ ಸಾದಿಸಲು ಸಮುದಾಯಗಳಿಗೆ ಅವಕಾಶ ನೀಡುವ ಮೂಲಕ ರಾಜಕೀಯವಾಗಿ ಬಲಗೊಳಿಸುವಲ್ಲಿ ನೆರವು ನೀಡುವುದು.

❖ ನಿರಂತರ ಅರ್ಥಿಕಾಭಿವೃದ್ಧಿಗಾಗಿ ಅವಶ್ಯಕವಾದ ಪರಿಸರ–ಕ್ರಿಯೆಗಳ ರಕ್ಷಣೆ ಮತ್ತು ಜೀವನ ಸಮರ್ಥಕ ವ್ಯವಸ್ಥೆಯ ನಿರ್ವಹಣೆ, ಉತ್ಪತ್ತಿ ವೈವಿಧ್ಯತೆಯ ರಕ್ಷಣೆ, ವಂಶ ಮತ್ತು ಪರಿಸರ ವಿಧಾನಗಳ ನಿರಂತರ ಬಳಕೆಯಿಂದ ಜೀವನದ ಗುಣಮಟ್ಟವನ್ನು ಸುಧಾರಿಸಬೇಕಿದೆ.

❖ ಮಧ್ಯವರ್ತಿಗಳ ಕಾಟವನ್ನು ಆಗತ್ಯವಾಗಿ ತಪ್ಪಿಸಬೇಕಾಗಿದೆ.

❖ ಅಧಿಕಾರಿಗಳು ಫಲಾನುಭವಿಗಳಿಗೆ ಗೆಳೆಯರಾಗಿ, ನೀತಿ ಬೋಧಕರಾಗಿ ಮಾರ್ಗದರ್ಶಕರಾಗಿರಬೇಕಿದೆ.

❖ ನಿರುದ್ಯೋಗ ಸಮಸ್ಯೆಗಳನ್ನು ಹೋಗಲಾಡಿಸಬೇಕಾಗಿದೆ.

❖ ಉತ್ತಮ ಗುಣಮಟ್ಟದ ಸಾಬೂನು, ಹಲ್ಲು ಉಜ್ಜಲು ಸಲಕರಣೆಗಳನ್ನು ಒದಗಿಸುವುದು ಸೂಕ್ತ.

❖ ಆಶ್ರಮ ಶಾಲೆಯಲ್ಲಿ ನೀಡಲಾಗುತ್ತಿರುವ ಪೌಷ್ಟಿಕ ಆಹಾರದ ಗುಣಮಟ್ಟವನ್ನು ಹೆಚ್ಚಿಸಬೇಕು.

❖ ಆಶ್ರಮಶಾಲೆಗಳಲ್ಲಿನ ವಿಧ್ಯಾರ್ಥಿಗಳನ್ನು ರಾಜ್ಯಾದ್ಯಾಂತ ಶೈಕ್ಷಣಿಕ ಪ್ರವಾಸ ಕರೆದುಕೊಂಡು ಹೋಗಿ ಜ್ಞಾನರ್ಜನೆ ಹೆಚ್ಚಿಸಬೇಕಿದೆ.

❖ ಆಶ್ರಮಶಾಲೆಯ ಮಕ್ಕಳಿಗೆ ವಾರ್ಷಿಕವಾಗಿ ೩ ಜೊತೆ ಗುಣಮಟ್ಟದ ಸಮವಸ್ತ್ರ ನೀಡಬೇಕು.

❖ ಸಮುದಾಯಗಳ ಸಾಮಾಜಿಕ ಬೆಳವಣಿಗೆಯೊಂದಿಗೆ ಆರ್ಥಿಕ ಸಬಲತೆ ಸಾಧಿಸಲು ಹಣಕಾಸಿನ ನೆರವಿನಿಂದ ವಂಚಿತವಾಗಿರುವ ಕ್ಷೇತ್ರಗಳಲ್ಲಿ ಸೌಲಭ್ಯವನ್ನು ವಿಸ್ತರಿಸುವ ಮೂಲಕ ಸಾಮಾಜಿಕ ನ್ಯಾಯದ ಗುರಿ ಸಾಧಿಸಬಹುದು.

❖ ವಿವಿಧ ಇಲಾಖಾ ಅಧಿಕಾರಿಗಳು ಸಲ್ಲದ ನೆಪಗಳನ್ನು ಮುಂದೊಡ್ಡುವ ಮತ್ತು ಸೂಚನೆಗಳನ್ನು ನಿರ್ಲಕ್ಷಿಸುವ ಮೂಲಕ ಕಲ್ಯಾಣ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬರುವುದನ್ನು ತಪ್ಪಿಸುತ್ತಿರುವುದು ನಿಲ್ಲಿಸಬೇಕು.

❖ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಮತ್ತು ಇನ್ನಷ್ಟು ಅಭಿವೃದ್ಧಿ ಸಾಧಿಸಲು ಮುಂದೆ ಇನ್ನೂ ಎಷ್ಟೇಷ್ಟು ಅವಕಾಶಗಳಿವೆಯೆಂಬುದನ್ನು ಅಂದಾಜುಮಾಡುವ ಸೇವಾ ನಿರತ ಅಧಿಕಾರಿ ವರ್ಗ ಸಂಪನ್ಮೂಲವರ್ಗವಾಗಿ ಬರುವಂತೆ ಮಾಡಬಹುದು.

ಮುಂದಿನ ಅಧ್ಯಯನದ ಸಾಧ್ಯತೆಗಳು

ನಿರಂತರ ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ದೊರಕಿಸಿ, ಸಮಾನತೆಯ ತತ್ವ ಸಾರುವುದು ಸರ್ಕಾರಗಳ ಆದ್ಯಕರ್ತವ್ಯ. ಅತ್ಯಂತ ಬಡಜನರಾದ ಸಮುದಾಯಗಳು ಆರ್ಥಿಕ ಪ್ರಗತಿ ಸಾಧಿಸುತ್ತ ಹೋದಂತೆ ಸಾಮಾಜಿಕ ಅಭಿವೃದ್ಧಿ ಕೂಡ ಸಾಧ್ಯವಾಗುತ್ತದೆ. ಅಭಿವೃದ್ಧಿಕಾರ್ಯದಲ್ಲಿ ಪ್ರಾದೇಶಿಕ ಭಿನ್ನಗಳು ಸಾಮಾನ್ಯವಾಗಿವೆ. ಆಯಾ ಪರಿಸರದ ಕ್ರಮಕ್ಕೆ ತಕ್ಕಂತ ಯೋಜನೆಗಳೂ ರೂಪಿಸಿ ಅನುಷ್ಠಾನಗೊಳಿದಲ್ಲಿ ನಿಜವಾದ ಮಾನವಾಭಿವೃದ್ಧಿ ಸಾಧ್ಯತೆ ಹೆಚ್ಚಾಗಿದೆ.

ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ ; ಅರ್ಥಶಾಸ್ತ್ರೀಯ ಅಧ್ಯಯನ ಎಂಬ ವಿಷಯದ ಮಹಾಪ್ರಬಂಧ ಈ ಸಮುದಾಯಗಳ ಬಗೆಗಿನ ವಿವಿಧ ಅಭಿವೃದ್ಧಿ, ಕಲ್ಯಾಣಕಾರ್ಯಕ್ರಮಗಳ ಅನುಷ್ಠಾನದ ಅಂಶಗಳ ಕುರಿತು ಮಾಹಿತಿ ದೊರೆಕಿಸಿಕೊಡಬಲ್ಲ ಒಂದು ಪ್ರಯತ್ನವಾಗಿದೆ ಅದಾಗ್ಯೂ ನನ್ನ ಗಮನಕ್ಕೆ ಬರದೇ ಇರುವ ಸಂಶೋಧನಾಂಶಗಳು ಉಳಿದಿರುವ ಸಾಧ್ಯತೆಗಳಿವೆ. ಆಸಕ್ತಿ ಇರುವ ಅಧ್ಯಯನಕಾರರು ಆ ಬಗೆಗೆ ಹೆಚ್ಚಿನ ಅಧ್ಯಯನವನ್ನು ಮಾಡಬಹುದಾಗಿದೆ. ಆದರೆ ಮುಂದಿನ ಸಂಶೋಧನೆಗಳಿಗೆ ನನ್ನ ಸಂಶೋಧನ ಮಹಾಪ್ರಬಂಧವು ಒಂದು ಉತ್ತಮ ಆಕರ ಗ್ರಂಥವಾಗಬಲ್ಲದು ಎನ್ನುವುದನ್ನು ಅಲ್ಲಗೆಳೆಯುವಂತಿಲ್ಲ.

****

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಜನಸಂಖ್ಯಾ ಮಾಹಿತಿ ಕೊಷ್ಟಕ

ಪ್ರಶ್ನಾವಳಿ

ಸಮೀಕ್ಷಾ ನಕ್ಷೆ

ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು:

- **ಅಬ್ದುಲ್ ಆಜೀಜ್.** : ಕೆ.ಜಿ. ವಾಸುಕಿ,. ಕನ್ನಡ ಅಧ್ಯಯನ ಕರ್ನಾಟಕ ಆರ್ಥಿಕತೆ, ೧೯೯೭ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
- **ಅಂಬಳಿಕೆ ಹಿರಿಯಣ** : ಮಲೆನಾಡು ಜಾನಪದ ಸಂಪ್ರದಾಯಗಳು, ೧೯೭೮, ಪುಸ್ತಕ ಚಿಲುಮೆ ಪ್ರಕಾಶನ, ಮೈಸೂರು.
- **ಅಮೃತ ಸೋಮೇಶ್ವರ** : ಕೊರಗರು ೧೯೮೨ ಐ.ಬಿ.ಹೆಚ್. ಪ್ರಕಾಶನ ಬೆಂಗಳೂರು. **ಅರವಿಂದ ಮಾಲಗತ್ತಿ, ಒಡೆಯಾರ್, ಡಿ.ಹೆಗ್ಗಡೆ** : ೧೯೯೧. ಕೊರಗ ಜನಾಂಗ ವಿಶ್ಲೇಷಣಾತ್ಮಕ ಅಧ್ಯಯನ, ದಕ್ಷಿಣಕನ್ನಡ ಜಿಲ್ಲಾ ಪರಿಷತ್ತು. ಮಂಗಳೂರು.
- **ಅನಂತಕೃಷ್ಣ ಹೆಬ್ಬೂರ್** : ಭಾರತ ಸಂಘಜೀವನದಿಂದ ಗುಲಾಮಗಿರಿಯವರೆಗೆ : ೧೯೮೫ ಅಭಿವ್ಯಕ್ತ ಪ್ರಕಾಶನ ಮಂಗಳೂರು.
- **ಅಂಬೇಡ್ಕರ್ ಬಿ.ಆರ್.** : ಬರಹ ಮತ್ತು ಭಾಷೆಗಳು ಸಂಪುಟ ೧೦, ಕನ್ನಡ ಸಂಸ್ಕೃತಿ ಇಲಾಖೆ. ಬೆಂಗಳೂರು.
- **ಅರವಿಂದ ಮಾಲಗತ್ತಿ** : ಜಾನಪದ ಅಭಿಯಾನ : ೨೦೦೪, ರಾಜ್ ಪ್ರಕಾಶನ ಮೈಸೂರು.
- **ಇಂದಿರಾ ಆರ್.** : ಸಾಮಾಜಿಕ ಸಂಶೋಧನಾ ವಿಧಾನಗಳು : ೧೯೭೯, ಮೈಸೂರು ವಿ.ವಿ. ಪ್ರಸಾರಂಗ, ಮೈಸೂರು.
- **ಎಚ್ಚಾರ್ಕೆ** : ಆರ್ಥಿಕ ಚಿಂತನೆ, ೨೦೦೬ ಸ್ವಪ್ನ ಬುಕ್‌ಹೌಸ್, ಬೆಂಗಳೂರು.
- **ಎಚ್ಚಾರ್ಕೆ** : ಅಭಿವೃದ್ಧಿ ಅರ್ಥಶಾಸ್ತ್ರ ೨೦೦೫ : ಸ್ವಪ್ನ ಬುಕ್‌ಹೌಸ್ ಬೆಂಗಳೂರು.
- **ಒಡೆಯಾರ್ ಡಿ.ಹೆಗ್ಗಡೆ** : ಕವಲುದಾರಿಯಲ್ಲಿ ಕರ್ನಾಟಕದ ಕುರುಬ ಜನಾಂಗ : ಆರ್ಥಿಕ , ಸಾಮಾಜಿಕ, ವಿಶ್ಲೇಷಣೆ, ೨೦೦೩ ಮಾನವಾಭಿವೃದ್ಧಿ ಅಧ್ಯಯನ ಕೇಂದ್ರ ಮೈಸೂರು.
- **ಕಾರ್ಲ್‌ಮಾರ್ಕ್ಸ್** –ಬಂಡವಾಳದ ಉದ್ಭವ :, ಪ್ರಗತಿ ಪ್ರಕಾಶನ ಮಾಸ್ಕೊ.
- **ಕೋಟಗಾನಗಳ್ಳಿ ರಾಮಯ್ಯ** : ಸಿಂದ್ ಮಾದಿಗರ ಸಂಸ್ಕೃತಿ, ೧೯೯೦, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
- **ಖಂಡೋಬಾ ಪಿ.ಕೆ.** : ಕರ್ನಾಟಕದ ಬುಡಕಟ್ಟಿನ ಲಂಬಾಣಿಗಳು, ೨೦೦೦ ಶ್ರೀ ಸಿದ್ದಲಿಂಗೇಶ್ವರ ಬುಕ್ ಡಿಪೋ ಗುಲ್ಬರ್ಗಾ.

○ **ಗೌಡ ಟಿ.ಸಿ.ಎಸ್.** : ಕರ್ನಾಟಕ ಅರಣ್ಯ ಅಧಿನಿಯಮ ೧೯೯೩ ಲಾಯರ್ಸ್ ಬುಕ್‌ಹೌಸ್, ಬೆಂಗಳೂರು.

○ **ಚಂದ್ರಶೇಖರಯ್ಯ ಎನ್.ಜಿ.**: ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ : ೧೯೭೨, ಪ್ರಸಾರಂಗ ಬೆ. ವಿಶ್ವ ವಿದ್ಯಾಲಯ.

○ **ಚಂದ್ರಶೇಖರ್ ಟಿ.ಆರ್.** : ಅಮಾರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು, ೧೯೯೯, ಕನ್ನಡ ಸಂಘ ಕ್ರೈಸ್ತ ಕಾಲೇಜು, ಬೆಂಗಳೂರು.

○ **ಚಂದ್ರು ಕಾಳೇನಹಳ್ಳಿ** : ಸೋಲಿಗರು ೧೯೯೩ : ಕ. ಸಾ. ಅ. ಬೆಂಗಳೂರು.

○ **ಚಂದ್ರ ಪೂಜಾರಿ ಎಂ.** : ದೇಶೀಯತೆಯ ನೆರಳಲ್ಲಿ ವಿಕೇಂದ್ರೀಕರಣ : ೨೦೦೧ ಕನ್ನಡ ವಿಶ್ವವಿದ್ಯಾಲಯ, ಹಂಪಿ.

○ **ಚಂದ್ರಶೇಖರ್ ಟಿ.ಆರ್.** : ಮಹಿಳೆ, ಆರ್ಥಿಕತೆ ಮತ್ತು ಅಭಿವೃದ್ಧಿ ೨೦೦೧ – ಕನ್ನಡ ವಿಶ್ವ ವಿದ್ಯಾಲಯ ಹಂಪಿ.

○ **ಚಲುವರಾಜು.–** ದೊಕ್ಕಲರ ಸಂಸ್ಕೃತಿ, ೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

○ **ಚೆನ್ನಣ್ಣವಾಲಿಕಾರ**–ಕರ್ನಾಟಕ ದೇವದಾಸಿಯರ ಸಮಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ.

○ **ಜೋಗನ್‌ಶಂಕರ್**: ಗ್ರಾಮಸಮಾಜ ೧೯೯೮, ಜೀವ ಪ್ರಕಾಶನ, ಮೈಸೂರು.

○ **ದಾಸನೂರು ಕೂಸಣ್ಣ** : ಶೋಷಿತ ಜಂಗಮರ ಮೀಸಲಾತಿ, ಮಾತಂಗ ಪ್ರಕಾಶನ, ಮೈಸೂರು.

○ **ನಾಯಕ್ ಎಸ್.ಎನ್.**: ಕರ್ನಾಟಕ ರಾಜ್ಯದ ಆರ್ಥಿಕ ವ್ಯವಸ್ಥೆ : ೧೯೮೯ : ವಿಜಯ ಪಬ್ಲಿಕೇಶನ್, ಗದಗ.

○ **ನಾರಾಯಣ ಎಂ.** – ಸಾಮಾಜಿಕ ಸಮಸ್ಯೆಗಳು –, ಚೇತನ ಬುಕ್‌ಹೌಸ್, ಮೈಸೂರು.

○ **ನಾರಾಯಣ ಎಂ.** : ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ ೨೦೦೦. ಚೇತನ ಬುಕ್‌ಹೌಸ್ ಮೈಸೂರು.

○ **ನಿಂಗಯ್ಯ ಎನ್** : ಕೊರಗ ಆದಿವಾಸಿ ಸಮಾಜದ ಜೀವನಕ್ರಮ ೧೯೮೮ ಪ್ರಸಾರಂಗ ಮೈಸೂರು ವಿ.ವಿ.

○ **ಪ್ರಭಾಕರಶೀಲ** : ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು, ೧೯೯೦, ಕಲಾಪ್ರಕಾಶನ, ಬೆಂಗಳೂರು.

- **ಪುರುಷೋತ್ತಮ ಬಳಿಮಲೆ** : ಕರಾವಳಿ ಜಾನಪದ ೧೯೯೦. ಮಂಗಳೂರು ಗಂಗೋತ್ರಿ, ಮಂಗಳೂರು.
- **ಪಾರ್ವತಮ್ಮ** –ಸಾಮಾಜಿಕ ಬೆಳವಣಿಗೆ : ಮೈಸೂರು ವಿಶ್ವವಿದ್ಯಾಲಯ.
- **ಪಾರ್ವತಮ್ಮ** : ಕಾಡುಕುರುಬ ಮತ್ತು ಜೇನುಕುರುಬ ಸಮುದಾಯಗಳು, ೧೯೯೯, ಸಿ.ಆರ್.ಆರ್.ಟಿ.ಡಿ. ಸಂಸ್ಥೆ, ಮೈಸೂರು.
- **ಪಾಂಡುರಂಗ ಡಿ.ಆರ್** – ದಕ್ಷಿಣಕನ್ನಡ ಜಿಲ್ಲೆಯ ಬೈರರು ಸಾಹಿತ್ಯ ಮತ್ತು ಸಾಂಸ್ಕೃತಿಕ ಅಧ್ಯಯನ.
- **ಫೆಡರಿಕ್ ಎಂಗಲ್ಸ್** –ಕುಟುಂಬ ಖಾಸಗಿ ಆಸ್ತಿ ಹಾಗು ರಾಜ್ಯ ಇವುಗಳ ಉಗಮ ಪ್ರಗತಿ ಪ್ರಕಾಶನ ಮಾಸ್ಕೊ.
- **ಬರಗೂರು ರಾಮಚಂದ್ರಪ್ಪ** : ಸಂಸ್ಕೃತಿ ಮತ್ತು ಸೃಜನಶೀಲತೆ ೧೯೯೧, ಜಯಸಿಂಹ ಪ್ರಕಾಶನ, ಬೆಂಗಳೂರು.
- **ಬಸವರಾಜು** : ಜೇನುಕುರುಬ ಕ್ಷೇತ್ರಕಾರ್ಯವರದಿ : ೧೯೭೫, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- **ಬೈರೇಗೌಡ** : ಇರುಳಿಗರು ಜಾನಪದೀಯ ಅಧ್ಯಯನ : ೨೦೦೦ ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.
- **ಬೈರೆಗೌಡ** –ಬಾಡಲೊಲ್ಲದ ಕಾಡುಕುಡಿಗಳು :, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ.
- **ಬೋರಲಿಂಗಯ್ಯ ಹಿ.ಚಿ.** ಸಿದ್ದಿಯರ ಸಂಸ್ಕೃತಿ ೧೯೯೦. ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
- **ಬೋರಲಿಂಗಯ್ಯ ಹಿ.ಚಿ.** ಕಾಡು ಕಾಂಕ್ರೀಟ್ ಮತ್ತು ಜನಪದ, ಅಕ್ಷರ ಪ್ರಕಾಶನ, ಬೆಂಗಳೂರು.
- **ಬೋರಲಿಂಗಯ್ಯ ಹಿ.ಚಿ.** ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.
- **ಬೋರಲಿಂಗಯ್ಯ ಹಿ.ಚಿ.** : ಗಿರಿಜನ ನಾಡಿಗೆ ಪಯಣ : ೧೯೯೯, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು.
- **ಮಂದಬಾವಿ ಸಿ.ಆರ್.** –ಭಾರತದ ಆದಿವಾಸಿಗಳು –, ಧಾರವಾಡ, ವಿಶ್ವವಿದ್ಯಾಲಯ ಪ್ರಸಾರಾಂಗ.

○ **ಮಹೇಶ್ :** ಮೀಸಲಾತಿ ಮತ್ತು ಭವಿಷ್ಯದ ಪಥಗಳು: ೨೦೦೩, ವಿಮೋಚನಾ ಪ್ರಕಾಶನ ಚಿತ್ರದುರ್ಗ.

○ **ಮೈತ್ರಿ ಕೆ.ಎಂ.** ಬುಡಕಟ್ಟು ಕುಲಕಸುಬುಗಳು ೨೦೦೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

○ **ಮೊಗಳ್ಳಿ ಗಣೇಶ್ :** ಆದಿಮ – ೨೦೦೫. ಸಾರಂಗ ಪ್ರಕಾಶನ, ತಿಪಟೂರು.

○ **ಮೊಗಳ್ಳಿ ಗಣೇಶ್** : ದಲಿತರು ಮತ್ತು ಜಾಗತೀಕರಣ : ೧೯೯೦, ಕನ್ನಡ ವಿಶ್ವವಿದ್ಯಾಲಯ ಹಂಪಿ.

○ **ಯಳನಾಡು ಅಂಜನಪ್ಪ:** ಹಗಲುವೇಷಗಾರರು ಉಪಸಂಸ್ಕೃತಿಮಾಲೆ. ೧೯೯೩, ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು.

○ **ರಾಮಕೃಷ್ಣ** : ಸಾಂಸ್ಕೃತಿಕ ಮಾನವಶಾಸ್ತ್ರ, ೨೦೦೧, ಮಹಿಮ ಪ್ರಕಾಶನ ಮೈಸೂರು.

○ **ರಾಜಪ್ಪದಳವಾಯಿ** : ಹಕ್ಕಿಪಿಕ್ಕಿಯರು ಉಪಸಂಸ್ಕೃತಿಮಾಲೆ, ೧೯೯೩, ಕ.ಸಾ.ಅ. ಬೆಂಗಳೂರು.

○ **ರಾಮ ಮನೋಹರ ಲೋಹಿಯ :** ಜಾತಿ ಪದ್ಧತಿ, ೧೯೯೮, ಬೆಂಗಳೂರು.

○ **ರೇಣುಕಾಚಾರ್ಯ ಸಿ.ಕೆ.** : ಸಾಮಾಜಿಕ ಸಂಖ್ಯಾಶಾಸ್ತ್ರ, ಚೇತನ ಬುಕ್‌ಹೌಸ್, ಮೈಸೂರು.

○ **ಲಕ್ಕಪ್ಪ ಗೌಡ ಹೆಚ್. ಟಿ.:** ಕರ್ನಾಟಕ ಬುಡಕಟ್ಟುಗಳು ೧೯೯೯, ಸಂಪುಟ ೧,೨ ಕರ್ನಾಟಕ ಜನಪದ ಅಕಾಡೆಮಿ, ಬೆಂಗಳೂರು.

○ **ಲಕ್ಷ್ಮಣ್ ಸಿ.ಎಂ.** –ತುಮಕೂರು ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ

○ **ಲತಾರಾಜಶೇಖರ್** –ಕುವೆಂಪು ಕಾವ್ಯದಲ್ಲಿ ಪ್ರಕೃತಿ ಒಂದು ಅಧ್ಯಯನ ಸಹ್ಯಾದ್ರಿ ಪ್ರಕಾಶನ ಮೈಸೂರು.

○ **ಲಲಿತ ಎ.ಸಿ :** ಜೇನುಕುರುಬ ಮತ್ತು ಕಾಡುಕುರುಬರ ಸಂಸ್ಕೃತಿ : ೧೯೯೩, ಕ. ಸಾ. ಅ. ಬೆಂಗಳೂರು.

○ **ವಿವೇಕ ರೈ ಬಿ.ಎ.** : ಕರ್ನಾಟಕ ಜಾನಪದ ನಂಬಿಕೆಗಳು ೧೯೮೧, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

○ **ವೆಂಕಟರಾಯಪ್ಪ ಡಾ.ಕೆ.ಎಸ್.:** ನಗರ ಸಮಸ್ಯೆಗಳ ಒಂದು ಅಧ್ಯಯನ ೧೯೮೦, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ವಿಶ್ವ ವಿಧ್ಯಾಲಯ.

○ **ಶಂಕರನಾರಾಯಣ ತೀ.ನಂ** : ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು : ೧೯೮೨, ಪ್ರಸಾರಂಗ ಮೈಸೂರು, ವಿಶ್ವವಿದ್ಯಾಲಯ.

○ **ಶರ್ಮ ಎ.ಆರ್. :** ಸಾಮಾಜಿಕ ಚಿಂತನೆ ಇತಿಹಾಸ, ಚೇತನ ಬುಕ್‌ಹೌಸ್, ಮೈಸೂರು.

○ **ಶಿವಣ್ಣ ಡಿ.ಕೆ. :** ಭಾರತದ ಪ್ರಚಲಿತ ಸಾಮಾಜಿಕೆ ಸಮಸ್ಯೆಗಳು, ಕಲಾಪ್ರಕಾಶನ, ಬೆಂಗಳೂರು.

○ **ಶ್ರೀಮತಿ ಎಚ್.ಎಸ್. :** ಆಧುನಿಕ ಭಾರತದಲ್ಲಿ ಮಹಿಳೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ

○ **ಶೇಷಗಿರಿರಾವ್ ಎಲ್.ಎಸ್. :** ಅರಣ್ಯ, ೧೯೯೮, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

○ **ಸದಾಶಿವಯ್ಯ ಹೆಚ್.ಎಮ್.** –ಸಮಾಜಶಾಸ್ತ್ರ ಭಾಗ – ೧ – ೨ –, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಹಂಪಿ.

○ **ಹಿರೇಮಠ** –ಭಾರತೀಯ ಸಮಾಜದ ಅಧ್ಯಯನ : ಎನ್.ಜಿ. ಪ್ರಗತಿಪ್ರಕಾಶನ.

ಕೈಪಿಡಿಗಳು ಮತ್ತು ನಿಯತಕಾಲಿಕೆಗಳು:

➢ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮ ೨೦೦೫ – ಕರ್ನಾಟಕ ಸರ್ಕಾರದ ಪ್ರಕಟಣೆ.

➢ ಡಿ.ಈ.ಎಸ್. ಅಂಕಿ–ಅಂಶಗಳ ನೋಟ, ೨೦೦೦–೦೧ – ಕರ್ನಾಟಕ ಸರ್ಕಾರದ ಪ್ರಕಟಣೆ.

➢ ಕರ್ನಾಟಕ ಸರ್ಕಾರ ಆಡಳಿತ ಶಬ್ಧಕೋಶ : ಕನ್ನಡ ಸಾಮಾನ್ಯಾಡಳಿತ ಇಲಾಖೆ. ಕರ್ನಾಟಕ ಸರ್ಕಾರ – ೧೯೬೭

➢ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ ಕೈಪಿಡಿ.

➢ ಭಾರತದ ಜನಗಣತಿ ವರದಿ ೧೯೯೧–೨೦೦೧ ಮೈಸೂರು ಭಾಗ – ೯

➢ ರಾಜ್ಯ ಪ್ರಾಥಮಿಕ ಜನಗಣತಿ ಭಾಗ (ಪರಿಶಿಷ್ಟ ಜಾತಿ, ಪಂಗಡ) ೧೯೯೧–೨೦೦೧.

➢ ಭಾರತದ ಸಂವಿಧಾನ (೨೦೦೧) ಕನ್ನಡ ಅವೃತ್ತಿಯ ಭಾರತ ಸರ್ಕಾರದ ಪರವಾಗಿ ನಿರ್ದೇಶಕರು ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆ ಇಲಾಖೆ

➢ ಕರ್ನಾಟಕ ರಾಜ್ಯ ಗಣಿ ಮತ್ತು ಭೂ ಇಲಾಖೆಯ ಕೈಪಿಡಿ. ನಿರ್ದೇಶಕರು ಪ್ರಕಟಿತ, ಬೆಂಗಳೂರು.

➢ ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಕಿರು ಹೊತ್ತಿಗೆ – ೨೦೦೪–೦೫

➢ ಯೋಜನಾ ಮಾಸಪತ್ರಿಕೆಗಳು ಸಂಚಿಕೆಗಳು ೪, ೭, ೧೦ , ೩ – ೨೦೦೬ , ೨೦೦೫, ಭಾರತ ಸರ್ಕಾರ.

➢ ಹೊಸತು, ಮಾಸಪತ್ರಿಕೆ, ಸೆಪ್ಟೆಂಬರ್ ೨೦೦೨.

- ಜನಪದ ಸಂಚಿಕೆ, ಏಪ್ರಿಲ್ ೨೦೦೪.
- ಮೈಸೂರು ಮಿತ್ರ ದಿನಪತ್ರಿಕೆ ಪುಟ ದಿನಾಂಕ ೧೭.೩.೨೦೦೫.
- ಸಂಕ್ರಮಣ ಮಾಸಪತ್ರಿಕೆ ಬೆಂಗಳೂರು.

ENGLISH REFERENCES:

- **A.C. Mittali :** Tribal Movement, politics and religion in India Vo.3 Radha Publication N. Delhi,
- **Anatha Krishna and Nanjundaiah H.V**. 1926-35: The Mysore Tribes and Caste N. vols Bangalore Govt. Press.
- **Ashish Bhouse , R.P. Tyagi :** Demography of Tribal Development Vo. 90, I.A.S.P. New Dalhi.
- **Baboo – Balgouind** : Economic Exchange in Tribal Village Vo.2 Man in India.
- **Dr. Ambedkar B.R.** : 1989 Annihilation of Caste, S.K. Publication Nagapur.
- **Dr. Ambedkar B.R.** 1989 writing and speeches Vo. 3.5 and 7. Dept of education Govt. of M.H.
- **Edger Thurston** : Cast and Tribes of Southern India Vo. III
- **Kishore C pandy** : The Challenges of Tribal Development : Surup and Sons, New Delhi.
- **Lawrence D Souza S.J** : Koragas A primitive Triba of South India Mangalore.
- **Mishra P.K.** 1970, Economic Development among the Jenu and Kuruba Vo.1 Man in India.
- **NCAER :** 1999 Indian Human Development Report. Oxford Univesity press, New delhi.
- **Parmar H.S.** : Tribal Development in Himachal Pradesh (Policy, Programes, and performance) Mittal Pub. N.D.

- **S.N. Tripathy :** 1998, Tribals in India, Discovery Pub. House N.D.
- **Sarkar. J. :** Occupational mobility among the Kurbars of Mysore city – Man in India Vo. 53.

ಕರ್ನಾಟಕ ರಾಜ್ಯದ ಪರಿಶಿಷ್ಟ ವರ್ಗದ ನಗರ, ಗ್ರಾಮಗಳ ಒಟ್ಟು ಜನಸಂಖ್ಯೆಯ ವಿವರ ೨೦೦೧

ಕ್ರ. ಸಂ.	ಜಿಲ್ಲೆಗಳ ಹೆಸರು	ಒಟ್ಟು ತಾಲ್ಲೂಕುಗಳು	ನಗರ			ಗ್ರಾಮೀಣ		
			ಪರಿಶಿಷ್ಟ ವರ್ಗದ ಜನಸಂಖ್ಯೆ			ಪರಿಶಿಷ್ಟ ವರ್ಗದ ಜನಸಂಖ್ಯೆ		
			ಪುರುಷ	ಮಹಿಳೆ	ಒಟ್ಟು	ಪುರುಷ	ಮಹಿಳೆ	ಒಟ್ಟು
೧	೨	೩	೪	೫	೬	೭	೮	೯
೧	ಬೆಂಗಳೂರು ನಗರ	೩	೩೫೬೯೩	೩೨೨೫೦	೬೭೯೪೩	೯೨೭೮	೮೭೯೭	೧೮೦೭೫
೨	ಬೆಂಗಳೂರು ಗ್ರಾಮೀಣ	೮	೩೭೬೮	೩೪೫೪	೭೨೨೨	೨೭೭೬೯	೨೬೫೬೪	೫೪೩೩೩
೩	ಬಾಗಲಕೋಟೆ	೬	೪೯೪೦	೪೯೪೧	೯೩೮೧	೩೫೨೩೧	೩೫೦೬೯	೭೦೩೦೦
೪	ಬಿಜಾಪುರ	೫	೧೬೧೪	೧೫೭೧	೩೧೮೧	೧೩೮೪೧	೧೩೦೨೫	೨೬೮೬೬
೫	ಗದಗ	೫	೪೪೦೬	೪೧೪೮	೮೫೫೪	೨೩೩೩೩	೨೨೫೨೩	೪೫೮೫೬
೬	ಗುಲಬರ್ಗಾ	೧೦	೯೯೬೧	೯೬೪೬	೧೯೬೦೭	೬೭೯೬೫	೬೬೬೨೩	೧೩೪೫೮೮
೭	ಉಡುಪಿ	೩	೨೮೧೫	೨೯೩೬	೫೭೫೧	೧೭೭೫೭	೧೮೧೦೫	೩೫೮೬೨
೮	ಹಾವೇರಿ	೭	೫೮೫೭	೫೪೮೦	೧೧೩೩೭	೫೯೬೪೧	೫೬೧೮೫	೧೧೫೮೨೬
೯	ರಾಯಚೂರು	೫	೧೨೮೧೪	೧೨೩೧೩	೨೫೧೨೭	೧೩೯೨೬೬	೧೩೮೬೪೯	೨೭೭೯೧೫
೧೦	ಬೆಳಗಾಂ	೧೦	೧೫೫೮೯	೧೫೧೯೨	೩೦೭೮೧	೧೦೭೩೯೦	೧೦೫೨೮೦	೨೧೨೬೭೦
೧೧	ಚಿತ್ರದುರ್ಗ	೬	೧೫೫೦೦	೧೪೬೨೪	೩೦೧೨೪	೧೨೦೬೯೪	೧೧೫೪೧೭	೨೩೬೧೧೧
೧೨	ಹಾಸನ	೮	೧೧೯೦	೧೦೫೯	೨೨೪೯	೧೨೧೦೭	೧೨೦೯೫	೨೪೨೦೨
೧೩	ಕೊಡಗು	೩	೬೨೯	೫೯೦	೧೨೧೯	೨೨೪೮೦	೨೨೪೧೬	೪೪೮೯೬
೧೪	ಬೀದರ್	೫	೬೨೯೮	೫೭೯೨	೧೨೦೯೦	೮೭೧೫೭	೮೨೯೭೨	೧೭೦೧೨೯
೧೫	ಶಿವಮೊಗ್ಗ	೭	೬೩೦೪	೬೧೦೧	೧೨೪೦೫	೨೭೧೩೧	೨೧೪೬೧	೪೩೫೯೨
೧೬	ಉ.ಕನ್ನಡ	೧೧	೨೪೩೬	೨೩೬೦	೪೭೯೬	೯೪೨೫	೯೪೪೩	೧೮೯೮೫
೧೭	ಬಳ್ಳಾರಿ	೭	೪೧೬೪೯	೪೧೬೬೨	೮೩೩೧೧	೧೪೨೦೧೩	೧೩೯೩೧೪	೨೮೧೩೨೭
೧೮	ದ.ಕನ್ನಡ	೫	೪೪೦೮	೪೦೮೮	೮೪೯೬	೨೭೧೨೭	೨೭೨೬೯	೫೪೩೯೬
೧೯	ಮೈಸೂರು	೭	೨೩೭೦೯	೨೩೩೮೮	೪೭೦೯೭	೧೧೩೧೨೨	೧೧೧೧೩೨	೨೨೪೨೫೪
೨೦	ದಾವನಗೆರೆ	೬	೧೭೫೨೫	೧೬೪೦೩	೩೩೯೨೮	೮೯೪೦೭	೮೮೩೬೬	೧೭೫೭೭೩
೨೧	ತುಮಕೂರು	೧೦	೧೨೩೪೮	೧೧೫೪೧	೨೩೮೮೯	೮೬೪೪೭	೮೩೪೮೩	೧೬೯೯೩೦
೨೨	ಕೊಪ್ಪಳ	೪	೪೯೫೫	೪೯೧೪	೯೮೬೯	೬೫೧೦೮	೬೩೬೧೧	೧೨೮೭೧೯
೨೩	ಚಿಕ್ಕಮಂಗಳೂರು	೭	೧೯೬೬	೧೮೪೧	೩೮೦೭	೧೮೬೦೪	೧೮೬೦೮	೩೭೨೧೨
೨೪	ದಾರವಾಡ	೫	೧೩೪೧೬	೧೨೮೨೫	೨೬೨೪೧	೨೨೮೧೮	೨೧೩೮೩	೪೪೧೯೦
೨೫	ಚಾಮರಾಜನಗರ	೪	೧೦೫೨೫	೧೦೬೮೯	೨೧೨೧೪	೪೨೬೮೦	೪೨೨೧೭	೮೪೮೯೭
೨೬	ಮಂಡ್ಯ	೭	೧೮೦೭	೧೮೮೫	೩೬೯೨	೬೮೮೬	೬೬೧೫	೧೩೫೦೧
೨೭	ಕೋಲಾರ	೧೧	೮೦೪೩	೭೫೯೮	೧೫೬೪೧	೯೬೬೨೩೫	೯೩೮೩೫	೧೯೦೦೭೦
	ಒಟ್ಟು	೧೭೫	೨೭೦೧೬೫	೨೫೯೨೯೧	೫೨೮೯೫೨	೧೪೯೧೦೨೯	೧೪೫೦೪೫೭	೨೯೩೪೪೭೫

ಕರ್ನಾಟಕದಲ್ಲಿನ ಜೇನುಕುರುಬರ ಸಮಗ್ರ ಜನಸಂಖ್ಯೆ ವಿವರ:

ಕ್ರ. ಸಂ	ತಾಲ್ಲೂಕುಗಳು	ಒಟ್ಟು ಕುಟುಂಬಗಳ ಸಂಖ್ಯೆ	ಪುರುಷರ ಸಂಖ್ಯೆ	ಮಹಿಳೆಯರ ಸಂಖ್ಯೆ	ಒಟ್ಟು ಜೇನುಕುರುಬರ ಜನಸಂಖ್ಯೆ	ಶೇಕಡವಾರು
೧	ಹುಣಸೂರು	೧೭೮೪	೨೯೬೬	೨೬೦೭	೫೫೭೩	೨೧.೮೬
೨	ಹೆಚ್.ಡಿ ಕೋಟೆ	೨೬೧೭	೫೨೮೯	೪೭೧೮	೧೦೦೦೭	೩೯.೨೬
೩	ಪಿರಿಯಾಪಟ್ಟಣ	೬೬೫	೧೧೬೩	೧೨೪೨	೨೪೦೫	೯.೪೩
೪	ನಂಜನಗೂಡು	೧೩೫	೨೭೫	೨೫೫	೫೩೦	೨.೦೭
೫	ಗುಂಡ್ಲುಪೇಟೆ	೨೬೮	೪೪೯	೪೪೫	೮೯೪	೩.೫೦
೬	ವೀರಾಜಪೇಟೆ	೧೩೦೩	೨೩೨೪	೧೮೭೩	೪೧೯೭	೧೬.೪೬
೭	ಸೋಮವಾರಪೇಟೆ	೫೯೮	೯೨೧	೯೫೯	೧೮೮೦	೭.೩೭
	ಒಟ್ಟು	೭೩೬೯	೧೩೩೮೭	೧೨೦೯೯	೨೫೪೮೬	೧೦೦%

ಕರ್ನಾಟಕದಲ್ಲಿನ ಕೊರಗರ ಸಮಗ್ರ ಜನಸಂಖ್ಯಾವಿವರ:

ಕ್ರ.ಸಂ	ತಾಲ್ಲೂಕುಗಳು	ಒಟ್ಟು ಕುಟುಂಬಗಳ ಸಂಖ್ಯೆ	ಪುರುಷರ ಸಂಖ್ಯೆ	ಮಹಿಳೆಯರ ಸಂಖ್ಯೆ	ಒಟ್ಟು ಸಂಖ್ಯೆ	ಶೇಕಡವಾರು %
೧	ಭಂಟ್ವಾಳ	೧೮೪	೩೨೦	೨೯೬	೬೧೬	೪.೯೩ %
೨	ಬೆಳ್ತಂಗಡಿ	೧೦೬	೧೬೪	೧೪೭	೩೧೧	೨.೪೮ %
೩	ಮಂಗಳೂರು	೭೭೩	೧೪೮೨	೧೫೩೪	೩೦೧೬	೨೯.೧೧ %
೪	ಸುಳ್ಯ	೫೧	೮೩	೮೦	೧೬೩	೧.೩೦ %
೫	ಪುತ್ತೂರು	೧೧೨	೧೮೪	೧೮೮	೩೭೨	೩.೦೦ %
೬	ಉಡುಪಿ	೧೦೩೬	೨೧೩೩	೨೦೨೫	೪೧೫೮	೩೩.೨೯ %
೭	ಕಾರ್ಕಳ	೩೯೦	೭೧೯	೭೩೭	೧೪೫೬	೧೧.೬೪ %
೮	ಕುಂದಾಪುರ	೬೫೬	೧೨೨೬	೧೧೮೮	೨೪೧೪	೧೯.೩೦ %
	ಒಟ್ಟು	**೩೩೦೮**	**೬೩೧೧**	**೬೧೯೫**	**೧೨೫೦೬**	**೧೦೦.೦೦ %**

ರಾಜ್ಯದಲ್ಲಿರುವ ೨೧ ಲ್ಯಾಂಪ್ಸ್ ಸಹಕಾರ ಸಂಘಗಳ ವಿವರ

ಮೈಸೂರು ಜಿಲ್ಲೆ:

೧) ಲ್ಯಾಂಪ್ಸ್ ಹುಣಸೂರು

೨) ಲ್ಯಾಂಪ್ಸ್ ಹೆಚ್.ಡಿ.ಕೋಟೆ

ಚಾಮರಾಜನಗರ ಜಿಲ್ಲೆ:

೩) ಲ್ಯಾಂಪ್ಸ್ ಚಾಮರಾಜನಗರ

೪) ಲ್ಯಾಂಪ್ಸ್ ಹನೂರು

೫) ಲ್ಯಾಂಪ್ಸ್ ಗುಂಡ್ಲುಪೇಟೆ

೬) ಲ್ಯಾಂಪ್ಸ್ ಬಿ.ಆರ್.ಹಿಲ್ಸ್

ಕೊಡಗು ಜಿಲ್ಲೆ:

೭) ಲ್ಯಾಂಪ್ಸ್ ಬಸವನಹಳ್ಳಿ

೮) ಲ್ಯಾಂಪ್ಸ್ ತಿತಿಮತಿ

೯) ಲ್ಯಾಂಪ್ಸ್ ಭಾಗಮಂಡಲ

ಚಿಕ್ಕಮಂಗಳೂರು ಜಿಲ್ಲೆ:

೧೦) ಲ್ಯಾಂಪ್ಸ್ ಮೂಡಿಗೆರೆ

೧೧) ಲ್ಯಾಂಪ್ಸ್ ಕೊಪ್ಪ

ಉಡುಪಿ ಜಿಲ್ಲೆ:

೧೨) ಲ್ಯಾಂಪ್ಸ್ ಉಡುಪಿ

೧೩) ಲ್ಯಾಂಪ್ಸ್ ಕುಂದಾಪುರ

೧೪) ಲ್ಯಾಂಪ್ಸ್ ಕಾರ್ಕಳ

ದಕ್ಷಿಣ ಕನ್ನಡ ಜಿಲ್ಲೆ:

೧೫) ಲ್ಯಾಂಪ್ಸ್ ಸುಳ್ಯ

೧೬) ಲ್ಯಾಂಪ್ಸ್ ಪುತ್ತೂರು

೧೭) ಲ್ಯಾಂಪ್ಸ್ ಬೆಳ್ತಂಗಡಿ

೧೮) ಲ್ಯಾಂಪ್ಸ್ ಬಂಟ್ವಾಳ

೧೯) ಲ್ಯಾಂಪ್ಸ್ ಮಂಗಳೂರು

ಉತ್ತರ ಕನ್ನಡ ಜಿಲ್ಲೆ:

೨೦) ಲ್ಯಾಂಪ್ಸ್ ಭಟ್ಕಳ

ಮಂಡ್ಯ ಜಿಲ್ಲೆ:

೨೧) ಲ್ಯಾಂಪ್ಸ್ ಮುತ

ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯಗಳ ಪರಿಸರ ಮತ್ತು ಅಭಿವೃದ್ಧಿ : ಅರ್ಥಶಾಸ್ತ್ರೀಯ ಅಧ್ಯಯನ

ಸಮೀಕ್ಷೆ ದಿನಾಂಕ	ಭೂಹಿಡುವಳಿ(ಎಕರೆಗಳಲ್ಲಿ):	ಸುದರ್ಶನ್ ಕುಮಾರ್ ಎಂ.	ಡಾ|| ಚೆಲುವರಾಜು
ತಾಲ್ಲೂಕು:	ಒಣ:	ಸಂಶೋಧಕರು	ಪ್ರವಾಚಕರು ಹಾಗೂ ಮಾರ್ಗದರ್ಶಕರು
ಜಿಲ್ಲೆ:	ನೀರಾವರಿ:	ಬುಡಕಟ್ಟು ಅಧ್ಯಯನ ವಿಭಾಗ	ಬುಡಕಟ್ಟು ಅಧ್ಯಯನ ಭಾಗ
ವಾಸಸ್ಥಳ:	ಅರಣ್ಯದ ಹೆಸರು:	ಕನ್ನಡ ವಿಶ್ವವಿದ್ಯಾಲಯ, ಹಂಪಿ	ಕನ್ನಡ ವಿಶ್ವವಿದ್ಯಾಲಯ ಹಂಪಿ


ಕ್ರ. ಸ.	ಕುಟುಂಬ ಸದಸ್ಯರ ಹೆಸರು	ವಯಸ್ಸು	ಲಿಂಗ	ವೈವಾಹಿಕ ಸ್ಥಾನಮಾನ	ಶಿಕ್ಷಣ	ಕಸುಬು/ವೃತ್ತಿ	ಕೆಲಸದ ದಿನಗಳು ೧ ತಿಂಗಳಲ್ಲಿ	ಕುಟುಂಬದ ಆದಾಯ	ಸರ್ಕಾರಿ ಸೌಲಭ್ಯಗಳು			
									ವಿದವಾ	ಅಂಗವಿಕಲ	ವೃದ್ಧಾಪ್ಯ	ಶಿಷ್ಯಾವೇತನ
೧												
೨												
೩												
೪												

ಮನೆ ಮಾದರಿ
೧. ಗುಡಾರ
೨. ಗುಡಿಸಲು
೩. ಟಿನ್ ಮನೆ
೪. ಆರ್.ಆರ್.ಸಿ.ಮನೆ
೫. ಹೆಂಚಿನ ಮನೆ


ಸೌಲಭ್ಯಗಳು:
೧. ಅಂಗಡಿ
೨. ಅಲಮಾರ
೩. ಆಟೋರಿಕ್ಷಾ
೪. ಕುರ್ಚಿ
೫. ಗ್ಯಾಸ್
೬. ಟಿ.ವಿ.
೭. ಟೆಲಿಫೋನ್
೮. ನಲ್ಲಿ
೯. ಮಂಚ
೧೦. ಪಡಿತರ ಚೀಟಿ
೧೧. ಬಂಡಿ
೧೨.
೧೩. ರೇಡಿಯೋ
೧೪. ವಿದ್ಯುತ್‌ದ್ವೀಪಸ್ವ/ಸ
೧೫. ಶೌಚಾಲಯ
೧೬. ಸ್ನಾನದ ಕೋಣೆ
೧೭. ಸ್ಕೂಟರ್
೧೮. ಸೈಕಲ್
೧೯. ಟೇಪ್ ರಿಕಾರ್ಡರ್

ಪಶುಗಳು ಸಂಖ್ಯೆಯಲ್ಲಿ
೧. ಎತ್ತುಗಳು
೨. ಹೋರಿ
೩. ಎಮ್ಮೆ
೪. ಆಕಳು
೫. ಕುರಿ
೬. ಮೇಕೆ
೭. ಕೋಳಿ
೮. ಇತರೆ


ಮನೆ: ಸ್ವಂತ ☐ ಬಾಡಿಗೆ ☐ ಸರ್ಕಾರದ್ದು ☐
ನಿವೇಶನ: ಸ್ವಂತ ☐ ಸರ್ಕಾರದ್ದು ☐
ರೂಮುಗಳು ೧ / ೨ / ೩ / ೪


ಕರ್ನಾಟಕ ದಲ್ಲಿನ
ಮೂಲನಿವಾಸಿ ಬುಡಕಟ್ಟು
ಸಮುದಾಯಗಳ ನೆಲೆನಿ0ತ
ವ್ಯಾಪ್ತಿ ಪರಿಸರದ ನಕ್ಷೆ
ವ್ಯಾಪ್ತಿಯ ಜಿಲ್ಲೆ ಗಳು
೧. ಚಾಮರಾಜನಗರ
೨. ಮೈಸೂರು
೩. ಕೊಡಗು
೪. ದ.ಕನ್ನಡ
೫. ಉಡುಪಿ
N





ಕರ್ನಾಟಕದಲ್ಲಿನ ಕೊರಗರ ನೆಲೆನಿಂತ ಪರಿಸರದ ತಾಲ್ಲೂಕು ಕೇಂದ್ರ ಗಳ ವ್ಯಾಪ್ತಿಯ ನಕ್ಷೆ



ಕರ್ನಾಟಕದಲ್ಲಿನ ಜೇನುಕುರುಬರ ನೆಲೆನಿಂತ ಪರಿಸರದ ತಾಲ್ಲೂಕು ಕೇಂದ್ರ ಗಳ ವ್ಯಾಪ್ತಿಯ ನಕ್ಷೆ



• ಪೌರಕಾರ್ಮಿಕರ ಕಾಲೋನಿ, ಮಂಗಳೂರು



• ಜನಶಿಕ್ಷಣ ಸಂಸ್ಥೆಯ ಕಾರ್ಯಾಲಯ



• ಪೌರಕಾರ್ಮಿಕರ ಕಾಲೋನಿ, ಉಡುಪಿ



• ಕೊಳಚೆ ಚರಂಡಿಯ ಪಕ್ಕದಲ್ಲೇ ಕಾಲೋನಿ, ಕೊಂದಾಪುರ





• ಮಂಗಳೂರಿನ ಕೊರಗರ ಸಮುದಾಯಭವನ.



- ಬೆಟ್ಟಗುಡ್ಡಗಳಲ್ಲಿರುವ ಕುಟುಂಬದೊಂದಿಗೆ ಸಂಶೋಧಕರು

- ವಲಸೆ ಬಂದವರ ಆಶ್ರಯ ತಾಣವಾದ ಕೊಳಚೆ ಪ್ರದೇಶ






- ವ್ಯವಸ್ಥಿತ ರಸ್ತೆಗಳಿಲ್ಲದ ಕೊರಗರ ಕಾಲೋನಿ

- ಸ್ಫೂರ್ತಿ ಆಶ್ರಮಶಾಲೆ, ಕೋಟೆಶ್ವರ






- ಸರ್ಕಾರದ ಸೌಲಭ್ಯಗಳಿಂದ ವಂಚಿತಗೊಂಡಿರುವ ಕುಟುಂಬ

* ಸಮಾಜಮಂದಿರ,ಬೀಡಿನಗುಡ್ಡೆ





* ಕೊರಗ ಹಿರಿಯರ ಸಮಾದಿಗಳು



* ಸಂಪ್ರದಾಯಗಳ ಮುಂದುವರಿಕೆ



* ಕೊರಗರ ಮಾರಾಟದ ಕಟ್ಟಿಗೆ.



* ಸಮಸ್ಯೆಗಳೇ ತುಂಬಿರುವ ಬೆಟ್ಟ ಗುಡ್ಡದ ಕೊರಗರ ಕುಟುಂಬ.



• ಕಾಲೋನಿಯ ನಿರುದ್ಯೋಗ ಪಡೆ



• ಸೌಲಭ್ಯ ವಂಚಿತ ಹಳ್ಳಿಗಾಡು ಕಾಲೋನಿ.



• ಕೊರಗರ ಕಾಲೋನಿಗೆ ನೀರಿನ ಮೂಲ



• ಕೊರಗರ ಕಾಲೋನಿಯ ಮೂಲಭೂತ ಸೌಲಭ್ಯಗಳಿಲ್ಲದಿರುವುದು.



• ಕೊರಗರ ಅಂಗವಿಕಲ ಸೌಲಭ್ಯ ವಂಚಿತ



• ಆಶ್ರಮ ಶಾಲೆಯ ವಿಹಂಗಮ ನೋಟ




• ಮಂಗಳೂರಿನ ಕೊಳಚೆ ಪ್ರದೇಶದ ಕೊರಗರ ಕಾಲೋನಿ.



• ಇಟ್ಟಿಗೆ ತಯಾರಿಸುವ ಕೆಲಸದಲ್ಲಿ ಕೊರಗರು



• ಕಾಲೋನಿ ಕೊಳಚೆ ಪ್ರದೇಶದಲ್ಲಿರುವುದು. ಕುಂದಾಪುರ



• ಸಾಂಪ್ರದಾಯಿಕ ಆಚರಣೆಯಲ್ಲಿ ಕೊರಗರು




• ಕುಟುಂಬದ ಸದಸ್ಯರು.



• ಮನೆಮನೆಗೆ ಭೇಟಿ ನೀಡಿದ ಸಂಶೋಧಕರೊಂದಿಗೆ ಕೊರಗರು



• ಸ್ವಯಂ ಸೇವಾ ಕಾರ್ಯದಲ್ಲಿ ಸಂಶೋಧಕರು.



• ಜನ ಶಿಕ್ಷಣ ಟ್ರಸ್ಟ್‌ನ ಕಾರ್ಯಾಲದಲ್ಲಿ ಕಾರ್ಯನಿರತ ಕೃಷ್ಣಮೂಲ್ಯ.



• ಕೊರಗ ಕಾಲೋನಿಯ ಸ್ವಚ್ಛತೆಯ ಬಗ್ಗೆ ನಡೆಯುತ್ತಿರುವ ಅಧಿಕಾರಿಗಳ ಚರ್ಚೆಯಲ್ಲಿ ಸಂಶೋಧಕರು.



• ಜೇನುಕುರುಬರ ಪುನರ್‌ವಸತಿಯ ಮನೆಗಳು ನಿರಾಶ್ರಿತವಾಗಿರುವುದು



• ಜೇನುಕುರುಬರ ಬದಲಾದ ವಿವಾಹದಲ್ಲಿ ಸಂಶೋಧಕರು



• ಎಂ.ಎ ಪದವಿ ಪಡೆದ ಜೇನುಕುರುಬರ ಯುವಕನ ವಿವಾಹದಲ್ಲಿ ಸಂಶೋಧಕರು



• ಜೇನುಕುರುಬರ ಸಮುದಾಯದ ಹಿರಿಯವ್ಯಕ್ತಿ



• ಶಿಕ್ಷಣ ನೀಡುವ ಆಶ್ರಮ ಶಾಲೆಯ ನಿಜ ಸ್ಥಿತಿ



- ಹಂಚಿಕೆಯಾಗದೆ ಶ್ರೀಮಂತರ ಪಾಲಾಗಿರುವ ಸರ್ಕಾರಿ ಭೂಮಿ



- ಅರಣ್ಯದಲ್ಲಿನ ಕಾಲೋನಿ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವುದು.



- ಹೊಸದಾಗಿ ನಿರ್ಮಿಸಲಾದ ಕಾಲೋನಿಯಲ್ಲಿ ಮೂಲಭೂತ ಸೌಲಭ್ಯಗಳಿಲ್ಲದಿರುವುದು



- ಹಂಚಿಕೆಯಾಗದೆ ಶ್ರೀಮಂತರ ಪಾಲಾಗಿರುವ ಸರ್ಕಾರಿ ಭೂಮಿ



- ಉದ್ಯೋಗಕ್ಕಾಗಿ ಕಾಲೋನಿಯಲ್ಲಿ ಕಾಯುತ್ತಿರುವ ಜೇನುಕುರುಬರು



- ೨೦ ವರ್ಷಗಳ ಹಿಂದೆ ನಿರ್ಮಾಣವಾದ ಜೇನುಕುರುಬರ ಕಾಲೋನಿ

- ಉದ್ಯೋಗಕ್ಕಾಗಿ ಕಾಲೋನಿಯಲ್ಲಿ ಕಾಯುತ್ತಿರುವ ನಿರುದ್ಯೋಗಿ ಜೇನುಕುರುಬರು





- ಕೂಲಿಗಾಗಿ ಕಾದುಕುಳಿತ ಜೇನುಕುರುಬರ ಜೊತೆ

- ಸೌಲಭ್ಯಗಳಿಲ್ಲದ ಜೇನುಕುರುಬರ ಹೊಸ ಕಾಲೋನಿ





- ಅರಣ್ಯದಲ್ಲಿನ ಕಾಲೋನಿಯ ನೋಟ



• ಅರಣ್ಯದಲ್ಲಿನ ಜೇನುಕುರುಬರ ಕತ್ತಲೆಯಲ್ಲಿನ ನಿರಾತಂಕ ಬದುಕು .



• ಚುನಾಯಿತ ಪ್ರಥಮ ಜೇನುಕುರುಬ ಮಹಿಳೆ



• ಮೂಲನಿವಾಸಿ ಲಕ್ಷಣಗಳನ್ನು ಉಳೀಸಿಕೊಂಡ ಜೇನುಕುರುಬ ಮನೆಯಲ್ಲಿ ಉರಿಯುತ್ತಿರುವ ಬದುಕಿನ ಹಣತೆ.



• ಜೇನುಕುರುಬ ಶಾಲೆಯ ಮಕ್ಕಳು



